T - 4624

ಸುರಪುರ ಸಂಸ್ಥಾನ : ಒಂದು ಅಧ್ಯಯನ

Cover Page

ಸಂಶೋಧಕರು :

ರಂಗರಾಜ ದೇವಿಂದ್ರಪ್ಪ

ಎಂ.ಎ.

ಕನ್ನಡ ಉಪನ್ಯಾಸಕರು

ಸರಕಾರಿ ಪದವಿಪೂರ್ವ ಕಾಲೇಜು, ಹನುಮನಾಳ

ತಾ. ಕುಷ್ಟಗಿ ಜಿ. ರಾಯಚೂರ

ಮಾರ್ಗದರ್ಶಕರು :

ಡಾ|| ಬಿ. ವ್ಹಿ. ಯಕ್ಕುಂಡಿಮಠ

ಎಂ.ಎ., ಪಿಎಚ್.ಡಿ.

ಪ್ರವಾಚಕರು,

ಕನ್ನಡ ಅಧ್ಯಯನಪೀಠ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

ಪಿಎಚ್. ಡಿ. ಪದವಿಗಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ಮಹಾಪ್ರಬಂಧ

೧೯೯೫

Certificate

ಪ್ರಮಾಣ ಪತ್ರ

ಶ್ರೀ ರಂಗರಾಜ ದೇವೀಂದ್ರಪ್ಪ ಅವರು ಬರೆದು ಸಾದರಪಡಿಸಿದ " ಸುರಪುರ ಸಂಸ್ಥಾನ : ಒಂದು ಅಧ್ಯಯನ" ವಿಷಯ ಕುರಿತು ಸಿದ್ಧಪಡಿಸಿದ ಮಹಾಪ್ರಬಂಧ ಮೂಲ ಸಂಶೋಧನಾ ಕೃತಿಯಾಗಿದೆ. ಶ್ರೀಯುತರು ನನ್ನ ಮಾರ್ಗದರ್ಶನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದಲ್ಲಿ ಸಂಶೋಧನ ಕೈಕೊಂಡಿದ್ದಾರೆ. ಈ ಮಹಾಪ್ರಬಂಧವು ಇಡಿಯಾಗಿ ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಹೇಳುತ್ತ ಈ ಪ್ರಮಾಣಪತ್ರ ನೀಡುತ್ತೇನೆ.

ಧಾರವಾಡ.

ದಿನಾಂಕ : 27-02-1995.

(ಡಾ. ಬಿ. ವಿ. ಯಕ್ಕುಂಡಿಮಠ)
ಮಾರ್ಗದರ್ಶಕರು

ನಿವೇದನೆ

Acknowledgement

1988 ರಿಂದ 1990ರ ವರೆಗೆ ಕನ್ನಡ ಅಧ್ಯಯನಪೀಠದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಯಾಗಿರುವಾಗಲೇ 'ಹರಿಹರನ ಸಾಂಸ್ಕೃತಿಕ ಲೋಕ' ವೆಂಬ ಪುಸ್ತಕವೊಂದನ್ನು ಪ್ರಕಟಿಸಿದೆ. ಪ್ರಾಧ್ಯಾಪಕ ಡಾ: ವಿಲ್ಯಂ ಮಾಡ್ತ ಮತ್ತು ಡಾ. ಅ. ಸುಂದರ ಅವರು ಈ ನನ್ನ ಕೃತಿ ಬಿಡುಗಡೆ ಮಾಡುವ ಮೂಲಕ ನನ್ನನ್ನು ಸಂಶೋಧನ ಲೋಕಕ್ಕೆ ಪರಿಚಯಿಸಿದರು. ಇದಕ್ಕೆಲ್ಲ ಮೂಲ ಪ್ರೇರಣೆ ನೀಡಿದವರು ನನ್ನ ಅಚ್ಚುಮೆಚ್ಚಿನ ವಿದ್ಯಾಗುರುಗಳಾದ ಡಾ. ಎಂ. ಎಂ. ಕಲಬುರ್ಗಿ ಮತ್ತು ಡಾ. ಬಿ. ಆರ್. ಹಿರೇಮಠ ಅವರು. ಅಧ್ಯಯನದ ಅನೇಕ ಮುಖಗಳ ಬಗ್ಗೆ ಇವರೀರ್ವರೂ ನನ್ನಲ್ಲಿ ಕುತೂಹಲ ಕೆರಳಿಸುತ್ತಿದ್ದರು. ಅದರಲ್ಲಿ 'ಶಾಸನ ಕ್ಷೇತ್ರ' ವೂ ಒಂದು. ಇಂಥ ಪ್ರೇರಣೆಯ ಪರಿಣಾಮವೇ ಅದೇ ವರ್ಷ ಕನ್ನಡ ಸಂಶೋಧನ ಸಂಸ್ಥೆಯಲ್ಲಿ ಶಾಸನಶಾಸ್ತ್ರದ ವಿದ್ಯಾರ್ಥಿಯಾಗಿ ಪ್ರವೇಶ ಪಡೆದೆ. ಶಾಸನಗಳ ಅನ್ವೇಷಣೆ, ಅಧ್ಯಯನಗಳ ಬಗ್ಗೆ ಇಲ್ಲಿಂದಲೇ ಅತೀವ ಆಸಕ್ತಿ ಹುಟ್ಟಿತು. ಈ ಹಸಿವು ಹಿಂಗಿಸಿಕೊಳ್ಳಲು ಡಾ: ಎಂ. ಎಂ. ಕಲಬುರ್ಗಿ ಹಾಗೂ ಡಾ: ಬಿ. ಆರ್. ಹಿರೇಮಠ ಅವರ ಪ್ರೀತಿಯ ಶಿಷ್ಯನಾದೆ; ಬಹು ಹತ್ತಿರವಾ ಹೋದೆ.

ಪ್ರಥಮ ದರ್ಜೆಯಲ್ಲಿ ಎಂ.ಎ. ಉತ್ತೀರ್ಣನಾದ ನನಗೆ ಮುಂದೇನು? ಎಂದು ಪ್ರಶ್ನಿಸಿದವರಲ್ಲಿ ಮೊದಲಿಗರು ಡಾ: ಕಲಬುರ್ಗಿಯವರು. ಆಗ ನನ್ನ ಉತ್ತರ ಪಿಎಚ್.ಡಿ. ಅಧ್ಯಯನವೆಂದಿತ್ತು. ಸರಿ, ವಿಷಯದ ಬಗ್ಗೆ ಚರ್ಚೆ ಮಾಡುವ ಅಗತ್ಯವಿರಲಿಲ್ಲ. ಯಾಕೆಂದರೆ ಮನದಲ್ಲಿ ವಿಷಯ ಮತ್ತು ಮಾರ್ಗದರ್ಶಕರನ್ನು ಆಯ್ಕೆಮಾಡಿಕೊಂಡೇ ಅಲ್ಲಿಗೆ ಹೋಗಿದ್ದೆ. ಅದುವೆ "ಸಗರನಾಡಿನ ಶಾಸನಗಳು : ಒಂದು ಸಾಂಸ್ಕೃತಿಕ ಅಧ್ಯಯನ"; ಮಾರ್ಗದರ್ಶಕರೆ ಡಾ. ಬಿ. ಆರ್. ಹಿರೇಮಠ ಅವರು. ಇದನ್ನು ಕೇಳಿದ ಕೂಡಲೇ ಕಲಬುರ್ಗಿ ತತ್‌ಕ್ಷಣ ಹೊತ್ತು ತಡೆದು, "ನಿನ್ನ ನಾಡಿನ ಅಭಿಮಾನ ನಿನಗಿರುವುದು ಸಹಜ, ಶಾಸನದ ಬಗ್ಗೆ ಕುತೂಹಲವಿದ್ದರಷ್ಟೇ ಸಾಲುವದಿಲ್ಲ. ಕಲ್ಲುಗಳೊಂದಿಗೆ ಮಾತನಾಡುವ ಕಲೆ ಬಹು ಕಠಿಣ. ಕಾರಣ, ಸಧ್ಯಕ್ಕೆ ಶಾಸನ ವಿಷಯ ಬೇಡ" ಎಂದಾಗ ಕುಳಿತ ಕುರ್ಚಿಯಲ್ಲಿಯೇ ಕುಸಿದು ಹೋದೆ. ನಂತರ ಎರಡು ನಿಮಿಷಗಳ ಮೌನ. ಮುಂದೆ ಅವರೆ— "ನಿರಾಶೆ ಪಡುವ ಅಗತ್ಯವಿಲ್ಲ, ನಿನಗಾಗಿಯೇ ಮಹತ್ವದ ವಿಷಯವೊಂದನ್ನು ವಿಚಾರ ಮಾಡಿಟ್ಟಿರುವೆ"

ಎಂದರು. ಇದುವರೆಗೆ ವರ್ತಮಾನದ ವಿದ್ಯಾರ್ಥಿಯಾದ ನಾನು ಕುತೂಹಲದಿಂದ ಕಣ್ಣಗಲಿಸಿ ವಿಷಯದ ಶೀರ್ಷಿಕೆಗಾಗಿ ಕಾತುರನಾದೆ. ಆಗ ನನ್ನ ಮುಖದ ಮೇಲಿನ ಗೆರೆಗಳೊಂದಿಗೆ ಮಾತನಾಡಿದ ಡಾ: ಕಲಬುರ್ಗಿ ಅವರು ಹೇಳಿದ ವಿಷಯವೇ — " ಸುರಪುರ ಸಂಸ್ಥಾನ : ಒಂದು ಅಧ್ಯಯನ ".

ನನ್ನ ನಿರೀಕ್ಷೆ ನಿಜವೆನಿಸಿತು. ನಾನು ಹುಟ್ಟಿ ಬೆಳೆದ ನಾಡಿನ ಬಗ್ಗೆ, ಕಟ್ಟಿ ಆಳಿದ ಅರಸರ ಬಗ್ಗೆ, ಬಿಟ್ಟುಹೋದ ಸಂಸ್ಕೃತಿ ಬಗ್ಗೆ ಅಧ್ಯಯನ ಮಾಡುವ ಪುಣ್ಯ ಯಾರಿಗೆ ಸಿಗಬೇಕು? ಬಾಲ್ಯದಲ್ಲಿದ್ದು ನಾನು ಸುರಪುರ ಸಂಸ್ಥಾನದ ಅನೇಕ ಕಥೆಗಳನ್ನು ಕೇಳಿದ್ದೆ. ನನ್ನೂರಿನ ಭವ್ಯಕೋಟೆಯನ್ನು, ಸುರಪುರದ ಸುಂದರ ಕಟ್ಟಡಗಳನ್ನು ಕಣ್ತುಂಬುವಷ್ಟು ನೋಡುತ್ತಿದ್ದೆ. ಹೀಗೆ ಕುತೂಹಲವಿತ್ತೆ ಹೊರತು, ಆಳಿದ ಅರಸರ ಬಗ್ಗೆ ಅಧ್ಯಯನವಿರಲಿಲ್ಲ. ಆದರೂ ಪದವಿ ವಿದ್ಯಾರ್ಥಿಯಾಗಿರುವಾಗಲೇ ನಾಲ್ವಡಿ ವೆಂಕಟಪ್ಪನಾಯಕನ ಬಗ್ಗೆ ನಾಟಕ ಬರೆದು, ನಾನೇ ಪಾತ್ರಧಾರಿಯಾಗಿ ಪ್ರದರ್ಶಿಸಿದೆನೆಂಬ ಸಂತಸ ಮಾತ್ರವಿತ್ತು. ಈಗ ಅದೇ ಅಧ್ಯಯನ, ಅದೂ ನನ್ನ ಜನಾಂಗದ ವಿಷಯದ ಶೋಧನೆ ನನಗೆ ದೊರಕಿತ್ತು. ಇದಕ್ಕಿಂತ ಸುದೈವ ಮತ್ತೆಲ್ಲಿ ಸಿಕ್ಕೀತು.

ಸರಿ, ನನಗೆ ಶಾಸನ ವಿಷಯದೊಂದಿಗೆ ನನ್ನ ಮನಸ್ಸಿನಲ್ಲಿದ್ದ ಮೊದಲ ಮಾರ್ಗದರ್ಶಕರೂ ಬದಲಾವಣೆಗೊಂಡರು. ಸಿಕ್ಕ ಸುರಪುರದ ವಿಷಯದಷ್ಟೇ ನನ್ನಲ್ಲಿ ಸಂತಸ, ಸಾರ್ಥಕ ಭಾವನೆ ಬಂದದ್ದು ವಿದ್ಯಾಗುರು ಡಾ: ಬಿ.ವ್ಹಿ. ಯಕ್ಕುಂಡಿಮಠರು ಮಾರ್ಗದರ್ಶಕರಾಗಿ ದೊರೆತಾಗ. ತಾಳ್ಮೆಯ ಗಣಿಯೆಂದೇ ಖ್ಯಾತರಾದ ಇವರು ಸದಾ ನನ್ನ ಹಿತಾಭಿವೃದ್ಧಿ ಬಯಸುವ ಹಿರಿಯರು. ನಿತ್ಯದ ನನ್ನ ನೋವು-ನಲಿವುಗಳಲ್ಲಿ ತಪ್ಪದೇ ಪಾಲುದಾರರಾಗಿದ್ದ ವಿದ್ಯಾಗುರು ಡಾ: ಎಸ್.ಎಸ್. ಭದ್ರಾಪೂರ ಅವರೆ ನನ್ನ ಅಧ್ಯಯನಕ್ಕೆ ಇವರನ್ನು ಮಾರ್ಗದರ್ಶಕರನ್ನಾಗಿ ದೊರಕಿಸಿಕೊಟ್ಟರು. ಸೂಕ್ಷ್ಮ ನೋಟದಲ್ಲೇ ಸರ್ವವನ್ನೂ ಗ್ರಹಿಸುವ ಡಾ: ಯಕ್ಕುಂಡಿಮಠ ಅವರು ನನ್ನ ಅಧ್ಯಯನದುದ್ದಕ್ಕೂ ಅತ್ಯಂತ ಮೌಲಿಕ ಮಾರ್ಗದರ್ಶನ ನೀಡಿದ್ದಾರೆ.

ನಾಲ್ಕು ವರ್ಷ ಆರು ತಿಂಗಳುಗಳನ್ನು ಸುದೀರ್ಘ ಸಮಯವನ್ನು ಪ್ರಸ್ತುತ " ಸುರಪುರ ಸಂಸ್ಥಾನ : ಒಂದು ಅಧ್ಯಯನ " ವೆಂಬ ವಿಷಯದ ಶೋಧನೆ, ಅಧ್ಯಯನಕ್ಕೇ ಮೀಸಲಿಟ್ಟಿದ್ದೇನೆ. ಸಂಗ್ರಹಿಸಿದ ಆಕರ ಸಾಮಗ್ರಿ, ಶೋಧಿಸಿದ ಹೊಸ ಸಂಗತಿಗಳನ್ನೆಲ್ಲ ಪರಿಶೀಲಿಸುವಾಗ ಅತ್ಯಂತ ಮಹತ್ವಪೂರ್ಣ ಸಲಹೆಗಳನ್ನು ಡಾ:ಎಂ.ಎಂ. ಕಲಬುರ್ಗಿ, ಡಾ:ಬಿ.ಆರ್. ಹಿರೇಮಠ, ಡಾ:ವೀರಣ್ಣ ರಾಜೂರ, ಡಾ: ಘಟಪಣದಿ, ಡಾ:ರು.ಮ. ಷಡಕ್ಷರಯ್ಯ, ಶ್ರೀ ಸೀತಾರಾಮ ಜಹಗೀರದಾರ,

ಡಾ. ವಿ. ಜಿ. ಪೂಜಾರ, ಡಾ: ಜೆ. ಎಂ. ನಾಗಯ್ಯ, ಡಾ: ಸೋಮಶೇಖರ ಇಮ್ರಾಪೂರ, ಡಾ: ವಿ. ಶಿವಾನಂದ, ಡಾ: ಶ್ರೀನಿವಾಸ ಹಾವನೂರ, ಡಾ: ಕೆ. ಪದ್ಮಯ್ಯ, ಡಾ: ಕಮಲಾ ಹಂಪನಾ —ಮುಂತಾದವರಲ್ಲಿ ಪಡೆದುಕೊಂಡಿದ್ದೇನೆ. ಅವರ ಸಹಕಾರಕ್ಕೆ ಸದಾ ಋಣಿಯಾಗಿದ್ದೇನೆ.

ಪ್ರತ್ಯಕ್ಷವಾಗಿ ಇತಿಹಾಸ ವಿಷಯದ ವಿದ್ಯಾರ್ಥಿ ನಾನಾಗದಿದ್ದರೂ ಪದವಿ ಅಭ್ಯಾಸದಿಂದಲೂ ನನ್ನಲ್ಲಿ ಸದಾ ಕುತೂಹಲ ಕೆರಳಿಸಿರುವ ಅಭಿರುಚಿ ವಿಷಯ ಇದಾಗಿತ್ತು. ಆಯಾ ನಾಡಿನ ಚರಿತ್ರೆಯನ್ನು ಸಾಂಸ್ಕೃತಿಕ ರೀತಿಯಿಂದಲೇ ಗುರುತಿಸಬೇಕೆಂಬ ನನ್ನ ಬಹುದಿನದ ಹಂಬಲವನ್ನು ಈ ಮೂಲಕ ಈಡೇರಿಸಿಕೊಳ್ಳಲು ಅತ್ಯಂತ ಮಹತ್ವದ ಸದಾವಕಾಶ ಸಿಕ್ಕಿತು. ಸಂಗ್ರಹಿಸಿದ ಸಾಮಗ್ರಿ, ಶೋಧಿಸಿದ ಸಂಗತಿಗಳನ್ನೆಲ್ಲ ಬರವಣಿಗೆಗೆ ಇಳಿಸುವಾಗ ಸಹಕರಿಸಿದ ಹಲವರನ್ನು ಇಲ್ಲಿ ಸ್ಮರಿಸುವದು ಅತ್ಯಂತ ಅವಶ್ಯ ಮತ್ತು ಅಷ್ಟೇ ಔಚಿತ್ಯಪೂರ್ಣವಾದುದೆಂದು ನನ್ನ ಅನಿಸಿಕೆ.

ಸಂಸ್ಥಾನದ ಹಲವು ಮೂಲ ದಾಖಲೆಗಳನ್ನು ಒದಗಿಸುವ ಮೂಲಕ ಅನೇಕ ಮೌಲಿಕ ಸಲಹೆಗಳನ್ನು ನೀಡಿದ ರಾಜಾ ಎಸ್. ಎಂ. ವೆಂಕಟಪ್ಪನಾಯಕ, ಬಿ. ಕೃಷ್ಣಮಾಚಾರ್ಯ, ಪ್ರೊ: ಬಿ. ಆರ್. ಸುರಪುರ, ಪ್ರೊ: ಬಿ. ಪಿ. ಹೂಗಾರ, ಶ್ರೀ ಲಿಂಗಣ್ಣ ಸತ್ಯಂಪೇಟೆ, ಶ್ರೀ ಗುರುಬಸವಯ್ಯ ಅಮ್ಮಾಪೂರ, ಶ್ರೀ ಎ. ಕೃಷ್ಣಾ, ಹಾಗೂ ರಂಗಂಪೇಟೆ ಕನ್ನಡ ಸಂಘದವರಿಗೆ ನನ್ನ ವಿನಯಪೂರ್ವಕ ವಂದನೆ.

ಹನುಮನಾಳದಂಥ ಗ್ರಾಮೀಣ ಪ್ರದೇಶದಲ್ಲೂ ಹಲವಾರು ವಿದ್ಯಾರ್ಥಿ ಪ್ರತಿಭೆಗಳನ್ನು ಅರಳಿಸುತ್ತಿರುವ ಶಿಕ್ಷಣಪ್ರೇಮಿ, ದಕ್ಷ ಅಧಿಕಾರಿ, ಸಂಸ್ಥೆಯ ರೂವಾರಿ ಹಾಗೂ ನನ್ನ ಉಪನ್ಯಾಸಕ ಜೀವನದ ಪ್ರಥಮ ಪ್ರಾಚಾರ್ಯರಾದ ಪ್ರೊ: ಕೆ. ಬಿ. ತಳವಾರ ಅವರ ಸಹೃದಯ ಶ್ರೀಮಂತಿಕೆಗೆ ನನ್ನ ಅನಂತ ಅಭಿನಂದನೆಗಳು ಸಲ್ಲುತ್ತವೆ. ಹಲವು ಸಾಹಿತ್ಯಿಕ ಸಾಮಗ್ರಿಗಳನ್ನು ಒದಗಿಸುವ ಮೂಲಕ ನನ್ನ ಅಧ್ಯಯನದ ವ್ಯಾಪ್ತಿ ವಿಸ್ತರಿಸಿದ ಆದರಣೀಯ ಪ್ರೊ: ದೇವೇಂದ್ರ ಮಾಧವನವರ, ಶ್ರೀ ಬಿ. ಆರ್. ತುಬಾಕಿ, ಡಾ: ತೇಜಸ್ವಿ ಕಟ್ಟೀಮನಿ, ಶ್ರೀ ಹರ್ತಿಕೋಟೆ ವೀರೇಂದ್ರಸಿಂಹ, ಶ್ರೀ ಬರಗೂರು ರಾಮಚಂದ್ರಪ್ಪ, ಶ್ರೀ ಲಕ್ಷ್ಮಣ ತೆಲಗಾವಿ —ಮುಂತಾದವರು ಅಭಿನಂದನಾರ್ಹರು.

ಸಂಸ್ಥಾನದ ಅಧ್ಯಯನಕ್ಕೆ ಪೂರಕವಾದ ಆಂಗ್ಲ ಭಾಷೆಯಲ್ಲಿಯ ಅಪಾರ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದಿಸಿ ಕೊಡುವಲ್ಲಿ ಹಗಲಿರುಳು ಶ್ರಮಿಸಿದ ನನ್ನ ಸಹೋದ್ಯೋಗಿ ಸ್ನೇಹಿತ ಎಚ್. ರಾಮಚಂದ್ರ ಮತ್ತು ಇತಿಹಾಸದ ಘಟನಾವಳಿಗಳನ್ನೆಲ್ಲ ಪರಿಚಯಿಸಿದ ಇನ್ನೊರ್ವ ಸಹೋದ್ಯೋಗಿ

ಮಿತ್ರರಾದ ಡಿ.ಜಿ.ಹೆಗಡೆ ಅವರನ್ನು ಇಲ್ಲಿ ನೆನೆಯುವದೇ ನನಗೊಂದು ಸಂತಸ. ಅದರಂತೆ ನನ್ನ ಪಿಎಚ್.ಡಿ ಅಧ್ಯಯನಕ್ಕೆ ಸದಾ ಶುಭಕೋರುತ್ತಾ ಸ್ಫೂರ್ತಿ ನೀಡುತ್ತಿದ್ದ ಸಂಸ್ಥೆಯ ಉಪನ್ಯಾಸಕರು ಮತ್ತು ನನ್ನ ಪ್ರೀತಿಯ ಹಿರಿಯರಾದ ಪ್ರೊ: ವಿ.ಕೆ.ಮಾಧವನವರ, ಪ್ರೊ: ಬಿ.ರಂಗಪ್ಪ ಹಾಗೂ ಉಭಯ ಸಂಸ್ಥೆಯ ಸಿಬ್ಬಂದಿಗೆ ಕೃತಜ್ಞತೆಗಳು.

ನನ್ನ ಹಿತಾಭಿವೃದ್ಧಿಗೆ ಸದಾ ಶ್ರಮಿಸುತ್ತಿರುವ ಶ್ರೀ ಡಿ.ಎಸ್.ಅಕ್ಕಿ, ಶ್ರೀ ಅಬ್ದುಲ್‌ಕರೀವರ್, ಶ್ರೀ ವೈ.ಟಿ.ಕಸ್ತೂರಿ, ಡಾ: ಅನಂತರಾವ, ಶ್ರೀ ಕೆ.ಆರ್.ಕುಲಕರ್ಣಿ ಹಾಗೂ ಕರ್ನಾಟಕ ಕಲಾರಂಗದ ಸಮಸ್ತ ಕಾರ್ಯಕರ್ತ ವೃಂದಕ್ಕೆ ಗೌರವಪೂರ್ವಕ ವಂದನೆಗಳನ್ನರ್ಪಿಸಲು ಆನಂದವೆನಿಸುತ್ತದೆ. ಸಂಸ್ಥಾನದ ವಾಸ್ತುಕಲೆಯನ್ನು ವಿಶೇಷವಾಗಿ ಪರಿಚಯಿಸಿದ ಗೆಳೆಯ ಶಿವಶರಣ ಅರುಣಿ ನನ್ನ ಅಧ್ಯಯನ ದಿಸೆಗೆ ಹೊಸ ಆಯಾಮ ನೀಡಿದ ಅಗ್ರಗಣ್ಯ.

ಕ್ಷೇತ್ರಕಾರ್ಯದುದ್ದಕ್ಕೂ ನನ್ನೊಂದಿಗೆ ಸಂಚರಿಸಿ, ಸಹಕರಿಸಿದ ನನ್ನ ತಮ್ಮ ಗೋವಿಂದರಾಜ ಮತ್ತು ನಾಮುಗು ಆಲ್ದಾಳ ಅವರು ಅತ್ಯಂತ ಆಕರ್ಷಕವಾದ ಛಾಯಾಚಿತ್ರಗಳನ್ನು ಸಿದ್ಧಪಡಿಸಿದ್ದಾರೆ. ಅವರ ಶ್ರಮವನ್ನು ಈ ಸಂದರ್ಭದಲ್ಲಿ ನೆನೆಯದೆ ಇರಲಾರೆ. ಹಸ್ತಪ್ರತಿಗಳನ್ನು ಸಿದ್ಧಪಡಿಸುವಲ್ಲಿ ಬಹುವಾಗಿ ಶ್ರಮಿಸಿದ ಆತ್ಮೀಯ ದೇವು ಪತ್ತಾರ, ನಿಂಗಣ್ಣ ವಡಿಗೇರಿ, ಶಿವರಂಜನ ಸತ್ಯಂಪೇಟೆ, ಬನ್ನಪ್ಪ ಕಾಳಗಿ ಅವರನ್ನು ಸ್ಮರಿಸದಿದ್ದರೆ ತಪ್ಪಾಗುತ್ತದೆ.

ನನಗಿರುವ ಪ್ರಗತಿ 'ಕಿರಣ'ದ ಪ್ರೇರಕ ಶಕ್ತಿಗಳೆಂದರೆ " ಶಹಪುರ ನಗರದ ಸರ್ವಕಾಲೇಜುಗಳ ನನ್ನ ಹಿಂದಿನ ವಿದ್ಯಾರ್ಥಿಗಳು, ಹನಮನಾಳ ಕಾಲೇಜಿನ ನನ್ನ ಸಧ್ಯದ ವಿದ್ಯಾರ್ಥಿಗಳು ಹಾಗೂ ಶಹಪುರ ತಾಲೂಕ ನಾಯಕ ಸಂಘದ ಬಂಧುಗಳು" –ಇವರಿಗೆಲ್ಲ ಈ ಮೂಲಕ ನೆನಪಿಸಿಕೊಳ್ಳುತ್ತೇನೆ.

ಕೊನೆಗೆ, ಪ್ರಸ್ತುತ ಮಹಾಪ್ರಬಂಧವನ್ನು ಅತ್ಯಂತ ಶ್ರಮವಹಿಸಿ ಅಂದವಾಗಿ ಕನ್ನಡ ಬೆರಳಚ್ಚು ಮಾಡಿಕೊಟ್ಟ ಬಸವರಾಜ ಕರಕಳ್ಳಿಯವರಿಗೆ ಹೃದಯಸ್ಪರ್ಶಿ ವಂದನೆ ಸಲ್ಲುತ್ತವೆ.

ಪ್ರಸ್ತುತ ಮಹಾಪ್ರಬಂಧದಲ್ಲಿ ಬರುವ ಶೋಧನೆ, ಮತ್ತು ಸಮರ್ಥನೆಗಳೇ ಅಂತಿಮ ತೀರ್ಮಾನವಲ್ಲ. ಸಂಶೋಧನೆ ಎಂಬುದು ನಿರಂತರವಾಗಿ ಸಾಗುವ ಕ್ರಿಯೆ. ಸತ್ಯ ದೊರಕುವ ವರೆಗೂ ಸಾಧನೆ ಹಾದಿ ಹಿಡಿದು ಸಾಗುವದೇ ಸಂಶೋಧಕನ ನಿಜವಾದ ನಿಲುವು.

ಹೀಗಾಗಿ ನನ್ನ ಈ 'ಸುರಪುರ ಸಂಸ್ಥಾನ : ಒಂದು ಅಧ್ಯಯನ' ವೆಂಬ ಮಹಾಪ್ರಬಂಧದಲ್ಲಿ ಏನಾದರೂ ತಪ್ಪು ನಿರ್ಣಯಗಳಿದ್ದರೆ ಖಂಡಿತಾ ಅವುಗಳನ್ನು ಬದಲಾಯಿಸಿಕೊಳ್ಳುತ್ತೇನೆ. ಇದಕ್ಕೆ ಸಂಬಂಧಿಸಿದಂತೆ ವಿದ್ವಾಂಸರಿಂದ ಬರುವ ಆರೋಗ್ಯಕರ ಅಭಿಪ್ರಾಯಗಳನ್ನು ಸದಾ ಸ್ವಾಗತಿಸುತ್ತೇನೆ.

ಹನುಮನಾಳ. —ರಂಗರಾಜ ದೇವೇಂದ್ರಪ್ಪ

ದಿನಾಂಕ: ೨೮–02–1995.

ಪರಿವಿಡಿ

Content

ಪುಟಸಂಖ್ಯೆ :

ನಿವೇದನೆ

ಸಂಕ್ಷೇಪಗಳು

ಛಾಯಾಚಿತ್ರಗಳ ಯಾದಿ

ನಕಾಶೆಗಳು

ಅಧ್ಯಾಯ – ಒಂದು :

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ....01 – 08

ಅಧ್ಯಾಯ – ಎರಡು :

ರಾಜಕೀಯ ಚರಿತ್ರೆ : .... 09 – 163

(ಅ) ರಾಜಕೀಯ ಪರಿವರ

(ಆ) ಸುರಪುರದ ಪೂರ್ವಜರು

(1) ಹದಿನಾಲ್ಕು ತಲೆಮಾರು

(2) ಕಲ್ಲಪ್ಪ ನಾಯಕ

(3) ಚಿನ್ನಹಣಮನಾಯಕ

(4) ಜಕ್ಕಪ್ಪ ದೇಸಾಯಿ

(5) ಗಡ್ಡಿಪಿಡ್ಡನಾಯಕ

(6) ಹಸರಂಗಿ ಪಾಮನಾಯಕ

(ಇ) ಸುರಪುರ ಆಳಿದ ಅರಸರು

(1) ಪೀತಾಂಬರ ಬಹರಿ ಪಿಡ್ಡನಾಯಕ

(2) ಇಮ್ಮಡಿ ಪಾಮನಾಯಕ

(3) ಮುಮ್ಮಡಿ ಪಿಡ್ಡನಾಯಕ

(4) ಮೊಂಡುಗೈ ವೆಂಕಟಪ್ಪನಾಯಕ

(5) ಮುಮ್ಮಡಿ ಪಾಮನಾಯಕ

ಪುಟಸಂಖ್ಯೆ:

(6) ಇಮ್ಮಡಿ ವೆಂಕಟಪ್ಪ ನಾಯಕ
(7) ಮುಮ್ಮಡಿ ಸಿದ್ದನಾಯಕ
(8) ಮುಮ್ಮಡಿ ವೆಂಕಟಪ್ಪನಾಯಕ
(9) ಕೃಷ್ಣಪ್ಪನಾಯಕ :
1. ಕ್ಯಾಪ್ಟನ್ ಗ್ರಿನ್ಸ್ಲೇಯ ಆಗಮನ
2. ರಾಣಿ ಈಶ್ವರಮ್ಮ
3. ಗ್ರಿನ್ಸ್ಲೇಯ ನಿರ್ಗಮನ : ಟೇಲರನ ಆಗಮನ

(10) ನಾಲ್ಮಡಿ ವೆಂಕಟಪ್ಪನಾಯಕ
1. ದುರಾಡಳಿತೆಯುತ್ತ ದೊರೆಯ ದರ್ಬಾರ
2. ಭಾರತದಲ್ಲಿ ಬಂಡಾಯದ ಬಿರುಗಾಳಿ
3. ಸಂಸ್ಥಾನದಲ್ಲಿ ಬಂಡಾಯದ ದಂಡು
4. ಕ್ಯಾಂಡೇಲನ ಕಾರ್ಯಾಚರಣೆ
5. ಆಂಗ್ಲರ ಆಕ್ರಮಣ
6. ಸಂಸ್ಥಾನದ ಪತನ : ರಾಜನ ಬಂಧನ
7. ಸಂಸ್ಥಾನ ಪತನದ ಸಿಂಹಾವಲೋಕನ
8. ಮರಳಿದ ಜನರು : ಮತ್ತೆ ಅಧಿಕಾರ
9. ನ್ಯಾಯಾಂಗ ವಿಚಾರಣೆ
10. ರಾಜನ ಕೊರಳೆ ನಿಜ.

(ಈ) ಅರಸರ ಹೆಸರು ಮತ್ತು ಅವರ ಬಿರುದು

(ಉ) ರಾಣಿಯರು ಹಾಗೂ ಅವರ ಆಳ್ವಿಕೆ.

ಅಧ್ಯಾಯ – ಮೂರು :

ಆಡಳಿತ ಹಾಗೂ ಆರ್ಥಿಕ ಸ್ಥಿತಿ-ಗತಿ : .... 164 – 214

(ಅ) ಆಡಳಿತ :
(1) ಆಡಳಿತ ಪ್ರದೇಶ
(2) ಆಡಳಿತ ವಿಭಾಗ

ಪುಟಸಂಖ್ಯೆ :

(3) ಆಡಳಿತ ವರ್ಗ :
1. ಸಂಬಳದ ವರ್ಗ
2. ಸ್ವತಂತ್ರ ವರ್ಗ
3. ಸೈನಿಕ ವರ್ಗ
    1. ಸೈನಿಕ ಆಯ್ಕೆ
    2. ಸಮರದಲ್ಲಿ ಸೈನ್ಯ
    3. ಸಂರಕ್ಷಣೆಯಲ್ಲಿ ಸೈನ್ಯ
    4. ಸೈನಿಕ ಹುದ್ದೆಗಳು

(ಆ) ಆರ್ಥಿಕ ಸ್ಥಿತಿ-ಗತಿ :
1. ನಾಣ್ಯ ಚಲಾವಣೆ
2. ಕಂದಾಯ ಅಧಿಕಾರಗಳು
3. ಕಂದಾಯದ ಮೂಲಗಳು :
    1. ಭೂ ತೆರಿಗೆ
    2. ಮಾರಾಟ ತೆರಿಗೆ
    3. ವೃತ್ತಿ ತೆರಿಗೆ
    4. ಗುತ್ತಿಗೆ ತೆರಿಗೆ
4. ಆಯ – ವ್ಯಯ
5. ಹಣ ಕಾಣಿಕೆ
6. ಸಿರಿವಂತರಿಂದ ಸಾಲ

ಅಧ್ಯಾಯ – ನಾಲ್ಕು :

ಧಾರ್ಮಿಕ ಹಾಗೂ ಸಾಮಾಜಿಕ ವ್ಯವಸ್ಥೆ .... 215 – 271

(ಅ) ಧರ್ಮ :
1. ಬೇಡರು
2. ಶ್ರೀವೈಷ್ಣವ ಧರ್ಮ

ಪುಟಸಂಖ್ಯೆ:

3. ದೇವರು – ದೇವಾಲಯ :
(1) ತಿರುಪತಿ ವೆಂಕಟರಮಣ
(2) ವೇಣುಗೋಪಾಲ
(3) ಪಾತ್ರದವರು
(4) ದಾಸರು

4. ಶರಣರು :
1. ವೀರಶೈವ ಮಠಗಳು
5. ದಾಸರು ಮತ್ತು ಧರ್ಮ :
1. ದ್ವೈತ ಮಠಗಳು.

6. ಮರಾಠ ಸಂತರು.

(ಆ) ಸಾಮಾಜಿಕ ವ್ಯವಸ್ಥೆ :
1) ಸಮಾಜ
2) ಅಂಯಗಾರರು
3) ಜಾತಿ–ಮತಗಳ ಸಮನ್ವಯ
4) ಸ್ತ್ರೀಯ ಸ್ಥಾನ–ಮಾನ
5) ಜನಕಲ್ಯಾಣ ಕಾರ್ಯಗಳು :
1. ಬಾವಿಗಳು
2. ಕೆರೆಗಳು
3. ತೋಟಗಳು
4. ರಸ್ತೆಗಳು
5. ಆರೋಗ್ಯ ಮತ್ತು ಆಸ್ಪತ್ರೆ

ಅಧ್ಯಾಯ – ಐದು :

ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು .... 272 – 313

(ಅ) ಸಾಹಿತ್ಯಿಕ :
1. ಪಮುಂಡಿಗೆ
2. ಭಾರ್ಗವ ಪುರಾಣ
3. ಆಸ್ಥಾನ ಕವಿಗಳು ಹಾಗೂ ಅವರ ಕೃತಿಗಳು
4. ಇನ್ನಿತರರು
5. ಜಾನಪದ ಸಾಹಿತ್ಯ

ಪುಟಸಂಖ್ಯೆ :

(ಆ) ಸಾಂಸ್ಕೃತಿಕ :
1. ಹಬ್ಬ — ಹರಿದಿನಗಳು
2. ಆಟಗಳು
3. ಜಟ್ಟಿಗಳು
4. ಕಲೆಗಳು : ಕಟ್ಟಡಗಳು :
1) ಕೋಟೆಗಳು
2) ದೇವಾಲಯಗಳು
3) ಚಿತ್ರಕಲೆ
4) ಸಂಗೀತ ಕಲೆ

ಅಧ್ಯಾಯ — ಆರು :

ಸಮಾರೋಪ. .... 314 – 323

ಅನುಬಂಧಗಳು : .... 324 – 347

ಒಂದು : ಜಾನಪದ ಗೀತೆಗಳು
ಎರಡು : ಛಾಯಾ ಚಿತ್ರಗಳು
ಮೂರು: ಆಕರ ಸಾಮಗ್ರಿ ಸೂಚಿ

o—o

<u>ಸಂಕ್ಷೇಪಗಳು</u>

ಶ.ತಾ.ದ. : ಶಹಪುರ ತಾಲೂಕು ದರ್ಶನ

ಸು.ತಾ.ದ. : ಸುರಪುರ ತಾಲೂಕು ದರ್ಶನ

ಸು.ಸಂ.ಇ. : ಸುರಪುರ ಸಂಸ್ಥಾನ ಇತಿಹಾಸ

FDP : Foreign Department Proceedings

FPC : Foreign Political Consultation

FPP : Foreign Political Proceedings

FPSP : Foreign Political Supplementry Proceedings

FSC : Foreign Secret Consulation

FSP : Foreign Secret Proceedings

HFMK : <u>History of Freedom Movement in Karnataka</u>

HRC : Hyderabad Residency Correspondence

PLFC : Political Letter From the Court of Directors

PLTC : Political Letter to the Court of Directors

PRC : Poona Residency Correspondence

SML : <u>Story of my life</u>

SPD : Selections from Peshwa Daftar

TBRPS : <u>The British Relationship with the Prinici Palty of Surapur</u>

ಛಾಯಾಚಿತ್ರಗಳ ಯಾದಿ

ಚಿತ್ರ 1	ಗಡ್ಡಿ ಪಿಡ್ಡನಾಯಕನಿಗೆ ಔರಂಗಜೇಬ ನೀಡಿದ ಸನದ ಪತ್ರ	(ಪುಟ.27)
ಚಿತ್ರ 2	ಹಸರಂಗಿ ಪಾಮನಾಯಕ	(ಪುಟ.30)
ಚಿತ್ರ 3	ಪೀತಾಂಬರ ಬಹರಿ ಪಿಡ್ಡನಾಯಕ	(ಪುಟ.37)
ಚಿತ್ರ.4	ಮೊಂಡಗೈ ವೆಂಕಟಪ್ಪನಾಯಕ	(ಪುಟ.51)
ಚಿತ್ರ 5	ಮೆ.ಡೋಸ ಟೇಲರ	(ಪುಟ.92)
ಚಿತ್ರ 6	ಪಾಲ್ವಡಿ ವೆಂಕಟಪ್ಪನಾಯಕ	(ಪುಟ.101)
ಚಿತ್ರ 7	ದೇವರ ಹಾಗೂ ಭೀಮಪ್ಪನ ಭಾವಿ, ವನದುರ್ಗ	(ಪುಟ.265)
ಚಿತ್ರ 8	ಬೋನ್ನಾಳ ಹಾಗೂ ಮಾಲಗತ್ತಿ ಕೆರೆಗಳು	(ಪುಟ.267)
ಚಿತ್ರ 9	ರಾಯನಪಾಳ್ಯ ಹಾಗೂ ವಾಗಿನಗೇರಿ ಕೋಟೆಗಳು	(ಪುಟ.297)
ಚಿತ್ರ 10	ನೀಲಕಂಠರಾಯನಗಡ್ಡಿ ಹಾಗೂ ಶಹಪುರ ಕೋಟೆಗಳು	(ಪುಟ.301)
ಚಿತ್ರ 11	ಕುಂಬಾರ ಪೇಟೆ ಹಾಗೂ ವೆಂಕಟಾಪುರ ದ್ವಾರಗಳು, ಸುರಪುರ	(ಪುಟ.303)
ಚಿತ್ರ 12	ವನದುರ್ಗ ಹಾಗೂ ಶಹಪುರ ಕೋಟೆಗಳು	(ಪುಟ.304)
ಚಿತ್ರ 13	ಸುರಪುರದ ವೇಣುಗೋಪಾಲ ದೇವಾಲಯ ಮತ್ತು ವನದುರ್ಗದ ಆಂಜನೇಯ	(ಪುಟ.307)
ಚಿತ್ರ 14	ಗುಡಿಯ ಸೋಪಾನಗಳು ಹಾಗೂ ಕಂಬಗಳು ಸುರಪುರ	(ಪುಟ.309)

ಅನುಬಂಧ

ಚಿತ್ರ 15	ಸುರಪುರದ ಸುತ್ತಲನೋಟ ಮತ್ತು ಮಹಾದ್ವಾರ,	(ಪುಟ.337)
ಚಿತ್ರ 16	ಹೊಸಕೇರಿಯ ಪೇಟೆ ಮಹಲ ಮತ್ತು ಸುರಪುರದ ಟೇಲರ ಬಂಗ್ಲೆ	(ಪುಟ.337)
ಚಿತ್ರ 17	ಹಳೆಯ ಮತ್ತು ಹೊಸ ದರ್ಬಾರ (ಅರಮನೆ), ಸುರಪುರ	(ಪುಟ.337)
ಚಿತ್ರ 18	ಹೊಸಕೇರಿಯ ಕೆರೆ ಹಾಗೂ ಸುರಪುರದ ದೇವರಬಾವಿ	(ಪುಟ.337)

"ಸಗರನಾಡು" ಕಲಬುರ್ಗಿ ಜಿಲ್ಲೆಯಲ್ಲಿನ ಸುರಪುರ, ಶಹಾಪುರ, ಜೇವರಗಿ ತಾಲೂಕುಗಳಲ್ಲಿನ ಕೃಷ್ಣಾ – ಭೀಮಾನದಿಗಳ ಮಧ್ಯಮಂಡಲದ ಹಾಗೂ ಡೋಣಿ ನದಿ ದಡದ ತಾಳಿಕೋಟೆ.

ಕೃಪೆ : ಸಗರನಾಡು ದರ್ಶನ.

1872 ನೇ ಇಸವಿಯಲ್ಲಿದ್ದ ರಾಜ್ಯದ ನಕ್ಷೆ

ಕೃಪೆ : ಸು.ಸಂ. ಇ.

Chapter 1

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ಮತ್ತು ವಾಪ್ತಿ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸ್ವತಂತ್ರ ರಾಜ್ಯವನ್ನು ಕಟ್ಟಿ ಆಳಿದ ಕರ್ನಾಟಕದಲ್ಲಿಯ ಹಲವು ಅರಸು ಮನೆತನಗಳಲ್ಲಿ ಸಾತವಾಹನರು, ಕದಂಬರು, ಗಂಗರು, ಬದಾಮಿ ಚಾಳುಕ್ಯರು, ಕಲ್ಯಾಣಿ ಚಾಳುಕ್ಯರು, ರಾಷ್ಟ್ರಕೂಟರು, ಕಳಚೂರ್ಯರು, ಹೊಯ್ಸಳರು, ವಿಜಯನಗರದರಸರು, ಮೈಸೂರು ಒಡೆಯರು ಮುಂತಾದವರು ಮುಖ್ಯರು. ಇಲ್ಲಿಯ ಅರಸರೆಲ್ಲ ಸಾಮ್ರಾಜ್ಯ ಅಧಿಪತಿಗಳೆನಿಸಿಕೊಂಡು ಮೆರೆದರೇನೋ ನಿಜ. ಆದರೆ ಇವರ ಪೂರ್ವಜರೆಲ್ಲ 'ಪಾಳೆ-ಪಟ್ಟು' ಗಳ ಮೂಲಕ ಹೊರಹೊಮ್ಮಿ ಬಂದ ಪಾಳೆಯಗಾರರೇ ಹೆಚ್ಚಾಗಿದ್ದಾರೆ. ರಾಜ್ಯ, ಸಾಮ್ರಾಜ್ಯವೆಂಬ ಹೆಸರಿನ ಸಾಲಿಗೆ ಸೇರಿ ಹೋದ ಇಂಥ ಅರಸುಮನೆತನಗಳೆಲ್ಲ "ಮೂಲತಃ ಸಾಮಾನ್ಯ ಸೇನಾನಿಗಳಾಗಿ ಉದಯಗೊಂಡು, ತರುವಾಯ ದೇಸಗತಿ, ಪಾಳೆಪಟ್ಟು, ಸಂಸ್ಥಾನಗಳ ಸಾಮರ್ಥ್ಯಗಳಿಸಿ ವಿಕಾಸ ಪಡೆದವು. ಇದು ಸಾಮ್ರಾಜ್ಯವೊಂದರ ಬೆಳವಣಿಗೆಯ ಘಟ್ಟವನ್ನು ಗುರುತಿಸುತ್ತದೆ." ಅದರಂತೆ ಪ್ರವರ್ಧಮಾನಕ್ಕೆ ಬಂದ ಸ್ವತಂತ್ರ ಸಾಮ್ರಾಜ್ಯವೊಂದು ಹಲವಾರು ಸಂಸ್ಥಾನಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡು ಆಳ್ವಿಕೆ ಮಾಡಿದ ಪುಟಗಳು ನಮ್ಮ ರಾಜ್ಯದ ಚರಿತ್ರೆಯಲ್ಲಿವೆ. ಇವೆಲ್ಲವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ "ಸಣ್ಣ-ಪುಟ್ಟ ಸಂಸ್ಥಾನಗಳ ಶ್ರಮ 'ಸಾಮ್ರಾಜ್ಯವೊಂದರ' ಉನ್ನತಿಗೆ ಸಾಕಷ್ಟು ಕಾರಣವಾಗುತ್ತದೆ" ಎಂಬಂಶ ಇಲ್ಲಿ ದಿಟಗೊಳ್ಳುತ್ತದೆ. ಇದೇ ನಿಲುವಿನ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾ ಹೋದಾಗ "ಒಂದು ನಾಡಿನ ಸಮಗ್ರ ಇತಿಹಾಸ ರಚಿಸಲು ಕೇವಲ ಅಲ್ಲಿಯ ಸಾಮ್ರಾಜ್ಯಗಳಿಂದ ಮಾತ್ರ ಸಾಕಾಗುವದಿಲ್ಲ; ಅದು ಪರಿಪೂರ್ಣಗೊಳ್ಳುವದು ಅವುಗಳ ಅಧೀನ ಸಂಸ್ಥಾನಗಳ ಅಧ್ಯಯನದಿಂದ" ಎಂಬ ಸ್ಪಷ್ಟ ಧೋರಣೆ ಪ್ರಸ್ತುತ ಮಹಾಪ್ರಬಂಧ ತಾಳಿದೆ.

ಇತ್ತೀಚಿನ ವಿದ್ವಾಂಸರನೇಕರ ತೀವ್ರ ಪ್ರಯತ್ನದಿಂದ ಸ್ಥಳೀಯ ಘಟಕಗಳಿಂದಲೇ ಆರಂಭಿಸಿದ ತಲಸ್ಪರ್ಶಿ ಅಧ್ಯಯನಗಳು ಮೇಲಿನ ದೃಷ್ಟಿಕೋನಕ್ಕೆ ಹೊಸ ತಿರುವು ಒದಗಿಸಿವೆ. ಇಂಥ ಪರ್ವಕಾಲದಲ್ಲಿ ಹೊರಬಂದಿರುವ 'ಸುರಪುರ ಸಂಸ್ಥಾನ : ಒಂದು ಅಧ್ಯಯನ' ವೆಂಬ ಮಹಾಪ್ರಬಂಧ ಒಂದು ವಿನೂತನ ಪ್ರಯೋಗ.

ಸಣ್ಣಪುಟ್ಟ ಸಂಸ್ಥಾನಗಳ ಸಹಯೋಗದಿಂದ ಮಾತ್ರ ಸಾಮ್ರಾಜ್ಯಗಳು ತಲೆ ಎತ್ತಬಲ್ಲವು. ಕೆಲವೆ ಸಾಮಂತ ಸಂಸ್ಥಾನಗಳು ತಮಗೆ ಶಕ್ತಿ ಬಂದಾಗ ಸ್ವಾತಂತ್ರ್ಯ ಘೋಷಿಸಿಕೊಂಡದ್ದುಂಟು. ಆಗ ಅವುಗಳ 'ಶಕ್ತಿ' ಯನ್ನು ಸೊಕ್ಕೆಂದೇ ಪರಿಗಣಿಸಿ ಅಡಗಿಸಿದ ಆಕ್ರಮಣಕಾರಿ ಮನೋಭಾವನೆಯು ಸಾಮ್ರಾಜ್ಯಗಳು ಬಹುಬೇಗ ಉರುಳಿಹೋದದ್ದೇ ಹೆಚ್ಚು. ಯಾಕೆಂದರೆ ವೈರಿ ದಾಳಿಗಳು ತೂರಿಬಂದಾಗ ತಡೆಯುವ ತಾಕತ್ತು ಪಾಳೆಯಗಾರರ ಪಡೆಗಳಲ್ಲಿತ್ತು. ಅಂಥವುಗಳೇ ಮುನಿಸಿಕೊಂಡಾಗ ರಾಜ್ಯಗಳು ಸಾಮ್ರಾಜ್ಯಗಳಾಗುವುದು ಸಾಧ್ಯವೆ? ಎಂಬ ಪ್ರಶ್ನೆಯಲ್ಲ ಸಂಶಯ ತಾಳಬೇಕಾಗುತ್ತದೆ. ಈ ದೃಷ್ಟಿಯಿಂದ ಕರ್ನಾಟಕದಲ್ಲಿ ಬಾಳಿ ಬದುಕಿಹೋದ ಹಲವಾರು ಸಂಸ್ಥಾನಗಳ ಇತಿಹಾಸ ಬಹುಕುತೂಹಲಕಾರಿಯಾಗಿದೆ; ಅಷ್ಟೇ ಮಹತ್ವಪೂರ್ಣವೂ ಎನಿಸಿದೆ.

'ಸುರಪುರ ಸಂಸ್ಥಾನ — ಒಂದು ಅಧ್ಯಯನ' ವೆಂಬ ಶೀರ್ಷಿಕೆ ಅಡಿಯಲ್ಲಿ ನಡೆದ ಇಲ್ಲಿಯ ಶೋಧನೆ, ಅಧ್ಯಯನದ ಪೂರ್ವಪರಿಕರಗಳೆಲ್ಲ ವಿಜಯನಗರ ಸಾಮ್ರಾಜ್ಯದ ಪರಿಸರದಲ್ಲೇ ಬಿಚ್ಚಿಕೊಳ್ಳುತ್ತವೆ. ಕಾರಣ, ವಿಜಯನಗರ ಸಾಮ್ರಾಜ್ಯಕ್ಕೆ ಭದ್ರಬುನಾದಿ ಒದಗಿಸಿದ ಹಾಗೂ ಅದರ ಸ್ಫೂರ್ತಿಪ್ರೇರಣೆಯಿಂದಲೇ ಬಲಾಢ್ಯವಾಗಿ ಬೆಳೆದ ಹಲವು ಅಗ್ರಗಣ್ಯ ಸಂಸ್ಥಾನಗಳಲ್ಲಿ 72 ಬೇಡಜನಾಂಗದ ಪಾಳೆ-ಪಟ್ಟುಗಳು ಬಹುಪ್ರಮುಖ. ಇವುಗಳಲ್ಲಿಯ ಮಹತ್ವಪೂರ್ಣ ಒಂದು ಸಂಸ್ಥಾನ "ಸುರಪುರ". ಆದುದರಿಂದ ಸುರಪುರ ಸಂಸ್ಥಾನವನ್ನು ಅಧ್ಯಯನ ಮಾಡುವ ಮೂಲಕ ವಿಜಯನಗರ ಸಂಸ್ಕೃತಿಯ ಮುಂದುವರೆದ ಭಾಗವನ್ನು ಅರಿತುಕೊಳ್ಳುವುದು ಉದ್ದೇಶದ ಒಂದು ಭಾಗವಾಗಿದೆ. ಆಳುವ ಸಾಮ್ರಾಜ್ಯಕ್ಕೂ ಮತ್ತು ಅದರ ಅಧೀನ ಸಂಸ್ಥಾನಕ್ಕೂ ಇರುವ ವ್ಯತ್ಯಾಸ ಗುರುತಿಸುತ್ತಾ ಕೊಟ್ಟ ಕೊಡುಗೆಗಳ ಬಗ್ಗೆ ಸಮಗ್ರ ಪರಿಚಯದ ಪ್ರಯತ್ನ ಇದರಲ್ಲಿ ಅಡಗಿಸಲು ಯೋಜಿಸಿದೆ. ಪ್ರಖ್ಯಾತ ಪಾಳೆ-ಪಟ್ಟುಗಳ ಸಾಲಿನಲ್ಲಿ ಸೇರಿರುವ 'ಸುರಪುರ' ವು ವಿಶಿಷ್ಟ ಸಂಸ್ಕೃತಿ ಅಳವಡಿಸಿಕೊಂಡ 'ಸಂಸ್ಥಾನ' ವೆಂಬುದನ್ನು ದಾಖಲೆಸಮೇತ ಪ್ರತಿಬಿಂಬಿಸಲಾಗಿದೆ.

ಕೃಷ್ಣಾ-ಭೀಮಾನದಿಯ ಕೋಳಕ್ಷೇತ್ರಯಲ್ಲಿರುವ ಅಂದಿನ ಸಗರನಾಡು ಇಂದಿನ ಗುಲಬರ್ಗಾ ಜಿಲ್ಲೆಯ ಶಹಾಪುರ, ಸುರಪುರ, ಜೇವರ್ಗಿ ತಾಲೂಕಿನ ಪ್ರದೇಶ. ಶಹಾಪುರ ಕೋಟೆಯನ್ನು ಕೇಂದ್ರವಾಗಿ ಪಡೆದ ಸಗರನಾಡು "ಹಲವು ಅರಸು ಮನೆತನದ ಏಳು-ಬೀಳುಗಳ ವಿಜಯ ಉಡಭೂಮಿ". ಮುಂದೆ ವಿಜಯನಗರ ವ್ಯಾಪ್ತಿಗೆ ಒಳಪಟ್ಟಾಗ ಸುರಪುರದ ಪೂರ್ವಜರ ಹಿಡಿತ

ಇದರ ಮೇಲೆ ಬಿತ್ತು. ಬಿಜಾಪುರದ ಬಾದಷಹ ಮತ್ತು ಮೊಘಲರ ಮುಖಂಡತ್ವ ಕೊನೆಗೊಳ್ಳುತ್ತಿದ್ದಂತೆ ದಕ್ಷಿಣದಲ್ಲಿ ಅದೇ ಆಗ ಪ್ರವರ್ಧಮಾನಕ್ಕೆ ಬರುತ್ತಿದ್ದ ಮರಾಠ ಪೇಶ್ವೆ ಹಾಗೂ ಹೈದ್ರಾಬಾದ ನಿಜಾಮರ ಸಂಕ್ರಮಣ ಕಾಲದಲ್ಲೇ 'ಸುರಪುರ ಸಂಸ್ಥಾನ' ತಲೆ ಎತ್ತಿತು.

ಸುರಪುರವು ಕೃಷ್ಣ ಮತ್ತು ಭೀಮಾ ನದಿಗಳ ಮಧ್ಯದಲ್ಲಿ 4000 ಚ.ಮೈಲ ವ್ಯಾಪ್ತಿ ಹೊಂದಿತ್ತು ಎನ್ನುವ ವಾದವನ್ನು ತಳ್ಳಿಹಾಕಿದ ಮೆಡೋಸ್ ಟೇಲರ ಅದು 3500 ಚ.ಮೈಲ ಮಾತ್ರವಿದೆ[1] ಎಂದು ಖಚಿತಪಡಿಸಿದ. ತರುವಾಯ ಕ್ಯಾಪ್ಟನ್ ಮಾಲ್ಕಮನು ಸಂಸ್ಥಾನದ ವಿಸ್ತೀರ್ಣತೆ ಕುರಿತು ಹೇಳುವಾಗ[2] ರಾಜಧಾನಿ ಕೇಂದ್ರದಿಂದ ಸುತ್ತಲೂ 60 ಚ.ಮೈಲ ವ್ಯಾಪ್ತಿ ಹೊಂದಿದೆ ಎನ್ನುವ ಆತನವಾದಕ್ಕೆ ಕ್ಯಾಪ್ಟನ್ ಜಾಕಸನ್ನನು ಅದು 50 ಚ.ಮೈಲ ಸುತ್ತಳತೆ ಮಾತ್ರವಿದೆ ಎಂದು ಸ್ಪಷ್ಟನೆ ನೀಡಿದ. ಈ ಎಲ್ಲಾ ದೃಷ್ಟಿಯಿಂದ ಸುರಪುರವು ರಾಜಧಾನಿಯ ಕೇಂದ್ರದಿಂದ ಸುಮಾರು 50 ಚ.ಮೈಲ ಸುತ್ತಳತೆ[3] ಪಡೆದಿತ್ತು ಎನ್ನುವದಾದರೆ ಅದು 2264 ಚ.ಮೈಲ ವಿಸ್ತೀರ್ಣ ಹೊಂದಿತ್ತು[4]. ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇಷ್ಟೆಲ್ಲಾ ವ್ಯಾಪ್ತಿಯ ಪ್ರದೇಶದ ಮೇಲೆ ಎರಡು ಶತಮಾನಗಳ ಸುದೀರ್ಘ ಆಳ್ವಿಕೆ ನಡೆಸಿದ ಸುರಪುರ ಸಂಸ್ಥಾನ, ಹಲವು ವೈಶಿಷ್ಟ್ಯಗಳ 'ಸಂಗಮಸಂಸ್ಕೃತಿ'. ಇಂಥ ಅಪೂರ್ವ ಅರಸೊತ್ತಿಗೆಯ ಮೇಲೆ ಇದುವರೆಗೆ ನಡೆದ ಅಧ್ಯಯನ ಅಲ್ಪವೆಂದೇ ಹೇಳಬೇಕಾಗುತ್ತದೆ.

ಡಾ. ಎನ್. ಎಚ್. ಕುಲಕರ್ಣಿಯವರ "ದಿ ಬ್ರಿಟೀಷ ರಿಲೇಶನ್ಸ್ ವಿಥ ದಿ ಪ್ರಿನ್ಸಿಪಾಲಿಟಿ ಆಫ್ ಸುರಪುರ" ಎಂಬ ಮಹಾಪ್ರಬಂಧವು ಕೇವಲ ಬ್ರಿಟಿಷ ಸರಕಾರದಿಂದ ನಡೆದ ಸಂಸ್ಥಾನದಲ್ಲಿಯ ಹೆಜ್ಜೆಗಳನ್ನು ಮಾತ್ರ ಗುರುತಿಸುತ್ತದೆ. ಇಂಥ ಆಡಳಿತದ ಹೆಜ್ಜೆಗಳನ್ನು ಊರುವಲ್ಲಿ ಅತ್ಯಂತ ದಕ್ಷ ಅಧಿಕಾರಿಯೆನಿಸಿದ ಮೆಡೋಸ್ ಟೇಲರನ ಹತ್ತು ವರ್ಷಗಳ ದೀರ್ಘಆಳ್ವಿಕೆಯ ಚಿತ್ರಣವೇ ಇದರ ಮುಖ್ಯವಸ್ತು. ಸಂಸ್ಥಾನದ ಹಲವು ಸಾಮಗ್ರಿಗಳನ್ನು ಸಂಗ್ರಹಿಸಿಕೊಂಡಿರುವ ಹೈದ್ರಾಬಾದನ ದಾಖಲಾತಿಯು ಪ್ರಸ್ತುತ ಪ್ರಬಂಧಕ್ಕೆ ಸಮಗ್ರತೆ ತಂದಿದೆ. ಬ್ರಿಟಿಷರು ಸಂಸ್ಥಾನದೊಂದಿಗೆ ವ್ಯವಹರಿಸಿದ ಬಗ್ಗೆ ಸಮಗ್ರ ಮಾಹಿತಿ ನೀಡುವ ಇಲ್ಲಿಯ ಕಾಗದ ಪತ್ರಗಳು ಡಾ: ಕುಲಕರ್ಣಿಯವರ

1. SML : P.139
2. FPC : 17.Apr. 1841, No.102
3. FPC : 17 Apr, 184, No.103
4. FDP : Part - A - July 1860 - No.420

ಪ್ರಬಂಧಕ್ಕೆ ಪ್ರಾಮುಖ್ಯ ತಂದಿವೆ. ಸಂಸ್ಥಾನದ ಸಮಸ್ತ ಸರಕಾರಿ ಲೇಖ, ಕಡತ, ಕಾಗದ ಪತ್ರಗಳೆಲ್ಲ ಸಾಮಗ್ರಿಯು ಸಂಶೋಧನೆಗೆ ಸಹಾಯಕವಾಗಿವೆ. ಈ ದೃಷ್ಟಿಯಿಂದ ಡಾ: ಕುಲಕರ್ಣಿಯವರ ಮಹಾಪ್ರಬಂಧ ಬ್ರಿಟಿಷ ಹಾಗೂ ಹೈದ್ರಾಬಾದ ನಿಜಾಮ ಸರಕಾರಗಳ ಮೂಲಕ ಸುರಪುರ ಸಂಸ್ಥಾನವನ್ನು ಪರಿಚಯಿಸಲು ಯತ್ನಿಸಿದೆ. ಆ ಸಂಸ್ಥಾನದ ದಸ್ತಾವೇಜು, ಗೌಪ್ಯವರದಿ, ವಿದೇಶಿ ಮಾಹಿತಿ ಅಲ್ಲದೆ ಸುರಪುರದ ಎಲ್ಲಾ ದಫ್ತರಗಳು ನುಡಿಯುವ ಸತ್ಯ-ಸಾಕ್ಷಿಗೆ ಶಕ್ತಿ-ಒದಗಿಸಿವೆ. ಕ್ರೋಢೀಕರಿಸಿಕೊಂಡ ಶೋಧನ ಮಾತ್ರ ಸ್ವಾಗತಾರ್ಹವಾದುದು. ಆದರೆ ಪರ್ಶಿಯನ್ ಭಾಷೆಯ ಕೈಫಿಯತ್ತು, ಮರಾಠಿ ಲಿಪಿಯ ಆಡಳಿತ ಪತ್ರ, ಬಿಜಾಪೂರ ಬಾದಷಹರ ಸನದು ಹಾಗೂ ಮೊಘಲರು ನೀಡಿದ ಫರ್ಮಾನುಗಳ ಸಂಪರ್ಕವೇ ಡಾ: ಕುಲಕರ್ಣಿಯವರ ಮಹಾಪ್ರಬಂಧಕ್ಕೆ ಬಂದಿಲ್ಲ. ಕೇವಲ ಬ್ರಿಟೀಷ ದಾಖಲಾತಿಗಳನ್ನು ಮಾತ್ರ ನಂಬಿ ಸಂಸ್ಥಾನದ ಇತಿಹಾಸ ಬಿಂಬಿಸಿದರೆ ಅದು ಅಪೂರ್ಣವಾಗುವದಲ್ಲದೆ ಏಕಪಕ್ಷೀಯವೂ ಅನಿಸುತ್ತದೆ. ಈ ಕೊರತೆಯನ್ನು ಡಾ: ಎನ್.ಎಚ್. ಕುಲಕರ್ಣಿಯವರ ಮಹಾಪ್ರಬಂಧ ತುಂಬಿಕೊಟ್ಟಿಲ್ಲವಾದುದರಿಂದ ಸಂಸ್ಥಾನದ ಸಮಗ್ರ ಇತಿಹಾಸ ಹೇಳುವ ವಸ್ತುನಿಷ್ಠ ಅಧ್ಯಯನದ ಅವಶ್ಯಕತೆ ಇನ್ನೂ ಇದೆ ಎಂದೇ ಇದರರ್ಥ.

ಬ್ರಿಟಿಷ ಆಡಳಿತಾಧಿಕಾರಿಯಾಗಿದ್ದ ಮೆಡೋಸ್ ಟೇಲರನು ತನ್ನ ಮಿತ್ರ ಹೆನ್ರೀ ರೀವನಿಗೆ ಬರೆದ ಹಲವು ಪತ್ರಗಳಲ್ಲಿ ಸಂಸ್ಥಾನದ ಆಡಳಿತ ಬಗ್ಗೆ ಅಪೂರ್ವ ಮಾಹಿತಿ ಕಾಣುತ್ತೇವೆ. ಅಂತೆಯೇ ಸಮರ್ಥ ಆಡಳಿತಗಾರನಾದ ಮೆಡೋಸ್ ಟೇಲರ ಶ್ರೇಷ್ಠ ಸಂಶೋಧಕ, ಸಾಹಿತಿ, ಆಡಳಿತಗಾರನೆಂದು ಪ್ರತಿಪಾದಿಸುವ ಡಾ: ಆರ್.ಎಸ್. ಮುಳಕಿಯವರ ಮಹಾಪ್ರಬಂಧ — "ದ ಇಮೇಜ ಆಫ್ ಇಂಡಿಯಾ ಇನ್ ದಿ ವರ್ಕ್ಸ — ಆಫ್ ಫಿಲಿಫ್ ಮೆಡೋಸ್ ಟೇಲರ" ಟೇಲರನ 'ಸ್ಟೋರಿ ಆಫ್ ಮೈ ಲೈಫ್' ಎಂಬ ಆತ್ಮಕಥೆಯಂತೂ ಐತಿಹಾಸಿಕ ಅಂಶಗಳಿಂದ ಅವ್ಯಕ್ತವಾದ ವತ್ಯಕ ಕೃತಿ. ಸುರಪುರದಲ್ಲಿಯ ತನ್ನ ಹತ್ತು ವರ್ಷಗಳ ಆಡಳಿತ ಮತ್ತು ಸಾಂಸ್ಕೃತಿಕ ಅನುಭವಗಳನ್ನು ಅಚ್ಚುಕಟ್ಟಾಗಿ ಬಿಡಿಸಿದ್ದಾನೆ. ಬ್ರಿಟಿಷ ಪ್ರತಿನಿಧಿ (ಟೇಲರ) ಯೊರ್ವನ ಆತ್ಮಕಥೆ ಇದಾದುದರಿಂದ ಪ್ರತಿಯೊಂದು ಘಟನೆಗಳನ್ನು ಸೂಕ್ಷ್ಮವಾಗಿ ವೀಕ್ಷಿಸಬೇಕಾದದು ನಮ್ಮ ಜವಾಬ್ದಾರಿ. ಯಾಕೆಂದರೆ ನಮ್ಮ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರೆಲ್ಲ ನಮ್ಮ ದೃಷ್ಟಿಯಲ್ಲಿ ವೀರರು. ಆದರೆ ಅವರೇ ಬ್ರಿಟೀಷರ ದೃಷ್ಟಿಯಲ್ಲಿ ವೈರಿಗಳು ಮತ್ತು ರಾಜದ್ರೋಹಿಗಳು. ಹೀಗಾಗಿ ಬ್ರಿಟಿಷರು ಬರೆದಿಟ್ಟ ದಾಖಲೆಗಳಲ್ಲಿ

ಸತ್ಯಶುದ್ಧವಾದವು ಎಂದು ತೀರ್ಮಾನಿಸುವ ಪೂರ್ವದಲ್ಲಿ ಹತ್ತುಹಲವು ಸಲ ತರ್ಕಿಸುವುದು ಉತ್ತಮ. ಈ ಮಾತಿಗೆ ಪ್ರಸ್ತುತ ಟೇಲರನ ಆತ್ಮಕಥೆಯು ಹೊರತಾಗಿಲ್ಲ. ಟೇಲರನು ತನ್ನ ತಂದೆಗೆ ಮತ್ತು ಮೇಲಧಿಕಾರಿಗಳಿಗೆ ಬರೆದ ಪತ್ರದ ಸಾರಾಂಶವನ್ನು ಇಲ್ಲಿ ಶೇಖರಿಸಿದ್ದಾನೆ. ಅದಕ್ಕಿಂತ ಮುಖ್ಯವಾಗಿ ಸುರಪುರದ ಘಟನಾವಳಿಗಳ ಮೇಲೆ ಕ್ಷ-ಕಿರಣ ಬೀರುವ ಇಲ್ಲಿಯ ಒಂಬತ್ತು ಅಧ್ಯಾಯಗಳು ವಿಶಿಷ್ಟ ದಾಖಲೆಯೆನಿಸಿವೆ. ಒಟ್ಟು 19 ಅಧ್ಯಾಯಗಳಲ್ಲಿ ಒಂಬತ್ತು ಅಧ್ಯಾಯಗಳನ್ನು ಸುರಪುರದ ಜೀವನಕ್ಕೆ ಮೀಸಲಿಟ್ಟ ಟೇಲರ ಹಲವು ನಿಲುವಿನ ದಕ್ಷ ಅಧಿಕಾರಿ. ಆದರೆ ಸುರಪುರದ ಕೊನೆಯ ರಾಜನನ್ನು ಕೊಲೆ ಮಾಡಿದ ಸಂದರ್ಭವನ್ನೆಲ್ಲ ತಿರುಚಿ, ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿ, ಅದೊಂದು ಆತ್ಮಹತ್ಯೆಯೆಂದು ಸಾಧಿಸಿರುವ ಆತ್ಮವಂಚನೆ ಮಾತ್ರ ಖಂಡನೀಯವಾದುದು. ರಕ್ತಸಂಬಂಧಿ ರಾಜ್ಯವನ್ನೇ ಎತ್ತಿಹಿಡಿದ ಟೇಲರ, ಮುಗ್ಧ ಸಂಸ್ಕೃತಿಯೊಂದನ್ನು ಸಮಾಧಿ ಮಾಡಿದ. ಹೀಗಾಗಿ 'ಸ್ಟೋರಿ ಆಫ್ ಮೈ ಲೈಫ್' ಕೃತಿಯೊಳಗೆ ಎಲ್ಲವೂ ಸತ್ಯವಿದೆ ಎಂದು ನಂಬಲಾಗದು.

ದೋ ಆಬ್ ಪ್ರದೇಶದ ವ್ಯವಹಾರವನ್ನೆಲ್ಲ ನೋಡಿಕೊಳ್ಳುತ್ತಿದ್ದ ಅಂದಿನ ಆಡಳಿತಾಧಿಕಾರಿ ಕ್ಯಾಪ್ಟನ್ ಟೇಲರನ ಸುರಪುರ ಕುರಿತ ವರದಿಗಳು ಅಧ್ಯಯನ ಯೋಗ್ಯವಾಗಿವೆ. "ಸುರಪುರ ದೊರೆಗಳು ಒರಟು ಸಂಸ್ಕೃತಿಯಿಂದ ಬಂದವರಾದರೂ ಅತ್ಯುತ್ತಮ ಪರಂಪರೆಯನ್ನು ಹಾಕಿದ ಕೀರ್ತಿಗೆ ಪಾತ್ರರಾದವರು" ಎಂಬ ವರ್ಣನೆ ನವಾಬ ಫ್ರಮೋರಜ್ ಜಂಗಬಹಾದ್ದೂರನ "ಶೋರಾಪೂರ ಆ್ಯನ್ ಏನಿಶಂಟ್ ಬೇಡರ ರಾಜ್ಯ" ಕೃತಿಯಲ್ಲಿ ಉಲ್ಲೇಖವಿದೆ. ಸುರಪುರ ದೊರೆಗಳ ಪ್ರಾಚೀನತೆ, ಪ್ರಾಬಲ್ಯ, ಪ್ರೌಢಿಮೆಗಳ ಸಂಕ್ಷಿಪ್ತ ಮಾಹಿತಿ ಇದರಲ್ಲಿದೆ. ಆದರೆ ಉತ್ತರಕಾಲೀನ ಆಡಳಿತ ಕುರಿತು ಮೌನವಹಿಸಿರುವ ಸದರಿ ಕೃತಿ ಪರಿಪೂರ್ಣತೆ ಪಡೆದಿಲ್ಲ.

ಎಂ.ವಿ.ಕೃಷ್ಣರಾವ್ ಮತ್ತು ಜಿ.ಎಸ್.ಹಾಲಪ್ಪನವರ ಸಂಪಾದಕತ್ವದಲ್ಲಿ ಹೊರಬಂದ "ಹಿಸ್ಟರಿ ಆಫ್ ಫ್ರೀಡಮ್ ಮೂವ್‌ಮೆಂಟ್ ಇನ್ ಕರ್ನಾಟಕ" ಎಂಬ ಭಾಗ ಒಂದರಲ್ಲಿಯ ಎರಡು ಅಧ್ಯಾಯಗಳು ಸುರಪುರದ ಕೊನೆಯ ಅರಸುವಿನ ಆಡಳಿತೆಯ ಮೇಲೆ ಹೊಸ ಬೆಳಕು ಚೆಲ್ಲುತ್ತವೆ. ರಾಜವೆಂಕಟಪ್ಪ ನಾಯಕನನ್ನು ರಾಜ್ಯದ್ರೋಹದ ಅಪಾದನೆ ಮೇಲೆ ಬಂಧಿಸಿದ ಬ್ರಿಟಿಷರು ಸಿಕಂದರಾಬಾದನ ನ್ಯಾಯಾಲಯದಲ್ಲಿ ಒಳಪಡಿಸಿದ ವಿಚಾರಣೆ ಬಗ್ಗೆ ಸಂಪೂರ್ಣ ಮಾಹಿತಿ ನೀಡುತ್ತದೆ. ಅಲ್ಲದೆ ಸುರಪುರದಿಂದ ರಾಜನ ಪರವಾಗಿ ನುಡಿದ ಸಾಕ್ಷಿಗಳ ಹೇಳಿಕೆ, ಕ್ಯಾಂಬೆಲ್ ಪ್ರತಿವಾದ, ನ್ಯಾಯಾಧೀಶರ

ನಿರ್ಣಯಗಳು ಇಲ್ಲಿ ಯಥಾವತ್ತಾಗಿ ಸಂಗ್ರಹಿಸಲಾಗಿದೆ. ಆದರೆ ರಾಜನಿಗೆ ವಿಧಿಸಿದ ಶಿಕ್ಷೆ ಬಗ್ಗೆ ಹೇಳುವ ಸದರಿ ಬರೆಹ ಆತನ ಕೊಲೆಯ ವಿಷಯದಲ್ಲಿ ಮೌನವಹಿಸಿದೆ. ಕಾರಣ ಬ್ರಿಟಿಷ ದಾಖಲೆಗಳ ಒತ್ತಡ. ಬ್ರಿಟಿಷ ಲೇಖನಿಯಿಂದ ಹರಿದು ಬಂದ ಕೆಲವು ಬರೆಹಗಳ ಇದೇ ಇಬ್ಬಗೆ ನೀತಿ ಅನುಸರಿಸಿವೆ ಎಂಬುದನ್ನು ಎತ್ತಿ ತೋರಿಸುವ ಉದ್ದೇಶ ನಮ್ಮ ಪ್ರಬಂಧಕ್ಕಿದೆ.

ಕಪಟರಾಳ ಕೃಷ್ಣರಾಯರ 'ಸುರಪುರ ಸಂಸ್ಥಾನ ಇತಿಹಾಸ' ಎಂಬ ಸಂಶೋಧನಾತ್ಮಕ ಕೃತಿ ಹಲವು ದೃಷ್ಟಿಯಿಂದ ಮಹತ್ವ ಪೂರ್ಣವಾಗಿದೆ. ದೇಶೀಯ ದಾಖಲೆಗಳನ್ನೇ ಅತಿ ಹೆಚ್ಚು ನಂಬಿರುವ ಸದರಿ ಲೇಖಕರು ಬ್ರಿಟಿಷರ ಆಡಳಿತ ಹಾಗೂ ಸಂಸ್ಥಾನ ಕುರಿತ ಅವರ ಬರೆಹಗಳನ್ನು ಬರೆಹದುದ್ದಕ್ಕೂ ಬಹು ಶಂಕೆಯಿಂದಲೇ ಕಂಡಿದ್ದಾರೆ. ದೊರೆತ ಆರು ಕೈಫಿಯತ್ತು ಹಾಗೂ ಆಸ್ಥಾನಕವಿಗಳ ಸಾಹಿತ್ಯ ಸಾಮಗ್ರಿಗಳೇ ಪ್ರಸ್ತುತ ಕೃತಿಯ ಬಲ. ಕಲ್ಪನೆಯ ಕಡಲಲ್ಲಿ ತೇಲಿ ಕೊಂಡು ಹೋಗುವ ಕೈಫಿಯತ್ತುವಿನ ಹಲವು ಭಾಗವನ್ನು ಐತಿಹಾಸಿಕವೆಂದೇ ಇವರು ನಂಬಿದ್ದಾರೆ. ಅದನ್ನು ನೇರವಾಗಿ ಎತ್ತಿಕೊಂಡು ತಮ್ಮ ಕೃತಿಗೂ ಬಳಸಿಕೊಂಡಿದ್ದಾರೆ. ನಡೆದ ಘಟನೆಗಳಿಗೆ ಬಾಹ್ಯ ಕಥೆ — ಬೆರೆಸುವದರಿಂದ ಚರಿತ್ರೆಯ ಚಿತ್ರಗಳು ರಂಜಿಸುತ್ತವೆಯೇ ಹೊರತು ನೈಜತೆ ಬಿಂಬಿಸುವದಿಲ್ಲ. ಅಂಥ ಆತಂಕ ಶ್ರೀ ಕಪಟರಾಳರ 'ಸುರಪುರ ಸಂಸ್ಥಾನ ಇತಿಹಾಸ' ಕೃತಿಯಾಗಿರುವದರಿಂದ 'ಸಂಸ್ಥಾನ'ದ ಸಮಗ್ರತೆ ಇಲ್ಲಿಯೂ ದೊರೆಯದೆ ಹೋಗಿದೆ. ಲೇವಣಸಿದ್ಧಯ್ಯ ರುದ್ರಸ್ವಾಮಿಮಠದ 'ಸುರಪುರ ತಾಲೂಕ ದರ್ಶನ' ಎಂಬ ಕಿರು ಕೃತಿಯು ಕೇವಲ ಪ್ರಾಥಮಿಕ ಪರಿಚಯದ ಸುಳುಹು ನೀಡುತ್ತದೆ.

ಸಗರನಾಡಿನ ವ್ಯಾಪ್ತಿಯಲ್ಲಿ ಬಾಳಿ ಬೆಳಗಿದ ಹಲವು ಶಿವಶರಣರು ಧರ್ಮದ ನಿಜ ತಿರುಳನ್ನು ನಡೆದು ತೋರಿಸಿದರು. ಅಲ್ಲದೆ ಸಂಸ್ಥಾನಕ್ಕೆ ಉತ್ತಮ ಸಂಸ್ಕೃತಿಯನ್ನು ಬಿತ್ತಿ ಹೋದರು. ಅಂಥವರ ಸಾಲಿನಲ್ಲಿ ಸೇರಿರುವ ಧಾರ್ಮಿಕ ಆಂದೋಲನದ ಹರಿಕಾರ 'ಕೊಡೇಕಲ ಬಸವಣ್ಣ' ಸಂಸ್ಥಾನದ ಪೂರ್ವಜರಿಗಾಗಿ ಅವತರಿಸಿ ಬಂದ ಪುಣ್ಯಪುರುಷ. ಇವರ ಬಗ್ಗೆ ಹೊರಬಂದ ಡಾ: ಬಸವಲಿಂಗ ಸೊಪ್ಪಿಮಠರ ಮಹಾಪ್ರಬಂಧ, ಸುರಪುರ ದೊರೆಗಳ ಪೂರ್ವಪರಂಪರೆ ಮತ್ತು ಅವರ ಧಾರ್ಮಿಕ ಪ್ರಕ್ರಿಯೆಗಳನ್ನು ತಿಳಿಸುತ್ತದೆ. ಕೊಡೇಕಲ, ಕಕ್ಕೇರಿ ಭಾಗದಿಂದಲೇ ಬೆಳೆದ ಬಂದ ವಾಗಿನಗೇರಿ ಕಿಲ್ಲೆಯ ಅರಸರೆಲ್ಲ ಈ ಬಸವಣ್ಣನವರ ಪ್ರಭಾವ ಪಡೆದವರೆಂಬುದೆ ಇವರ ಪ್ರತಿಪಾದನೆ.

ಸಂಸ್ಥಾನದ ಆರಂಭ ಕಾಲದ ಇನ್ನೊರ್ವ ಶರಣ ತಿಂಥಣಿ ಮೋನಪ್ಪಯ್ಯ. ಈ ಕರ್ಮಯೋಗಿಯ ಕಾರ್ಯಕ್ಷೇತ್ರಗಳು ಸಂಸ್ಥಾನದುದ್ದಕ್ಕೂ ಸಂಸ್ಕೃತಿ ಸೂಸುತ್ತದೆ. ಇಂಥ ಮಹಾನುಭಾವಿಯ ಜೀವನ ಹಾಗೂ ಸಾಧನೆಸಿದ್ಧಿಗಳನ್ನು ಕುರಿತು ಮಹಾಪ್ರಬಂಧವೊಂದನ್ನು ನೀಡಿರುವ ಡಾ: ಎಂ.ಎಂ.ಪಡಶೆಟ್ಟಿಯವರ ಶೋಧನೆಯಲ್ಲಿ ನಮಗಿಂದು ಉಪಯುಕ್ತ ಮಾಹಿತಿ ಲಭಿಸಿವೆ. ಧರ್ಮದೃಷ್ಟಿಕೋನವೇ ಇಲ್ಲಿ ಪ್ರಧಾನ ಪಾತ್ರ ವಹಿಸಿರುವದರಿಂದ ಸಂಸ್ಥಾನದ ಇನ್ನಿತರ ವಿಷಯಗಳೆಲ್ಲ ಇಲ್ಲಿ ತುಚ್ಛವೆನಿಸಿವೆ.

ಶ್ರೀ ಎ.ಆರ್.ನಾಯಕರ " ನಗರನಾಡಿನ ಬೇಡರ ಸಂಪ್ರದಾಯಗಳು " ಎಂಬ ಎಂ.ಫಿಲ್ ಪ್ರಬಂಧವು ಸಂಸ್ಥಾನದ ಜನತೆಯ ಆಚಾರ ಪದ್ಧತಿಗಳನ್ನು ವಸ್ತುನಿಷ್ಠವಾಗಿ ತಿಳಿಸುತ್ತದೆ. ಇದರ ಶೀರ್ಷಿಕೆಯೇ ಸೂಚಿಸುವಂತೆ ಕೇವಲ 'ಸಂಪ್ರದಾಯ'ಗಳಲ್ಲಿ ಮಾತ್ರ ನಿಷ್ಠೆಯುಳ್ಳ ನಡೆದುದಾಗಿದೆ. ಇತ್ತೀಚೆಗೆ ಶ್ರೀ ರಾಜಶೇಖರ ದಾನರಡ್ಡಿಯವರು ಸಾದರಪಡಿಸಿದ 'ಶ್ರೀ ಷಣ್ಮುಖಶಿವಯೋಗಿಗಳನ್ನು' ಕುರಿತ ಮಹಾಪ್ರಬಂಧ ಸಂಸ್ಥಾನದ ಮತ್ತೊರ್ವ ಶರಣನ ಜೇವರಗಿ ಭಾಗದ ಧರ್ಮಸಂಸ್ಕೃತಿ ವ್ಯಕ್ತಪಡಿಸುತ್ತದೆ. ಮಣಿವಿಶ್ವವಿದ್ಯಾನಿಲಯದಲ್ಲಿ '' ಸುರಪುರ ಸಂಸ್ಥಾನದ ವಾಸ್ತುಶಿಲ್ಪ '' ಕುರಿತು ಶ್ರೀ ಶಿವಶರಣ ಅರುಣಿಯವರಿಂದ ನಡೆದ ಅಧ್ಯಯನವೂ ಸಹ ವಿಚಾರಾರ್ಹ. ಡಾ: ಪದ್ಮಯ್ಯನವರಂಥ ಹಲವು ವಿದ್ವಾಂಸರ ಅನೇಕ ಲೇಖನಗಳು ಖ್ಯಾತ ಪತ್ರಿಕೆ, ಸಂಚಿಕೆಗಳಲ್ಲಿ ಪ್ರಕಟಗೊಂಡಿವೆ. ಇವು ಸಂಸ್ಥಾನದ ಮೂಲ ಚೂಲ ಮಾತ್ರ ಪರಿಚಯಿಸಬಲ್ಲವು.

ಮೇಲಿನ ಎಲ್ಲಾ ಕೃತಿಗಳನ್ನು ಸಮೀಕ್ಷಿಸಿದಾಗ ತಿಳಿದು ಬರುವ ಸಂಗತಿಯೆಂದರೆ, 'ಸುರಪುರ ಸಂಸ್ಥಾನ' ಕುರಿತ ಸಮಗ್ರ ಮಾಹಿತಿ ಒದಗಿಸುವ ಪ್ರಯತ್ನ ಎಲ್ಲಿಯೂ ನಡೆದಿಲ್ಲ ಎಂಬುದು. ಆದುದರಿಂದ ಸಂಸ್ಥಾನದ ಸಮಗ್ರ ಚರಿತ್ರೆಯ ಕೊರತೆಯನ್ನು ನೀಗಿಸುವಲ್ಲಿ ನಮ್ಮ ಅಧ್ಯಯನ ಅತ್ಯವಶ್ಯವಿದೆ. ಇಂದು ಉಪಲಬ್ಧವಿರುವ ಆರು ಕೈಫಿಯತ್ತುಗಳು 'ಸುರಪುರ ಸಂಸ್ಥಾನದ ರಾಜಕೀಯ ಹಾಗೂ ಸಾಂಸ್ಕೃತಿಕ ಸಂಪತ್ತನ್ನು ಬಿಂಬಿಸುತ್ತವೆ. ಆಯಾ ಕಾಲದ ಅರಸರ ಆಡಳಿತ ಕುರಿತು ವಿವರಿಸುವ ಈ ಸಾಮಗ್ರಿ ಅಂದಿನ ಘಟನಾವಳಿಗಳ ಸತ್ಯ-ಅಸತ್ಯ ಶೋಧಿಸಲು ಸಹಾಯಕವಾಗಿವೆ. ಆಸ್ಥಾನ ಕವಿಗಳು ರಚಿಸಿ ಹೋದ ಹಲವಾರು ಹಸ್ತಪ್ರತಿಗಳು ಇಂದಿಗೂ ಮದ್ರಾಸ ಮತ್ತು ಹೈದ್ರಾಬಾದ

ಆಧಾರ ಗ್ರಂಥಾಲಯಗಳಿಂದ ದೊರೆಯುವದರಿಂದ ಅವೆಲ್ಲವುಗಳ ಅಂತರಂಗದ ಅಧ್ಯಯನ ತಿಳಿಯುವದು ಅಗತ್ಯವಾಗಿದೆ. ಕಾರಣ, ಸಂಸ್ಥಾನ ಕುರಿತ ಸಾಮಗ್ರಿಯಲ್ಲಿ ಪ್ರಕಟಿತ ಪುಸ್ತಕಕ್ಕಿಂತಲೂ ಅಪ್ರಕಟಿತ ಸಾಹಿತ್ಯವೇ ಅಪಾರವಿದೆ. ಇವೆಲ್ಲವುಗಳನ್ನು ಮಹಾಪ್ರಬಂಧದ ಚೌಕಟ್ಟಿಗೆ ನೇರಿಸುವ ಮೂಲಕ ಸುರಪುರದ ಚರಿತ್ರೆ ಕಟ್ಟುವ ಪ್ರಮಾಣಿಕ ಕಾರ್ಯ ಕೈಗೊಳ್ಳಲಾಗಿದೆ.

ಅಧ್ಯಯನದ ಪ್ರಮುಖ ಅಂಗ ಕ್ಷೇತ್ರಕಾರ್ಯಾನುಭವ. ವಿಷಯದ ವೈಶಾಲ್ಯ ಗುಲಬರ್ಗಾ, ಬಿಜಾಪೂರ, ರಾಯಚೂರ, ಜಿಲ್ಲೆಗಳ ವ್ಯಾಪ್ತಿಗೆ ವಿಸ್ತರಿಸಿಕೊಂಡಿರುವುದರಿಂದ ಸಂಸ್ಥಾನಕ್ಕೆ ಸಂಬಂಧಿಸಿದ ಇಲ್ಲಿಯ ಪ್ರತಿಯೊಂದು ಸ್ಥಳದ ಮಾಹಿತಿ ಸಂಗ್ರಹಿಸಿದೆ. ಸಂಸ್ಥಾನದ ಅರಸರ ಚೇತನಕ್ಕೆ ಒಳಪಟ್ಟ ಕೋಟೆ, ಕೊತ್ತಲ, ಕೆರೆ, ಕಾಲುವೆ, ಬಾವಿ, ಮುಂತಾದವುಗಳ ಬಗ್ಗೆ ಪ್ರತ್ಯಕ್ಷ ಶೋಧನ ವರದಿ ಇಲ್ಲಿಯ ಸಂಯೋಜನೆಯಲ್ಲಿ ನೇರಿಸಲಾಗಿದೆ.

ಆದಿಯಿಂದ ಅವನತಿಯವರೆಗೂ ಹಲವು ಸಾಮ್ರಾಜ್ಯಾಧಿಪತಿಗಳ ಸಾಮಂತಿಕೆಯಲ್ಲಿ ಬದುಕಿದ ಸುರಪುರವು ಅತ್ಯಂತ ವೈವಿಧ್ಯಮಯ ಆಡಳಿತ ಬಿಟ್ಟುಹೋಗಿದೆ. ಆದುದರಿಂದ ಹತ್ತುಹಲವು ನಿಲುವುಗಳ ಮೂಲಕ " ಸುರಪುರ ಸಂಸ್ಥಾನ – ಒಂದು ಅಧ್ಯಯನ " ವೆಂಬ ವಿಷಯದ ವ್ಯಾಪ್ತಿಯನ್ನು ಆರು ಅಧ್ಯಾಯಗಳಿಗೆ ವಿಸ್ತರಿಸಿಕೊಂಡಿದೆ.

ರಾಜಕೀಯ ಚರಿತ್ರೆ, ಆಡಳಿತ ಹಾಗೂ ಆರ್ಥಿಕ ಸ್ಥಿತಿ-ಗತಿ, ಧಾರ್ಮಿಕ ಹಾಗೂ ಸಾಮಾಜಿಕ ವ್ಯವಸ್ಥೆ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆ ಹೀಗೆ-ಈ ನಾಲ್ಕು ಅಧ್ಯಾಯಗಳು ವಿಷಯದ ನೇರ ನಿರೂಪಣೆಯಲ್ಲಿ ತೊಡಗಿದರೆ, ಉಳಿದ ಕೊನೆಯ ಅಧ್ಯಾಯ " ಸಾಧಿಸಿದ ಸಾಧನೆಗಳ ಸಂಪೂರ್ಣ ಸಿಂಹಾವಲೋಕನವನ್ನು " ಆಧಾರಸಹಿತ ಸಮಾರೋಪ ಮಾಡುತ್ತದೆ.

—— oo ——

Chapter 2

ಅಧ್ಯಾಯ ಎರಡು

ರಾಜಕೀಯ ಚರಿತ್ರೆ



ರತ್ನಗಿರಿಯಿಂದ ಸುರಪುರಕ್ಕೆ ಆಗಮಿಸಿದ ಸಂಸ್ಥಾನದ ಪೂರ್ವಜರ ರಾಜಕೀಯ ಪರಿಸರ.

ಅಧ್ಯಾಯ-ಎರಡು

ರಾಜಕೀಯ ಚರಿತ್ರೆ

(ಅ) ರಾಜಕೀಯ ಪರಿಸರ

ಸುರಪುರ ಸಂಸ್ಥಾನವನ್ನು ಕಟ್ಟಿ ಆಳಿದ ಅರಸರ ಮೂಲ ಪ್ರದೇಶದ ಪರಿಸರ 'ರತ್ನಗಿರಿ ರಾಜ್ಯವೆಂಬುದು'[1] ನಿಚ್ಚಳವಾದ. ಇದೀಗ ಅದು ಆಂಧ್ರರಾಜ್ಯದ ಅನಂತಪುರ ಜಿಲ್ಲೆಯ ಮಡಕಸಿರ ತಾಲೂಕಿಗೆ ಒಳಪಟ್ಟ ಮುಖ್ಯನಗರವಾಗಿದೆ. ಬೇಟೆಯನ್ನೇ ಬದುಕಿನ ಮೂಲನೆಲೆಯಾಗಿಸಿಕೊಂಡ ಇವರು ಮತ್ತು ಇವರಂಥ ಇನ್ನೂ ಅನೇಕ ಬೇಡರು ಸದೃಢ ಶರೀರದಿಂದ ಸಮರ್ಥರಾಗಿದ್ದರು. ಶೌರ್ಯಕ್ಕೆ ಹೆಸರಾದ ಇಂಥ ಅನೇಕ ಬೇಡರ ದಂಡುಗಳು ವಲಸೆ ಹೊರಟು ಕರ್ನಾಟಕ-ಆಂಧ್ರಗಡಿಭಾಗದಲ್ಲಿ ಬೀಡು ಬಿಟ್ಟವು.

ಇನ್ನು ಕೆಲವು ಬೇಡರು ಶ್ರೀಶೈಲದ ಬಳಿಯ ಕರಿಮಲೆ-ಕೊಮ್ಮಮಲೆಗಳ ಕಡೆಯಿಂದ[2] ಮತ್ತು ತಿರುಪತಿ ಬಳಿಯ ಜೋಕಲ್ಲುದುರ್ಗದ ಕಡೆಯಿಂದ[3] ಹೊರಟುಬಂದರು. ಇವರೆಲ್ಲ ಮೂಲತಃ ಬೇಟೆಗಾರರು. ಹುಲ್ಲುನೀರು ಹುಡುಕುತ್ತ ಕರ್ನಾಟಕದ ಪೂರ್ವ ಗಡಿಯಲ್ಲಿ ಆಶ್ರಯ ಪಡೆದರು.

ಇವರಲ್ಲಿ ಅಪಾರ ಶಕ್ತಿಸಾಮರ್ಥ್ಯ ಗುರುತಿಸಿಕೊಂಡ ಕರ್ನಾಟಕದ ರಾಜ್ಯ-ಸಾಮ್ರಾಜ್ಯಗಳು ಈ ಬೇಡರನ್ನು ತಮ್ಮ ಸೈನ್ಯದಲ್ಲಿ ಸೇರಿಸಿಕೊಂಡರು. ಯುದ್ಧಪ್ರೇಮಿಗಳಾದ ಬೇಡರು ಬಹುಬೇಗ ಸೈನ್ಯದಲ್ಲಿ ಉನ್ನತ ಸ್ಥಾನ-ಮಾನ ಸಂಪಾದಿಸಿದರು.[4] ಇಂಥ ಬೇಡಪಡೆಯ ಪರಾಕ್ರಮದಿಂದಲೇ ಪ್ರವರ್ಧಮಾನಕ್ಕೆ ಬಂದ ಅದೆಷ್ಟೋ ರಾಜ್ಯಗಳು ಕೊನೆಗೆ ಇವರನ್ನು ತಮ್ಮ 'ಪಾಳೆಯಗಾರರೆಂದು' ಸ್ವೀಕರಿಸಿದರು.

ಪ್ರಮುಖವಾಗಿ ಕಾಕತೀಯ, ಹೊಯ್ಸಳ, ಯಾದವ ಇನ್ನಿತರ ದೊಡ್ಡ-ಪುಟ್ಟ ರಾಜ್ಯಗಳ ಸಂಪರ್ಕದಲ್ಲಿ ಬೆಳೆಯತೊಡಗಿದ ಮೇಲಣ ಬೇಡಪಡೆಗಳು ಸಮರದಲ್ಲಿ ಬೃಹತ್ ಸ್ವರೂಪವನ್ನು ಪ್ರದರ್ಶಿಸಿದವು. ಇದರ ಪರಿಣಾಮ, ಸ್ವತಂತ್ರ ಪಾಳೆಯಪಟ್ಟುಗಳ ಮೂಲಕ ತಲೆ ಎತ್ತಿ ಕಂಪಿಲ ರಾಜ್ಯದ ಉದಯಕ್ಕೆ ಕಾರಣವಾದವು. ಕಂಪಿಲರಾಯ ಮತ್ತು ಕುಮಾರರಾಮರು ಈ ಸ್ವಜಾತಿ ಬೇಡ ಪಡೆಯ ಪಾಳೆಗಾರರನ್ನು ಹುರಿದುಂಬಿಸಿ ತಮ್ಮ ರಾಜ್ಯದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವ ಮೂಲಕ ಪ್ರಬಲ ಪ್ರಭುತ್ವ ಸ್ಥಾಪಿಸಿದರು.

---

1. ಎಸ್.ಎಂ.ಎಲ್. ಪುಟ-224.
2. ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್, ಪುಟ-60.
3. -ಅದೇ-, ಪುಟ-63.
4. ಮೀರಾಸಾಬಿಹಳ್ಳಿ ಶಿವಣ್ಣ -(ವಾಲ್ಮೀಕಿ ಜ್ಯೋತಿ ಸ್ಮರಣ ಸಂಚಿಕೆ) ಲೇಖನ : ನಾಯಕ ಜನಾಂಗ: ಒಂದು ನೋಟ. ಪುಟ-52.

ಉತ್ತರದಿಂದ ಬರುತ್ತಿರುವ ಮಹಮ್ಮದೀಯರ ಭೀಕರ ದಾಳಿಗೆ ದೇವಗಿರಿ ದೇವರಾಯ, ಓರಂಗಲ್ಲಿನ ಕಾಕತೀಯ ರುದ್ರ ಮತ್ತು ಹೊಯ್ಸಳ ಬಲ್ಲಾಳ ತತ್ತರಿಸಿಹೋದರು. ಇದೇ ಸಂದರ್ಭದಲ್ಲಿ ಕುಮ್ಮಟದುರ್ಗ ಹಾಗೂ ಹೊಸಮಲೆದುರ್ಗದ ಮೂಲಕ ತಲೆಎತ್ತಿದ ಕಂಪಿಲ ಮತ್ತು ಕುಮಾರರಾಮರು ಎರಡುಬಾರಿ ಉತ್ತರದ ಆಕ್ರಮಣವನ್ನು ಹಿಮ್ಮೆಟ್ಟಿಸಿದರು.[5]

" ಜಗತ್ತಿನಲ್ಲಿ ಬೇಡರಷ್ಟು ಶೂರರು ಸಿಗಬಹುದು. ಆದರೆ ಬೇಡರಿಗಿಂತ ಶೂರರು ಸಿಗಲಾರರು " ಎಂಬ ವಿರೋಧಿಯೊಬ್ಬನ ಮಾತು ಕಂಪಿಲರಾಯ ಹಾಗೂ ಆತನ ಪಾಳೆಯಗಾರರಿಗೆ ಅಕ್ಷರಶಃ ಅನ್ವಯಿಸುತ್ತದೆ. " ಮೊದಲಿನಿಂದಲೂ ದಂಡಿನ ಉಳಿಗ ಮಾನ್ಯಕ್ಕಾಗಿ ಮೀಸಲಾಗಿದ್ದ ಕ್ಷಾತ್ರವೃತ್ತಿಯ ಈ ವೀರಜನಾಂಗ, ವಿಜಯನಗರ ಉಗಮಕ್ಕಿಂತ ಪೂರ್ವದಲ್ಲಿ ಮಹಮ್ಮದೀಯರ ದಾಳಿಯನ್ನು ಎದುರಿಸಿ, ಸ್ವರಾಜ್ಯ-ಸ್ವಧರ್ಮ ರಕ್ಷಣೆಗೆ ಕಂಕಣ ತೊಟ್ಟಿರುವ[6] ಸಂಗತಿ " ಹಲವಾರು ಘಟನೆಗಳಿಂದ ದಿಟವಾಗಿದೆ.

ಮಹಮ್ಮದ್ ತುಘಲಕನು ತನ್ನ ಅಳಿಯನಾದ ಬಹಾವುದ್ದೀನನಿಗೆ ಸಗರನಾಡಿನ ಜತನ ಕೊಟ್ಟಿದ್ದನು. ಆದರೆ ದಕ್ಷಿಣದ ಸುಭೇದಾರರ ಬೆಂಬಲದಿಂದ ಮಾವನ ವಿರುದ್ಧವೇ ಬಹಾವುದ್ದೀನ ತಿರುಗಿ ಬಿದ್ದ. ಆಗ ಕಂಪಿಲಿಯಿಂದ ಕಂಪಿಲರಾಯ, ಕುಮಾರರಾಮರು ಬಹಾವುದ್ದೀನನಿಗೆ ಬೆಂಬಲಿಸಿ ತುಘಲಕನ ವಿರುದ್ಧ ಯುದ್ಧಕ್ಕೆ ಹೋದರು.[7] ರಣರಂಗದಲ್ಲಿ ಬಹಾವುದ್ದೀನ ಭೀಕರ ಸೋಲೊಪ್ಪಿದಾಗ ಅನಿವಾರ್ಯವಾಗಿ ಕಂಪಿಲಿ ಅರಸೊತ್ತಿಗೆಯು ಉರುಳಿ ಹೋಯಿತು. ಹೇಗಾದರೂ ಮಾಡಿ ದಿಲ್ಲಿ ಮುಸ್ಲಿಂರನ್ನು ಅಡಗಿಸಬೇಕೆಂಬ ಕಂಪಿಲಿಯ ಉತ್ಸಾಹ ಉಡುಗಿತು. ಇದರಿಂದ ದಕ್ಷಿಣದ ಮೇಲೆ ಮಹಮ್ಮದೀಯರ ಆಕ್ರಮಣಕ್ಕೆ ತಡೆಯೊಡ್ಡುವವರಾರೂ ಇಲ್ಲವಾದುದರಿಂದ ಅವರ ದಾಳಿ ತೀವ್ರಗೊಂಡಿತು.

ಕ್ರಿ.ಶ. 1336 ರಲ್ಲಿ ಉದಯಗೊಂಡ ವಿಜಯನಗರವು ಉತ್ತರದಿಂದ ಹರಿದು ಬರುತ್ತಿರುವ ರೋಷ ಆವೇಶವನ್ನು ತಡೆಯುವ ಅರಸರ ಅನಿವಾರ್ಯತೆ ತುಂಬಿಕೊಂಡಿತ್ತು. ಇದರ ಹಿಂದೆ ಹುಟ್ಟಿಕೊಂಡ ಬಹಮನಿಗಳ ದಾಳಿಯನ್ನು ಹಿಮ್ಮೆಟ್ಟಿಸುವ ದೃಢತೆ ಬೇಡಪಡೆಯ ಬಲಿಷ್ಠತೆಯನ್ನೇ ಅವಲಂಬಿಸಿತ್ತು. ಕಾರಣ, ವಿಜಯನಗರದ ಬೆನ್ನೆಲುಬು ಆಗಿ ದುಡಿಯುತ್ತಿದ್ದ ಪಾಳೆಯಗಾರ ಪ್ರಮುಖರೆಲ್ಲ

---

5. ಡಾ. ಜಿ. ವರದರಾಜರಾವ್ — (ಹರತಿಸಿರಿ ಅಭಿನಂದನಗ್ರಂಥ) ಲೇಖನ: ಕನ್ನಡ ಕವಿಗಳು ಕಂಡ ಕುಮಾರರಾಮ. ಪುಟ-155.

6. ಪಿ.ಬಿ. ದೇಸಾಯಿ — ಮದಗಜಮಲ್ಲ, ಪುಟ-[illegible].

7. ಎ.ಎಸ್. ನಂಜುಂಡಸ್ವಾಮಿ — ವಿಜಯನಗರದ ಇತಿಹಾಸ, ಪುಟ-10.

ಕಂಪಿಲನಲ್ಲಿದ್ದ 'ಬೇಡ' ರೆಂಬುದು ಮರೆಯಲಾಗದ ವಿಷಯ. ಅದಕ್ಕಾಗಿ ಇವರನ್ನು ಕೃಷ್ಣಾ ಮತ್ತು ಭೀಮಾ ನದಿಯ ಮಧ್ಯದ ನಗರನಾಡು ಸೀಮೆಯಲ್ಲಿ ಬಿಗಿ ಕಾವಲು ಹಾಕಲು ನೇಮಿಸಿದರು. ಈ ಬೇಡಪಡೆಯ ಪಾಳೆಗಾರರೆ ಸುರಪುರ ಸಂಸ್ಥಾನದ ಪೂರ್ವಜರಾಗಿ ಪರಿಣಮಿಸಿದರು.

" ವಿಜಯನಗರ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿ, ಅದರ ವೈಭವದ ಉನ್ನತಿಗೆ ಕಾರಣರಾದ ಅನೇಕ ಪಾಳೆಗಾರರಲ್ಲಿ ಸುರಪುರದ ಪೂರ್ವಜರು ಮಹತ್ವಪೂರ್ಣ ಸ್ಥಾನ ನೀಡಿದ್ದಾರೆ. ಬಹಮನಿ ಮತ್ತು ವಿಜಯನಗರದ ಮಧ್ಯೆ ನಡೆದ ಅನೇಕ ಕಾಳಗಗಳಿಗೆ ರಣಕಣವಾದ 'ನಗರನಾಡು' ಇವರ ಅಧೀನದಲ್ಲಿತ್ತು. ಸದಾ ವೈರಿಗಳ ದಾಳಿಯಿಂದ ತತ್ತರಿಸಿಹೋದ ಈ ಪ್ರದೇಶದಲ್ಲಿ ಧೀರಧೈರ್ಯ ತೋರಬೇಕಾದರೆ ಸಾಮಾನ್ಯ ಮಾತಲ್ಲ. ವಿಜಯನಗರದ ಮೇಲೆ ಬರುವ ಉತ್ತರದ ಯಾವ ದಂಡಯಾತ್ರೆಯ ದಾಳಿಗಳಿರಲಿ ಅವು ನಗರನಾಡನ್ನು ಸೀಳಿಯೇ ಮುಂದೆ ಸಾಗಬೇಕಿತ್ತು. ಹೀಗಾಗಿ ಕೃಷ್ಣಾ ನದಿಯ ಗಡಿಯಲ್ಲಿ ವೈರಿಗಳನ್ನು ನುಗ್ಗದಂತೆ ನೋಡಿಕೊಳ್ಳುತ್ತಿದ್ದ ಇಲ್ಲಿಯ ಬೇಡಪಡೆಯ ಮೇಲೆ ಎಲ್ಲರಿಗಿಂತಲೂ ಹೆಚ್ಚು ವಿಶ್ವಾಸ ವಿಜಯನಗರ ತಾಳಿತ್ತು. ಇವರೀರ್ವರ ಸಂಗಮವಾದ ಸಂದರ್ಭಗಳು ಅನೇಕ ಯುದ್ಧಗಳಲ್ಲಿ ಕಾಣುತ್ತೇವೆ. ಗುಲಬರ್ಗಾ, ರಾಯಚೂರ ಹಾಗೂ ಇನ್ನಿತರ ಮುಸ್ಲಿಂ ನಗರಗಳ ಮೇಲೇರಿ ಹೋದ ಕೃಷ್ಣದೇವರಾಯನ ದಂಡಯಾತ್ರೆಯಲ್ಲಿ ನಗರನಾಡಿನ ಬೇಡಪಡೆಗಳು ಪ್ರತ್ಯಕ್ಷವಾಗಿ ಪಾಲ್ಗೊಂಡಿದ್ದವು. ಅಲ್ಲದೆ ಮುದಗಲ್ಲ ಯುದ್ಧದಲ್ಲಿ ವಿಜಯನಗರವನ್ನು ಬೆಂಬಲಿಸಿದ ಬೇಡ ಪಾಳೆಗಾರರು ಸುರಪುರದ ಪೂರ್ವಜರೆನ್ನಲು ಅನೇಕ ಆಧಾರಗಳಿವೆ. " ನಗರನಾಡಿನ ಕೇಂದ್ರಕೋಟೆಯಾದ ನಗರದುರ್ಗವನ್ನು ಬಹಮನಿಗಳಿಂದ ಕಸಿದುಕೊಂಡ ಅಳಿಯ ರಾಮರಾಯ ""ನಗರ ಸಂಕ್ರಮಣ ಧುರೀಣ" ನೆಂಬ ಬಿರುದಿಗೆ ಪಾತ್ರನಾದನೆಂದು ಮತ್ತು ಗದ್ದ ಕೋಟೆ ಕೈವಶವಾದ ತರುವಾಯ ತನ್ನ ಪಾಳೆಗಾರರಾದ ನಗರನಾಡಿನ ಬೇಡ ನಾಯಕರ ವಶಕ್ಕೆ ಒಪ್ಪಿಸಿದನೆಂದು" ಉಲ್ಲೇಖಗಳಿವೆ.[8]

ಕೊನೆಗೆ, ಬಹಮನಿಗಳು ಐದು ಹೋಳಾಗಿ ವಿಭಜನೆಗೊಂಡಾಗ ವಿಜಯನಗರಕ್ಕೆ ವೈರಿಗಳಿಂದ ಎದುರಿಕೆ ತಪ್ಪಿತು. ಅಳಿಯ ರಾಮರಾಯನ ಸೀಳಿ ಆಳುವ ನೀತಿ ಕೆಲವು ವರ್ಷ ಯಶಸ್ವಿಯಲ್ಲಿಯೇ ಸಾಗಿತೇನೋ ನಿಜ; ಆದರೆ ಇದನ್ನು ಅರಿತುಕೊಂಡ ಐದು ಸಹೋದರ(ಮುಸ್ಲಿಂ) ಶಾಹಿ ರಾಜ್ಯಗಳು ವಿಜಯನಗರದ ವಿರುದ್ಧ ಒಕ್ಕೂಟ ರಚಿಸಿಕೊಂಡು ಸಾಗಿಬಂದವು; ಪ್ರಸಿದ್ಧ

---

8. Sources of the Vijayanagara History p-183.

ತಾಳಿಕೋಟೆ ಕದನಕ್ಕೆ ಕಾರಣವಾದವು. ಆಗ ವಿಜಯನಗರ ಮತ್ತು ಇದಕ್ಕೆ ಬೆಂಬಲಿಸಿ ಬಂದ ಪಾಳೆಪಟ್ಟುಗಳ ಬೃಹತ್ ಶಿಬಿರ ರಕ್ಕಸಗಿ – ತಂಗಡಗಿ ಎಂಬ ಸ್ಥಳದಲ್ಲಿ ಬೀಡು ಬಿಟ್ಟಿತು. ಇವರೀರ್ವರ ಮಧ್ಯದ ಈ ರಣತಾಣ[9] ನಗರನಾಡಿನ ವ್ಯಾಪ್ತಿಗೆ ಒಳಪಟ್ಟಿತ್ತೆನ್ನುವುದೇ[9ಎ] ಬಹು ಕುತೂಹಲದ ವಿಷಯ.

ದುರ್ದೈವದಿಂದ ತಾಳಿಕೋಟೆ ಕದನದಲ್ಲಿ ಭೀಕರ ಸೋಲೊಪ್ಪಿಕೊಂಡ ವಿಜಯನಗರವು ಮುಸ್ಲಿಂ ಒಕ್ಕೂಟದ ಸೈನ್ಯಕ್ಕೆ ತುತ್ತಾಯಿತು. ಬೆಂಬಲಿಸಿ ಬಂದ ಪಾಳೆಗಾರರೆಲ್ಲ ಪತನಗೊಂಡ ವಿಜಯನಗರವನ್ನು ತೊರೆದು ಚದುರಿ ಛಿದ್ರಗೊಂಡು ದಿಕ್ಕುಸಿಕ್ಕೆಡೆ ತೂರಿಹೋದರು. ಆದರೂ ಸಾಮರ್ಥ್ಯವಿದ್ದ ಕೆಲವು ಶಕ್ತಿಗಳು ತಮ್ಮ ಮೂಲ ಪ್ರದೇಶಗಳಲ್ಲಿ ತಳವೂರಿದರೆ, ಇನ್ನೂ ಹಲವು ಸಬಲಸಾಮಂತರೆಲ್ಲ ನೂತನ ಸಂಸ್ಥಾನಗಳ ಸ್ಥಾಪನೆ ಮೂಲಕ ಮತ್ತೆ ತಲೆ ಎತ್ತಿದರು.

ತಾಳಿಕೋಟೆ ಯುದ್ಧದಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಂಡ[10] ಹಲವು, ತರುವಾಯ ಸ್ವತಂತ್ರ ಸಂಸ್ಥಾನ ಸ್ಥಾಪಿಸಿಕೊಂಡ ಕೆಲವು, ಒಟ್ಟು ಪ್ರಮುಖ 72–73 ಪಾಳೆಗಾರರ ಪಾಳೆಪಟ್ಟುಗಳನ್ನು ಗುರುತಿಸಲಾಗಿದೆ.[11] ವಿಶೇಷವೆಂದರೆ ಈ ಕೆಳಗಿನ ಸಮೀಕ್ಷೆಯಲ್ಲಿರುವವೆಲ್ಲ ಬೇಡಜನಾಂಗದ ಒಡೆತನಕ್ಕೆ ಒಳಪಟ್ಟವಾಗಿವೆಂಬುದು.

" ಆನೆಗೊಂದಿ, ಚಿತ್ರದುರ್ಗ, ರತ್ನಗಿರಿ, ನಿಡಿಗಲ್ಲು, ಶಿರಾ, ಬಳ್ಳಾರಿ, ಮೊಳಕಾಲ್ಮೂರ, ರಾಯದುರ್ಗ, ಪೆನಗೊಂಡ, ಮದಮಸೂರ, ಇಕ್ಕೇರಿ, ಸ್ವಾದಿ, ಚಂದಾವರ, ಕೊಲ್ಲಾಪೂರ, ಬಿದನೂರ, ಮುಂಡಿಕೋಟೆ, ಬಂಕಾಪೂರ, ನಂದಿಯಾಳ, ದಾವನಹಳ್ಳಿ, ಹರಪನಹಳ್ಳಿ, ಮುಟ್ಟ, ಬೆಳಗುತ್ತಿ, ಕಡಪೆ, ಕಿತ್ತೂರ, ತಲಚೇರಿ, ತಂಜಾವೂರು, ಸುರಪುರ, ಹಾಗಲವಾಡಿ, ಮಂಗಳೂರ, ಬಸವಾಪಟ್ಟಣ, ಬೇಲೂರು, ಬದಾಮಿ, ದೊರಮಲೆ, ಜರಿಮಲೆ, ಗುಡೇಕೋಟೆ, ಗೋವನೂರು, ನನ್ನಿವಾಳ, ಹರತಿಕೋಟೆ, ಐಮಂಗಲ, ತರೀಕೆರೆ, ಪುರವರ, ಮಿಡಿಗೇಶಿ, ಪಾವಗಡ, ಶಿವರ, ಹೊಸಕೋಟೆ, ಕುಂದಾಪೂರ, ಬಾಗೂರ, ಗುತ್ತಿ, ಚೆನ್ನಪಟ್ಟಣ, ಕಂಪಲಿ, ಮರೀದುರ್ಗ, ಕನಕಗಿರಿ, ಗುಡಗುಂಟೆ, ಲೇಪಾಕ್ಷಿ, ಮಧುರೆ, ಆದವಾನಿ, ಚಂದ್ರಗಿರಿ,

---

9. ಸು.ತಾ.ದ. ಪುಟ–10.
9ಎ. ಎಸ್.ಬಿ.ಕೋಳದ – ವಿಜಯನಗರದ ನಿರ್ಣಾಯಕ ಯುದ್ಧ, ಪುಟ–53–56.
10. Saletore op-cit. vol.I Pp.137–38 and 318–19& Vol.II Pp.46–54.
11. ಎಚ್.ವಿ.ವೀರನಾಯಕ – (ಸಂ) 'ವಾಲ್ಮೀಕಿ' ಸ್ಮರಣ ಸಂಚಿಕೆ, ಸಂಪಾದಕೀಯ. ಪುಟ–2.

ಚಿಕ್ಕನಾಯಕನಹಳ್ಳಿ, ದೊಡೇರಿ, ತಲಕಾಡು, ರಾಯದೂರು, ರಾಣ್ಯ, ಹದಿನಾಡು, ಯಳಂದೂರು, ಕಾರುಗಹಳ್ಳಿ, ಹುಲಿಯೂರು, ಕೊರಟಗಿ, ಹೊನ್ನುಡಿಕೆ, ಹಂಪನಹಳ್ಳಿ, ಕರಜಗಿ, ಉಚ್ಚಂಗಿದುರ್ಗ, ಮತ್ತೋಡು, ನಾಯಕನಹಟ್ಟಿ" —ಇನ್ನೂ ಮುಂತಾದ ಪಾಳೆಯ ಕೇಂದ್ರಗಳನ್ನು ವಿಜಯನಗರ ತನ್ನ ವ್ಯಾಪ್ತಿಯಲ್ಲಿ ಹೊಂದಿತ್ತು. ಇದರಲ್ಲಿ ಹಲವು ಸಂಸ್ಥಾನಗಳು ವಿಜಯನಗರ ಉಗಮವಾಗುವ ಮುಂಚೆಯೇ ಸದೃಢ ಸರಕಾರ ನಡೆಸಿದ್ದವು. ಇನ್ನು ಕೆಲವು ವಿಜಯ ನಗರ ವಿನಾಶದ ತರುವಾಯ ಪರಂಪರೆಯ ಸ್ಫೂರ್ತಿ ಮತ್ತು ವಾಸ್ತವ ಚೇತನಕ್ಕೆ ಹೊಂದಿಕೊಂಡು ತಲೆ ಎತ್ತಿದವು. ''ಮೇಲಿನ 72–73 ಪಾಳೆಯಗಳು ಎಷ್ಟು ವರ್ಷ ಜೀವಿಸಿದವು; ಯಾರ ಸಾಮಂತಿಕೆಯಲ್ಲಿ ಸ್ವತಂತ್ರ ಸಂಸ್ಥಾನ ನಡೆಸಿದವು'' ಎಂಬ ದೀರ್ಘ ವಿವರಣೆಯನ್ನು ಲಕ್ಷ್ಮಣ ತೆಲಗಾವಿಯವರು ಶೋಧಿಸಿ ಸಿದ್ಧಪಡಿಸಿದ್ದಾರೆ.

ವಿಜಯನಗರ ಅರಸರ ಆಳ್ವಿಕೆ ಆರಂಭವಾಗುವ ಪೂರ್ವದಲ್ಲೇ ರೂಢಿಗೆ ಬಂದ ಹಲವು 'ಪಾಳೆಯ'ಗಳು ಸೈನ್ಯ, ಸೇನಾವಿಭಾಗ, ಶಿಬಿರ, ಠಾಣ್ಯ —ಎಂಬಿತ್ಯಾದಿ ಪದಗಳಿಗೆ ಸಂವಾದಿಯಾಗಿ ಬಳಸಲ್ಪಟ್ಟವೆ. ಇವುಗಳ ಮುಖ್ಯಸ್ಥರಾದ ಪಾಳೆಗಾರರು ಅವಕಾಶ ಸಿಕ್ಕಾಗ ಸಾಮ್ರಾಜ್ಯ ಅಧಿಪತಿಗಳ ಅಧೀನತೆಯಿಂದ ಸಿಡಿದು ಸ್ವಾತಂತ್ರ್ಯ 'ಘೋಷಿಸಿಕೊಳ್ಳುತ್ತಿದ್ದರು.[12]

ಚಿಕ್ಕ-ಪುಟ್ಟ ಪ್ರಾಂತಗಳಲ್ಲಿ ಪರಮಾಧಿಕಾರ ಸ್ಥಾಪಿಸಿಕೊಂಡ ಈ ಸಾಮಂತರು ರಾಜರಂತೆ ಬಿರುದಾವಳಿ, ಕಪ್ಪಕಾಣಿಕೆ ಸ್ವೀಕರಿಸುವ ಅಧಿಕಾರ ಹೊಂದಿದ್ದರು. ಯುದ್ಧ ಸಮಯದಲ್ಲಿ ತಮ್ಮ ಒಡೆಯನಿಗೆ ಸೈನ್ಯ ಸಹಾಯ ಸಲ್ಲಿಸುತ್ತಿದ್ದರಲ್ಲದೆ ಸಮರದಲ್ಲಿ ಸ್ವತಃ ಸೇನಾಧಿಕಾರಿಗಳಾಗಿರುತ್ತಿದ್ದರು.[13]

ಎಪ್ಪತ್ತೆರಡರಿಂದ ತೊಂಭತ್ತರವರೆಗೆ ಸಂಖ್ಯೆ ಬಲ ಹೊಂದಿರುವ ಪ್ರಮುಖ ಪಾಳೆಯಗಾರರ ಪಟ್ಟಿಯನ್ನು ಹಿಂದಿನ ಪುಟದಲ್ಲಿ ಹೇಳಲಾಗಿದೆ. ಆದರೆ ಅವರನ್ನು ಕುರಿತು ಚರ್ಚಿಸಬೇಕಾದ ಇನ್ನೆರಡು ಬಹುಪ್ರಮುಖ ವಿಚಾರಗಳೆಂದರೆ ಅವರ ಜಾತಿ ಮತ್ತು ಧರ್ಮಕ್ಕೆ ಸಂಬಂಧಪಟ್ಟ ವಿಷಯ.

'ಕದಂಬ ಮತ್ತು ಚಾಳುಕ್ಯರನ್ನು ಹೊರತುಪಡಿಸಿದರೆ ಕರ್ನಾಟಕದಲ್ಲಿಯ ಬಹಳಷ್ಟು ರಾಜಮನೆತನಗಳು ಕೆಳವರ್ಗದಿಂದಲೇ ಬಂದಂತಹವುಗಳು.[14] ಕ್ರಿ.ಶ. 7ನೆಯ ಶತಮಾನಕ್ಕೆ ಸಂಬಂಧಿಸಿದ

---

12. ಎಂ. ಕೇಶವಭಟ್. ಪಾಳೆಯಗಾರರು. ಕನ್ನಡ ವಿಶ್ವಕೋಶ, ಮೈಸೂರು. ಪುಟ–806.
13. ಎಚ್.ಜಿ. ರಂಗಸ್ವಾಮಿ. ಅನು: ಬಿ.ಎನ್. ಶಾಸ್ತ್ರಿ — ಕರ್ನಾಟಕ ಪರಂಪರೆ. ಸಂಪುಟ–2.
ಲೇಖನ : ಪಾಳೆಯಗಾರರು. ಪುಟ–201.
14. ಡಾ ಎಂ.ಬಿ. ನೇಗಿನಾಳ — (ಹರತಿಸಿರಿ ಅಭಿನಂದನಗ್ರಂಥ)
ಲೇಖನ: ಕರ್ನಾಟಕದ ಬೇಡಜನಾಂಗ : ಒಂದು ಪರಿಚಯ. ಪುಟ–328.

ಗದ್ದೆಮನೆ ಶಾಸನವೊಂದರಲ್ಲಿ[15] — '' ಸ್ವಸ್ತಿ ಶ್ರೀ ಶೀಲ ಆದಿತ್ಯನ್ ದಿಶಾವನ್ ಭಾಗರ್ವನ್ ಅಗ್ರಳ ಕಣ್ಣನ್ ಬೇಳಾಳ್ಕೆವರೆ, ಪಟ್ಟಣಿಸತ್ಯಾಂಕನ ಉಬ್ಬಳ್ಳಭಟನ್ ಬೆದರಿ ಮಹೇನ್ದ್ರನ್ ಬೇಡರಾಯರ ಮಲಪ್ಪರ ಕಾಳೆಗದುಳೆಬಿಬಿದು, ಸ್ವರ್ಗಾಲಯಕ್ಕೇರಿದನ್'' ಎಂಬಲ್ಲಿ ಕನೋಜದ ದೊರೆಯಾದ ಹರ್ಷವರ್ಧನನು 'ಶೀಲ ಆದಿತ್ಯ' ಎಂದು ಹೆಸರಿಸಿಕೊಂಡಿದ್ದಾನೆಂದು ವಿದ್ವಾಂಸರ ಅಭಿಮತ. ಪಟ್ಟಣಿ ಸತ್ಯಾಂಕ ಅಥವಾ ಬೇಲಳೆಯ ಮಾಳನೆಂಬುವವನು ಬೇಡರಾಯರು ಮತ್ತು ಮಲೆಪರ ಜತೆಗಿನ ಕಾಳಗದಲ್ಲಿ ಮಡಿದು ವೀರಸ್ವರ್ಗ ಸೇರಿದನೆನ್ನುವಲ್ಲಿ ಬೇಡರ ರಾಜ್ಯಗಳು ಆಗಲೆ ಉದಯಗೊಂಡು ಪ್ರಸಿದ್ಧಿಗೆ ಬಂದಿದ್ದವೆಂದು ಡಾ: ನೇಗಿನಾಳ ಊಹಿಸಿದ್ದಾರೆ. ಈ ಶಾಸನವನ್ನೇ ಹಿನ್ನೆಲೆಯಾಗಿಟ್ಟುಕೊಂಡ ಇವರು ಹೊಯ್ಸಳರ ವಂಶವನ್ನು ವಿಶ್ಲೇಷಿಸಿದ್ದಾರೆ. ಮಲೆಪರ, ಮಲೆವರ ಎಂದರೆ ಗುಡ್ಡಗಾಡು ಎಂದರ್ಥ, ಬಹುಶಃ ಬೇಡರೆಂದೇ ತೋರುತ್ತದೆ. ಆದುದರಿಂದ ಹೊಯ್ಸಳರು ಸಹ ತಮ್ಮನ್ನು 'ಮಲೆಪರೊಳ ಗಂಡ' ನೆಂದು ಕರೆದುಕೊಂಡಿರುವಲ್ಲಿ ಬೇಡ ಜನಾಂಗದ ಛಾಯೆ ಗುರುತಿಸಬಹುದು ಎಂದಿದ್ದಾರೆ.

ಸು. 10ನೆಯ ಶತಮಾನದಲ್ಲಿ ನಾಯಕ ಜನಾಂಗದ ಪಾಳೆಯಗಾರರು ಕರ್ನಾಟಕದಲ್ಲಿ ಪ್ರಬಲವಾಗಿ ಅಸ್ತಿತ್ವಕ್ಕೆ ಬರಲಾರಂಭಿಸಿದರು. ಇವರಲ್ಲಿ ಪ್ರಖ್ಯಾತಿ ಪಡೆದದ್ದು ಆನೆಗುಂದಿ ರಾಜ್ಯ.[16] ಬೇಡ ಜನಾಂಗದ ಬಹುಷಃ ಪಾಳೆಗಾರರನ್ನು ಕ್ರೋಢೀಕರಿಸಿ ಕಟ್ಟಲಾದ ಕಂಪಿಲರಾಯನ ಈ ರಾಜ್ಯವು ''ಕರ್ನಾಟಕದಲ್ಲಿ ಎದ್ದು ಬಂದ ಕೆಳವರ್ಗದ ಮೊದಲ ಅಧಿಕೃತ ಅರಸೊತ್ತಿಗೆಯಾಯಿತು''

ಕಂಪಿಲ ಕುಮಾರರಾಮರ ಮತ್ತು ಸುರಪುರದ ಪೂರ್ವಜರ ಮಧ್ಯೆ ಅನೇಕ ಸಾಮ್ಯತೆ, ಸಂಬಂಧಗಳು ಎದ್ದು ಕಾಣುವುದರಿಂದ ಇವರೀರ್ವರಲ್ಲಿ ರಕ್ತ ಸಂಬಂಧ ಇರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಅದರಂತೆ ವಿಜಯನಗರದ ಸ್ಥಾಪಕರಲ್ಲಿ ಇತ್ತೀಚೆಗೆ ಹೊರಬಿದ್ದ ನೂತನ ಶೋಧನೆಗಳು ಆಶಾದಾಯಕ ವಾತಾವರಣ ಸೃಷ್ಟಿಸಿವೆ. ಹಕ್ಕಬುಕ್ಕರು ಬೇಡರೆಂದು ಕೆಲವರು, ಕುರುಬರೆಂದು ಇನ್ನೂ ಕೆಲವರು ತಮ್ಮ ವಾದವನ್ನು ಮಂಡಿಸುತ್ತಿದ್ದಾರೆ. ಹಕ್ಕಬುಕ್ಕರು ಓರಂಗಲ್ಲಿನ ಕನ್ನಯನಾಯಕನ ಸಂಬಂಧಿಗಳೆಂದಿದ್ದ ವಾದವನ್ನು ತಳ್ಳಿ ಇವರು ಕಂಪಿಲರಾಯನ ಅಕ್ಕನ ಮಕ್ಕಳೆಂದು ಪ್ರತಿಪಾದಿಸಿದ್ದಾರೆ.[17] ಹುಲ್ಲೂರ ಶ್ರೀನಿವಾಸರಾಯರ ಈ ಶೋಧನೆಯನ್ನು ಡಾ: ದೇ. ಜವರೇಗೌಡರು ಅನುಮೋದಿಸಿರುವುದರಿಂದ ಹೊಸ ಸಂಶೋಧನ ಸೃಷ್ಟಿಗೆ ಪುಷ್ಟಿ ಸಿಕ್ಕಂತಾಗಿದೆ.

---

15. The Annual Report of the Mysore Archaeological Dept. p-83.
16. ಲಕ್ಷ್ಮಣ ತೆಲಗಾವಿ — (ಹರತಿಸಿರಿ ಅಭಿನಂದನಾಗ್ರಂಥ)
ಲೇಖನ: ಇತಿಹಾಸಕಾರ ವೀರನಾಯಕ. ಪುಟ-1292.
17. ರಾಜನ್ ರಾಜಣ್ಣ — ನಾಯಕ ಜನಾಂಗದ ಇತಿಹಾಸ, ಪುಟ-76-92.

ಇಲ್ಲಿ ಗಮನಿಸಬೇಕಾದ ಮುಖ್ಯ ವಿಷಯವೆಂದರೆ ''ಬೇಡ ದೊರೆಗಳ ರಾಜ್ಯವಾದ ಕಂಪಿಲಿಯು ವಿಜಯನಗರ ಸಾಮ್ರಾಜ್ಯದ ಸಂಸ್ಥಾಪನೆಗೆ ಮೂಲ ಕಾರಣರಾದ ಹಕ್ಕಬುಕ್ಕರ ರಕ್ತ ಸಂಬಂಧ ಹೊಂದಿತ್ತು'' ಎನ್ನುವದು. ಆಗಾದರೆ ವಿಜಯನಗರವು ಸಹ ಮೂಲತಃ ಬೇಡ ಜನಾಂಗದ್ದೆಂದು ಹೇಳಬೇಕಾಗುತ್ತದೆ. ಯಾಕೆಂದರೆ ಕುಮ್ಮಟದುರ್ಗ, ಹೊಸಮಲೆದುರ್ಗ, ಆನೆಗುಂದಿ ಮೂಲಕ ಆಳ್ವಿಕೆ ನಡೆಸಿದ ಕಂಪಿಲ ಹಾಗೂ ಕುಮಾರರಾಮರು '' ಶ್ರೀಮಾನ್ ನಾಯಕವಂಶ ನಿತ್ಯಾಧಾರ'' ಎಂಬ ಪ್ರಶಸ್ತಿ ಹೊತ್ತು[18] ಹಂಪೆ ಭಾಗದಲ್ಲಿ ಆಗಲೇ ಪ್ರಸಿದ್ಧಿಗೆ ಬಂದಿದ್ದರು. ಮತ್ತು ವಿಜಯನಗರ ಉಗಮಕ್ಕೆ ಸಕಲ ವ್ಯವಸ್ಥೆಯು ಸಿದ್ಧಪಡಿಸಿದಯೆಂದೇ ಭಾಸವಾಗುವ ಕಲ್ಯಾಣಕಾರ್ಯಗಳಿಗೆ ಹಾಗೂ ಪ್ರದೇಶಕ್ಕೆ ಹಕ್ಕಬುಕ್ಕರು ಹಸ್ತಾಂತರಿಸಿಕೊಂಡದ್ದು ಉತ್ತರಾಧಿಕಾರಿಗಳಾಗಿ ಬಂದದ್ದು ಈ ಸಂಬಂಧಗಳಿಂದಲೇ ಎಂದು ತಿಳಿಯುತ್ತದೆ. ಕಂಪಿಲನ 'ಕರ್ನಾಟಕ ರತ್ನಸಿಂಹಾಸನ' ಆನೆಗುಂದಿ, ವಿಜಯನಗರದ ಮೂಲಕ ಮೈಸೂರು ಒಡೆಯರವರೆಗೂ ಸಾಗಿ ಹೋದದ್ದು[19] ಸಹ ಇದೇ ದೃಷ್ಟಿಯಿಂದ ಇರಬಹುದು. ಆದರೆ ಹಕ್ಕಬುಕ್ಕರು ಕುರುಬರೇ ಆಗಿರುವದಾಗಿ ಸಮರ್ಥಿಸಿಕೊಳ್ಳುವ ಡಾ.ಎಂ.ಎಂ.ಕಲಬುರ್ಗಿಯವರ ವಾದವನ್ನು ಎತ್ತಿ ಹಿಡಿದಿರುವ ಪ್ರೊ: ಸುಧಾಕರರು '' ಶೃಂಗೇರಿ ಶಾಸನ, ತಿರುಮಲಾರ್ಯನ ಚಿಕ್ಕದೇವರಾಯ ವಂಶಾವಳಿ, ರಾಬರ್ಟ ಸ್ಟೆಲನ 'ಫಾರ್ಗಟನ್ ಎಂಪಾಯರ್ ಆಫ್ ವಿಜಯನಗರ'' ಎಂಬಿತ್ಯಾದಿ ಕೃತಿಗಳ ಆಧಾರ ಒದಗಿಸಿದ್ದಾರೆ. ಅಲ್ಲದೆ '' ಬರನಿ, ಇಬ್ನಬತೂತ, ಇಸಾಮಿ'' ಎಂಬ ವಿದೇಶೀ ಪ್ರವಾಸಿಲೇಖಕರ ಹೇಳಿಕೆಗಳನ್ನು ಉಲ್ಲೇಖಿಸಿದ್ದಾರೆ''[20] ಆದೇನೆ ಇದ್ದರೂ ಇವೆರಡು ವಾದಗಳಲ್ಲಿ 'ವಿಜಯನಗರದ ಸ್ಥಾಪಕರು ಕೆಳವರ್ಗದಿಂದ ಬಂದವರಾಗಿದ್ದಾರೆಂಬುದೇ[21] ಮುಖ್ಯವಾಗಿ ಇಲ್ಲಿ ಸ್ಫುರಿಸುತ್ತದೆ.

ಇದುವರೆಗಿನ ಸುದೀರ್ಘ ಸಮೀಕ್ಷೆಯ ಉದ್ದೇಶವೆಂದರೆ — ವಿಜಯನಗರ ಸಾಮ್ರಾಜ್ಯದ ಉಗಮ ಹಾಗೂ ವಿನಾಶದ ಪರಿಸರದಲ್ಲಿ ಎದ್ದು ಬಂದ 70 ಕ್ಕಿಂತಲೂ ಹೆಚ್ಚು ಪಾಳೆಪಟ್ಟುಗಳ 'ಜಾತಿ ಮತ್ತು ಧರ್ಮ' ಯಾವುದೆಂದು ನಿರ್ಣಯಿಸುವುದೇ ಆಗಿತ್ತು. ಇವುಗಳಲ್ಲಿ ಅರ್ಧಕ್ಕಿಂತ ಅತಿ ಹೆಚ್ಚು ಪಾಳೆಯಗಳು ಮೇಲ್ವರ್ಗದ ಚೇತನಕ್ಕೆ ಒಳಪಟ್ಟವುಗಳೆಂದು ಇದುವರೆಗೆ ತಿಳಿಯಲಾಗಿದೆ. ಆದರೆ ಇವೆಲ್ಲ ಮೂಲತಃ ಕೆಳವರ್ಗದ, ಅದರಲ್ಲೂ ''ಬೇಡ ಜನಾಂಗದ'' ವ್ಯಕ್ತಿಗಳಿಂದ ಸ್ಥಾಪನೆಗೊಂಡು ಅವರ

---

18. ಎಚ್.ವಿ.ವೀರನಾಯಕ — ಕ್ಷಾತ್ರಾಂಶ ಪ್ರಬೋಧ. ಪುಟ-9.
19. ದೇವೇಂದ್ರ ಮಾಧವನವರ — ಸಂಯುಕ್ತ ಕರ್ನಾಟಕ ದಿನಪತ್ರಿಕೆ (ಜನಮನ) ದಿ:11-1-1994.
ಲೇಖನ: ಕರ್ನಾಟಕದ ಪ್ರಥಮ ಸ್ವಾತಂತ್ರ್ಯವೀರ.
20. ಪ್ರೊ : ಸುಧಾಕರ — ಪ್ರಜಾವಾಣಿ ದಿನಪತ್ರಿಕೆ (ಓದುಗರ ವೇದಿಕೆ) ದಿ: 29-4-1993.
ಲೇಖನ: ಹಕ್ಕಬುಕ್ಕರು ಬೇಡರಲ್ಲ: ಕುರುಬರು.
21. ಎಸ್.ಎಸ್.ಹಿರೇಮಠ — ಪ್ರಜಾವಾಣಿ ದಿನಪತ್ರಿಕೆ (ಓದುಗರ ವೇದಿಕೆ) ದಿ:27-5-1993.
ಲೇಖನ: ಒಂದೇ ಕುಟುಂಬದ ಎರಡು ಕವಲು.

ಅವರ ಆಧಿಪತ್ಯದಲ್ಲೇ ಸಾಗಿದವುಗಳು ಆಗಿವೆ.

ಕೆಳವರ್ಗದ ಈ ಪಾಳೆಯಗಾರರು ಮೇಲ್ವರ್ಗದ ಮಡಿಲನ್ನು ಬಯಸಿ ಹೋದದಕ್ಕೆ ಒಂದು ಕಾರಣವಿದೆ. ಅದೇನೆಂದರೆ, "ಪ್ರಭುಸತ್ವದಿಂದ ಮಾತ್ರ ಪ್ರಬಲರಾಗಿ ಗೌರವ, ಸಂಪತ್ತುಗಳನ್ನೆಲ್ಲ ಗಳಿಸಿ ಚತುರರಾಗಿದ್ದ ಇವರಿಗೆ ಜಾತಿ ವಿಷಯ ಬಂದಾಗ ತಲೆತಗ್ಗಿಸುವ ವಾತಾವರಣ ಅಂದು ಉಂಟಾಗಿತ್ತು. ಆಗ ಅನಿವಾರ್ಯವಾಗಿ ತಮ್ಮ ಕೆಳಜಾತಿಯನ್ನು ತ್ಯಜಿಸಿ ಮುಕ್ತಧೋರಣೆಯ ವೀರಶೈವ ಧರ್ಮವನ್ನು ಸ್ವೀಕರಿಸಿದರು. ಈ ರೀತಿ ತೃಪ್ತಿಪಟ್ಟುಕೊಂಡವುಗಳ ಸಾಲಿಗೆ ಉತ್ತರ ಕಾಲೀನ ವಿಜಯನಗರವು ಸೇರಿಹೋಗಿದೆಯೆಂದರೆ ಆಶ್ಚರ್ಯಪಡಬೇಕಿಲ್ಲ.

ಬೇಡ ಜನಾಂಗದ ಚಿತ್ರದುರ್ಗ ಪಾಳೆಯಗಾರರು ಕ್ರಿ.ಶ 1596ರಲ್ಲಿ ವೀರಶೈವ ಧರ್ಮದ ತೆಕ್ಕೆಗೆ ಹೊಕ್ಕರು. ನಂತರ ಮದಕರಿನಾಯಕನ ಕಾಲಕ್ಕೆ ಮರಳಿ 'ನಾಯಕ' ಮತವನ್ನೇ ಅಪ್ಪಿಕೊಂಡಾಗ ಸಮಕಾಲೀನ ಬೇಡರ ಪಾಳೆಪಟ್ಟುಗಳಿಗೆ ಮತ್ತೆ ಜೀವಬಂತು. ಚಿತ್ರದುರ್ಗದ ಮೂಲಕ ಉಸಿರಾಡತೊಡಗಿದ ಅನೇಕ ಪಾಳೆಯಗಾರರಿಗೆ ಇದೊಂದು ಚಪ್ಪಟದ ಚಪ್ಪರವು ಆಗಿತ್ತು.[22] ಆದರೆ ಇದೇ ಸಂದರ್ಭದಲ್ಲಿ ಹರಪನಹಳ್ಳಿ, ಹಾಗಲವಾಡಿ, ಮತ್ತೋಡು, ನಾಯಕನಹಟ್ಟಿ, ಮುದಿಗೆರೆ ಮುಂತಾದ ಬೇಡಜನಾಂಗದ ಪಾಳೆಗಾರರು ವೀರಶೈವ ಧರ್ಮದ ಧ್ವಜದಡಿ ಸೇರಿದರೆ,[23] ಸುರಪುರದ ದೊರೆಗಳು ಶ್ರೀ ವೈಷ್ಣವ ಪಂಥವನ್ನು ಪ್ರತಿನಿಧಿಸಿದರು. ತಿರುಮಲಾರ್ಯನ ಚಿಕ್ಕದೇವರಾಯ ವಂಶಾವಳಿಯಲ್ಲಿ ಹೇಳಲಾದ ಚಿಂತನಕಲ್ಲು, ಚಿಕ್ಕನಾಯಕನಹಳ್ಳಿ, ಬಾಣಾವರ, ಬಸವಪಟ್ಟಣ ಮುಂತಾದ ಬೇಡರ ರಾಜ್ಯಗಳು ಅನ್ಯಧರ್ಮದ ದಾರಿಯಲ್ಲಿಯೇ ಸಾಗಿಹೋದವು.[24]

ಹೀಗೆ ಅನೇಕ ಪಾಳೆ-ಪಟ್ಟುಗಳು ಬೇಡ ಜನಾಂಗದಿಂದ ಕೈತಪ್ಪಿ ಹೋಗುವ ಮೂಲಕ ಇಂದು ಅವುಗಳ ಸ್ಥಾಪಕ, ಆಧಿಪತ್ಯಗಳ ವಿಷಯದಲ್ಲಿ ಮೇಲ್ವರ್ಗದ ನೀತಿಯನ್ನೇ ಬೆಂಬಲಿಸುವಂತಾಗಿದೆ. "ಕೆಳಜಾತಿಯ ಶೂರಜನರೇ ದಕ್ಷಿಣ ಭಾರತದ ರಾಜ್ಯ-ಸಾಮ್ರಾಜ್ಯಗಳನ್ನು ಕಟ್ಟಿದರು".[25] ಎನ್ನುವ ವಾದವನ್ನು ಸಂಶಯ ದೃಷ್ಟಿಯಿಂದ ನೋಡುವಂತಾಗಿದೆ. ಪಾಳೆಯಗಾರರ ಪರಿವರ್ತನೆಯಿಂದ ಅವರ ಪಾಳೆಯಗಳ ಮೂಲಸ್ವರೂಪವೇ ಬದಲಾಗಿ ಹೋದದ್ದು ಇವೆಲ್ಲಾ ವಿವಾದಗಳಿಗೆ

---

22. ಎಚ್.ಜಿ.ರಂಗಸ್ವಾಮಿ. ಅನು: ಬಿ.ಎನ್.ಶಾಸ್ತ್ರಿ – ಕರ್ನಾಟಕ ಪರಂಪರೆ, ಸಂಪುಟ-2. ಲೇಖನ : ಪಾಳೆಯಗಾರರು. ಪುಟ-207.
23. ದೇವೇಂದ್ರ ಮಾಧವನವರ – ಕನಕದಾಸರು ಬೇಡ ಜನಾಂಗದವರು. ಪುಟ-7.
24. ಮಂ.ಆ.ರಾಮಾನುಜ ಅಯ್ಯಂಗಾರ್ – ಸಂ: ರಾಜನೃಪ ಚರಿತಂ. ಪುಟ-22.
25. ಎಸ್.ಎಸ್.ಹಿರೇಮಠ – ಪ್ರಜಾವಾಣಿ ದಿನಪತ್ರಿಕೆ (ಓದುಗರ ವೇದಿಕೆ) ದಿನಾಂಕ:27-5-1993. ಲೇಖನ : ಒಂದೇ ಕುಟುಂಬದ ಎರಡು ಕವಲುಗಳು.

ಕಾರಣವಾದ ಸಂಗತಿ ಮಾತ್ರ ಸತ್ಯ.

ರತ್ನಗಿರಿ, ಕಂಪಿಲ, ವಿಜಯನಗರಗಳ ಮೂಲಕ ಪಸರಿಸಿದ ಸುರಪುರದ ಪೂರ್ವವು ಅನೇಕ ಪಾಳೆಯಗಾರರ ಪರಿಸರದಲ್ಲಿ ಬದಲಾಗುತ್ತ, ಬೆಳೆಯುತ್ತ ಬಂದ ಬಗ್ಗೆ ಇದುವರೆಗೆ ವಿವೇಚಿಸಲಾಗಿದೆ.

(ಅ) ಸುರಪುರದ ಪೂರ್ವಜರು

ನರಸಿಂಹನಾಯಕ
↓
ವೀರಬೊಮ್ಮನಾಯಕ
↓
ಸಿಂಗಪ್ಪನಾಯಕ
↓
ಬಚೀರನಾಯಕ
↓
ಕಲ್ಲಪ್ಪನಾಯಕ
↓
ಚಿಕ್ಕಹಣಮನಾಯಕ
↓
ಹಾವಿನಾಯಕ
↓
ಪೆದ್ದ ಸೋಮನಾಯಕ
↓
ಎಗ್ರಸಿಂಗನಾಯಕ
↓
ಮದರಿನಾಯಕ
↓
ವೀರಘುಂಟನಾಯಕ
↓
ಬಣಸೋಮನಾಯಕ
↓
ಹಿರೇಪಾಮನಾಯಕ
↓
ಜಕ್ಕಪ್ಪದೇಸಾಯಿ

'ಗುಹ' ನಿಂದ ಆರಂಭಗೊಳ್ಳುವ ಸುರಪುರ ದೊರೆಗಳ ಗೋಸಲವಂಶವು[26] ಬಹು ಪ್ರಾಚೀನ ಪರಂಪರೆಯನ್ನು ಪಡೆದಿದೆ. ಸದ್ಯ ದೊರೆತ ದಾಖಲೆಗಳ ಆಧಾರದ ಮೇಲೆ ದೃಢೀಕರಿಸುವದಾದರೆ, ಸುರಪುರ ಸಂಸ್ಥಾನವನ್ನು ಕಟ್ಟಿ ಆಳಿದ ಅರಸರ ಪೂರ್ವಜರು '' ಮೇಲ್ಕಾಣಿಸಿದ ಹದಿನಾಲ್ಕು

---

26. ಪಾಮನಾಯಕ – ಭಾರ್ಗವ ಪುರಾಣ (ತೆಲುಗು) – ಸಂ: ತಿರುಮಲ ರಾಮಚಂದ್ರ. ಹೈದ್ರಾಬಾದ್. 1986.

ತಲೆಮಾರಗಳವರೆಗೆ[27] ಇದ್ದಾರೆ." ಅವರಲ್ಲಿ 'ನರಸಿಂಹನಾಯಕ' ನೆಂಬುವವನೆ ಪ್ರಥಮ ಪಾಳೆಗಾರ. ಆಂಧ್ರಪ್ರದೇಶ ರಾಜ್ಯದ ರತ್ನಗಿರಿ ಭಾಗದಲ್ಲಿ. ತರುತ್ತ ಮುಂದೆ ಸಾಗಿದ ಈತ ವೀರಬೊಮ್ಮ ನಾಯಕನೆಂಬ ಮಗನ ಮೂಲಕ ಸಾರಂಗಕೊಳ್ಳವನ್ನು ಹಿಡಿದನು. ತರುವಾಯ ಬಂದ ಸಿಂಗಪ್ಪ ನಾಯಕ ಮತ್ತು ಚೀರನಾಯಕರೆಂಬ ತಂದೆಮಕ್ಕಳಿಬ್ಬರು ಸಾರಂಗಕೊಳ್ಳದ ದೇಶಗತಿಯನ್ನು ಸಂಪಾದಿಸಿದರು.

'ಕದನ ಕಡುಗಲಿ' ಎಂದೇ ಪ್ರಖ್ಯಾತಿ ಗಳಿಸಿದ್ದ ಚೀರ ನಾಯಕನ ಮಗ ಕಲ್ಲಪ್ಪ ನಾಯಕನು "ಸಾಗಿ ಬಂದ ವಂಶದ ಆಸ್ತಿ ಮತ್ತು ಶಕ್ತಿಯನ್ನು ಕ್ರೋಢೀಕರಿಸಿಕೊಂಡು ಇದೇ ಸ್ಥಳದಲ್ಲಿ ಮೆರೆದಿದ್ದನು." ಕಂಪಿಲ ರಾಜ್ಯದ ಅವಸಾನ ಮತ್ತು ವಿಜಯನಗರ ಸಾಮ್ರಾಜ್ಯದ ಉಗಮಗಳೆರಡನ್ನು ಕಂಡುಂಡ ಕಲ್ಲಪ್ಪನಾಯಕ ಸಾರಂಗಕೊಳ್ಳಬಿಟ್ಟು ತುಂಬಳಕ್ಕೆ ತೆರಳಿದನು.

ಆಗ ಮುದಗಲ್ಲಿನ ಕಿಲ್ಲೇದಾರ ಮುಸ್ತಫಾಖಾನನ ಸ್ನೇಹದ ಆಹ್ವಾನದ ಮೇರೆಗೆ ತನ್ನ ಏಳು ಜನ ಮಕ್ಕಳೊಂದಿಗೆ ಹೊರಟ ಕಲ್ಲಪ್ಪನಾಯಕ ಕಂಪಿಲ ಗಂಗಾವತಿ, ತಾವರಗೇರಿ – ಮಾರ್ಗವಾಗಿ ಮುದಗಲ್ಲು ತಲುಪಿದನು. ಸುರಪುರ ಸಂಸ್ಥಾನದ ಆಳ್ವಿಕೆಯಲ್ಲಿ ಬರೆಯಲ್ಪಟ್ಟ ಕೈಫಿಯತ್ತು ಒಂದರ ಅಭಿಪ್ರಾಯವೂ ಇದೆ ಆಗಿದೆ. "ಮುದಗಲ್ಲಿನ ದುರ್ಗಾಧಿಪತಿಯಾಗಿದ್ದ ಮುಸ್ತಫಾಖಾನನು ಕಲ್ಲಪ್ಪನಾಯಕನನ್ನು ಕರೆದು ತಂದನೆಂದೇ ಹೇಳುತ್ತವೆ." ಇಂದಿಗೂ ಮುದಗಲ್ಲಿನಲ್ಲಿ 'ಗೋಸಲ ಪೇಟೆ' –ಎಂಬ ಓಣಿ ಮತ್ತು ಆ ಓಣಿಯಲ್ಲಿ ಗೋಸಲರಾಯನೆಂಬ ಮಾರುತಿ ದೇವಾಲಯವು ಕಲ್ಲಪ್ಪನಾಯಕನ ಮುದಗಲ್ಲ ವಾಸ್ತವ್ಯವನ್ನು ಪುರಸ್ಕರಿಸುತ್ತವೆ. ಅಲ್ಲದೆ ಕ್ರಿ. ಶ. 1560ರಲ್ಲಿ ಬರೆಯಲಾದ ಇಲ್ಲಿಯ ಶಾಸನವೊಂದು ಅಳಿಯರಾಮರಾಯನನ್ನು ಉಲ್ಲೇಖಿಸುವ ಜೊತೆಗೆ ವೆಂಗಳಪ್ಪ ನಾಯಕನೆಂಬಾತನನ್ನು ಹೆಸರಿಸುತ್ತದೆ. ತಾಳಿಕೋಟೆ ಕದನಕ್ಕೆ ಇನ್ನು ಕೇವಲ ಐದು ವರ್ಷ ಮುಂಚೆ ಕಲ್ಲಪ್ಪ ನಾಯಕನ ಕುಟುಂಬ ಮುದಗಲ್ಲಿನಲ್ಲಿ ವಾಸವಾಗಿತ್ತೆನ್ನಲು ಸದರಿ ಶಾಸನ ಬಲವಾದ ಸಾಕ್ಷಿ ಒದಗಿಸಿದೆ.

ಬಹು ಕುತೂಹಲ ಕೆರಳಿಸುವ ಕಲ್ಲಪ್ಪ ನಾಯಕನ ಜೀವನ ವೃತ್ತಾಂತವು,ಸುರಪುರ ವಂಶದ ಮುಖ್ಯಮೈಲುಗಲ್ಲಾಗಿದೆ. ಸಾರಂಗಕೊಳ್ಳದ ಪರಿಸರದಿಂದಲೇ ಪ್ರಾಬಲ್ಯಕ್ಕೆ ಬಂದಿದ್ದ ಕಲ್ಲಪ್ಪ ನಾಯಕ ಕುಟುಂಬವು ತುಂಬಳಕ್ಕೆ ಸ್ಥಳಾಂತರಿಸುವಲ್ಲಿ ಆಶ್ರಯ ನೀಡಿದ್ದ ಕಂಪಿಲ ರಾಜ್ಯದ ಅವಸಾನವೇ

27. ಸು.ಸಂ.ಇ, ಪುಟ–3.

ಕಾರಣವಾಗಿರಬಹುದು. ಮುಸ್ತಫಾಖಾನನ ಆಹ್ವಾನದ ಮೇರೆಗೆ ಮುದಗಲ್ಲಿಗೆ ಬಂದನೆಂದು ಹೇಳುವದಕ್ಕಿಂತ, "ವಿಜಯನಗರ ಸಾಮ್ರಾಜ್ಯಕ್ಕೆ ಉತ್ತರದ ವೈರಿಗಳ ದಾಳಿಯನ್ನು ತಡೆಯಲು ಕೃಷ್ಣೆಯ ಮೇರೆಯಲ್ಲಿ ಕಾವಲು ಹಾಕಿದನೆಂದು" ಸಮರ್ಥಿಸಿಕೊಳ್ಳುವದೇ ಬಹು ಸಮಂಜಸವೆನಿಸುತ್ತದೆ. ಈತನ ಕುಟುಂಬಕ್ಕೆ ಸಂಬಂಧಪಟ್ಟ ಸ್ವಾರಸ್ಯಕರ ಸಂಗತಿಯೆಂದರೆ 'ತನ್ನ ಏಳು ಜನ ಪುತ್ರರಿಗೆಲ್ಲ ಹಣಮನಾಯಕ'ನೆಂದೇ ಹೆಸರಿಸಿದ್ದು. ಇತ್ತೀಚೆಗೆ ನಾವೆಲ್ಲ ಇವರನ್ನು ಇಮ್ಮಡಿ, ಮುಮ್ಮಡಿ ಮುಂತಾಗಿ ಗುರುತಿಸುತ್ತೇವೆ. ಆದರೆ ಮೊದಲು ಕರಿಹಣಮ, ಚಿನ್ನಹಣಮ, ಬಲ್ಲ ಹಣಮರೆಂದು ಸಂಬೋಧಿಸುತ್ತಿದ್ದ ದಾಖಲೆಗಳಿವೆ. ಇದಕ್ಕೆಲ್ಲ ಆರಾಧ್ಯದೈವ 'ಹನುಮಂತ'ನ ಪ್ರಭಾವವೇ ಕಾರಣವಿರಬಹುದು.

ಮುದಗಲ್ಲ ಪ್ರಾಂತ್ಯದಲ್ಲಿ ತಳವೂರಿದ್ದ ಕಲ್ಲಪ್ಪನಾಯಕನ ಈ ಏಳು ಜನ ಮಕ್ಕಳು ಇಲ್ಲಿಂದಲೇ ಚದುರಿ ಹೋಗಿ ತಮ್ಮ ಸ್ವತಂತ್ರ ದೇಸಗತಿಗಳಿಗೆ ದೊರೆಗಳಾದರು. ಉತ್ತರಕ್ಕೆ ಹೊರಟ ಮೊದಲನೆಯ ಹಿರೇಹಣಮನಾಯಕನು ಕೃಷ್ಣಾನದಿಯನ್ನು ದಾಟಿ ಕೊಡೆಕಲ್, ನಾಲ್ವತ್ವಾಡ ಪ್ರದೇಶದಲ್ಲಿ ತನ್ನ ಪ್ರಾಬಲ್ಯ ಸ್ಥಾಪಿಸಿದನು. ಅದರಂತೆ ಇಮ್ಮಡಿ ಹಣಮನಾಯಕನು ಪೂರ್ವದತ್ತ ಪ್ರಯಾಣಿಸಿ ಕೋಸಗಿ ಪ್ರಾಂತ್ಯದಲ್ಲಿ ಪ್ರಬಲನೆನಿಸಿದರೆ, ಮುಮ್ಮಡಿ ಹಣಮನಾಯಕ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಉತ್ತರದ ಕೋಳಕೂರ, ರುದ್ರವಾಡಗಿ, ಬೀದರ ಮಾರ್ಗವಾಗಿ ವರ್ಹಾಡಕ್ಕೆ ಧಾವಿಸಿದನು.[28] ನಾಲ್ಕನೆಯವನಾದ ಸಾಜಂಗ ಹಣಮನಾಯಕನು ಪಶ್ಚಿಮದೆಡೆಯ ಕಾಲಗಿ, ನಿಡಗುಂದಿ; ಕೆರೂರು ಭಾಗದಲ್ಲಿ ಬೆಳೆದನು. ಐದನೆಯ ಕರಿಹಣಮ ನಾಯಕ ಮತ್ತು ಆರನೆಯ ಬಲ್ಲ ಹಣಮನಾಯಕರು ದಕ್ಷಿಣದ ಕಡೆ ಧಾವಿಸಿಹೋದರು. ಇನ್ನು ಏಳನೆಯ ಚಿನ್ನ ಹಣಮನಾಯಕನೇ ಕಲ್ಲಪ್ಪನಾಯಕನ ಕೊನೆಯ ಪರಾಕ್ರಮ ಪುತ್ರ. ಈತ ಸಹೋದರ ಹಿರೇಹಣಮನಾಯಕನ ರೆಕ್ಕೆಯ ರಕ್ಷಣೆಯಲ್ಲಿಯೇ ಸಗರನಾಡಿನ ಕಕ್ಕೇರಿ ಭಾಗವನ್ನು ಕೇಂದ್ರವಾಗಿಟ್ಟುಕೊಂಡು ಪ್ರಬಲ ಪಾಳೆಗಾರನಾಗಿ ಹೊರಹೊಮ್ಮಿದ. ಮುಂದೆ ಈತನೇ ಸುರಪುರ ಮತ್ತು ಗುಡಗುಂಟಿ ಸಂಸ್ಥಾನಗಳಿಗೆ ಭದ್ರ ಬುನಾದಿಯೊದಗಿಸುವ ಕೀರ್ತಿಗೆ ಪಾತ್ರನಾದ.

ಕಕ್ಕೇರಿಯಲ್ಲಿ ಆಳಿತ ನಡೆಸುತ್ತಿದ್ದ ಮೊದಲ ಅಧಿಕಾರಿಗಳನ್ನು ಕೊಲ್ಲುವ ಮೂಲಕ ಈ ಭಾಗವನ್ನೆಲ್ಲ ಕೈವಶ ಮಾಡಿಕೊಂಡ ಚಿನ್ನಹಣಮನಾಯಕನು, ಕರಡಕಲ್ಲಿನ ಅಮಲ್ದಾರ

---

28. ಕಪಟರಾಳ ಕೃಷ್ಣರಾವ್ — (ಸಾಹಿತ್ಯ ಸುಧೆ)
ಲೇಖನ: ಸುರಪುರ ಸಂಸ್ಥಾನದ ಹಿರಿಮೆ. ಪುಟ-25.

ಮತ್ತು ದೇವಾಪುರದ ದೇಸಾಯಿಗಳನ್ನು ಸದೆಬಡಿದು ತನ್ನ ವ್ಯಾಪ್ತಿ ವಿಸ್ತರಿಸಿಕೊಂಡ ರೋಮಾಂಚನ ಘಟನೆಗಳು ಚರಿತ್ರೆಯ ಪುಟದಲ್ಲಿ ಸೇರಿಹೋಗಿವೆ. ಹಣಮನಾಯಕನ ಈ ಕ್ಷಿಪ್ರ ಕಾರ್ಯಧರಣಿಯಿಂದ ಮುಸ್ಲಿಂ ಸುಭೇದಾರರು ತತ್ತರಿಸಿ ಹೋದರೆಂದು ಕೈಫಿಯತ್ತುಗಳು ಬಣ್ಣಿಸಿವೆ. ಆದರೆ ಈತನ ವೃದ್ಧಾಪ್ಯ ಮತ್ತು ಮುಂದೆ ಬಂದ ಉತ್ತರಾಧಿಕಾರಿಗಳ ವೈಫಲ್ಯ ಕಂಡು, ಹಿಂದೆ ಪರಾಭವಗೊಂಡ ದೇಸಾಯಿಗಳು ಮರಳಿ ಕಕ್ಕೇರಿ ಭಾಗವನ್ನು ಸ್ವಾಧೀನಪಡಿಸಿಕೊಂಡರು.

ಚಿನ್ನಹಣಮನಾಯಕನ ತರುವಾಯ ಬಂದ ಹಾವಿನಾಯಕ, ಪೆದ್ದ ಸೋಮನಾಯಕ, ಎಗ್ರಸಿಂಗನಾಯಕ, ಮದರಿನಾಯಕ, ವೀರಝಂಪನಾಯಕ ಮತ್ತು ಬಡಸೋಮನಾಯಕರು ಕಕ್ಕೇರಿ ಬಿಟ್ಟು 'ಐದುಭಾವಿ' ಹಾಗೂ ಕೃಷ್ಣಾನದಿಯ 'ಗಡ್ಡಿ' ಪ್ರದೇಶದಲ್ಲಿ ಆಶ್ರಯಪಡೆದರು. ಐದಾರು ತಲೆಮಾರುಗಳ ದೀರ್ಘ ಸೋಲಿನ ಸೇಡನ್ನು ತೀರಿಸಿಕೊಳ್ಳಲೆಂದೇ ಸಿಡಿದೆದ್ದು ಬಂದ ಬಡ ಸೋಮನಾಯಕನ ಮಗ ಹಿರೇಪಾಮನಾಯಕನು ಕಕ್ಕೇರಿಯನ್ನು ಕಸಿದುಕೊಂಡಿದ್ದ ಗಜ–ದೇಸಾಯಿಯರನ್ನು ಕೊಂದು ತನ್ನ ಪೂರ್ವಜರ ಜಮೀನು, ಜಹಗೀರುಗಳನ್ನೆಲ್ಲ ಮರಳಿ ಸಂಪಾದಿಸಿದನು.

ಇಲ್ಲಿ ಗಮನಿಸಬೇಕಾದ ಬಹುಮುಖ್ಯ ಅಂಶವೆಂದರೆ ಹಿರೇಪಾಮನಾಯಕನ ಕಾಲಕ್ಕೆ ತಾಳಿಕೋಟೆ ಕದನ ಮತ್ತು ವಿಜಯನಗರದ ವಿನಾಶ ಆಗಲೇ ಆಗಿ ಹೋಗಿತ್ತು. "ಇದುವರೆಗಿನ ವಂಶಪರಂಪರೆಯ ಇತಿಹಾಸ ನೋಡಿದರೆ ವಿಜಯನಗರ ಸಾಮ್ರಾಜ್ಯದ ಸಂರಕ್ಷಣೆಗೆ ಕಂಕಣ ತೊಟ್ಟ ಸುರಪುರ ಸಂಸ್ಥಾನದ ಈ ಪೂರ್ವಜರ — ಸಾಹಸ, ಶೌರ್ಯ ಶ್ಲಾಘನೀಯವಾದದು" ಎನ್ನುವಲ್ಲಿ ಎರಡಿಲ್ಲ. ಕೇವಲ ಸ್ವತಂತ್ರ ಅಧಿಕಾರ ಸಾಧಿಸಲು ಮಾತ್ರ ಇವರು ಶ್ರಮಿಸಲಿಲ್ಲ. ತಮ್ಮ ಎಲ್ಲಾ ಸೌಖ್ಯವನ್ನು ವಿಜಯನಗರದ ಉನ್ನತಿಯಲ್ಲಿಯೇ ಕಂಡಿದ್ದಾರೆ; ಉಂಡಿದ್ದಾರೆ. ನಾಲ್ಕು ದಿಕ್ಕುಗಳಲ್ಲಿ ಸರ್ಪಗಾವಲು ಹಾಕಿ ಸಂರಕ್ಷಿಸಿದ್ದಾರೆ.

ಆದರೆ ಆಶ್ರಿತ ರಾಜರನ್ನೇ ಅಪಜಯಗೊಳಿಸಿದ ತಾಳಿಕೋಟೆ ಕದನವು ತಮ್ಮ ಕಣ್ಮುಂದೆ ನಡೆದದ್ದು ಅಷ್ಟೇ ಅಲ್ಲ, ತಮ್ಮ ಕೈಯೊಳಗಿನ ಪ್ರದೇಶದಲ್ಲೇ ಜರುಗಿದ್ದು ಇವರಿಗೆ ತಂದ ಎಲ್ಲಿಲ್ಲದ ನೋವು. ಇದೆಲ್ಲಕ್ಕಿಂತ ಅತಿ ಪ್ರಾಮುಖ್ಯ ಮತ್ತು ಅಷ್ಟೇ ಸತ್ಯ ಸಂಗತಿಯೆಂದರೆ ಅಳಿಯ ರಾಮರಾಯನ ಶಿರಚ್ಛೇದನವು ಕಾಮನಟಗಿ ಸಮೀಪದ ಬನ್ನಿಹಟ್ಟಿ ಗ್ರಾಮದಲ್ಲಿಯೇ ಘಟಿಸಿದ್ದು[29] ಸಗರನಾಡಿನ ದುರ್ದೈವವೇ ಸರಿ.

---

29. P.M.Joshi - The History of Mediaeval Deccan

ಕೈತಪ್ಪಿ ಹೋದ ವಿಜಯನಗರ ಸಾಮ್ರಾಜ್ಯವು ವಿಜಯೀ ಮುಸ್ಲಿಂ ಒಕ್ಕೂಟದ ದಾಳಿಗೆ ಆರು ತಿಂಗಳು ಪರ್ಯಂತ ಲೂಟಿಗೊಳಗಾಯಿತು. ಆಗ ನಡೆದ ಬರ್ಬರ ಆಕ್ರಮಣಗಳನ್ನು ತಡೆಯುವಲ್ಲಿ ಶಕ್ತಿಮೀರಿ ಪ್ರಯತ್ನಿಸಿದವರೆಂದರೆ ಸುರಪುರದ ಈ ಪೂರ್ವಜರೆ. ಕೊನೆಗೆ ರಭಸವಾಗಿ ಹರಿದು ಬರುವ ಮುಸ್ಲಿಂ ಸೈನ್ಯದ ಹೊಡೆತಕ್ಕೆ ಒಬದ್ದ ಪಾಳೆಪಟ್ಟುಗಳೆಲ್ಲ ಹರಿದು ಹಂಚಿ ಹೋದವು. ಒಕ್ಕೂಟ ರಚಿಸಿಕೊಂಡು ಯುದ್ಧ ಮಾಡಿದ್ದ ಐದು ಷಾಹಿ ಮನೆತನಗಳು ತಾವು ಗೆದ್ದ ವಿಜಯನಗರವನ್ನು ತಮ್ಮ ಆಳ್ವಿಕೆಯ ಅನುಕೂಲಕ್ಕಾಗಿ ಸೀಳಿಕೊಂಡರು.

ಆಗ " ಶ್ರೀರಂಗಪಟ್ಟಣ, ಸುಂಡಾ, ಚಿತ್ರದುರ್ಗ, ತರಿಕೆರೆ, ರತ್ನಗಿರಿ, ಮೂಡಹಾಳ, ಚಿಕ್ಕಪಾಳೆ, ಚಿಕ್ಕಬಳ್ಳಾಪೂರ, ತುಂಬಕೆರೆ, ಹರಪನಹಳ್ಳಿ, ಆನೆಗೊಂದಿ, ಕನಕಗಿರಿ, ಬಳ್ಳಾರಿ, ಗಂಡಿಕೋಟೆ, ಸಗರಗಡ, ಕಪಗುರಿ, ಪೆಕರಿ, ಕಲೂರಿ, ಜರಿಮಲೆ, ಕುರುಕೋಟಿ, ಪಾವಗಡ, ಸಿರಹಷ[30] ಪಾಳೆ-ಪಟ್ಟುಗಳ 22 ಜಮೀನುದಾರರು – ಆದಿಲ್‌ಷಾಹಿ ಅರಸೊತ್ತಿಗೆಯ ವಿಜಾಪೂರಕ್ಕೆ ಕಪ್ಪಕಾಣಿಕೆ ಒಪ್ಪಿಸಲು ಮುಂದೆ ಬಂದರು. ಇದರಲ್ಲಿ ಸಗರನಾಡಿನ ಸುರಪುರದ ಪೂರ್ವ ವಂಶದವರೂ ಸೇರಿದರು. ಇಲ್ಲಿಂದ ಸಗರನಾಡು ಭಾಗದ ಸೀಮೆ ವಿಜಾಪೂರ ಬಾದಷಾಹರ ಚೆತನಕ್ಕೆ ಅಧಿಕೃತವಾಗಿ ಒಳಪಟ್ಟಿತು.

ವಿಶಾಲ ಆದಿಲ್‌ಷಾಹಿ ಸಾಮ್ರಾಜ್ಯದ ಪ್ರಭಾವಿ ಅರಸರನ್ನು ಎದುರು ಹಾಕಿಕೊಳ್ಳುವುದು ಸಧ್ಯ ಅಸಾಧ್ಯದ ಮಾತಾಗಿತ್ತು. ಅದಕ್ಕಾಗಿ ಅವರ ಸಾಮಂತಿಕೆ ಸ್ವೀಕರಿಸಿದ್ದ ಹಿರೇಪಾಮನಾಯಕನು ಇಬ್ರಾಹಿಮ್ ಆದಿಲ್ ಶಹನ ಸರದಾರ ಅಬುಲ್‌ರಹೀಮ್ ಬಹಲೂಲಖಾನನ ಸ್ನೇಹ ಬೆಳೆಸಿದ. ಆದಿಲ್‌ಷಾಹಿ ಅರಸರ ಸಾಮಂತಿಕೆ ಸ್ವೀಕರಿಸಿದ ಸುರಪುರ ಅರಸರ ಪ್ರಥಮ ವ್ಯಕ್ತಿಯೆಂದರೆ ಈತನೇ ಎಂದೆನಿಸುತ್ತದೆ. ಈ ಸಾಮಂತಿಕೆಯ ಧ್ಯೋತಕವೆಂಬಂತೆ ಹಿರೇಪಾಮನಾಯಕನಿಗೆ ಕಕ್ಕೇರಿ ಅಲ್ಲದೆ 'ಬೈಚಬಾಳ ಸಮತಿನ' ಸರದೇಸಗತಿ ಸಿಕ್ಕಿತ್ತು. ಇದರ ಉತ್ತರಾಧಿಕಾರಿಗಳಾಗಿ ಬಂದ ಈತನ ಮಗ ಜಕ್ಕಪ್ಪ ದೇಸಾಯಿಯು ರೂಢಿಯಂತೆ ಪಿತ್ರಾರ್ಜಿತ ಆಸ್ತಿಗೆಲ್ಲ ಒಡೆಯನಾದ.

(1) ಗಡ್ಡಿಪಿಡ್ಡನಾಯಕ : (1636-1666)

ಕಕ್ಕೇರಿ ಪ್ರದೇಶವನ್ನು ಕೇಂದ್ರವಾಗಿಟ್ಟುಕೊಂಡ ಜಕ್ಕಪ್ಪ ದೇಸಾಯಿಯು ತನ್ನ ಮಕ್ಕಳಾದ ಗಡ್ಡಿಲಿಂಗನಾಯಕ ಮತ್ತು ಗಡ್ಡಿಪಿಡ್ಡನಾಯಕರನ್ನು ನೀರದೇವರಗುಡ್ಡ, ದೇವರಗುಡ್ಡ,

30. ಸು.ಸಂ.ಇ., ಪುಟ-8.

ಜಂಗಿನಗಡ್ಡಿ, ಮೇಲಿನಗಡ್ಡಿ, ನೀಲಕಂಠರಾಯನಗಡ್ಡಿ ಹಾಗೂ ಬೆಣ್ಣೆಗಡ್ಡಿಗಳ ಮೇಲೆ ಉಸ್ತುವಾರಿಗಿಟ್ಟದನು. 'ಗಡ್ಡಿಗಳ' ಮೇಲೆ ಆಳ್ವಿಕೆ ನಡೆಯಿಸಿದ ಪ್ರಯುಕ್ತ ಇವರಿಗೆ,ಹೆಸರಿನ ಹಿಂದೆ 'ಗಡ್ಡಿ' ವಿಶೇಷಣಸಹಜವಾಗಿ ಬಂದು ಸೇರಿತು. ಜಕ್ಕಪ್ಪ ದೇಸಾಯಿಯ ಅಧೀನದಲ್ಲಿದ್ದ ಕಕ್ಕೇರಿ ಮತ್ತು ಆರು ಗಡ್ಡಿಗಳ ಜವಾಬ್ದಾರಿಯನ್ನು ಮುಂದೆ ಮಕ್ಕಳೇ ನಿರ್ವಹಿಸತೊಡಗಿದರು. ವಿಜಾಪೂರ ಆದಿಲ್ ಷಾಹಿಗಳ ಸಾಮ್ರಾಜ್ಯದ ವ್ಯಾಪ್ತಿಗೆ ಒಳಪಟ್ಟ ಕಕ್ಕೇರಿ ಭಾಗದಲ್ಲಿಯೇ ಸಹೋದರರಿರ್ವರು ಸರದಾರರಾಗಿ ತಮ್ಮ ವ್ಯಕ್ತಿತ್ವವನ್ನು ವಿಸ್ತರಿಸಿಕೊಂಡರು. ಕಕ್ಕೇರಿ ಮತ್ತು ಬೈಜಬಾಳ ಸಮತಿನ ದೇಸಾಯಿಯಾದ ಗಡ್ಡಿಲಿಂಗನಾಯಕನೇ ಪರಗಣಿಯ ಸರದೇಸಾಯಿಯಾಗಿ ಬಡ್ತಿ ಹೊಂದಿದ. ಮುಂದೆ ಗುಡಗುಂಟಿ ಸಂಸ್ಥಾನ ಸ್ಥಾಪನೆಗೆ ಮೂಲಕಾರಣನಾದ. ಗಡ್ಡಿಲಿಂಗನಾಯಕನು ತನ್ನಿಂದ ಸಿಡಿದು ಹೋಗಿ ಸ್ವತಂತ್ರನಾದಂತೆ, ಪಿಡ್ಡನಾಯಕನು ಸಹ ವಿಜಾಪೂರ ಮಹಮ್ಮದ್ ಆದಿಲ್‌ಷಾಹನಿಂದ ಕ್ರಿ.ಶ. 1639ರಲ್ಲಿ ತಾಳಿಕೋಟಿ ಮತ್ತು ಕೊಡೆಕಲ ಸರದೇಶಗತಿ ಸಂಪಾದಿಸುವದರೊಂದಿಗೆ ಸ್ವಸಾಮರ್ಥ್ಯ ಘೋಷಿಸಿಕೊಂಡ. ಮುಂದೆ ಸ್ಥಾಪಿಸುವ ಸುರಪುರ ಸಂಸ್ಥಾನಕ್ಕೆ ನಾಂದಿ ಹಾಡಿದ.

<u>ಪ್ರಭುತ್ವ :</u>

ಇಪ್ಪತ್ತೆರಡು ಜಮೀನುದಾರರಿಂದ ಕಪ್ಪಕಾಣಿಕೆಗಳನ್ನು ಒಪ್ಪಿಸಿಕೊಂಡು ವೈಭವದ ಆಳ್ವಿಕೆ ನಡೆಸುತ್ತಿದ್ದ[31] ವಿಜಾಪೂರದ ಅರಸಮಹಮ್ಮದ ಆದಿಲ್‌ಷಾಹಿಯ ಮೇಲೆ ಮೊಘಲರು ಏರಿಬರತೊಡಗಿದರು. ಕ್ರಿ.ಶ 1635ರಲ್ಲಿ ಪ್ರಮುಖ ಮೊಘಲ ಸರದಾರರು ವಿಜಾಪುರದ ಮೇಲೆ ಸಾಗಿಬಂದರು. ದೋಣಿ ನದಿಯ ಪ್ರದೇಶವನ್ನು ಲೂಟಿ ಮಾಡುತ್ತಿದ್ದ ಮೊಘಲ ಸರದಾರರಿಗೆ ಪಿಡ್ಡನಾಯಕನು ತನ್ನ ಸೈನ್ಯದೊಂದಿಗೆ ಎದುರಾಗಿ ಅವರನ್ನು ಹಿಮ್ಮೆಟ್ಟಿಸಿದ. ಇದೇ ರೀತಿ ಹಲವು ಭಾರಿ ತನ್ನ ಸಾಮ್ರಾಜ್ಯದ ಉಳಿವಿಗಾಗಿ ಶ್ರಮಿಸುತ್ತಿರುವ ಪಿಡ್ಡನಾಯಕನಿಗೆ 'ಕ್ರಿ.ಶ. 1638–39ರಲ್ಲಿ ವಿಜಾಪೂರದ ಬಾದಶಹನು ತಾಳಿಕೋಟೆಯ ಸರದೇಶಗತಿ,ಕೊಡೆಕಲ್ಲ ಸಮತಿನ ಮಹಾಜನಗಿರಿ, ಹೆರೂರ ಸಮತಿನ ಮಾರನಭಾವಿ ಕಸಬೆಯನ್ನು ಇನಾಮವಾಗಿ ನೀಡಿದನೆಂದು'' ಕೈಫಿಯತ್ತು ಹೇಳುತ್ತವೆ. ಸಾಮ್ರಾಜ್ಯದ ಗಡಿಯಲ್ಲಿ ವೈರಿಗಳಿಂದ ರಾಜ್ಯ ರಕ್ಷಿಸಿಕೊಳ್ಳಲು ಬಿಜಾಪೂರ ಆದಿಲ್‌ಷಾಹಿಗಳಿಗೆ ಪಿಡ್ಡನಾಯಕನಂಥ ಪ್ರಬಲ ಪಾಳೆಗಾರನ ಅವಶ್ಯಕತೆಯಿತ್ತು. ಅದರಂತೆ ಸಾಮ್ರಾಜ್ಯವೊಂದರ ಸಹಕಾರದೊಂದಿಗೆ ತನ್ನ ಆಳ್ವಿಕೆ ವಿಸ್ತರಿಸಿಕೊಳ್ಳುವ ಹಂಬಲ ಪಿಡ್ಡನಾಯಕನಿಗೂ ಅನಿವಾರ್ಯವಾಗಿತ್ತು. ಸೀಳಿಹೋದ ಬಹಮನಿಗಳ ಸಾಮ್ರಾಜ್ಯದ

---

31. ಸು.ಸಂ.ಇ; ಪುಟ-8.

ಗಡಿಯಲ್ಲಿ ಮತ್ತು ಮೊಘಲ ದಾಳಿಕೋರರ ದಾರಿಯಲ್ಲಿಯೇ ಗಟ್ಟಿಪಿಡ್ಡನಾಯಕ ಸಶಕ್ತನಾಗಿ ತಲೆ ಎತ್ತಿದ.

<u>ನಗರನಾಡಿನ ಸರದೇಶಗತಿ :</u>

ಬಾಹುಬಲ ಮತ್ತು ಬುದ್ಧಿಬಲಗಳೆರಡು ಪಿಡ್ಡನಾಯಕನಿಗೆ ಪ್ರಾಬಲ್ಯಕ್ಕೇರಿಸಿದವು. ಇವೆರಡನ್ನು ನಗರನಾಡು ಪ್ರಾಂತ್ಯದಲ್ಲಿ ಪ್ರಬಲ ಅಸ್ತ್ರವಾಗಿ ಪ್ರಯೋಗಿಸಿದ ಪಿಡ್ಡನಾಯಕನ ಬಗ್ಗೆ 1,2,3 ನೆಯ ನಂಬರಿನ ಕೈಫಿಯತ್ತುಗಳು ಸಾಕ್ಷಿಯಾಗಿವೆ. ಇವುಗಳನ್ನೇ ಆಧರಿಸಿ ಕಪಟರಾಳ ಕೃಷ್ಣರಾಯರು ಪಿಡ್ಡನಾಯಕನ ದಂಡಿನ ದಾರಿಯನ್ನು ಗುರುತಿಸಿದ್ದಾರೆ.

ತನ್ನ ಅಪಾರ ಪರಿವಾರ ಮತ್ತು ಪಡೆಯೊಂದಿಗೆ ಸಾಗಿದ ಪಿಡ್ಡನಾಯಕನು ವೀರಗೋಟ, ಜಾಲಿಬೆಂಚಿ, ಪ್ರದೇಶಗಳನ್ನು ಆಕ್ರಮಿಸಿದನು. ಆಗ ಅರುಸಾವಿರ ಬೇಡರು, ಮೂರು ಸಾವಿರಗೊಲ್ಲರು ಮತ್ತು ದೇವಪುರದ ಮೀರಾನೆದಾರರು ಪಿಡ್ಡನಾಯಕನ ಜಯಕ್ಕೆ ಜೊತೆಗೂಡಿದ್ದರು. ಜಾಲಿಬೆಂಚಿಯ ಜಯದ ನಂತರ ಪುಂಡನಕಲ್ಲಿಗೆ ಸೈನ್ಯ ಸಾಗಿಸಿದ ಪಿಡ್ಡನಾಯಕನು ಒಂದು ವರ್ಷ ಅಲ್ಲಿಯೇ ಇದ್ದು, ಅದನ್ನೇ ತನ್ನ ಕೇಂದ್ರವಾಗಿಸಿಕೊಂಡ. ಇದೇ ಸಂದರ್ಭದಲ್ಲಿಯೇ ಬಾದಶಹನ ಅಮಲ್ದಾರನಾದ ಸಿದ್ಧಿಮಿಯಾನನ್ನು ಯುದ್ಧದಲ್ಲಿ ಕೊಂದು ಅವನ ಕುದುರೆಗಳನ್ನು ಪುಂಡನಕಲ್ಲಿಗೆ ತಂದನು. ಮರುವರ್ಷ, ಕನ್ನೆಕೊಳ್ಳೂರಲ್ಲಿ ಹವಲ್ದಾರನಾಗಿದ್ದ 'ಮುಸ್ತಫಖಾನ'ನನ್ನು ಮತ್ತು ಮಾಲಗತ್ತಿಯ ಅಮಲ್ದಾರನನ್ನು ಅಲ್ಲಿಂದ ಕಾಲ್ತೆಗೆದು ಓಡುವಂತೆ ಮಾಡಿದನು. ಅಲ್ಲಿಂದ ಸಿಂಗನವಟ್ಟಲ, ದೇವಕಲ್ಲ, ಕೊಳ್ಳನಮಡುವಿನ ಮೂಲಕ ಸಾಗಿಬರುವಾಗ ಅಲ್ಲಿಯ ಪ್ರದೇಶಗಳನ್ನೆಲ್ಲ ವಶಪಡಿಸಿಕೊಂಡು ಬೈಚಬಾಳಿಗೆ ಬಂದನು. ಬೈಚಬಾಳ ಸಮೀಪದ ಕರ್ಣಿಹಳ್ಳಿಯೆಂಬ ಊರನ್ನೇ ವಾಗಿನಗೇರಿಯನ್ನಾಗಿ ಪರಿವರ್ತಿಸಿ[32], ಅಲ್ಲಿಯ ದಿಬ್ಬದ ಮೇಲೆ ಭದ್ರಕೋಟೆಯೊಂದನ್ನು ನಿರ್ಮಿಸಿದನು. ತರುವಾಯ 500 ಕುದುರೆ, 4000 ಕಾಲಾಳುಗಳೊಡನೆ ನಗರನಾಡಿನ ಕೇಂದ್ರಕೋಟೆಯಾದ ಶಹಪುರ ಕಿಲ್ಲೆಯನ್ನು ಕಸಿದುಕೊಂಡಾಗ[33] ಅಲ್ಲಿದ್ದ ಮುಸ್ಲಿಂ ಕಿಲ್ಲೇದಾರ ದಿಕ್ಕೆಟ್ಟು ಓಡಿದನೆಂದೂ ಮತ್ತು ಪಿಡ್ಡನಾಯಕನ ಪ್ರತಿಯೊಂದು ದಾಳಿಗೂ ವಿಜಾಪೂರ ಆದಿಲ್ಶಾಹಿ ಸರದಾರರು ತತ್ತರಿಸಿ ಹೋದರೆಂದು ಕೈಫಿಯತ್ತು[34] ವರ್ಣಿಸುತ್ತವೆ.

---

32. ಇತಿಹಾಸ ಪ್ರಸಿದ್ಧ ವಾಗಿನಗೇರಿ ಕೋಟೆಯ ಊರಿನ ಮೊದಲ ಹೆಸರು ಕರ್ಣಿಹಳ್ಳಿಯೆಂಬುದರ ಬಗ್ಗೆ ಸಂಶೋಧಕರಿನ್ನು ಶೋಧಿಸಬೇಕಿದೆ.
33. ಸು.ತಾ.ದ., ಪುಟ-10.
34. ಕೈಫಿಯತ್ತು, ನಂಬರು-1,2,3.

ಸಗರನಾಡಿನಲ್ಲಿಯ ತನ್ನ ಸರ್ದಾರರು ಸೋತು ಓಡಿಹೋದ ಸುದ್ದಿಯನ್ನು ಕೇಳಿದ ಬಿಜಾಪುರ ಬಾದಷಾಹ ಸಿಡಿಮಿಡಿಗೊಂಡ. ಸಾಮಾನ್ಯ ಜಮೀನುದಾರ ತನ್ನ ಸಾಮ್ರಾಜ್ಯದ ಸಗರ ನಾಡು ಪ್ರದೇಶವನ್ನು ಗೆದ್ದುಕೊಂಡದ್ದು ತನಗೆ ಅಗೌರವವೆನಿಸಿತು. ವೈರಿಗಳನ್ನು ವೈರಿಯಿಂದಲೇ ಹಣಿಯಬೇಕೆಂಬ ನೀತಿಯಿಂದ ಪಿಡ್ಡನಾಯಕನನ್ನು ಅಗಡಿಯಲ್ಲಿ ಇಟ್ಟಿದ್ದನೇ ಹೊರತು, ಬೆಳೆಯಲು ಬಿಟ್ಟಿರಲಿಲ್ಲ. ಇದೇ ರೀತಿ ಬಿಡಲು ಬಿಟ್ಟರೆ ಸಾಮ್ರಾಜ್ಯದ ಗಡಿಯೂ ಸಹ ಸಮೀಪಿಸುವುದೆಂದ ಬಾದಷಹ ಪಿಡ್ಡನಾಯಕನನ್ನು ಮಣಿಯಲು ಸೈನ್ಯ ಸಮೇತ ಅನೇಕ ಸರದಾರರನ್ನು ರವಾನಿಸಿದ. ಆಗಾಗಲೇ ಸೈನ್ಯ ಶಕ್ತಿಯಿಂದ ಸಬಲನಾಗಿದ್ದ ಪಿಡ್ಡನಾಯಕ 'ಅಗ್ನಿ' ಎಂಬ ಸ್ಥಳದಲ್ಲಿ ಅವರನ್ನು ಸೋಲಿಸಿದ. ಸೋಲಿನ ಮೇಲೆ ಸೋಲು ಅನುಭವಿಸುತ್ತಿರುವ ತನ್ನ ಸರದಾರರಿಗೆ ಛಿಮಾರಿ ಹಾಕಿದ ಬಾದಷಹ, ಪಿಡ್ಡನಾಯಕನನ್ನು ಕೆಡಹಲು ಅಂತರಂಗದಲ್ಲೇ ಆಲೋಚಿಸಿದ. ಅದುವೆ "ಮದಾನೆ ಕಾಳಗ": ಮದವೇರಿದ ಆನೆಯನ್ನು ಹಿಡಿದು ಕಟ್ಟಿದವನಿಗೆ 9 ಲಕ್ಷ ರೂಪಾಯಿ ವರಮಾನದ ಭೂಮಿಯನ್ನು ಇನಾಮು ಕೊಡಲಾಗುವದೆಂದು ಘೋಷಿಸಿದ. ಹೊರಟ ಈ ಪ್ರಕಟಣೆ ಸಾಮ್ರಾಜ್ಯದ ತುಂಬೆಲ್ಲ ಹರಡಿತು. ಸಾರಿದ ಬಾದಷಹನ ಸವಾಲು ಸ್ವೀಕರಿಸುವ ಧೈರ್ಯ ಕಪ್ಪಕಾಣಿಕೆ ಒಪ್ಪಿಸುತ್ತಿದ್ದ 22 ಜಮೀನುದಾರರಾರೂ ಮಾಡಲಿಲ್ಲ. ಕೊನೆಗೆ ಪಿಡ್ಡನಾಯಕನೇ ಮಹಮ್ಮದ್ ಆದಿಲಷಾ ಇಟ್ಟ ವೀಳ್ಯವನ್ನು ಎತ್ತಿದ.

<u>ಮದಗಜಮರ್ದನ :</u>[35]

"ಕಿಕ್ಕಿರಿದು ನೆರೆದ ಬಿಜಾಪುರ ನಗರದ ನಿವಾಸಿಗಳು, ಕಾಳಗವನ್ನು ವೀಕ್ಷಿಸಲು ಉಪ್ಪರಿಗೆಯ ಮೇಲೆ ಕುತೂಹಲದಿಂದ ಕಾದಿದ್ದರು. ಮಹಮ್ಮದ್ ಆದಿಲಶಾನು ತನ್ನ ಪರಿವಾರದೊಂದಿಗೆ ಅರಮನೆಯ ಆವರಣಕ್ಕೆ ಬಂದ. ಅರಮನೆಯ ಮುಂದಿನ ವಿಶಾಲ ಮೈದಾನವೇ ಕಾಳಗದ ಕಣವಾಗಿತ್ತು. ಅರಮನೆಯ ಮಾಳಿಗೆಯಿಂದ ತೀರ್ಪುಗಾರರು ಪಿಡ್ಡನಾಯಕನನ್ನು ಸಿದ್ಧವಾಗಿ ಕಣಕ್ಕಿಳಿಯಲು ಸೂಚಿಸಿದರು. ಸಹಸ್ರಾರು ಬೇಡ ಯುವಜನರ ಮಧ್ಯದಿಂದ ಕಿರುಮೀಸೆಯನ್ನು ತೀಡುತ್ತ, ಬಟ್ಟೆ ಬರೆಗಳನ್ನು ಕಿತ್ತು ಬಿಸುಟು ಜಡೆಯನ್ನು ಬಿಗಿಗೊಳಿಸುತ್ತ, ಭುಜಗಳನ್ನು ಅಪ್ಪಳಿಸಿಕೊಳ್ಳುತ್ತ ಕಣದ ಮಧ್ಯದಲ್ಲಿ ಬಂದು ನಿಂತನು. ಭೂಮಿಯ ಹುಡಿಯನ್ನು ಹಣೆಗೆ ಹಚ್ಚಿಕೊಂಡು ತುಂಬಿದ ಜನಕ್ಕೆ ಕೈಮುಗಿದನು. ಜನ ಚಪ್ಪಾಳೆ ತಟ್ಟಿ ಶುಭ ಕೋರಿದರು; ಪ್ರೋತ್ಸಾಹಿಸಿದರು. ಮಹಮ್ಮದ್ ಆದಿಲಶಹನು ಮಾತ್ರ ಪಿಡ್ಡನಾಯಕನು ನುಚ್ಚು ನೂರಾಗುವ ಕನಸು ಕಾಣುತ್ತಿದ್ದ.

---

35. ಪಿ.ಬಿ.ದೇಸಾಯಿ — ಮದಗಜಮಲ್ಲ, ಪುಟ-12-16.

ಅಂತಃಪುರದ ನಾರಿಯರು ಬೇಡನಾಯಕನ ಕಸ್ತೂರಿಯಂತಿರುವ ಮೈಕಾಂತಿ, ವಿಶಾಲವಾದ ಎದೆ, ಸಮುಕಟ್ಟಿನಿಂದ ಬೆಳೆದ ತೋಳತೊಡೆಗಳನ್ನು ನೋಡಿ ಕಣ್ತಣಿಸಿಕೊಂಡರು. ಅಷ್ಟರಲ್ಲಿ ಆನೆ ಕಾಳಗದ ನಿಪುಣಗಾರರು ಮದಾನೆಯನ್ನು ಮೈದಾನಕ್ಕೆ ಬಿಡುವ ಸನ್ನೆ ತೋರಿಸಿದರು. ಗಜಶಾಲೆಯಿಂದ ಹೂಂಕರಿಸುತ್ತ, ಹೆಜ್ಜೆಗಳು ಹಾಕಿದಲ್ಲೆಲ್ಲ ನೆಲ ನಡುಗಿಸುತ್ತ ಬಂದು, ಪಿಡ್ಡನಾಯಕ ನಿಂತೆಡೆಗೆ ಬಂತು. ಅದನ್ನು ಕಂಡ ಈ ಕಿರಾತ ಕಂಠೀರವ ಕೇಕೆ ಹಾಕಿದ. ಅದಕ್ಕೆ ಪ್ರತ್ಯುತ್ತರವಾಗಿ ಮದಕರಿ ಮುಗಿಲು ಹರಿದು ಬೀಳುವಂತೆ ಘೀಳಿಟ್ಟು ಉತ್ತರಿಸಿತು — ಮೇಲೆರಗಿತು. ಆಗ ಪಿಡ್ಡನಾಯಕ ಸಿಂಹದಂತೆ ಅದರ ಮೇಲೆ ತಿರುಗೆರಗಿದ. ಅದನ್ನು ಓಡಾಡಿಸಿ ದಣಿಸಿದ. ಓಡಾಡಿ ದಣಿದು ತೇಕುತ್ತಿದ್ದ ಮದಾನೆ ಕಣ್ಣಿಗೆ ಜೋರಾಗಿ ಒದ್ದ. ಮತ್ತೊಮ್ಮೆ ಬಲವಾದ ಮುಷ್ಟಿಯಿಂದ ಕಣ್ಣಿಗೆ ಗುದ್ದಿದ. ಕಣ್ಣು ಕಳೆದುಕೊಂಡಿತು. ನೋವು ಸಹಿಸಲಾರದೆ ಗೋಡೆಗೆ ಹಾಯತೊಡಗಿತು. ಇದುವರೆಗೆ ಆನೆಯ ಮೇಲೆ ಇದ್ದ ಪಿಡ್ಡನಾಯಕ ಕೆಳಕ್ಕೆ ಜಿಗಿದ. ಆಗ ಕ್ಷಣದಲ್ಲಿ ಗೋಡೆ ಕಲ್ಲುಗಳೆಲ್ಲ ಆನೆಯ ಮೇಲೆ ಬಿದ್ದವು. ಮದ್ದಾನೆ ಕುಸಿದು ಬಿತ್ತು. ಗೆದ್ದ ಪಿಡ್ಡನಾಯಕನಿಗೆ ಬೇಡಯೋಧರು ಓಡೋಡಿಬಂದು ಭುಜದ ಮೇಲೆತ್ತಿ ಕಣದ ತುಂಬೆಲ್ಲಾ ಮೆರೆಯಿಸಿದರು".[36] ಹೀಗೆ ಮದಾನೆಯ ಮರ್ದನದ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ಕಲ್ಪಿಸಲಾಗಿದೆ. ಇದನ್ನು ಪುಷ್ಟೀಕರಿಸುವಂತೆ

ಮತ್ತಗಜವದು ಓಡುತಿರೆ ಬೆ
ನ್ನತ್ತಿ ಬಹರೀ ಪಿಡ್ಡಭೂಪಾ
ಲೋತ್ತಮನು ಹಿಂಗಾಲ್ಗೆ ತನಕಾಲ ಜತ್ತಿಲೊಂದಿಡಿದು ।

ಬತ್ತಿ ಜಗ್ಗಲ್ ಒದರುತಿರೆ ಮುಂ
ದತ್ತ ಹೋಗದೆ ನಿಂತಿತಾ ಕರಿ
ಸುತ್ತ ಜನ ವೀಕ್ಷಿಸಲು ಬಾದಷಹ ಕಂಡು ಬೆರಗಾದ ।

ಎಂದು ಬಣ್ಣಿಸಿದ ಕವಿಯ ವರ್ಣನೆ[37] ಓದಿದಾಗ ಪಿಡ್ಡನಾಯಕನ ಸಾಹಸಗಾಥೆ ಗೋಚರಿಸುತ್ತದೆ. ಇದೆಷ್ಟು ನಿಜವೆಂಬುದರ ಬಗ್ಗೆ ಒಂದು ನಿಲುವಿಗೆ ಬರಲು ಕೈಫಿಯತ್ತುಗಳ ಸಹ ಒಮ್ಮತ ವ್ಯಕ್ತಪಡಿಸಿಲ್ಲ. ಆದರೆ ಕೈಫಿಯತ್ತುಗಳಲ್ಲಿಯ ಐತಿಹಾಸಿಕತೆಯನ್ನೇ ಪರಿಶೀಲಿಸಿದಾಗ ಬಿಜಾಪುರ ಅರಸು ಆದಿಲಶಾಹಿ ನೀಡಿದ ಸನದುಗಳು ಸಮರ್ಥಿಸುತ್ತವೆ.

---

36. ಆರ್.ಶಿವಣಸಿದ್ಧಯ್ಯ ರುದ್ರಸ್ವಾಮಿಮಠ —(ಸಗರನಾಡ ದರ್ಶನ)(ಸ್ಮರಣ ಸಂಚಿಕೆ) ಲೇಖನ: ಸುರಪುರ ಸಂಸ್ಥಾನ ದರ್ಶನ., ಪುಟ-28-29.

37. ಕೋಸಲ ನೃಪ ವೃತ್ತಾಂತ.(ಹಸ್ತಪ್ರತಿ)

'ಮುದ್ರಾಂನೆಯೊಂದಿಗೆ ಕಾದಿಗೆದಂ ಪ್ರಯುಕ್ತವೋ ಅಥವಾ ತನ್ನ ಸಾಮ್ರಾಜ್ಯದಲ್ಲಿ ಪ್ರಬಲ ಸಾಮಂತನೋರ್ವ ಪೂರ್ವದ ಗಡಿಯವರಿಂದೋ ಬಿಟ್ಟನ ಮೇಲೆ ಗಚ್ಚಿ ಪಿಡ್ಡನಾಯಕನಿಗೆ ಕ್ರಿ.ಶ.1648ರಲ್ಲಿ 'ವರಾಮಲೀನಸರತಾಬಾದ' ಮೇಲಿನ ಸರದೇಸಗತಿ ಅಧಿಕಾರದ ಸನದು ನೀಡಿ ಸನ್ಮಾನಿಸಿದ-[38] ಸಂಗತಿ ಸತ್ಯವಾಗಿದೆ. ''ಗಜಗಂಡ ಬಹರಿ ಪಿಡ್ಡನಾಯಕ' ಎಂಬ ಬಿರುದಿತ್ತು, ಆನೆ, 50 ಕೊತ್ತಲ ಕುದುರೆ, ಪಾಲ್ಕಿ, ಅಪ್ತಬಗಿರಿ, ಸಿರಪಾವ್, ಡಂಕಾ ಒಂಟೆ, ಝೂರಿ, ಹಪ್ತಹಜಾರಿ ಮನಸಬು, ನವಲಿ, ಚಿತ್ತಾಪುರ ಪಾರ್ಲ್ಯವಾನ್ಯ, ವಿಜಾಪೂರ ಪ್ರಾಂತ್ಯದ ಸರದೇಸಗತಿಗಳನ್ನೆಲ್ಲ'' ಪಿಡ್ಡನಾಯಕನ ಹೆಸರಿನಲ್ಲಿ ಆದಿಲಶಾಹಿ ಸಾರಿದನು.[39] ಮುದ್ರಾಂನೆ ಕಾಳಗ ಕುರಿತು ಕೈಫಿಯತ್ತುಗಳು ಅಲ್ಪಸ್ವಲ್ಪ ಕಲ್ಪಿಸಿಕೊಂಡಿರಬಹುದು. ಆದರೆ ಮನಸಬು ನೀಡಿದ ಮಹ್ಮದಷಾಹನ ಸನದುಗಳು ಸುಳ್ಳಲ್ಲವೆಂಬುದು ಸಾಬೀತಾಗಿದೆ. ಇದರಲ್ಲಿ ಪಿಡ್ಡನಾಯಕನು 16 ವರ್ಷ ವೃತ್ತಿ ಅನುಭವಿಸಿದನೆಂದು ಹೇಳುವದರಿಂದ ಮುದ್ರಾಂನೆ ಕಾಳಗ ಮತ್ತು ನಸರತಾಬಾದ ಮೇಲಿನ ಸರದೇಸಗತಿ ಹಕ್ಕ ನೀಡಿದುದು ಕ್ರಿ.ಶ.1648-50ರ ಮಧ್ಯದಲ್ಲಿ ಎನ್ನಬಹುದು. ನವಲಿ, ಚಿತ್ತಾಪೂರ, ವಿಜಾಪೂರ, ನಸರತಾಬಾದ ಮುಂತಾದ ಪ್ರದೇಶಗಳ ಮೇಲೆ ಅಧಿಕಾರ ಸ್ಥಾಪಿಸಿದ ಪಿಡ್ಡನಾಯಕ ಬಹು ಪ್ರಬಲ ಪಾಳೆಯಗಾರನಾಗಿ ಹೊರಬಿದ್ದನು. ಕೇವಲ ಕೊಡೆಕಲ್, ತಾಳಿಕೋಟೆಯ ಜಮೀನುದಾರನಾಗಿದ್ದ-ಈತನೀಗ ಸಾಮ್ರಾಜ್ಯ ಅಧಿಪತಿಗಳ ಕಣ್ಣುಕುಕ್ಕಿಸುವಷ್ಟು ತನ್ನ ವರ್ಚಸ್ಸು, ಪ್ರಖ್ಯಾತಿಯನ್ನು ಹಿಗ್ಗಿಸಿಕೊಂಡನು.

ಔರಂಗಜೇಬನ ಆಹ್ವಾನ :

ಕ್ರಿ.ಶ.1656ರಲ್ಲಿ ವಿಜಾಪೂರದ ಬಾದಷಹ ಮಹ್ಮದ್ ಆದಿಲಶಾನು ಮೃತಪಟ್ಟ[40] ಪರಿಣಾಮವಾಗಿ ರಾಜ್ಯದಲ್ಲಿ ಅಂತಃಕಲಹ, ಮೊಘಲರ ದಾಳಿ ಆರಂಭವಾದವು. ಪಟ್ಟವೇರಿದ ಇಮ್ಮಡಿ ಆದಿಲಶಾಹ 'ಅರಸನೇ' ಅಲ್ಲವೆಂದು ಹಲವರು ಆರೋಪಿಸಿದರು. ಸಂದರ್ಭವರಿತ ದಕ್ಷಿಣದ ಪಾಳೆಗಾರರು, ಜಮೀನುದಾರರು ಸ್ವಾತಂತ್ರ್ಯ ಸಾರಿಕೊಂಡರು. ಇದನ್ನೇ ನಿರೀಕ್ಷಿಸುತ್ತ ಕುಳಿತಿದ್ದ ಮೊಘಲ ಯುವರಾಜ ಔರಂಗಜೇಬ ದಕ್ಷಿಣದ ಮೇಲೆ ದಿಗ್ವಿಜಯಕ್ಕೆ ದಾಳಿಯಿಟ್ಟನು. ವಿಜಾಪೂರ ರಾಜ್ಯದ ಮೇಲೆ ನುಗ್ಗಿಬಂದು ಅನೇಕ ಸರದಾರರನ್ನು ತನ್ನ ಪಕ್ಷಕ್ಕೆ ಸೆಳೆದುಕೊಂಡು ಆದಿಲಶಾಹಿಗಳನ್ನು ಶಿಥಿಲಗೊಳಿಸಿದನು. ಆದರೆ ಸಗರನಾಡಿನ ಪಾಳೆಗಾರ ಪಿಡ್ಡನಾಯಕ ಮತ್ತು ಮಗ ಪಾಮನಾಯಕ

---

38. ಡಿ.ಎನ್.ಅಕ್ಕಿ – ಶಹಾಪುರ ತಾಲೂಕ ದರ್ಶನ, ಪುಟ-18.
39. ಕೈಫಿಯತ್ತು, ನಂಬರು –1,2,3. (ಸು.ಸಂ.ಇ., ಪುಟ-14)
40. ಪಾಲಾಕ್ಷ. ಆರ್. ಹಿರೇಮಠ – ಆದಿಲಶಾಹಿ ರಾಜವಂಶ, ಪುಟ-39.

ಚಿತ್ರ 1 ಔರಂಗಜೇಬನ ಸ್ವಹಸ್ತ ಮುದ್ರೆಯುಳ್ಳ ಒಪ್ಪಂದ

ಕೃಪೆ : ಸ.ಸಂ.ಇ.

ಮಾತ್ರ ಔರಂಗಜೇಬನ ಬೆದರಿಕೆಗೆ ಬಗ್ಗಲಿಲ್ಲ. ಬಿಜಾಪುರ ಬಾದಶಹರಿಗೆ ಭೇದ ಬಗೆಯದ್ದೆ ಬೆಂಬಲಿಸಿ ಮೊಗಲರ ವಿರುದ್ಧ ತಂದೆ-ಮಕ್ಕಳಿಬ್ಬರೂ ಖಡ್ಗ ಇರಿದರು. ವಿಜಾಪುರದ ಪರವಾಗಿ ಅಫಜಲಖಾನ ಮತ್ತು ಖಾನಮಹ್ಮದ ಸರದಾರರ ಜೊತೆಗೂಡಿ ಮೊಘಲರ ವಿರುದ್ಧ ಕಾಸಲು ಹೋದಾಗ ಪಿಡ್ಡನಾಯಕನಿಗೆ ಔರಂಗಜೇಬ ಪತ್ರವೊಂದನ್ನು ಬರೆದ —

" ನೀನು ಮುಸಲ್ಮಾನನಾಗಿದ್ದರೆ ನಮ್ಮ ಧರ್ಮಬಂಧುವಾಗಿರುತ್ತಿದ್ದಿ. ಸುರಕ್ಷಿತನೂ ಆಗಿರುತ್ತಿದ್ದಿ. ಪತನವಿಲ್ಲದೆ ಬಾಳಿ, ಅನೇಕ ಸಂಕಟ, ಗಳಿಂದ ಸಂರಕ್ಷಿಸಲ್ಪಡುತ್ತಿದ್ದಿ. ಆದರೆ ನೀನು ಮುಸಲ್ಮಾನನಾಗಿಲ್ಲವೆಂಬುದು ಖೇದಕರ ಸಂಗತಿ. ಪ್ರಖ್ಯಾತನಾದ, ಕೃಪೆಗೆ ಪಾತ್ರನಾದ ಪಿಡ್ಡ ನಾಯಕನೆ, ಬಾದಶಹನ ಕೃಪೆಗೆ ಗೌರವ ತಾಳಿ ನೀನು ತಿಳಿದುಕೊಳ್ಳುವದೇನಂದರೆ, ಪ್ರಸ್ತುತ ಪಕ್ಷೀ ಪತಿಯು ಕೃಪಾಪೋಷಿತನಾಗಿ, ನಸರತಾಬಾದದ ಸರದೇಸಗತಿಯನ್ನು ಪೂರ್ವದಂತೆ ನಡೆದುಬರಲು ರಾಜಾಜ್ಞೆಯಾಗಿದೆ. ಬಾದಶಹನ ಅನುಗ್ರಹ ಪಡೆಯಲು ನಿನ್ನ ಮಗನಾದ ಪಾಮನಾಯಕನನ್ನು ನಮ್ಮ ಸನ್ನಿಧಿಗೆ ಕಳುಹಿಸು. ಬಾದಶಹನಿಂದ ಮನಸಬು ಪಡೆದು ಮರ್ಯಾದಿತನಾಗಬೇಕು. ಪವಿತ್ರವಾದ ರಮಜಾನ 4, ಜಲೂಸಿನ 1ನೇ ವರ್ಷ".

ದಂಡನದಲ್ಲಿ ಆದಿದ್ದ ಔರಂಗಜೇಬನ ಸ್ವಹಸ್ತ ಮುದ್ರಿಕೆ ಹೊಂದಿರುವ ಮೇಲಿನ ವಿಷಯದ ಪತ್ರವು ಸಧ್ಯ ಸುರಪುರದಲ್ಲಿದ್ದು, ಅದು ಪಸನಕೊಡುವ ಒಪ್ಪಂದವಾಗಿದೆ. 'ಗಡ್ಡಿಪಿಡ್ಡನಾಯಕ ಮತ್ತು ಮಗ ಪಾಮನಾಯಕನ ಪ್ರಬಲ ಶಕ್ತಿಯನ್ನು' ಔರಂಗಜೇಬನ ಸದರಿ ಪತ್ರದಿಂದ ತಿಳಿಯುತ್ತದೆ. ವಿಜಾಪುರದವರಿಂದ ಇವರನ್ನು ಪ್ರತ್ಯೇಕಿಸಲು ಈ ರೀತಿ ನಾಟಕ ಆಡಿ, ಆಹ್ವಾನಿಸುವ ರೀತಿ ನೋಡಿದರೆ ಮೊಘಲರ ದಾಳಿ ನೀತಿ ಹೇಗಿತ್ತೆಂದು ಅರ್ಥವಾಗುತ್ತದೆ.

ಅಲಿಆದಿಲಶಹನು ಬಿಜಾಪೂರ ರಾಜ್ಯದ ರಾಜನಾದ ಮೇಲೆ 'ಸಮಸ್ಯೆಗಳು' ಸರಮಾಲೆಯಾದವು. ಅಧೀನದಲ್ಲಿದ್ದ ಸರದಾರರ ಸ್ವಾತಂತ್ರ್ಯ, ಔರಂಗಜೇಬನ ಆಕ್ರಮಣ, ಶಿವಾಜಿಯ ಲೂಟಿ ಇವೆಲ್ಲವುಗಳಿಂದ ಬಿಜಾಪೂರ ತತ್ತರಿಸಿಹೋಯಿತು. ಆಗ ಬೆನ್ನೆಲುಬಾಗಿ ಬಂದವರೆಂದರೆ ಪಿಡ್ಡನಾಯಕ ಮತ್ತು ಪಾಮನಾಯಕ. ವೈರಿಗಳಿಂದ ಮಿರಜಪ್ರಾಂತವನ್ನು ರಕ್ಷಿಸಿದಕ್ಕೆ ಪ್ರತಿಯಾಗಿ ತಾಳಿಕೋಟೆ ಪರಗಣಿ, ನಾಲ್ವತ್ವಾಡದ ಸರದೇಸಗತಿ ಹಾಗೂ ಕೊಡೆಕಲ ಸಮತಿನ ಸರದೇಸಗತಿಯನ್ನು ಎತಬಾರಖಾನನ ಮನವಿಮೇರೆಗೆ ಅಲಿ ಆದಿಲಶಾ — ಕ್ರಿ.ಶ.1659ರಲ್ಲಿ ಪಿಡ್ಡನಾಯಕನಿಗೆ ವಂಶಪಾರಂಪರ್ಯವಾಗಿ ನಡೆದು ಬರುವಂತೆ ನೀಡಿದನು.

ಇದಾದ ಒಂದು ವರ್ಷದಲ್ಲಿ ಅಂದರೆ ಕ್ರಿ.ಶ.1660ರಲ್ಲಿ ಆರಿಕೇರಿ ಸಮ್ಮತಿನ ಹೆವನೂರನ್ನು ಪೂರ್ವದಂತೆ ಪಿಡ್ಡನಾಯಕನ ವತನಕ್ಕೆ ಒಳಪಡಿಸಲಾಗಿದೆ ಎಂದು ನಸರತಾಬಾದಿನ ಹವಾಲ್ದಾರ ಮತ್ತು ಅಧಿಕಾರಿಗಳಿಗೆ ಅಲಿ ಆದಿಲಷಾಹ ಸೂಚಿಸಿದನು.[41]

ಪಿತ್ರಾರ್ಜಿತ ಆಸ್ತಿಯಲ್ಲಿ ತನಗೆ ಪಾಲು ಬರಬೇಕೆಂದು ಪಿಡ್ಡನಾಯಕನು ಅಣ್ಣನ ಮೇಲೆ ದಾವೆ ಹೂಡಿದ. ತಮ್ಮ ತಂಗಿಯ ಮಧ್ಯಸ್ಥಿಕೆಯಿಂದ ಕಕ್ಕೇರಿ ಮೀರಾಸಿ ಮತ್ತು ಬೈಚಬಾಳ ಗ್ರಾಮಗಳನ್ನು ಸಮನಾಗಿ ಎರಡು ಭಾಗ ಮಾಡಿ ಹಂಚಿಕೊಂಡ ಕೈಫಿಯತ್ತಿನ ಹೇಳಿಕೆಯೊಂದಿದೆ. ಕ್ರಿ.ಶ.1664ರಲ್ಲಿ ಹೊರಡಿಸಿದ ಅಲಿಆದಿಲಷಾಹನ ಸನದು ಇದನ್ನು ದೃಢೀಕರಿಸುತ್ತದೆ.

<u>ವ್ಯಕ್ತಿತ್ವ :</u>

ಕೇವಲ ಬೈದಬಾಳ ಸಮ್ಮತಿನ ಸರದೇಸಾಯಿಯಾಗಿದ್ದ ಜಕ್ಕಪ್ಪದೇಸಾಯಿ ಮಗ ಗಡ್ಡಿಪಿಡ್ಡನಾಯಕನು ತನ್ನಲ್ಲಿಯ ಅಪಾರ ಆತ್ಮವಿಶ್ವಾಸ ಮತ್ತು ದೂರದೃಷ್ಟಿಯ ಬಲದಿಂದ ಇಡೀ ಸಗರನಾಡಿನ ವತನ ಸಂಪಾದಿಸಿದ. ಸಾಮ್ರಾಜ್ಯ ಅಧಿಪತಿಗಳ ಸಂಪರ್ಕಗಳಿಸಿದ. ಆದಿಲಷಾಹ ರಾಜರಿಗೆ ಒಮ್ಮೆ ಸೈನ್ಯಶಕ್ತಿ ತೋರಿಸಿ ಇನ್ನೊಮ್ಮೆ ಸೈನ್ಯ ಸಹಾಯ ಬೆರಸಿ ಮುಂತಾದ ಜಾಹಾಗೀರುಗಳನ್ನು ಗಳಿಸಿದ.[42] ಆದರೆ ಒಂದು ಸಂಸ್ಥಾನವೆಂಬುದರ ಕಲ್ಪನೆಯನ್ನು ಈ ಭಾಗಕ್ಕೆ ತಂದುಕೊಡುವಲ್ಲಿ ಈತನಿಗೆ ಶಕ್ಯವಾಗಲಿಲ್ಲ. ಕೊಡೆಕಲ, ತಾಳಿಕೋಟೆ ತರುವಾಯ ಇವರಿಗೆ ವಾಗಿನಗೇರಿಯೇ ಕೇಂದ್ರ ಸ್ಥಳವಾಗಿತ್ತು. ಸಗರಗಢ ಕೋಟೆಯ ಸ್ವಾಧೀನದಿಂದ ಸಂಸ್ಥಾನವೊಂದರ ಸ್ವರೂಪವೇನೊ ಸಾಧ್ಯವಾಯಿತು; ಆದರೆ ಸಮರ್ಥ ಸರಕಾರ ಸಬಲವಾಗಲಿಲ್ಲ. ಯಾಕೆಂದರೆ ಒಪ್ಪಂದದ ಪ್ರಕಾರ ಆದಿಲಷಾಹ ಸರದಾರರಿಗೆ ಸಗರಗಢ ಕೋಟೆ ಬಿಡುವದರೊಂದಿಗೆ ವಾಗಿನಗೇರಿಗೆ ಮಾತ್ರ ವಿಶ್ರಮಿಸಿದ.

<u>ಪರಿವಾರ :</u>

ಜಕ್ಕಪ್ಪದೇಸಾಯಿಯ ಕಿರಿಯ ಮಗನಾದ ಗಡ್ಡಿಪಿಡ್ಡನಾಯಕನು ಗಡ್ಡಿಲಿಂಗನಾಯಕನೆಂಬ ಅಣ್ಣನನ್ನು ಮತ್ತು ಕರಿಗುಡ್ಡದ ಎಂಕಮ್ಮ ಹಾಗೂ ಎಡಗಲ್ಲಿನ ಎಲ್ಲವ್ವರನ್ನು ಸಹೋದರಿಯರಾಗಿ ಹೊಂದಿದ್ದ. ಆರುಜನ ಪತ್ನಿಯರನ್ನು ಪಡೆದಿದ್ದರೂ ಸಂತತಿ ಭಾಗ್ಯ ಮಾತ್ರ ಸಿಗಲಿಲ್ಲ. ಆಗ ಅಣ್ಣನ ಮಕ್ಕಳಾದ ಅನ್ನದಾನಿ ಸೋಮಪ್ಪನಾಯಕ, ಜಕ್ಕಪ್ಪನಾಯಕ, ಜಡಿಸೋಮನಾಯಕ,

---

41. ಸು.ಸಂ.ಇ. ಪುಟ-21.
42. Jadunath Sarkar, Shivaji and His Times p-301.

ಹುಚ್ಚಸೋಮನಾಯಕ, ಪಾಮನಾಯಕರೆಂಬ ಐದು ಜನರಲ್ಲಿ ಐದನೆಯವನಾದ ಪಾಮನಾಯಕನನ್ನೇ ದತ್ತಕ ಪುತ್ರನನ್ನಾಗಿ ಮಾಡಿಕೊಂಡ. ಕ್ರಿ.ಶ. 1666ರಲ್ಲಿ ಪಿಡ್ಡನಾಯಕನ ಸಾವು ಸಂಭವಿಸಿದ ತರುವಾಯ ಆತನ ಎಲ್ಲಾ ಅಧಿಕಾರಗಳು ಪಾಮನಾಯಕನಿಗೆ ವರ್ಗವಾದವು.

(2) <u>ಹಸರಂಗಿ ಪಾಮನಾಯಕ :(1666-87)</u>

ಗಡ್ಡಿಪಿಡ್ಡನಾಯಕ ಸಂಪಾದಿಸಿದ ಸಗರನಾಡ ಮೇಲಿನ ಸರದೇಸಗತಿಯನ್ನು ಸಂರಕ್ಷಿಸುವ ಮತ್ತು ಮುಂದುವರಿಸುವ ಮಹತ್ವಪೂರ್ಣ ಜವಾಬ್ದಾರಿ ಪಾಮನಾಯಕನ ಪಾಲಿಗೆ ಬಂತು. ಈ ಅಧಿಕಾರ ಬರುವ ಪೂರ್ವದಲ್ಲಿಯೇ ಗಡ್ಡಿಪಿಡ್ಡನಾಯಕನೊಂದಿಗೆ ಜೊತೆಗೂಡಿ ಹಲವಾರು ಕದನದಲ್ಲಿ ಮತ್ತು ಜಮೀನು, ಜಹಗೀರು ವಿಸ್ತರಣೆಯಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಂಡ ಪಾಮನಾಯಕನಿಗೆ ರಾಜ್ಯಕಾರ್ಯದ ಸಮಗ್ರ ಪರಿಚಯ ಲಭಿಸಿತ್ತು.

ಪಿಡ್ಡನಾಯಕನ ಪರಿಶ್ರಮದ ಬೀಡುಗಳೆಲ್ಲ ಅಳವಡಿಸಿಕೊಂಡ ಪಾಮನಾಯಕ ವಾಗಿನಗೇರಿ ಮತ್ತು ಸಗರದುರ್ಗದ ಮೂಲಕ ಸುಭದ್ರ ಸಂಸ್ಥಾನ ನಡೆಯಿಸುವ ಮಹತ್ವಾಕಾಂಕ್ಷೆ ತಾಳಿದ. ತಂದೆಯ ಜಹಗೀರುಗಳೆಲ್ಲ ತನ್ನ ಹೆಸರಿಗೆ ವರ್ಗಾಯಿಸಿಕೊಳ್ಳುವಲ್ಲಿ ಆದಿಲಶಾಹಿ ಅರಸನಿಂದ ಸಾಮಂತನಾಗಿ ಸನದು ಸ್ವೀಕರಿಸಿದ.[43] ಸಂಸ್ಥಾನ ವಿಸ್ತರಣೆ, ಸರಕಾರ ರಚನೆ ಇವೆರಡು ಪಾಮನಾಯಕನ ಮುಂದಿರುವ ಸಧ್ಯದ ಪ್ರಮುಖ ಕರ್ತವ್ಯಗಳಾಗಿದ್ದವು.

ಪಾಮನಾಯಕನಿಗೆ ವಿಜಾಪೂರ ಬಾದಶಹರು ನೀಡಿದ ಫಾರಸಿ ಸನದು, ಪತ್ರ, ಫರ್ಮಾನು ಒಳಗೊಂಡ ಒಟ್ಟು 26 ದಾಖಲೆಗಳು ಮತ್ತು ಕೈಫಿಯತ್ತುಗಳು ಆತನ ಸುಮಾರು 22 ವರ್ಷ ದೀರ್ಘ ಕಾಲದ ಆಳ್ವಿಕೆಯ ಆಡಳಿತವನ್ನು ಗುರುತಿಸುವಲ್ಲಿ ನಮಗಿಂದು ಸಹಾಯಕವಾಗಿವೆ.

<u>ಬಿರುಕುಬಿಟ್ಟ ಬಿಜಾಪುರ :</u>

ಇಮ್ಮಡಿ ಅಲಿಆದಿಲಶಹನ ಅಂತ್ಯದಲ್ಲಿ ವಿಜಾಪೂರ ಸಾಮ್ರಾಜ್ಯದ ಅಂತ್ಯವು ಆಗಿತ್ತು. ಸಿಂಹಾಸನವೇರಿದ ಸಿಕಂದರ ಆದಿಲಶಹ ಸರ್ದಾರರನ್ನು ಸದೆಬಡಿಯುವ ಸಾಮರ್ಥ್ಯ ಹೊಂದದೆ ಇಡೀ ರಾಜ್ಯವನ್ನು ಅಂತಃಕಲಹದ ಅರಾಜಕತೆಗೆ ನೂಕಿದ. ಸರದಾರರೆಲ್ಲ ಸ್ವತಂತ್ರರಾದಂತೆ, ಮಂತ್ರಿಗಳೇ

---

43. F.P.C. 15-Oct.,1852, Nov. 40

ಚಿತ್ರ 2 ಹಸರಂಗಿ ಪಾಮನಾಯಕ

ಕೃಪೆ : ನು.ಸಂ.ಇ.

ಮುಖ್ಯರೆನಿಸತೊಡಗಿದರು. ಅಪ್ರಾಪ್ತ ಸಿಕಂದರ ಷಹನ ಅರಸೊತ್ತಿಗೆಯಲ್ಲಿ ವಜೀರನಾದ ಖವಾಸ ಖಾನನೇ ಹನ್ನೆರಡು ವರ್ಷ ಆಳ್ವಿಕೆ ನಡೆಯಿಸಿದ. ಮೊಘಲರ ದಾಳಿ, ಶಿವಾಜಿಯ ಲೂಟಿ, ಸರದಾರರ ಸ್ವಾತಂತ್ರ್ಯಗಳೆಲ್ಲ ಬಿಜಾಪೂರ ಆಳಿತಕ್ಕೆ ಬಲವಾದ ಪೆಟ್ಟುಕೊಟ್ಟವು; ಬಿಕ್ಕಟ್ಟು ತಂದವು. ಇಂಥ ಬಿಕ್ಕಟ್ಟಿನಲ್ಲಿಯೇ ಒಕ್ಕಟ್ಟು ಸಾಧಿಸಲು ಹೋಯಿ ಸಿಕಂಧರ ತನ್ನ ಅಕ್ಕನನ್ನು ಔರಂಗಜೇಬನ ಮಗನಿಗೆ ಕೊಟ್ಟು ರಕ್ತ ಸಂಬಂಧರಕ್ಷಿಸಿದ. ಆದರೆ ಔರಂಗಜೇಬನ ಅಂತರಂಗದಲ್ಲಿ ಅಂತಃಕರಣವೇ ಇಲ್ಲದಿರುವುದು ತರುವಾಯವೇ ತಿಳಿಯಿತು. ಆದಿಲಶಾಹ ರಾಜ್ಯದಲ್ಲಿ ಹಬ್ಬಿದ ಸುಭೇದಾರ, ಸರದಾರರನ್ನೆಲ್ಲ ತನ್ನಂತೆ ಮಾಡಿಕೊಂಡು ಶಿವಾಜಿ ವಿರುದ್ಧನಾಗಿದ. ಒಂದೇ ಏಟಿಗೆ ಎರಡು ಹಕ್ಕಿಗಳನ್ನು ಉರುಳಿಪ ಬೇಕೆಂಬುದು ಔರಂಗಜೇಬನ ಹಠ.

ಸನದು ಸಂಪಾದನೆ : ಇನಾಮು ವಿಸ್ತರಣೆ :

ಇಮ್ಮಡಿ ಅಲಿಆದಿಲಶಹನ ಆಳ್ವಿಕೆಯಲ್ಲಿ ತನ್ನ ಪರಾಕ್ರಮ ಪ್ರಕಟಿಸಿದ ಪಾಮನಾಯಕ ಅನೇಕ ಸನದುಗಳನ್ನು ಸಂಪಾದಿಸಿದ. ಕ್ರಿ.ಶ. 1672ರಲ್ಲಿ ಹೊರಡಿಸಿದ ಸನದೊಂದರಲ್ಲಿ ತಾರೀಖ ಪತ್ರಿ ಜಂಗಖಾನನ ವಶದಲ್ಲಿದ್ದ ಯರಗೋಳ ಮಹಾಜಿಯನ್ನು ಪಾಮನಾಯಕನಿಗೆ ಕೊಟ್ಟ ಬಗ್ಗೆ ಅಮಲದಾರ ಸಿದ್ದಿಸಂಬಲ ಮತ್ತು ಅಹಸನಬಾದ (ಕಲಬುರ್ಗಿನಗರ) ಹವಾಲ್ದಾರನ ಗಮನಕ್ಕೆ ತರಲಾಯಿತು. ಆದರೆ ಕಾರಣಾಂತರದಿಂದ ಅದೇ ವರ್ಷ ಈ ಸನದು ರದ್ದಾಯಿತು. ಕ್ರಿ.ಶ. 1673ರಲ್ಲಿ ಹೊರಡಿಸಿದ ಸನದಿನಲ್ಲಿ "ಬಹರಿ ಪಾಮನಾಯಕ ಸರಸದೇಸಾಯಿ ಶಹರ ಅಹಸನಾಬಾದ" ಎಂದು ಸಂಬೋಧಿಸಿ ಯಾಕಾಪೂರ, ಬಾಡಾವಾರ ಗ್ರಾಮಗಳನ್ನು ನೀಡಲಾಗಿದೆ. ಇಲ್ಲಿ ಕಂಡುಬರುವ ಪ್ರಮುಖ ವಿಷಯವೆಂದರೆ ಸಗರನಾಡಿನ ಗಡಿಗೆ ಸೀಮಿತವಾಗಿದ್ದ ಪಾಮನಾಯಕ ಈಗ ಕಲಬುರ್ಗಿಯ ಸರಸರದೇಸಗತಿಯ ಸುಬೇದಾರನಾಗಿರುವುದು. ಸಿದ್ದಿಸಂಬಲನು ವಿಜಾಪುರದ ವಿರುದ್ಧ ತಿರುಗಿಬಿದ್ದಾಗ ಪಾಮನಾಯಕನೇ ಪ್ರಬಲವಾಗಿ ವಿರೋಧಿಸಿ ವಿಜಾಪುರಕ್ಕೆ ವಿಜಯ ತಂದನು. ಇದಕ್ಕೆ ಪ್ರತಿಫಲವಾಗಿ ಫಿರೋಜಾಬಾದ ಕಸಬಿ, ಹೊಸ್ಗಿಂಟಿ, ಬೆಳಗುಂಪಿ ಹಳ್ಳಿಗಳನ್ನು ವಂಶಪಾರಂಪರ್ಯವಾಗಿ ಕ್ರಿ.ಶ. 1674ರಲ್ಲಿ ಪಡೆದ. ಸರದೇಸಾಯಿ ಮಾಮಲೆ ನಸರತಾಬಾದ ಮತ್ತು ಸರಸರದೇಸಾಯಿ ಶಹರ ಅಹಸನಾಬಾದಿಯ ಅಧಿಕಾರ ಧರಿಸಿದ ಹಸರಂಗಿ ಪಾಮನಾಯಕ ವಿಜಾಪೂರ ಬಾದಶಹನಲ್ಲಿ ಮನವಿಯೊಂದನ್ನಿರಿಸಿ "ದೇವದುರ್ಗ (ಕಾದಿರದುರ್ಗ) ಕಿಲ್ಲೆಯ ಪೂರ್ವಕ್ಕಿರುವ ಮಹತ್ವಪೂರ್ಣ ಪ್ರದೇಶವಾಗಿದ್ದು, ಇದರ ಕೆಳಗಿನ

ಹಳ್ಳಿಗಳನ್ನು ಕನಕಗಿರಿಯ ಉಡಚನಾಯಕ ಕಸಿದುಕೊಂಡು ಇಲ್ಲಿಯ ಜನರಿಗೆ ಬಹುವಾಗಿ ಕಷ್ಟ ಕೊಟ್ಟಿದ್ದಾನೆ. ಕಾರಣ, ತಮ್ಮ ದೌಲತ್ತಿನ ಹಿತಚಿಂತಕನು, ಸಾಮಂತನು ಆದ ನನಗೆ ಅಹಸನಾಬಾದ ನಸರತಾಬಾದ್, ದೇವದುರ್ಗ ಕೆಳಗಿನ ಎಲ್ಲಾ ಹಳ್ಳಿಗಳನ್ನು ದಯಪಾಲಿಸಬೇಕೆಂದು, ಇದಕ್ಕೆ ಪ್ರತಿಯಾಗಿ ವಾರ್ಷಿಕ ಐದುಸಾವಿರ ಹೊನ್ನು ನಜರಾಣಿ ನೀಡುವೆನೆಂದು'' ವಿನಂತಿಸಿದನು. ಪಾಮನಾಯಕನ ಮನವಿ ಮೇರೆಗೆ ಬಾದಷಹ 1085 ನೇ ಹಿಜರಿ ಶಾಬಾನನ 3ನೆಯ ತಾರೀಖಿನಂದು ಫರ್ಮಾನು ಹೊರಡಿಸಿ ವಂಶಪಾರಂಪರ್ಯವಾಗಿ ಮೇಲ್ಕಾಣಿಸಿದ ಇನಾಮು ನೀಡಿ ಮನ್ನಿಸಿದನು.

ಶೇಖಮಿನಹಾಜನ ಕಲಬುರ್ಗಿ ಕಾಳಗಕ್ಕೆ ಸೈನ್ಯ ಸಹಾಯ ನೀಡಿದ ಪ್ರಯುಕ್ತ ಮೈದರಗಿ ಪರಗಣೆಯನ್ನು, 1086ನೇ ಹಿಜರಿ ಸಫರನ 1ನೇ ತಾರೀಖಿನಂದು, ಹಾಗೂ ಕೊಡೆಕಲ್ಲು ಸಮತಿನ ಬೂದಿಹಾಳ ಗ್ರಾಮವನ್ನು 1086ನೇ ಹಿಜರಿ 7ನೆಯ ರಬಿಲಾವಲದಂದು ಮತ್ತು 1086ನೇ ಹಿಜರಿ 1ನೇ ರಬಿಆಖ್ಖರಿಯಲ್ಲಿ ರದ್ದೇವಾಗಿ, ಮರಳಿ ಹಳ್ಳಿಗಳನ್ನು ಪೂರ್ವದಂತೆ ಅನುಭವಿಸಲು ಪಾಮನಾಯಕನಿಗೆ ಬಿಜಾಪೂರ ಬಾದಷಹ ಬರೆದುಕೊಟ್ಟನು.[44] ಈ ರೀತಿ ನೀಡಿದ ಅನೇಕ ಸನದುಗಳಲ್ಲಿ ಕ್ರಿ.ಶ. 1674ರಲ್ಲಿಯ ಫರ್ಮಾನು ಅತಿಪ್ರಮುಖವಾದುದು. ಇದನ್ನು ಮತ್ತು ಕೈಫಿಯತ್ತನ್ನು ಆಧರಿಸಿ ಬರೆದ ಕಪಟರಾಳ ಕೃಷ್ಣರಾಯರ ದೀರ್ಘ ಬರಹದ ವಿಶ್ಲೇಷಣೆಯಲ್ಲಿ ಉಲ್ಲೇಖಿಸಲಾಗಿದೆ.[45] ದೌಲತ್ತಿನ ಹಿತಚಿಂತಕನಾದ ಪಾಮನಾಯಕನಿಗೆ ಮೌಜೆ ನಸರತಾಬಾದ, ಶಹರ ಅಹಸನಾಬಾದ, ಮಹಮದ ಶಾಹಿ (ಬಾಗೋಡಿ), ಮೌಮರಿ ನಾಲ್ವತ್ವಾಡ (ಮಹಮದಪುರ), ಮೌಮರಿ ರಾಯಚೂರ ಮತ್ತು ಇಬ್ರಾಹಿಂಗಡ (ಯಾದಗೀರ) ವ್ಯಾಪ್ತಿಯ ಪರಗಣಿ, ಸಮತು, ಕಸಬೆ, ಪೇಟೆ, ಮಹಲು, ಮತ್ತು ಮುಂತಾದ ಊರುಗಳ ಮೇರಿ ಸರದೇಸಗತಿ, ಸರಸರದೇಸಗತಿ, ದೇಶಕುಲಕರಣಿಕಿ, ಸರನಾಡಗೌಡಕಿ, ದಾಹಿಜಾ, ವರತನ, ಇನಮು, ಪಸಗಿ, ಪಳಗಿ, ಮೀಟುಮಾರಕ, ಚಾವರಾರ ಅಧಿಕಾರಗಳನ್ನು ನೀಡಲಾಯಿತೆಂದು[46] ತಿಳಿದುಬರುತ್ತದೆ.

<u>ಸರದಾರರ ಸಂಬಂಧ :</u>

ಇಷ್ಟೆಲ್ಲಾ ಸರಸರದೇಸಗತಿಯನ್ನು ಪಾಮನಾಯಕನಿಗೆ ಬಿಜಾಪೂರ ಬಾದಶಹ ನೀಡಿದ್ದು ನೋಡಿದರೆ ಆಶ್ಚರ್ಯವಾಗುತ್ತದೆ. ಕಾರಣವಿದೆ. ಪಾಮನಾಯಕ ಈ ಸನದುಗಳನ್ನೆಲ್ಲ ಪಡೆದ

---

44. ಸು.ಸಂ.ಇ., ಪುಟ-30.
45. -ಅದೇ-.
46. ಕೈಫಿಯತ್ತು, ನಂಬರು -4.

ಸಂದರ್ಭ ಕೊನೆಯ ಆದಿಲಶಾಹ ಸಿಕಂದರನ ಆಳ್ವಿಕೆಯಲ್ಲಿ. ಪಟ್ಟವೇರಿದಾಗ ಇನ್ನೂ ಮಗುವಾಗಿದ್ದ ಸಿಕಂದರನ ಅಪ್ರಾಪ್ತ ವಯಸ್ಸಿನಿಂದ ಮಂತ್ರಿಗಳೇ ರಾಜ್ಯದ ರಾಜ್ಯಭಾರ ಹಿಡಿದಿದ್ದರು. ವಜೀರನಾದ ಖವಾಸಖಾನ ಪಾಮನಾಯಕನಿಗೆ ಬಹುಹತ್ತಿರದ ವ್ಯಕ್ತಿಯಾಗಿದ್ದ. ಅಲ್ಲದೆ ಹಿಂಡಿ ಸಗರನಾಡು ಭಾಗದ ಆಡಳಿತಾಧಿಕಾರಿಯಾಗಿ[47] ನೇಮಕವಾಗಿದ್ದಾಗ ಅನ್ಯೋನ್ಯ ಸಂಬಂಧ ಏರ್ಪಟ್ಟಿತ್ತು.

ಆದಿಲಶಾಹಿ ರಾಜ್ಯದ ಪೂರ್ವೋತ್ತರ ಗಡಿಯಲ್ಲಿ ಪಾಮನಾಯಕನಂಥ ಪ್ರಬಲ ಪಾಳೆಗಾರನ ಅವಶ್ಯಕತೆ ಬಿಜಾಪುರಕ್ಕಿತ್ತು. ಹೀಗಾಗಿ ಸನದುಗಳು ಪಾಮನಾಯಕನಿಗೆ ದೊರೆತವು. ಶೇಖಮಿನಹಾಜ ನೆಂಬಾತ ಸಗರಕಿಲ್ಲೆಯ ಹವಾಲ್ದಾರನಾಗಿದ್ದ. ಈತನ ಸ್ನೇಹವು ಪಾಮನಾಯಕನಿಗೆ ಗಾಢವಿತ್ತು. ರಾಜ್ಯ ಕಾರ್ಯದ ನಿಮಿತ್ತ ಶೇಖಮಿನಹಾಜ ವಿಜಾಪುರಕ್ಕೆ ಹೋದವೇಳೆ ಸಗರಕಿಲ್ಲೆ ಪಾಮನಾಯಕನ ಪಾಲಾಯಿತು. ಹೀಗೆ ವಿಜಾಪುರ ಪ್ರಾಂತ್ಯದ ಸರದಾರರಾಗಿದ್ದ ಖವಾಸಖಾನ, 'ಶೇಖಮಿನಹಾಜ, ಸಿದ್ದಿಮಿಯಾರ ಸಂಪರ್ಕವು ಪಾಮನಾಯಕನಿಗೆ ಒಂದು ರೀತಿಯ ವರದಾನವಾಗಿತ್ತು. ದುನಿ ಮುಸಲ್ಮಾನ ಸರದಾರರ ಸಂಬಂಧವನ್ನೇ ಬಹುವಾಗಿ ಅವಲಂಬಿಸಿದ್ದು ಪಾಮನಾಯಕನಿಗೆ ಅನುಕೂಲವೇ ಆಯಿತು. ಇಂಥ ಸಂಬಂಧವೇ 'ಸನದುಗಳ ಸಂಪಾದನೆಗೆ' ಮತ್ತು 'ಪೂರ್ವದ 'ಇನಾಮು ವಿಸ್ತರಣೆಗೆ' ಮುಖ್ಯ ಕಾರಣವಾಗಿತ್ತೆನ್ನುವ ವಿಷಯ ಮರೆಯಲಾಗದು.

<u>ದಿಲೇರಖಾನನ ದಾಳಿ :</u>

ಔರಂಗಜೇಬನ ಆದೇಶ ಹೊತ್ತ ದಿಲೇರಖಾನ ದಕ್ಷಿಣ ದೇಶದ ಮೇಲೆ ದಂಡೆಯಾತ್ರೆ ಹೊರಟ. ಆಗ ವಿಜಾಪುರದ ವಜೀರನಾದ ಮಸೂದಖಾನನ ಮೇಲೆ ದಿಲೇರ ಮೊದಲ ದಾಳಿಯಿಟ್ಟ. ಮಸೂದಖಾನನ ರಕ್ಷಣೆಗೆಂದು ಧಾವಿಸಿಬಂದ ಶಿವಾಜಿ 10,000 ಮರಾಠಿ ಸೈನ್ಯವನ್ನು ವಿಜಾಪುರ ಪಟ್ಟಣದ ರಕ್ಷಣೆಗೆಂದು ರವಾನಿಸಿದ. ಸ್ವತಃ ಶಿವಾಜಿಯೇ ದಿಲೇರನ ದಾಳಿ ತಡೆಯಲು ಹೊರಟ. ಆದರೆ ಮಂಗಳ ವೇಢೆ ಮೂಲಕ ಹೊರಟ ದಿಲೇರಖಾನನ ದಂಡು ಕ್ರಿ.ಶ.1679ರಲ್ಲಿ ಸಾಲೋಟಗಿ, ಕಾಸಗಾಂವ, ಅಲಮೇಲ, ಉಕ್ಕಲಿ ಊರುಗಳನ್ನು ಲೂಟಿ ಮಾಡಿ ಮುಂದೆ ಸಾಗಿತು. ಕ್ರಿ.ಶ.1680ರಲ್ಲಿ ದಿಲೇರನು ವಿಜಾಪುರ ಮುಖಾಂತರ ಸಾಗಿಬರುವಾಗ ಜೈನಾಪುರದ ದೇಸಾಯಿ ಮತ್ತು ಕಾತನಗೇರಿಯ ಗೌಡ ಎದುರಾದರು. ಎದುರಾತ ಶಕ್ತಿಗಳೆಲ್ಲ ಈತನ ದಾಳಿಗೆ ಧ್ವಂಸಗೊಂಡವು. ತನ್ನ ಸಹಸರದಾರ

47. ಶ.ತಾ.ದ. ಪುಟ-16.

ಖಿಲಾಸಖಾನನನ್ನು ಮುದಗಲ್ಲ ಪರಗಣಿಯಲ್ಲಿದ್ದಾಗ ಅಲ್ಲಿಗೂ ದಾಳಿಸಿದನು. ಆಗ ಮುದಗಲ ಗಢ
9000 ಹೊನ್ನು ಕೊಡಲೊಪ್ಪಿದ ಪ್ರಯುಕ್ತ ಅವನಿಗೆ ಜೀವದಾನ ಸಿಕ್ಕಿತು. ಈಗ ದಿಲೇರನ ದಂಡು
ಪಾಮನಾಯಕನ ಸಗರನಾಡಿಯೊಳಗೆ ನುಗ್ಗಿತು. ನೇತೃತ್ವವಹಿಸಿದ ದಿಲೇರಖಾನ ನಾಲ್ವತ್ವಾಡಕ್ಕೆ
ಮುತ್ತಿದ. ಇವನ ದರ್ಪಕ್ಕೆ ಎದುರಿದ ಅಲ್ಲಿಯ ದೇಸಾಯಿ ದಿಲೇರನ ಒಳಸಂಚು ಅರಿಯದೆ ನಸರತಾ
ಬಾದಿನ ದೇಸಗತಿಗೆ ಆಸೆಬಿದ್ದು ದಂಡಿನ ಜೊತೆ ಸಂಗಡಿಗನಾದ. ಕೊಡೆಕಲ ಮೂಲಕ ರಾಯನಪಾಳೆ
ಕಿಲ್ಲೆಯ ಮೇಲೆ ಮುತ್ತಿಗೆ ಹಾಕಿ 2000 ಜನರನ್ನು ಸೆರೆಹಿಡಿದು ತಾಳಿಕೋಟೆಗೆ ತಂದರು. ತನ್ನ ಗಡಿ
ಯೊಳಗೆ ಪ್ರವೇಶಿಸಿದ ದಾಳಿಕೋರ ದಿಲೇರಖಾನನ ಉಪಟಳಕ್ಕೆ ಪಾಮನಾಯಕ ಉರಿದೆದ್ದನಾದರೂ
ಸಂದರ್ಭವರಿತು ಸಂಘರ್ಷ ಬಿಟ್ಟು; ಸಂಧಾನಕ್ಕೆ ಬಂದ. 10,000 ಹೊನ್ನು ಕೊಡುವದಾಗಿ ವಕೀಲ
ನೊಂದಿಗೆ ಹೇಳಿಕಳಿಸಿ ಲೂಟಿ ನಿಲ್ಲಿಸಲು ವಿನಂತಿಸಿದನು. ಆದರೆ ದಿಲೇರನಿಂದ ಬಂದ ಉತ್ತರ ಲೂಟಿ
ನಿಲ್ಲಿಸಲು 3 ಲಕ್ಷ ಹೊನ್ನು ಬೇಡಿಕೆ ಆಗಿತ್ತು. ಜೊತೆಗೆ ವಿಜಾಪುರದ ವಿರುದ್ಧ ನನಗೆ ನಿನ್ನೆಲ್ಲ
ಸೈನ್ಯ ಸಹಾಯಬೇಕೆಂಬ ಆದೇಶವಿತ್ತು. ಈ ಕರಾರು ಒಪ್ಪಿಕೊಳ್ಳುವವರೆಗೂ ಸಗರನಾಡಿನಲ್ಲಿ
ಲೂಟಿ, ಸುಲಿಗೆ ಸಹಜವಾಗಿ ಸಾಗುವದೆಂದು ಸಾರಿದ. ಅದಕ್ಕೆ ದರ್ಶನಾಪೂರ, ಮುದ್ದರಕಿ ಗ್ರಾಮ
ಗಳನ್ನು ಸುಟ್ಟು ಬೂದಿಮಾಡಿ ಸಾಕ್ಷಿಯಾಗಿಸಿದನಲ್ಲದೆ, ಅಲ್ಲಿಂದ ಗೋಗಿಗೆ ಬಂದು ತಳೂರಿದನು.
ಯಾಕೆಂದರೆ ಸಗರನಾಡಿನ ಕೇಂದ್ರ ಕೋಟೆ ಶಹಪುರವೇ ಆಗಿತ್ತು. ಅದನ್ನೊಂದು ಗೆದ್ದರೆ ಸಂಪೂರ್ಣ
ಸಗರನಾಡಿ ಸ್ವಾಧೀನವಾಗುವದೆಂದು ಯೋಜಿಸಿದ. ತನ್ನ ಅಪಾರ ಸೈನ್ಯವನ್ನು ಸಗರಾದ್ರಿ (ಶಹಪುರ)
ಸುತ್ತುವರಿಯಲು ಆಜ್ಞಾಪಿಸಿದ. ಪ್ರಮುಖ ಸರದಾರರಾದ ಖಿಲಾಸಖಾನ ಮತ್ತು ಅಬ್ದುಲಗಫೂರ
ಕಿಲ್ಲೆಗೆ ಎದುರಾಗಿ ತೋಪುಗಳನ್ನು ಏರಿಸಿದರು. ಕೊನೆಗೆ ಕದನ ಅನಿವಾರ್ಯವೆಂದರಿತ ಪಾಮನಾಯಕ
ಸೈನ್ಯಕ್ಕೆ ಹುರಿದುಂಬಿಸಿ ಸಗರಾದ್ರಿ ಕೋಟೆಯ ಸಂರಕ್ಷಣೆಗೆ ಕಂಕಣ ತೊಟ್ಟ. ಎರಡು ಬಣಗಳ ನಡುವೆ
ಘೋರ ಕಾಳಗ ಆರಂಭವಾಯಿತು.

ಅಂದು ರಾತ್ರಿ ಗೋಗಿಯಲ್ಲಿ ವಿಶ್ರಾಂತಿ ಪಡೆದ ದಿಲೇರಖಾನ ಮತ್ತೆ ಮರುದಿನ
ಯುದ್ಧಕ್ಕೆ ಸಿದ್ಧನಾದ. ಕೋಟೆಯ ಮಹಾದ್ವಾರ (ದಿಗ್ಗಿ ಅಗಸಿ) ಮುರಿಯಲು ಶತಪ್ರಯತ್ನ
ಮಾಡಿದರು, ಸಾಧ್ಯವಾಗಲಿಲ್ಲ. ಅದೇ ಸಂದರ್ಭದಲ್ಲಿ ಯಾವುದೋ ದಾರಿಯಿಂದ ಒಳನುಗ್ಗಿದ
ಖಿಲಾಸಖಾನ ಶಹಪುರ ಪೇಟೆಯನ್ನು ಲೂಟಿ ಮಾಡತೊಡಗಿದ. ಇದನ್ನು ಕಂಡ ತಕ್ಷಣವೇ ಗುಡ್ಡದ
ಮೇಲಿದ್ದ ಬೇಡ ಪಡೆ ಗುಂಡಿನ ಮಳೆಗರೆಯಿತು. ಲೂಟಿಗಾರ ಮೊಗಲರು ತೋಪು, ತುಬಾಕಿಯ

ಹೊಡೆತಕ್ಕೆ ನೆಲಕ್ಕುರುಳ ತೊಡಗಿದರು. ದಿಲೇರನ ಸೈನ್ಯಕ್ಕೆ ದಿಕ್ಕೇ ತೋಚದಂತಾಯಿತು. ಕೋಟೆಯೊಳಗಿದ್ದ ಪಾಮನಾಯಕನ ಪಡೆ ನಾಲ್ಕು ದಿಕ್ಕಿನಿಂದ ಸುತ್ತುವರಿದು ಕೈಗೆ ಸಿಕ್ಕ ಮೊಘಲ ಸೈನಿಕರನ್ನು ಸಂಹರಿಸಿದರು. ಹದಿನೇಳುನೂರು ಸೈನಿಕರು, ಏಳುನೂರು ಕುದುರೆಗಳನ್ನು ಈ ಕಾಳಗದಲ್ಲಿ ಕಳೆದುಕೊಂಡ ದಿಲೇರಖಾನ ಧೈರ್ಯಗುಂದಿದ. ಮುನ್ನುಗ್ಗಿ ಬರುತ್ತಿದ್ದ ಪಾಮನಾಯಕನ ಪಡೆ ದಿಲೇರನ ಸೈನ್ಯ ಶಿಬಿರವನ್ನೇ ಧೂಳೀಪಟಮಾಡಿತು.[47ಎ] ಹೇಗೂ ಬದುಕಿ ಉಳಿದ ದಿಲೇರಖಾನ ಮರುಯತ್ನವಿಲ್ಲದೆ ತನ್ನ ದಾಳಿಯನ್ನು ಹಿಂದುರಿಗಿಸಬೇಕಾಯಿತು. "ಹೀಗೆ 1680ರಲ್ಲಿ ದಿಲೇರಖಾನನ ದಂಡಯಾತ್ರೆಯನ್ನು ತಡೆಯುವಲ್ಲಿ ಬೇಡರು ತುಂಬಾ ಪರಿಶ್ರಮ ಪಟ್ಟು[48] ಜಯಿಸಿದರೆಂಬ ಸಂಗತಿ ಹಲವು ದಾಖಲೆಗಳಿಂದ ದೃಢಪಟ್ಟಿದೆ. ಆದ್ದರಿಂದ ಔರಂಗಜೇಬ " ಸದ ಆಫರೀನ್ ಬರಬೇಡರಾನ್, ಹಜಾರ ನಿಫರೀನ್ ಬರಬಹಾದ್ದೂರಾನ್" (ಬೇಡರಿಗೆ ನೂರು ಧನ್ಯವಾದಗಳು, ಬಹಾದ್ದೂರರಿಗೆ ಸಾವಿರ ತಿರಸ್ಕಾರಗಳು) ಎಂದ ಮಾತು ಇಂದಿಗೂ ಐತಿಹ್ಯವಾಗಿ ಉಳಿದಿದೆ.

ದಿಲೇರಖಾನನ ದಾಳಿ ಹಿಮ್ಮೆಟ್ಟಿಸಿದ ಪಾಮನಾಯಕನ ಪರಾಕ್ರಮದ ವಾರ್ತೆ ಬಿಜಾಪೂರ ಬಾದಷಹನಿಗೆ ತಲುಪುವದೊಂದೆ ತಡ 1091 ಹಿಜರಿ 11ನೇ ರಮಜಾನದಂದು (ಕ್ರಿ.ಶ.1680 ಸಪ್ಟಂಬರ) ಸನದನ್ನು ಹೊರಡಿಸಿ 'ಪೂರ್ವದಂತೆ ಎಲ್ಲಾ ಇನಾಮು, ಮೀರಾಸಿ, ವೃತ್ತಿಗಳು ವಂಶಪಾರಂಪರ್ಯವಾಗಿ ಅನುಭವಿಸಲು' ಹೇಳಿದ. ಈ ರೀತಿ ಪಾಮನಾಯಕನ ಪರಾಕ್ರಮದ ದಾಖಲೆಗಳು ಬಿಜಾಪುರ ಚರಿತ್ರೆಯಲ್ಲಿ ಪ್ರಶಂಸಿಸಲ್ಪಟ್ಟವೆ.

<u>ಮೊಘಲರ ಮರುದಾಳಿ :</u>

ಹಸರಂಗಿ ಪಾಮನಾಯಕನ ಪಡೆಯ ಹೊಡೆತಕ್ಕೆ ಒಳಬದ್ದ ದಿಲೇರಖಾನ ತರುವಾಯ ಕ್ರಿ.ಶ.1685 ರಲ್ಲಿ ಮೃತನಾದ. ಆತನ ದಾಳಿಯ ನೇತೃತ್ವವನ್ನು ಆಜಮಖಾನಜಹಾನನಿಗೆ ವಹಿಸಲಾಯಿತು. ಅದೇ ವರ್ಷ ವಿಜಾಪುರದ ಮೇಲೆ ಸಾಗಿ ಬಂದ ಆಜಮ್ ನಗರಕ್ಕೆ ಮುತ್ತಿಗೆ ಹಾಕಿದ. ಸಿಕಂದರ ಆದಿಲ ಷಾ ಮೊಘಲರ ದಾಳಿಯನ್ನು ಎದುರಿಸಲು ಸರ್ವಪ್ರಯತ್ನ ನಡೆಸಿದ. ಇಂಥ ಆಪತ್ತಿನಲ್ಲಿ ಸಹಾಯಕ್ಕೆ ಬಂದದ್ದು ಪಾಮನಾಯಕನ ಬೇಡ ಪಡೆ. ಅಲ್ಲದೆ ಸಿದ್ದಿಮಸೂದ, ಸಂಭಾಜಿ, ಗೋವಳಕೊಂಡೆಯ ಸರದಾರರು ಸಿಕಂದರನನ್ನು ಬೆಂಬಲಿಸಿ ಸೈನ್ಯ ಸೇರಿದರು. ಹಿಜರಿ ಶಕೆ 1097 ರಬಿಉಸ್ಸಾನಿ 2ರಂದು (ಕ್ರಿ.ಶ.1686) ಪಾಮನಾಯಕನಿಗೆ ಪತ್ರಬರೆದ ಸಿಕಂದರ "ಇನ್ನಷ್ಟು ಸೈನ್ಯ

47ಎ. ಸು.ಸಂ.ಇ. ಪುಟ-42.
48. Jadunath Sarkar -History of Aurangzeb vol.iv, Pp.193-95.

ಕಳಿಸಲು ಕೇಳಿದ. ಇದಕ್ಕೆ ಒಪ್ಪಿದ ನಾಯಕ ತನ್ನ ಮಗ ಪಿಡ್ಡನಾಯಕನ ನೇತೃತ್ವದಲ್ಲಿ ಮತ್ತೆ 34000 ಕಾಲ್ದಳ, 1000 ಸವಾರರನ್ನು ವಿಜಾಪುರಕ್ಕೆ ಸಾಗಿಸಿದ. ದುರ್ದೈವವಶಾತ್ ದಾಳಿ ಮಾಡಿದ ಮೊಘಲರು ಇವರನ್ನು ಸೋಲಿಸಿ ಮೇಲುಗೈ ಸಾಧಿಸಿದರು. ಶರಣಾಗತನಾದ ಸಿಕಂದರ ಕ್ರಿ.ಶ.1347 ರಿಂದ ವೈಭವದ ಆಳ್ವಿಕೆ ಕಂಡ ವಿಜಾಪೂರ ರಾಜ್ಯವನ್ನು ಮೊಘಲರಿಗೆ ಸ್ವಾಧೀನಪಡಿಸಿದ.[49] ಇದರಿಂದ ಆದಿಲ ಷಾಹಿ ಸಾಮ್ರಾಜ್ಯವೆಲ್ಲ ಮೊಘಲರ ಹಿಡಿತಕ್ಕೆ ಒಳಪಟ್ಟು, ಅವರ ಆಡಳಿತದ ಒಂದು ಸುಭೆ (Division)ಯಾಗಿ ಪರಿಣಮಿಸಿತು. ಆಗ ರಾಜ್ಯದ ಅನೇಕ ಚಿಕ್ಕಪುಟ್ಟ ಪಾಳೆಗಾರರು ಸ್ವಾತಂತ್ರ್ಯ ಘೋಷಿಸಿಕೊಂಡು, ಸ್ವತಂತ್ರ ಅಸ್ತಿತ್ವ ಸ್ಥಾಪಿಸಿದರು.[50] ಇನ್ನುಳಿದವರು ಮೊಘಲರ ಸಾಮಂತಿಕೆ ಒಪ್ಪಿಕೊಂಡು ಕಪ್ಪಕಾಣಿಕೆ, ನಜರಾಣಿ ಸಲ್ಲಿಸುತ್ತಾ ಸಾಗಿದರು. ಇದನ್ನೇ ಅನುಸರಿಸಿದ ಪಾಮನಾಯಕನು ಕ್ರಿ.ಶ.1687ರಲ್ಲಿ ಸಗರದುರ್ಗಸಮೇತ ಮೊಘಲರ ಪ್ರಭುತ್ವ ಪತಾಕೆಯ ಅಡಿಯಲ್ಲಿ ಆಳ್ವಿಕೆ ಆರಂಭಿಸಿದ. ಆಶ್ಚರ್ಯವೆಂದರೆ ಸಾಮಂತಿಕೆ ಒಪ್ಪಿಕೊಂಡ ಇದೇ ದಿನದಲ್ಲಿ ಹಸರಂಗಿ ಪಾಮನಾಯಕ ಅನಿರೀಕ್ಷಿತ ಸಾವಿಗೆ ಗುರಿಯಾದ.

<u>ಕೌಟುಂಬಿಕ ಪರಿವಾರ :</u>

ಗಡ್ಡಿಪಿಡ್ಡನಾಯಕನ ಕಾಲಕ್ಕೆ ಪ್ರಾಪ್ತವಯಸ್ಸಿಗೆ ಬಂದಿದ್ದ ಪಾಮನಾಯಕ ಐದು ಜನ ಪತ್ನಿಯರನ್ನು ಮದುವೆಯಾಗಿದ್ದ.

1. ಅಮ್ಮನಾಗತಿ (ಪಟ್ಟದರಸಿ)
2. ಅಪ್ಪಾನಾಗತಿ (ದೇವದುರ್ಗದ ತಿಮ್ಮಣ್ಣನ ಮಗಳು)
3. ಕೃಷ್ಣಮ್ಮ (ವೆಂಕಟಪತಿ ನಾಗಲಿಂಗಯ್ಯನ ಮಗಳು)
4. ಬಂಗಾರೆಮ್ಮ (ಜಾಲಿಹಾಳ ರಾಯಪ್ಪನ ಮಗಳು)
5. ಲಕ್ಷ್ಮಮ್ಮ (ಗುಡಗುಂಟಿಯ ಮರಾಠಿಯ್ಯನ ಮಗಳು)

ಐದು ಜನ ಪತ್ನಿಯರಿದ್ದರೂ ಪಾಮನಾಯಕನಿಗೆ ಸಂತತಿ ಸೌಭಾಗ್ಯ ಮಾತ್ರ ಸಿಗಲಿಲ್ಲ. ಬೇರೆ ಜಾತಿಯವಳಾದರೂ ಲಕ್ಷ್ಮಮ್ಮನನ್ನು ವಂಶಾಭಿವೃದ್ಧಿಯ ಆಸೆಗೆ ಮದುವೆ — ಮಾಡಿಕೊಳ್ಳಬೇಕಾ

---

49. ನಾರಾಯಣರಾವ್ ಕುಲಕರ್ಣಿ — ಬಿಜಾಪೂರ, ಪುಟ-8.
50. ಶಿವಶರಣ ಅರುಣಿ — ಸಂಯುಕ್ತ ಕರ್ನಾಟಕ (ಸಾಪ್ತಾಹಿಕ), 4-7-1993.

ಯಿತು. ಸಂಪಾದಿಸಿದ ಸಗರನಾಡು, ರಾಯಚೂರ, ಕಲಬುರ್ಗಿನಗರ, ಸಾಲ್ವತ್ವಾಡ, ಬಾಗೋಡಿ, ಮೇಲಿನ ಸರಸರದೇಶಗಳಿಗೆ ಉತ್ತರಾಧಿಕಾರಿಯೇ ಇಲ್ಲದಂತಾಯಿತು. ಆಗ ಗುಡಗುಂಟಿಯ ವೆದ್ದ ಅನ್ನದಾನಿ ಸೋಮಪ್ಪನಾಯಕನ ಪುತ್ರ ಪಿಡ್ಡನಾಯಕನನ್ನೇ ದತ್ತಕ ತೆಗೆದುಕೊಂಡನು.

(೨) ಸುರಪುರ ಆಳಿದ ಅರಸರು

(1) ಪೀತಾಂಬರ ಬಹರಿ ಪಿಡ್ಡನಾಯಕ:(1687-1726)

“ ಹಸರಂಗಿ ಪಾಮನಾಯಕನಿಗೆ ವೃದ್ಧಾಪ್ಯ ಸಮೀಪಿಸಿತು. ಆಡಳಿತ ಸೂತ್ರವೆಲ್ಲ ಪಟ್ಟದ ಪತ್ನಿ ಅಮ್ಮನಾಗತಿಯೇ ಹಿಡಿದಳು. ಆದಿಲ್‌ಷಾಹಿ ಅರಸೊತ್ತಿಗೆ ಹಾಳಾದುದರಿಂದ ಅವರ ಅಧೀನತೆಯು ತಪ್ಪಿತ್ತು. ಸಗರನಾಡಿನ ಸ್ವಾತಂತ್ರ್ಯವು ಘೋಷಿಸಿಕೊಂಡಾಗಿತ್ತು, ಆದರೆ ಪಾಮನಾಯಕ ಸಂಪಾದಿಸಿದ ರಾಜ್ಯದ ವಿಸ್ತರಣೆಯನ್ನು ರಕ್ಷಿಸಲು ಮಹಿಳೆಯಿಂದ ಸಾಧ್ಯವೆ? ಎಂಬ ಪ್ರಶ್ನೆ ಸಹಜವಾಗಿ ಉದ್ಭವಗೊಂಡಾಗ ದತ್ತಕ ಪುತ್ರನನ್ನು ಪಡೆದು ವಾಗಿನಗೇರಿ ವಾರಸುದಾರಿಕೆಯ ಪಟ್ಟಕಟ್ಟುವ ಪ್ರಯತ್ನ ಪ್ರಾರಂಭವಾಯಿತು. ಸ್ವಂತ ಮಗನಂತೆ ಹಲವಾರು ಕದನಗಳಲ್ಲಿ ಕಾಳಗಮಾಡಿ ತನಗೆ ಭೀಮಬಲ ಒದಗಿಸಿದ್ದ ಪಿಡ್ಡನಾಯಕನೇ ಆ ಪಟ್ಟಕ್ಕೆ ಯೋಗ್ಯವೆಂದು ಪಾಮನಾಯಕನ ಮನ ನಿರ್ಧರಿಸಿತು. ಆದರೆ ಅಮ್ಮನಾಗತಿಯ ವಿಚಾರ ಅದಕ್ಕೆ ವಿರೋಧವಾಗಿತ್ತು. ಹಿಡಿದ ಆಳ್ವಿಕೆ ಸೂತ್ರ ಇಷ್ಟು ಬೇಗ ಬಿಟ್ಟುಕೊಡಲು ಇವಳ ಮನ ಒಪ್ಪಲಿಲ್ಲ. ಮತ್ತು ಗುಡಗುಂಟಿ ವಂಶಸ್ಥರನ್ನು ದತ್ತಕೆ ತರುವುದಕ್ಕೆ ಇಷ್ಟವೂ ಇರಲಿಲ್ಲ. ಇದಕ್ಕೊಂದು ಉಪಾಯ ಹುಡುಕಿದ ಅಮ್ಮನಾಗತಿ ಪಿಡ್ಡನಾಯಕನನ್ನು ಔರಂಗಜೇಬನ ಸೈನ್ಯದಲ್ಲಿ ಸೇರಿಸಿದಳು. ಇದರಿಂದ ಎರಡು ವರ್ಷ ಇಲ್ಲಿ ಅಧಿಕಾರ ಅನುಭವಿಸಿದನು”—ಎಂದು ಪಿಡ್ಡನಾಯಕನ ಪೂರ್ವದ ಘಟನೆ ವಿವರಿಸುವ ಕೆಲವು ಕೈಫಿಯತ್ತುಗಳ ವಿಚಾರ. ಆದರೆ ಇದಕ್ಕೆ ಬೇರೊಂದು ರೀತಿಯ ಬರಹ ಹೊಂದಿರುವ ಇನ್ನೊಂದು ಕೈಫಿಯತ್ತು ಹೀಗೆ ಹೇಳುತ್ತದೆ— “ ಕ್ರಿ.ಶ. 1687ರಲ್ಲಿ ಹಸರಂಗಿ ಪಾಮನಾಯಕ ಮೃತನಾಗುವ ಮೊದಲು ಆದಿಲ್‌ಷಾಹಿ ರಾಜ್ಯವೆಲ್ಲ ಮೊಗಲರ ವಶವಾದಂತೆ ಸಗರನಾಡು ಸಹ ಅವರ ಅಧಿಪತ್ಯಕ್ಕೆ ಒಳಪಟ್ಟಿತ್ತು. ವಿಜಾಪುರದ ವರೆಗೆ ಸಲ್ಲಿಸುವ ನಜರಾಣಿ, ಕರಕಂದಾಯಗಳಂತೆ ನಮಗೂ ಸಲ್ಲಿಸಬೇಕು. ಮತ್ತು ಸಗರಕೋಟೆಯಲ್ಲಿ ನಮ್ಮ ಸರದಾರನೊರ್ವ ಪ್ರತಿನಿಧಿಯಾಗಿರಬೇಕೆಂಬ ಔರಂಗಜೇಬನ ಹಲವು ಕರಾರುಗಳಿಗೆ ಪಾಮನಾಯಕ ಒಪ್ಪಿದ.[51]

---

51. Framurz Jung Bahadur Navab - Shorapur an ancient Beydur Raj (Madras 1906) Pp.52-61.



ಚಿತ್ರ 3 ಸೀತಾಂಬರ ಬಹಿರಿ ಪಿಡ್ಡನಾಯಕ ಕೃಪೆ : ಸು.ಸಂ.ಇ.

ತನಗೆ ವೃದ್ಧಾಪ್ಯ ಬಂದ ಪ್ರಯುಕ್ತ ತಾನು ಸಂಪಾದಿಸಿದ ಜಮೀನು ಜಹಗೀರುಗಳಿಗೆ ಗುಡಗುಂಟೆಯ ಪೆದ್ದ ಅನ್ನದಾನಿ ಸೋಮನಾಯಕನ ಪುತ್ರ ಪಿಡ್ಡನಾಯಕನನ್ನು ದತ್ತಕ ಮಾಡಿಕೊಂಡ. ಪಟ್ಟಕಟ್ಟಿದ ಕೆಲವೇ ದಿನದಲ್ಲಿ ಕಿರಿಯ ಪತ್ನಿ ಲಕ್ಷ್ಮಮ್ಮನ ಉದರದಿಂದ ಜಕ್ಕಪ್ಪನಾಯಕ ಜನಿಸಿದ. ಕೂಡಲೇ ಅಮ್ಮಾನಾಗತಿ ಹಠಹಿಡಿದು ಜಕ್ಕಪ್ಪ ನಾಯಕನೇ ವಾಗಿನಗೇರಿಯ ನಿಜವಾದ ಉತ್ತರಾಧಿಕಾರಿಯೆಂದು ವಾದಿಸತೊಡಗಿದಳು. ಈ ವಾದ-ವಿವಾದಗಳಲ್ಲಿಯೇ ಪಾಮನಾಯಕ ಕೊನೆಯುಸಿರೆಳೆದ. ಅಮ್ಮಾನಾಗತಿ ಹಿಡಿದ ಅನಧಿಕೃತ ಆಡಳಿತಸೂತ್ರ ಹಲವು ದಿನ ಹಾಗೆಯೇ ಮುಂದುವರೆಯಿತು. ಆದರೆ ಆಡಳಿತದಲ್ಲಿ ಬಿಡುವು ಉಳಿಯದೆ, ಪ್ರಜೆಗಳಿಂದ ಸರಕಾರಿ ರಕಮು ಸಂದಾಯ ವಾಗದೇ ಮತ್ತು ರಾಜ್ಯದಲ್ಲಿ ಶಾಂತಿಯಿಲ್ಲದೇ ಅರಾಜಕತೆ ಅವತರಿಸಿತು. ಔರಂಗಜೇಬನ ಅಧಿಪತ್ಯ ಒಪ್ಪಿದ ನಿಮಿತ್ತ ಆತನಿಗೆ ಹಲವಾರು ರೀತಿಯ ಹಣ ಸಂದಾಯ ಮಾಡಬೇಕಿತ್ತು. ಇದು ಅಮ್ಮಾನಾಗತಿಯ ಆಡಳಿತೆಯಿಂದ ಸಾಧ್ಯವಾಗದೇ ಹೋದಾಗ ಪಿಡ್ಡನಾಯಕನನ್ನೇ ನಜರಾಣಿಯ ಬದಲು ಔರಂಗಜೇಬನಲ್ಲಿ ಅಡವು ಇಡುವ ಪಾಪಕಾರ್ಯವು ನಡೆಯಿತು. ಅಡವು ಇಡುವ ಮೂಲಕ ಬಂದ ಅನಾಹುತದಿಂದ ತಪ್ಪಿಸಿಕೊಂಡು ತಿರುವಳಿದುಕೊಳ್ಳಲಾಯಿತೇನೋ ನಿಜ. ಆದರೆ ಎರಡು – ಮೂರು ವರ್ಷದಲ್ಲಿ ಹನುಮಂತರಾವ್ ಖಾನ್ ಜಾದೇ, ದೇವಪುರದ ಗಿರಿಯಪ್ಪನ ಸಹಾಯದಿಂದ ಪಾರಾಗಿಬಂದ ಪಿಡ್ಡನಾಯಕ ತನಗೆ ಸಲ್ಲಬೇಕಾದ ಪಟ್ಟವನ್ನು ಹಿಡಿದ"[52]ನೆಂದು ಉಲ್ಲೇಖಿಸುತ್ತವೆ.

ಮೇಲಿನ ಎರಡು ವಿವಾದದಲ್ಲಿ ಒಂದು ತೀರ್ಮಾನಕ್ಕೆ ಬರುವುದಾದರೆ ಬಿಜಾಪೂರ ಬಾದಶಹ ಕ್ರಿ.ಶ.1686ರಲ್ಲಿ ಪಾಮನಾಯಕನ ಹೆಸರಿಗೆ ನೀಡಿದ ಕೆಲವು ಫರ್ಮಾನು, ಪತ್ರಗಳಿಂದ ಸಾಧ್ಯವಾಗುವುದು ಮೊಗಲರು ಬಿಜಾಪುರ ರಾಜ್ಯಕ್ಕೆ ಮುತ್ತಿಗೆ ಹಾಕಿದಾಗ ಸಗರನಾಡಿನಿಂದ ಪಾಮನಾಯಕನು ಪಿಡ್ಡನಾಯಕನ ನೇತೃತ್ವದಲ್ಲಿ ಅಪಾರ ಸೈನ್ಯ ಕಳುಹಿಸಿದ್ದು, ಅದಕ್ಕೆ ಪ್ರತಿಯಾಗಿ ಬಾದಶಹ ಅಭಿನಂದನೆ ಹೇಳಿ, ಹಲವಾರು ಜಹಗೀರು ಘೋಷಿಸಿದ್ದು ಸಿಕಂದರನ ಪತ್ರಗಳಿಂದ ಲಭ್ಯವಾಗಿದೆ. ಆದುದರಿಂದ ಪಾಮನಾಯಕ ತನ್ನ ಅಂತ್ಯಕಾಲದಲ್ಲಿ ಪಿಡ್ಡನಾಯಕನಿಗೆ ಸಿಂಹಪಾಲು ಜವಾಬ್ದಾರಿವಹಿಸಿಕೊಡುತ್ತಾ ಮುಂದಿನ ವಾರಸುದಾರನೆಂದು ಆಗಲ ಪರೋಕ್ಷವಾಗಿ ಪ್ರಕಟಿಸಿದ್ದ.

---

52. ಕೈಫಿಯತ್ತು. ನಂ.3

ವಾಗಿನಗೇರಿ ಕಿಲ್ಲೆಯ ವಿಸ್ತರಣೆ :

ಗಡ್ಡಿಪಿಡ್ಡನಾಯಕನಿಂದ ಕಟ್ಟಲ್ಪಟ್ಟ ವಾಗಿನಗೇರಿ ಕೋಟೆ ಆಡಳಿತೆಯ ಮುಖ್ಯ ಕೇಂದ್ರ ವಾದದ್ದು. ಹಸರಂಗಿ ಪಾಮನಾಯಕನ ಕಾಲಕ್ಕೆ ನಗರನಾಡು, ಕಲಬುರ್ಗಿ, ಯಾದಗೀರ, ರಾಯಚೂರು, ದೇವದುರ್ಗ, ಬಾಗಲೋಟಿ ಭಾಗಗಳನ್ನು ಪಡೆದಿದ್ದ ಪಾಮನಾಯಕ ಈ ವಾಗಿನಗೇರಿಯ ಕಿಲ್ಲೆಯಿಂದಲೇ ಆಳ್ವಿಕೆ ನಡೆಸುತ್ತಿದ್ದ. ಕಾರಣ, ನಗರನಾಡಿನಲ್ಲಿ ಪ್ರಸಿದ್ಧಕೋಟೆಗಳೆಂದರೆ ಶಹಪುರ ಕೋಟೆ, ಇದನ್ನು ಬಿಟ್ಟರೆ ವಾಗಿನಗೇರಿಯೇ ತರುವಾಯದ ಕೋಟೆ ಎನಿಸಿತ್ತು.[53]

ವಿಜಾಪುರ ಆದಿಲಶಾಹಿ ಮತ್ತು ದಿಲ್ಲಿಯ ಮೊಗಲ್ ಸರದಾರರ ಆಳ್ವಿಕೆಯನ್ನು ಪ್ರತಿನಿಧಿಸುತ್ತಾ ಬಂದ ನಗರಕೋಟೆ ಬಿಟ್ಟು, ಪ್ರಾಕೃತಿಕ ರಕ್ಷಣೆ ಹೊತ್ತ ವಾಗಿನಗೇರಿಯ ಕೋಟೆಯನ್ನೇ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು.[54] ಪಾಮನಾಯಕನ ಪತ್ನಿ ಪರಿವಾರದಲ್ಲಿ ಇಲ್ಲಿಯೇ ಇತ್ತು. ಜೊತೆಯಲ್ಲಿ ಜಕ್ಕಪ್ಪನಾಯಕನೂ ಇದ್ದ. ಇದೇ ಸಂದರ್ಭದಲ್ಲಿ ರಾಯಚೂರಿನಿಂದ ವಾಗಿನಗೇರಿಗೆ ಆಗಮಿಸಿದ ಪೀತಾಂಬರ ಪಿಡ್ಡನಾಯಕ ಜಕ್ಕಪ್ಪನಾಯಕನನ್ನು ಅಲ್ಲಿಂದ ತಳ್ಳಿ, ಶಿತಾಪೂರಕ್ಕೆ ಓಡಿಸಿದ.[55] ಕೋಟೆಗೋಡೆ ಭದ್ರಪಡಿಸಿ, ಸೈನ್ಯವನ್ನು ಕೂಡಿಸಿದ. ಸೈನ್ಯಕ್ಕೆ ಬೇಕಾದ ಮದ್ದು ಗುಂಡು, ಮುಂತಾದ ರಕ್ಷಣಾ ಸಾಮಗ್ರಿಗಳನ್ನು ಸಂಗ್ರಹಿಸಿದ. ಇವೆಲ್ಲ ಔರಂಗಜೇಬನ ಅಧೀನದಲ್ಲಿ ಇದ್ದು ಕೊಂಡೇ ಪೂರೈಸಿಕೊಂಡ ಬಗ್ಗೆ ಅನೇಕ ದಾಖಲೆಗಳು ಇಂದು ಆಧಾರ ಒದಗಿಸುತ್ತವೆ.

ಮರಾಠರು – ಮೊಗಲರು :

ಪೀತಾಂಬರ ಬಹಿರಿಪಿಡ್ಡನಾಯಕ ಮೊಘಲ್ ಸಾಮ್ರಾಜ್ಯದ ಅಧಿಪತಿಗಳ ಸ್ನೇಹದಲ್ಲಿ ಸಾಗ ತೊಡಗಿದನು. ಅವರಿಗೆ ಸೈನ್ಯ ಸಹಾಯ ಒದಗಿಸಿ ಸಂಸ್ಥಾನ ವಿಸ್ತರಿಸಿಕೊಳ್ಳುವ ಉತ್ಕಟ ಅಭಿಲಾಷೆ ಹೊಂದಿದ್ದ. ಇದು ಪಾಮನಾಯಕನಿಂದಲೇ ಬಳುವಳಿಯಾಗಿ ಬಂದಂತಿತ್ತು. ಆಗೊಮ್ಮೆ ಔರಂಗ ಜೇಬನ ವಿರುದ್ಧ ಆದಿಲಶಾಹಿ ಅರಸರಿಗೆ ಬೆಂಬಲಸಿದ್ದ ಪಿಡ್ಡನಾಯಕನೇ ಈಗ ಅವನ ಅಧೀನತೆ ಒಪ್ಪಿಕೊಳ್ಳ ಬೇಕಾಯಿತು.

ಪಿಡ್ಡನಾಯಕನ ಪೂರ್ವೋತ್ತರ ಪ್ರದೇಶವೆಲ್ಲ ಔರಂಗಜೇಬನ ಅಧಿಕಾರ ಒಪ್ಪಿಕೊಂಡಿತ್ತು. ಅದರ ಅಂತರಂಗದಲ್ಲಿಯೇ ಮರಾಠರು ಪಶ್ಚಿಮದ ಕಡೆಯಿಂದ ತಲೆಯೆತ್ತ ತೊಡಗಿದರು.

---

53. ಸ.ನಾ.ದ. ಪ್ರಸ್ತಾವನೆ. ಪುಟ–20.
54. ಪಿ.ಬಿ.ದೇಸಾಯಿ – ಮುದಗಜಮಲ್ಲ. ಪುಟ–28.
55. ಕೈಫಿಯತ್ತು. ನಂ3.

ಕ್ರಿ.ಶ.1689ರಲ್ಲಿ ಸಂಭಾಜಿ ಮೊಗಲರ ಖೈದಿಯಾಗಿ[56] ಔರಂಗಜೇಬನಿಂದ ಅನೇಕ ಚಿತ್ರಹಿಂಸೆಗೆ ಗುರಿಯಾದ. ಇದರಿಂದ ಮರಾಠ ಸರದಾರರೆಲ್ಲ ಮೊಗಲರ ವಿರುದ್ಧ ಸಿಡಿದೆದ್ದರು. ಇವರನ್ನು ಮಟ್ಟಹಾಕಲು ಔರಂಗಜೇಬ ತನ್ನ ಪ್ರಖ್ಯಾತ ಸರದಾರನಾದ ನಜರ್‌ಖಾನನನ್ನು ಕಳುಹಿಸಿದ. ಕೂಡಲೇ ರಾಮಚಂದ್ರ, ಶಂಕರಜಿ, ಸಂತಾಜಿ, ಧನಾಜಿ ಮುಂತಾದ ಮರಾಠಾ ಸರ್ದಾರರು ಒಗ್ಗೂಡಿ ನಜರ್‌ಖಾನನನ್ನು ಸೋಲಿಸಿದರು.[57] ಆಗ ತಂದೆಗಾದ ಸೋಲಿನ ಸೇಡನ್ನು ತೀರಿಸಿಕೊಳ್ಳಲು ನಜರ್‌ಖಾನನ ಮಗ ಗಾಲಿಬನು ಅಪಾರ ಮೊಘಲ ಸೈನ್ಯದೊಂದಿಗೆ ಧಾವಿಸಿಬಂದ. ಮರಾಠ ಸರದಾರರು ಸೈನ್ಯಶಕ್ತಿಯಿಲ್ಲದೆ ಸೋಲಿನ ಅಂಚಿಗೆ ಸರಿಯತೊಡಗಿದಾಗ ವಾಗಿನಗೇರಿಯ ಪೀತಾಂಬರ ಪಿಡ್ಡನಾಯಕನ ಬೇಡಪಡೆ ಮರಾಠರಿಗೆ ಬೆಂಬಲಿಸಿ ಮೊಘಲರ ವಿರುದ್ಧ ಬಂದು ನಿಂತಿತು. ಸೈನ್ಯಸ್ನೇಹದಿಂದ ಮರಾಠ ಮತ್ತು ವಾಗಿನಗೇರಿ ಪಡೆಗಳು ಸುಭದ್ರಗೊಂಡು ಯುದ್ಧಕ್ಕೆ ಸನ್ನದ್ಧವಾದವು. ಆಗ ನಡೆದ ಘನಘೋರ ಯುದ್ಧದಲ್ಲಿ ಏರಿಬಂದ ಗಾಲಿಬ, ರುಸ್ತುಂಖಾನರನ್ನು ಸೋಲಿಸಿ, ಮೊಘಲ ಸೈನ್ಯವೆಲ್ಲ ರಣಾಂಗಣದಿಂದ ಪಲಾಯನ ಮಾಡುವಂತೆ[58] ಹೋರಾಡಿ ವೀರತನ ಮೆರೆದನು.

ಮರಾಠರಿಗೆ ಸೈನ್ಯ ಸಹಾಯ ನೀಡಿ ಸ್ನೇಹ ಬೆಳೆಸಿದ ಪಿಡ್ಡನಾಯಕ ಔರಂಗಜೇಬನ ಅಧಿಪತ್ಯವನ್ನು ಧಿಕ್ಕರಿಸಿ ತಂದೆ ಸಂಪಾದಿಸಿದ್ದ ರಾಜ್ಯದ ಮೇಲೆ ಸ್ವಾತಂತ್ರ್ಯ ಸಾರಿದ. ನಸರತಾಬಾದ, ವಿಜಾಪೂರ ರಾಯಚೂರ, ಅಹಸನಾಬಾದ, ಬಾಗಲೋಟಿ, ನಾಲತ್ವಾಡ ಮಾಮಲೆಗಳ ಸರಸರದೇಸಗತಿಯ ದಾಹಿಜಾ ರಸೂಮನ್ನು ಎತ್ತಲಾರಂಭಿಸಿದ. ಆಗ ಔರಂಗಜೇಬನ ಅಮಲ್ದಾರರು ಪಿಡ್ಡನಾಯಕನ ವಿರುದ್ಧ ದೂರಿಕೊಂಡರೂ 'ದಾಹಿಜಾ' ವಸೂಲಿ ನಿಲ್ಲಲಿಲ್ಲ. ಒಪ್ಪಂದಂತೆ ವಸೂಲಿಯಾದ ದಹಿಜಾದ ಭಾಗ, ನಜರಾಣಿಯ ಕಾಣಿಕೆಗಳನ್ನು ಸಲ್ಲಿಸದೆ ಸ್ವಾತಂತ್ರ್ಯ ಘೋಷಿಸಿಕೊಂಡ ಪಿಡ್ಡನಾಯಕನ ಮೇಲೆ ಔರಂಗಜೇಬ ಕಿಡಿಕಾರಿದ. ವಾಗಿನಗೇರಿ ಕೋಟೆ ವಶಪಡಿಸಿಕೊಂಡು ಅವನ ಸೊಕ್ಕುಮುರಿಯಲು ಮಗನಾದ ಕಾಮಬಕಷನಿಗೆ ಹಾಗೂ ಸರದಾರರಾದ ಹಮೀದೊದ್ದೀನ್, ಬಹಿರಾಮಖಾನರಿಗೆ ಕ್ರಿ.ಶ.1691ರಲ್ಲಿ ಆದೇಶಿಸಿದ. ತಂದೆಯ ಆದೇಶ ಹೊತ್ತು, ಸೈನ್ಯದೊಂದಿಗೆ ಸಾಗಿಬಂದ ಕಾಮಬಕ್ಷ ಎರಡು ತಿಂಗಳವರೆಗೆ ವಾಗಿನಗೇರಿಯ ಬಯಲಿನಲ್ಲಿ ಬೀಡುಬಿಟ್ಟು ಯುದ್ಧ ಹೂಡಿದ. ಏನೊಂದು ಪ್ರಯೋಜನವಾಗಲಿಲ್ಲ, ಫಲಿತಾಂಶವು ಬರಲಿಲ್ಲ. ದಿನವಿಡೀ ಮೊಘಲ ಸರದಾರರು ವಾಗಿನಗೇರಿ ಕೋಟೆಗಾಗಿ ಅನೇಕ ಬಗೆಯಲ್ಲಿ ಕಾಳಗವೆಸಗುತ್ತಿದ್ದರು. ತರುವಾಯ ಎರಡನೆಯ ಕಂತು ಎಂಬಂತೆ

---

56. ಸು.ತಾ.ದ. ಪುಟ-11.
57. ಸು.ಸಂ.ಇ. ಪುಟ-58.
58. Jadunath Sarkar -Modern Review, Nov.1923.

ಔರಂಗಜೇಬನಿಂದ ರೂಹುಲ್ಲಾಖಾನ ಮತ್ತು ಮುಸ್ತಫಾಖಾನ ಸರ್ದಾರರು ವಾಗಿನಗೇರಿಗೆ ಬಂದಿಳಿದು ಐದು ತಿಂಗಳವರೆಗೆ ಯುದ್ಧ ಮಾಡಿದರು. ಆಗಲೂ ಜಯದಕ್ಕದೆ, ಕೋಟೆ ಕೈ ಗೆಟುಕದೆ ಹೋದಾಗ ಔರಂಗಜೇಬ ಹಲ್ಲು ಕಡಿದು ಅಬ್ಬರಿಸಿದ. ಪಿಡ್ಡನಾಯಕ ಓರ್ವ ಸಾಮಾನ್ಯ ಜಮೀನುದಾರನೆಂಬುದೆ ಔರಂಗಜೇಬನ ಇದುವರೆಗಿನ ಅನಿಸಿಕೆಯಾಗಿತ್ತು. ಇದುವರೆಗಿನ ಅಪಜಯ ಸಹಿಸದೆ ತನ್ನ ಇನ್ನೊರ್ವ ಮಗ 'ಅಜಮ' ನಿಗೆ ಪಿಡ್ಡನಾಯಕನ ಸೊಕ್ಕಡಗಿಸಲು ಅಪ್ಪಣೆಕೊಟ್ಟ. ಅಪಾರ ಸೈನ್ಯದೊಂದಿಗೆ ಆಗಮಿಸಿದ ಅಜಮ ಒಂದು ವರ್ಷಪರ್ಯಂತ ವಾಗಿನಗೇರಿ ಸುತ್ತ-ಮುತ್ತಲಿನ ಪ್ರದೇಶವೆಲ್ಲ ಧ್ವಂಸಗೊಳಿಸಿದ. ಕೋಟೆಯ ಮೇಲೆ ಇನ್ನೇನು ದಾಳಿ ಮಾಡಬೇಕೆನ್ನುವಷ್ಟರಲ್ಲಿ 'ಅಜಮ' ನ ಪ್ರಾಬಲ್ಯ ಅರಿತುಕೊಂಡ ಪಿಡ್ಡನಾಯಕ ಸಂಧಾನ ಬಯಸಿ ಎರಡು ಲಕ್ಷ ನಾಣ್ಯ ಕಾಣಿಕೆ ಕೊಡಲೊಪ್ಪಿದ ಅದರಂತೆ ಔರಂಗಜೇಬನಿಗೆ ಸಲ್ಲಿಸಬೇಕಾದ ಎಲ್ಲಾ 7 ಲಕ್ಷ ರುಸೂಮ, ನಜರಾಣಿ ಸಹ ಸಲ್ಲಿಸಲು ಮುಂದೆ ಬಂದು ಒಪ್ಪಂದ ಮಾಡಿಕೊಂಡ" ಎಂಬ ಕೈಫಿಯತ್ತಿನ ಹೇಳಿಕೆಯಲ್ಲಿ ಸತ್ಯಾಸತ್ಯತೆ ಸಮೀಕ್ಷಿಸಲು ಕ್ರಿ.ಶ. 1693ರಲ್ಲಿ ಪಿಡ್ಡನಾಯಕನಿಗೆ ಔರಂಗಜೇಬನೀಡಿದ ಸನದು ಸಹಾಯಕವಾಗಿದೆ. ಅದರಲ್ಲಿ ನಜರಾಣಿ ಕೊಡಲೊಪ್ಪಿದ ಪಿಡ್ಡನಾಯಕನಿಗೆ "ಆದಿಲಶಾಹಿ ಸನದುಗಳ ಪ್ರಕಾರ ನಸರತಾಬಾದ ಇನಾಮು, ಹತ್ತ ಹಜಾರಿ ಮನಸಬು, ಪಂಚಹಜಾರಿ ಸವಾರ ಮನಸಬಗಳನ್ನು ಮೊದಲಿನಂತೆ ನಡೆದುಬರಲು ದಯಪಾಲಿಸಿರುವೆನು. ಈ ಪೂರ್ವದಲ್ಲಿ ಆದಿಲಶಾಹಿಗಳಿಗೆ ಸಲ್ಲಿಸಿದಂತೆ ಕಂದಾಯದ ಎಲ್ಲಾ ಬಾಬತ್ತುಗಳನ್ನು ನಮಗೂ ನೀಡಬೇಕು. ಮತ್ತು ನಿಮ್ಮ ಸೈನ್ಯ, ಸವಾರರನ್ನು ನಸರತಾಬಾದಿನ ನಮ್ಮ ಫೌಜದಾರನಿಗೆ ಬೇಕಾದಾಗ ಕೊಡಬೇಕೆಂಬುದು ನಮ್ಮ ಫರ್ಮಾನು ಆಗಿದೆ" ಇದು ಪಿಡ್ಡನಾಯಕನಿಗೆ ಔರಂಗಜೇಬ ಸನದಿನ ಅನುವಾದ ಹಾಗೂ ಕರಾರು. ಒಪ್ಪಂದದಂತೆ ಪಿಡ್ಡನಾಯಕ ನಡೆಯಲಿಲ್ಲ. 'ಅಜಮ' ಮರಳಿದ ಕೆಲವೇ ದಿನದಲ್ಲೇ ಹಾಕಿದ ಕರಾರುಗಳೆಲ್ಲ ಮುರಿದು ಕ್ರಿ.ಶ. 1696ರಲ್ಲಿ ಮೊಘಲರ ವಿರುದ್ಧ ಸ್ವಾತಂತ್ರ್ಯ ಘೋಷಿಸಿದನು.

ಮೊದಲೊಮ್ಮೆ ಮೊಘಲರ ವಿರುದ್ಧ ಸಹಾಯ ಪಡೆದ ಮರಾಠ ಸರದಾರರು ಈಗ ಪಿಡ್ಡನಾಯಕನನ್ನು ಬಲಪಡಿಸಲು ಬೆಂಬಲಕ್ಕೆ ಬಂದರು. ವಾಗಿನಗೇರಿ ಕಿಲ್ಲೆಯಲ್ಲಿ ಮರಾಠ ಕುಟುಂಬಗಳು ಬೀಡುಬಿಟ್ಟವು. ತನಗೆ ಸಲ್ಲಬೇಕಾದ ನಜರಾಣಿ ಮತ್ತು ಹಲವು ರೂಪಾಯಿಗಳು ಸಂದಾಯವಾಗದೆ ಹೋದಾಗ ಔರಂಗಜೇಬ ಅಂತರಂಗದಲ್ಲಿ ಕುದಿಯತೊಡಗಿದ. ಅಲ್ಲದೆ ಏರಿದ ಕರಾರು ಮುರಿದು ತನ್ನ ವಿರುದ್ಧವೇ ಮರಾಠರ ಸೈನ್ಯದೊಂದಿಗೆ ಯುದ್ಧಕ್ಕೇರಿ ಬರುತ್ತಿರುವುದು ಅವನನ್ನು ಕೆರಳಿಸಿತು.

ವಾಗಿನಗೇರಿ ನಾಡಿನ ಸರಹದ್ದಿನಲ್ಲಿ ಮೊಘಲ ಸರ್ದಾರರ ಅಧಿಕಾರಕ್ಕೆ ಆತಂಕ ಉಂಟಾಗಿ, ಯಾವ ಹಫ್ತ ವಸೂಲಾಯಿಸಲು ಪಿಡ್ಡನಾಯಕ ಆಸ್ಪದವೀಯುತ್ತಿರಲಿಲ್ಲ. ಐದಾರು ವರ್ಷ ಇಂಥ ಬಗೆಯು ಮುಂದುವರೆದಾಗ ಸ್ವತಃ ಔರಂಗಜೇಬನೆ ವಾಗಿನಗೇರಿ ಮೇಲೆ ಸೈನ್ಯದೊಂದಿಗೆ ಸಾಗಿಬರಲು ಸಿದ್ಧನಾದ.

<u>ವಾಗಿನಗೇರಿ ಯುದ್ಧ :(ಕ್ರಿ.ಶ.1705)</u>

ಸತಾರೆ, ಪಾರ್ಲಿ, ಪನ್ಹಾಳಗಡ, ವಿಸಾಳಗಡ, ಕೊಂಡಾನಾ, ತೋರಣಾ ಮುಂತಾದ ದುರ್ಗಗಳನ್ನು ಗೆಲ್ಲುತ್ತಾ ಹೊರಟ ಔರಂಗಜೇಬ ಅದೇ ಮಾರ್ಗವಾಗಿ ಕ್ರಿ.ಶ.1705ರಲ್ಲಿ ಸಗರನಾಡು ಪ್ರವೇಶಿಸಿದನು.[59] ಶಹಪುರ ಕೋಟೆಗೆ ತನ್ನ ಸುಭೇದಾರನಾಗಿದ್ದ ದೀನಕುಂಡಖಾನನೊಂದಿಗೆ ವಾಗಿನಗೇರಿಯತ್ತ ದಾಂಗುಡಾಯಿಸಿದನು.

ಹಮೀದುದ್ದೀನಖಾನ, ಮೊಹಮ್ಮದ ಅಮೀನಖಾನ್, ತರಬಿಯತಖಾನ ಮುಂತಾದ ತೋಪಖಾನೆ ಅಧಿಕಾರಿಗಳೊಂದಿಗೆ ದೇವಪುರ ಸೀಮೆಯ ಬಯಲಿನಲ್ಲಿ ಶಿಬಿರ ಹೂಡಿದನು. ಬೆಟ್ಟ-ಗುಡ್ಡಗಳಿಂದ ಆವೃತವಾದ ವಾಗಿನಗೇರಿ ಕೋಟೆಯನ್ನು ದೂರದಿಂದಲೇ ವೀಕ್ಷಿಸಿ ಅದರ ಧೂಳಿಪಟಕೆ ದಾರಿ ಹುಡುಕತೊಡಗಿದನಲ್ಲದೆ ತನ್ನ ಶೌರ್ಯಕ್ಕೆ ಸವಾಲೆಸೆದ ಪೀತಾಂಬರ ಪಿಡ್ಡನಾಯಕನನ್ನು ಸದೆಬಡಿಯಲು ಸನ್ನದ್ಧನಾದನು. ಇದರ ಸಾಧನೆಗಾಗಿ ತನ್ನ ದಣಿಗೆ ಧೈರ್ಯ ತುಂಬಿದ ಔರಂಗಜೇಬನ ಬಗ್ಗೆ ಕೈಫಿಯತ್ತುಗಳು ರಮಣೀಯವಾಗಿ ಬಣ್ಣಿಸಿವೆ. ಬಾದಶಹನ ಕುಮಾರ ಕಾಮಬಕ್ಷ ಒಂದು ಫೌಜಿನ ನೇತೃತ್ವವಹಿಸಿ ದೇವಾಪುರ, ನಾಗಲಾಪುರ, ಕಂಪಾಪುರ, ಕೊಜಾಪುರ ಹಳ್ಳಿಗಳನ್ನು ಲೂಟಿ ಮಾಡುತ್ತ ಪಿಡ್ಡನಾಯಕನ ಪ್ರದೇಶದಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಿಸಿದನು. ದಂಗೆಯಿಂದ ಜನ ಬೇಸತ್ತು, ಬೆಂಡಾದರು. ಔರಂಗಜೇಬನ ರಣನೀತಿಯಂತೆ ಒಂದೇ ಬಾರಿಗೆ ವಾಗಿನಗೇರಿಯನ್ನು ಫೆಬ್ರುವರಿಯಲ್ಲಿ ಮೊಘಲ ಸೈನ್ಯ ಸುತ್ತುವರಿಯಿತು.[60] ಕೋಟೆಯೊಳಗೆ ಬಲಾಢ್ಯ ಬೇಡಪಡೆಯ ಭದ್ರ ರಕ್ಷಣೆಯಲ್ಲಿತ್ತು. ಕೋಟೆಗೆ ಸಮೀಪವಿರುವ ಒಂದೊಂದೇ ಗುಡ್ಡಗಳನ್ನು ವಶಪಡಿಸಿಕೊಳ್ಳುತ್ತ ಹೊರಟ ಮೊಘಲ ಸೈನ್ಯ ಪಶ್ಚಿಮದ 'ಕೆಂಪುಮಡ್ಡಿ' ಯನ್ನು ಕಸಿದುಕೊಂಡಿತು.[61] ಆಗ ಪಿಡ್ಡನಾಯಕನ ಬೇಡಪಡೆಯಿಂದ ತುಪಾಕಿಗಳ ಗುಂಡು ರಭಸವಾಗಿ ಸಿಡಿಯತೊಡಗಿದವು. ಬಾಣ, ಕವಣೆಕಲ್ಲುಗಳು ತೂರಿಬಂದವು ಇದರ ಏಟಿಗೆ ಮೊಘಲರ ಆನೆ, ಕುದುರೆಗಳು ನೆಲಕಚ್ಚಿದವು. ಆದರೂ

59. K.Paddayya -Towards the Archaeology of the Medieval Shorapur Doab-Deccan. (Islamic culture,quarterly) Vol.LXIV. No.2-3, Apr-July 1990, p-92.

60. Tarikh-e-Dilkush pp-173-79.

61. Khafikhan - Muntakhabul - lubab - e - mahammadshai

ಧೃತಿಗೆಡದೆ ಮೊಘಲರು ಬೆಟ್ಟ-ಗುಡ್ಡಗಳ ಅಡಿಯಿಂದ ಮತ್ತು ತಳವಾರಗೇರಿ ಮಾರ್ಗದಿಂದ ಮುನ್ನುಗ್ಗಿದರು.

ಹಲವು ದಿನ ಹೀಗೆಯೇ ಮುಂದುವರಿದಾಗ ಯುದ್ಧ ಮುಗಿಯುವ ಮುನ್ಸೂಚನೆಗಳೇ ಮರಾಠ ಸರ್ದಾರರಿಗೆ ತೋರಲಿಲ್ಲ. ಮೊಘಲರ ದಾಳಿ ತೀವ್ರಗೊಂಡಂತೆ ಮರಾಠರ ಮನಸ್ಸು ಬದಲಾಗತೊಡಗಿತು. ತಮ್ಮ ಕುಟುಂಬಗಳೊಂದಿಗೆ ಈ ಕಿಲ್ಲೆಯಿಂದ ಪಾರು ಮಾಡುವ ವಿಚಾರವನ್ನು ಪಿಡ್ಡನಾಯಕನಿಗೆ ಅರುಹಿದರು. ಕೋಟೆಯೊಳಗಡೆ ಶಸ್ತ್ರಗಳು ರಣರಂಗ ನಿರ್ಮಿಸಿ ಸಮರಕ್ಕಾಗಿ ಸುತ್ತುವರಿದು ನಿಂತಿರುವಾಗ ಯುದ್ಧಮಾಡೆವು ಎಂಬ ಮರಾಠರ ಅಪಸ್ವರದಿಂದ ಬಲವಾದ ಆಘಾತ ಬಂದೊದಗಿತು. ಇಂಥ ಸಂದರ್ಭದಲ್ಲಿ ಕೈಬಿಡುವುದು ತರವಲ್ಲವೆಂದಾಗ ''ಔರಂಗಜೇಬನೊಂದಿಗೆ ಈ ಕಾಳಗ ಮಾಡುವುದು, ನಮ್ಮ ಘೋರಿಯನ್ನು ನಾವೇ ತೋಡಿಕೊಳ್ಳುವದು ಎರಡೂ ಒಂದೇ'' ಎನ್ನುವ ಮಾತು ಮರಾಠರದಾಯಿತು. ಮೊಘಲ ದಾಳಿಯ ಆಪತ್ತಿನಿಂದ ರಕ್ಷಿಸಿ ಆಶ್ರಯನೀಡಿದ್ದ ಪಿಡ್ಡನಾಯಕನಿಗೆ ಈಗ ತಿರುಗುಮಂತ್ರ. ತಮ್ಮ ಜೀವದ ಮೇಲಿನ ಆಸೆಗಾಗಿ ಮಹತ್ವಪೂರ್ಣ ಸಂಬಂಧವನ್ನೇ ಮರಾಠರು ಈ ಯುದ್ಧದಲ್ಲಿ ಕಡಿದುಕೊಂಡುಬಿಟ್ಟರು.[62] ಇದರಿಂದ ಸೈನ್ಯಶಕ್ತಿ ಸಹಜವಾಗಿಯೇ ಕುಂದಿದಾಗ ವೈರಿ ಮೊಘಲರ ವಿರುದ್ಧ ಧುಮುಕುವದು ಅಚಾತುರ್ಯವೆಂದು ಭಾವಿಸಿದ ಪಿಡ್ಡನಾಯಕ ಹಗಲಿರುಳು ಚಿಂತಿಸಿದ.

ಇಂಥ ಸಮಯದಲ್ಲಿ ಶಕ್ತಿಗಿಂತ ಯುಕ್ತಿಯೇ ಶ್ರೇಷ್ಠವೆಂದು ಭಾವಿಸಿದ ಪಿಡ್ಡನಾಯಕ ಪಲಾಯನದ ನಾಟಕವಾಡಿದ. ಆದರೆ ಹೂರಣ ಹೊರಬಿದ್ದಾಗ ಬೆಂಕಿಯ ಕೆಂಡದಂತಾದ ಔರಂಗಜೇಬನು ನಸರತಜಂಗ, ದಾವೂದಖಾನಪನ್ನಿ, ದಲಪತರಾವ ಬುಂದೇಲ, ರಾಮಸಿಂಹಹಾಡಾ ಮುಂತಾದ ಮಹಾನ್ ಸರ್ದಾರರೊಂದಿಗೆ ಕ್ರಿ.ಶ.1705ರ ಮೇನಲ್ಲಿ ತಳವಾರಗೇರಿಯನ್ನು ತುಳಿದು ವಾಗಿನಗೇರಿ ಕಿಲ್ಲೆಯ ದ್ವಾರ ಬಾಗಿಲನ್ನು ಹಿಡಿದನು. ಕೋಟೆಯ ಸುತ್ತ ಕಂದಕವಿರುವದರಿಂದ ಮೊಘಲ ಸೈನಿಕರಿಗೆ ಮುಂದುವರಿಯಲು ಕಷ್ಟವಾಯಿತಾದರೂ ಮುನ್ನುಗ್ಗುವದು ಮರೆಯಲಿಲ್ಲ. ಬೆಟ್ಟಗಳಲ್ಲಿ ನಡೆದ ಈ ಕದನದಿಂದ ಬೇಡ ಪಡೆಗೆ ಲಾಭವಿದ್ದರೂ ಈಗ ಕುಂದಿದ ಬಲದಿಂದ ಕೋಟೆಯೊಳಗೆ ಮಾತ್ರ ಕಾದ ಬೇಕಾಯಿತು. ನಾಲ್ಕೆಡೆಗಳಿಂದ ಬಂದ ಮೊಘಲ ಸೈನ್ಯದಿಂದ ಪಿಡ್ಡನಾಯಕನ ಬೇಡಪಡೆಗೆ

62. ಸು.ತಾ.ದ. ಪುಟ-11.

ಈಗ ಹಿಮ್ಮೆಟ್ಟುವುದೊಂದೇ ದಾರಿ ಉಳಿಯಿತು. ಮೊಘಲರಿಂದ ಬರುವ ಭಯಂಕರ ಹೊಡೆತಕ್ಕೆ ಹೌಹಾರಿ ತತ್ತರಿಸಿತು. ದೀರ್ಘದಾಳಿ ಎದುರಿಸದೆ ಪಿಡ್ಡನಾಯಕನ ಪಲಾಯನದೊಂದಿಗೆ[63] ವಾಗಿನಗೇರಿ ಕೋಟೆ ಔರಂಗಜೇಬನ ವಶವಾಯಿತು.

ಮೂರು ತಿಂಗಳವರೆಗೆ ನಡೆದ ಘನಘೋರ ಯುದ್ಧದಲ್ಲಿ[64] ಸ್ವತಃ ಕಾದಿ, ಕಿಲ್ಲೆ ಕೈವಶಮಾಡಿಕೊಂಡ ಔರಂಗಜೇಬನ ವಿಜಯದ ಹಿಂದೆ ಕೆಲವು ಕುತೂಹಲಕಾರಿ ಅಂಶಗಳಿವೆ. ಹಣ, ಅಧಿಕಾರ ದಾನ ತೋರಿಸಿ ವೈರಿಬಣದ ಸರದಾರರನ್ನು ತನ್ನ ಪಕ್ಷಕ್ಕೆ ಕರೆದುಕೊಳ್ಳುವ ಔರಂಗನ ಸೀಳಿ ಆಳುವ ನೀತಿ ಇಲ್ಲಿಯೂ ಪ್ರಮುಖ ಪಾತ್ರ ವಹಿಸಿತು. ಪಿಡ್ಡನಾಯಕನಿಗೆ ಬೆಂಬಲಿಸಿದ್ದ ಮರಾಠ ಸರ್ದಾರ ಹಿಂದುರಾವ್ ಘೋರ್ಪಡೆಯನ್ನು ಐದುಲಕ್ಷ ನಾಣ್ಯದ ಲಂಚದಾಸೆ ತೋರಿಸಿ ಸಮರದಿಂದ ಹೊರಗುಳಿಯಲು ಹೇಳಿದ್ದನು. ಪಿಡ್ಡನಾಯಕನ ಬಣ್ಣ ತೊರೆದು ಮೊಘಲರಿಗೆ ಬೆಂಬಲಿಸುವಲ್ಲಿ ಔರಂಗ ಯಶಸ್ವಿಯಾದನೆಂದು ಕೈಫಿಯತು ಸಾಕ್ಷಿ ಹೇಳುತ್ತವೆ. ಅದರಂತೆ ಇತಿಹಾಸಕಾರರು ಗುರುತಿಸಿರುವ ಬಹುಮಹತ್ವಪೂರ್ಣ ಅಂಶವೆಂದರೆ ''ಔರಂಗಜೇಬನ ಜೀವನದಲ್ಲಿ ವಾಗಿನಗೇರಿ ಯುದ್ಧವೇ ಕೊನೆಯ ಕಾಳಗವಾದದ್ದು. ಇವನ ಕೊನೆಯ ದಿನಗಳನ್ನು ಅಧ್ಯಯನ ಮಾಡುವವರಿಗೆ ವಾಗಿನಗೇರಿ ಯುದ್ಧವೇ ಮೂಲ ನೆಲೆಯಾಗಿದೆ.

<u>ಕೈಬಿಟ್ಟ ಕಿಲ್ಲೆ : ಪಿಡ್ಡನಾಯಕನ ಪಲಾಯನ :</u>

ವೈರಿಗಳ ವಶವಾದ ವಾಗಿನಗೇರಿ ಕಿಲ್ಲೆ ಸಂಪೂರ್ಣ ಲೂಟಿಯಾಯಿತು. ಕೋಟೆ ಕಟ್ಟಡಗಳೆಲ್ಲ ಧ್ವಂಸಗೊಂಡವು.[65] ಕೋಟೆಯ ಪಶ್ಚಿಮದಲ್ಲಿರುವ ಮಹಾದ್ವಾರದ ಮೇಲಿನ ಪರ್ಷಿಯನ ಶಾಸನವೊಂದು '' ಧರ್ಮಚಕ್ರವರ್ತಿಯಾದ ಮಹ್ಮದ ಮಹಿಯೋದ್ದೀನ್ ಔರಂಗಜೇಬ ಬಾದಷಹ ಆಲಂಗೀರನ ಆಜ್ಞೆಯಂತೆ ಮಹ್ಮದ ಅಜೀಜ ಮಸೂದನು 1117ನೇ ಹಿಜರಿ, 1ನೇ ರಜ್ಜಬ ತಿಂಗಳಿನಲ್ಲಿ ಇದನ್ನು ನಿರ್ಮಿಸಿದನೆಂದು ಹೇಳುತ್ತದೆ. ಪೂರ್ವದ ಅವಶೇಷಗಳೆಲ್ಲ ಅಳಿಸಿಹಾಕಿ ಕೇವಲ ತನ್ನ ವಿಜಯ ಸಂಕೇತಕ್ಕೆ ಮಾತ್ರ ಈ ಮಹಾದ್ವಾರ ಕಟ್ಟಿಸಿರಬಹುದು. ಯಾಕೆಂದರೆ, ಗಡ್ಡಿಪಿಡ್ಡ ನಾಯಕನಿಂದ ತಲೆಎತ್ತಿ ನಿಂತಿದ್ದ ಕೋಟೆ ಮತ್ತು ಬಾಲಗೋಪಾಲಸ್ವಾಮಿ ಗುಡಿಗಳು ಸರ್ವನಾಶ

---

63. ಪಿ.ಬಿ.ದೇಸಾಯಿ. – ಮದಗಜಮಲ್ಲ. ಪುಟ-51.
64. Jadunath Sarkar – History of Aurangazeb (Eng.Trn) Maajir-i-Alamgiri Vol.V Pp.291-92.
65. ಡಾ.ವಿ.ಜಿ.ಪೂಜಾರ – ನಿಷ್ಠೆಯ ಕಡ್ಲಪ್ಪ ವೀರಪ್ಪನವರು. ಪುಟ-2.

ವಾಗಿದ್ದು ಔರಂಗಜೇಬನ ಆಕ್ರೋಶ ಹಾಗೂ ಮತಾಂಧತೆ ತೋರಿಸುತ್ತವೆ. ಇದರ ಪರಿಣಾಮ ಗುಡಿಯ ಜಾಗದಲ್ಲಿ ಮಸೀದೆಯೊಂದು ಮೇಲೆದ್ದಿತು[66] ಅಷ್ಟೇ. ಇವೆಲ್ಲ ಒಳಗೊಂಡ ವಾಗಿನಗೇರಿ ಕಿಲ್ಲೆಯು ಔರಂಗಜೇಬನಿಂದ " ರಹಮಾನ "ಬಕ್ಷ " ಎಂದು ಮರು ನಾಮಕರಣಗೊಂಡಿತು.[67] ವಿಜಯೀ ಈ ಕೋಟೆಯನ್ನು ನೋಡಿಕೊಳ್ಳಲು ಫೌಜದಾರನನ್ನು ನಿಯುಕ್ತಿಗೊಳಿಸಿ ತಾನು ಉತ್ತರದತ್ತ ಹಿಂದಿರುಗಿದನು.

ಮೊಘಲರ ದಾಳಿಯಿಂದ ತತ್ತರಿಸಿಹೋದ[68] ಪಿಡ್ಡನಾಯಕನು ತನ್ನ ಅಳಿದುಳಿದ ಸೈನ್ಯದೊಂದಿಗೆ ಮತ್ತು ಪತ್ನಿ ಪರಿವಾರ ಸಮೇತ ಶೆಳ್ಳಗಿ ಮಾರ್ಗವಾಗಿ ಗುಡಗುಂಟಿ ಸೇರಿದ. ಇದೇ ಗುಡಗುಂಟಿ ಸಂಸ್ಥಾನದಿಂದಲೇ ದತ್ತಕ ಬಂದ ಪೀತಾಂಬರನಿಗೆ ಗುಡಗುಂಟಿಯಲ್ಲಿ ರಕ್ಷಣೆಯು ಸಿಕ್ಕಿತು. ದಣಿನ ಸಹಾಯವು ದೊರೆಯಿತು. ಹಾಗೆಯೇ ತಾವರಗೇರಿ ಮೂಲಕ ಕನಕಗಿರಿಗೆ ಬಂದಾಗ ಭವ್ಯಸ್ವಾಗತ ನೀಡಿದ ಉಡಚನಾಯಕ ಗಂಗಾವತಿಯ 'ಎಮ್ಮಿಗುಡ್ಡ' ದಲ್ಲಿರಲು ಒಂದು ವರ್ಷ ಪರ್ಯಂತ ಆಶ್ರಯ ನೀಡಿದನು.[69]

<u>ವಾಗಿನಗೇರಿ ವಿಜಯ :</u>

ಎಮ್ಮಿಗುಡ್ಡದಲ್ಲಿ ಇದ್ದುಕೊಂಡೆ ಸೈನ್ಯಶಕ್ತಿ ಸಂಘಟಿಸಿಕೊಂಡ ಪಿಡ್ಡನಾಯಕನು ಪುನಃ ತನ್ನ ಪರಿವಾರದೊಡನೆ ಗುಡಗುಂಟಿಗೆ ಮರಳಿದನು. ಬರುವಷ್ಟರಲ್ಲಿಯೇ ಗುಡಗುಂಟಿಯನ್ನು ಮೊಘಲರು ಕಸಿದುಕೊಂಡಿದ್ದರು. ಸುಬೇದಾರನಾಗಿದ್ದ ಹಿಮ್ಮತಯಾರಖಾನನನ್ನು ಹೊಡೆದೋಡಿಸಿ ಬಂಧುವಾದ ಸೋಮಸರ್ಜಾನಿಗೆ ಪಟ್ಟಕಟ್ಟಿದನು. ಮುಂದೆ ವೀರಗೋಟಕ್ಕೆ ಸಾಗಿ ತನ್ನ ಪೂರ್ವಜರ ವಾಗಿನಗೇರಿಯನ್ನು ಮತ್ತೆ ಪಡೆಯಲು ಸಕಲ ಸಿದ್ಧತೆ ಮಾಡಿಕೊಂಡನು. ಇದೊಂದು ಪಿಡ್ಡನಾಯಕನಿಗೆ ಪ್ರತಿಷ್ಠೆಯ ವಿಷಯವಾಗಿತ್ತು. ಸಮಗ್ರ ಬಲಕ್ರೋಢೀಕರಿಸಿ ವಾಗಿನಗೇರಿ ಮೇಲೆ ನುಗ್ಗಿದನು. ಅಲ್ಲಿದ್ದ ಮೊಗಲ ಸರದಾರ ಬೇಡಪಡೆಯ ಹೊಡೆತಕ್ಕೆ ದಿಕ್ಕೆಟ್ಟು ಓಡಿದನು. ಆರು ವರ್ಷಗಳವರೆಗೆ ಕೈಬಿಟ್ಟು ಹೋಗಿದ್ದ ವಾಗಿನಗೇರಿ ಕಿಲ್ಲೆ ಮರಳಿ ಪಡೆಯುವ ಮೂಲಕ[70] ಅದರ ಮೇಲೆ ವಿಜಯದ ಹನುಮಧ್ವಜ ಹಾರಿಸಿದನು.

---

66. ಎಂ.ಜಿ.ಕಲಕರ್ಣಿ — ಸಾಹಿತ್ಯ ಸುಧೆ, ಲೇಖನ : ನಗರನಾಡು, ಪುಟ- 48.
67. ಸು.ಸಂ.ಇ. ಪುಟ-73.
68. ಶಿವಶರಣ ಅರುಣಿ — ಅಗ್ನಿಅಂಕುರ ಪತ್ರಿಕೆ. (ಲೇಖನ). ಮೇ-20, 1993.
69. ಕೈಫಿಯತ್ತು; ನಂ.4.
70 ಪೆರುಮಾಳ ಸುಂದರಾಚಾರ್ಯ — ನಗರನಾಡು ದರ್ಶನ. ಲೇಖನ: ಸುರಪುರ ಸಂಸ್ಥಾನದ ಸಂಕ್ಷಿಪ್ತ ಚಾರಿತ್ರಿಕ ದರ್ಶನ. ಪುಟ-191.

ಸುರಪುರ ನಿರ್ಮಾಣ :

ಮೊಘಲರ ದಾಳಿಗೆ ಧ್ವಂಸಗೊಂಡ ವಾಗಿನಗೇರಿ ಕೋಟೆಗೆ ಪರ್ಯಾಯ ಕೋಟೆಯೊಂದನ್ನು ನಿರ್ಮಿಸಬೇಕೆಂಬ ಪೀತಾಂಬರ ಪಿಡ್ಡನಾಯಕನ ಹಂಬಲ ಸುರಕ್ಷಿತ ಸ್ಥಳದ ಅನ್ವೇಷಣೆಗಿಳಿಯಿತು. ಶಾಶ್ವತ ಮತ್ತು ಸುಭದ್ರ ಸಂಸ್ಥಾನದ ಅಗತ್ಯ ಮನಗಂಡು ಅತ್ಯಂತ ಆಯಕಟ್ಟಿನ ಸ್ಥಳಹುಡುಕುತ್ತಿರುವಾಗ ಎಲ್ಲಾ ದೃಷ್ಟಿಯಿಂದಲೂ ಮನಸೂರೆಗೊಂಡ ಪ್ರದೇಶ ಕಣ್ಣಿಗೆ ಬಿತ್ತು. ಅದುವೆ ಪ್ರಾಕೃತಿಕ ಮಡಿಲಲ್ಲಿ ಮೈದಲ್ಲಿ ಮೆರೆದು ನಿಂತ ಸಪ್ತಶೈಲ. ಅದರ ಮಧ್ಯದ ವಿಶಾಲ-ಬಯಲು ಬೆಟ್ಟಗಳೇ ನೂತನ "ಸುರಪುರ ಸಂಸ್ಥಾನ" ನಿರ್ಮಾಣಕ್ಕೆ ಕಾರಣವಾದವು. ಕ್ರಿ.ಶ. 1707 ರಲ್ಲಿ 'ಸುರಪುರ' ನಗರ ನಿರ್ಮಿಸುವ ಮಾಲಿಕ[71] ಬಹಿರಿ ಪಿಡ್ಡನಾಯಕ ಹೊಸಕೀರ್ತಿಗೆ ಪಾತ್ರನಾದ. ಇದರ ಮೂಲಕವೇ ಸಗರನಾಡಿನ ಆಳಿತ ನಡೆಸಲು ನಾಂದಿಹಾಡಿದಾಗ ಇದಕ್ಕೆ ರಾಜಧಾನಿ ಪಟ್ಟ ಸಿಕ್ಕಿತು.[72] ಸುರಪುರವನ್ನು ಅನೇಕ ರೀತಿಯಿಂದ ವಿದ್ವಾಂಸರು ಅರ್ಥೈಸಿದ್ದಾರೆ.[73] ದೇವರನಗರ[74] ಶೂರಪೂರ, ಸುರ-ಪುರ ಮುಂತಾದ ಕರೆದದ್ದು ಕಂಡುಬರುತ್ತದೆ.[75]

ಸುರಪುರ ನಗರವು ನಡುಗೇರಿ, ಮ್ಯಾಗೇರಿ, ಹಂಡೇವಜೀರಗೇರಿ, ಡೊಣ್ಣಿಗೇರಿ, ಜಗಂದಕೇರಿ, ಹುಲಕಲ್ಲಗೇರಿ, ಭೋಯಿಗೇರಿ, ರಾಮಪುರಕೇರಿ, ಕುರುಬಗೇರಿ, ಗುರಿಕಾರಗೇರಿ, ಸರಸಬಡಗೇರಿ, ಗಂಟನಾಯಕನಕೇರಿ, ಗೋಸಾಲಕೇರಿ, ಪಲ್ಲೇದಿಕೇರಿಗಳೆಂಬ ಒಟ್ಟು ಹದಿನಾಲ್ಕು 'ಓಣಿಗಳಿಂದ[76] ಕಂಗೊಳಿಸತೊಡಗಿತು. ಪ್ರತಿಯೊಂದು ಕೇರಿಗೂ ಸೈನ್ಯದ ಕಾವಲು ವಿಷಯವನ್ನು ಉಲ್ಲೇಖಿಸುವ ಕೈಫಿಯತ್ತು ಒಟ್ಟು 7050 ಸಂಖ್ಯೆ ಮೀರಿತ್ತೆಂದು ದೃಢಪಡಿಸುತ್ತದೆ. ಈ ರಾಜಧಾನಿಯ ರಕ್ಷಣೆಗಾಗಿ ಬೆಟ್ಟದ ಕೆಳಗಡೆ ಮತ್ತು ಸುರಪುರದ ಸುತ್ತಮುತ್ತ ಸಿದ್ದಾಪುರ, ಸಂಗನಕಲ್ಲು, ಶಿಬಾರಬಂಡಿ, ಮರಿಬಾವಿ, ತಳವಾರಗೇರಿ, ಹಸನಾಪೂರ, ಸುರಪುರ ಗಳಲ್ಲಿ ಏಳು ಠಾಣೆಗಳನ್ನಿಟ್ಟು, ಅವುಗಳಿಗೆ ಒಬ್ಬೊಬ್ಬ ಹವಾಲ್ದಾರನನ್ನು ನೇಮಿಸಲಾಯಿತು. ಅಲ್ಲದೆ ವಾಗಿನಗೇರಿ ಕಿಲ್ಲೆಯನ್ನು ರಕ್ಷಿಸಲು 200 ಮರಾಠರನ್ನು ಇಟ್ಟು ಅವರಿಗೆ ಇನಾಮು ಭೂಮಿ ಬಿಟ್ಟಬಗ್ಗೆ ತಿಳಿಯುತ್ತದೆ.

---

71. ಪೆರುಮಾಳಗುಂಡಾಚಾರ್ಯರ ಪ್ರಕಾರ ಕ್ರಿ.ಶ. 1708-10ರ ಮಧ್ಯೆ ಸ್ಥಾಪನೆಯಾಗಿರಬಹುದೆಂದು ಊಹೆ.
72. S.M.L. Pp-242-92.
73. Nawab Framurz Jung Bahadur -Shorapur: An Ancient Beydur Raj
74. Architecture at Beejapoor -by Taylor & Fergusson 1906.
75. ವಾಮನಾಯಕ – ಭಾರ್ಗವಪುರಾಣಮು (ತೆಲುಗು) (London 1866) p-52.
ಸಂ: ತಿರುಮಲರಾಮಚಂದ್ರ, (ಹೈದ್ರಾಬಾದ), ಪುಟ-84-87.
76. ರಂಗರಾಜ ವನದುರ್ಗ – ತುಷಾರ ಮಾಸಪತ್ರಿಕೆ. ಫೆಬ್ರುವರಿ, 1993. ಪುಟ-59.
ಲೇಖನ : ಕೇರಿಗಳು.

ನಿಜಾಮ ಮತ್ತು ಪೇಶ್ವೆಗಳ ಉದಯ :

ಮೊಘಲರು ಈ ಭಾಗದಿಂದ ಮರೆಯಾಗುವ ಮುನ್ನ ಮತ್ತೊಂದು ಮನೆತನವನ್ನು ಬಿತ್ತಿ ಹೋದರು. ಅದುವೇ ಹೈದ್ರಬಾದ ನಿಜಾಂ ಶಾಹಿ. ಖಾಜಾ ಅಹಮ್ಮದ್‌ಖಾನನೆಂಬ ಸರದಾರ ಮೊಘಲ ಬಾದಷಹ ಶಾಹಜಾನನಲ್ಲಿ ಸುಭೇದಾರನಾಗಿದ್ದುಕೊಂಡೇ ಶ್ರೇಷ್ಠ ಪದವಿ ಸಂಪಾದಿಸಿದ. ಈತನ ಮಗನೆ ಶಹಾಜಾನನ ಮುಖ್ಯಮಂತ್ರಿಯಾದ ಅಸದುಲ್ಲಾಖಾನನ ಮಗಳನ್ನು ಮದುವೆಯಾದ. ಇವರಿಂದ ಹುಟ್ಟಿದ ಪುತ್ರನೆ ನಿಜಾಮುಲ್ಮುಲುಕ ಅಸಫಜಾ. ಔರಂಗಜೇಬನ ಪ್ರೀತಿಗೆ ಪಾತ್ರನಾದ ನಿಜಾಮುಲ್ಮುಲುಕ ಬಿಜಾಪೂರ ಪ್ರಾಂತ್ಯದ ಸುಭೇದಾರನಾಗಿ ನೇಮಿಸಲ್ಪಟ್ಟನು. ಮುಂದೆ ಔರಂಗಜೇಬನ ಮಕ್ಕಳಾದ ಅಜಮ ಮತ್ತು ಮುಂತಾದವರು ಈತನಿಗೆ ಹಲವಾರು ಹುದ್ದೆಗಳನ್ನಿತ್ತರು. ಕೊನೆಗೆ ದಿಲ್ಲಿಯ ದಿವಾಣಗಿರಿಯನ್ನು ತ್ಯಜಿಸಿ ದಕ್ಕನದಲ್ಲಿ ಸ್ವತಂತ್ರನಾಗಿ ತಲೆಯೆತ್ತಿ 'ನಿಜಾಮ' ಅರಸೊತ್ತಿಗೆಗೆ ಅಡಿಗಲ್ಲು ಇಟ್ಟನು.

ಔರಂಗಜೇಬನ ಮರಣದಿಂದ ದಿಲ್ಲಿಯ ಆಡಳಿತ ಸೂತ್ರ ಶಿಥಿಲಗೊಂಡು ಪಶ್ಚಿಮದಲ್ಲಿ ಪೇಶ್ವೆಗಳು ಪ್ರಬಲರಾದರು. ನಿಜಾಮನಂತೆ ಬಾಳಾಜಿ ವಿಶ್ವನಾಥ, ಬಾಳಾಜಿ ಬಾಜಿರಾಯರು ಅಧಿಪತ್ಯ ಸಾಧಿಸಿದರು. ಇವೆರಡು ಮನೆತನದ ಆಕ್ರಮಣ ವ್ಯಾಪ್ತಿ ವಿಸ್ತರಣೆಗೊಂಡಂತೆಲ್ಲ ಪಿಡ್ಡನಾಯಕನ ಪ್ರಾಬಲ್ಯ ಅವರ ಅಧೀನಕ್ಕೆ ಒಳಪಡತೊಡಗಿತು. ಬಲಶಾಲಿಯಾದ ಪಿಡ್ಡನಾಯಕನು ಸಾರ್ವಜನಿಕರ ಕಲ್ಯಾಣಕಾರ್ಯದಲ್ಲಿ ಮಗ್ನನಾದ ಪ್ರಯುಕ್ತ ಮೇಲಿನೆರಡು ಮನೆತನಗಳು ಸುರಪುರ ಸರಹದ್ದಿನಲ್ಲಿ ಕೈದಾಡಲು ಅವಕಾಶ ಸಿಕ್ಕಿತು.

ವ್ಯಕ್ತಿತ್ವ :

ಎಂಬತ್ತೊಂದು ವರ್ಷ ಬಾಳಿದ ಪೀತಾಂಬರ ಪಿಡ್ಡನಾಯಕ ಆಳ್ವಿಕೆ ಮಾಡಿದ್ದು ಮೂವತ್ತೊಂಬತ್ತು ವರ್ಷ.[77] ಇದರಲ್ಲಿ ಅಮ್ಮನಾಗತಿಯ ಎರಡು ವರ್ಷ ಮತ್ತು ಔರಂಗಜೇಬನೊಂದಿಗೆ ಕಾದು ಸೋತು ತಲೆಮರೆಯಿಸಿಕೊಂಡ ಕೆಲವು ವರ್ಷ ಕಳೆದರೂ ಉಳಿದ ದಿನಗಳಲ್ಲಿ ಅತ್ಯಂತ ಹೋರಾಟದ ಬದುಕನ್ನೇ ರೂಢಿಸಿಕೊಂಡಿದ್ದಾನೆ.

---

77. G.S.Saradesai -New History of the Marathas Vol.II,p-90.

ದಿಲ್ಲಿ ಬಾದಷಾಹ ಔರಂಗಜೇಬನಿಗೆ ಎದುರಾಗಿ ನಿಲ್ಲುವದೆಂದರೆ ಅಂದು ಸಾಧ್ಯವಿಲ್ಲದ ಮಾತಾಗಿತ್ತು. ಆದರೂ ಸಣ್ಣ ವಾಗನಗೇರಿ ಸಂಸ್ಥಾನ ಮೊಘಲರ ವಿರುದ್ಧ ಸೆಡ್ಡು ಹೊಡೆದು, ಹಲವು ತಿಂಗಳು ಕಾಲ ಎದೆಎತ್ತಿ ಯುದ್ಧ ಮಾಡಲು ಪಿಡ್ಡನಾಯಕನ ಪರಾಕ್ರಮವೇ ಕಾರಣ ಮರಾಠರೊಂದಿಗೆ ಬೆಳೆಯಿಸಿದ "ಸ್ನೇಹ" ಸಮರದಲ್ಲಿ ಸಿಗದೆ ಹೋದಾಗ ಧೈರ್ಯಗುಂದದೆ ಯುದ್ಧ ಮಾಡಿದುದು ಶೌರ್ಯದ ಮಾತ್ರ ಸರಿ. ಈತನ ಹೆಸರು ಅಜರಾಮರವಾಗಿ ಉಳಿಯುವಂತೆ ಮಾಡಿದ್ದು 'ಸುರಪುರ' ಸ್ಥಾಪನಾ ಕಾರ್ಯದಿಂದ. ನಗರನಾಡಿನ ಸಮಗ್ರಸೀಮೆಯನ್ನು ಸಂಸ್ಥಾನಕ್ಕೊಂದರಲ್ಲಿ ಸಮಾವೇಶಗೊಳಿಸಿ ಆಳಿದ ಕೀರ್ತಿ ಈ ಪೀತಾಂಬರನಿಗೆ ಸಲ್ಲುತ್ತದೆ. ಆಳಿದ ಹಲವು ಅರಸರಲ್ಲಿ ವಿಶಿಷ್ಟ ವ್ಯಕ್ತಿತ್ವ ಹೊಂದಿದ್ದ ಪಿಡ್ಡನಾಯಕ ಮರೆಯಲಾರದ ಕಲ್ಯಾಣಕಾರ್ಯಗಳನ್ನು ಮಾಡಿ ಕ್ರಿ.ಶ.1726ರಲ್ಲಿ ಮೃತನಾದನು.[78]

ಕೌಟುಂಬಿಕ ಪರಿವಾರ :

ಪಿಡ್ಡನಾಯಕನಿಗೆ ನಾಲ್ವರು ಜನ ಮಡದಿಯರು ಐದು ಜನ ಪುತ್ರರಿದ್ದರು. ದತ್ತಕ ಪಡೆಯುದ ಪ್ರಸಂಗ ಬಹುಶಃ ಈತನಿಂದಲೇ ಆರಂಭವಾಯಿತೇನೊ.

ಪಿಡ್ಡನಾಯಕ

ಪತ್ನಿಯರು	ಪುತ್ರರು
1.ಕೃಷ್ಣಮ್ಮ	ವಾಮನಾಯಕ
2.ಬಂಗಾರೆಮ್ಮ	ಕೃಷ್ಣಪ್ಪನಾಯಕ
3.ತಿಮ್ಮಮ್ಮ	ಕಮಣಪ್ಪನಾಯಕ
4.ರಂಗಮ್ಮ	1.ಹಣಮಪ್ಪನಾಯಕ 2.ವಾಸುದೇವನಾಯಕ 3.ಹಾಗೂ 3 ಜನಹೆಣ್ಣು ಮಕ್ಕಳು.

78. Sanapuri Bakhir (Marathi) Pp.6-19.

(2) ಇಮ್ಮಡಿ ಪಾಮನಾಯಕ :(ಕ್ರಿ.ಶ.1727-41)

ಪಿತಾಂಬರ ಬಹರಿ ಪಿಡ್ಡನಾಯಕನ ಹಿರಿಯ ಮಗ ಇಮ್ಮಡಿ ಪಾಮನಾಯಕನು ಕ್ರಿ.ಶ. 1727ರಲ್ಲಿ ಸುರಪುರ ಸಂಸ್ಥಾನದ ಪಟ್ಟವೇರಿದನು. ಸಿಂಹಾಸನವೇರಿದ ಸ್ವಲ್ಪಸಮಯದಲ್ಲೇ ಹಲವಾರು ಸಮಸ್ಯೆಗಳು ಎದ್ದು ಎದುರುಬಂದವು. ತಂದೆ ಕಟ್ಟಿಹೋದ ಸುರಪುರ ಸಂಸ್ಥಾನವನ್ನು ಇನ್ನಷ್ಟು ಸುಭದ್ರಗೊಳಿಸಬೇಕಿತ್ತು. ಸಾಮ್ರಾಜ್ಯ ಅಧಿಪತಿಗಳ ಸ್ನೇಹ ಬೆಳಸಿ ಸಾಮಂತಿಕ ಒಪ್ಪಿಕೊಳ್ಳಬೇಕೋ ಇಲ್ಲ ಅವರ ದಾಸ್ಯ ಧಿಕ್ಕರಿಸಿ ಸ್ವಾತಂತ್ರ್ಯ ಸಾರಿಕೊಳ್ಳಬೇಕೋ ಎಂಬ ಪ್ರಶ್ನೆ ಬೃಹತ್ ಆಕಾರದಲ್ಲಿ ಬಂದು ನಿಂತಿತು. ಮೊಘಲರ ವಿರುದ್ಧ ರಣಕಹಳೆಯನ್ನೇ ಊದಿದ ತಂದೆಯ ಕದನ ಕ್ರಾಂತಿ–ಇನ್ನೂ ಹಸಿಯಾಗಿಯೇ ಇತ್ತು.

ಆದರೆ, ಇಮ್ಮಡಿ ಪಾಮನಾಯಕನ ಕಾಲಕ್ಕೆ ಭಾರತದ ಆಳ್ವಿಕೆಯಲ್ಲಿ ಬಹಳಷ್ಟು ಬದಲಾವಣೆಯ ಗಾಳಿ ಬೀಸಿದವು. ದಿಲ್ಲಿ ದೊರೆ ಔರಂಗಜೇಬನ ಅಂತ್ಯದಿಂದ ಅರ್ಧಭಾಗ ಅಭದ್ರಗೊಂಡ ಮೊಘಲರ ಮುಖಂಡತ್ವ ಮಕ್ಕಳ ಕಾಲಕ್ಕಿಂತು ಸಂಪೂರ್ಣ ಶಿಥಿಲಗೊಂಡಿತು. ನೆಪ ಮಾತ್ರಕ್ಕೆ ಮೊಘಲರಲ್ಲಿ ಸಾಮಂತಿಕೆ ಒಪ್ಪಿದ ನಿಜಾಮ ದಕ್ಷಿಣದಲ್ಲಿ ಸ್ವತಂತ್ರನಾದ. ಪಶ್ಚಿಮದಲ್ಲಿ ಮರಾಠ ಪೇಶ್ವೆಗಳು ಪ್ರಾಬಲ್ಯಕ್ಕೆ ಬಂದರು.[78ಎ] ಇದರಿಂದ ದಕ್ಷಿಣದಲ್ಲಿದ್ದ ಚಿಕ್ಕಪುಟ್ಟ ಸಂಸ್ಥಾನಗಳು ನಿಜಾಮನ ಸಾಥಕ್ಯ ಬಯಸಿದವು. ಅವುಗಳಲ್ಲಿ ಪಾಮನಾಯಕನ ಸುರಪುರ ಸಂಸ್ಥಾನವು ಒಂದು. ಇಮ್ಮಡಿ ಪಾಮನಾಯಕನ ರಾಜ್ಯಾರೋಹಣ ಸಮಾರಂಭಕ್ಕೆ ಶುಭಕೋರಿದ ನಿಜಾಂ ಸ್ನೇಹ ಮತ್ತು ಸೈನ್ಯ ಸಂಬಂಧಗಳನ್ನೂ ಗಾಢಗೊಳಿಸಿಕೊಂಡ. ಇದರಿಂದ ಸಂಸ್ಥಾನದೊಂದಿಗೆ ಮೊಘಲ ಮತ್ತು ಮರಾಠರ ಸಂಬಂಧಗಳು ದೂರವಾಗಿ ನಿಜಾಂನ ಸ್ನೇಹ ಮಾತ್ರ ವೃದ್ಧಿಯಾಯಿತು.

ಸೈನ್ಯ ಸಹಾಯ :

ಸಾಮ್ರಾಜ್ಯ ಅಧಿಪತಿಗಳಿಗೆ ಸೈನಿಕ ಸಹಾಯಕ ಮಾಡಿದಾಕ್ಷಣ ಇವರಿಗೆ ಅನೇಕ ರೀತಿಯ ಸವಲತ್ತು ಸಿಗುತ್ತಿದ್ದವು.[79] ಆದುದರಿಂದ ಪಾಮನಾಯಕ ತನ್ನ ಸಂಸ್ಥಾನದ ಸುಭದ್ರತೆ, ಅಭಿವೃದ್ಧಿಗೋಸ್ಕರ ನಿಜಾಮನಿಗೆ ಸಹಾಯ ಸಲ್ಲಿಸುತ್ತ ಬಂದ. ಮರಾಠರೊಂದಿಗೆ ನಡೆದ ಯುದ್ಧವೊಂದರಲ್ಲಿ

78.ಎ ಸು.ಸಂ.ಇ. ಪುಟ–79

79. Capt.Jackson's Memo FPC 19 Apr.1841 No.103.

ನಿಜಾಮ ಬಣಕ್ಕೆ ಬೆಂಬಲಿಸಿ 4000 ಫೌಜಿನೊಂದಿಗೆ ಹೋಗಿ ಗೆದ್ದುಕೊಟ್ಟ. ಪಾಮನಾಯಕನ ಇಂಥ ಇನ್ನೂ ಕೆಲವು ಕಾಳಗದ ಪ್ರಕರಣಗಳನ್ನು ಕೈಫಿಯತ್ತು ಉದಾಹರಿಸುತ್ತವೆ.

ನಿಜಾಮನ ಚಿತ್ತನ – ಒಪ್ಪಿದ್ದ ಮುದಗಲ್ಲಿನ ತೋದಪ್ಪರಿಯು ಆನೆಗುಂದಿ ಅರಸನಿಂದ ಪರಾಜಿತನಾದ. ಮುದಗಲ್ಲು ಕೋಟೆ ತಿರುವಲರಾಯನ ವಶವಾಯಿತು. ಆಗ ನಿಜಾಮನಲ್ಲಿ ಮೊರೆಹೊಕ್ಕ ಯೊದಪ್ಪರಿಗೆ ಪಾಮನಾಯಕನೇ ಪರಿಹಾರವಾದ ಸತತ 21 ದಿನಗಳ ವರೆಗೆ ನಡೆದ ಈ ಕಾಳಗದಲ್ಲಿ ಕೊನೆಗೆ ಆನೆಗುಂದಿ ಅರಸು ಸೋಲು ಒಪ್ಪಿಕೊಂಡು ಪಾಮನಾಯಕನಿಗೆ ಶರಣಾದ. ಮತ್ತೆ ಮರಳಿ ಮುದಗಲ್ಲು ಕೋಟೆಯನ್ನು ರೆಡ್ಡಿಗೆ ಕೊಡುವಲ್ಲಿ ಪಾಮನಾಯಕ ಪ್ರಮುಖಪಾತ್ರವಹಿಸಿದನೆಂಬ ವಿಷಯ ನಿಜಾಮನ ಕೆಲವು ದಾಖಲೆಗಳಿಂದ ದೃಢಪಟ್ಟಿದೆ. ನಿಜಾಮ, ತನ್ನ ಮೇಲೆ ಬಿದ್ದ ಇಂಥ ಸಮಸ್ಯೆಗಳನ್ನೆಲ್ಲ ಪಾಮನಾಯಕನ ಮೂಲಕವೇ ಪರಿಹರಿಸಿಕೊಳ್ಳುವುದು ಒಂದು ರೂಢಿಯೇ ಆಗಿಬಿಟ್ಟಿತು. ಯಾಕೆಂದರೆ ಕನಕಗಿರಿಯ ಹಿರೇನಾಯಕನೊಂದಿಗಿನ ಕಾಳಗ ಇದಕ್ಕೆ ಉದಾಹರಣೆ. ಒಂಬತ್ತು ಲಕ್ಷ ರೂಪಾಯಿ ಉತ್ಪನ್ನವುಳ್ಳ ಪ್ರದೇಶಕ್ಕೆ ಪಾಳೆಗಾರನಾಗಿದ್ದ ಹಿರೇನಾಯಕ ಅನೇಕ ದುಷ್ಕಾರ್ಯಗಳಲ್ಲಿ ಕೈಗೂಡಿಸಿದ್ದ. ಬೇಸತ್ತ ಆ ಭಾಗದ ದೇಸಾಯಿ ಮತ್ತು ದೊರೆಗಳು ನಿಜಾಮನಲ್ಲಿ ಮೊರೆಯಿಟ್ಟರು. ಆಗ ತನ್ನೆಲ್ಲ ಸೈನ್ಯಬಲದೊಂದಿಗೆ ಸುರಪುರದಿಂದ ಸಾಗಿದ ಪಾಮನಾಯಕ ಕನಕಗಿರಿಯ ಮೇಲೆ ದಾಳಿ ಮಾಡಿದನು. ಎರಡು ಬಣಗಳಲ್ಲಿ ಅಪಾರ ಸಾವು-ನೋವು ಸಂದವು. ಸುರಪುರದ ಪ್ರಮುಖ ಸರ್ದಾರರು ಕೊಲೆಗೈಯಲ್ಪಟ್ಟರು. ನೊಂದುಕೊಂಡ ನಿಜಾಮ ಕೂಡಲೇ ಹಣ, ಸೈನ್ಯ ಸಹಾಯವನ್ನು ರಣರಂಗದತ್ತ ರವಾನಿಸಿದ. ಕಾಳಗದ ಕೊನೆಗೆ ಕನಕಗಿರಿಯ ನಾಯಕ ಸುರಪುರದ ಕೋಟೆಗಾರರ ಕೈಗೆ ಸೆರೆಸಿಕ್ಕ. ಆತನನ್ನು ಅದೇ ಬಂಧನದಲ್ಲಿ ಹೈದ್ರಾಬಾದ ನಿಜಾಮನಲ್ಲಿಗೆ ಒಯ್ಯಲಾಯಿತು.

ಸದರಿ ಸಹಾಯದಿಂದ ಪಾಮನಾಯಕ ಪಡೆದದ್ದು "ವಂಶಪರಂಪರ್ಯದ ಆಸ್ತಿ ಹಕ್ಕು ಮತ್ತು ಹೈದ್ರಾಬಾದ ನಗರಕ್ಕೆ ಹೋಗಿ ಬರುವ ನಿತ್ಯಖರ್ಚು" ಇದಕ್ಕೆ 3ನೆಯ ನಂಬರಿನ ಕೈಫಿಯತ್ತು ಆಧಾರ ಒದಗಿಸುತ್ತದೆ.

<u>ಪರಿವಾರ :</u>

ದೇವದುರ್ಗದ ರುಕಮ್ಮವ್ವಳನ್ನು ಪಟ್ಟದ ರಾಣಿಯಾಗಿ ಪಡೆದ ಪಾಮನಾಯಕ ಬಂಗಾರಮ್ಮಳೆಂಬ ಇನ್ನೊಬ್ಬಳನ್ನು ಉಪಪತ್ನಿಯಾಗಿ ಸ್ವೀಕರಿಸಿದ್ದ. ರಾಣಿ ರುಕಮವ್ವಳಿಗೆ ಪಿಡ್ಡ

ನಾಯಕ ಹಾಗೂ ವೆಂಕಟಪ್ಪನಾಯಕರೆಂಬ ಇಬ್ಬರು ಮಕ್ಕಳಿದ್ದರು. ಪದ್ಧತಿಯಂತೆ ಪಟ್ಟದ ರಾಣಿಯ ಹಿರಿಯ ಮಗನನ್ನೇ ಸುರಪುರದ ಮುಂದಿನ ಉತ್ತರಾಧಿಕಾರಿಯೆಂದು ಸಾರಲಾಯಿತು.

ಸುರಪುರ ಸಂಸ್ಥಾನದ ಗಾದಿಯ ಮೇಲೆ 14 ವರ್ಷ ರಾಜ್ಯಭಾರ ಗೈದ ಪಾಮನಾಯಕ ಕ್ರಿ.ಶ. 1741ರಲ್ಲಿ ಮೃತಪಟ್ಟ.

(3) ಮುಮ್ಮಡಿ ಪಿಡ್ಡನಾಯಕ :(ಕ್ರಿ.ಶ. 1742-46)

ತಂದೆಯ ತರುವಾಯ ಸುರಪುರದ ಸಿಂಹಾಸನವೇರಿದ ಮುಮ್ಮಡಿ ಪಿಡ್ಡನಾಯಕ ಅತ್ಯಂತ ಅಸಮರ್ಥನಾಗಿದ್ದ. ಸಂಸ್ಥಾನ ಕಂಡ ಅತಿಹೇಡಿ ಅರಸ. ಈ ಪಿಡ್ಡನಾಯಕನೆಂದರೆ ತಪ್ಪಲ್ಲ. ಕೇವಲ ನಾಲ್ಕು ವರ್ಷ ರಾಜ್ಯಭಾರಗೈಯಲೂ ಸಹ ಶಕ್ತನಾಗದ ಈತ ಸಂಸ್ಥಾನದಲ್ಲಿ ಯಾವ ಕಲ್ಯಾಣಕಾರ್ಯದ ಪುರುಷಾರ್ಥ ಸಾಧಿಸದೆ ಕ್ರಿ.ಶ. 1746ರಲ್ಲಿ ಕೈಲಾಸ ಸೇರಿದ.

ಪ್ರಸ್ತುತ ಪಾಮನಾಯಕನ ಬಗ್ಗೆ ಮೂರು ಸಂದೇಹಗಳು ಮೂಡುತ್ತವೆ:

1. ಕೇವಲ ನಾಲ್ಕು ವರ್ಷದ ಆಳ್ವಿಕೆ ಆಳಿದುದು
2. ಪತ್ನಿ ಸತ್ಯಮ್ಮಳಿಗೆ ಪುತ್ರ ಸಂತಾನವಿಲ್ಲದಿರುವುದು
3. ತಮ್ಮನ ಪ್ರಾಬಲ್ಯದೆದುರು ತಲೆ ಎತ್ತದಿರುವುದು.

ಈ ಮೇಲಿನ ಮೂರು ಅಂಶಗಳ ಬಗ್ಗೆ ಕೈಫಿಯತ್ತುಗಳೂ ಸಹ ಮೌನವಹಿಸಿವೆ. ಅತ್ಯಲ್ಪಕಾಲದ ಆಳ್ವಿಕೆ ಮಾತ್ರ ಹಲವಾರು ಸಂಶಯಗಳಿಗೆ ಎಡೆಮಾಡಿದೆ. ಆಯುಷ್ಯವೇ ಅಲ್ಪವಾಗಿತ್ತೋ ಅಥವಾ ಅನಿರೀಕ್ಷಿತ ಸಾವೆ? ಅದರ ಬಗ್ಗೆ ಇನ್ನೂ ಚರಿತ್ರೆಯು ನಿಗೂಢ ನೀಡಿದೆ. ನಾಲ್ಕು ವರ್ಷದಲ್ಲಿ ಈತನಿಂದ ಸಂಸ್ಥಾನದಲ್ಲಿ ಒಂದೂ ಜನಹಿತ ಕಾರ್ಯ ನಡೆಯಲಿಲ್ಲವೆ? ನಡೆದಿದ್ದರೆ ಎಲ್ಲಿಯೂ ಉಲ್ಲೇಖಗಳಿಲ್ಲ. ಪಟ್ಟದ ಪತ್ನಿ ಸತ್ಯಮ್ಮಳಿಗೆ ಪುತ್ರ ಸಂತಾನವಿಲ್ಲದೆ ಇರುವುದರಿಂದ ಸಂಸ್ಥಾನದ ಸಿಂಹಾಸನಕ್ಕೆ ವಾರಸುದಾರರೆ ಇಲ್ಲದಂತಾಯಿತು. ಆಗ ತಮ್ಮನಾದ ಮೊಂಡಗೈ ವೆಂಕಟಪ್ಪನಾಯಕನ ತೀವ್ರ ಬೆಳವಣಿಗೆಯನ್ನು ಸಂಸ್ಥಾನ ಆಹ್ವಾನಿಸಿದರಿಂದಲೇ ಪಿಡ್ಡನಾಯಕನ ಅಲ್ಪ ಆಳ್ವಿಕೆಗೆ ಮೂಲಕಾರಣವಾಗಿರಬೇಕು.

(4) ಮೊಂಡಗೈ ವೆಂಕಟಪ್ಪನಾಯಕ :(ಕ್ರಿ.ಶ. 1747-52)

ಅಣ್ಣನಾದ ಮುಮ್ಮಡಿ ಪಿಡ್ಡನಾಯಕನ ಅಸಮರ್ಥ ಆಳಿತೆಯಿಂದ ಸುರಪುರ ಸಂಸ್ಥಾನ ಅಭದ್ರವಾಗಿತ್ತು. ಕಲ್ಯಾಣ ಕಾರ್ಯಗಳಿಲ್ಲದೆ, ವೈರಿದಾಳಿ ಹಿಮ್ಮೆಟ್ಟಿಸದೆ, ಸುಖಲೋಲುಪನಾಗಿ ಆಳಿ

ಚಿತ್ರ . 4 ಮೊಂಡುಗೈ ವೆಂಕಟಪ್ಪನಾಯಕ

ಕೃಪೆ : ಸು.ಸಂ.ಇ.

ಹೋದಾತನ ಕೊರತೆಯನ್ನು ಭರತಿ ಮಾಡುವ ಮಹಾನ್ ಬೇಡಿಕೆ ಈಗ ವೆಂಕಟಪ್ಪನಾಯಕನ ಮೇಲಿತ್ತು. ಹೈದ್ರಾಬಾದ ನಿಜಾಮನೊಂದಿಗೆ ಸ್ನೇಹದ ಹಸ್ತಲಾಘವಿತ್ತು, ತನ್ನ ಸಂಸ್ಥಾನವನ್ನು ಸುಭದ್ರತೆಯತ್ತ ಸಾಗಿಸುವ ಭಾರ ತಲೆಮೇಲೆ ಹೊತ್ತುಕೊಂಡೇ ಕ್ರಿ.ಶ. 1747ರಲ್ಲಿ ಸಿಂಹಾಸನವೇರಿದ.

ಸುರಪುರದ ಗಡಿ ವಿಸ್ತರಿಸುವ ವೆಂಕಟಪ್ಪನಾಯಕನ ಹಂಬಲ ಮೊದಲ ಪ್ರಯತ್ನದಲ್ಲೇ ಅನೇಕ ಅಡೆತಡೆಗಳನ್ನು ಎದುರಿಸಿತು. ಇದರ ಬಗ್ಗೆ 'ಗೋಸಲವಂಶದ ಬಡೆ' ಯಲ್ಲಿ ಪುರುಷಕಾರಿಯವರು ವಿವರವಾಗಿ ಬರೆದಿದ್ದಾರೆ. ''ತನ್ನ ಸೈನ್ಯ ಸಮೇತ ದಖನಿ ಸರ್ದಾರರೊಂದಿಗೆ ದಂಡೋಲೆ, ಚಿತ್ತಾಪೂರ, ಅರಲೂರ ಗ್ರಾಮಗಳನ್ನು ಗೆಲ್ಲುತ್ತ ಹೊರಟ ವೆಂಕಟಪ್ಪನಾಯಕನ ವಿರುದ್ಧವೇ ಸಂಸ್ಥಾನದಲ್ಲಿ ಬೇಡರ ಬಂಡು ದಂಗೆ ಎದ್ದಿತ್ತು. ರಾಯಪ್ಪ ಗುರಿಕಾರ, ಮಲ್ಲಯ್ಯ ಗುರಿಕಾರ, ನರಹಲ್ದಾರ ತಿಮ್ಮಪ್ಪ ಮುಂತಾದ ಮುಖಂಡರು ಬೇಡರನ್ನು ಹುರಿದುಂಬಿಸಿ ವೆಂಕಟಪ್ಪನಾಯಕನ ಅರಸೊತ್ತಿಗೆ ವಿರುದ್ಧ ಅವಿಶ್ವಾಸ ಸಾರಿದರು. ಯುದ್ಧಕ್ಕೆ ಹೋದ ಸಂದರ್ಭ ಅರಿತು ಗುಡಗುಂಟಿಯ ಸೋಮನಜ್ಜನನ್ನು ಕರೆತಂದು ಸುರಪುರದ ಅರಸನೆಂದು ಘೋಷಿಸಿದರು. ಒಂಬತ್ತು ತಿಂಗಳ ತರುವಾಯ ರಾಜ್ಯ ವಿಸ್ತರಣೆಯಿಂದ ಮರಳಿಬಂದ ವೆಂಕಟಪ್ಪನಾಯಕನಿಗೆ ಮತ್ತು ಬಂಡುಗಾರರಿಗೆ ಭೀಕರ ಹೋರಾಟವಾಯಿತು. ಬಂಧನವು ಜರುಗಿತು. ಆಗ ದೇವದುರ್ಗದ ಕಿಡನಾಯಕನ ಮಧ್ಯಸ್ಥಿಕೆಯಿಂದ ಬಂಡುಗಾರರು ರಾಜ್ಯದ್ರೋಹಿಗಳೆಂದು ತೀರ್ಮಾನಿಸಿ ಅವರ ತರಿಹೊಡೆಸಲಾಯಿತು'' ಎಂಬುದು ಪುರುಷಕಾರಿಯವರ ಅಭಿಪ್ರಾಯ.

ವೆಂಕಟಪ್ಪನಾಯಕನಿಗೆ ಎಡಮುಂಗೈ ಇರಲಿಲ್ಲ. ಯಾವುದೋ ಕಾರಣದಿಂದ ಕತ್ತರಿಸಲಾಗಿತ್ತು. ಕಬ್ಬಿಣದ ಮುಂಗೈಯನ್ನೇ ಧರಿಸಿ ಅಂಗವಿಕಲತೆ ಮರೆಮಾಡಿಕೊಂಡಿದ್ದ. ಈ ಪ್ರಯುಕ್ತ ಈತನಿಗೆ ಮೊಂಡಗೈ ವೆಂಕಟಪ್ಪನಾಯಕನೆಂದೆ ಕರೆಯುತ್ತಿದ್ದರು. ಇದರ ಬಗ್ಗೆ ಅನೇಕ ಐತಿಹ್ಯ, ಕಥೆ, ಕವನ, ಕೃತಿಗಳಿದ್ದರು. ಇವೆಲ್ಲ ಐತಿಹಾಸಿಕ ಅಂಶ ವ್ಯಕ್ತಪಡಿಸುವಲ್ಲಿ ವಿಫಲವಾಗಿವೆ.

<u>ಪುದುಚೇರಿ (ಪಾಂಡಿಚೇರಿ) ಕಾಳಗ :</u>

ಹೈದ್ರಾಬಾದ ನಿಜಾಮುಲ್ಮುಲ್ಕನ ತರುವಾಯ ರಾಜ್ಯಕ್ಕಾಗಿ ಮಗನಾದ ನಾಸರಜಂಗನಿಗೂ ಮತ್ತು ಮಗಳ ಮಗನಾದ ಮುಜಫರಜಂಗನಿಗೂ ಕಲಹವೇರ್ಪಟ್ಟಿತು.[80] ಇಂಥ ಪ್ರಸಂಗದ ನಿರೀಕ್ಷೆಯಲ್ಲಿಯೇ ಇದ್ದ ಫ್ರೆಂಚ್ ಗೌರ್ನರ ಡೂಪ್ಲೆಯು ಹೈದ್ರಾಬಾದ ನಿಜಾಮನ ವಿರುದ್ಧ ಚಾಂದಸಾಹೇಬನನ್ನು ಎತ್ತಿಕಟ್ಟಿ ಪುದುಚೆರಿ ಕದನಕ್ಕೆ ಕಾರಣನಾದನು. ಫ್ರೆಂಚರನ್ನು ತುಳಿಯಲು ಇದೇ ಸಮಯ — ಉಚಿತವೆಂದ ಇಂಗ್ಲೀಷರು ನಾಸರಜಂಗ ಮತ್ತು ಮೊಹಮ್ಮದ ಅಲಿಯನ್ನು ಮುಂದೆ ಮಾಡಿಕೊಂಡು ಹೈದ್ರಾಬಾದ ಬಣಕ್ಕೆ ಬೆಂಬಲಿಸಿದರು. ಮುಜಫರಜಂಗ, ಚಂದಾಸಾಹೇಬರು ಫ್ರೆಂಚರ ಪ್ರಬಲ ಸೈನ್ಯದೊಂದಿಗೆ ಎದುರಾದರು. ಆಗ ಸೈನ್ಯಜೋಡಣೆಯಲ್ಲಿದ್ದ ನಾಸರಜಂಗನು ತನ್ನ ಮಾಂಡಲಿಕರಾದ ಹಿಮ್ಮತಖಾನ, ಅಬ್ದುಲಕರೀಮಖಾನ, ಮೋದಿಖಾನಿಯಾ ಮುಂತಾದವರೊಂದಿಗೆ ಯುದ್ಧಕ್ಕೆ ಸಿದ್ಧನಾದ. ಯುದ್ಧದಲ್ಲಿ ವಿಜಯ ಸಾಧಿಸಲೇಬೇಕಾದರೆ ಸುರಪುರದ ಸೈನ್ಯ ಅತ್ಯವಶ್ಯವಿತ್ತು. ಅದನ್ನರಿತು ಅಗತ್ಯಕ್ಕಾಗಿ ನಾಸರಜಂಗನ ಆಹ್ವಾನವು ಹೋಯಿತು. ಸಾಮಂತಿಕೆಯ ಒಪ್ಪಂದದಂತೆ ಸೈನ್ಯ ಸಹಾಯನೀಡಲು ತನ್ನ 12 ಸಾವಿರ ಮಾಲ ಬಲಾಢ್ಯ ಬೇಡ ಪಡೆಯೊಂದಿಗೆ ವೆಂಕಟಪ್ಪನಾಯಕ ನಾಸರ ಜಂಗನಿಗೆ ಬೆಂಬಲಿಸಿದನು.[81] ಈತನ ದಂಡಿನ ವಿಶೇಷತೆಯೆಂದರೆ 900 ಕೋಟೆಗಾರರ ಕಟುಧೈರ್ಯ, ಬೇಡಪಡೆಯ ಬಿಲ್ಲುಗಾರಿಕೆ. ಸುರಪುರ ಬಿಡುವಾಗ ಸಂಸ್ಥಾನದ ಕಾರ್ಯಭಾರವೆಲ್ಲ ರಮಣಪ್ಪನಾಯಕನಿಗೆ ವಹಿಸಿ ಪಾಂಡಿಚೇರಿ ಪ್ರದೇಶಕ್ಕೆ ಬಂದಿಳಿದ.[82] ನಾಸರಜಂಗನ ಸೈನಿಕದೊಂದಿಗೆ ಸುರಪುರ ಪಡೆಸಮಾವೇಶಗೊಂಡಿತ್ತಾದರೂ ತನ್ನ ಪ್ರತ್ಯೇಕತೆ ಕಾಯ್ದುಕೊಂಡಿತ್ತು.

ಪುದುಚೆರಿಯ ಭವ್ಯಕೋಟೆ ಮತ್ತು ಅದರ ವೈಭವದ ವರ್ಣನೆಯನ್ನು ಎಲ್ಲಾ ಕೈಫಿಯತ್ತುಗಳಲ್ಲಿ ಕಾಣುತ್ತೇವೆ. 56 ಹುಡೆ, 30 ಬಾಗಿಳಿಂದ ಸುತ್ತುವರೆದ ಪುದುಚೆರಿಯ ಭದ್ರಕೋಟೆ ಬಿರುಕುಬಿಡುವದೆಂತೆಂಬುದು ನಾಸರಜಂಗನ ಮುಂದಿರುವ ಬಲವಾದ ಪ್ರಶ್ನೆ. ಆದರೆ ಇದು ಅತ್ಯಂತ ಸರಳವಾದುದು ಎಂಬುದು ಸುರಪುರದ ಉತ್ತರ. ಸಾಮಂತಸರದಾರರೆಲ್ಲರು ಒಟ್ಟುಗೂಡಿ 1 ಲಕ್ಷ ಸೈನ್ಯ ನಾಸರಜಂಗನ ನೇತೃತ್ವದಲ್ಲಿತ್ತು. ಇದರಷ್ಟೇ ಸಯ್ಯ ಫ್ರೆಂಚರ ಸಾರಥ್ಯದ ಮುಜಫರಜಂಗ, ಚಾಂದಸಾಹೇಬರ ಪಡೆ ಕೋಟೆಯ ರಕ್ಷಣೆಯಲ್ಲಿತ್ತು. ಯುದ್ಧ ಘೋಷಣೆಯಾಗುತ್ತಲೆ

---

80. ಪೆರುಮಾಳ್ಳ ಗುಂಡಾಚಾರ್ಯ — ಸಗರನಾಡು ದರ್ಶನ.
ಲೇಖನ : ಸುರಪುರ ಸಂಸ್ಥಾನದ ಸಂಕ್ಷಿಪ್ತ ಚಾರಿತ್ರಿಕ ದರ್ಶನ. ಪುಟ-193.
81. ಪಿ.ಬಿ.ದೇಸಾಯಿ — ಮದಗಜಮಲ್ಲ. ಪುಟ-74.
82. ಸು.ತಾ.ದ. ಪುಟ-13.

ಎರಡು ಬಣಗಳ ನಡುವೆ ಘನಘೋರ ಕಾಳಗ ಆರಂಭವಾಯಿತು. 9 ದಿನದಲ್ಲೇ ನಾಸರಜಂಗನ 32000 ಸೈನಿಕರು ರಣರಂಗದಲ್ಲಿ ಹತರಾದರು. ಆಗ ಅಲ್ಲಿಯವರೆಗೆ ಯುದ್ಧಮಾಡದೆ ಸುಮ್ಮನಿದ್ದ ಸುರಪುರ ಸೈನ್ಯ ಪುಟಿದೆದ್ದು ಕದನಕ್ಕಿಳಿಯಿತು. ವಿಶಿಷ್ಟ ಯುದ್ಧ ನೀತಿಯನ್ನು ಅನುಸರಿಸಿ ಒಂದೇ ದಿನದಲ್ಲೇ ಪುದುಚೆರಿ ಕಿಲ್ಲೆ ಕೈವಶ ಮಾಡಿಕೊಂಡು ಯಶಸ್ವಿಯಾದರು. ಈ ಭೀಕರ ಯುದ್ಧದಲ್ಲಿ ವೆಂಕಟಪ್ಪನಾಯಕನ ಬಲಾಧಿಕವೇಗಿತ್ತು ಎನ್ನಲು —

ಗುಂಡಿಗಂಜದ ವೆಂಕಟೇಂದ್ರನು
ತುಂಡುಗಡಿದನು ತಾಮ್ರಮುಖರನು
ದಂಡಧವನಂದದಲಿ ಗಿರಿಕೋದಂಡ ರುದ್ರನೊಲು
ಚಂಡತರ ಮಾರ್ತಾಂಡನನೆರಣ
ಮಂಡಲದಿ ವೈರಿಗಳ ರುಂಡದ
ಚಂಡನಾಡಿದ ಬಹರಿವೇಂಕಟ ಮಂಡಲಾಧಿಪನು[83]

ಎಂಬ ಪದ್ಯವು ರೋಮಾಂಚನ ದೃಶ್ಯ ಬಿಂಬಿಸುತ್ತದೆ. ಈ ವಿಜಯಕ್ಕೆ 'ತುಂಬಿದ ಕಂದಕದಲ್ಲಿ ಈಜುಬಿದ್ದ ಕೋಟೆಗಾರರು, ಕೋಟೆ ಏರಿದ ಮರಗಾಲಿನ ಗಾರದರು' ಮೂಲ ಕಾರಣರು. ದುರ್ದೈವವೆಂದರೆ ರಕ್ತ ಚೆಲ್ಲಿ ಹೋರಾಡಿದ ಕೋಟೆಗಾರರು, ಗಾರದರು ಮತ್ತು ಅನೇಕ ಬೇಡರು ಪುದುಚೆರಿ ವಿಜಯವನ್ನು ಕಣ್ಣಾರೆ ನೋಡಲಿಕ್ಕೆ ಇಲ್ಲ, ಕಾಳಗದಲ್ಲಿ ಇವರೆಲ್ಲ ಕಣ್ಮುಚ್ಚಿದ್ದರು. ತನ್ನ ಅಪಾರ ಸೈನ್ಯಕ್ಕೆ ಹಾನಿ ಅನುಭವಿಸಿಕೊಂಡ ವೆಂಕಟಪ್ಪನಾಯಕನಿಗೆ ನಾಸರ ಜಂಗನ ಇನಾಮುಗಳನ್ನು ನೀಡಿದವನಲ್ಲದೆ,[84] 'ಬೇಡರುಣಕೇದಾರಿ' ಎಂಬ ಹೊಸ ರಸೂಮನ್ನು ಎತ್ತಿಕೊಳ್ಳಲು ಅನುಮತಿಯಿತ್ತನು. ಇವೆಲ್ಲಕ್ಕಿಂತ ಹೆಚ್ಚಾಗಿ — "ಬಲವಂತ ಬಹಿರಿರಾ ಬಜಂಗ ಮತಹರುದ್ದೌಲಾ ಬಬರುಲ್ಮುಲಕ" ಎಂಬ ನೂತನ ಬಿರುದಿತ್ತು ಸನ್ಮಾನಿಸಿದನು.

<u>ರಾಜಧಾನಿ ವಿಸ್ತರಣೆ : ಸಂಸ್ಥಾನ ಸಂರಕ್ಷಣೆ :</u>

ಪಾಂಡಿಚೇರಿ ಕಾಳಗದಿಂದ ಮರಳಿ ಬಂದ ವೆಂಕಟಪ್ಪನಾಯಕ ತನ್ನ ಸಂಸ್ಥಾನದ ಸ್ಥಿತಿಗತಿಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದನು. ರಾಜಧಾನಿಯ ರಕ್ಷಣೆಗಾಗಿ ಮತ್ತು ಸಂಸ್ಥಾನದ ವಿಸ್ತರಣೆಗಾಗಿ ವಿಶೇಷ ಯೋಜನೆ ರೂಪಿಸಿ ಕಾರ್ಯರೂಪಕ್ಕಿಳಿಸಿದನು. ಸುರಪುರಕ್ಕೆ ಸುತ್ತಲು ಐದು

---

83. ಕೋಸಲ ನೃಪ ವೃತ್ತಾಂತ (ಹಸ್ತಪ್ರತಿ)
84. F.P.S. 15 OCT. 1852, No.39.

ಅಗಸಿ ಕಟ್ಟಿಸಿ[85] ಅವುಗಳಿಗೆ ಭದ್ರ ಬಾಗಿಲುಗಳನ್ನು ನಿರ್ಮಿಸಿದನು. ಪ್ರತಿಯೊಂದು ಅಗಸಿಗೂ ಸೈನ್ಯಕಾವಲು ಇಟ್ಟು ವೈರಿಗಳಿಂದ ರಕ್ಷಣೆಯೊದಗಿಸಿದನು. ವಿಶೇಷವಾಗಿ ವೆಂಕಟಾಪೂರ ದಿಡ್ಡಿಗೆ ಸರನೌಬತ್ತು, ಸರಹವಲ್ದಾರ ನೇತೃತ್ವದಲ್ಲಿ 900 ಸೈನಿಕರನ್ನು ಪಹರೆಗಿಟ್ಟನು. ಯಾಕೆಂದರೆ ನಿಶಾನಿಮಾರಡಿ ಮೂಲಕ ಬರುವ ವೈರಿಗಳಿಗೆ ಇದು ಬಹು ಅನುಕೂಲಸ್ಥವಾಗಿತ್ತು. ಅದಕ್ಕಾಗಿ ಬಯಲಿನಲ್ಲಿ ಬೋರೆ ಕಂಟಿಗಳನ್ನು ಬೆಳೆಸಿದನು. ಅದರಂತೆ ದೇವಪುರ ಅಗಸಿಗೆ ಹೊಸ್ಸಿಗಡೆ, ಸಾಸವಿಗೇರಿ ದೊರೆ, ದೇವದುರ್ಗ ಪಾಳೆಗಾರರೊಂದಿಗೆ 130 ಆಳುಗಳನ್ನು ಕಾವಲಿರಿಸಿದನು. ಕಪ್ಪಲಬಂಡೆ ಅಗಸಿ ರಕ್ಷಣೆಗೆ ವರದಾರ ಗುರಿಕಾರ ಗುರಪ್ಪ, ಮತ್ತು 600 ಬೇಡಕಿ ಪಡೆ ನಿಯುಕ್ತಿಯಾದರೆ, ಸಿದ್ದಾಪುರ ಅಗಸಿಗೆ ದೂದಕೊಂಡಿನ ದೊರಿಮಕ್ಕಳು ಭದ್ರ ಕಾವಲು ಹಾಕಿದರು. ರಂಗಮ್ಮ ಪೇಟೆ ಅಗಸಿಗೆ 900 ಬೇಡರ ನೇತೃತ್ವವನ್ನು ಸಬನೀಸ ಸರ್ದಾರ – ಹುದ್ದಾರರಿಗೆ ಬಿಡಲಾಗಿತ್ತು. ರಾಜಧಾನಿಯ ರಕ್ಷಣೆಗೆ ಮೊಂಡಗೈ ವೆಂಕಟಪ್ಪನಾಯಕ ಹಾಕಿದ ಬಿಗಿ ಬಂದೋಬಸ್ತ ಹೀಗಿತ್ತು.

ಇನ್ನು ಸುರಪುರದ ಸುತ್ತಮುತ್ತ ಏಳು ಚೌಕಿಗಳು, 3 ಕಿಲ್ಲೆಗಳಿದ್ದವು.[86] ಪ್ರತಿಯೊಂದು ಕಿಲ್ಲೆಯಲ್ಲಿ ಶತ್ರುಗಳ ದಮನಕ್ಕೆ ಸೈನ್ಯ, ಮದ್ದು, ಗುಂಡು ಸಂಗ್ರಹಿಸಲಾಗಿತ್ತು. ಕೊಡೆಕಲ್ಲಿನ ಕೊಳ್ಳಾಕ್ಯಳ ಸುಭೇದಾರನು ರಾಯನಪಾಳ್ಯ ಕಿಲ್ಲೆಯಲ್ಲಿದ್ದು ಪಶ್ಚಿಮದಿಂದ ಬರುವ ಶತ್ರುಗಳನ್ನು ತಡೆಯುತ್ತಿದ್ದನು. ಅದರಂತೆ ಪೂರ್ವೋತ್ತರಗಳಲ್ಲಿ ಕೋಣ ಸಿರ್ಸಿ, ಗೊಷಣಿ ಸುಭೇದಾರರು, ಭೀಮಾನದಿ ದಂಡೆಯಲ್ಲಿ ಶಿಮಳ್ಳಿ, ಹಸನಾಪೂರ, ನರಬೋಳಿ ಸುಭೇದಾರರಿಂದ ರಕ್ಷಣಾ ಕಾರ್ಯ ಕೈಗೊಳ್ಳಲಾಗಿತ್ತು. ವೆಂಕಟಪ್ಪ ನಾಯಕನ ಇಂಥ ಜಾಣ್ಮೆಯಿಂದ ಸೌಖ್ಯವಿತ್ತೆಂದು ಕೈಫಿಯತ್ತು ಉಲ್ಲೇಖಿಸುತ್ತದೆ.[87]

ಪತ್ನಿ–ಪರಿವಾರ :

ಮೊಂಡಗೈ ವೆಂಕಟಪ್ಪನಾಯಕನಿಗೆ ಸರಹವಲ್ದಾರ ಮರಾಠ ತಿಮ್ಮಣ್ಣನ ಮಗಳು ಓಂಕಾರಮ್ಮನೊಂದಿಗೆ ಮದುವೆಯಾಗಿತ್ತು. ಇವಳು ಪಟ್ಟದ ರಾಣಿಯಾಗಿ ಕಾರ್ಯ ನಿರ್ವಹಿಸುತ್ತಿರುವಾಗಲೇ ರಂಗಮ್ಮಳೆಂಬ ಇನ್ನೊಬ್ಬಳನ್ನು ವರಿಸಿದ. ಇವರೀರ್ವರಿಗೂ ಸಂತಾನ ಭಾಗ್ಯ ಸಿಗಲಿಲ್ಲ. ಸಂಸ್ಥಾನಕ್ಕೆ ಉತ್ತರಾಧಿಕಾರಿಯಾರಾಗಬೇಕೆಂದು ಆಲೋಚನೆಗಳು ಆರಂಭವಾದವು. ಕೊನೆಗೆ ಚಿಕ್ಕಪ್ಪನ ಮಗನಾದ ಮುಮ್ಮಡಿ ಪಾಮನಾಯಕನಿಗೆ ಪಟ್ಟಕ್ಕೇರಿಸಲು ನಿರ್ಧರಿಸಲಾಯಿತು.

---

85. ದೇವಪುರ, ಸಿಬಾರಬಂಡಿ, ಕಪ್ಪಲಬಂಡೆ, ಸಿದ್ದಾಪುರ, ವೆಂಕಟಾಪುರ ಅಗಸಿಗಳು.
86. ವಾಗಿನಗೇರಿ, ವನದುರ್ಗ, ಬೆಂಡನಕೇರಿ ಕಿಲ್ಲೆಗಳು.
87. ಕೈಫಿಯತ್ತು, ನಂ.3.

(5) ಮುಮ್ಮಡಿ ಪಾಮನಾಯಕ : (ಕ್ರಿ.ಶ.1750–73)

ಪುದುಚೇರಿ ಯುದ್ಧಕ್ಕಾಗಿ ಸಂಸ್ಥಾನದ ಸಮಸ್ತ ಸೈನ್ಯದೊಂದಿಗೆ ಪಾಂಡಿಚೇರಿಗೆ ತೆರಳಿದ ಮೊಂಡಗೈ ವೆಂಕಟಪ್ಪನಾಯಕನು ಆಗ ರಾಜ್ಯದ ಕಾರ್ಯಭಾರವೆಲ್ಲ ರಮಣಪ್ಪ ನಾಯಕನಿಗೆ ಒಪ್ಪಿಸಿದ್ದ. ವಿಶಾಲ ಮತ್ತು ವಿಶಿಷ್ಟ ವ್ಯಕ್ತಿತ್ವ ಹೊಂದಿದ್ದ ರಮಣಪ್ಪನಾಯಕ ಯಾವ ಸೈನ್ಯ ಸಹಾಯವಿಲ್ಲದೆ ಸಂಸ್ಥಾನವನ್ನು ಆಳಿದ. ಶಾಂತಸ್ವಭಾವ, ಸಾಧುವೃತ್ತಿಗೆ ಹೆಸರಾದ ಈತ ನ್ಯಾಯ ನೀತಿಗಾಗಿ ಸಂಸ್ಥಾನ ಜನರ ಹಾಗೂ ಸುಭೇದಾರರೆಲ್ಲರ ಪ್ರೀತಿಗೆದ್ದಿದ್ದ. ಇಂಥ ಮಹಾನುಭಾವನ ಮಗನೆ ಮುಮ್ಮಡಿ ಪಾಮನಾಯಕ.

ಕ್ರಿ.ಶ.1739ನೆಯ ಸಿದ್ಧಾರ್ಥಿನಾಮ ಸಂವತ್ಸರ ಪುಷ್ಯಶುದ್ಧ ಸಪ್ತಮಿಯಂದು ಪಾಮನಾಯಕ ಲಕ್ಷ್ಮಾಂಬೆ ಉದರದಲ್ಲಿ ಜನಿಸಿದನೆಂದು[88] ಸಂಸ್ಥಾನದ ದಾಖಲೆಗಳು ಹೇಳುತ್ತವೆ. ಮೊಂಡಗೈ ವೆಂಕಟಪ್ಪ ನಾಯಕನಿಗೆ ಪುತ್ರ ಸಂತಾನವಿಲ್ಲದ ಪ್ರಯುಕ್ತ ಸುರಪುರ ಸಂಸ್ಥಾನದ ಪಟ್ಟವನ್ನು ಮುಮ್ಮಡಿ ಪಾಮನಾಯಕನಿಗೆ ಕಟ್ಟಲಾಯಿತು. "ಅತ್ಯಂತ ತಾರುಣ್ಯಾವಸ್ಥೆಯಲ್ಲಿಯೆ ಅಪಾರ ಪ್ರಖ್ಯಾತಿ ಹೊಂದಿದ್ದ ಪಾಮನಾಯಕನಿಗೆ ಸುರಪುರದ ಗದ್ದುಗೆ ಸಿಕ್ಕಿತೆನ್ನೂ ನಿಜ; ಆದರೆ ಇದರ ಹಿಂದೆ ರಮಣಪ್ಪನಾಯಕನು ಗಳಿಸಿದ್ದ ಜನತೆಯ ಪ್ರೀತ್ಯಾದರಗಳು ಪ್ರಮುಖ ಪಾತ್ರ ವಹಿಸಿದ್ದುವು" ಎಂಬುದು ಮರೆಯುವಂತಿಲ್ಲ. ಪಟ್ಟದ ಪಾಮನಾಯಕನಿಗೆ ರಾಜ್ಯಕಾರ್ಯದ ಅನುಭವಗಳು ಪರಿಚಯವಾಗುವವರೆಗೂ ಐದು ತಿಂಗಳು ರಮಣಪ್ಪನಾಯಕನೇ ರಾಜಪ್ರತಿನಿಧಿಯಾಗಿದ್ದ.

ಪೇಶ್ವೆಗಳ ಪ್ರಾಬಲ್ಯ ನಿಜಾಮನ ವೈಫಲ್ಯ :

'ಹೈದ್ರಾಬಾದ ಆಳ್ವಿಕೆ' ಯಲ್ಲಿ ಆಗುತ್ತಿರುವ ಅಸ್ಥಿರತೆ ಪೇಶ್ವೆಗಳ ಪ್ರಾಬಲ್ಯಕ್ಕೆ ಪುನಃ ಚೈತನ್ಯ ನೀಡಿತು. ಕ್ರಿ.ಶ.1757ರಲ್ಲಿ ಹೈದ್ರಾಬಾದ ಪಟ್ಟದ ಅಧಿಕಾರ ಹಿಡಿದ ನಿಜಾಮ ಅಲಿಖಾನನು ಇಂಗ್ಲೀಷರ ಸಹಾಯದಿಂದ ಆಳ್ವಿಕೆ ಆರಂಭಿಸಿದ. ಆದರೂ ಹೈದ್ರಾಬಾದದ ಅಂತಃಕಲಹಗಳು ಬೂದಿಮುಚ್ಚಿದ ಕೆಂಡದುಂಡೆಯಾಗಿದ್ದುವು. ಇದನ್ನೇ ಕಾಯುತ್ತ ಕುಳಿತಿದ್ದ ಪೇಶ್ವೆಗಳ ಸದಾಶಿವ ರಾವ ಬಾವು, ರಘುನಾಥರಾವ ಮುಂತಾದ ಸರದಾರರು ಉದಗೀರ ಯುದ್ಧದಲ್ಲಿ (ಕ್ರಿ.ಶ.1760) ನಿಜಾಮ ಅಲಿಖಾನನನ್ನು ಎದುರಿಸಿದರು. ಈ ಕದನದಲ್ಲಿ ಅಪಾರ ಸಾವು-ನೋವು ಅನುಭವಿಸಿದ

---

88. ಸು.ಸಂ.ಇ., ಪುಟ–109.

ಅಲಿಖಾನನ ಸೈನ್ಯ ಪರಾಭವಗೊಂಡಿತು. ಪರಿಣಾಮ 60 ಲಕ್ಷ ಉತ್ಪನ್ನದ ನಿಜಾಂ ಪ್ರಾಂತ್ಯ ಪೇಶ್ವೆಗೆ ಬಿಟ್ಟುಕೊಡಬೇಕಾಯಿತು. ಈ ಒಪ್ಪಂದ ಜಾರಿಗೆ ಬರುವ ಮುಂಚೆಯೆ 'ಪಾನಿಪತ ಸೋನಾಪತೆ' ದಲ್ಲಿ ಜರುಗಿದ ಯುದ್ಧ ನಿಜಾಂನಂತಾಯಿತು. ಆಗ ನಿಜಾಮ 'ಉದಗೀರ' ಒಪ್ಪಂದ ಮುರಿದು ಮತ್ತೆ ತಲೆ ಎತ್ತಿದ ತರುವಾಯ ಪೇಶ್ವೆ ಮಾಧವರಾಯ ಪಟ್ಟಕ್ಕೆ ಬಂದಕೂಡಲೇ 'ರಾಕ್ಷಸಭುವನ' ಎಂಬ ಸ್ಥಳದಲ್ಲಿ ನಿಜಾಮನೊಂದಿಗೆ ಘೋರ ಕಾಳಗ ನಡೆಯಿತು. ನಿಜಾಮ ಅಲಿಖಾನನಿಗೆ ಸಂಪೂರ್ಣಸೋಲಾಯಿತು. ಇದರಿಂದ ಉದಗೀರ ಒಪ್ಪಂದಕ್ಕೆ ಚಾಲನೆ ನೀಡಿದನಲ್ಲದೆ ಅದರ ಜಾರಿಗೆ ಪಟ್ಟುಹಿಡಿದ. ಸುರಪುರ ಸಂಸ್ಥಾನದ ಆಳ್ವಿಕೆಗ ಒಳಪಟ್ಟ ಮಾಮಲೆಮುಹ್ರದೊದದಲ್ಲಿ ಯ ವಿಜಾಪೂರ, ತಾಳಿಕೋಟಿ, ನಾಲ್ವತ್ವಾಡಗಳು ನಿಜಾಮ ರಾಜ್ಯದಲ್ಲಿದ್ದವು. ಇವು 60 ಲಕ್ಷ ಉತ್ಪನ್ನ ಕೊಡುವ ಫಲವತ್ತಾದ ಪ್ರದೇಶವಾಗಿದ್ದು, ಇದನ್ನೇ ಗೊತ್ತುವಳಿಯಂತೆ ಅಲಿಖಾನನು ಪೇಶ್ವೆಗಳಿಗೆ ಅರ್ಪಿಸಿದ. ಇನ್ನು ಮೇಲೆ ಸುರಪುರದವರು ಈ ಪ್ರದೇಶದ ಮೇಲೆ ಯಾವುದೇ ಹಕ್ಕು ಚಲಾಯಿಸಬೇಕಾದರು. ಪೇಶ್ವೆಗಳ ಅನುಮತಿ ಪಡೆಯಬೇಕಾಯಿತು. ಇಲ್ಲಿಯ ಕಂದಾಯ ಬಾಬುಗಳ ಉಸ್ತುವಾರಿ ನೋಡಿಕೊಳ್ಳಲು ಪೇಶ್ವೆಮಾಧವರಾಯನು ಕ್ರಿ.ಶ. 1765ರಲ್ಲಿ ಆನಂದ ರಾವ್ ಭಿಕಾಜಿರಾಸ್ತೆ ಎಂಬ ಸರ್ದಾರನನ್ನು ನೇಮಿಸಿದ. ಅಧಿಕಾರ ಹೊಂದಿದ ರಾಸ್ತೆಯೊಂದಿಗೆ ಪಾಮನಾಯಕನ ಕಲಹಗಳು ಪ್ರಾರಂಭವಾದವು. ಮುಖ್ಯವಾಗಿ ಚೌಥ ಇನ್ನಿತರ ರಸೂಮುಗಳಿಗಾಗಿ ನಡೆದ ಇವರ ಮನಸ್ತಾಪ ಮುನಿಸೂತಾಯಿತು. ಇದೇ ಸಂದರ್ಭದಲ್ಲಿ ಪೇಶ್ವೆಗಳ ಕೆಲವು ಜಮೀನು ದಾರರು ಪಾಮನಾಯಕನ ಆಶ್ರಯ ಪಡೆದಿದ್ದರು. ಅವರನ್ನು ತನಗೆ ಒಪ್ಪಿಸಲು ಆನಂದರಾವನೆಂಬ ಸರ್ದಾರ ಪದೆ ಪದೇ ಒತ್ತಾಯಿಸಿದ ಒತ್ತಾಯ, ಒಪ್ಪಿಗೆ ಪ್ರಕರಣಕ್ಕೆ ವಿಕೋಪಕ್ಕೆ ಹೋಗಿ ಯುದ್ಧ ಕ್ಕೆ ಕಾರಣವಾಯಿತು. ಪಾಮನಾಯಕನು 500 ಕುದುರೆ, 4000 ಕಾಲಾಳು, 500 ದುಣೀರು, 2000 ಮರಾಠರೊಂದಿಗೆ ಹಂದರಕಿಯಲ್ಲಿ ಸಮರಗೈದನೆಂದು ಸಿಕ್ಕನಹಳ್ಳಿ ಲೋಕಯ್ಯನ ಬರೆಹ ಬಣ್ಣಿಸುತ್ತದೆ.

ಉದಗೀರ, ರಾಕ್ಷಸಭುವನ ಯುದ್ಧದ ಒಪ್ಪಂದದಂತೆ ಪೇಶ್ವೆಗಳಿಗೆ ಬೆಂಬಲಿಸಿ ನಿಜಾಮನ ಸೈನ್ಯ ಪಾಮನಾಯಕನಿಗೆ ವಿರುದ್ಧವಾಗಿ ಸಾಗಿ ಬಂತು. ಪೇಶ್ವೆ ಮತ್ತು ನಿಜಾಮರ ಎರಡು ಬಲವನ್ನು ಏಕಕಾಲಕ್ಕೆ ಎದುರಿಸಬೇಕಾದ ಸ್ಥಿತಿ-ಈಗ ಸುರಪುರ ಸೈನ್ಯದ ಮೇಲಿತ್ತು. ನಡೆದ ಯುದ್ಧದಲ್ಲಿ ನಿಜಾಮನ ಹಮಿದುಲ್ಲಾಖಾನನು ಬೇಡಪಡೆಯ ಹೊಡೆತಕ್ಕೆ ಬೆದರಿ ಓಡಿದ. ಈ ವಾರ್ತೆ ನಿಜಾಮನಿಗೆ ತಲುಪುವುದೊಂದೇ ತಡ, 10 ಸಾವಿರ ಕಾಲ್ದಳ, 4 ಸಾವಿರ ಕುದುರೆ ಸವಾರರೊಡನೆ ಸೋಹಿಬೇಗನನ್ನು

ಪಾಮನಾಯಕನ ವಿರುದ್ಧ ಕಳಿಸಿದನು. ಈತ 'ಅಗ್ನಿ' ಯಲ್ಲಿ ಬೀಡುಬಿಟ್ಟು ಲೂಟಿ ಮಾಡ ತೊಡಗಿದರೆ, ಅತ್ತ ಪೇಶ್ವೆ ಪಡೆಯು ಆನಂದರಾಯ ಕರಿದೇವನಹಳ್ಳಿ, ಚಿಕ್ಕನಹಳ್ಳಿ ಸುಲಿಯುತ್ತ ಸಾಗಿದ. ಪ್ರತಿಯಾಗಿ ಮಂತ್ರಿ ವೀರಪ್ಪ — ಮಲ್ಕಪ್ಪರೊಂದಿಗೆ ಹೊರಟ ಪಾಮನಾಯಕ ಆನಂದ ರಾಯನಿಗೆ ಪ್ರತಿಭಟಿಸಿದ. ಹುಣಸಗಿ ಮೂಲಕ ಹಗರಟಗೆ ಹಿಂದುರಿಗಿದ ಆನಂದರಾಯ ಸಂಸ್ಥಾನದ ಗುಂಡಕನಾಳ ಗ್ರಾಮವನ್ನು ಹಿಡಿದುಕೊಂಡನು. ಇದಕ್ಕೆ ಪ್ರತಿಯಾಗಿ ಪಾಮನಾಯಕ ಪೇಶ್ವೆಗಳ ಪಂಢರಪುರವನ್ನು ಸುಲಿದನು. ಹೀಗೆ ಎರಡು ಬಣಗಳಿಂದ ಕೊಳ್ಳೆ ಲೂಟಿ, ಸುಲಿಗೆ, ಸೋಲು-ಸವಾಲು ಗಳು ಸತತವಾಗಿ ಸಾಗಿದವು.

<u>ಪೇಶ್ವೆ, ನಿಜಾಮರ ಪೇಷಕಷ್ :</u>

ಒಪ್ಪಂದದಂತೆ ನಿಜಾಮನು ಬಿಟ್ಟುಕೊಟ್ಟು ಲಕ್ಷ ಉತ್ಪನ್ನದ ನಾಲತ್ವಾಡ, ತಾಳಿಕೋಟೆ, ಬಿಜಾಪೂರಗಳ ಮೇಲಿನ ಹಕ್ಕನ್ನು ಸುರಪುರದ ಮುಮ್ಮಡಿ ಪಾಮನಾಯಕ ಪೇಶ್ವೆಗಳಿಗೆ ಬಿಟ್ಟು ಕೊಡದೆ ಹೋದಾಗ ಮೇಲಿನ ಲೂಟಿಗಳೆಲ್ಲ ನಡೆದವು. ಇದರಿಂದ ಬೇಸತ್ತ ಪೇಶ್ವೆ ಮಾಧವರಾಯ ಮತ್ತು ನಿಜಾಮ ಅಲಿಖಾನ ರೋಷಗೊಂಡರು. ಇದುವರೆಗೆ ಆದ ಹಾನಿಯೆಲ್ಲ ಆತನ ತಲೆಗೆ ಕಟ್ಟಲು ಯೋಚಿಸಿದರು. ಕ್ರಿ.ಶ. 1766ರಲ್ಲಿ ಹೈದರನ ಮೇಲೆ ದಂಡೆಯಾತ್ರೆ ಹೊರಟ ಪೇಶ್ವೆ ಮತ್ತು ನಿಜಾಮರ ಉಭಯ ಪಡೆಗಳು ದೇವದುರ್ಗದಲ್ಲಿ ಬೀಡುಬಿಟ್ಟವು. ದಂಡಿನ ನೇತೃತ್ವವಹಿಸಿದ್ದ ಮಾಧವ ರಾಯ, ಅಲಿಖಾನರು ಅಲ್ಲಿಯೇ ಇದ್ದರು. ಆಗ ಪಾಮನಾಯಕನ ಪ್ರತಿರೋಧಗಳು ಪ್ರಸ್ತಾವಕ್ಕೆ ಬಂದವು. ಕೀಲಿವಾತಗಳಿಗೆಲ್ಲ ಕಿವಿಗೊಟ್ಟ ಇವರೀರ್ವರು ಪಾಮನಾಯಕನ ಮೇಲೆ ದಾಳಿಗೈದರೆಂದು 3ನೆಯ ನಂಬರಿನ ಕೈಫಿಯತ್ತು ಆಧಾರ ನೀಡುತ್ತದೆ. ಆಗ ಅವರ ದಾಳಿಗೆ ಒಳಗಾದ ಪಾಮನಾಯಕ ತತ್ತರಿಸಿ ಹೋದ. ಇದುವರೆಗೆ ಆದ ಹಾನಿ ತುಂಬುವದರೊಂದಿಗೆ ನಿಜಾಂನ ಒಪ್ಪಂದ ನಡೆಸಿಕೊಡುವ ನೆಂದು ವಚನಕೊಟ್ಟ. ಇದಕ್ಕಾಗಿಯೇ ಕ್ರಿ.ಶ. 1767ರಲ್ಲಿ ನಿಜಾಮ — ಪೇಶ್ವೆ — ಸುರಪುರದವರ ಮಧ್ಯೆ ಐತಿಹಾಸಿಕ ಒಪ್ಪಂದವಾಯಿತು. ಅದುವೆ ಪೇಶ್ವೆ — ನಿಜಾಮ ಪೇಷಕಷ್.

ಸುರಪುರ ಸಂಸ್ಥಾನವು ನಿಜಾಮ ಸರಕಾರಕ್ಕೆ 79,166 ರೂ. ಮತ್ತು ಪೇಶ್ವೆಗಳಿಗೆ 94,000 ರೂ. ಕೊಡಬೇಕೆಂದು ತೀರ್ಮಾನಿಸಲಾಯಿತು. ಎರಡು ಸರಕಾರಗಳಿಗೆ ಸಂಸ್ಥಾನವು ಈ ಪೇಷಕಷ್ ಕೊಡಬೇಕು, ಇಲ್ಲವಾದರೆ ಉಭಯ ಸರಕಾರಗಳು ಮುಮ್ಮಡಿ ಪಾಮನಾಯಕನ ಸರಸರ ದೇಸಗತಿ, ಸರದೇಸಗತಿ, ಬೇಡರ ಟಣಕೇದಾರಿ ರುಸೂಮು ಮತ್ತು ಉಂಬಳಿ ಗ್ರಾಮ, ಇನಾಮುಗಳನ್ನು

ಮುಟ್ಟುಗೋಲು ಹಾಕಿಕೊಳ್ಳಲಾಗುವದೆಂದು ಎದುರಿಸಲಾಯಿತು. ಅದರಂತೆ ತಾಳಿಕೋಟೆ ಪರಗಣಿಯ ಗುಂಡಕನಾಳ ಗ್ರಾಮವನ್ನು ತೆಗೆದುಕೊಂಡ ಪೇಶ್ವೆಗಳು ಬೆಟ್ಟನಹಳ್ಳಿ, ಚಿಕ್ಕಗುಂಡಕನಾಳ, ಗೊಟಖಂಡಿಗಿ ಗ್ರಾಮಗಳನ್ನು ಪ್ರತಿಯಾಗಿ ಬಿಟ್ಟುಕೊಟ್ಟರು. ಪ್ರತಿವರ್ಷ 15 ಸಾವಿರ ಪೌಂಡ ಕಡ್ಡಾಯವಾಗಿ ತುಂಬಿಸಲು ಆಜ್ಞೆಯಾಯಿತು.

ಇದರಿಂದಲೇ ಸುರಪುರವು ಸಾಲಗಾರ ಸಂಸ್ಥಾನವಾಯಿತೆಂಬುದು ಕೈಫಿಯತ್ತುಗಳ ವಾದ. ನಿಜಾಮ ಮತ್ತು ಪೇಶ್ವೆ ಸರಕಾರಗಳು ಸುರಪುರದ ಮೇಲೆ ವಿಧಿಸಿದ ಬಾಬತ್ತುಗಳು ಬಡ ಸಂಸ್ಥಾನದ ಆದಾಯಕ್ಕೆ ಬಲವಾದ ಹೊಡೆತ ಕೊಟ್ಟವು. ಇದರ ಜೊತೆಗೆ ಪಾಮನಾಯಕ ಪ್ರತಿಭಟಿಸುವಂತೆಯೂ ಇರಲಿಲ್ಲ; ಒಪ್ಪಿಕೊಳ್ಳುವಂತೆಯೂ ಆಗಲಿಲ್ಲ. ಆದರೆ ಕೊನೆಗೆ ಆಜ್ಞೆ ಮಾತ್ರ ಜಾರಿಗೆ ಬಂತು.

<u>ಬೇಡರ ಬಂಡು :</u>

ಪಾಮನಾಯಕನಿಗೆ ಒಂದರಮೇಲೊಂದು ಪ್ರತಿರೋಧಗಳು ಬರತೊಡಗಿದವು. ಮೇಲಿನ ಉಭಯ ಸರಕಾರಗಳ ಅಧಿಪತ್ಯ ಒಪ್ಪಿ ಪೇಷಕಷ್ ಪಾವತಿ ಮಾಡಬೇಕೆನ್ನುವಷ್ಟರಲ್ಲೇ ರಾಜಧಾನಿಯ ಬೇಡರ ರಾಜನ ವಿರುದ್ಧವೇ ಬಂಡೆದ್ದರು.[89] ಇದರಲ್ಲಿ ಅನೇಕ ಸರದಾರರು, ಹವಾಲ್ದಾರರು ಶಾಮೀಲಾಗಿದ್ದರು. ತಮಗೆ ಸಂಸ್ಥಾನದಿಂದ ಸರಿಯಾದ ಗೌರವ ಪ್ರಾಪ್ತವಾಗುತ್ತಿಲ್ಲವೆಂಬುದೆ ಇವರ ವಾದವಾಗಿತ್ತು. ಮಂತ್ರಿ ನಿಷ್ಠ ಕಡ್ಲಪ್ಪನನ್ನು ನಿಂದಿಸತೊಡಗಿದ ಇವರನ್ನು ಉಪಾಯದಿಂದ ಸೆರೆ ಹಿಡಿದು ಬಂಡಿನ ಮುಖಂಡರನ್ನೆಲ್ಲ ಕಪ್ಪಲ ಬೆಂಚಿಯಲ್ಲಿ ಕೊಲ್ಲಿಸಲಾಯಿತು. ತಪ್ಪಿಸಿಕೊಂಡು ಓಡಿಹೋದ ಕೆಲವರು ಗುಡಗುಂಟಿಯಲ್ಲಿ ಆಶ್ರಯ ಪಡೆದರು. ಕೂಡಲೆ ಅವರನ್ನೆಲ್ಲ ತನ್ನ ಸ್ವಾಧೀನಕ್ಕೆ ಒಪ್ಪಿಸಬೇಕೆಂದು ಗುಡಗುಂಟಿಯ ದೊರೆಗೆ ಪಾಮನಾಯಕ ಪತ್ರ ಬರೆದ. ಪತ್ರಕ್ಕೆ ಮಾನ್ಯತೆ ದೊರಕದ ಹೋದಾಗ ಸ್ವತಃ ಪಾಮನಾಯಕನೆ ಸೈನ್ಯಸಮೇತ ಹುಣಸಗಿ, ಕಕ್ಕೇರಿ ಮಾರ್ಗವಾಗಿ ಸಾಗಿ ಗುಡಗುಂಟಿ ಮೇಲೆ ಬಿದ್ದ. ದಾಳಿಗೆ ಎದುರಿದ ಅಲ್ಲಿಯ ಅರಸ ಆರೋಪಿಗಳನ್ನೆಲ್ಲ ತನ್ನ ಆಶ್ರಯದಿಂದ ಬಿಟ್ಟುಕೊಟ್ಟ.

89. ಕೈಫಿಯತ್ತು ನಂ.3.

ಕಲ್ಯಾಣ ಕಾರ್ಯ

ಸಂಸ್ಥಾನದ ಸಮಗ್ರ ಅಭಿವೃದ್ಧಿಗೆ ನೀಲನಕ್ಷೆಯನ್ನು ಸಿದ್ಧಪಡಿಸಿದ ಪಾಮನಾಯಕ ಹಲವಾರು ಶ್ಲಾಘನೀಯ ಕಾರ್ಯಗಳಿಗಾಗಿ ಶ್ರಮಿಸಿದ. ಆರಾಧ್ಯದೈವ ಗೋಪಾಲಸ್ವಾಮಿ ಗುಡಿಯಲ್ಲಿ ಅನೇಕ ಜನರಿಗೆ ಉದ್ಯೋಗ ಅವಕಾಶ ಒದಗಿಸಿದ. ವೈರಿಗಳ ಆಕ್ರಮಣ ತಡೆಗಟ್ಟಲು ದೇವಪುರ, ಗೂಲಗಿ, ನಗನೂರ, ವಡಿಗೇರಿ, ತಿಂಥಣಿ ಕಕ್ಕೇರಿ, ರಾಯನಪಾಳೆ, ಕೊಳಿಹಾಳ, ಭಂಟನೂರ, ಅಂಬಲಿಹಾಳ, ವಾಗಿನಗೇರಿ, ಮಳ್ಳಿ, ನರಬೋಳಿ, ದೋರನಹಳ್ಳಿ, ಮುಡಬೂಳ, ಹರನೂರಗಳಲ್ಲಿ ಸೈನ್ಯ ವ್ಯವಸ್ಥೆಯಿಂದ ಬಿಗಿಕಾವಲು ಏರ್ಪಡಿಸಿದ್ದ.

ಮಂತ್ರಿಗಳಾದ ನಿಷ್ಠ ಕಡ್ಲಪ್ಪ ಮತ್ತು ವೀರಪ್ಪನವರಿಂದ ವ್ಯವಸಾಯ, ಕಂದಾಯದಲ್ಲಿ ತೀವ್ರ ಬದಲಾವಣೆ ತಂದನಲ್ಲದೆ, ಸಂಸ್ಥಾನದ ಅನೇಕರಿಗೆ ಜಾಗೀರುಗ್ರಾಮಗಳನ್ನು ಹಾಕಿಕೊಟ್ಟನು. ಸಾಹಿತ್ಯ, ಸಂಗೀತದ ಸುಗ್ಗಿಯೇ ಪಾಮನಾಯಕನ ಕಾಲಕ್ಕೆ ಇತ್ತೆಂದರೆ ಅತಿಶಯೋಕ್ತಿಯ ಮಾತಲ್ಲ.

ಕೌಟುಂಬಿಕ ಪರಿವಾರ :

ಪತ್ನಿಯರು:- 1. ತಿಮ್ಮಮ್ಮ —ಪಟ್ಟದರಸಿ

2. ಜಲ್ಲಿಪಾಳಿ ಲಚ್ಚಮ್ಮ
3. ಗಲಗಿನ ವೆಂಕಮ್ಮ
4. ಜಾಲಹಳ್ಳಿ ಪದ್ಮಮ್ಮ

} ಮದುವೆಯ ಮಡದಿಯರು.

5. ರಾಮಕ್ಕ
6. ಮಂಗಮ್ಮ

} ತಾಳಿಬಂಧನದ ಪತ್ನಿಯರು.

ದೇವದುರ್ಗದ ಕಿಲಚನಾಯಕನ ಮಗಳೆ ಪಟ್ಟದರಸಿ ತಿಮ್ಮಮ್ಮ. ಇವಳಲ್ಲದೆ ಮೂರುಜನ ಉಪಪಟ್ಟದರಸಿಯರು, ಹಾಗೂ ಇಬ್ಬರು ತಾಳಿ ಬಂಧನದ ಪತ್ನಿಯರಿದ್ದರು. ತಿಮ್ಮಮ್ಮನ ಉದರದಿಂದ ಈಶ್ವರ ನಾಮ ಸಂವತ್ಸರದಲ್ಲಿ (ಕ್ರಿ.ಶ. 1757) ಜನಿಸಿದ ಮಗನ ಇಮ್ಮಡಿ ವೆಂಕಟಪ್ಪ ನಾಯಕ. ಕ್ರಿ.ಶ. 1772ರ ನಂದನನಾಮ ಸಂವತ್ಸರದಲ್ಲಿ ತಿಮ್ಮಮ್ಮ ಮತ್ತು ಕ್ರಿ.ಶ. 1773ರ ವಿಜಯಾಬ್ದ ಸಂವತ್ಸರದ ಆಶ್ವಯುಜ ಬಹುಳ ತದಿಗೆಯಲ್ಲಿ ಪಾಮನಾಯಕ ಮೃತರಾದರು.[90]

---

90. ಸು.ಸಂ.ಇ., ಪುಟ-110.

(6) <u>ಇಮ್ಮಡಿ ವೆಂಕಟಪ್ಪನಾಯಕ :(ಕ್ರಿ.ಶ.1773–1802)</u>

ಮುಮ್ಮಡಿ ಪಾಮನಾಯಕ ಕಾಲವಾದ ತರುವಾಯ ಸುರಪುರ ಸಂಸ್ಥಾನದ ಗದ್ದುಗೆಯನ್ನು ಹಿರಿಯ ಮಗ ಇಮ್ಮಡಿ ವೆಂಕಟಪ್ಪನಾಯಕನಿಗೆ ಕ್ರಿ.ಶ.1773 ರಲ್ಲಿ ವಹಿಸಲಾಯಿತು. ತರುಣನಾದರೂ, ರಾಜ್ಯಕಾರ್ಯದಲ್ಲಿ ಬಹುಚತುರನಾಗಿದ್ದ-ಶೀತ ಫಲದ ಮೂಲಕ ಗಾಂಭೀರ್ಯದ ಗಣಿಯಾಗಿದ್ದ. ಸಿಂಹಾಸನವೇರಿದ ಕೆಲವೆ ದಿನಗಳಲ್ಲಿ ಅನೇಕ ಗಂಭೀರ ಸವಾಲುಗಳು ದಿಢೀರನೆ ಎದುರಾದವು. ಪೇಶ್ವೆ ಮತ್ತು ನಿಜಾಮರಿಗೆ ಕೊಡಬೇಕಾದ ಪೇಷಕಷ ಪೂರೈಕೆಯಾಗದೆ ಉಳಿದಿತ್ತು. ಅದಕ್ಕಾಗಿ ಅವರಿಂದ ಸಂಸ್ಥಾನಕ್ಕೆ ದಿನನಿತ್ಯ ಕಿರುಕುಳ ಕಾದಿತ್ತು. ಅಲ್ಲದೆ ಚಿಕ್ಕಪುಟ್ಟ ಪಾಳೆಪಟ್ಟುಗಳು ಸಂಸ್ಥಾನದ ಗಡಿಯೊಳಗೆ ನುಗ್ಗತೊಡಗಿದಂತೆ, ಸಂಬಂಧಿಕರ ಕಲಹಗಳು ಸುರುವಾದವು.

ಇದುವರೆಗೆ ಕೇವಲ ಪೇಶ್ವೆ, ನಿಜಾಮರನ್ನು ಮಾತ್ರ ಎದುರಿಸಿ ಬಾಳುತ್ತಿದ್ದ ಸಂಸ್ಥಾನವು ಈಗ ಇಂಗ್ಲೀಷರ ಹಸ್ತಕ್ಷೇಪವನ್ನು ಅರಗಿಸಿಕೊಳ್ಳಬೇಕಾಯಿತು. ಇವೆಲ್ಲವುಗಳ ಮಧ್ಯದಲ್ಲೇ ವೈವಿಧ್ಯಮಯ ವ್ಯಕ್ತಿತ್ವದ ಇಮ್ಮಡಿ ವೆಂಕಟಪ್ಪನಾಯಕ ಎದ್ದು ನಿಂತ.

<u>ಕಲಹಗಳು : ಕದನಗಳು.</u>

ಪೇಶ್ವೆಗಳಿಗೆ ಬಿಜಾಪೂರ ಪ್ರಾಂತ್ಯದ ರುಸೂಮಿನ ಬಾಕಿಯನ್ನು ಸುರುಪುರದವರು ಪಾವತಿ ಮಾಡದೆ ನಿರ್ಲಕ್ಷಿಸಿದ್ದರು. ಅದರೂ ತಾಳಿಕೋಟೆ ಬಾಗೋಡಿ, ಬಿಜಾಪೂರ ಮೇಲಿನ ರುಸೂಮನ್ನು ಪ್ರತಿವರ್ಷ ಹೆಚ್ಚು ಹೆಚ್ಚು ವಸೂಲಿ ಮಾಡುತ್ತಿರುವದು ಪೇಶ್ವೆಗಳ ಗಮನಕ್ಕೆ ಬಂತು. ಸುರಪುರದ ಮೇಲೆ ಆಕ್ರಮಿಸಬೇಕೆಂದರೆ ತಮ್ಮ ಪ್ರಾಂತ್ಯದ ಅಸ್ಥಿರತೆ ಸರಿಪಡಿಸುವದರಲ್ಲಿಯೇ ಸಮಯ ಮೋಲಾಯಿತು. ಅಲ್ಲದೆ ಮುತ್ತೂರ, ಶಿರಹಟ್ಟಿ, ಡಂಬಳದ ದೇಸಾಯಿಗಳು ಇವರಿಗೆ ಕಂದಾಯದ ಬಾಬತ್ತು ಕೊಡದೆ ಪೀಡಿಸತೊಡಗಿದ್ದರು. ಹೀಗಾಗಿ ಯಾರನ್ನು ಹತ್ತಿಕ್ಕಬೇಕು, ಯಾರನ್ನು ಅಡಗಿಸಬೇಕೆಂಬುದೇ ಒಂದು ಸಮಸ್ಯೆಯಾಯಿತು. ಹೇಗಿದ್ದರೂ ಪೂರ್ವದಲ್ಲಿ ನಿಜಾಮನ ಸಹಕಾರವಿದೆ, ಸುರಪುರವನ್ನೇ ಮೊದಲು ತುಳಿದರಾಯಿತೆಂದು ಕ್ರಿ.ಶ.1779 ರಲ್ಲಿ ಪರಶುರಾಮಭಾವು, ಪಟವರ್ಧನರು ಸೈನ್ಯದೊಂದಿಗೆ ಸಗರನಾಡು ಪ್ರವೇಶಿಸಿದರು. ಹಲವಾರು ಹಳ್ಳಿಗಳು ಲೂಟಿಗೊಳಪಟ್ಟವು. ಇದನ್ನು ಕಂಡು ಕೆರಳಿದ ಇಮ್ಮಡಿ ವೆಂಕಟಪ್ಪನಾಯಕ ಸುರಪುರದ ಸೈನ್ಯವನ್ನು ಸಜ್ಜುಗೊಳಿಸಿ ಎದುರಾದ. ಆಗ ವಾಗಿನಗೇರಿ, ಮತ್ತು ಬೋನ್ಹಾಳ ಕೆರೆಯ ಬಯಲಿನಲ್ಲಿ ಘೋರ ಕದನ ಆರಂಭವಾಯಿತು.

ಪರಶುರಾಮನ ಭಾವು ಜತೆಯಲಿ
ಪರಡುವಿಸಿ ಮೂರ್ಲಕ್ಷ ಫೌಜಲಿ
ಭರದಿ ಬೋಣ್ಣಾಳು ಕೆರೆಗೈ ತಾದರಲ್ಲಿಯೇ ಕೇಳಿ

ಅರಸು ಮಿಗೆ ಕೋಪದಲಿ ತನ್ನ
ಪುತ್ರನು ಜಲ್ಲಿ ಕೃಷ್ಣಪನಂ
ಕರೆಸಿ ವಾಗಿನಗಿರಿಯ ಸ್ಥಳದಭಿಮಾನ ನಿನದೆಂದ

ಧೀರನಹ ಯಲ್ಲಪ್ಪನಾಸುಬೆ
ದಾರ ವೆಂಕಟ್ರಾಯ ಕಡ್ಲಪ
ವೀರ ತಳ್ಳಳ್ಳಿ ಪಿಡ್ಡಪನು ವರನಿಷ್ಠಿ ಮಲಕಪ್ಪ
ಶೂರರಾಹವಗೆಯ್ಕ ಸರಹವಾ
ಲ್ದಾರ ರಾಯಪ ಮಡಿದನಾ ಕ್ಷಣ
ವೈರಿ ನಿರಸನ ಮಾಡಿ ಬೋಣ್ಣಾಳ್ಕೆರೆಗೆ ಹಾಕಿದರು.[91]

ಮೇಲಿನ ಪದ್ಯವೆರಡು ಪರಶುರಾಮ ಭಾವುವಿನ ಜೊತೆಗೆ ಸಂಸ್ಥಾನದವರು ಮಾಡಿದ ಯುದ್ಧ ಚಿತ್ರಣವನ್ನು ವರ್ಣಿಸುತ್ತವೆ. ಇಲ್ಲಿ ಕಂಡು ಬರುವ ಮಹತ್ವದ ವಿಷಯವೆಂದರೆ "ಸಂಸ್ಥಾನದ ಸೈನ್ಯಕ್ಕೆ ನೇತೃತ್ವವಹಿಸಿದ ಜಲ್ಲಿ ಪಾಳಿ ಕೃಷ್ಣಪ್ಪ, ಯಲ್ಲಪ್ಪ, ಸುಬೇದಾರ ವೆಂಕಟರಾಯ, ಮಂತ್ರಿ ಕಡ್ಲಪ್ಪ, ತಳ್ಳಳ್ಳಿ ಪಿಡ್ಡಪ್ಪ, ನಿಷ್ಠಿ ಮಲಕಪ್ಪ, ಸರಹವಾಲ್ದಾರ ರಾಯಪ್ಪ ಮುಂತಾದವರ ವಿರೋಚಿತ ಯುದ್ಧ" ವನ್ನು ಕವಿ ವರ್ಣರಂಜಿತವಾಗಿ ವಿಶ್ಲೇಷಿಸಿದ್ದಾನೆ. ವೈರಿ ಹೆಣವನ್ನು ಬೋಣ್ಣಾಳ ಕೆರೆಗೆ ತೂರಿದ ಬಗ್ಗೆಯೂ ತಿಳಿಯುತ್ತದೆ. ಕಾವ್ಯದ ಈ ಆಧಾರದಿಂದಲೇ ಇದಕ್ಕೆ ಐತಿಹಾಸಿಕ ಸ್ವರೂಪ ನೀಡಲಾಗುವುದಿಲ್ಲವಾದರೂ, ನಡೆದ 'ಯುದ್ಧ ಸತ್ಯ' ಸುಳ್ಳಲ್ಲ. ಇಲ್ಲಿ ಪೇಶ್ವೆ ಸರದಾರರಂತು ಅಪಜಯ ಉಂಡರು.

<u>ಖರ್ಡೆ ಕಾಳಗ :</u>

ಪೇಶ್ವೆಗಳಿಗೆ ಸುರಪುರ ಸಂಸ್ಥಾನದವರಿಂದ ಸೋಲಾಯಿತೆಂಬ ವಿಚಾರ ತಿಳಿಯುತ್ತಲೇ ನಿಜಾಮ ಸುರಪುರಕ್ಕೆ ಸ್ನೇಹ ಹಸ್ತ ಚಾಚಿದ. ಕಾರಣ, ಖರ್ಡಾಯ ಯುದ್ಧಕ್ಕಾಗಿ ಮರಾಠರನ್ನು ವಿರೋಧಿಸಿ ಸೈನ್ಯ ಸಹಾಯ ಬೇಕಿತ್ತು. ಮೊದಲಿನ ಒಪ್ಪಂದಗಳೆಲ್ಲ ಮುರಿದು ಬಿದ್ದ ಪರಿಣಾಮವೇ ಈಗ ಎದ್ದ ಕಲಹಗಳು ಕಾಳಗಕ್ಕೆ ತಿರುಗಿದ್ದವು. ಉಭಯರು 1 ಲಕ್ಷ 50 ಸಾವಿರ ಸೈನಿಕರ ದಂಡು ಕೂಡಿಸಿ, ಮರಾಠರ ಫೌಜು ತುಳಿಯಲು ಹೊರಟರು. ಐದು ದಿನಗಳವರೆಗೆ ಯುದ್ಧ ನಡೆದರೂ

---

91. ಕೋಸಲ ನೃಪ ವೃತ್ತಾಂತ (ಹಸ್ತಪ್ರತಿ)

ಫಲಿತಾಂಶ ಮಾತ್ರ ಶೂನ್ಯವೇ ತೋರಿಸುತ್ತಿತ್ತು. ಹೀಗಾಗಿ ತನ್ನ ಸೈನ್ಯಕ್ಕೆ ರಾಕ್ಷಸಿಯುದ್ಧಗೈಯ್ಯಲು ವೆಂಕಟಪ್ಪನಾಯಕ ಆದೇಶಿಸಿದ. ರಾಕ್ಷಸಿ ಯುದ್ಧ ವಿಶೇಷವೆಂದರೆ ನೂರಾರು ಎತ್ತುಗಳ ಕೋಡುಗಳಿಗೆ ಉರಿಯುತ್ತಿರುವ ದೀವಟಿಗೆ ಕಟ್ಟಿ ಕಾರ್ಗತ್ತಲಲ್ಲಿ ಅವುಗಳನ್ನು ಬಿಡುವುದು. ಆಗ ವೈರಿಗಳು ಅದು ಸೈನ್ಯವೆಂದೇ ಬಗೆದು ಯುದ್ಧಕ್ಕೆ ಹೊರಟರೆ ಅವರ ಬೆನ್ನ ಹಿಂದೆ ನುಗ್ಗಿ ಅವರನ್ನು ಸೋಲಿಸುವುದು ಇದರ ತಂತ್ರ. ಇದನ್ನೇ ಅನುಸರಿಸಿದ ಸುರಪುರ ಸೈನ್ಯ ಮರಾಠರನ್ನು ಧೂಳಿಪಟ ಮಾಡಿ ನಿಜಾಮನಿಗೆ ಗೆಲುವು ತಂದು ಕೊಟ್ಟಿತು. ಈ ಸಹಾಯಕ್ಕೆ ಮೆಚ್ಚಿದ ನಿಜಾಮ ವೆಂಕಟಪ್ಪನಾಯಕನಿಗೆ ಚಿತಾಪುರ, ಮಳಖೇಡ, ಕೋರಿ, ಕಲುಬುರ್ಗಿ, ಸೇಡಂ, ಕಮಲಾಪುರ, ಚಿಂಚೋಳಿ, ಯಾದಗೀರ ಮುಂತಾದ 2 ಲಕ್ಷ ಉತ್ಪನ್ನದ ಪ್ರದೇಶದ ಮೇಲಿನ ಹೊಸ ರುಸೂಮು ಬಿಟ್ಟುಕೊಟ್ಟನೆಂದು ತಿಳಿಯುತ್ತದೆ.[92] ಇವೆಲ್ಲ ಮೊದಲು ಗಡ್ಡಿಪಿಡ್ಡನಾಯಕನ ಕಾಲಕ್ಕೆ ಒಳಪಟ್ಟಿದ್ದವು. ಕಾರಣಾಂತರದಿಂದ ಕೈಬಿಟ್ಟು ಹೋದ ಈ ಪ್ರದೇಶವನ್ನು ಮತ್ತೆ ಮರಳಿ ವೆಂಕಟಪ್ಪನಾಯಕ ಪಡೆದ.

<u>ಇನ್ನೂ ಕೆಲವು ಕಾಳಗ, ಲೂಟಿ :</u>

1. ಸುರಪುರಕ್ಕೆ ರಕ್ತ ಸಂಬಂಧಿ ಸಂಸ್ಥಾನವೆಂದರೆ ಗುಡಗುಂಟಿ. ಆಪತ್ತಿನ ಕಾಲದಲ್ಲಿ ಪರಸ್ಪರ ಸಹಕರಿಸುವ ನೀತಿ ಬಹುದಿನಗಳಿಂದಲೂ ಕಾಪಾಡಿಕೊಂಡು ಬರಲಾಗಿತ್ತು. ಈಗ ಗುಡುಗುಂಟಿಗೆ ಗಜೇಂದ್ರಗಡದವರ ಆಕ್ರಮಣದಿಂದ ಅಪಾರ ಹಾನಿಯಾಗಿತ್ತು. ಅದಕ್ಕಾಗಿ ಸೈನ್ಯ ವ್ಯವಸ್ಥೆ ಮತ್ತು ಇನ್ನಿತರ ಕಾರ್ಯಕ್ಕೆ 30 ಸಾವಿರ ರೂಪಾಯಿಯನ್ನು ಶೇಕಡಾ 1 ರ ಬಡ್ಡಿದರದಲ್ಲಿ ಗುಡುಗುಂಟಿಯವರು ವೆಂಕಟಪ್ಪನಾಯಕನಲ್ಲಿ ಸಾಲಪಡೆದರು. ಇದಕ್ಕೆ ಜಾಮೀನೆಂದು ಹುಣಸಗಿ ಭಾಗದ 37 ಹಳ್ಳಿಗಳನ್ನು ಅಡವು ಇಟ್ಟರು. ಕೆಲವು ದಿನಗಳ ತರುವಾಯ ಸಾಲ ತೀರಿಸದೆ ತಮ್ಮ ಹಳ್ಳಿ ಬಿಡಬೇಕೆಂದು ಕೇಳಿದ ಗುಡುಗುಂಟಿಯವರು ಅನ್ಯಾಯಕ್ಕಿಳಿದರು. ಜಾಮೀನಿಟ್ಟ ಹಳ್ಳಿಗಳನ್ನೆಲ್ಲ ಲೂಟಿ ಮಾಡಿದರು. ಆಗ ಸಿಡಿದೆದ್ದ ಸುರಪುರ ಸೈನ್ಯ ಗುಡುಗುಂಟಿ ಮೇಲೆ ದಾಳಿ ಮಾಡಿತು. ಕೊನೆಗೆ ಕನಕಗಿರಿಯ ರಾಜನ ಮಧ್ಯಸ್ತಿಕೆಯಿಂದ ಹುಣಸಗಿ ಭಾಗವನ್ನು ಸಾಲದ ಬದಲಾಗಿ ಸುರಪುರಕ್ಕೆ ಬಿಟ್ಟುಕೊಡಬೇಕೆಂಬ ನಿರ್ಣಯವಾಯಿತು.

2. ದೇವದುರ್ಗದ ಪ್ರದೇಶವು ದೇವದುರ್ಗದವರ ವಶದಲ್ಲಿದ್ದರೂ ಸುರಪುರದವರಿಗೆ ಅದರ ಮೇಲೆ ಸರಸರದೇಸಗತಿ, ಸರನಾಡಗೌಡಕಿ ಹಕ್ಕು ಪ್ರಾಪ್ತವಾಗಿತ್ತು. ರಂಗಪ್ಪನಾಯಕನ ಆಳ್ವಿಕೆಗೆ

---

92. ಕೈಫಿಯತ್ತು, ನಂ.4.

ಒಳಪಟ್ಟ ಇಲ್ಲಿಯ ರುಸೂಮು ಸುರಪುರಕ್ಕೆ ಸೇರುತ್ತಿತ್ತು. ಹೀಗಿರುವಾಗ ಸುರಪುರದ ಜಾವಳ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಬಂದಿದ್ದ ರಂಗಪ್ಪನಾಯಕ ಅಸಭ್ಯವಾಗಿ ವರ್ತಿಸಿ ಜಗಳ ತೆಗೆದ. ಇದರಿಂದ ಕುಪಿತನಾದ ವೆಂಕಟಪ್ಪನಾಯಕ ದೇವದುರ್ಗದ ಕಿಲ್ಲೆಯನ್ನೇ ಲೂಟಿ ಮಾಡಿದ. ಆಗ ಕೋಟೆಯಲ್ಲಿ ಅಡಗಿಕೊಂಡು ಕುಳಿತಿದ್ದ ರಂಗಪ್ಪನಾಯಕ ಮತ್ತು ಆತನ ಪರಿವಾರ ಜೀವಭಯದಿಂದ ತಮ್ಮ ಮುದ್ದಿನ ಮನೆಗೆ ತಾವೆ ಬೆಂಕಿಹಚ್ಚಿಕೊಂಡು ಸತ್ತುಹೋದರು.

3. ಸಂಸ್ಥಾನಕ್ಕೆ ಪ್ರತಿ ಜಮೀನುದಾರ ಜಾಹಗೀರುದಾರರಿಂದ ಸರಿಯಾದ ರುಸೂಮು ಬರುತ್ತಿಲ್ಲವಾದುದರಿಂದ ಸುರಪುರದ ಸೈನ್ಯಾಧಿಕಾರಿಗಳ ಅಲ್ಲಲ್ಲ ಹಲವು ಗ್ರಾಮಗಳನ್ನು ಲೂಟಿ ಮಾಡಿ ಕಂದಾಯ ಸಂಗ್ರಹಿಸಿದರು. ಬಿನಕನಹಳ್ಳಿ, ಚಿತ್ತಾಪೂರ, ಕೋರಳ್ಳಿ, ದಡವತಿ, ಗ್ರಾಮಗಳನ್ನು ಸುಮಾರು 5 ಲಕ್ಷ ರೂಪಾಯಿ ಸಂಸ್ಥಾನಕ್ಕೆ ಸಂದಾಯ ಮಾಡಿದರು. ಅದರಂತೆ ಸಿಂದಗಿ, ಮಲಘಾಣ, ಮುದಗಲ, ನಾಲತವಾಡ, ಕಲಬುರ್ಗಿ, ಆಲಮೇಲ, ರಾಯಚೂರ, ತಾಳಿಕೋಟೆ, ಪಂಢರಾಪೂರಗಳಿಂದ ಕಪ್ಪಕಾಣಿಕೆ ವಸೂಲಿ ಮಾಡಿ ತಂದರು. ಇದರ ನೇತೃತ್ವವನ್ನು ಅಂಕಪ್ಪನಾಯಕ, ಸಬನೀಸ ಎಲ್ಲಪ್ಪ ದಂಡಪ್ಪ ಮುಂತಾದವರು ವಹಿಸಿದ್ದರು.

<u>ನಿಜಾಮನ ಸಾಲಕ್ಕೆ ಬ್ರಿಟೀಷರ ಬಲತ್ಕಾರ :</u>

ಮೊಘಲರ ಅಧಿಪತ್ಯದಿಂದ ಹೊರಬಿದ್ದ ಹೈದ್ರಾಬಾದ ನಿಜಾಮ, ಇಂಗ್ಲೀಷರ ಪ್ರಾಬಲ್ಯಕ್ಕೆ ಮಣಿದು ಅವರ ಸಾಮಂತಿಕೆ ಒಪ್ಪಿ ಸಖ್ಯ ಬೆಳೆಸಿದ. ಇದರಿಂದ ಹಲವಾರು ಪ್ರಸಂಗಗಳಲ್ಲಿ ಬ್ರಿಟೀಷರ ಪಾತ್ರವೇ ಸಿಂಹಪಾಲು ಇರತೊಡಗಿತು. ಕ್ರಿ.ಶ.1798ರಲ್ಲಿ ಇಂಗ್ಲೀಷರೊಂದಿಗೆ ಆದ ನಿಜಾಮನ ಒಪ್ಪಂದವು 6000 ಸಿಪಾಯಿಗಳ 'ಕುಮುಕಫೌಜು' ಸಹಾಯಕ್ಕೆ ಸಹಿ ಹಾಕಲಾಯಿತು. ಇದು ಇಂಗ್ಲೀಷರ ಒಡೆತನಕ್ಕೆ ಒಳಪಟ್ಟಿತ್ತಾದರೂ ರಾಜ್ಯವಿರೋಧಿ ಬಂಡಾಯವನ್ನು ಹತ್ತಿಕ್ಕಲು ನಿಜಾಮ ಬಳಸಿಕೊಳ್ಳಬಹುದಾಗಿತ್ತು. ಆದರೆ ಇದರ ಪ್ರತಿಫಲವೆಂದು ಆಂಗ್ಲರಿಗೆ ಹಣ ಸಂದಾಯ ಮಾಡಬೇಕಿತ್ತು.

ಈ ಒಪ್ಪಂದವೇರ್ಪಟ್ಟ ಕೆಲವು ದಿನಗಳಲ್ಲಿಯೇ ಸುರಪುರದವರು ಬಂಡಾಯವೆದ್ದು ಶಹಾಪುರ ಕಿಲ್ಲೆಯನ್ನು ಕಸಿದುಕೊಂಡಿದ್ದರು. ಅದನ್ನು ಮರಳಿ ಪಡೆಯಲು ಮತ್ತು ಪೂರ್ವದ ಸಾಲವನ್ನೆಲ್ಲ ವಸೂಲಿ ಮಾಡಲು 'ಕುಮುಕುಫೌಜು' ಉಪಯೋಗಿಸಿಕೊಳ್ಳಲು ನಿಜಾಮ ಇಂಗ್ಲೀಷರೊಂದಿಗೆ ಆಲೋಚಿಸಿದ. ಆದರೆ ಇದು ಒಪ್ಪಂದದ ವ್ಯಾಪ್ತಿಗೆ ಒಳಪಡುವದಿಲ್ಲವಾದುದರಿಂದ ಫೌಜುಬಳಕೆ ಕೈಬಿಡಲಾಯಿತು. ಪರ್ಯಾಯ ಸೈನ್ಯವನ್ನು ಸಿದ್ಧಪಡಿಸಿದ ನಿಜಾಮ ತನ್ನ ಕಿರಿಯ ಮಗ ಸಿಕಂದರಜಾನ್‌ನ

ನಾಯಕತ್ವದಲ್ಲಿ ಸುರಪುರದ ಮೇಲೆ ಕಳಿಸಿದ. ಇದರ ಹಿಂದೆಯೇ ನಿಜಾಮನ ನೀತಿಗೆ ಬೆಂಬಲಿ ಲೆಫ್ಟನೆಂಟ ಕರ್ನಲ ಕಿನ್ನಿ ಹೆಚ್ಚುವರಿ ಪಡೆಯೊಂದಿಗೆ ನಗರ ಪ್ರಾಂತ ಪ್ರವೇಶಿಸಿದ.[93] ಕೋಟೆಗೆ ಮುತ್ತಿಗೆ ಹಾಕಲು ಸಿಕಂದರಜಾನ್ ಅನುಮತಿ ಪಡೆಯಲೇಬೇಕೆಂಬ ರೆಸಿಡೆಂಟನ ಆದೇಶವನ್ನು ಕರ್ನಲ ಕಿನ್ನಿ ಪಾಲಿಸುತ್ತ ಕುಳಿತ.

ಇವರೀರ್ವರ ಆಕ್ರಮಣ ತಡೆಗಟ್ಟಲು ಸುರಪುರದ ಕಡೆಯಿಂದ ಓರ್ವ ವಕೀಲ ಒಪ್ಪಂದಕ್ಕೆ ಬಂದ. '' ಪ್ರತಿ ವರ್ಷ 1,45,000 ರೂಪಾಯಿ ಮತ್ತು ಉಳಿಯ ಸೈನ್ಯದ ವೆಚ್ಚವೆಂದು 4 ಲಕ್ಷ ರೂಪಾಯಿ ಹಾಗೂ ದೇವದುರ್ಗಕ್ಕೆ ಸಂಬಂಧಪಟ್ಟ 37,500 ರೂ.ಕಂದಾಯ ಬಾಬತ್ತನ್ನು[94] ಸುರಪುರವು ನಿಜಾಮನಿಗೆ ಕೂಡಲೇ ಸಲ್ಲಿಸಬೇಕೆಂದು' ಸಿಕಂದರ ಜಾ ಬಂದ ವಕೀಲನೆದುರು ಪಟ್ಟು ಹಿಡಿದ. ಇಲ್ಲವಾದರೆ ಸುರಪುರ ಕೋಟೆಯನ್ನು ವಶ ಮಾಡಿಕೊಳ್ಳುವ[95] ಬೆದರಿಕೆ ಒಡ್ಡಿದ. ಸದರಿ ಹಣವನ್ನು ಸಲ್ಲಿಸಲು 15 ತಿಂಗಳುಗಳ ಅವಧಿ ನೀಡಬೇಕೆಂದು ಸುರಪುರದ ಇಮ್ಮಡಿ ವೆಂಕಟಪ್ಪನಾಯಕ ಸಿಕಂದರಜಾನಲ್ಲಿ ಕೇಳಿಕೊಂಡ. ಇದಕ್ಕೆ ಒಪ್ಪಿದ ಸಿಕಂದರಜಾ ಮತ್ತು ಕರ್ನಲ ಕಿನ್ನಿ ತಮ್ಮ ಸೈನ್ಯ ದೊಂದಿಗೆ ಕ್ರಿ.ಶ.1802ರ ಜುಲೈನಲ್ಲಿ ಹೈದ್ರಾಬಾದಕ್ಕೆ ಮರಳಿದರು.[96]

ಇದರಿಂದಲೇ ಸುರಪುರ ಸಂಸ್ಥಾನಕ್ಕೆ ಬಲವಾದ ಆರ್ಥಿಕ ಮುಗ್ಗಟ್ಟು ಎದುರಾಯಿತು. ನಿಜಾಮನ ಸಾಲದ ಸಲುವಾಗಿ ಬ್ರಿಟೀಷರು ಖಡ್ಗದ ಮೂಲಕ ಬಲತ್ಕರಿಸುವ ಮಟ್ಟಕ್ಕೆ ಮುಟ್ಟಿದರು. ಅಲ್ಲದೆ ವೈರಿಗಳ ಒಗ್ಗಟ್ಟಿನಿಂದ ಸುರಪುರದವರಿಗೆ ತಮ್ಮ ಅಂತರವ್ಯವಸ್ಥೆ ಕಾಪಾಡಿಕೊಳ್ಳುವದು ದುಸ್ತರವೆನಿಸಿತು.

<u>ಪತ್ನಿಯರು ಮತ್ತು ಪರಿವಾರ:</u>

ಸುರಪುರ ಸಂಸ್ಥಾನವನ್ನು ಆಳಿದ ಅರಸರೆಲ್ಲರಲ್ಲಿ ಅತಿ ಹೆಚ್ಚು ಪತ್ನಿಯರನ್ನು ಪಡೆದ ರಾಜನೆಂದರೆ ಇಮ್ಮಡಿ ವೆಂಕಟಪನಾಯಕ.

1. ಲಕ್ಷ್ಮಮ್ಮ – (ಪಟ್ಟದರಸಿ, ಕನಕಗಿರಿ,ಗುಜ್ಜಲ ರಂಗಪ್ಪನಾಯಕನಮಗಳು)
2. ಚೆನ್ನಮ್ಮ – (ಪ್ಯಾಪಲ ಮೈಲಿರಂಗಪ್ಪನಾಯಕನ ಮಗಳು)

---

93. F.S.C. 26 APR. 1802 No.32
94. -do- No.41
95. -do- 18 NOV.1802 No.32
96. -do- No.44-51.

3· ದೇವಮ್ಮ — (ನರಸೋಬತ್ತಿನ ಮಗಳು)

4· ಕಾಕ್ಯದಿಗೇರಿ ಸೀತಮ್ಮ

5· ಕಾಕ್ಯದಿಗೇರಿ ಕುದ್ಬವ್ವ

6· ಪದ್ಮಮ್ಮ — (ನರ ಹವಲ್ದಾರನ ಮಗಳು)

7. ಕಾಟಮ್ಮ — (ಪಟ್ಟದರಾಣಿ, ಕನಕಗಿರಿ ರಂಗಪ್ಪನಾಯಕನ ಮಗಳು)

8. ಕನಕಮ್ಮ — (" ")

9· ನರಸಿಂಗಮ್ಮ — (" ")

10· ರಾಮಮ್ಮ — (" ")

11· ಪುಲ್ಲಭೇರು ದಿವಾಕರಮ್ಮ

12· ಜದಿಮುರಿಯ ಲಕ್ಷ್ಮಮ್ಮ

13· ನಡಿಮಿದೊರೆಯ ವೆಂಗಮ್ಮ

14· ಚಿಕ್ಕ ಕನಕವ್ವ

15· ತಾರವ್ವ

16· ನಾರಾಯಣಮ್ಮ·

<u>ಪರಿವಾರ</u> :

ಪಟ್ಟದರಾಣಿ ಲಕ್ಷ್ಮಮ್ಮಳಿಗೆ ತಿಮ್ಮಮ್ಮ ಎಂಬ ಮಗಳು ಜನಿಸಿದ್ದಳು· ಹೆತ್ತ ಮೂರನೆಯ ದಿನಕ್ಕೆ ಲಕ್ಷ್ಮಮ್ಮ ಮಡಿದಳು· ಆಗ ಕಾಟಮ್ಮ ಪಟ್ಟದರಾಣಿಯಾಗಿ ಬಡ್ತಿ ಹೊಂದಿದಳು· ತಿಮ್ಮಮ್ಮಳನ್ನು ಕನಕಗಿರಿಯ ನರಸಿಂಗನಾಯಕನಿಗೆ ಮದುವೆಮಾಡಿಕೊಡಲಾಯಿತು· ಇನ್ನೊರ್ವ ರಾಣಿ ನರಸಿಂಗಮ್ಮನ ಉದರದಿಂದ ಬಾಪುಸಾಹೇಬ, ಶ್ರೀನಿವಾಸನಾಯಕರೆಂಬ ಇಬ್ಬರು ಮಕ್ಕಳ ಜನಿಸಿದರು· ತಾಡಿಮರಿಯ ಕೇಶವಮ್ಮನನ್ನು ಮದುವೆಯಾಗಿದ್ದ ಬಾಪುಸಾಹೇಬ, ಜಕ್ಲಿಪಾಳಿ ರಾಮಪ್ಪನ ಮಗಳನ್ನು ವರಿಸಿದ್ದ· ಇವರೀರ್ವರಿಂದ ಹುಟ್ಟಿದ ಮಗುವೆ ಮುಂದೆ ಸುರಪುರದ ಪಟ್ಟಕ್ಕಾಗಿ ಪ್ರಯತ್ನಪಟ್ಟ 'ವೆಂಕಟರಾಘಮ್ಮ'·

ವ್ಯಕ್ತಿತ್ವ :

ಅನೇಕ ಆತಂಕಗಳ ಮಧ್ಯೆ ಆಳ್ವಿಕೆ ನಡೆಸಿದ ಇಮ್ಮಡಿ ವೆಂಕಟಪ್ಪನಾಯಕ ಸುರಪುರ ಸಂಸ್ಥಾನಕ್ಕೆ ಅತ್ಯುತ್ತಮ ಆಡಳಿತ ನೀಡಿದನೆಂಬುದರಲ್ಲಿ ಎರಡಿಲ್ಲ. ಸಾಹಿತ್ಯ, ಸಂಗೀತ, ಕಲೆಗಳಿಗೆ ಆಶ್ರಯ ಒದಗಿಸಿದನಲ್ಲದೆ ಆಡಳಿತ ವ್ಯವಸ್ಥೆಯಲ್ಲಿ ನೂತನ ಬದಲಾವಣೆ ತಂದಿದ್ದ. ಛಲಗಾರನೆಂದೆ ಹೆಸರುವಾಸಿಯಾದ ಈತನಿಗೆ ನಿಜಾಮ ಮತ್ತು ಇಂಗ್ಲೀಷರ ದ್ವಂದ್ವ ನೀತಿಗಳು ದಿಕ್ಕುತಪ್ಪಿಸಿದವು. ನಿಜಾಮನ ಮೂಲಕ ಬ್ರಿಟಿಷರು ಸಂಸ್ಥಾನದಲ್ಲಿ ಪ್ರಥಮ ಬಾರಿಗೆ ನೇರವಾಗಿ ಹಸ್ತಕ್ಷೇಪ ಮಾಡಿದರು. ಇವುಗಳೊಂದಿಗೆ ವೆಂಕಟಪ್ಪನಾಯಕನಿಗಿರುವ ಇನ್ನೊಂದು ಮುಖವೆಂದರೆ ಪತ್ನಿಯರ ಮೇಲೆ ವ್ಯಾಮೋಹ. ಅತಿ ಹೆಚ್ಚು ರಾಣಿಯರನ್ನು ವರಿಸಿ ಸಂಸ್ಥಾನದ ವೆಚ್ಚಕ್ಕೆ ಕಾರಣನಾಗಿದ್ದ. ಗುಡುಗುಂಟಿ, ಕಾಳಗ, ದೇವದುರ್ಗದ ಕದನ, ಹಲವು ಗ್ರಾಮಗಳ ಲೂಟಿ ಪ್ರಕರಣಗಳು ಈತನ ವರ್ಚಸ್ಸಿಗೆ ಕುಂದು ತಂದವು. '' ಇವೆಲ್ಲಕ್ಕಿಂತ ಅತ್ಯಂತ ಘೋರ ಅಪರಾಧವೆಂದರೆ ಹೊಟ್ಟೆಯಲ್ಲಿ ಹುಟ್ಟಿದ ಸ್ವಂತಮಗ ಬಾಪು ಸಾಹೇಬನನ್ನೇ ವಿಷ ಕುಡಿಸಿ ಕೊಂದದ್ದು.'' ಕುಮಾರರಾಮನಂತೆ ಬಾಪುಸಾಹೇಬನು ಸಹ ಚಿಕ್ಕಮ್ಮನ ಲೈಂಗಿಕ ತೃಷೆ ತೀರಿಸದೆ ಇರುವುದಕ್ಕೆ ತನ್ನ ಪ್ರಾಣವನ್ನೇ ಬಲಿ ಕೊಡಬೇಕಾಯಿತೆಂದು'' ಕೈಫಿಯತ್ತು ಕರುಣಾಪೂರ್ವಕವಾಗಿ ಹೇಳುತ್ತವೆ. ಇದೆಷ್ಟು ಐತಿಹಾಸಿಕವೋ ಇಂದು ಶೋಧಿಸಬೇಕಾಗಿದೆ.

ಅಂತು-ಇಂತೂ ತುಂಬು ಜೀವನ ನಡೆಸಿದ, ಸಂಸ್ಥಾನವನ್ನು ಸಮರ್ಥವಾಗಿ ಆಳಿದ ವೆಂಕಟಪ್ಪನಾಯಕ ದುಂದುಭಿ ಸಂವತ್ಸರದ ಆಷಾಢ ಶುದ್ಧ ಪೌರ್ಣಿಮೆಯಂದು (ಕ್ರಿ.ಶ.1802)ರಂದು ಇಹಲೋಕ ತ್ಯಜಿಸಿದ.

(7) ಮುಮ್ಮಡಿ ಪಿಡ್ಡನಾಯಕ :(ಕ್ರಿ.ಶ.1802-1818)

ಇಮ್ಮಡಿ ವೆಂಕಟಪ್ಪನಾಯಕನ ತರುವಾಯ ಸುರಪುರದ ಉತ್ತರಾಧಿಕಾರತ್ವಕ್ಕೆ ಸಂಸ್ಥಾನದ ಸಂಬಂಧಿಗಳಲ್ಲಿ ಕೋಲಾಹಲ ವಾತಾವರಣವೆದ್ದಿತು. ಇದ್ದೊಬ್ಬ ಮಗನನ್ನು ಕೈಯಾರ ಕೊಂದ ವೆಂಕಟಪ್ಪನಾಯಕ ತನ್ನ ವಂಶದ ಕುಡಿಯನ್ನು ತಾನೆ ಕೊನೆ ಮಾಡಿಕೊಂಡಿದ್ದ. ಕೊಲೆಯಾದ ಬಾಪುಸಾಹೇಬ ವೆಂಕಟಪ್ಪರಾಘವಮ್ಮಳೆಂಬ ಮಗಳನ್ನು ಬಿಟ್ಟು ಹೋಗಿದ್ದ. ಪಟ್ಟದರಸಿ ಕಾಟಮ್ಮಳ ಪ್ರಯತ್ನದಿಂದ ಇವಳನ್ನು ಸುರಪುರದ ಪಟ್ಟಕ್ಕೆ ರಾಣಿಯಾಗಿಸಲಾಗುತ್ತದೆ. ಅಪ್ರಾಪ್ತ

t-4624
O33
N5

ವಯಸ್ಸಿನ ಕಾರಣದಿಂದ ಕಾಟಮ್ಮಳೆ ರಾಜ್ಯದ ಕಾರ್ಯಭಾರ ನೋಡಿಕೊಳ್ಳುವಾಗ ದಿವಾನ ತಿಮ್ಮಪ್ಪ ಸರ್ವರೀತಿಯ ಸಹಕಾರ ನೀಡುತ್ತಾನೆ. ಇದನ್ನು ಬಹುದಿನ ಬಾಳಲು ಶತ್ರುಗಳು ಬಿಡಲಿಲ್ಲ. ಸಂಸ್ಥಾನದ ಸಿಂಹಾಸನವೇರಲು ನಿಜವಾದ ಹಕ್ಕುದಾರನನ್ನೇ ತರುವದಾಗಿ ಒಂದು ಬಣ ಸಿದ್ಧವಾಯಿತು. ಇದು ಸತ್ಯವೂ ಇತ್ತು. ಪೀತಾಂಬರ ಬಹಿರಿಪಿಡ್ಡನಾಯಕನ ಮಗನಾದ ಕೃಷ್ಣಪ್ಪನಾಯಕನು ತನ್ನ ಮಗನಾದ ಮದನಗೋಪಾಲನೊಂದಿಗೆ ಮೊಂಡುಗೈ ವೆಂಕಟಪ್ಪನಾಯಕನ ಕಾಲಕ್ಕೆ ಸುರಪುರ ಬಿಟ್ಟು ಕರ್ನೂಲ ಸೇರಿದ್ದ. ಈ ಮದನಗೋಪಾಲನಾಯಕನ ಮಗನಾದ ಮುಮ್ಮಡಿ ಪಿಡ್ಡನಾಯಕನು ಪತ್ತಿಕೊಂಡ ತಾಲೂಕಿನ ಕಪಟ್ರಾಳ ಎಂಬ ಗ್ರಾಮದಲ್ಲಿದ್ದ. ಈತನಿಗೇ ಸುರಪುರದ ಗಾದಿ ಸಲ್ಲಬೇಕೆಂದು ನಿರ್ಧರಿಸಿ ಅಂಕಪ್ಪನಾಯಕನ ಮುಂದಾಳತ್ವದಲ್ಲಿ ಪಿಡ್ಡನಾಯಕನಿಗೆ ಸುರಪುರ ಸಂಸ್ಥಾನದ ಪಟ್ಟಕಟ್ಟಲಾಯಿತು. ದಿವಾನ ತಿಮ್ಮಪ್ಪನಿಗೆ ಬಂಧನದಲ್ಲಿರುವದರೊಂದಿಗೆ ರಾಜ್ಯಭಾರ ಆರಂಭಿಸಿದರು. ಇದನ್ನು ತಿಮ್ಮಪ್ಪನ ಮತ್ತು ಕಾಟಮ್ಮನ ಕಡೆಯವರು ಬಲವಾಗಿ ವಿರೋಧಿಸಿದಲ್ಲದೆ, ದಂಗೆಯೂ ಎದ್ದಿತು. ಆಗ ಪಿಡ್ಡನಾಯಕನ ಸಂಬಂಧಿಗಳಾದ ಪ್ಯಾಪಲಿಯವರು ಹಾಗೂ ದೂದಿಕೊಂಡ, ಪಾಮಡಿ ಕೊವಾರಕೊಂಡ, ಕೋನಸಗಿ ಪಾಳೆಯಗಾರರು ದಂಗೆಯನ್ನು ಅಡಗಿಸಿದರು.[97] ಇದಕ್ಕೊಂದು ಶಾಶ್ವತ ಪರಿಹಾರ ರೂಪಿಸಿದ ಅಪ್ಪಪ್ಪನಾಯಕನ ಮಾತಿಗೆ ಎಲ್ಲರೂ ಒಪ್ಪಿದರು. ಅದೇನೆಂದರೆ, " ಮುಮ್ಮಡಿ ಪಿಡ್ಡನಾಯಕನು ಸುರಪುರದ ಪಟ್ಟವೇರಬೇಕು, ಪಟ್ಟವೇರಿದ ಪಿಡ್ಡನಾಯಕ ಕಾಟಮ್ಮ ಹೇಳಿದಂತೆ ರಾಜ್ಯಕಾರ್ಯ ನಡೆಸಬೇಕು "[98] ಇದು ಆತನ ಸೂತ್ರ.

ಮಹಿಪತರಾಂ :

ಬರಾರನ ನಾಗರಿಕ ಆಡಳಿತಾಧಿಕಾರಿಯಾಗಿದ್ದ ಮಹಿಪತರಾಮನು ಯಾವುದೋ ಕಾರಣಕ್ಕೆ ಪದಚ್ಯುತನಾಗಿದ್ದ. ಈತನನ್ನು ಬ್ರಿಟಿಷರು ಸುರಪುರ ಸಂಸ್ಥಾನದಲ್ಲಿ ಕೆಲವು ಕಾರ್ಯಕ್ಕಾಗಿ ತಮ್ಮ ಪ್ರತಿನಿಧಿಯೆಂದು ಕಳಿಸಿದ್ದರು. ಸಂಸ್ಥಾನದಿಂದ ಸಮೀಪವಿರುವ ಸಗರ ಕಿಲ್ಲೆಯಲ್ಲಿ ವಾಸ್ತವ್ಯ ಹೂಡಿದ್ದ ಮಹಿಪತರಾಮ ಸೈನ್ಯದ ಖರ್ಚು ವೆಚ್ಚಕ್ಕೆ ಸುರಪುರ ಸಂಸ್ಥಾನವನ್ನೇ ಅವಲಂಬಿಸಿದ್ದ. ಯಾಕೆಂದರೆ, ನಿಜಾಮನಿಗೆ ಸುರಪುರವು ನೀಡಬೇಕಾದ ಸಾಲವನ್ನು ವಸೂಲ ಮಾಡಿಕೊಡಲು ಈತ ಬಂದವನಾಗಿದ್ದ. ಇದೇ ಸಮಯಕ್ಕೆ ನಿಜಾಮನಿಂದ ಮೀರ ಅಲವತ ನೆಂಬಾತ ಸುರಪುರದ ಬಾಕಿ

97. ಸು. ಸಂ. ಇ., ಪುಟ-137.
98. ಕೈಫಿಯತ್ತು ನಂ.4

ವಸೂಲಿಗೆ ಶೇತನೊಂದಿಗೆ ಬಂದು ಕೂಡಿದ.

ಸಾಲ ತೀರಿಸಲು ಸಮಯ ಅವಕಾಶ ಕೋರಿದ್ದ. ಸುರಪುರದಲ್ಲಿ ಮಹಿಪತರಾಮ ನೇರವಾಗಿ ಹಸ್ತಕ್ಷೇಪಕ್ಕೆ ಇಳಿದಿದ್ದ. ಒಂದು ಸಲ ಪಿಡ್ಡನಾಯಕನಿಗೆ "ನಿಜಾಮನಿಗೆ ಸುರಪುರ ಪ್ರದೇಶ ವಶಪಡಿಸಿಕೊಳ್ಳಲು ಪರೋಕ್ಷವಾಗಿ ಬೆಂಬಲಿಸುತ್ತಿರುವಿ" ಎಂದು ಆರೋಪಿಸಿದ. ಇದಕ್ಕೆ ರಿಜೆಖಾನ ಸಿಂಧೆ ಸಹ ಧ್ವನಿಗೂಡಿಸಿದ. ಜೀವಕ್ಕೆ ಎದುರಿದ ರಾಜ ವಿಮ್ಮ ವನದುರ್ಗ ಕೋಟೆಯಲ್ಲಿ ಕೆಲವು ಕಾಲ ಅಡಗಿ ಆಶ್ರಯಪಡೆದು ಮತ್ತೆ ಮರಳಿ ಬಂದಿದ್ದನು.[99] ತನಗೆ ಕಾಣಿಕೆ ಸಲ್ಲಿಸದೆ ಇರುವದರಿಂದ ಪಿಡ್ಡನಾಯಕನ ಮತ್ತು ದಿವಾನ ತಿಮ್ಮಪ್ಪನ ಕುಟುಂಬವನ್ನು ಶಹಪುರ ಕೋಟೆಯಲ್ಲಿ ಬಂಧಿಸಿದ್ದನೆಂದು[100] ಹಾಗೂ ಅವರ ವೈಯಕ್ತಿಕ ಆಭರಣ ಸುಲಿದುಕೊಂಡನೆಂದು ತಿಳಿಯುತ್ತದೆ. ರಿಜೆಖಾನ ಸಿಂಧೆಗೆ ಸೈನ್ಯಕ್ಕೆ ಹಣಕೊಡುವದಾಗಿ ಪಿಡ್ಡನಾಯಕ ಮಾತುಕೊಟ್ಟಿದ್ದ. ಅದನ್ನು ನಡೆಯಿಸಿ ಕೊಡದಕ್ಕೆ ಆತನ ಮಗನನ್ನೇ ಮಹಿಪತರಾಮ ಒತ್ತೆ ಇಟ್ಟುಕೊಂಡಿದ್ದ. ಇಷ್ಟೆಲ್ಲ ಕಷ್ಟವನ್ನು ಇದು ವರೆಗೆ ನುಂಗಿಕೊಂಡು ಬಂದಿದ್ದ ಪಿಡ್ಡನಾಯಕನಿಗೆ ತಾಳ್ಮೆ ಮೇರೆ ಮೀರಿ ಹೋಯಿತು. ಆಗ ನೇರವಾಗಿ ರೆಸಿಡೆಂಟನಲ್ಲಿ (ಹೈದ್ರಾಬಾದ) ಮನವಿ ಸಲ್ಲಿಸಿ ಸುರಪುರದ ಮೇಲೆ ಮಹಿಪತರಾಮನಿಂದ ಆಗುತ್ತಿರುವ ಕ್ರೂರದುರ್ನಡತೆಗಳ ಬಗ್ಗೆ ಗಮನ ಸೆಳೆದ. ಮನವಿ ಪರಿಶೀಲಿಸಿದ ಸರಕಾರವು ಮಹಿಪತ ರಾಮನ ಮೇಲೆ ಸಂದೇಹತಾಳಿತು. ಪ್ರತ್ಯಕ್ಷ ವರದಿ ತರಿಸಿಕೊಂಡಾಗ ಹೊರಬಿದ್ದ ಮುಖ್ಯ ಅಪರಾಧ ಗಳೆಂದರೆ —

1. ವೆಂಕಪ್ಪನೆಂಬುವನಿಂದ 10 ಲಕ್ಷ ರೂ. ಪಡೆದು ಆತನಿಗೆ ಸುರಪುರದ ಗಾದೆ ಕೊಡಲು ಹವಣಿಸಿದ್ದು.[101]

2. ಪಿಡ್ಡನಾಯಕನಿಗೆ ಬೆದರಿಸುವ ಮೂಲಕ ಕಾಣಿಕೆ ಸ್ವೀಕರಿಸಿದ್ದು.

3. ತಿಮ್ಮಪ್ಪನನ್ನು ಮಂತ್ರಿಪದವಿಯಿಂದ ತೆಗೆದುಹಾಕಿದಾಗ ವೆಂಕಪ್ಪನಿಗೆ ಸೈನ್ಯ ಸಹಾಯ ಸಲ್ಲಿಸಬೇಕೆಂದು ನಭಯಾರಜಂಗ ಮತ್ತು ರಿಜೆಖಾನ ಸಿಂಧೆಗೆ ಹೇಳಿದ್ದು

4. ಪಿಡ್ಡನಾಯಕ ಮತ್ತು ತಿಮ್ಮಪ್ಪನ ಕುಟುಂಬಗಳನ್ನು ಕಾನೂನು ಅತಿಕ್ರಮಿಸಿ ಬಂಧನದಲ್ಲಿಟ್ಟಿದ್ದು.

---

99. TBRPS p-25
100. Sydenham to minto 22 DEC. 1807.
101. .FSC 18 NOV. 1802, No.73

ಇಂಥ, ಅನೇಕ ಅಪರಾಧಗಳು ಮಹಿಪತರಾಮನ ಮೇಲೆ ಸಾಬೀತು ಆದವು. ಇವೆಲ್ಲವುಗಳಿಗೆ ಅವನ ಚಿಕ್ಕಪ್ಪನಾದ ಶ್ರೀಪತಿರಾಮನ ಸೂತ್ರಗಾರನಾಗಿದ್ದನೆಂದು ಗೊತ್ತಾದರೂ, ಮಹಿಪತರಾಮನನ್ನು ನಿಜವಾದ ಆರೋಪಿಯೆಂದು ತೀರ್ಮಾನಿಸಲಾಯಿತು. ಕೂಡಲೇ ನಿಜಾಮ ಸರಕಾರವು ಮೇಜರಗಾರ್ಡನ್ ಹಾಗೂ ನಿಜಾಮತ್‌ಜಂಗನ ನೇತೃತ್ವದಲ್ಲಿ ಪಡೆಯೊಂದನ್ನು ಸುರಪುರದತ್ತ ಕಳುಹಿಸಿ "ಮಹಿಪತರಾಮ, ನಬಿಯಾರಜಂಗ ಮತ್ತು ರಿಜೀಖಾನರನ್ನು ಶಿಕ್ಷಿಸಲು" ಆದೇಶಿಸಿತು. ಜೊತೆಗೆ ಪಿಡ್ಡನಾಯಕನಿಗೆ ರಕ್ಷಣೆ ಒದಗಿಸಬೇಕೆಂದು ಹೇಳಿತು. ಸುರಪುರಕ್ಕೆ ಸೈನ್ಯ ಬರುತ್ತಿರುವ ಸುದ್ದಿ ಕೇಳಿ ಮಹಿಪತಿರಾಮ ರಾಜನ ಮತ್ತು ತಿಮ್ಮಪ್ಪನ ಕುಟುಂಬಗಳನ್ನು ಬಂಧನದಿಂದ ಮುಕ್ತಗೊಳಿಸಿದ ನಿಜಾಮ ಸೈನ್ಯ ನಾರಾಯಣಪೇಟದ ಹತ್ತಿರ ಬೀಡುಬಿಟ್ಟಾಗ ಮಹಿಪತರಾಮ ಬನಾರಸದತ್ತ ಪಲಾಯನ ಮಾಡಲು ಯೋಜಿಸಿದ.[102] ಕೊನೆಗೆ ಒಳ್ಕರನ ಶಿಬಿರದಲ್ಲಿ ಕೊನೆಯುಸಿರೆಳೆದು ತನ್ನ ಪಾಪಕ್ಕೆ ಪ್ರಾಯಶ್ಚಿತ್ತ ಪಟ್ಟುಕೊಂಡ. ಇದರಿಂದ ಮಹಿಪತಿರಾಮನು ಬ್ರಿಟೀಷರಿಗೆ ಹಾಗೂ ಸುರಪುರಕ್ಕೆ ವಿರೋಧಿ ಕೆಲಸ ಮಾಡಿದ್ದಾನೆಂದು ಪರೋಕ್ಷವಾಗಿಯೇ ಆರೋಪಗಳು ಸಾಬೀತು ಆದವು.

ಬ್ರಿಟಿಷರಿಗೆ ಸುರಪುರ ಸಂಸ್ಥಾನವನ್ನು ತಮ್ಮ ಹತೋಟಿಗಾಗಲೀ ಇಲ್ಲವೆ ದಿವಾನನ ಆಳ್ವಿಕೆಗಾಗಲೀ ಒಪ್ಪಿಸುವ ವಿಚಾರವಿರಲಿಲ್ಲ. ಅಧಿಕಾರಕ್ಕೆ ಬಂದ ಪಿಡ್ಡನಾಯಕ ಕಂದಾಯ ಎತ್ತುವ ಮಾಲಿಕ ದಕ್ಷ ಆಳಿತಗಾರನೆಂದು ತೋರಿಸಿಕೊಂಡದ್ದು ಅವರಿಗೆ ಖುಷಿ ನೀಡಿತು. ದೃಢ ಚಾರಿತ್ರ್ಯದಿಂದ ಜನರ ಆಶೋತ್ತರಗಳನ್ನು ಈಡೇರಿಸಲು ನಾಯಕ ಸದಾ ಸಿದ್ಧನಾಗಿದ್ದ. ಆದರೆ ಪೇಶ್ವೆಗೆ ಕೊಡಬೇಕಾದ ಸಾಲದ ಕಾಣಿಕೆ ನಿಲ್ಲಿಸಿ[103] ನಿಜಾಮನಿಗೆ ಮಾತ್ರ ಸಲ್ಲಿಸತೊಡಗಿದ. ಇದರಿಂದ ಬ್ರಿಟಿಷ ಮತ್ತು ನಿಜಾಮನಿಗೆ ಪಿಡ್ಡನಾಯಕನ ಮೇಲೆ ಪ್ರೀತಿಹುಟ್ಟಿತು. ಆದರೆ 1806 ಮೇ 10ರಂದು ಬ್ಯಾರಿಯು ಪೇಶ್ವೆ ಮತ್ತು ಸಂಸ್ಥಾನದ ಆಂತರಿಕ ಸಂಬಂಧಗಳ ಬಗ್ಗೆ ಕಲ್ಕತ್ತ ಸರಕಾರಕ್ಕೆ ವರದಿ ಸಲ್ಲಿಸಿದ.[104] ಸಮಸ್ಯೆಗೆ ಮತ್ತಷ್ಟು ಚಾಲನೆ ಸಿಕ್ಕು ಕ್ರಿ.ಶ.1807-08ರಲ್ಲಿ ಬಾಜಿರಾಯನು ಸುರಪುರ ಸಂಸ್ಥಾನವು ತಮಗೆ ಸಲ್ಲಿಸಬೇಕಾದ ಪೇಷಕಷ ಪಾವತಿ ಮಾಡಲು ಒತ್ತಾಯಿಸಿ,[105] ವಸೂಲಿಗಾಗಿ ಬಾಪುಗೋಖಲೆನನ್ನು ಕಳುಹಿಸಿದ. ಆಗ ರೆಸಿಡೆಂಟನು ಮೊದಲಿನ ವರದಿ ಮತ್ತು ವಾಸ್ತವ ಅರಿತು "ಮಹಿಪತರಾಮನ ದುರಾಡಳಿತದಿಂದ ಸದ್ಯ ಸಂಸ್ಥಾನ ಆರ್ಥಿಕ ಮುಗ್ಗಟ್ಟಿನಲ್ಲಿದೆ. ಈಗ

---

102. PRC. Vol.VII No.308
103. T.Warden Chief Secretary to Bombay Government
William Chaplin - Commissioner in the Deccan, 8 NOV 1802 HRC Vol.190
104. FSC June 1806 No.44
105. P.C.Gupta - Bajirao II and the East India Company (II Edn) p-95.

ಆದಕ್ಕೆ ಕಾಣಿಕೆ ಕೊಡಲು ಅಸಾಧ್ಯ - ವೆಂದು ಹೇಳಿದ. ರೆಸಿಡೆಂಟನ ಮಾತಿಗೆ ತೃಪ್ತಿ ಹೊಂದದ ವೇಶ್ವಿಯು ಕಲ್ಕತ್ತಾ ಕೋರ್ಟಿನಿಂದ ಸಾಲ ವಸೂಲಿ ಆದೇಶ ಪಡೆದ. ಈಗಂತೂ ಸಾಲ ಕೊಡಲೇ ಬೇಕಾಯಿತು. ಇಲ್ಲವಾದರೆ ನ್ಯಾಯಾಲಯದ ಆಜ್ಞೆಗೆ ನಿಂದನೆಯಾಗುತ್ತದೆ. ನಿಜಾಮನಿಗೆ ಸಲ್ಲಿಸ ಬೇಕಾಗಿದ್ದ 8 ಲಕ್ಷ ರೂ. ಬಾಕಿ ಈಗ 13 ಲಕ್ಷ ರೂಪಾಯಿಗೇರಿತ್ತು. ಇವೆಲ್ಲವುಗಳ ಮಧ್ಯೆ ಕ್ರಿ.ಶ. 1813ರಲ್ಲಿ ಸುರಪುರ ಸಂಸ್ಥಾನದಲ್ಲಿ ಭೀಕರ ಬರಗಾಲ ಕಾಣಿಸಿಕೊಂಡಿತು.[106] ಶ್ರಮಜೀವಿಗಳೆಲ್ಲ ಸಾವಿನ ಬಾಯಿಗೆ ತುತ್ತಾಗತೊಡಗಿದರು. ಆಗ ಪಿಡ್ಡನಾಯಕನು ರೈತರ ಅಭಿವೃದ್ಧಿಗಾಗಿ ಹಗರಿಯುಳು ಶ್ರಮಿಸಿ, ಅವರ ಹಿತಾಸಕ್ತಿಯನ್ನು ಕಾಪಾಡಿದ.[107]

<u>ಪತ್ನಿ ಮತ್ತು ಪರಿವಾರ :</u>

ಪತ್ನಿಯರು :	1. ವೆಂಕಮ್ಮ	2. ಅವ್ವಭೀಮವ್ವ	3. ಚೆನ್ನಮ್ಮ
ಮಕ್ಕಳು :	1. ವೆಂಕಟಪ್ಪನಾಯಕ	1. ಹಿರೇವೆಂಕಪ್ಪ	
	2. ಸೀತಾರಾಮನಾಯಕ	2. ಕಿರಿವೆಂಕಪ್ಪ	
	3. ತಾತಾವೆಂಕಟಪ್ಪನಾಯಕ	3. ವೆಂಕಟಪ್ಪನಾಯಕ	
	4. ವೆಂಕಮ್ಮ	4. ಗಿರಿಯಮ್ಮ	
	5. ಪದ್ಮಮ್ಮ	5. ಸಾತಮ್ಮ	
	6. ಮಂಗಮ್ಮ		

ವ್ಯಾಕಪರಿ ರಂಗಪ್ಪನಾಯಕನ ಪುತ್ರಿ ವೆಂಕಮ್ಮಳನ್ನು ಪಟ್ಟದ ಅರಸಿಯಾಗಿ ವರಿಸಿದ್ದ ಮುಮ್ಮಡಿ ಪಿಡ್ಡನಾಯಕ ಆಕೆಯ ಉದರದಿಂದ ಆರು ಮಕ್ಕಳನ್ನು ಪಡೆದಿದ್ದ. ಹೆಣ್ಣು ಮಕ್ಕಳಾದ ವೆಂಕಮ್ಮಳನ್ನು ವ್ಯಾಕಪರಿರಾಯಪ್ಪನಾಯಕನಿಗೆ, ಪದ್ಮಮ್ಮಳನ್ನು ರತ್ನಗಿರಿ ನಂದರಾಜನಿಗೆ ಹಾಗೂ ಮಂಗಳನ್ನು ಕ್ಯಾದಿಗೇರಿ ರಂಗಪ್ಪನಾಯಕನಿಗೆ ಮದುವೆ ಮಾಡಿಕೊಡಲಾಗಿತ್ತು. ರಾಣಿ ವೆಂಕಮ್ಮ ತನ್ನ ವ್ಯಾಕಪಲಯ ತವರುಮನೆಗೆ ಮಗಳನ್ನು ಕೊಡುವ ಮೂಲಕ ಮೂಲ ಸಂಬಂಧ ಮುಂದುವರೆಸಿದ್ದಳು. ಇನ್ನೊರ್ವ ಪತ್ನಿಯಾದ, ಅವ್ವಭೀಮವ್ವಳ ಬಗ್ಗೆ ಹಲವು ಕುತೂಹಲಕರ ವಿಷಯಗಳಿವೆ. 'ರೆಡ್ಡಿ' ಜನಾಂಗಕ್ಕೆ ಸೇರಿದ ಇವಳನ್ನು 'ಬೇಡ' ಜಾತಿಗೆ ಪರಿವರ್ತಿಸಿ, ಪಿಡ್ಡನಾಯಕ ಮದುವೆಯಾದ ನೆಂದು ತಿಳಿಯುತ್ತದೆ.

---

106. Nawab Framurz Jung - Sherapur: An Ancient Beydar Raj 1906 p-8

107. Capt.W.B.Jakson's Memo FPC 19 APR 1841, No.103.

ಐದು ಜನ ಮಕ್ಕಳಲ್ಲಿ ಗಿರಿಯಮ್ಮಳನ್ನು ರಾಯಗೊಂಡಕ್ಕೆ ಮತ್ತು ಸಾತಮ್ಮಳನ್ನು ದೇವದುರ್ಗದ ಕೃಷ್ಣಪ್ಪ ನಾಯಕನಿಗೆ ಕೊಡಲಾಗಿತ್ತು. ರೆಡ್ಡಿ ಜಾತಿಯ ಭೀಮವ್ವಳ ಬಗ್ಗೆ ಹಲವು ಐತಿಹ್ಯಗಳಿವೆ. ತೆಲಂಗಾಣಕ್ಕೆ ಸಂಬಂಧಿಸಿದ ಇವಳನ್ನು ಪಿಡ್ಡನಾಯಕ ಉಪಪತ್ನಿಯಾಗಿ ಸ್ವೀಕರಿಸಿ ಕರೆತಂದು, ವನದುರ್ಗದಲ್ಲಿ ಇಟ್ಟು ಇವಳ ಹೆಸರಿನಿಂದ ಬೃಹತ ಭಾವಿಯೊಂದನ್ನು ಅಲ್ಲಿ ಕಟ್ಟಿಸಿದನು. ಕೊನೆಯ ಹೆಂಡತಿ ಚಿನ್ನವ್ವಳ ಬಗ್ಗೆ ಮತ್ತು ಅವಳ ಮಕ್ಕಳ ಬಗ್ಗೆ ಹೆಚ್ಚಿಗೇನು ದಾಖಲೆಗಳಿಲ್ಲ; ಉಲ್ಲೇಖಗಳು ದೊರೆತಿಲ್ಲ.

(8) <u>ಮುಮ್ಮಡಿ ವೆಂಕಟಪ್ಪನಾಯಕ : (ಕ್ರಿ.ಶ. 1818-1827)</u>

ಮುಮ್ಮಡಿ ಪಿಡ್ಡನಾಯಕನ ತರುವಾಯ ಆತನ ಹಿರಿಯ ಮಗನಾದ ಮುಮ್ಮಡಿ ವೆಂಕಟಪ್ಪನಾಯಕ ಕ್ರಿ.ಶ. 1818ರಲ್ಲಿ ಸುರಪುರ ಸಂಸ್ಥಾನದ ಅಧಿಪತ್ಯಕ್ಕೆ ಅಧಿಕಾರಿಯಾದ. ಒಪ್ಪಂದದ ಪ್ರಕಾರ ಹೈದ್ರಾಬಾದ ನಿಜಾಮನಿಗೆ 6 ಲಕ್ಷ ರೂ. ನಜರಾಣಿ ಸಲ್ಲಿಸುವ ಮೂಲಕ ಸಿಂಹಾಸನರೋಹಣ ಸಮಾರಂಭಕ್ಕೆ ಸಾಮ್ರಾಜ್ಯ ಮರ್ಯಾದೆ ಸಂಪಾದಿಸಿದ.[108] ವಂಶಪರಂಪರೆಯಾಗಿ ಬಂದ ಎಲ್ಲಾ ಹಕ್ಕು, ಅಧಿಕಾರಗಳನ್ನು ಸಂಸ್ಥಾನದ ವರಿಷ್ಠನಾಗಿ ಅಂಗೀಕರಿಸಿದ.

ತಂದೆಯ ಮರಣಾಂತರ ಸಂಸ್ಥಾನದಲ್ಲಿ ಆರ್ಥಿಕ ಮುಗ್ಗಟ್ಟು ಬಿಗಡಾಯಿಸಿತು. ಅಲ್ಲದೆ ನಿಜಾಮನಿಗೆ 15 ಲಕ್ಷ ರೂ. ಸಾಲ ತೀರಿಸುವದಾಗಿ ಮಾಡಿದ ತಂದೆಯ ವಾಗ್ದಾನ ಈಗ ಈತನ ಮೇಲಿತ್ತು. ಸಂಸ್ಥಾನಕ್ಕೀಗ ಬರಗಾಲದ ಬವಣೆ. ರೈತರಿಂದ ಯಾವುದೇ ಕಂದಾಯ ಕೇಳುವಂತಿಲ್ಲ. ಯಾಕೆಂದರೆ 1 ರೂಪಾಯಿಗೆ 70 ಸೇರು ಜೋಳ ಇದ್ದುದು ಈಗ ಬರಗಾಲದ ಪರಿಣಾಮವಾಗಿ ರೂಪಾಯಿಗೆ ಮೂರು ಸೇರು ಮಾತ್ರ ಸಿಗುವಂತಾಗಿತ್ತು.[109]

<u>ಪೇಶ್ವೆ ಪ್ರಾಂತ್ಯ :</u>

ಪೇಶ್ವೆಗಳ ಆಳ್ವಿಕೆಗೆ ಒಳಪಟ್ಟ ಬಿಜಾಪೂರ, ಸೊಲ್ಲಾಪುರ ಮುಂತಾದ ಪ್ರದೇಶದಲ್ಲಿ ಸುರಪುರದವರು ಚೌಥ ಎತ್ತುವ ಅಧಿಕಾರ ಹೊಂದಿದ್ದರು. ಆದರೆ ಎತ್ತಿದ ರುಸೂಮಿನ ಬಾಬತ್ತನ್ನು ಸಮಯಕ್ಕೆ ಸರಿಯಾಗಿ ತಲುಪಿಸದೆ ಹೋದ ಮುಮ್ಮಡಿ ಪಿಡ್ಡನಾಯಕನ ವಿವಾದ ಕಲ್ಕತ್ತಾ ಸರಕಾರಕ್ಕೂ ಗೊತ್ತಾಗಿತ್ತು. ಅದೇ ಸಂಪ್ರದಾಯ ಈಗಲೂ ಮುಂದುವರೆಯುತ್ತಿದ್ದಂತೆ ಪೇಶ್ವೆಗಳ ಪುಣೆ ಆಡಳಿತ ಅಸ್ಥಿರಗೊಂಡಿತು. ಇದನ್ನು ಅರಿತುಕೊಂಡ ಇಂಗ್ಲೀಷರು ಕ್ರಿ.ಶ. 1818ರಲ್ಲಿ

---

108. D.A.Malkolm's Memo on Surapur. FPC. 19 APR.1841 No.102.
109. Nawaba Framurz Jung. -Sherapur: An Ancient Beydur Raj 1906 p-8

ಮುಮ್ಮಡಿ ವೆಂಕಟಪ್ಪನಾಯಕ ಎತ್ತುತ್ತಿದ್ದ ರುಸೂಮಿನ ಪೇಶ್ವೆ ಪ್ರಾಂತ್ಯವನ್ನು ವಶಪಡಿಸಿಕೊಂಡರು. ಇದರಿಂದ ಬ್ರಿಟಿಷರಿಗೆ ಸಂಸ್ಥಾನದಲ್ಲಿ ಪ್ರತ್ಯಕ್ಷ ಪ್ರವೇಶ ಪಡೆಯುವ ಹಕ್ಕು ಲಭಿಸಿತು. ಆದಿಲಶಾಹಿ, ಔರಂಗಜೇಬ ಮತ್ತು ಪೇಶ್ವೆಗಳ ಕಾಲದಿಂದ ಸಾಗಿಬಂದ ಈ ಪ್ರದೇಶದ ಮೇಲಿನ ಅಧಿಕಾರ ಇಂಗ್ಲೀಷರು ಈಗ ಸಾಧಿಸಿಕೊಂಡರು. ಹಲವು ಕಂದಾಯಗಳ ಮೇಲೆ ಅಧಿಕಾರ ಹೊಂದಿ ಸಹಜವಾಗಿ ಸುಪರುದ ವ್ಯಾಪ್ತಿ ಮೊಟಕು ಮಾಡಿದರು. ಪೇಶ್ವೆ ಮತ್ತು ಸುರಪುರದವರ ಮಧ್ಯೆ ತಗ್ಗಿದ್ದ ಹಣಕಾಸು ವ್ಯವಹಾರವನ್ನು ಈಗ ತಮ್ಮಲ್ಲಿಯೇ ವೃದ್ಧಿಸಿಕೊಳ್ಳಲು ಯೋಜಿಸಿದರು.

<u>ಹಳೆ ಒಪ್ಪಂದ ಹೊಸ ವಿಚಾರಣೆ :</u>

ಕ್ರಿ.ಶ.1800ರಲ್ಲಿ ಸುರಪುರ ಕುರಿತು ಆದ ನಿಜಾಮ ಮತ್ತು ಇಂಗ್ಲೀಷರ ಒಪ್ಪಂದ ಕಾರ್ಯರೂಪಕ್ಕೆ ಇನ್ನೂ ಸಮಗ್ರವಾಗಿ ಬಂದಿರಲಿಲ್ಲ. ಉದಾಹರಣೆಗೆ ಕ್ರಿ.ಶ.1802ರಲ್ಲಿ ಸುರಪುರವು ನಿಜಾಮನಿಗೆ 1,45,000-00 ರೂ. ಕೊಡತಕ್ಕದ್ದೆಂದು ಠರಾವು ಆಗಿತ್ತು. ಅದಿನ್ನೂ ಈಡೇರಿರಲಿಲ್ಲ. ಅದರಂತೆ ಪೇಶ್ವೆ ಪ್ರಾಂತ್ಯದಿಂದ ಕ್ರಿ.ಶ.1799 ರಿಂದ ಬರಬೇಕಾಗಿದ್ದ ಚೌಥ ಹಣದ ವಿಚಾರ ಈಗ ಕೆದಕಲು ಆಸ್ಪದವಾಯಿತು. ಯಾಕೆಂದರೆ ಆ ಪ್ರದೇಶವೀಗ ಇಂಗ್ಲೀಷರ ಆಡಳಿತಕ್ಕೆ ಒಳಪಟ್ಟಿರುವದರಿಂದ ತಮಗೆ ಸಲ್ಲಬೇಕೆಂದರು. ಆದರೆ ಬಿಜಾಪೂರದ ಮಮ್ಲತದಾರನಾದ ನೀಲಕಂಠನಾಥರಾದನು " ಇದು ಹಿಂದಿನ ಬಾಕಿ, ಪೇಶ್ವೆಗೇ ಬರಬೇಕಾದದ್ದು ನ್ಯಾಯಯುತವೆಂದು " ವಾದಿಸಿ ರೆಸಿಡೆಂಟ್, ಕಮೀಷನರವರೆಗೂ ಒಯ್ದನು.

ಪೂರ್ವದ ಷರತ್ತಿನಂತೆ, 1,45,000-00 ರೂ. ಜೊತೆಗೆ ಈಗ ಅಪ್ಪಾದೇಸಾಯಿಯ ಚೌಥ 30 ಸಾವಿರ ರೂ. ಸೇರಿಸಿ ಒಟ್ಟು 1 ಲಕ್ಷ 75 ಸಾವಿರ ರೂ.ಗಳನ್ನು ಪ್ರತಿವರ್ಷ ಕಂದಾಯದ ಜೊತೆ ನಿಜಾಮನಿಗೆ ನೀಡಬೇಕೆಂದು ಸುರಪುರಕ್ಕೆ ಒತ್ತಡ ತರಲಾಯಿತು. ಈ ರೀತಿ ಕ್ರಿ.ಶ.1823 ರಿಂದ ಕಂಪನಿ ಸರಕಾರವು ನಿಜಾಮನ ಚೌಥನ್ನು ಒಂದು ವರ್ಷಕ್ಕೆ 15 ಸಾವಿರ ರೂ.ದಂತೆ ಏರಿಸುವದರೊಂದಿಗೆ ಸಂಸ್ಥಾನದ ವಿರುದ್ಧ ಪರೋಕ್ಷವಾಗಿ ನಿಜಾಮನ ಕೈಬಲ ಪಡಿಸಿದರು. ಬ್ರಿಟಿಷ ಸರಕಾರವು ತನ್ನ ಕೈವಾಡದಿಂದ ನಿಜಾಮನಿಗೆ ಹೆಚ್ಚುವರಿ ಆದಾಯ ಸಿಗುವಂತೆ ಇದ್ದ ಸಮುನ್ಯೆಗಳನ್ನು ಉಪಯೋಗಿಸಿಕೊಂಡಿತು.

ಬ್ರಿಟಿಷರ ಇಂಥ ಹಲವು ದ್ವಂದ್ವ ನೀತಿಗಳನ್ನು ಸಂಸ್ಥಾನದ ರಾಜ, ಮುಮ್ಮಡಿ ವೆಂಕಟಪ್ಪನಾಯಕ ಖಂಡಿಸುವಲ್ಲಿ ಔಪಚಾರಿಕವಾಗಿ ಅಸಮರ್ಥನಾದ. ನಿಜಾಮ ಮತ್ತು ಕಂಪನಿ ಸರಕಾರದ ಕಿರುಕುಳದಿಂದ ಸಂಸ್ಥಾನ ಶಿಥಿಲಗೊಂಡಿತು. ಇಷ್ಟೆಲ್ಲಾ ಆರ್ಥಿಕಸ್ಥಿತಿ ಹದಗೆಟ್ಟಿದ್ದರೂ ಯಾರಿಗೂ ಏನೂ ಹಾನಿಯಾಗಿಲ್ಲವೆಂತೆ ಹೈದ್ರಾಬಾದ ರೆಸಿಡೆಂಟ್ ಮೌನವಾಗಿದ್ದ.

<u>ಕೌಟುಂಬಿಕ ಪರಿವಾರ:</u>

ಪತ್ನಿಯರು :- 1. ರತ್ನಗಿರಿ ರಂಗಮ್ಮ 2. ಪಾಕ್ಯಪರ ಚೆನ್ನಮ್ಮ

ಪುತ್ರ-ಪುತ್ರಿಯರು: 1. ಕೃಷ್ಣಪ್ಪನಾಯಕ 1. ಹಣಮಪ್ಪನಾಯ್ಕ

2. ಚಿಕ್ಕನಾಯಕ 2. ಗೋವಿಂದಮ್ಮ

3. ರಾಮನಾಯಕ

4. ವಾಸುದೇವನಾಯಕ

5. ಶ್ರೀನಿವಾಸನಾಯಕ

6. ರಂಗಮ್ಮ

7. ಸೀತಮ್ಮ

ಮುಮ್ಮಡಿ ವೆಂಕಟಪ್ಪನಾಯಕನಿಗೆ ಮೇಲಿನಂತೆ ಇದ್ದ ಪರಿವಾರದಲ್ಲಿ ಹೆಣ್ಣುಮಕ್ಕಳಾದ ರಂಗಮ್ಮ ಹಾಗೂ ಸೀತಮ್ಮರನ್ನು ಕ್ಯಾದಿಗೇರಿಗೆ ಮತ್ತು ಗೋವಿಂದಮ್ಮಳನ್ನು ರತ್ನಗಿರಿಗೆ ಮದುವೆ ಮಾಡಿ ಕೊಡಲಾಗಿತ್ತು.

ಅನೇಕ ಆತಂಕಗಳ ಮಧ್ಯೆ ಅತ್ಯುತ್ತಮ ಆಡಳಿತ ನೀಡಲು ಯತ್ನಿಸಿದ ವೆಂಕಟಪ್ಪನಾಯಕ ' ಸಂಸ್ಥಾನದಲ್ಲಿ ಸಾಂಸ್ಕೃತಿಕ ರಂಗ ವಿಸ್ತರಿಸುವಲ್ಲಿ ವಿಶೇಷ ಆಸಕ್ತಿ ವಹಿಸಿದ. ಕಲೆ, ಸಂಗೀತಗಳು ಶ್ರೀಮಂತಗೊಂಡಿದ್ದವು'' ಒಂಬತ್ತು ವರ್ಷ ರಾಜ್ಯಭಾರ ನಡೆಸಿದ ಈ ಅರಸು ಸರ್ವಜಿತು ನಾಮ ಸಂವತ್ಸರ (ಕ್ರಿ.ಶ.1827) ಕಾರ್ತಿಕ ಶುದ್ಧ ಅಷ್ಟಮಿಯಂದು ಇಹಯಾತ್ರೆ ಪೂರ್ಣಗೊಳಿಸಿದ.[110]

110. ಸು.ಸಂ.ಇ., ಪುಟ-144.

(9) ಕೃಷ್ಣಪ್ಪ ನಾಯಕ:(ಕ್ರಿ.ಶ. 1827-1843)

ಮುಮ್ಮಡಿ ವೆಂಕಟಪ್ಪನಾಯಕನ ನಿಧನಾನಂತರ ಸುರಪುರ ಸಂಸ್ಥಾನದ ಅರಸೊತ್ತಿಗೆ ವಿವಾದಕ್ಕೆ ಈಡಾಯಿತು. ಮಕ್ಕಳಾದ ಕೃಷ್ಣಪ್ಪನಾಯಕ ಮತ್ತು ಹಣಮಪ್ಪನಾಯಕರ ಮಧ್ಯೆ ಅಧಿಕಾರಕ್ಕಾಗಿ ತೀವ್ರ ಸ್ಪರ್ಧೆ ಏರ್ಪಟ್ಟಿತು. ಇಬ್ಬರು ತೋಳ್ಬಲ ಪ್ರದರ್ಶಿಸುವ ಮಟ್ಟಕ್ಕೆ ಇಳಿದರು. ಕೊನೆಗೆ ನಿಜಾಮನ ಹತ್ತಿರ ತೀರ್ಪಿಗಾಗಿ ಮೊರೆಹೋಗುವ ಪ್ರಸಂಗ ಬಂತು. ಇಂಥ ಪರಿಸ್ಥಿತಿಯ ನಿರೀಕ್ಷೆಯಲ್ಲಿಯೇ ಕಾದುಕುಳಿತಿದ್ದ ನಿಜಾಮನಿಗೆ ಹುಡುಕುವ ಬಳ್ಳಿ ಕಾಲಿಗೆ ತಗುಲಿದಂತಾಯಿತು. ಸುರಪುರದ ಪಟ್ಟವೇರಲು ನಿಜಾಮನಿಗೆ ನಜರಾಣಿ ಸಲ್ಲಿಸಬೇಕೆಂಬುದು ಹಿಂದಿನಿಂದ ಬಂದ ನಿಯಮ. ಆದರಂತೆ ಇವರೀರ್ವರ ಮಧ್ಯದ ಅಧಿಕಾರ ದಾಹ ಅರಿತ ನಿಜಾಮ ನಜರಾಣಿಯ ಮೊತ್ತ ಮನಬಂದಂತೆ ಏರಿಸತೊಡಗಿದ. ಇದನ್ನು ಸವಾಲು ರೀತಿಯಲ್ಲಿ ಸ್ವೀಕರಿಸಿದ ನಿಜಾಮ ಕೇಳಿದ 15 ಲಕ್ಷ ರೂ. ನಜರಾಣಿಯನ್ನು ಮತ್ತು 2,30,600-00 ರೂ. ವಾರ್ಷಿಕ ಕಂದಾಯವನ್ನು ಕೃಷ್ಣಪ್ಪನಾಯಕ ಕೊಡಲು ಒಪ್ಪಿದ.[111] ಅತ್ಯಂತ ಅಲ್ಪ ಪ್ರಮಾಣದ ಆರ್ಥಿಕ ಆದಾಯ ಹೊಂದಿದ ಸಂಸ್ಥಾನಕ್ಕೆ ಇಷ್ಟೊಂದು ಮೊತ್ತ ಸಲ್ಲಿಸಲು ಸಾಧ್ಯವೆ? ನಾಲ್ಕೂವರೆ ಲಕ್ಷ ರೂ. ಸದ್ಯ ಸಿಂಹಾಸನರೋಹಣ ಕಾಲಕ್ಕೆ ಕೊಟ್ಟು ಉಳಿದ ಹಣದಲ್ಲಿ ಪ್ರತಿವರ್ಷ 1,25,000-00 ರೂ. ಗಳನ್ನು ಕಂತಿನ ಮೇರೆ ತನ್ನ ಸರಕಾರಕ್ಕೆ ತುಂಬಲು ನಿಜಾಮ ಠರಾವು ಮಾಡಿದ. ಕ್ರಿ.ಶ. 1800 ರಲ್ಲಿ ಆದ ಒಪ್ಪಂದದ 17ನೇ ವಿಧಿಯನ್ನು ಈ ಮೂಲಕ ಉಲ್ಲಂಘಿಸಿದ ನಿಜಾಮ ನೀತಿಗೆ ರೆಸಿಡೆಂಟ್ ಅನುಮೋದಿಸಿದ.[112]

ಇದೆಲ್ಲ ನೋಡಿದರೆ — "ಸುರಪುರ ಸಂಸ್ಥಾನದ ಸಿಂಹಾಸನ ರೋಹಣವು ನೈಜಾಮ ನೀತಿಯಲ್ಲಿಯೇ ನಿರ್ಣಯಿಸಲ್ಪಡುತ್ತಿತ್ತು" ಎಂಬ ಸಂಗತಿ ಇಲ್ಲಿ ದಿಟವಾಗುತ್ತದೆ. ಕ್ರಿ.ಶ. 1827ರಲ್ಲಿ ಸುರಪುರದ ಪಟ್ಟವೇರಿದ ಕೃಷ್ಣಪ್ಪನಾಯಕನು ಮೂರು ವರ್ಷಗಳವರೆಗೆ ನಿಜಾಮ ಸರಕಾರಕ್ಕೆ ಹಣಸಲ್ಲಿಸುತ್ತ ಬಂದ. ನಿಜಾಮ ಮತ್ತು ಇಂಗ್ಲೀಷ ಸರಕಾರದ ವಿರುದ್ಧ ಸಿಡಿದೇಳುವ ಸಾಮರ್ಥ್ಯ ಸುರಪುರಕ್ಕಿಲ್ಲದಿರುವದರಿಂದ ಅವರ ಸಾಮಾಂತಿಕೆ ಒಪ್ಪಿಕೊಳ್ಳಬೇಕಿತ್ತು. ಕರ-ಕಂದಾಯಗಳ ಪಾಲು ನಿಜಾಮ ಸರಕಾರಕ್ಕೆ ಪ್ರತಿವರ್ಷ ಸಲ್ಲಿಸಬೇಕಿತ್ತು. ಹೀಗಾಗಿ ಸಂಸ್ಥಾನದಲ್ಲಿ ಎತ್ತಿದ ಆದಾಯವೆಲ್ಲ ನಿಜಾಮ ನೆರಿಗಿನಲ್ಲಿ ತುಂಬುವ ಸ್ಥಿತಿ ಸುರಪುರಕ್ಕೆ ಬಂತು. ಸಂಸ್ಥಾನದ ರೈತರನ್ನು

---

111. ಸು.ಸಂ.ಇ., ಪುಟ-145
112. Memoes of Capt's Malkolm & Jakson's FPC 19 APR 1841 Nos.102-3.

ಕಾಡಿಸಿ, ಪೀಡಿಸಿ ಕಂದಾಯ ಎತ್ತಿ ಹೈದ್ರಾಬಾದಕ್ಕೆ ಕಳಿಸುವ ಗತಿ ಇದ್ದುದಾಗಿ ಅರಸರ ದಿನಚರಿ ಯಾಯಿತ್ತೆಂದು ಅನೇಕ ದಾಖಲೆಗಳಲ್ಲಿ ಬರೆಯಲಾಗಿದೆ.

ನಿಜಾಮನು ಸಾಲ ಪಡೆಯುವವನಾಗಿದ್ದ, ರಾಜಕೊಡುವವನಾಗಿದ್ದ; ಬ್ರಿಟೀಷ ಅಧಿಕಾರಿಗಳು ಈ ಕಾರ್ಯಕ್ಕೆ ಸೈನ್ಯಶಕ್ತಿಯ ಮೂಲಕ ಸಹಕರಿಸುವವರಾಗಿದ್ದರು. ಇವುಗಳ ಮಧ್ಯೆ ಪಟ್ಟವೇರಿದ್ದ ಕೃಷ್ಣಪ್ಪನಾಯಕನಿಗೆ ಅನೇಕ ಸಮಸ್ಯೆಗಳು ಸುತ್ತುವರಿದವು.

ತಂದೆಬಿಟ್ಟು ಹೋದ 2 ಲಕ್ಷ ರೂ. ಸಾಲ ತಲೆಯ ಮೇಲೆ ಖಡ್ಗವಾಗಿ ತೂಗುತ್ತಿದ್ದಂತೆ ಸಂಸ್ಥಾನದ ಉತ್ಪನ್ನ ಇಳಿಮುಖವಾಗತೊಡಗಿತು. ಆರ್ಥಿಕ ಅಧೋಗತಿಯ ದೆಸೆಯಿಂದ ಪ್ರಜಾಕಲ್ಯಾಣ ಸಾಧ್ಯವಾಗಲಿಲ್ಲವೆಂಬ ಮಾತು ಒಪ್ಪಬೇಕಾಗುತ್ತದೆ. ಕೃಷ್ಣಪ್ಪನಾಯಕ ಸಮರ್ಥ ಆಡಳಿತಗಾರನೇನೊ ನಿಜ. ಈತನ ರಾಜ್ಯಸತ್ತೆಯ ವೈಫಲ್ಯಕ್ಕೆ ನಿಜಾಮನು ಮತ್ತು ಕಂಪನಿ ಸರ್ಕಾರಗಳು ಕಾರಣವಾದ ಸತ್ಯಘಟನೆ ಸಾಕಷ್ಟಿವೆ. ಸಾಮರ್ಥ್ಯಕ್ಕಿಂತ ಸಾಲವೇ ಹೆಚ್ಚಾದಾಗ ಕೃಷ್ಣಪ್ಪನಾಯಕನ ಚಿಂತಾಜನಕ ಸ್ಥಿತಿಗಳನ್ನು ಹೇಳುವಲ್ಲಿ ಕೈಫಿಯತ್ತುಗಳು ಈಗ ಸಾಕ್ಷಿಯಾಗಿವೆ.

ಸಾಲದ ಸುಳಿಯಲ್ಲಿ ಸಂಸ್ಥಾನ :

ಆಡಳಿತದ ಮೊದಲನೆಯ ವರ್ಷದ ಆದಾಯ ಸಾಲಕ್ಕೆ ಸರಿದೂಗಲಿಲ್ಲ. ಅದೇ ವರ್ಷ ಮಂತ್ರಿ ಚಂದೂಲಾಲನು ಮಸ್ಕಿಯಲ್ಲಿರುವ ನಿರ್ವಹಣಾ ಅಧಿಕಾರಿಯ ಮೂಲಕ ಸಂಸ್ಥಾನದಿಂದ ಕಾಣಿಕೆ ಹಣ ಬರಬೇಕೆಂದು ಆದೇಶಿಸಿದ. ನಂತರ ಇದೊಂದು ನಿರಂತರ ಪ್ರಕ್ರಿಯೆ ಆಯಿತು. ವ್ಯತಿಪರ ಲೇವಾದೇವಿ ವ್ಯಾಪಾರಸ್ಥರ ಮೂಲಕ ಹಣ ಪಡೆಯುವಲ್ಲಿ ಬ್ರಿಟಿಷ ಅಧಿಕಾರಿಗಳು ನಿರತರಾದರು. ಕೃಷ್ಣಪ್ಪನಾಯಕನನ್ನು ಈ ರೀತಿ "ಬಬ್ಬ ಸಾಲಗಾರ ರಾಜನನ್ನಾಗಿ ಮಾಡಿದ ಅಪಕೀರ್ತಿ ನಿಜಾಮ ಮತ್ತು ಬ್ರಿಟಿಶರಿಗೆ ಸಲ್ಲುತ್ತದೆ. ಮೋತೀರ ಗೋಸಿಯಾನನೆಂಬ ಹೈದ್ರಾಬಾದ ಲೇವಾದೇವಿ ವ್ಯವಹಾರಸ್ಥ ಸುರಪುರದರಸನಿಗೆ ಬಡ್ಡಿಯಂತೆ ಸಾಲ ನೀಡುತ್ತಿದ್ದ. ಅದನ್ನು ಪಡೆದ ಬ್ರಿಟೀಷರು ನಿಜಾಮನಿಗೆ ತಲುಪಿಸುವ ವ್ಯವಸ್ಥೆ ಕೈಗೊಂಡಿದ್ದರು. ಕ್ರಿ.ಶ.1831ರಲ್ಲಿ ಗೋಸಿಯಾನನ ಸಾಲವೇ ಹೆಚ್ಚಾಗತೊಡಗಿತು.

ಸಂಸ್ಥಾನದಲ್ಲಿದ್ದ ಅನೇಕ ಜಮೀನುದಾರರು ಕಂದಾಯ ಎತ್ತಿ ತಂದು ಅರಸನಿಗೆ ನೀಡುವ ಪದ್ಧತಿ ಇತ್ತು. ಈ ವರ್ಷ ಆ ಜಮೀನುದಾರರು ಎತ್ತುವ ಕಂದಾಯಕ್ಕೂ ಕತ್ತರಿಬಿತ್ತು.

ಕಾರಣ, ಜಮೀನುದಾರರು ಸಹ ಅರಬರಲ್ಲಿ ಸಾಲ ಮಾಡಿದ್ದರು. ಸಾಲಕೊಟ್ಟ ಅರಬರು ತಮ್ಮ ಸಾಲವಾಪತಿ ಮಾಡುವವರೆಗೆ ತೆರಿಗೆ ವಸೂಲಿಗೆ ತಡೆಯೊಡ್ಡುವುದಾಗಿ ಬೆದರಿಕೆ ಹಾಕಿದ್ದರು. ರಾಜನಾದ ಕೃಷ್ಣಪ್ಪನಾಯಕನಿಗೆ ಇದು ಮತ್ತೊಂದು ತಲೆನೋವಾಯಿತು. ಆಗ ಅರಸನ ಸಹಾಯಕ್ಕೆ ಬಂದವರು ಮಟ್ಕಲನ ಕ್ಯಾಪ್ಟನ್ ರ್ಯಾನ್ಸ್‌ಫೋರ್ಡ್ ಎಂಬ ಬ್ರಿಟಿಷ್ ಅಧಿಕಾರಿ.

ಈತ ಅರಬರ ಮನವೊಲಿಸಿ ತೆರಿಗೆ ಎತ್ತುವ ದಾರಿ ಸುಗಮ ಮಾಡಿ ಕೊಟ್ಟನಾದರೂ, ಸಂಸ್ಥಾನದ ಉತ್ಪನ್ನದಲ್ಲಿ ಆದ ಗಣನೀಯ ಇಳಿಮುಖ ತಡೆಯಲಾಗಲಿಲ್ಲ. ಕ್ರಿ.ಶ.1832ರಲ್ಲಿ ಕೃಷ್ಣಪ್ಪನಾಯಕನು ಕೊಡಬೇಕಾದ ಸಾಲದ ಬಾಕಿಗಳೆಲ್ಲ ಹಾಗೆಯೇ ಉಳಿದವು. ಆಗ ರ್ಯಾನ್ಸ್‌ಫೋರ್ಡ್‌ನೆ ಸ್ವತಃ ಸುರಪುರಕ್ಕೆ ಬಂದು '' ಅರಸನಿಗೆ ಇನ್ನಷ್ಟು ಸಾಲನೀಡಬೇಕೆಂದು, ಅದಕ್ಕೆ ಪ್ರತಿಯಾಗಿ ಸಂಸ್ಥಾನದ ಕೆಲವು ಪ್ರದೇಶ ಜಾಮೀನು ಇಟ್ಟುಕೊಳ್ಳಬಹುದೆಂದು ಮೋತಿಗಾರ ಗೋಸಿಂಯಾನನಿಗೆ ಸೂಚಿಸಿದನು. ಆದರೆ ಗೋಸಿಂಯಾನ ರಾಜನಿಗೆ ಹೆಚ್ಚು ಹಣಕೊಡಲು ನಿರಾಕರಿಸಿದನು. ಕಾರಣ, ಹಿಂದಿನ ಸಾಲವೇ ರಾಜ ಇನ್ನೂ ಮರಳಿಸಿಲ್ಲವೆಂಬುದು ಆತನ ಆರೋಪವಾಗಿತ್ತು. ಇಂಥ ಅನೇಕ ಸಾಲಗಳನ್ನು ಮರಳಿಸುವಲ್ಲಿ ರಾಜ ವಿಫಲನಾದ ಪ್ರಯುಕ್ತ ಆತನ ಆಳ್ವಿಕೆಯ ಕೆಲವು ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಹೈದ್ರಾಬಾದ ರೆಸಿಡೆಂಟ್ ಮೇಜರ್ ಕ್ಯಾಮರಾನನು ಕ್ಯಾಪ್ಟನ್ [illegible] ಗೆ ಆದೇಶಿಸಿದ. ಒಂದು ವೇಳೆ ಮೋತಿಗಾರನ ಮೂಲಕ ಅರಸ ಹಣ ಪಡೆದು ಸಾಲ ತೀರಿಸಲು ಪ್ರಯತ್ನವಿದ್ದರೆ ಸಹಕರಿಸಬೇಕೆಂಬ ಸೂಚನೆಯೂ ಅದರ ಜೊತೆಯಲ್ಲಿತ್ತು. ಮೋತಿಗಾರನಂತು ಮತ್ತೆ ಸಾಲ ಕೊಡಲಿಲ್ಲ. ಆದರೆ ಮೊದಲಿನ ಸಾಲಕ್ಕೆ ಜಾಮೀನಿಟ್ಟ ಒಂದು ಜಿಲ್ಲೆಗೆ ಒಡೆಯನಾಗುವುದು ಮರೆಯಲಿಲ್ಲ. ಅದರ ಮೇಲೆ ತನ್ನದೇ ಆದ ದಿವಾನರನ್ನು ನಿಯುಕ್ತಿಗೊಳಿಸಿದ.[113]

ನಿಜಾಮನಿಗೆ ಸಂಬಂಧಿಸಿದ ಕಾಣಿಕೆ ಮತ್ತು ಸಾಲ ತೀರಿಸಲು ಲೇವಾದೇವಿ ಸಾಲಗಾರರ ಕಿರುಕುಳ ಹೆಚ್ಚಾದಂತೆ ಸಂಸ್ಥಾನದ ಸ್ಥಿತಿ ಬಿಗಡಾಯಿಸಿತು. ನಿಜಾಮ ಬೇಡುವ ಹಣಕ್ಕೂ ರಾಜನ ಆದಾಯಕ್ಕೂ ಅಜಗಜಾಂತರ ವ್ಯತ್ಯಾಸವಿರುವುದರಿಂದ ಮಧ್ಯವರ್ತಿಗಳಾಗಿ ಬಂದ ಇಂಗ್ಲೀಷರಿಗೆ ಈ ಸಮಸ್ಯೆಗಳೆಲ್ಲ ಕಗ್ಗಂಟಾದವು. ಕೊನೆಗೆ ನ್ಯಾಯಾಧೀಶರ ಮುಂದೆ ಈ ವಿವಾದ ಬಂದಾಗಲೇ ಸುರಪುರದ ಸಮಸ್ಯೆ ಎಂಥದ್ದೆಂದು ಭಾರತ ಸರಕಾರಕ್ಕೆ ಗೊತ್ತಾಯಿತು. ಈ ಮಧ್ಯೆ ಜಾಮೀನು ನೀಡಲು ಬಂದ ಬ್ರಿಟಿಷ್ ಅಧಿಕಾರಿಯು ಸುರಪುರದ ಸಾಲ ಸಮಸ್ಯೆಗೆ ಪರಿಹಾರ ಹುಡುಕಲು ಹೋಗಿ ಎಡವಿ,

113. Capt.Jackson's memo FPC 19 APR 1841 No.103.

ರಾಜ್ಯವನ್ನು ಹಾಗೂ ರಾಜನನ್ನೇ ಅಡವು ಇಡುವ[114] ಅಪರೂಪದ ಪ್ರಸಂಗ ಹುಟ್ಟುಹಾಕಿದ.

ಕ್ರಿ.ಶ.1837ರ ಅಂತ್ಯಭಾಗದಲ್ಲಿ ಮೋಕಾಸಾರ ಗೋಸಿಯಾನನು ತೀರಿಕೊಂಡನು. ಮಹಾದೇವಗಿರನೆಂಬಾತ ಆ ಸಾಲದ ವಸೂಲಿಯ ಜವಾಬ್ದಾರಿ ಹೊತ್ತುಕೊಂಡು ಸುರಪುರಕ್ಕೆ ಬಂದನು. ಗೋಸಿಯಾನನ ಮಗನಾದ ಲಕ್ಷ್ಮಣಗೀರನಿಗೂ ಮಹಾದೇವನಿಗೂ-ಈ ವಿಷಯದಲ್ಲಿ ವಿವಾದವೇ ಆಗಿ ನಂತರ ಲಕ್ಷ್ಮಣಗೀರನೆ ನಿಜವಾದ ವಾರಸುದಾರನೆಂದು ನಿರ್ಣಯಿಸಲಾಯಿತು. ಇದಲ್ಲದೆ ಕೃಷ್ಣಪ್ಪ ನಾಯಕನು ಸಂಕೇಶ್ವರದ ಸ್ವಾಮಿ ಮತ್ತು ಬಾಗಲಕೋಟೆಯ ಸಾಹುಕಾರ ಸಿದ್ಧಪ್ಪನಲ್ಲಿಯೂ ಸಾಲ ಮಾಡಿದ್ದನೆಂದು ಆಂಗ್ಲ ದಾಖಲೆಗಳು ಹೇಳುತ್ತವೆ. ಸಹಜವಾಗಿ ಸಂಸ್ಥಾನದ ಬಲ ಕುಗ್ಗುತ್ತಾಹೋಗಿ ದಾಗ ಕ್ರಮೇಣವಾಗಿ ರಾಜನ ಶಕ್ತಿಹೀನತೆಯನ್ನು-ಈ ಸಾಹುಕಾರರೆಲ್ಲ ಬಳಸಿಕೊಂಡರು.

<u>ಇಂಗ್ಲೀಷ್ ಅಧಿಕಾರಿಗಳು :</u>

ಮುಟ್ಕಲ್ ನಿರ್ವಹಣಾ ಅಧಿಕಾರಿಯಾದ ಹ್ಯಾಮ್ಲನನು ನಂತರ ಬಂದ ಕ್ಯಾ.ಡಬ್ಲ್ಯೂ. ಬಿ.ಜಾಕನನ್ನು ಸಂಸ್ಥಾನದ ಸಾಲ ವಸೂಲಿ ಮಾಡುವಲ್ಲಿ ಸಹಕರಿಸಿದನು. ರೆಸಿಡೆನ್ಸಿಯ ದಾಖಲಾತಿ ಆಧಾರದ ಮೇರೆ ಸಹಾಯಕ ರೆಸಿಡೆಂಟನಾದ ಡಿ.ಎ.ಮಾಲ್ಕಮನು ಸುರಪುರ ವ್ಯವಹಾರದ ಬಗ್ಗೆ ಸಲ್ಲಿಸಿದ ವರದಿಯು ಅಪರಿಪೂರ್ಣವಾಗಿತ್ತು. ಇದಕ್ಕೆ ಕಾರಣ-ಈ ಹಿಂದಿನ ರೆಸಿಡೆಂಟನಾದ ಮಾರ್ಟಿನನು ಸಂಸ್ಥಾನವು ಕೊಡಬೇಕಾದ ನಜರಾನ' ದ ಬಗ್ಗೆ ಸ್ಪಷ್ಟ ಮಾಹಿತಿ ನೀಡದೆ ಗೊಂದಲಗೊಳಿಸಿದ್ದು. ಇವೆಲ್ಲ ರಾಜ ಕೃಷ್ಣಪ್ಪನಾಯಕನ ಮೇರೆ ಪರಿಣಾಮಬೀರದೆ ಇರಲಿಲ್ಲ. ಕ್ಯಾ.ಜಾಕನನ ಪತ್ರ ಮಾರಕವಾದರೆ, ರೆಸಿಡೆಂಟ್ ಫ್ರೇಸರನ ನಿಲುವು ಮಾರಕವಾಗಿತ್ತು.

1. <u>ಕ್ಯಾ.ಗ್ರಿನ್ಲೇಯ ಆಗಮನ :</u>

ರೆಸಿಡೆಂಟ್ ಫ್ರೇಜರನ ಸಲಹೆಯಂತೆ ಸಂಸ್ಥಾನದ ವ್ಯವಹಾರ ಕುರಿತು ತನಿಖೆ ನಡೆಸಲು ಭಾರತ ಸರಕಾರ ಕ್ರಿಯಾಶೀಲವಾಗಿತ್ತು. ನಿಜಾಮನಿಗೆ ಕೃಷ್ಣಪ್ಪ ನಾಯಕ ನೀಡಬೇಕಾದ ಹಣಕಾಸಿನ ಮೊತ್ತದ ಬಗ್ಗೆ ಒಂದು ತೀರ್ಮಾನಕ್ಕೆ ಬರಲಾಗಲಿಲ್ಲ. ಆಗ ಏನಾದರೂ ಕ್ರಮ ಕೈಗೊಳ್ಳಬೇಕೆಂದು ಯೋಜಿಸಿ, ರೆಸಿಡೆಂಟನ ನಿರ್ಧಾರದಂತೆ ಕ್ಯಾ.ಫ್ರಾನ್ಸಿಸ್ ಗ್ರಿನ್ಲೇಯನ್ನು ಕ್ರಿ.ಶ.1841 ನವಂಬರ 29ರಂದು ಸುರಪುರಕ್ಕೆ ತೆರಳಿ ವರದಿ ಮಾಡಲು ಭಾರತ ಸರ್ಕಾರ ಆದೇಶ ಹೊರಡಿಸಿತು.[115] ಗ್ರಿನ್ಲೇಯು

---

114. PLFC No.43, 25 JULY 1838 para 38
115. FPC 13 DEC 1841 Nos.43-44.

“ತೀವರ್ಗಾನ ಜ್ಞಾನದ” ಮೇಲೆ ರೆಸಿಡೆಂಟನಿಗೆ ನಂಬಿಗೆಯಿತ್ತು. ಆದರೂ ಆತನಿಗೆ ವಿವರವಾದ ವರದಿ ನೀಡಲು ಈ ಕೆಳಗಿನ ಅಂಶಗಳ[116] ಗಮನಸೆಳೆದಿದ್ದ.

1. ಸಂಸ್ಥಾನವು ನಿಜಾಮನಿಗೆ ನೀಡಬೇಕಾದ ಬಾಕಿ ಹಿಂದಿನ ಮತ್ತು ಇಂದಿನ ಸಾಲವೆಷ್ಟು?

2. ಮೋತೀರ ಗೋಸಿಂಯಾನನಲ್ಲಿ ಕೃಷ್ಣಪ್ಪನಾಯಕ ಮಾಡಿದ ಸಾಲದ ಮೊತ್ತವೆಷ್ಟು?

3. ಅಂಕಪ್ಪನಾಯಕ, ಸಿದ್ದಪ್ಪ, ಸರ್ವೇಶ್ವರ ಸ್ವಾಮಿಯಲ್ಲಿ ರಾಜ ತೆಗೆದ ಸಾಲವೆಷ್ಟು?

4. ಸಂಸ್ಥಾನದಲ್ಲಿ ಉತ್ಪನ್ನಕ್ಕಿಂತ ವ್ಯಯವೇ ಜಾಸ್ತಿಯಿದೆಯೆ?

5. ರಾಜನು ಸಧ್ಯ ನಿಜಾಮನಿಗೆ ನೀಡುತ್ತಿರುವ ನಿಜರಾಣಿ ಇತ್ಯಾದಿ ಬಾಬುಗಳು ಹಿಂದಿನ ರಾಜರಿಗಿಂತ ಹೆಚ್ಚಾಗಿದೆಯೆ?

6. ರಾಜನಿಗೆ ಸಾಲ ತೀರಿಸುವಲ್ಲಿ ಸಾಮರ್ಥ್ಯ ಉಳಿದಿಲ್ಲದಿದ್ದರೆ ಎಷ್ಟು ವಸೂಲಿ ಮಾಡಿದರೆ ಉತ್ತಮ?

7. ಸಂಸ್ಥಾನದ ಸರ್ವಆದಾಯವೆಷ್ಟು ಮತ್ತು ಸಂಪನ್ಮೂಲಗಳೇನು?

—ಈ ಮೇಲಿನವೆಲ್ಲ ಪ್ರಶ್ನೆಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದಾಗ ಬ್ರಿಟಿಷರು ಸಂಸ್ಥಾನದ ಮೇಲೆ ಯಾವ ಧೋರಣೆ ತಾಳಿದ್ದರೆಂದು ತಿಳಿಯುತ್ತದೆ. ರಾಜನಿಗೆ ರಕ್ಷಣೆ ನೀಡುವ ನಾಟಕದ ಹಿಂದೆ ಆಡಳಿತ ಸೂತ್ರ ಹಿಡಿದಿಟ್ಟುಕೊಳ್ಳುವ ಸ್ಪಷ್ಟಸೂಚನೆಗಳು ಇಲ್ಲಿವೆ. ಭಾರತ ಸರ್ಕಾರ ಕೇಳಿದ ಇವೆಲ್ಲ ಪ್ರಶ್ನಾವಳಿಗಳನ್ನು ಹೊತ್ತುಕೊಂಡ ಕ್ಯಾ. ಗ್ರಿಸ್ಲೀಯು ಉತ್ತರ ಹುಡುಕಿ ವರದಿ ಮಾಡಲು ಸುರಪುರಕ್ಕೆ ಬಂದಿಳಿದನು. ರಾಜನಾದ ಕೃಷ್ಣಪ್ಪನಾಯಕನ ಸಹಕಾರದೊಂದಿಗೆ ಹಿಂದಿನವೆಲ್ಲ ಕಾಗದ ಪತ್ರಗಳನ್ನು ಅಧ್ಯಯನ ಮಾಡಿದ ಸಂಸ್ಥಾನದ ಸಮಗ್ರ ವ್ಯವಹಾರಗಳ ದಾಖಲೆ ಆಧಾರದ ಮೇಲೆ 51 ಅಂಶಗಳ ಸುದೀರ್ಘ ವರದಿಯನ್ನು ಹೈದ್ರಾಬಾದ ರೆಸಿಡೆಂಟನಿಗೆ ರವಾನಿಸಿದನು. ಅದರಲ್ಲಿಯ ಮುಖ್ಯಾಂಶಗಳೆಂದರೆ[117]

“ಸುರಪುರ ರಾಜರು ಸ್ವತಂತ್ರರು. ಹಿಂದೆ ಮರಾಠ ಮತ್ತು ನಿಜಾಮನಿಗೆ ಕಾಣಿಕೆ ಸಲ್ಲಿಸಿದ್ದಾರೆ. ಅದು ನಿಗದಿಯೇನಲ್ಲ. ಮೊದಲ ಬಾರಿಗೆ ಕ್ರಿ.ಶ.1872ರಲ್ಲಿ ನಿಜಾಮನು ಬ್ರಿಟಿಷರ ಸಹಾಯ ಕೇಳಿದಾಗ ಇದ್ದ ಕಾಣಿಕೆಯ ಮೊತ್ತ ರೂ.1,45,000.00 ಮಾತ್ರ.

---

116. FPC 19 APR 1841 No.101
117. FPC 18 JUN 1842 Nos.167-68

ಪೇಶ್ವೆ ಪ್ರಾಂತ್ಯ ಇಂಗ್ಲೀಷರ ಕೈಸೇರಿದ್ದರಿಂದ ಅದರ ಮೇಲೆ ಬರುವ ಕಂದಾಯದಲ್ಲಿ 15,000-00 ರೂ.ಗಳನ್ನು ಸಂಸ್ಥಾನವು ಬ್ರಿಟಿಷರಿಗೆ ನೀಡಬೇಕೆಂದು ನಿಜಾಮನು ಹೇಳಿದ್ದ. ಇದರಿಂದ ಕ್ರಿ.ಶ.1823ರ ನಂತರ ನಿಜವಾದ ಕಾಣಿಕೆ 1,60,000-00 ರೂ. ಇದ್ದುದು 1,75,000-00 ರವರೆಗೆ ಆಯಿತು. ಕೃಷ್ಣಪ್ಪನಾಯಕನು ಅಧಿಕಾರಕ್ಕೆ ಬಂದ ನಂತರ ಅವನ ನಜರಾಣೆ ಇನ್ನಿತರ ರೂಪದಲ್ಲಿ 15 ಲಕ್ಷ ರೂ.ಗಳಿಗೇರಿತು. ಕ್ರಿ.ಶ.1828ರಲ್ಲಿ ಹೈದ್ರಾಬಾದ ನಿಜಾಮನು ಸಂಸ್ಥಾನದಿಂದ ವಾರ್ಷಿಕ ಕಾಣಿಕೆಯೆಂದು 1 ಲಕ್ಷ 60 ಸಾವಿರದಿಂದ 2 ಲಕ್ಷ 30 ಸಾವಿರದ 6 ನೂರು ರೂ. ಕೇಳಿದ್ದನು. ಇವೆಲ್ಲವುಗಳಿಗೂ ರಾಜನು ಒಪ್ಪಿಕೊಂಡದ್ದೇಕೆ ಎಂದರೆ ತಾನೊಬ್ಬ 'ರಾಜಾ' ನೆಂದು ಗುರುತಿಸಿಕೊಳ್ಳಲು ಮಾತ್ರ"

ಗ್ರಿನ್ಲೆಯು ರೆಸಿಡೆಂಟನಿಗೆ ನೀಡಿದ ಮೇಲಿನ ವರದಿಯಿಂದ ಸುರಪುರ ಸಂಸ್ಥಾನದ ಆಂತರಿಕ ವ್ಯವಸ್ಥೆ, ಸಾಲ, ಮತ್ತು ಆರ್ಥಿಕ ದಿವಾಳಿತನ ಏನಿತ್ತೆಂಬುದು ಸ್ಪಷ್ಟವಾಗುತ್ತದೆ. ಗ್ರಿನ್ಲೆ ಹೇಳಿದ ವರದಿಯಲ್ಲಿನ ಕೊನೆಮಾತು ಮಾತ್ರ ಸತ್ಯವಾದುದು. ಕೃಷ್ಣಪ್ಪನಾಯಕ 15 ಲಕ್ಷ ರೂ. ನಜರಾಣಿ ನೀಡಲು ಒಪ್ಪಿದ್ದು 'ಸುರಪುರದ ರಾಜಾ' ನೆಂದೆನಿಸಿಕೊಳ್ಳಲು ಮಾತ್ರ.

ಸಿಂಹಾಸನವೇರಲು ಬರುವ ಪ್ರತಿಯೊಬ್ಬ ವ್ಯಕ್ತಿಗೂ ಸಾಲದ ಬಗ್ಗೆ ಗೊತ್ತಿತ್ತು. ಮತ್ತು ನಿಜಾಮನ ಆಕ್ರಮಣಕಾರಿ ಮನೋಭಾವನೆ ತಿಳಿದಿತ್ತು. ಅದರೂ ಪೂರ್ವಾಧಿಕಾರ ಬಯಸುವದು 'ರಾಜ' ಅರ್ಥವನ್ನೇ ಸೂಚಿಸುತ್ತದೆ.

ಶಿಫಾರಸ್ಸುಗಳು :

ಕೃಷ್ಣಪ್ಪನಾಯಕನು ಸಾಲದ ಭಾರದಲ್ಲಿ ನರಳಿ ಹೋಗಿರುವುದರಿಂದ ಆತನ ಕಲ್ಯಾಣಕ್ಕಾಗಿಯೇ ತಾನು ರೂಪಿಸಿರುವ ಶಿಫಾರಸುಗಳನ್ನು ರೆಸಿಡೆಂಟನಿಗೆ ರವಾನಿಸಿದ. 'ಇವು ಸಂಸ್ಥಾನಕ್ಕೆ ಎದುರಾಗಿರುವ ಸಧ್ಯದ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಒದಗಿಸಬಲ್ಲವು' ಎಂಬುದು ಗ್ರಿನ್ಲೆಯ ನಿಲುವಾಗಿತ್ತು.

1. ನಿಜಾಮನ ಅಧೀನದಲ್ಲಿರುವ 55 ಸಾವಿರ ರೂ. ಉತ್ಪನ್ನದ ಪ್ರಾಂತ್ಯಗಳ ಮೇಲಿನ ತೆರಿಗೆಗಳನ್ನು ರಾಜನ ಸಾಲವೆಂದು ಪಾವತಿ ಮಾಡಿಕೊಳ್ಳಬೇಕು. ಮತ್ತು ನಿಜಾಮನ ಪ್ರದೇಶದ ಮೇಲಿರುವ 50 ಸಾವಿರ ರೂ ಉತ್ಪನ್ನದ ಹಕ್ಕನ್ನು ಸಂಸ್ಥಾನ ಬಿಟ್ಟುಕೊಡಬೇಕು.

2. ಕ್ರಿ.ಶ.1797ರಲ್ಲಿ ನಿಜಾಂ ಆಟಾಯು 37,500 ರೂ.ಗೇಣಿ ಆಧಾರದ ಮೇಲೆ ತನ್ನ ದೇವದುರ್ಗ ಪ್ರದೇಶದ ಅರಿಕೇರಿ, ಜಾಲಹಳ್ಳಿ, ಗೋವನಟ್ಟಲದ ಸುಮಾರು 60 ಸಾವಿರ ರೂ. ವಾರ್ಷಿಕ ಆದಾಯದ ಊರುಗಳನ್ನು ಸುರಪುರಕ್ಕೆ ಕೊಟ್ಟಿದನು. ಸುರಪುರದಿಂದ ಗೇಣಿ ಮಾತ್ರ ಸಲ್ಲುತ್ತಿತ್ತು. ಈಗ ಈ ಪ್ರದೇಶಗಳನ್ನು ನಿಜಾಮನಿಗೆ ಕೃಷ್ಣಪ್ಪನಾಯಕ ಮರಳಿಸಬೇಕು.

3. ರಾಜನು ಒಟ್ಟು ಹಣದಲ್ಲಿ 1 ಲಕ್ಷ 60 ಸಾವಿರ ರೂ.ಹಣದ ರೂಪದಲ್ಲಿ ಸಂದಾಯ ಮಾಡಬೇಕು. 2 ಲಕ್ಷದಲ್ಲಿ ಉಳಿದ 40 ಸಾವಿರ ರೂ.ಗಳನ್ನು ನಂತರ ಕೊಡಬೇಕು. ತಪ್ಪಿದಲ್ಲಿ ಅದೇ ಮೌಲ್ಯದ ಪ್ರದೇಶಗಳನ್ನು ಬಿಡಬೇಕು.

4. ಸುಮಾರು 40 ಸಾವಿರ ಆದಾಯದ ಅಂದೋಲ, ನೆಲೋಗಿ ಪ್ರದೇಶಗಳನ್ನು ನಗದು ಪಾವತಿಯ ಬದಲಾಗಿ ರಾಜನು ನಿಜಾಮನಿಗೆ ನೀಡಬೇಕು.

–ಇಂಥ ಇನ್ನೂ ಅನೇಕ ಶಿಫಾರಸ್ಸು[118] ಒಳಗೊಂಡ ಗ್ರಿನ್ಲೇ ವರದಿಯನ್ನು ಓದಿದ ಗಾರ್ವರ ಜನರಲ ತಲೆದೂಗಿದನು. ಇದರಲ್ಲಿ ಕೃಷ್ಣಪ್ಪ ನಾಯಕನ ಅಳಿವು– ಉಳಿವಿನ ಪ್ರಶ್ನೆಯು ಅಡಗಿತ್ತು. ಗ್ರಿನ್ಲೇಯ ಶಿಫಾರಸು ನೋಡಿದರೆ ಸಂಸ್ಥಾನದ ಆಡಳಿತವೆಲ್ಲ ಬ್ರಿಟಿಷ ಸರ್ಕಾರವೆ ನಿಯಂತ್ರಿಸುವ ಮಟ್ಟಿಗೆ ತೋರುತ್ತದೆ. ಹತ್ತಿಕ್ಕುವ ಇಲ್ಲವೆ ಹತೋಟಿಯಲ್ಲಿ ತೆಗೆದುಕೊಳ್ಳುವ ಸ್ಪಷ್ಟ ಲಕ್ಷಣಗಳು ಇದರೊಳಗಿವೆ.

ಮೂಲ ಜಮೀನುದಾರ ಗಡ್ಡಪಿಡ್ಡನಾಯಕ ಮತ್ತು ಅತನ ಮಗ ಪಾಳೆಯಗಾರ ಪಾಮನಾಯಕ ಸಂಪಾದಿಸಿದ ರಾಜ್ಯವೆಲ್ಲ ಈಗ ಈ ರೀತಿ ತನ್ನ ವಿಸ್ತೀರ್ಣ ಕಳೆದುಕೊಳ್ಳುತ್ತ ಹೋಯಿತು. ಇದಕ್ಕೆಲ್ಲ ಕಾರಣ, ನಿಜಾಮನ ಹೊಟ್ಟೆಗೆ ಸಂಸ್ಥಾನದ ಅನ್ನ ಉಣ್ಣಿಸುವ ಇಂಗ್ಲೀಷ "ಕೃ" ಕ್ರಮ.

ಗ್ರಿನ್ಲೇ ಹೇಳಿದ ಸಲಹೆಗಳಲ್ಲಿ ಕೆಲವು ಶಿಫಾರಸುಗಳನ್ನು ಕೃಷ್ಣಪ್ಪನಾಯಕ ಉಗ್ರವಾಗಿ ವಿರೋಧಿಸಿದ.[119] ಅಂದೋಲ ಮತ್ತು ನೆಲೋಗಿ ಪರಗಣಿಗಳು ಸಂಸ್ಥಾನದ ಆರ್ಥಿಕ ಶಿರಗಳಾಗಿದ್ದವು. ಅವೇ ಹೋದರೆ ನನ್ನದು ಬೆನ್ನುಮೂಳೆಯಿಲ್ಲದ ರಾಜ್ಯವಾಗುತ್ತದೆ' ಎಂದನು. ಆದರೂ ಕೇಳದ ಬ್ರಿಟೀಷರು 'ನಾವಿರುವುದು ನಿಮ್ಮ ಮತ್ತು ನಿಜಾಮನ ಮಧ್ಯದ ಬಿಕ್ಕಟ್ಟು ಬಗೆಹರಿಸಲು ಮಾತ್ರ' ವೆಂದು ರಾಜನಿಗೆ ನಂಬಿಸಿದರು.[120] ಗ್ರೀನ್ಲೆಯ ಹಲವು ಶಿಫಾರಸುಗಳನ್ನು ಕ್ರಿ.ಶ.1842ರಲ್ಲಿ ಈ ರೀತಿಯಾಗಿ ಜಾರಿಗೆ ತರಲಾಯಿತು.[121]

---

118. Gresley to Fraser 22 May 1842. HRC Vol.551.
119. ಸು.ಸಂ.ಇ ಪುಟ–148.
120. FPC 13 DEC 1842 No.43
121. FPC 8 JUNE 1842 No.171.

1. ದೇವದುರ್ಗದ ಜಾಲಹಳ್ಳಿ ಅರಿಕೇರಿ, ಗೋನವಾಟ್ಲಗಳನ್ನು ನಿಜಾಮನ ವಶಕ್ಕೆ ಕೊಡುವುದು.

2 ಸಂಸ್ಥಾನವು ಪ್ರತಿವರ್ಷ 40 ಸಾವಿರ ರೂ. ರೆಸಿಡೆಂಟನ ಮೂಲಕ ನಿಜಾಮನಿಗೆ ಸಲ್ಲಿಸುವುದು.

3. ಸಹೋದರನಾದ ಹಣಮಪ್ಪನಾಯಕನಿಗೆ 500ರೂ. ಮಾಶಾಸನ ನೀಡುವುದು.

4. ಝುರಿಸ್ವಾಳಿ ಅಂಕಪ್ಪನಾಯಕನಿಗೆ ಸಾಲದ ಪಾವತಿಯುಂಬಂತೆ ಮೊದಲ ಆತನ ಜಹಾಗೀರುಗಳನ್ನು ಆತನ ವಶಕ್ಕೆ ಒಪ್ಪಿಸುವುದು.

5. ಇಂಗ್ಲೀಷರು ಪೇಶ್ವರ ಪ್ರತಿನಿಧಿಯಾಗಿದ್ದರಿಂದ ಸುರಪುರ ಸಂಸ್ಥಾನವು ನಿಜಾಮನ ಅಧೀನಕ್ಕೆ ಒಳಪಟ್ಟಂತೆ ಬ್ರಿಟಿಷರ ಚಕ್ರಾಧಿಪತ್ಯಕ್ಕೊಳ್ಳ ತರಬಾಗುವುದು.

ಮೇಲಿನೆಲ್ಲ ಕಾರ್ಯಗಳನ್ನು ಕೂಡಲೇ ಜಾರಿಗೆ ಬರುವಂತೆ ಕ್ರಿ.ಶ.1842 ಮೇ 2ರಂದು ಭಾರತ ಸರಕಾರವು ರೆಸಿಡೆಂಟನಿಗೆ ಆದೇಶ ನೀಡಿತು. ನಿಜಾಮ ಮತ್ತು ಸುರಪುರ ಮಧ್ಯೆ ಸೌಹಾರ್ದ ವಾತಾವರಣ ಬೆಳೆಸುವಲ್ಲಿ ಗ್ರಿಸ್ಲೇಯ ಶಿಫಾರಸುಗಳು ಬಹು ಸಹಾಯಕವಾಗುತ್ತವೆ ಎಂದು ಗವರ್ನರ ಜನರಲ್ ನಂಬಿದ್ದ. ಆದರೆ, "ಸೈನ್ಯ ಸಹಾಯವಿಲ್ಲದೆ ಇವುಗಳ ಜಾರಿ ಮತ್ತು ನಿಜಾಮ ಪ್ರದೇಶದ ಮೇಲ್ವಿಚಾರಣೆಯ ಅಧಿಕಾರಿಗಳ ರಕ್ಷಣೆ ಸಾಧ್ಯವಿಲ್ಲ" ವೆಂದ ಗ್ರಿಸ್ಲೇಯ ಮನವಿಗೆ ರೆಸಿಡೆಂಟನು ತಕ್ಷಣವೇ ತನ್ನ ಸಹಾಯಕನಾದ ಕ್ಯಾಪ್ಟನ್ ಮಾಲ್ಕಮನನ್ನು ಸೈನ್ಯ ಸಮೇತ ಕಳಿಸಿದ. ಗ್ರಿಸ್ಲೇಯ ಅಭಿಪ್ರಾಯದಂತೆ ನಡೆಯುತ್ತಿರುವ ಸಂಸ್ಥಾನದಲ್ಲಿಯ ಬೆಳವಣಿಗೆಗಳು ರಾಜನನ್ನು ರೊಚ್ಚಿಗೆಬ್ಬಿಸಿದವು. ಆದರೇನೂ ಮಾಡುವಂತಿರಲಿಲ್ಲ. ಮೇಲಿನ ಶಿಫಾರಸುಗಳ ಜಾರಿಯಿಂದ ಸಂಸ್ಥಾನದ ಪ್ರದೇಶ ಸೀಳಿ ಹೋಳಾಗುವ ಸಂಗತಿಯಂತು ಸತ್ಯ. ಗ್ರಿಸ್ಲೇಯು ನಿಜಾಮನ ಪಕ್ಷ ವಹಿಸಿ ವರದಿ ಮತ್ತು ಶಿಫಾರಸು ಸಿದ್ಧಪಡಿಸಿದ್ದನೆಂಬ ದೃಷ್ಟಾಂತ ಎದ್ದು ಕಾಣುವ ವಿಷಯ ಯಾರಿಗೂ ಅಪರಿಚಿತವೆನಿಸಲಿಲ್ಲ.

ಸೋದರನ ಬಂಡಾಯ :

ಸಹೋದರ ಹಣಮಪ್ಪನಾಯಕನು ಸಂಸ್ಥಾನದೊಂದಿಗಿದ್ದ ತನ್ನ ವೈರತ್ವ ವೃದ್ಧಿಸುತ್ತಾ ಬಂದನು.[122] ಕೃಷ್ಣಪ್ಪನಾಯಕನನ್ನು ಪದಚ್ಯುತಗೊಳಿಸಿದರೆ ಬ್ರಿಟಿಷ ಸರಕಾರಕ್ಕೆ ಬೇಡಿದಷ್ಟು ಹಣ

---

122. Gresley's letters to Malkelm and Fraser 28 JAN and 1 MAR 1842.

ಕೊಡುತ್ತೇನೆಂಬ ಭಂಡಧೈರ್ಯವ ಪ್ರದರ್ಶಿಸಿದ್ದ ಮತ್ತು ಬಳಿಚಕ್ರ, ಯಾದಗೀರ, ಮುಂಡರಗಿ, ಹಿರೇಆಲೂರು, ಚಿಕ್ಕಆಲೂರ, ದಂಡಿನ ಸೋಲಾಪೂರ ಮುಂತಾದ ಸ್ಥಳದಿಂದ 60 ಸಾವಿರ ಸೈನಿಕರನ್ನು ಸಂಸ್ಥಾನದ ವಿರುದ್ಧ ಸಂಘಟಿಸಿ ದೇವದುರ್ಗವನ್ನು ಹಿಡಿದುಕೊಂಡ. ಇದಕ್ಕೆ ಪ್ರತಿಯಾಗಿ ಕೃಷ್ಣಪ್ಪನಾಯಕನು ಸಿದ್ದಿ ಮೀಯಾ, ಗುರಾಅಲಿ, ಮುಂತಾದವರ ನೇತೃತ್ವದಲ್ಲಿ ಸಿದ್ಧಗೊಳಿಸಿದ ಸೈನಿಕವನ್ನು ದೇವದುರ್ಗದತ್ತ ನಡೆಯಿಸಿದನು. ಈ ಸುದ್ದಿ ಕೇಳಿದ ಹಣಮಪ್ಪನಾಯಕ ಅಲ್ಲಿಂದ ಕಾಲ್ತೆಗೆದು 'ಓಡಿದನು.[123] ಸೋದರನ ಬಂಡಾಯವೇನೋ ಎದುರಿಸಿದಾಯಿತು. ಆದರೆ ಸೇರಿಕೊಂಡ ಸಿದ್ದಿಸೈನಿಕರಿಗೆ ಸಂಬಳ ನೀಡದ ಸ್ಥಿತಿ ಸಂಸ್ಥಾನಕ್ಕಿತ್ತು. ಕೊನೆಗೆ ಶ್ರೀಮಂತರ ಸಹಾಯದಿಂದ ಅವರ ಸಂಬಳ ನೀಡಿ ಅವರನ್ನು ಸೈನ್ಯದಿಂದ ತೆಗೆಯಲಾಯಿತು.

<u>ಚೆನ್ನಬಸಪ್ಪ :</u>

ಆಡಳಿತದ ಸುವ್ಯವಸ್ಥೆಗಾಗಿ ರಾಜ ಕೃಷ್ಣಪ್ಪನಾಯಕನು ಸಂಸ್ಥಾನದ ಕೆಲವು ಹಳ್ಳಿಗಳನ್ನು ಚೆನ್ನಬಸಪ್ಪನೆಂಬ ದಕ್ಷ ಅಧಿಕಾರಿಯ ಅಧೀನಕ್ಕೆ ಒಪ್ಪಿಸಿದನು. ಪ್ರಮಾಣಿಕ ಸೇವಕನಾದ ಚೆನ್ನಬಸಪ್ಪ ಹಲವಾರು ದಂಗೆಗಳನ್ನು ಅಡಗಿಸಿದ್ದ. ನಿಜಾಮನ ಅಧೀನದಲ್ಲಿರುವ ಪ್ರದೇಶಗಳಿಂದ ರುಸುಮು ವಸೂಲಿ ಮಾಡುವಲ್ಲಿ ಈತನ ಪ್ರಯತ್ನ — ಶ್ಲಾಘನೀಯವೆನ್ನುತ್ತಿದ್ದ ರಾಜನು ಹೆಚ್ಚುವರಿ ತೆರಿಗೆ ವಿಧಿಸಲು ಚೆನ್ನಬಸಪ್ಪನ ವಿಚಾರಗಳೇ ಅಂತಿಮವಾಗಿ ಸ್ವೀಕರಿಸುತ್ತಿದ್ದ. ಸಂಸ್ಥಾನದ ಇಂಥ ಪ್ರೇರಣಾ ಶಕ್ತಿಯೇ ಮುಂದೆ ಈಶ್ವರಮ್ಮನ ಆಡಳಿತಕ್ಕೆ ಆಧಾರಸ್ತಂಭವಾಯಿತು.[124]

ಚೆನ್ನಬಸಪ್ಪನ ಮೇಲೂ ಹಲವು ಆರೋಪಗಳಿದ್ದವು. ಸಿಬ್ಬಂದಿಗಳಿಗೆ ಸರಿಯಾಗಿ ಸಂಬಳ ನೀಡುತ್ತಿಲ್ಲವೆಂದು, ಎತ್ತಿಕೊಂಡ ಸಾಲವನ್ನು ಮರುಪಾವತಿ ಮಾಡದೆ ಇರುವುದಾಗಿತ್ತು. ಅಲ್ಲದೆ ಜಮೀನುದಾರರಿಂದ ಸಂಸ್ಥಾನಕ್ಕೆ ಒತ್ತಾಯಮಾಡಿ ಕಂದಾಯ ಹಣ ಪಡೆಯುತ್ತಿದ್ದನೆಂದು ಸಂಸ್ಥಾನದುದ್ದಕ್ಕೂ ಕೇಳಿಬಂದ ಮಾತು. ಆಡಳಿತದಲ್ಲಿ ಬಗುವ ತಲು ಪ್ರಯತ್ನಿಸಿದ ಚೆನ್ನಬಸಪ್ಪ ನಿಷ್ಠುರಿಯಾದದ್ದು ಸಹಜ. ಅದನ್ನೇ ಪ್ರಧಾನಗೊಳಿಸಿ ತೇಜೋವಧೆಗಿಳಿದದ್ದು ಸಲ್ಲದು.

<u>ದರೋಡೆಗಳು :</u>

1. ಕೃಷ್ಣಪ್ಪನಾಯಕನ ಆಳ್ವಿಕೆಗೆ ಒಳಪಟ್ಟ ಸಂಸ್ಥಾನದ ಜೋಳದಡಗಿ ಗ್ರಾಮವನ್ನು ಕ್ರಿ.ಶ. 1842 ರ ಜೂನಿನಲ್ಲಿ ರಾಯಚೂರಿನ ಅರಬರು ಕೊಳ್ಳೆಹೊಡೆದರು. ದರೋಡೆಯ

---

123. ಸು.ಸಂ.ಇ., ಪುಟ-153.
124. TBRPS p-42

ಕಾಲಕ್ಕೆ ತಡೆಯಲು ಬಂದ ಜನರಿಗೆಲ್ಲಾ ಭಯಾನಕ ಹೊಡೆತಗಳಿಂದ ಹಲ್ಲೆ ಮಾಡಿದ್ದರು. ಅಲ್ಲದೆ, ಸ್ತ್ರೀಯರು ಸಹ ಗಾಯಗೊಂಡವರ ಪಟ್ಟಿಯಲ್ಲಿದ್ದರು. ಬೆಳೆಗಳು ನಾಶಗೊಂಡಿದ್ದವಲ್ಲದೆ ಮನೆಗಳನ್ನು ಸುಟ್ಟು ಹಾಕಲಾಗಿತ್ತು. ಪ್ರತಿಭಟಿಸಲು ಬಂದ 17 ಜನರನ್ನು ಮತ್ತು ಹಳ್ಳಿಯ ಪಾಟೀಲನನ್ನು ದರೋಡೆಕೋರರು ಕೊಂದಿದ್ದರು. ಸುಮಾರು ಅರ್ಧ ಲಕ್ಷ ರೂ. ಜೋಳದಡಗಿಯಿಂದ ದೋಚಿದ್ದರು. ದರೋಡೆಯಲ್ಲಿ ರಾಯಚೂರ ಜಿಲ್ಲೆಯ ಜಮೀನುದಾರ ಮಾಕಾಜನ ಕೈವಾಡವಿದೆಯೆಂದು, ಅವನ ಜನ ಪ್ರತ್ಯಕ್ಷ ಪಾಲ್ಗೊಂಡಿದ್ದರೆಂದು ತನಿಖೆಯಿಂದ ಹೊರಬಿತ್ತು. ಸುತ್ತಲಿನ ಹಳ್ಳಿಯ ಜನ ಆಗಾಗಲೇ ಬೇರೊಂದು ಪ್ರದೇಶಕ್ಕೆ ವಲಸೆ ಹೋದರು. ಇದೆಲ್ಲವು ರಾಜನಾದ ಕೃಷ್ಣಪ್ಪನಾಯಕನಿಗೆ ಭಾರಿ ತೊಂದರೆ ತಂದವು.

2. ಹೈದ್ರಾಬಾದ ಸಂಸ್ಥಾನದ ಅಧೀನದಲ್ಲಿರುವ ರಾಯಚೂರ ಜಿಲ್ಲೆಯ ಗೊಬ್ಬೂರು ಮತ್ತು ನಾರಾಯಣಪೇಠ ತಾಲೂಕಿನ ಬಳಿಚಕ್ರ ಹಳ್ಳಿಯ ಜನರು ಸುರಪುರ ಸಂಸ್ಥಾನದ ಜಾಗೀರು ಗ್ರಾಮಗಳಾದ ಕೊಂಡಾಲ, ಖಾನಾಪೂರ, ಬೊಮ್ಮನಹಳ್ಳಿಗಳನ್ನು ಲೂಟಿಮಾಡಿ ದನಕರುಗಳನ್ನು ಕೊಂಡೊಯ್ದ ಸುದ್ದಿ ರಾಜನಿಗೆ ತಲುಪಿತು. ಬ್ರಿಟಿಷ ಅಧಿಕಾರಿ ಗ್ರಿನ್ಲೀಗೆ ಈ ಮಾಹಿತಿ ತಿಳಿಸಲು ಸಂಬಂಧಪಟ್ಟ ಪಟವಾರಿಗಳಿಂದ ಮಾಹಿತಿ ಸಂಗ್ರಹಿಸಿದನೆಂದು ತಿಳಿಯುತ್ತದೆ. ಇದು ಸಂಸ್ಥಾನದಲ್ಲಿ ಜರುಗಿದ ಎರಡನೆ ದೊಡ್ಡ ದರೋಡೆಯಾಗಿತ್ತು.

3. ನಿಜಾಮ ಅಧೀನದಲ್ಲಿರುವ ಶಿಪ್ಪರಗಿ ತಾಲೂಕಿನ ದರೋಡೆಯನ್ನು ಮತ್ತು ದನಕರುಗಳ ಅಪಹರಣವನ್ನು ಕೃಷ್ಣಪ್ಪನಾಯಕನ ಪ್ರಜೆಗಳೇ ಮಾಡಿದ್ದಾರೆಂದು ಗ್ರಿನ್ಲೆಗೆ ವರದಿ ಹೋಯಿತು. ಅದರಂತೆ ರಾಯಚೂರ ತಾಲೂಕಿನ ಯಮನಾಪುರದ ದರೋಡೆಯಲ್ಲಿ ಬೇಡರು ಹಾಗೂ ರೋಹಿಲರು ಪಾಲುದಾರರಿದ್ದಾರೆಂದು ಮತ್ತೊಂದು ಸುದ್ದಿ ಬರುಗಾಳಿಯಾಗಿ ಬಂತು.[124A] 51 ಮನೆಗಳ ಮೇಲೆ ನಡೆದ ಈ ದಾಳಿಯಲ್ಲಿ 14 ಸಾವಿರ ರೂ. ಹಾನಿಯಾಗಿತ್ತು. ಅರಿಕೇರಿಯವರೆ ಈ ಲೂಟಿಗೆ ಮೂಲಕಾರಣರಾಗಿದ್ದಾರೆಂದು ಗ್ರಿನ್ಲೀ ರಾಜನ ಗಮನಕ್ಕೆ ತಂದನಲ್ಲದೆ, ಎಮ್ಮೆ, ಕುರಿ, ತೆಂಗಿನಕಾಯಿ, ಮಾವಿನಹಣ್ಣು ಜೋಳ, ಅಕ್ಕಿ, ಹುಣಸಿಹಣ್ಣು, ಹತ್ತಿ, ತುಪ್ಪ, ಅಡಕಿ, ಎರ ಮತ್ತು ತೊಡುವ ಬಟ್ಟೆಗಳನ್ನು ಸಹ ಕಳುವಾದ ಬಗ್ಗೆ ಖಚಿತಪಡಿಸಿದ. ಯಮನಾಪೂರದ ಕೆಲವು ಜನ ಸಂಸ್ಥಾನಕ್ಕೆ

124-A) HRC VOL.551 Gresley to Fraser, 5 & 7 March 1842

ಕಂದಾಯ ಕಟ್ಟದೆ ರಾಜ್ಯವಿರೋಧಿ ಕೃತ್ಯದಲ್ಲಿ ತೊಡಗಿದ್ದನು. ಕೃಷ್ಣಪ್ಪನಾಯಕ ಈ ರೀತಿ ತೀರಿಸಿಕೊಂಡನೆಂದು ತನಿಖೆಯ ತರುವಾಯ ತಿಳಿಯಿತು.

ಸ್ವಭಾವ :

ಕೃಷ್ಣಪ್ಪನಾಯಕನು ಸಂಸ್ಥಾನದಲ್ಲಿ ಆರಂಭಿಸಿದ ಅಧಿಕಾರಕ್ಕೆ ಸಂಕಷ್ಟಗಳ ಸರಮಾಲೆಯೇ ಎದುರಾಗಿರುವ ಸಂಗತಿ ಸರ್ವವೇದ್ಯ. ಆತನು ತನ್ನ ಆಳಿತದುದ್ದಕ್ಕೂ ಆರ್ಥಿಕ ಹಿನ್ನಡೆ ಅನುಭವಿಸಿದ. ದೊರೆತ ದಾಖಲೆಗಳಲ್ಲಿ ವಿದೇಶೀಯರ ಪತ್ರವ್ಯವಹಾರಗಳು, ಕಡತಗಳಿಂದ ಕೃಷ್ಣಪ್ಪನಾಯಕನ ಸ್ವಭಾವ ಚಿತ್ರಿಸಿದರೆ ಏಕಪಕ್ಷೀಯವಾಗುತ್ತದೆ. ಅದಕ್ಕಾಗಿ ಸ್ವದೇಶಿ ಸಾಮಗ್ರಿಗಳಾದ ಕೈಫಿಯತ್ತುಗಳ ಸಹಾಯವನ್ನು ಪಡೆದು ಇಲ್ಲಿ ಆತನ ಸ್ವಭಾವದ ಸ್ಪಷ್ಟ ಕಲ್ಪನೆ ಕೊಡಲಾಗಿದೆ.

1. ಹೈದ್ರಾಬಾದ ರೆಸಿಡೆಂಟನಿಗೆ ರೀನ್ಸ್‌ಮೋರ್ಡನು 28ನೇ ಅಕ್ಟೋಬರ 1832ರಂದು ಬರೆದ ಪತ್ರವೊಂದರಲ್ಲಿ.[125]

" ಕೃಷ್ಣಪ್ಪನಾಯಕನು ಅತಿಹೆಚ್ಚು ಮದ್ಯಪಾನ ಮಾಡಿ ಸದಾ ಪ್ರಜ್ಞಾಹೀನನಾಗಿರುವ ವ್ಯಕ್ತಿ. ಸಾಲಗಾರರ ಕಾಟಕ್ಕೆ ತಾಳಲಾರದೆ ಅಫೀಮು ಸೇವಿಸಿ ಬೀಳುತ್ತಿದ್ದ. ಸಂಸ್ಥಾನದ ಹಣವನ್ನು ವಿಪರೀತ ವೆಚ್ಚ ಮಾಡುವ ಮೂಲಕ ಪ್ರಜೆಗಳ ಕಲ್ಯಾಣಕ್ಕೆ ಕೊಡಲಿ ಪೆಟ್ಟು ಹಾಕುತ್ತಿದ್ದಾನೆಂದು" ತಿಳಿಸಲಾಗಿತ್ತು.

2. ಅದೇ ಹೈದ್ರಾಬಾದ ರೆಸಿಡೆಂಟನಿಗೆ 19ನೇ ಎಪ್ರಿಲ 1841ರಂದು ಕ್ಯಾಪ್ಟನ್ ಮಾಲ್ಕಮ್ ಮಾಡಿದ ವರದಿಯೊಂದರಲ್ಲಿ[126]

" ಕೃಷ್ಣಪ್ಪನಾಯಕ ಅಸಮರ್ಥ ಆಳಿತಗಾರನಾದರೂ ವೈಯಕ್ತಿಕವಾಗಿ ಒಳ್ಳೆಯವ. ಶೀಘ್ರಕೋಪಿಯಾಗಿರುವುದರಿಂದ ಆಳ್ವಿಕೆ ನಿರ್ವಹಿಸುವಲ್ಲಿ ವಿಫಲವಾಗಿದ್ದಾನೆ. ತಂದೆಯ ಪ್ರಭಾವ ಹೊಂದಿದವ್ಯಕ್ತಿಗಳ ಮೇಲೆ ಅವಲಂಬಿಸಿ ಅಧಿಕಾರ ನಡೆಯಿಸಿ ಎಡವಿದ್ದಾನೆ. ಸಂಸ್ಥಾನದಲ್ಲಿರುವ ಶ್ರೀಮಂತರಿಂದ ಸಾಲ ಪಡೆದು ಸಂಸ್ಥಾನದ ಗೌರವ ಗಾಳಿಗೆ ತೂರಿದ ರಾಜ" ನೆಂದು ಅಭಿಪ್ರಾಯ ಪಟ್ಟಿದ್ದಾನೆ.

---

125. FPC 20 MAR 1837 Nos.96-99.
126. FPC 19 APR 1841 No.102.

3. ಕ್ಯಾಪ್ಟನ ಜಾಕಸನ್ನನು 19ನೇ ಎಪ್ರಿಲ 1841ರಂದು ಬರೆದ ದೀರ್ಘ ಪತ್ರ ದಲ್ಲಿ-[127]

" ಅತಿ ಮುಂಗೋಪಿಯಾದ ಕೃಷ್ಣಪ್ಪನಾಯಕನು ವಿಲಾಸ ಜೀವನ ನಡೆಯಿಸುತ್ತಿರುವ ಅಸಮರ್ಥ ಅರಸ. ಸಲಹೆಗಾರರ ಮಾತಿನಲ್ಲಿಯೇ ಅತಿಹೆಚ್ಚು ವಿಶ್ವಾಸವಿಟ್ಟು ಅಸಮರ್ಥ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ನೀಡಿದ್ದಾನೆ. ಮತ್ತು ಸಂಸ್ಥಾನದಲ್ಲಿ ಸಂಘಟನೆಯಿಲ್ಲದ ಸಹಬಾಳ್ವೆ, ಯೋಚನಾರಹಿತ ಯೋಜನೆಗಳೇ ಎದ್ದು ಕಾಣುತ್ತವೆ" ಎಂದು ವಿವರಿಸಿದ್ದಾನೆ.

ಮೇಲಿನ ಮೂರು ಪತ್ರಗಳು ಸಂಸ್ಥಾನದ ಅರಸನಾದ ಕೃಷ್ಣಪ್ಪನಾಯಕನ ಶೀಲ, ಚಾರಿತ್ರ್ಯದ ಮೇಲೆ ವಿಶೇಷ ಬೆಳಕು ಚೆಲ್ಲುತ್ತವೆಯೇನೋ ನಿಜ. ಆದರೆ ಸಂಪೂರ್ಣ ತೇಜೋವಧೆ ತಂತ್ರ ಇದರಲ್ಲಿ ಅಡಗಿದೆ. ಸಂಸ್ಥಾನದ ಆಳ್ವಿಕೆಯಲ್ಲಿ ರಾಜ ಎಡವಿದನೆಂಬ ಮಾತ್ರಕ್ಕೆ ಸಂಪೂರ್ಣ ಅಸಮರ್ಥನೆನ್ನುವದು ಸರಿಯಲ್ಲ. ಸ್ವಹಿತಾಭಿವೃದ್ಧಿಗಾಗಿಯೇ ಸಂಸ್ಥಾನ ಸುಲಿಯುತ್ತಿರುವ ಬ್ರಿಟಿಷ ಅಧಿಕಾರಿಗಳ ಕಣ್ಣಿಗೆ, ಕೃಷ್ಣಪ್ಪನಾಯಕ ಕೆಟ್ಟವನಾಗಿ ಕಂಡಿರಬೇಕು ಅಷ್ಟೇ!!

<u>ಕೃಷ್ಣಪ್ಪ ನಾಯಕನ ಕುಟುಂಬ :</u>

ಇಬ್ಬರು ರಾಣಿಯರನ್ನು ಮದುವೆಯಾಗಿದ್ದ ಕೃಷ್ಣಪ್ಪನಾಯಕನಿಗೆ ಬಹಳ ದಿನಗಳವರೆಗೆ ಮಕ್ಕಳೆ ಆಗಲಿಲ್ಲ. ಆಗ ತಮ್ಮನ ಮಗನಾದ ಕೃಷ್ಣಪ್ಪನನ್ನು ಮುಂದಿನ ಉತ್ತರಾಧಿಕಾರಿಯೆಂದು ನಿರ್ಣಯಿಸಲಾಯಿತು. ಇದಕ್ಕೆಲ್ಲರು ಒಪ್ಪಿದರು. ಇನ್ನೇನು ನಿರ್ಣಯವಾದ ಕೆಲವೇ ದಿನಗಳಲ್ಲಿ ರಾಣಿ ಈಶ್ವರಮ್ಮನ ಉದರದಿಂದ ನಾಲ್ವಡಿ ವೆಂಕಟಪ್ಪನಾಯಕ ಜನಿಸಿದ. ಇದರಿಂದ ದತ್ತಕ ಸಮಸ್ಯೆಗೆ ತೆರೆಬಿತ್ತು.

ನಾಯಕನಿಗೆ ಪಟ್ಟದರಸಿ ರಾಣಿ-ಈಶ್ವರಮ್ಮಳಿಂದ ದಾಂಪತ್ಯಜೀವನ ಅನುಭವಿಸುವಲ್ಲಿ ಅಷ್ಟೇನು ಮಧುರ ವಾತಾವರಣವಿದ್ದಿರಲಿಲ್ಲವೆಂಬ ಗಾಳಿಸುದ್ದಿಯೂ ಇದೆ. ಕ್ಯಾ. ಗ್ರಿನ್ಲೇಯು ಹಲವಾರು ತನಿಖೆಗಳಿಂದ ಸುರಪುರ ಛಿದ್ರಗೊಳ್ಳುವ ಪೂರ್ವದಲ್ಲಿ ಅಂದರೆ ಕ್ರಿ.ಶ. 1842ರ ಆಗಸ್ಟ ತಿಂಗಳಲ್ಲಿ ಪರಲೋಕ ಸೇರಿದ.[128] ಆಗ ನಾಲ್ವಡಿ ವೆಂಕಟಪ್ಪನಾಯಕನಿಗೆ ಕೇವಲ 8 ವರ್ಷ ಮಾತ್ರ ವಯಸ್ಸು, ಈ ವೆಂಕಟಪ್ಪನಾಯಕನು ಕೃಷ್ಣಪ್ಪ ನಾಯಕನ ಎರಡನೆಯ ರಾಣಿ ಲಕ್ಷ್ಮಮ್ಮ

---

127. FPC 19 APR 1841 No.103.
128. ಸು.ಸಂ.ಇ; ಪುಟ-149.

ಎಂಬುವವಳ ಉದರದಿಂದ ಜನಿಸಿದವನಾಗಿದ್ದು, ರಾಣಿ ಈಶ್ವರಮ್ಮ ಕೇವಲ ಪೋಷಕ ತಾಯಿ ಆಗಿದ್ದಳು.[129] ಎಂಬ ವಾದವೊಂದನ್ನು ಡಾ. ಎನ್. ಎಚ್. ಕುಲಕರ್ಣಿಯವರು ತಮ್ಮ ಮಹಾಪ್ರಬಂಧದಲ್ಲಿ ಮಂಡಿಸಿದ್ದಾರೆ. ಇದಕ್ಕೆ ಹೈದ್ರಾಬಾದ ಕಡತಗಳ ಸಾಕ್ಷಿ ಒದಗಿಸಿದ್ದಾರೆ. ಈಶ್ವರಮ್ಮ ಪೋಷಕಳಾದರೂ ಪ್ರಭಾವಿ ರಾಣಿಯಾಗಿರುವುದರಿಂದ ತಾಯಿಸ್ಥಾನ ಆಕ್ರಮಿಸಿರಬಹುದೇನೊ ನಿಜ. ಇದರ ಬಗ್ಗೆ ಸಂಪೂರ್ಣ ತೃಪ್ತಿ ತರುವ ಶೋಧನೆ ಹೊರಬರುವವರೆಗೂ ಈಶ್ವರಮ್ಮಳನ್ನೇ ತಾಯಿ ಎಂದು ಸ್ವೀಕರಿಸಬಹುದು.

2. ರಾಣಿ ಈಶ್ವರಮ್ಮ :

ರಾಜಾ ಕೃಷ್ಣಪ್ಪನಾಯಕನ ಮರಣಾನಂತರ ಸುರಪುರ ಸಂಸ್ಥಾನದ ಗದ್ದುಗೆ ಮತ್ತೆ ವಿವಾದಕ್ಕೀಡಾಯಿತು. ಗಂಡುಸಂತಾನವಿಲ್ಲದ ಕಾರಣ ತಮ್ಮನಾದ ಪಿಡ್ಡನಾಯಕನ ಮಗನನ್ನು ಉತ್ತರಾಧಿಕಾರಿಯಾಗಿ ಈ ಹಿಂದೆ ಘೋಷಿಸಲಾಗಿತ್ತು. ಆದರೆ ನಾಲ್ವಡಿ ವೆಂಕಟಪ್ಪನಾಯಕನ ಜನನದಿಂದ ಉತ್ತರಾಧಿಕಾರಿ ಒಪ್ಪಂದ ತಿರಸ್ಕೃತಗೊಂಡು ಅತೃಪ್ತ ಪಿಡ್ಡನಾಯಕನನ್ನು ಸಿಡಿದೇಳುವಲ್ಲಿ ಮೂಲ ಕಾರಣವಾಯಿತು. ಸಂಸ್ಥಾನದ ಸಂಪ್ರದಾಯದಂತೆ ಕೃಷ್ಣಪ್ಪನಾಯಕನ ಪಟ್ಟದ ರಾಣಿ ಈಶ್ವರಮ್ಮ ತನ್ನ ಪತಿಗಿದ್ದ ಎಲ್ಲಾ ಅಧಿಕಾರವನ್ನು ಹಿಡಿದುಕೊಂಡಳು. ಎಂಟುವರ್ಷದ ಬಾಲಕ ನಾಲ್ವಡಿ ವೆಂಕಟನನ್ನು ಮುಂದಿಟ್ಟುಕೊಂಡು ಸುರಪುರದ ರಾಜ್ಯಭಾರ ನಡೆಯಿಸತೊಡಗಿದಳು.

ಸಂಸ್ಥಾನದಲ್ಲಿ ಕಂಪನಿ ಸರಕಾರದ ರಾಜಕೀಯ ಪ್ರತಿನಿಧಿಯಾಗಿದ್ದ ಕ್ಯಾಪ್ಟನ್ ಗ್ರಿನ್ಲೀ, ಹೈದ್ರಾಬಾದ ನಿಜಾಮನ ನಿಲುವನ್ನು ಪರೋಕ್ಷವಾಗಿ ಬೆಂಬಲಿಸತೊಡಗಿದ್ದು ಈಗ ಗುಟ್ಟಾಗಿ ಉಳಿದಿರಲಿಲ್ಲ. ನಿಜಾಮನಿಂದ ನೇಮಿಸಲ್ಪಟ್ಟ ಅಧಿಕಾರಿಯನ್ನೇ ಸಂಸ್ಥಾನದ ಉಸ್ತುವಾರಿಗೆ ನಿಯುಕ್ತಿಗೊಳಿಸಬೇಕೆಂದ ಗ್ರಿನ್ಲೀ ಮಾತಿಗೆ ರೆಸಿಡೆಂಟ ತೀವ್ರವಾಗಿ ವಿರೋಧಿಸಿ " ಪದ್ಧತಿಯಂತೆ ಬಾಲವೆಂಕಟನೆ ನಿಜವಾದ ಉತ್ತರಾಧಿಕಾರಿಯೆಂದು" ಸಲಹೆ ನೀಡಿದನು. ರೆಸಿಡೆಂಟನ ಈ ಸಲಹೆ ರಾಣಿ ಈಶ್ವರಮ್ಮಳಿಗೆ ವರದಾನವಾಯಿತು. ಜಾಣೆ ಮತ್ತು ಚತುರೆಯಾದ ಈಶ್ವರಮ್ಮ ದಕ್ಷ ಅಧಿಕಾರಿಯಾಗಿದ್ದ ಚೆನ್ನಬಸಪ್ಪನ ಸಹಾಯದಿಂದ ರಾಜ್ಯಭಾರ ನಿರ್ವಹಿಸಲು ಈಗ ಅಧಿಕೃತವಾಗಿ ಮುಂದಾದಳು. ಮುಖ್ಯವಾಗಿ ರಾಣಿಗೆ ಬೇಕಾದದ್ದು ತನ್ನ ಮಗನೆ ಮುಂದಿನ ರಾಜನಾಗಬೇಕೆಂಬುದು. ಒಂದು ಸಲ ಸಿಂಹಾಸನ ಕೈಬಿಟ್ಟು ಹೋದರೆ ಮರಳಿ ಸಿಗದೆಂಬುದು ಅವಳ ಮನದಾಳವಾಗಿತ್ತು. ರಾಣಿ ಮತ್ತು ಚೆನ್ನಬಸಪ್ಪ ಜೊತೆಯಾಗಿ ಸಂಸ್ಥಾನವನ್ನು ಸುಸೂತ್ರವಾಗಿ ಸಾಗಿಸತೊಡಗಿದರು. ಆದರೆ ಇವರು ಸಾಗುವ ಹಾದಿಗೆ ಪಿಡ್ಡನಾಯಕ ಸವಾಲುಗಳು

---

129. FPC 22 SEP 1849 No.102.

ತಲೆಯೆತ್ತಿದವು. ಪಟ್ಟಕ್ಕೆ ಬರಬೇಕಾದ ವ್ಯಕ್ತಿ ಇನ್ನೂ ಅಪ್ರಾಪ್ತವಯಸ್ಕನಾಗಿರುವದರಿಂದ ಅಣ್ಣನ ಅಧಿಕಾರ ತಮ್ಮನು ಹಿಡಿಯುವದರಲ್ಲಿ ತಪ್ಪೇನಿದೆ? ದಿನವಿಡಿ ನಡೆಯುವ ದಂಗೆ, ಎರಗಬಹುದಾದ ವೈರಿ– ಆಕ್ರಮಣಗಳನ್ನು ಓರ್ವ ಮಹಿಳೆ ಎದುರಿಸಲು ಶಕ್ಯವೆ? ಎಂಬಿತ್ಯಾದಿ ಪ್ರಶ್ನೆಗಳು ಪಿಡ್ನಾಯಕನವು. ಇವಕ್ಕೆ ಗ್ರಿಸ್ಲೀ, ಗೋಸಿಯಾನರ ಕುಮ್ಮಕ್ಕು ಬೇರೆ. ಅಧಿಕಾರ ದಾಹದಿಂದ ಇವರು ಎಂಥ ಕೀಳು ಮಟ್ಟಕ್ಕೂ ಇಳಿದರೆಂದರೆ ರಾಣಿ-ಈಶ್ವರವ್ವಳಿಗೂ ಮತ್ತು ಚೆನ್ನಬಸಪ್ಪನಿಗೂ ಅನೈತಿಕ ಸಂಬಂಧವಿದೆಯೆಂದು ಆರೋಪ ಮಾಡಲು ಹೇಸಲಿಲ್ಲ. ಸಿಡಿಲನಂತೆ ಬರುವ ಇಂಥ ಆರೋಪಗಳಿಗೆಲ್ಲ ರಾಣಿ ಮನನೊಂದುಕೊಂಡಳಾದರೂ ಮಗನ ಭವಿಷ್ಯ ದೃಷ್ಟಿಯಿಂದ ಎಲ್ಲವ ಸ್ವೀಕರಿಸಿದಳು. ಬರುವ ಅಪವಾದಗಳಿಗೆ ಸೊಪ್ಪಾಕದೆ ಸಂಸ್ಥಾನವನ್ನು ಮುನ್ನಡೆಸುವ ಛಲ ತೊಟ್ಟಳು. ಧೈರ್ಯದಿಂದ ದರ್ಬಾರಕ್ಕೆ ಬಂದು ಅಧಿಕಾರ ಚಲಾಯಿಸಲು ಆರಂಭಿಸಿದಳು. ಸಂಸ್ಥಾನದ ಮೂಲ 12 ಸಾವಿರ ಬೇಡಪಡೆ ರಾಣಿಯ ನಿಲುವಿಗೆ ಬೆಂಬಲ, ಬೆನ್ನೆಲುಬು, ಆಗಿತ್ತು. ವನದುರ್ಗದ ಬೇಡರಂತೂ ರಾಣಿಯ ರಕ್ಷಣೆಗೆ ಹಗಲಿರುಳು ಶ್ರಮಿಸುವ ಪಣತೊಟ್ಟಿದ್ದರು. ಬಿರುಸಿನಿಂದ ನಡೆದ ಸಂಸ್ಥಾನದ ಈ ಎಲ್ಲಾ ಕ್ಷಿಪ್ರ ಬದಲಾವಣೆಗಳು ಪಿಡ್ನಾಯಕನ ಬಣಕ್ಕೆ ಮುಖಭಂಗ ತಂದವು. ಆಗ ಬಾಯಿಗೆ ಸಿಗುವ ತುತ್ತಾದರೂ ಪಡೆಯಬೇಕೆಂದು 'ದಿವಾನ' ಪದವಿಗೆ ಪಿಡ್ನಾಯಕ ಬಾಯಿ ಹಾಕಿದ. ತನಗೆ ದಿವಾನ ಪದವಿ ನೀಡಿದರೆ ನಿಜಾಮನ ಬಾಕಿಯನ್ನು ಸಂಪೂರ್ಣ ಪಾವತಿ ಮಾಡುವದಾಗಿ ಗ್ರಿಸ್ಲೆಗೆ ವಾಗ್ದಾನ ನೀಡಿದ. ಪಾವತಿ ಮಾಡುವ ಮಾತಿನಿಂದ ನಿಜಾಮನಿಗೆ ಆಸೆ ಹುಟ್ಟಿತು. ಇದು ಗ್ರಿಸ್ಲೀಗೂ ಬೇಕಾಗಿತ್ತು.

ಪಿಡ್ನಾಯಕನನ್ನು ದಿವಾನ ಪದವಿಗೆ ಏರಿಸುವ ಮೂಲಕ ಸಂಸ್ಥಾನದ ಆಟದಲ್ಲಿ ಈತನನ್ನು ತನ್ನ ಪಗಡೆಕಾಯಿಯನ್ನಾಗಿಸಿಕೊಳ್ಳಲು ಗ್ರಿಸ್ಲೀ ಬಯಸಿದ. ಅದರಂತೆ, ಅಸಮರ್ಥ, ಕುಡುಕ ಮತ್ತು ವ್ಯಭಿಚಾರಿಯಾದ ಈ ಪಿಡ್ನಾಯಕನನ್ನು ತನ್ನ ಕೈಗೊಂಬೆಯನ್ನಾಗಿ ಮಾಡಿಕೊಳ್ಳಲು ಗೋಸಿಯಾನ ಉದ್ದೇಶಿಸಿದ.[130]

ಗ್ರೀಸ್ಲೀಯು ಸಂಸ್ಥಾನದ 'ದಿವಾನ' ಗಿರಿಗೆ ಸಂಬಂಧಿಸಿದ ವಿಷಯ ಕುರಿತ ಸಮಗ್ರ ವರದಿಯೊಂದನ್ನು ಸಿದ್ಧಪಡಿಸಿದನು. ಗೋಸಿಯಾನ ಪಿಡ್ನಾಯಕ ಮತ್ತಿನ್ನಿತರ ರಾಜ್ಯ ವಿರೋಧಿಗಳ ಕೈವಾಡ ಇದರೊಳಗಿತ್ತು. ರಾಣಿ ಮತ್ತು ಚೆನ್ನಬಸಪ್ಪರ ಅನೈತಿಕ ಸಂಬಂಧವನ್ನು ಅತಿಹೆಚ್ಚು ಎತ್ತಿ ತೋರಿಸಲಾಗಿತ್ತು. ರೆಸಿಡೆಂಟನ ಮೂಲಕ ಭಾರತ ಸರಕಾರದ ಗೌರ್ನರ ಜನರಲನಿಗೆ ಗ್ರಿಸ್ಲೀಯ ವರದಿ ತಲುಪಿತು. ವರದಿಯ ಮೇಲೆಯೇ ಸಂಸ್ಥಾನದ ನಿರ್ಣಯವು ನಿಂತಿತ್ತೆಂದು ಬೇರೆ ಹೇಳಬೇಕಿಲ್ಲ.

---

130. TBRPS. p-81.

ವರದಿ ಒಯ್ದ ರೆಸಿಡೆಂಟ ಗ್ರಿನ್ಲೇಗೊಂದು ಆದೇಶ ಪತ್ರ ಕಳಿಸಿದ. ಅದರಲ್ಲಿ ಪಿಡ್ಡನಾಯಕನೇ ಸಂಸ್ಥಾನದ 'ದಿವಾನ' ನೆಂದು ಘೋಷಿಸಿ ಬಿಡ್ಡ ಕೋರಿತ್ತು. ಆದೇಶದ ಪ್ರಕಾರ ಕ್ರಿ.ಶ. 1842ರ ನವ್ಹಂಬರ್ 28ರಂದು ಗ್ರಿನ್ಲೇಯು ಸುರಪುರಕ್ಕೆ ಪ್ರಯಾಣಿಸಿದನು.

ಪಿಡ್ಡನಾಯಕನ ಅಧಿಕಾರ ಸ್ಥಿರಗೊಳಿಸಲು, ರಾಣಿಯ ಅನುಯಾಯಿಗಳನ್ನು ಹದುರಿಸಲು, ಮತ್ತು ನಿಜಾಮನಿಗೆ ಸಲ್ಲಬೇಕಾದ ಸಾಲವನ್ನು ವಸೂಲ ಮಾಡಲು ಸಿದ್ಧನಾದ. ಆದರೆ ಇವೆಲ್ಲ "ಸೈನ್ಯವಿಲ್ಲದೆ ಸಾಧ್ಯವಿಲ್ಲವೆಂದು" ಗ್ರಿನ್ಲೇ ರೆಸಿಡೆಂಟ್ ಫ್ರೇಜರನಲ್ಲಿ ಮನವಿಮಾಡಿಕೊಂಡ. ಭಾರತದಲ್ಲಿ ಸಧ್ಯ ಆಳರಸರ ಬಂಡಾಯದ ಬಿರುಗಾಳಿ ಎದ್ದಿರುವ ಪ್ರಯುಕ್ತ ತಮ್ಮ ಸರಕಾರದ ರಕ್ಷಣೆಗೆ ಹೆಚ್ಚಿನ ಸೈನ್ಯ ಅವಶ್ಯವಿದ್ದು, ಬೇರೊಬ್ಬರ ಸಹಾಯಕ್ಕಾಗಿ ಸ್ವರಕ್ಷಣೆ ಅಲಕ್ಷಿಸುವುದು ಅನುಚಿತವೆಂದು ಬರೆದು ಗ್ರಿನ್ಲೇಯ ಸೈನ್ಯ ಬೇಡಿಕೆಯನ್ನು ರೆಸಿಡೆಂಟ್ ತಿರಸ್ಕರಿಸಿದ.

ಗ್ರಿನ್ಲೇಯು ರೆಸಿಡೆಂಟನ ಎಲ್ಲಾ ಆದೇಶಗಳನ್ನು ಹೊತ್ತುಕೊಂಡು ಸುರಪುರಕ್ಕೆ ಬಂದಿಳಿದು 'ಪಿಡ್ಡನಾಯಕನನ್ನು ಸಂಸ್ಥಾನದ ದಿವಾನನ್ನಾಗಿ ಒಪ್ಪಿಕೊಳ್ಳಬೇಕೆಂಬ ಭಾರತ ಸರಕಾರದ ಮೊದಲ ಆಜ್ಞೆಯನ್ನು ರಾಣಿಯ ಮುಂದಿಟ್ಟ. ಆಜ್ಞೆ ಕೇಳಿದ ರಾಣಿ ಕ್ರೋಧದ ತಪ್ತಳಾಗಿ 'ದಿವಾನ ಪದವಿಯನ್ನು ಇಂಥ ಅನವರ್ಥನಾದವನಿಗೆ ವಹಿಸಿ ಕೊಡಲಾರೆನೆಂದು ಪಟ್ಟುಹಿಡಿದಳು. ಇದಕ್ಕೆ ಪ್ರತಿಯಾಗಿ ಪಿಡ್ಡನಾಯ್ಕ ಗುಪ್ತವಾಗಿ ಗುಂಪೊಂದನ್ನು ರಚಿಸಿಕೊಂಡ. ರಾಣಿಯು ಇದರಲ್ಲಿ ಹಿಂದೆ ಉಳಿಯದೆ ಹಲವಾರು ರೋಹಿಲರನ್ನು ಸೈನ್ಯಕ್ಕೆ ಸೇರಿಸಿಕೊಂಡು ಸನ್ನದ್ಧಳಾದಳು. ಸಂದರ್ಭವಿಕೋಪಕ್ಕೆ ತೆರಳತೊಡಗಿತು. ಇದನ್ನರಿತ ಗ್ರಿನ್ಲೇ, ಬಹು ಜಾಣ್ಮೆಯಿಂದ ವರ್ತಿಸಿ ರಾಣಿಯ ಮನವೊಲಿಸುವಲ್ಲಿ ಯಶಸ್ವಿಯಾದನು.

ಸುರಪುರದ ದಿವಾನಗಿರಿಯನ್ನು ಪಿಡ್ಡನಾಯಕನಿಗೆ ಒಪ್ಪಿಸಬೇಕೆಂಬ ಬ್ರಿಟಿಷ ಆದೇಶಕ್ಕೆ ರಾಣಿ ಒಪ್ಪಿಕೊಂಡಳು. ಅಂದು ನೆರೆದ ದರ್ಬಾರದಲ್ಲಿ ರಾಜವಂಶಸ್ಥರ, ಜಮಾದಾರರ, ಬೇಡನಾಯಕರ, ಸೇವಕರೆಲ್ಲರೆದುರು ದಿವಾನಪದವಿ ನೀಡಲಾಯಿತು. ಆದರೆ ರಾಣಿಯ ಕಟ್ಟಾಭಿಮಾನಿಗಳಾದ ವನದುರ್ಗದ ಬೇಡರುಇದಕ್ಕೆ ಒಪ್ಪದೆ ವಿರೋಧಿಸಿದರು. ಕೊನೆಗೆ ರಾಣಿಯ ಮನವಿ ಮೇರೆಗೆ ಒಪ್ಪಿಕೊಂಡರು.[131] ದಿವಾನ ಪದವಿಯ ವರ್ಗಾವಣೆಯ ನಂತರವೂ ಸಮಸ್ಯೆ ಮಾತ್ರ ಮೊದಲಿನಂತೆ ಸಾಗಿಯೇ ಇತ್ತು. ತನ್ನ

---

131. TBRPS p-82

ಒಪ್ಪಿಗೆಯಿಲ್ಲದೆ ಯಾವ ಕ್ರಮವೂ ಜರುಗಿಸಕೂಡದೆಂದು ರಾಣಿ ಕಟ್ಟಾಜ್ಞೆ ವಿಧಿಸಿದಳು. ಆಡಳಿತಕ್ಕೆ ಸಂಬಂಧಿಸಿದ ಸಾಮಗ್ರಿಗಳೆಲ್ಲ ತಮ್ಮ ವಶದಲ್ಲೇ ಇಟ್ಟುಕೊಂಡ ರಾಣಿಯ ನೀತಿಯನ್ನು ಗ್ರಿನ್ಲೇ ಟೀಕಿಸಿದ. ರಾಣಿ ಮತ್ತು ಪಿಡ್ಡನಾಯಕರಲ್ಲಿ ಪ್ರತಿರೋಧದ ಚಿಹ್ನೆಗಳು ಸ್ಪಷ್ಟವಾಗಿ ಕಂಡದ್ದು ಬಣಗಳ ಬೆಳವಣಿಗೆಯಲ್ಲಿ. ಬೇಡಪಡೆಯ ಬೆಂಬಲದಿಂದ ಅಧಿಕಾರ ನಡೆಸುತ್ತಿರುವ ರಾಣಿಯು ರೆಸಿಡೆಂಟನ ಆಜ್ಞೆ ಪಾಲಿಸುತ್ತಿಲ್ಲವೆಂದು ಗ್ರಿನ್ಲೇ ಆರೋಪಿಸಿದ. ಕೇವಲ 'ದಿವಾನ ಹುದ್ದೆ' ದಯಪಾಲಿಸಿದರೆ ಮಾತ್ರ ಸಾಲದು ಅಧಿಕಾರವನ್ನು ವರ್ಗಾಯಿಸಬೇಕೆಂದು ಆಗ್ರಹಪಡಿಸಿದ. " ಮುಂದುವರೆದ ಕಲಹಕ್ಕೆ ಕಡಿವಾಣ ಹಾಕಲು ರಾಣಿಯ ದರ್ಪ ದಮನ ಮಾಡದೆ ಮುನ್ನಡೆಯಲಾಗದು; ಸೈನ್ಯ ಪ್ರವೇಶ ಅಗತ್ಯ" ವೆಂಬ ಗ್ರಿನ್ಲೇ ಬೇಡಿಕೆಗೆ ರೆಸಿಡೆಂಟ್ ಹಸಿರು ನಿಶಾನೆ ನೀಡಿದ. ಎರಡು ಸಾವಿರ ಕಠಾರಿ ವೀರರನ್ನು, ಬಿಲ್ಲುಗಾರರನ್ನು ರಾಣಿಯ ಚಟುವಟಿಕೆ ನಿಗ್ರಹಿಸಲು ನೇಮಿಸಿಕೊಳ್ಳಲಾಯಿತು.

ಜಮೀನು, ಜಹಗೀರು ವ್ಯವಹಾರಗಳೆಲ್ಲ ಚೆನ್ನಬಸಪ್ಪನ ವ್ಯಾಪ್ತಿಯಲ್ಲಿ ನಡೆಯುತ್ತಿದ್ದವು. ಇದು ಪಿಡ್ಡನಾಯಕನಿಗೆ ಸರಿಬರಲಿಲ್ಲ. ಚೆನ್ನಬಸಪ್ಪನನ್ನು ಪದಚ್ಯುತಗೊಳಿಸಲು ಸಂಚು ನಡೆದಾಗ ರಾಣಿಯು ಅದನ್ನು ತೀವ್ರವಾಗಿ ಪ್ರತಿಭಟಿಸಿದಳು. ಆಗ ಗ್ರಿನ್ಲೇಯು ಚೆನ್ನಬಸಪ್ಪನ ಅಧಿಕಾರ ಮೊಟಕುಗೊಳಿಸಲು ರಾಣಿಯ ಮೇಲೆ ಒತ್ತಡ ತಂದನಲ್ಲದೆ ಅರ ರೋಹಿಲರನ್ನು ಸೈನ್ಯದಿಂದ ತೆಗೆದು ಹಾಕಬೇಕೆಂದು, ನಿಜಾಮನಿಗೆ ಕೊಡಬೇಕಾದ ಸಂಸ್ಥಾನದ ಸಾಲವನ್ನು ಕೂಡಲೇ ಪಾವತಿಸಬೇಕೆಂದು ಪಟ್ಟುಹಿಡಿದನು. ಗ್ರಿನ್ಲೇ ಕೇಳಿದ ಈ ಮೂರು ಮಾತುಗಳು ಬಾಣದ ಮೊನೆಯಂತಿದ್ದವು. ಯಾಕೆಂದರೆ ರಾಣಿಯ ಅಸ್ತಿತ್ವನಿಂತದ್ದೇ ಇವುಗಳ ಮೇಲೆ." ಚೆನ್ನಬಸಪ್ಪ ಕಳೆದ 10 ವರ್ಷದಿಂದ ಸಂಸ್ಥಾನದಲ್ಲಿ ನಿಷ್ಠೆಯಿಂದ ಸೇವೆಸಲ್ಲಿಸಿದ್ದಾನೆ. ಅಂಥ ದಕ್ಷ ಅಧಿಕಾರಿಯನ್ನು ದೂರವಿಡುವುದು ಸಂಸ್ಥಾನದ ಪ್ರಗತಿಗೆ ಮಾರಕ. ಅರಬ್, ರೋಹಿಲರನ್ನು ನೇಮಕಮಾಡಿಕೊಂಡಿಲ್ಲ. ಬೇಕಾದರೆ ತನಿಖೆ ಮಾಡಿಕೊಳ್ಳಬಹುದು. ಅಲ್ಲದೆ ನನ್ನ ಗಂಡನ ಸಾವಿನಿಂದ ನನಗೆ ಬಹಳಷ್ಟು ನೋವಾಗಿದೆ. ಜಮೀನುದಾರರಿಂದ ಸರಿಯಾದ ಕಂದಾಯ ವಸೂಲಿ ಬಂದಿಲ್ಲ. ಆದುದರಿಂದ ನಿಜಾಮ ಸರಕಾರಕ್ಕೆ ಸಲ್ಲಿಸಬೇಕಾದ ಹಣದಲ್ಲಿ ಕಡಿತಗೊಳಿಸಬೇಕೆಂದು" ರಾಣಿ ಈಶ್ವರಮ್ಮ ಗ್ರಿನ್ಲೇನಲ್ಲಿ ಮನವಿ ಮಾಡಿಕೊಂಡಳು. ದಮನ ನೀತಿಯ ಮುಂದೆ ರಾಣಿಯ ಮನವಿ ಕೇವಲ ಅರಣ್ಯರೋದನವಾಯಿತು. ರಾಣಿಯ ಪ್ರಾಬಲ್ಯ ಕುಗ್ಗಿಸುವ ತನ್ನ ಮುಖ್ಯ ಉದ್ದೇಶವನ್ನು ಮನದಲ್ಲೇ ಇಟ್ಟುಕೊಂಡು, ನಿಜಾಮನ ಸಾಲಬಾಕಿ ಮುಂದಿಟ್ಟ. ಪಟ್ಟವೇರಿದ ಪ್ರತಿಯೊಬ್ಬ ರಾಜರನ್ನು ಸಾಲದ ನೆಪದಲ್ಲಿ

ಹತ್ತಿಕ್ಕುತ್ತ ಬಂದ ಇಂಗ್ಲೀಷ್ ಅಧಿಕಾರಿಗಳಿಗೆ ರಾಣಿಯ ಶಕ್ತಿ ದೊಡ್ಡದೆನಿಸಲಿಲ್ಲ. ಆದರೂ "ಬೇಡರನ್ನು ಎದುರು ಹಾಕಿಕೊಳ್ಳುವದೆಂದರೆ ಮೃತ್ಯುವಿನ ಮನೆ ಸೇರಿದಂತೆ" ಎಂಬ ಹೆದರಿಕೆ ಮಾತ್ರ ಇತ್ತು.

(3. <u>ಗ್ರಿನ್ಲೀಯ ನಿರ್ಗಮನ; ಟೇಲರನ ಆಗಮನ :</u>

ಚೆನ್ನಬಸಪ್ಪನ ಸಹಾಯದಿಂದ ರಾಣಿಯ ರಾಜ್ಯಭಾರ ಹೀಗೆಯೇ ಸಾಗಿತ್ತು. ಪಿಡ್ಡನಾಯಕ ದಿವಾನ ಪದವಿಯ ದಿಮಾಕಿನಲ್ಲಿ ಹಲವಾರು ದುಶ್ಚಟಗಳಿಗೆ ಬಲಿಯಾಗತೊಡಗಿದ. ಸಂಸ್ಥಾನದ ವಿರುದ್ಧ ಬಳಸುವಲ್ಲಿ ಬ್ರಿಟಿಷರಿಗಿದ್ದ ಬಲವಾದ ಅಸ್ತ್ರವೆಂದರೆ ಪಿಡ್ಡನಾಯಕ ಮಾತ್ರ. ಆ ಶಕ್ತಿ ಈ ರೀತಿ ಪೋಲಾಗುತ್ತಿತ್ತು. ಸಂಸ್ಥಾನದಲ್ಲಿ ರೆಸಿಡೆಂಟನ ಆದೇಶ ಜಾರಿಗೆ ಬರದೆ ಹೋದ ಸ್ಥಿತಿ ಇಂಗ್ಲೀಷ್ ಅಧಿಕಾರಿಗಳ ಅರಿವಿಗೆ ಬಂತು. ಸಂಸ್ಥಾನದ ಏರುಪೇರು ವ್ಯವಹಾರಗಳಲ್ಲಿ ಗ್ರಿನ್ಲೀಗೆ ವಿಶ್ರಾಂತಿಯಿಲ್ಲದಂತೆ ಮಾಡಿದವು. ರಾಣಿಯ ಸಾಮರ್ಥ್ಯ ದಿನದಿನೇ ಹೆಚ್ಚಾಗತೊಡಗಿದ್ದು, ಅರಬ್ ರೋಹಿಲರ ದಂಡು ಸಂಸ್ಥಾನದ ಸೈನ್ಯಕ್ಕೆ ಸಾಗರೋಪಾದಿಯಲ್ಲಿ ಸೇರತೊಡಗಿದ್ದನ್ನು ತಡೆಗಟ್ಟಲಾಗದೆ ಹೋದದ್ದು ಗ್ರಿನ್ಲೀ ತನ್ನ ವೈಫಲ್ಯವೆಂದು ಒಪ್ಪಿಕೊಂಡ. ಸಂಸ್ಥಾನದ ಆಡಳಿತದಲ್ಲಿ ಅಶಾಂತಿ ತಲೆದೋರಿತ್ತಲ್ಲದೆ ಹೈದ್ರಾಬಾದ ಬಾಕಿ ಶೀಘ್ರವಾಗಿ ಪಾವತಿಯಾಗದೆ ಇರುವುದಕ್ಕಂತೂ ಗ್ರಿನ್ಲೀ ರೋಸಿ ಹೋಗಿದ್ದ. ಇವೆಲ್ಲ ಸಮಸ್ಯೆಗಳಿಗೆ ಬೇಸತ್ತು ಗ್ರಿನ್ಲೀ ತನ್ನನ್ನು ಈ ಕಾರ್ಯದಿಂದ ಮುಕ್ತಗೊಳಿಸಬೇಕೆಂದು ರೆಸಿಡೆಂಟನಲ್ಲಿ ರಾಜಿನಾಮೆ ಬರೆದಿಟ್ಟ. ಸುರಪುರದ ಸಮಸ್ಯೆಗಳ ಪರಿಹಾರದಲ್ಲಿ ಸಫಲತೆ ಕಾಣದ ಗ್ರಿನ್ಲೀ ತನ್ನ ಶ್ರಮದಲ್ಲಿ ಸಂಪೂರ್ಣ ವೈಫಲ್ಯ ಒಪ್ಪಿಕೊಂಡು ಮೊದಲಿದ್ದ ಮುನಿರಾಬಾದಗೆ ನಿರ್ಗಮಿಸಿದ.

ತನ್ನ ಹುದ್ದೆಗೆ ರಾಜೀನಾಮೆ ನೀಡಿ ಹೋದ ಗ್ರಿನ್ಲೀನ ಸೋಲಿಗೆ ಮೂಲಕಾರಣವೇನೆಂದು ಬ್ರಿಟಿಷ ಮೇಲಾಧಿಕಾರಿಗಳು ಗಂಭೀರವಾಗಿ ಆಲೋಚಿಸಿದರು. ತಮ್ಮ ಸಾಮಂತಿಕೆ ಒಪ್ಪಿಕೊಂಡ ಹೈದ್ರಾಬಾದ ನಿಜಾಮನಿಗೆ ಕ್ರಿ.ಶ.1800 ರ ಒಪ್ಪಂದದ ಪ್ರಕಾರ ಸಹಾಯ ಮತ್ತು ನ್ಯಾಯ ದೊರಕಿಸಿ ಕೊಡುವುದು ತಮ್ಮ ಆದ್ಯಕರ್ತವ್ಯವೆಂದು ಬಗೆದರು. ಆದುದರಿಂದ ಸುರಪುರ ಸಂಸ್ಥಾನದ ಸರ್ವಸಮಸ್ಯೆಗಳಿಗೆ ಸೂಕ್ತ ಪರಿಹಾರ ಒದಗಿಸುವ ಸಧ್ಯದ ಏಕೈಕ ವ್ಯಕ್ತಿಯೆಂದರೆ ಮೆಡೋಸ್ ಟೇಲರ. ಗ್ರಿನ್ಲೀಯ ನಿರ್ಗಮನದಿಂದ ತೆರವಾಗಿದ್ದ ಸ್ಥಾನಕ್ಕೆ ಮೆಡೋಸಟೇಲರನನ್ನು ತಮ್ಮ "ಪೊಲಿಟಿಕಲ ಏಜಂಟ" ನೆಂದು ರೆಸಿಡೆಂಟ್ ನೇಮಕ ಆದೇಶ ಹೊರಡಿಸಿದ.

ಮೆಡೋಸ ಟೇಲರ :

ಕ್ರಿ.ಶ. 1808ರ ಸಪ್ಟೆಂಬರ 25 ರಂದು ಇಂಗ್ಲೆಂಡಿನ ಲಿವರಪೂಲದಲ್ಲಿ ಜನಿಸಿದ ಫಿಲಿಫ್ ಮೆಡೋಸ್ ಟೇಲರ ಧಾರ್ಮಿಕ ಪರಂಪರೆಯಲ್ಲಿ ಬೆಳೆದವನು. ಮನೆಯ ವ್ಯಾಪಾರಿ ವ್ಯಕ್ತಿಯೊಂದಿಗೆ ಲ್ಯಾಟಿನ ಫ್ರೆಂಚ್, ಇಂಗ್ಲೀಷ್, ಭಾಷೆಯಲ್ಲಿ ಶಿಕ್ಷಣ ಪಡೆದು ಪ್ರಾವೀಣ್ಯತೆ ಗಳಿಸಿದ.[132]

ಧಾರ್ಮಿಕ ಶಿಕ್ಷಣದೊಂದಿಗೆ ಗಣಿತಶಾಸ್ತ್ರದಲ್ಲಿ ಬಹು ಆಸಕ್ತಿ ಹೊಂದಿದ ಟೇಲರ ಕೌಟುಂಬಿಕ ಬಡತನದಲ್ಲಿ ಬೆಂಡಾಯತೊಡಗಿದ. ಅದಕ್ಕಾಗಿ ಸ್ವಾಭಿಮಾನ ಜೀವನ ಸಾಗಿಸಲು ಭಾರತದ ಮುಂಬೈ ಬ್ಯಾಂಕರ್ಸ ಕಂಪನಿಯೊಂದರಲ್ಲಿ ಸಹಾಯಕ ಹುದ್ದೆಗಾಗಿ ಅರ್ಜಿ ಹಾಕಿದ. ಸಂದರ್ಶನ ಕರೆಯಮೇರೆಗೆ ಕ್ರಿ.ಶ. 1824 ಸಪ್ಟೆಂಬರ 1ರಂದು ಮುಂಬೈ ಬಂದರಿನಲ್ಲಿ ಬಂದಿಳಿದ. ಆಗ ಟೇಲರನಿಗೆ ಕೇವಲ 16 ವರ್ಷ ವಯಸ್ಸು. ಬಾಂಬೆಯ ಬ್ಯಾಂಕರ್ಸ ಕಂಪನಿಯು ಅತ್ಯಂತ ಚಿಕ್ಕ ಅಂಗಡಿಯೆಂಬುದು ತರುವಾಯ ತಿಳಿದು ಬಹು ಭ್ರಮನಿರಸನಗೊಂಡ. ಬಯಸಿದ ಬಯಕೆ ಈಡೇರಲಿಲ್ಲ. ತನ್ನ ಸಂಬಂಧಿ ನ್ಯೂನಹ್ಯಾಮನಿಂದ ಸಹಾಯಪಡೆದು ಹೈದ್ರಾಬಾದ ನಿಜಾಮನಲ್ಲಿ ಲೆಕ್ಕ ಬರೆದಿಡುವ ಕಾರಕೂನ ಹುದ್ದೆ ಗಿಟ್ಟಿಸಿಕೊಂಡ. ನಿಷ್ಠೆ, ಕರ್ತವ್ಯಪ್ರಜ್ಞೆ, ದಕ್ಷತೆಗಳಿಂದ ಬಹುಬೇಗ ಹೆಸರು ಗಳಿಸಿದ ಟೇಲರ ಕೂಡಲೇ ನಿಜಾಮ ಸರಕಾರದಲ್ಲಿ ಕ್ಯಾಪ್ಟನ್ ಹಾಗೂ ಕರ್ನಲ್ ಹುದ್ದೆಗೆ ಬಡ್ತಿ ಹೊಂದಿದ. ಧೈರ್ಯ, ಸ್ನೇಹ, ಕ್ರಮಬದ್ಧತೆಗೆ ಹೆಸರುವಾಸಿಯಾಗುತ್ತ[133] ಜನ ಸಾಮಾನ್ಯರನ್ನು ಸ್ಪಂದಿಸುತ್ತ 'ಪೋಲಿಸ ಮಹಾನಿರ್ದೇಶಕ' ಹುದ್ದೆಯನ್ನು ಅಲಂಕರಿಸುವಂತಾಯಿತು. ಅಂದು ಭಾರತದಲ್ಲಿ 'ಥಗ' (ಠಕ್ಕ) ಜನಗಳಿಂದ ಶ್ರೀಮಂತ ವ್ಯಾಪಾರಸ್ಥರು ಭಯಭೀತರಾಗಿದ್ದರು. ದಿನನಿತ್ಯ ಕೊಲೆ ಸುಲಿಗೆಗಳು ಕಾನೂನು ಕಣ್ಣಿಗೆ ಮಣ್ಣೆರಚಿ ಸಾಗಿದ್ದವು. ಈ ರಹಸ್ಯ ಭೇಧಿಸಿ ಆಗುವ ಕೊಲೆಗಳಿಗೆ ಕಡಿವಾಣ ಹಾಕಿದ ಟೇಲರ 'ಥಗ' ಜನರನ್ನು ಬಂಧಿಸುವಲ್ಲಿ ಯಶಸ್ವಿಯಾದ. 'ಅಮೀರಅಲಿ' ಎಂಬ ಥಗನನ್ನು ಬಂಧಿಸಿ ಅವನ ಮೂಲಕ ಹೊರಡಿಸಿದ ಕೊಲೆಗಳ ವೃತ್ತಾಂತವನ್ನೇ ಕನ್ಫೆಶನ್ಸ್ ಆಫ್ ಥಗ' (ಥಗನ ಆತ್ಮನಿವೇದನೆ) ಎಂಬ ಕೃತಿ ಬರೆದ.[137] ಸುಮಾರು 7 ನೂರು ಕೊಲೆಗಳಿಗೆ ಕಾರಣರಾದ 'ಥಗ'ರ ದಮನದಿಂದ ಮೆಡೋಸ್ ಟೇಲರನ ಶೌರ್ಯ, ಸಾಹಸದಗಾಥೆ ಬಾರ್ಡೆಯುದ್ದಗಲಕ್ಕೂ ಹಬ್ಬಿತು. ಭಾರತ ಸರಕಾರಕ್ಕೂ ತಿಳಿಯಿತು. ಮೆಡೋಸನ ಶಕ್ತಿ-ಯುಕ್ತಿಗಳನ್ನು ಉಪಯೋಗಿಸಿಕೊಳ್ಳಲು ರೆಸಿಡೆಂಟ ಮುಂದೆ ಬಂದು 'ಇದುವರೆಗೆ ತಲೆನೋವಾಗಿದ್ದ ಸುರಪುರ ಸಂಸ್ಥಾನದ ಸಮಸ್ಯೆಗಳಿಗೆ ಪರಿಹಾರ ಹುಡುಕಲು' ಈತನನ್ನು ಬ್ರಿಟಿಷ ಅಧಿಕಾರಿಯೆಂದು ನಿಯುಕ್ತಿಗೊಳಿಸಿದ.

---

132. ಅಗ್ನಿಅಂಕುರ — ಮಾಸಪತ್ರಿಕೆ, ಅಕ್ಟೋಬರ 5-20, 1993.
133. ಡಾ. ಆರ ಎಸ್. ದುಳಕಿ — ಮೆಡೋಸ ಟೇಲರನ ಜೀವನ ಹಾಗೂ ಕೃತಿಗಳು. ಪುಟ-23.



ಚಿತ್ರ 5 ಕ॥ ಮೆಡೋಸ್ ಟೈಲರ್

ಕೃಪೆ : ಸು.ಸಂ.ಇ.

<u>ಟೇಲರನ ಕಾರ್ಯಾಚರಣೆ :</u> ಕ್ರಿ.ಶ. 1842 ಡಿಸೆಂಬರ 10 ರಂದು ಮೆಡೋಸಟೇಲರ ರೆಸಿಡೆಂಟನ ಆದೇಶದ ಮೇರೆಗೆ ಸುರಪುರಕ್ಕೆ ಪ್ರಯಾಣ ಬೆಳೆಸಿದ. ಸಿಕಂದರಬಾದ ಮೂಲಕ ಸುರಪುರಕ್ಕೆ ಬರುತ್ತಿರುವಾಗ ಗ್ರಿನ್ಲೇಯನ್ನು ಗಬ್ಬೂರ ಗ್ರಾಮದಲ್ಲಿ ಭೇಟಿಯಾಗಿ ಸಂಸ್ಥಾನದ ದಾಖಲೆಗಳನ್ನು ಪಡೆದುಕೊಂಡು, ಸೂಕ್ಷ್ಮ ವಿಷಯಗಳನ್ನೆಲ್ಲ ತಿಳಿದುಕೊಂಡ. ಸುರಪುರದ ಹೊರವಲಯದಲ್ಲಿಳಿದುಕೊಂಡಿದ್ದ ಮೆಡೋಸ ಟೇಲರನಿಗೆ ಸಂಸ್ಥಾನದ ದೀವಾನ ಪಿಡ್ಡನಾಯಕ ಮತ್ತು ರಾಜಪರಿವಾರವೆಲ್ಲ ಬಂದು ಸ್ವಾಗತ ನೀಡಿದರು. ಎಲ್ಲರೊಂದಿಗೆ ಕುಶಲೋಪರಿ ಮಾಡಿದ ಟೇಲರ ತಾನು ಸುರಪುರಕ್ಕೆ ಬಂದ ಮುಖ್ಯ ಉದ್ದೇಶವನ್ನು, ರೆಸಿಡೆಂಟನ ಆದೇಶ ಪತ್ರದೊಂದಿಗೆ ವಿವರಿಸಿದ " ರಾಜ್ಯದ ಹಿತಕ್ಕಾಗಿ ಎಲ್ಲರೂ ಕಚ್ಚಾಡುವದನ್ನು ಬಿಡಬೇಕು. ಇಲ್ಲವಾದರೆ ಸಂಸ್ಥಾನದ ಅಳಿವಿನ ಪ್ರಶ್ನೆ ಅನಿವಾರ್ಯವಾಗಬಹುದೆಂದು " ಎಚ್ಚರಿಸಿದ.

ಮರುದಿನ ಸಂಸ್ಥಾನದ ಭವ್ಯಸ್ವಾಗತದೊಂದಿಗೆ ಸುರಪುರದಲ್ಲಿ ಪ್ರವೇಶಿಸಿದ ಟೇಲರ, ಪಿಡ್ಡನಾಯಕ ಏರ್ಪಡಿಸಿದ ಆಡಳಿತ ವರ್ಗದ ಸಭೆಯಲ್ಲಿ ಪಾಲ್ಗೊಂಡನು. ಅಧಿಕಾರಿಗಳೊಂದಿಗೆ ರಾಜ್ಯದ ವ್ಯವಹಾರಗಳ ಬಗ್ಗೆ ಪ್ರಾಥಮಿಕ ಪರಿಚಯವು ಪಡೆದನು. ತರುವಾಯ ರಾಣಿ-ಈಶ್ವರಮ್ಮನ ಅರಮನೆಗೆ ತೆರಳಿ ರೆಸಿಡೆಂಟ ನೀಡಿದ ಆದೇಶ ಪತ್ರದಲ್ಲಿಯ ಮುಖ್ಯಾಂಶ ಹೇಳುತ್ತ –

" ಹಿಂದಿನ ಮೂರು ವರ್ಷದ ಲೆಕ್ಕಪತ್ರ ಮತ್ತು ನಿಜಾಮನ ಸಾಲವನ್ನು ಕೂಡಲೇ ಪಾವತಿ ಮಾಡಬೇಕಲ್ಲದೆ, ಸಂಸ್ಥಾನದ ಸೈನಿಕರನ್ನೆಲ್ಲ ಪಿಡ್ಡನಾಯಕನ ವಶಕ್ಕೆ ಒಪ್ಪಿಸಬೇಕೆಂದು " ತಿಳಿಸಿದನು. ಇದನ್ನು ಕೇಳಿ ಕುಪಿತಗೊಂಡ ರಾಣಿ ಟೇಲರನೊಂದಿಗೆ ಮಾತಿನ ಚಕಮಕಿಗಿಳಿದಳು. ಆಗ ಈಶ್ವರಮ್ಮನ ಸೂಕ್ಷ್ಮತೆ, ರಾಜ್ಯಪ್ರಜ್ಞೆ, ಹಠಮಾರಿತನವನ್ನು ಒಳಗಣ್ಣಿನಿಂದಲೇ ಅರಿತ ಟೇಲರ ನಿಧಾನವಾಗಿ ಮನವೊಲಿಸಿದ. ನಂತರ ಸಂಸ್ಥಾನದ ಸೈನಿಕರು ತಂಡ ತಂಡವಾಗಿ ಪಿಡ್ಡನಾಯಕನ ಸ್ವಾಧೀನಕ್ಕೆ ಬಂದರು. ಇದರಿಂದ ಪಿಡ್ಡನಾಯಕನಿಗೆ ಸಂತೋಷವಾಯಿತಲ್ಲದೆ ಟೇಲರನಿಗೆ ಬೆಂಬಲಿಸಬೇಕೆಂಬ ಬಯಕೆ ಹುಟ್ಟಿತು. ರಾಜ್ಯದ ಆಳಿತೆಯಲ್ಲಿ ಪಿಡ್ಡನಾಯಕನ ದೀವಾನಿಕೆಯಲ್ಲಿಯೇ ನಡೆಯತೊಡಗಿದಾಗ ಸಹಜವಾಗಿ ರಾಣಿಯ ಪ್ರಭಾವ ಸಂಸ್ಥಾನದಲ್ಲಿ ಗೌಣಗೊಂಡಿತು. ರಾಣಿಯ ರಾಜ್ಯಭಾರಕ್ಕೆ ಮೂಲ ಕಾರಣೀಭೂತನಾಗಿದ್ದ ಚೆನ್ನಬಸಪ್ಪನನ್ನು ಇದೇ ಸಂದರ್ಭದಲ್ಲಿ ಅನೈತಿಕ ಸಂಬಂಧದ ಆರೋಪದ ಮೇಲೆ ಬಂಧಿಸಲಾಗಿತ್ತು. ಇದರಿಂದ ರಾಜ್ಯದ ರಾಜಕೀಯದಲ್ಲಿ ಹೊಸ ಬಿರುಗಾಳಿಯೇ ಎದ್ದಿತು.

ಬ್ರಿಟಿಷರ ಬೆನ್ನೆಲುಬು ಹೊಂದಿ ನಡೆದಾಡುತ್ತಿರುವ ಪಿಡ್ಡನಾಯಕ ಟೇಲರನಿಗೆ ಎಲ್ಲಾ ರೀತಿಯ ನೆರವು ನೀಡತೊಡಗಿದ. ಸಂಸ್ಥಾನದ ರಹಸ್ಯಗಳನ್ನು, ಬೇಡ ಪಡೆಯ ಮುಖ್ಯ ಅಧಿಕಾರಿಗಳನ್ನು ಪರಿಚಯಿಸುವ ಮೂಲಕ ಮರದ ಮೂಲ ಬೇರನ್ನೇ ಟೇಲರನಿಗೆ ಹಿಡಿದುಕೊಟ್ಟ.

<u>ಸಾಲ ಮತ್ತು ವಿಪತ್ತು :</u>

ಸಂಸ್ಥಾನವು ನಿಜಾಮ ಸರಕಾರಕ್ಕೆ 2 ಲಕ್ಷ ರೂ. ಸಾಲದ ಬಾಕಿ ತೀರಿಸಬೇಕಿತ್ತು. ಇದುವರೆಗೆ ಕಂದಾಯದ ಹಣವೆಲ್ಲ ಚೆನ್ನಬಸಪ್ಪ ಮತ್ತು ರಾಣಿ ಈಶ್ವರಮ್ಮನೆ ನೋಡಿಕೊಂಡು ಬಂದದ್ದರಿಂದ ಇದನ್ನು ಅವರೆ ತುಂಬಬೇಕಿತ್ತು. ಅಲ್ಲದೆ ಸಂಸ್ಥಾನದ ಕೆಲವು ದಾಖಲೆಗಳು ಪರಿಶೀಲಿಸಿದಾಗ ಇನ್ನೂ 30 ಸಾವಿರಕ್ಕೂ ಹೆಚ್ಚು ರೂಪಾಯಿ ರಾಣಿಯಿಂದ ಬರುವ ಬಾಕಿ ಇತ್ತು. ಇದೆಲ್ಲವನ್ನು ರಾಣಿ ಕೂಡಲೇ ಕೊಡಬೇಕೆಂದು ಟೇಲರ ಒತ್ತಾಯಿಸತೊಡಗಿದ. ಈಗ ಈಶ್ವರಮ್ಮ ಎದೆಗುಂದಿದಳು. ಹೇಗಾದರೂ ಮಾಡಿ ಒಂದೂವರೆ ಲಕ್ಷ ರೂ. ಕೊಡುವದಾಗಿ ಭರವಸೆಯಿತ್ತಳು. ಭರವಸೆಯ ಪ್ರಕಾರ ಹಣ ಕೂಡಿಸುವಾಗ ಕಣ್ಣೀರು ಕನ್ನೆಗೆ ಬಂದವು. 24ಗಂಟೆಯೊಳಗಾಗಿ ಸಾಲ ಕೊಡದಿದ್ದರೆ ರಾಣಿಯನ್ನು ಬಂಧಿಸುವದಾಗಿ ಮತ್ತು ಅವಳ ಜಹಗೀರುಗಳೆಲ್ಲ ಮುಟ್ಟುಗೋಲು ಹಾಕಿಕೊಳ್ಳುವದಾಗಿ ಟೇಲರ ಗುಡುಗಿದ. ಇದೇ ವೇಳೆಗೆ ಟಾಮಕಿನ್ಸನ್ನನ ನೇತೃತ್ವದಲ್ಲಿ ಸೈನ್ಯ ಸುರಪುರಕ್ಕೆ ಬಂದಿಳಿಯಿತು. ಬೆಚ್ಚಿಬಿದ್ದ ರಾಣಿ ಸಂಸ್ಥಾನ ಕೈಬಿಟ್ಟುಹೋಗಬಾರದೆಂದು ಮೈಮೇಲಿನ ತನ್ನೆಲ್ಲ ಆಭರಣಗಳನ್ನು ಒತ್ತೆ ಇಟ್ಟು 1 ಲಕ್ಷ ರೂ. ಜಮಾಯಿಸಿ "ನಾನು ಜೀವನದಲ್ಲಿ ಬಹಳಷ್ಟು ನೊಂದಿದ್ದೀನಿ. ಕಾಡಿ, ಬೇಡಿ ಕಷ್ಟಕೊಡಬೇಡಿ. ನೀವೊಬ್ಬ ಸಚ್ಚಾರಿತ್ರ್ಯವುಳ್ಳ ವ್ಯಕ್ತಿಯಾಗಿ ನನ್ನ ಈ ಸ್ಥಿತಿಯನ್ನು ಅರ್ಥೈಸಿಕೊಳ್ಳಿ" ಎಂದು ಟೇಲರನಲ್ಲಿ ರಾಣಿ ಕೈಜೋಡಿಸಿ ಕೇಳಿಕೊಂಡಳು. ರಾಣಿಯ ಈ ರೋಧನ ಕಿವಿಯಲ್ಲಿ ಹಾಕಿಕೊಳ್ಳದ ಟೇಲರ 'ಅರಬ', ರೋಹಿಲರನ್ನು ಅನುಮತಿಯಿಲ್ಲದೆ ಸೈನ್ಯಕ್ಕೆ ಸೇರಿಸಿಕೊಂಡಿರುವುದು ಅಪರಾಧ. ಅದಕ್ಕಾಗಿ ಅದರ ತಪ್ಪಿಗೆ 70 ಸಾವಿರ ರೂ. ತೆತ್ತಬೇಕೆಂದು ಗಾಯದ ಮೇಲೆ ಮತ್ತೊಂದು ಬರೆಯೆಳೆದ.

ರಾಣಿಗೆ ಇದರಿಂದ ದಿಕ್ಕೇ ತೋಚದಂತಾಯಿತು. ಇದೇ ಸಂದರ್ಭದಲ್ಲಿ 'ಸಾಲ ವಸೂಲಿಗೆ ಬಂದಿದ್ದ ಗೋಸಿಯಾನನಿಗೆ "ಚೆನ್ನಬಸಪ್ಪನನ್ನು ಬಂಧನದಿಂದ ಮುಕ್ತಗೊಳಿಸಿದರೆ ಮಾತ್ರ ನಿಮ್ಮೆಲ್ಲರ ಸಾಲ ತೀರಿಸುವದಾಗಿ" ಷರತ್ತು ಹಾಕಿದಳು. ಇದರಿಂದ ಮತ್ತಷ್ಟು ವಿಕೋಪಕ್ಕೆ ಹೋಗಬಹುದಾದ ಸನ್ನಿವೇಶ ಅರಿತುಕೊಂಡ ಟೇಲರ ಚೆನ್ನಬಸಪ್ಪನನ್ನು ಲಿಂಗಸೂಗೂರು ನೆರವುನಗೆ

ವರ್ಗಾಯಿಸಿದ.[134] ಮರುದಿನ ಈ ಸುದ್ದಿ ತಿಳಿದ ರಾಣಿ ಅರಮನೆ ತುಂಬ ಬೋರಾಡಿ ಅತ್ತಳು. ಇದ್ಯಾವುದನ್ನೂ ಅರಿಯದ ಬಾಲವೆಂಕಟ ಮೂಗನಾಗಿಯೇ ನೋಡುತ್ತಿದ್ದ.

ಚೆನ್ನಬಸಪ್ಪನ ಗಡಿಪಾರು ಮತ್ತು ಸಂಸ್ಥಾನದ ಕಷ್ಟನಷ್ಟ ಕಂಡ ರಾಣಿ-ಈಶ್ವರಮ್ಮನ ಬೆಂಬಲಿಗರು ರೊಚ್ಚಿಗೆದ್ದರು. ಆದರೆ ಟೇಲರನ ರಕ್ಷಣೆಗೆಂದು ಮದ್ರಾಸದಿಂದ ಆಗಮಿಸಿದ್ದ 26ನೆಯ ರೆಜಿಮೆಂಟು ಅದನ್ನು ಅಡಗಿಸಿತು. ಆಗ ರಾಣಿಯಿಂದ ಸಿಕ್ಕಷ್ಟು ಹಣ ಪಡೆದು, ಉಳಿದ ಸಾಲದಲ್ಲಿ ಅವಳ ಜಹಗೀರುಗಳನ್ನು ಜಪ್ತಿ ಮಾಡಲಾಯಿತು.

ರಾಣಿಯ ಜಹಗೀರು, ಠೀಕಾಪತ್ರದ ಬಗ್ಗೆ ವಿವರವಾದ ಮತ್ತು ಮುಕ್ತವಾದ ತನಿಖೆ ನಡೆಯಿಸಲು ನಾಲ್ಕು ತಿಂಗಳವರೆಗೆ ರಾಣಿಯ ಎಲ್ಲಾ ಆಸ್ತಿಯನ್ನು ಟೇಲರ ತನ್ನ ವಶಕ್ಕೆ ತೆಗೆದುಕೊಂಡನು. ಚೆನ್ನಬಸಪ್ಪನು ನೋಡಿಕೊಳ್ಳುತ್ತಿದ್ದ ಈ ಎಲ್ಲಾ ವ್ಯವಹಾರಗಳ ಮೇಲ್ವಿಚಾರಣೆಯನ್ನು ಮೆಕಾಲೆಯನ ಲಕ್ಷ್ಮಣೀರನಿಗೆ ಒಪ್ಪಿಸಬೇಕೆಂಬ ರೆಸಿಡೆಂಟನ ಸೂಚನೆ ಜಾರಿಗೆ ತರಲಾಯಿತು.

ಸುದೈವ, ತನಿಖೆಯಿಂದ ರಾಣಿ ಮತ್ತು ಚೆನ್ನಬಸಪ್ಪ ನಿರಾಪರಾಧಿಗಳೆಂದು ಸಾಬೀತು ಆಯಿತು. ಚನ್ನಬಸಪ್ಪ ಬಿಡುಗಡೆಗೊಂಡು "ವಸ್ತುತಃ ತನ್ನ ತಪ್ಪುಗಳೇನು ಇಲ್ಲ. ರಾಣಿಯು ನನ್ನನ್ನು ಮಂತ್ರಿಯನ್ನಾಗಿಸುವವಳಿದ್ದಳು. ಅದನ್ನು ತಪ್ಪಿಸಲು ಗೋಸಾಯಿ ನನ್ನ ಮೇಲೆ ಇಲ್ಲಸಲ್ಲದ ಆರೋಪ ಹೊರಿಸಿದನೆಂದು" ಹೇಳಿದ.

ಎಲ್ಲವನ್ನು ಅಧ್ಯಯನ ಮಾಡಿದ ಟೇಲರ ಕೆಲವು ದಿನಗಳ ನಂತರ ಐತಿಹಾಸಿಕ ತೀರ್ಪೊಂದನ್ನು ಪ್ರಕಟಿಸಿದನು. ಅದೇನೆಂದರೆ "ನಜರಾಣಿ ಮತ್ತು ಅದರ ಬಡ್ಡಿಯ ಜೊತೆಗೆ ಪ್ರತಿವರ್ಷ 60 ಸಾವಿರ ರೂ. ಮಾತ್ರ ಇನ್ನು ಮೇಲೆ ನಿಜಾಮ ಸರಕಾರಕ್ಕೆ ಸಂಸ್ಥಾನವು ಕಟ್ಟಬಹುದೆಂದು ತೀರ್ಪು ನೀಡಿದ. ಇದರಿಂದ ಸುರಪುರದ ಮೇಲೆ ಇದುವರೆಗೆ ತೂಗುತ್ತಿದ್ದ ಸಾಲದ ಖಡ್ಗ ತಪ್ಪಿದಂತಾಯಿತು.

<u>ಪಿಡ್ಡನಾಯಕನ ಸಂಬಂಧ ಮತ್ತು ಸಾವು :</u>

ಟೇಲರನ ಮುಖ್ಯ ಉದ್ದೇಶಗಳಲ್ಲಿ ಯಶಸ್ವಿಯಾದ ಒಂದು ವಿಷಯವೆಂದರೆ ಪಿಡ್ಡನಾಯಕನ ದಿವಾನಗಿರಿಯನ್ನು ಭದ್ರಗೊಳಿಸಿದ್ದು. ಇದರಿಂದ ಪಿಡ್ಡನಾಯಕ ಹೈದ್ರಾಬಾದ ಸರಕಾರದಿಂದ 'ರಾಜಾದಿವಾನ್' ಎಂಬ ಬಿರುದು ಪಡೆದ. ಹೈದ್ರಾಬಾದ ಮತ್ತು ಸಂಸ್ಥಾನದ ಮಧ್ಯೆ ಸಮತೋಲನ

---

134. ಪೆರುಮಾಳ ಗುಂಡಾಚಾರ್ಯ – (ನಗರನಾಡದರ್ಶನ)
ಲೇಖನ: ಸುರಪುರ ಸಂಸ್ಥಾನದ ಸಂಕ್ಷಿಪ್ತ ಚಾರಿತ್ರಿಕ ದರ್ಶನ, ಪುಟ-198.

ಕಾಪಾಡುವ ಟೇಲರನ ನೀತಿಗೆ ಪಿಡ್ಡನಾಯಕ ಬಹುವಾಗಿ ಸಹಾಯ ಮಾಡಿದನು. ಸಂಸ್ಥಾನದ ವೆಚ್ಚ, ಸೈನ್ಯ ಕಡಿಮೆ ಮಾಡಬೇಕೆಂಬ ರೆಸಿಡೆಂಟನ ಆದೇಶ ಕಾರ್ಯಗತಗೊಳಿಸಿದನು. ಇದು ಬಹು ದಿನ ನಡೆಯಲಿಲ್ಲ. ಕಾರಣ ಪಿಡ್ಡನಾಯಕ ಅನೇಕ ದುಶ್ಚಟಗಳಿಗೆ ಬಲಿಯಾಗಿ ಸಂಸ್ಥಾನದ ದಕ್ಷಕಾರ್ಯಗಳಲ್ಲಿ ಮುಕ್ತಿ ತೋರತೊಡಗಿದ. ಕುಡುಕ, ಕುತಂತ್ರಿಗಳ ಗುಂಪಿನ ಸಹವಾಸದಿಂದ ಆಡಳಿತವೆಲ್ಲ ಕುಸಿಯಿತು. ಇದರ ಕೆಟ್ಟ ಹೆಸರು ಟೇಲರನ ತಲೆಗೂ ಕಟ್ಟಲಾಯಿತು. ಕರ್ತವ್ಯಗಳಲ್ಲಿ ನಿರ್ಲಕ್ಷ್ಯ ಏರತೊಡಗಿತು.

ಪಿಡ್ಡನಾಯಕ ತಯಾರಿಸಿದ ಸಂಸ್ಥಾನದ 'ಆಯ-ವ್ಯಯ' ಸಂಪೂರ್ಣ ವಿವೇಚನಾರಹಿತವಾಗಿತ್ತಲ್ಲದೆ, ಯೋಜನೆಗಳೆಲ್ಲ ತಲೆಕೆಳಗಾಗಿದ್ದವು. ಕ್ರಿ.ಶ.1844ರ ಹೊತ್ತಿಗೆ ಟೇಲರ ಮತ್ತು ಪಿಡ್ಡನಾಯಕನ ಸಂಬಂಧ ಸಂಪೂರ್ಣ ಹದಗೆಟ್ಟಿತ್ತು. ಅಸಮರ್ಥ ಅಧಿಕಾರಿಗಳ ಕೈಗೊಂಬೆಯಾಗಿ ಒಂದೂವರೆ ಲಕ್ಷ ರೂ. ನೀರಿನಂತೆ ವ್ಯಯಮಾಡಿದ. ಇದನ್ನೆಲ್ಲ ಕಣ್ಣಿಂದ ನೋಡುತ್ತ ಕೂರಲು ಟೇಲರನಿಗೆ ಸಾಧ್ಯವಾಗಲಿಲ್ಲ. ದೀವಾನ ಪದವಿಯಿಂದ ಕಿತ್ತೊಗೆಯಲು ರೆಸಿಡೆಂಟನಿಗೆ ಶಿಫಾರಸು ಕಳಿಸಿದ. ಇದನ್ನು ಕೇಳಿದ ಕೃಷ್ಣಯ್ಯ, ಗೋಸಿಯಾನ, ಪಿಡ್ಡನಾಯಕರಿಂದ ಕೂಡಿದ ಬಣ ಒಳಸಂಚು ನಡೆಸಿ ಟೇಲರನಿಗೆ ಕೊಲೆ ಬೆದರಿಕೆ ಹಾಕಿತು. ತನ್ನ ದುರ್ದೈವವೋ ಅಥವಾ ಸಂಸ್ಥಾನದ ಸುದೈವವೋ ಪಿಡ್ಡನಾಯಕನಿಗೆ ಖಾಯಿಲೆ ಬಂತು. ಅನಾರೋಗ್ಯ ಹೆಚ್ಚಾಗತೊಡಗಿದಂತೆ ಸಂಸ್ಥಾನದಿಂದ ಚಿಕಿತ್ಸೆಗೆಂದು ಬರುತ್ತಿದ್ದ ಹಣವನ್ನು ಟೇಲರನಿಂದ ತಡೆಹಿಡಿಯಲಾಯಿತು. ಆಗ ಕೊನೆಗೆ 1845 ಆಗಸ್ಟ 18ರಂದು ಪಿಡ್ಡನಾಯಕ ಕೊನೆಯುಸಿರೆಳೆದ.

<u>ರಾಣಿಯ ಕೊನೆಯ ದಿನಗಳು:</u>

ಪಿಡ್ಡನಾಯಕನ ಮರಣದಿಂದ ತೆರವಾದ ದಿವಾನಹುದ್ದೆಯ ಅಧಿಕಾರವೆಲ್ಲ ಟೇಲರನೇ ಹಿಡಿದುಕೊಂಡನು. ರಾಜಮುದ್ರೆ, ಮುಖ್ಯದಾಖಲೆಗಳೆಲ್ಲ ಈತನ ವಶದಲ್ಲೇ ಇದ್ದವು. ಇದನ್ನು ರಾಣಿ ಈಶ್ವರಮ್ಮ ಕಸಿಯಬಹುದೆಂದು ಎಣಿಸಿದ. ಕ್ರಿ.ಶ.1843ರ ನಂತರ ರಾಣಿಗೆ ಯಾವ ಜಹಗೀರಗಳ ಮೇಲು ಅಧಿಕಾರ ಉಳಿದಿರಲಿಲ್ಲ. ಎಲ್ಲಾ ಸ್ಥಾನದಿಂದ ವಂಚಿತಳಾಗಿದ್ದಳು. ಆಗ ತನಿಖೆ ನಡೆಸಿದ್ದ ಟೇಲರ ರಾಣಿ ನಿರಪರಾಧಿಯೆಂದು ಸಾಬೀತಾದಾಗ ಮತ್ತೇ ಆವಳ ಜಹಗೀರುಗಳನ್ನು ಅವಳಿಗೆ ವಾಪಸಕೊಟ್ಟನು. ಸಂತೋಷಗೊಂಡ ರಾಣಿ ಆತನೊಂದಿಗೆ ಸೌಹಾರ್ದ ಸ್ನೇಹ ಬೆಳೆಸಿದಳು. ಜೊತೆಗೆ ಚೆನ್ನಬಸಪ್ಪನಿಂದ ಜಮಾಬಂದಿ, ಕಂದಾಯ ವ್ಯವಸ್ಥೆ ಉತ್ತಮಗೊಂಡಿತು. ಅವರೀರ್ವರ ಸಂಬಂಧ

ಅನೈತಿಕವಲ್ಲವೆಂದು ಅರಿತ ಟೇಲರ ರಾಣಿಯ ಹಲವು ಬೇಡಿಕೆಗಳನ್ನು ಈಡೇರಿಸತೊಡಗಿದ. ಅವಾಗಲೇ ಅವಳು ಒತ್ತೆ ಇಟ್ಟ ಆಭರಣಗಳನ್ನು ಬಿಡಿಸಿದ್ದ. ರಾಣಿಗೆ ಮತ್ತೆ ಮೊದಲಿನ ತೇಜಸ್ಸು, ವರ್ಚಸ್ಸು ಪ್ರಾಪ್ತಿಯಾಯಿತು. ಕೆಲವು ದಿನಗಳ ತರುವಾಯ ರಾಣಿ ಈಶ್ವರಮ್ಮ ಟೇಲರ ನೀಡಿದ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡು ಸಂಸ್ಥಾನದ ಮೇಲೆ ಸಂಪೂರ್ಣ ಹತೋಟಿ ಸ್ಥಾಪಿಸಲು ಹವಣಿಸಿದಳೆಂದು ಬ್ರಿಟಿಷ ದಾಖಲೆಗಳು ಆರೋಪಿಸಿವೆ. 'ಬೇಡ' ಸೈನ್ಯದ ಪ್ರೀತಿಗಳಿಸಿ ಬ್ರಿಟೀಷ ವಿರೋಧಿ ಮನೋಭಾವನೆ ತಾಳುವಂತೆ ಪ್ರೇರೇಪಿಸಿದ್ದಾಳೆಂದು ಮತ್ತೊಂದು ಅಪವಾದ ಟೇಲರನಿಗೆ ತಲುಪಿತು. ಅದಾವುದಕ್ಕೂ ಕಿವಿಗೊಡದ ಟೇಲರ ತನ್ನ ಸ್ವಂತ ಕೆಲಸದ ನಿಮಿತ್ಯ ಕ್ರಿ.ಶ. 1846ರಲ್ಲಿ ಹೈದ್ರಾಬಾದಿಗೆ ಹೋದನು. ಇತ್ತ ಸಂಸ್ಥಾನದಲ್ಲಿ ರಾಣಿಗೆ ಯಾರ ತಡೆಯೂ ಇರಲಿಲ್ಲ. ಪೂರ್ವದ ಧೋರಣೆ, ಮೊಂಡುತನವನ್ನೇ ಮುಂದುವರಿಸಿದಳು. ವಿರೋಧಿಸುವ ಓರ್ವ ಮೈದುನ ಪಿಡ್ಡನಾಯಕನು ಈಗಾಗಲೇ ಮೃತಪಟ್ಟು ಒಂದು ವರ್ಷ ಸಮೀಪಿಸಿತ್ತು.

ಚೆನ್ನಬಸಪ್ಪನ ಜೊತೆ, ಸಂಸ್ಥಾನದಲ್ಲಿ ಇನ್ನೋರ್ವ ಸೈನ್ಯಾಧಿಕಾರಿಯಾಗಿದ್ದ ಕಾಸಿಮನ ಸಹಾಯವನ್ನು ಪಡೆದ ರಾಣಿ ಹೈದ್ರಾಬಾದ ನಗರದಿಂದ ರೋಹಿಲ ಮತ್ತು ಅರಬರನ್ನು ತನ್ನ ಸೈನ್ಯಕ್ಕೆ ಸೇರಲು ಆಹ್ವಾನಿಸಿದಳು. ತನ್ನ ಪದವಿಯಿಂದ ಪದಚ್ಯುತಗೊಳಿಸಿದ ಟೇಲರನ ವಿರುದ್ಧ ಸೇಡು ತೀರಿಸಿಕೊಳ್ಳಲು ಸನ್ನದ್ಧಳಾದಳು. ಗುಪ್ತವಾಗಿ ಸೈನ್ಯ ಸಂಗ್ರಹಿಸತೊಡಗಿದ ಕೆಲವು ರಹಸ್ಯ ಪತ್ರಗಳು ಟೇಲರನಿಗೆ ಸಿಕ್ಕವು. ತಡಮಾಡದೆ ಟೇಲರ ಸುರಪುರಕ್ಕೆ ಮರಳಿದ.

ಇದೇ ಸಂದರ್ಭದಲ್ಲಿ ರಾಣಿಗೆ ಮೈತುಂಬ ತುರಿಕೆಯ ರೋಗ ಕಾಣಿಸಿಕೊಂಡಿತು. ಇದು ಅನೈತಿಕ ಸಂಬಂಧದ ಲೈಂಗಿಕ ರೋಗವೆಂದು ಊರಿನ ಜನವೆಲ್ಲ ಮಾತಾಡಿಕೊಳ್ಳಲು ತಡವಿಡಿಯಲಿಲ್ಲ. ಟೇಲರನಿಗೆ ರಾಣಿಯ ಮೇಲೆ ಕ್ರಮ ಜರುಗಿಸಲು ಈ ಸಂದರ್ಭದಲ್ಲಿ ಮನಸ್ಸಾಗಲಿಲ್ಲ. ಭಯಂಕರ ಉರಿಯಿಂದ, ತುರಿಕೆಯಿಂದ ರಾಣಿ ನರಳತೊಡಗಿದಳು. ಇನ್ನೇನು ಸಾಯುವದು ಖಚಿತವೆಂದರಿತ ರಾಣಿ, ಟೇಲರನನ್ನು ಅರಮನೆಗೆ ಬರಹೇಳಿದಳು. ದೊಡ್ಡ ಪೆಟ್ಟಿಗೆಯಲ್ಲಿದ್ದ ನೂರಾರು ಕಾಗದ ಪತ್ರಗಳಲ್ಲಿ ಅಡಗಿಸಿ ಇಟ್ಟಿದ್ದ ತನ್ನ ಮಗ ನಾಲ್ವಡಿ ವೆಂಕಟಪ್ಪನಾಯಕನ ಜಾತಕವನ್ನು ಟೇಲರನಿಗೆ ನೀಡುತ್ತ — " ನೋಡಿ ಸಾಹೇಬ್ರ ಇದು ನನ್ನ ದುರ್ದೈವಿ ಮಗನ ಜಾತಕ. ತನ್ನ 24 ವಯಸ್ಸಿನಲ್ಲಿ ಆತ ತೀರಿಕೊಳ್ಳುತ್ತಾನೆಂದು ಗ್ರಹಬಲ ಹೇಳಿದೆ" ಎಂದು ಅಳುತ್ತ ಆತನ ಮುಂದಿಟ್ಟಳು. ಟೇಲರ ಇದಾವುದನ್ನು ಅರಿತಿರಲಿಲ್ಲ. ಮಂತ್ರಮುಗ್ಧನಾಗಿ ಕಾಗದ, ಪತ್ರ (ಸನದು, ಫರ್ಮಾನು) ಗಳಿಂದ ತುಂಬಿದ ಪೆಟ್ಟಿಗೆ

ಯನ್ನು ರಾಣಿಯಿಂದ ಪಡೆದುಕೊಂಡು ತನ್ನ ಬಂಗ್ಲೆಗೆ ಹೋದ.

ರಾಣಿಯ ಸುದೈವ ಕೆಲವು ದಿನಗಳ ನಂತರ ಆರೋಗ್ಯದಲ್ಲಿ ತುಂಬಾ ಸುಧಾರಣೆ ಕಾಣಿಸಿತು. ಆದರೆ ಮಗನ ಮೇಲೆ ಕ್ಷಣಕ್ಕೊಮ್ಮೆ ಸಿಡಿಮಿಡಿಗೊಳ್ಳುತ್ತಿದ್ದಳು. ಕಾರಣ ಮಗ ಟೇಲರನ ಮಾತನ್ನೇ ಬೆಂಬಲಿಸುವವನಾಗಿದ್ದ. ರಾಣಿಯು 'ಬಂಡಾಯದ'ಲ್ಲಿ ಭಾಗವಹಿಸಲು ಒಪ್ಪಲಿಲ್ಲ. ಇದರಿಂದ ಮಗನನ್ನು ನಂಬದಾದಳು. ರಾಣಿಯು ಎಲ್ಲಾ ಬೇಡ ಜನರಿಗೆ, ಸೈನ್ಯಕ್ಕೆ, ಜಮೀನು ಜಹಗೀರುಗಳನ್ನು ನೀಡಿ ಪ್ರೀತಿಗಳಿಸಿ ಟೇಲರನ ವಿರುದ್ಧ ಬಂಡೇಳಲು ಪ್ರೇರಪಿಸಿದಳು. ಇದೆಲ್ಲವನ್ನು ಹೈದ್ರಾಬಾದಿನಲ್ಲಿ ಕುಳಿತು ಅಭ್ಯಾಸಿಸಿದ ಟೇಲರನು ರೆಸಿಡೆಂಟ ಲಾರ್ಡಹಾರ್ಡಿಂಜನ ಅಪ್ಪಣೆ ಪತ್ರವೊಂದನ್ನು ಹೊತ್ತು ತಂದ. '' ಸಂಸ್ಥಾನದ ಐಕ್ಯತೆ ಹಾಗೂ ಪ್ರಗತಿಗಾಗಿ ರಾಣಿಯನ್ನು ಸುರಪುರದಿಂದ ಗಡಿಪಾರು ಮಾಡಬೇಕೆಂದು '' ಅದರಲ್ಲಿತ್ತು. ರಾಣಿಯ ಪ್ರೇರಣೆಯಿಂದ ಸ್ಫೂರ್ತಿಗೊಂಡು ಸಿಡಿದೆದ್ದ ಮುಗ್ಧ ಬೇಡರು ಬಡ್ಡಿಗತ್ತಿ ಹಿಡಿದು ಬೀದಿ ಮೇಲೆ ಓಡಾಡತೊಡಗಿದರು. ಟೇಲರನಿಗೆ ಇವರನ್ನು ಕಂಡಾಕ್ಷಣವೇ ಒಂದು ಸಲ ಹೆದರಿಕೆ ಯಾಯಿತು. ವನದುರ್ಗದ ಬೇಡರನ್ನು ತಡೆಯಲು ಯಾರಿಂದಲೂ ಶಕ್ತಿ ಸಾಲದಾಗಲಂತೂ ಟೇಲರ ಸಂಪೂರ್ಣ ಭಯಪಟ್ಟ. ಸುತ್ತಲಿನ ಊರುಗಳಿಂದ ಬಂದು ಸುರಪುರದಲ್ಲಿ ನೆರೆದ ಬೇಡರೆಲ್ಲ ರಾಣಿಯ ಬೆಂಗಾವಲಿಗೆ ಬದ್ಧರಾಗಿ ನಿಂತಿದ್ದರು. ಟೇಲರನನ್ನು ರಾತ್ರಿ ಆತನ ಬಂಗ್ಲೆಯಲ್ಲಿಯೇ ಕೊಲ್ಲಬೇಕೆಂದು ಯೋಜನೆ ರೂಪಿಸಲಾಯಿತು. ಈ ಕಾರ್ಯಕ್ಕೆ ಕೆಲವರನ್ನೇ ಮಾತ್ರ ನೇಮಿಸಿ ಉಳಿದವರನ್ನು ರಾಣಿಯ ಅರಮನೆ, ಸುರಪುರ ಬೀದಿ ಮತ್ತು ಗುಡ್ಡಗಳಲ್ಲಿ ಇಡಲಾಗಿತ್ತು.

ಸೂಕ್ಷ್ಮಗ್ರಾಹಿಯಾದ ಟೇಲರ ಈ ಹೊಸ ಬೆಳವಣಿಗೆಯನ್ನು ಕೂಡಲೇ ಅರ್ಥೈಸಿಕೊಂಡ. ಇನ್ನು ತನ್ನ ಅಳಿವು — ಉಳಿವಿನ ಪ್ರಶ್ನೆಗೆ ಕೈಹಾಕುವುದು ಅನಿವಾರ್ಯವಾಯಿತು. ಆದರೂ ಒಂದುಸಲ ಬಂಡೆದ್ದ ಬೇಡರನ್ನು ಪ್ರತ್ಯಕ್ಷ ಮಾತಾಡಿಸಿದರಾಯಿತೆಂದು ಪ್ರೀತಿಯಿಂದ ಸಂಪರ್ಕಿಸಿದ. ಟೇಲರನ ವಿಶ್ವಾಸದ ಮೋಡಿಗೆ ಬಂಡೆದ್ದ ಬೇಡ ಪಡೆ ತಂಡತಂಡವಾಗಿ ಬಂದು ಟೇಲರನಿಗೆ ಶರಣಾದವು. ರಾಣಿಯ ಕಟ್ಟಾ ಅಭಿಮಾನಿಗಳಾದ ವನದುರ್ಗದ ಬೇಡರನ್ನು ತನ್ನಂತೆ ಪರಿವರ್ತಿಸಿಕೊಂಡ ಟೇಲರ ಈ ದಂಗೆಯಲ್ಲಿ ಯಶಸ್ವಿಯಾದ. ರಾಣಿಗೆ ಭಯಂಕರ ಮುಖಭಂಗವಾಯಿತು. ಖಡ್ಗವಿಡಿದು ತಿರುಗಾಡುತ್ತಿದ್ದ ಬೇಡರೆಲ್ಲ ತಮ್ಮ ಸ್ಥಳಗಳಿಗೆ ಹಿಂದಿರುಗಿದರು. ಘಟಿಸಬಹುದಾದ ಭೀಕರ ರಕ್ತದೋಕುಳಿ ತಪ್ಪಿದಂತಾಯಿತು.

ರಾಣಿಯನ್ನು ಸುರಪುರದಿಂದ ಬೇರೆಡೆ ಸ್ಥಳಾಂತರಿಸಿ ಶಾಂತಿ, ಸುವ್ಯವಸ್ಥೆ, ಸುಭದ್ರತೆ ತರಬೇಕೆನ್ನುವ ರೆಸಿಡೆಂಟನ ನೀತಿಯನ್ನು ಜಾರಿಗೆ ತರಲು ಟೇಲರ ತಕ್ಷಣವೇ ಕಾರ್ಯಪ್ರವೃತ್ತನಾದ. ರೆಸಿಡೆಂಟ ಫ್ರೇಜರನೆ ಸ್ವತಃ ಸುರ್ಪುರಕ್ಕೆ ಈ ಕೆಲಸಕ್ಕಾಗಿ ಬಂದ. 17 ತೋಪುಗಳನ್ನು ಹಾರಿಸುವುದರೊಂದಿಗೆ ಫ್ರೇಜರನನ್ನು ಸ್ವಾಗತಿಸಿದ ಸಂಸ್ಥಾನದ ಪರಿವಾರದಲ್ಲಿ ಅಪ್ರಾಪ್ತ ವೆಂಕಟಪ್ಪನಾಯಕನು ಇದ್ದ. ಉತ್ತರಾಧಿಕಾರಿಯಾದ ಆತನೊಂದಿಗೆ ಫ್ರೇಜರ ಬಹಳ ಹೊತ್ತು ಚರ್ಚಿಸಿದ. "ನಿನ್ನ ಅಧಿಪತ್ಯದಲ್ಲಿ ನಡೆಯುವ ಸಂಸ್ಥಾನದ ಸಕಲ ಕಾರ್ಯಕಲಾಪಗಳಿಗೂ ತಮ್ಮ ಕಂಪನಿ ಸರಕಾರ ಸಂಪೂರ್ಣ ರಕ್ಷಣೆಯೊದಗಿಸಿ ಬೆಂಬಲಿಸುವದೆಂದು ವಚನಕೊಟ್ಟ ಫ್ರೇಜರನ ಮಾತಿಗೆ ಮಗು ನಾಲ್ವಡಿ ವೆಂಕಟಪ್ಪನಾಯಕ ಮರುಳಾದ. ತನ್ನ ತಾಯಿ ಈಶ್ವರಮ್ಮನನ್ನು ಸುರಪುರದಿಂದ ಗಡಿಪಾರು ಮಾಡಲು ಪರೋಕ್ಷವಾಗಿ ಒಪ್ಪಿಕೊಂಡು ಬಿಟ್ಟ. ಅರಮನೆಯಿಂದ ಹೊರಟ ರಾಣಿ, ಮಗನ ಮುಖ ನೋಡದೆ ಲೊಪಪಡೆ ಪರಿವಾರದ ಅಳು-ದುಃಖಗಳ ಮಧ್ಯ ತನ್ನ ತವರು ಊರು ರತ್ನಗಿರಿಗೆ ನಡೆದಳು. ಇತ್ತ ಫ್ರೇಜರ ಹೈದ್ರಾಬಾದಿಗೆ ತೆರಳಿದನು. ಎಲ್ಲವೂ ಶಾಂತವಾಗಿ ಸಾಗಿ ಹೋಯಿತು.

ಎರಡು ವರ್ಷಗಳ ವರೆಗೆ ರಾಣಿಯು ರತ್ನಗಿರಿ, ಬೆಂಗಳೂರ, ನೆಲ್ಲೂರು ಮುಂತಾದ ಸ್ಥಳಗಳಲ್ಲಿದ್ದು ಖರ್ಚಿಗಾಗಿ ಮಿತಿಮೀರಿ ಸಾಲ ಮಾಡಿಕೊಂಡಿದ್ದಳು. 1850 ಮೇ 20ರಂದು ರಾಣಿಗೆ ಮತ್ತೆ ಸುರಪುರಕ್ಕೆ ಮರಳಿ ಬರಲು ಆಹ್ವಾನ ಹೋಯಿತು. ಲಿಂಗಸೂಗೂರು ಮೂಲಕ ಸುರಪುರಕ್ಕೆ ಪ್ರಯಾಣಿಸಿದ ರಾಣಿಯನ್ನು ಸ್ವತಃ ಟೇಲರ ಮತ್ತು ರಾಜಕುಮಾರ, ಕೃಷ್ಣಾ ನದಿಯ ವರೆಗೆ ಹೋಗಿ ಸ್ವಾಗತಿಸಿದರು. ರಾಣಿಯು ಆಗ ಟೇಲರನಲ್ಲಿ ಮೂರು ಬೇಡಿಕೆ ಮುಂದಿಟ್ಟಳು.

"ಪ್ರತ್ಯೇಕ ಅರಮನೆ, ಮೊದಲಿನ ಜಹಗೀರು, ಆದ ಸಾಲ ತೀರಿಸಲು ಖಜಾನೆಯಿಂದ ಹಣ". ಆದರೆ ಇವು ಯಾವುದನ್ನು ಟೇಲರ ಒಪ್ಪಲಿಲ್ಲ. ರಾಣಿಯ ಪ್ರತಿಯೊಂದು ಪ್ರಶ್ನೆಗೂ ಟೇಲರನ ಉತ್ತರ ಸಿದ್ಧವಿತ್ತು. "ಇನ್ನು ಮೇಲೆ ರಾಣಿಯ ಜಹಗೀರುಗಳೆಲ್ಲ ನಾಲ್ವಡಿ ವೆಂಕಟಪ್ಪನಾಯಕನ ಮಡದಿಯರಿಗೆ ಸೇರುವವೆಂದು, ಜಹಗೀರುಗಳೆಲ್ಲ ಸಾಲದಲ್ಲಿರುವವೆಂದು ಮತ್ತು ಸಂಸ್ಥಾನದಿಂದ ಕೊಡ ಮಾಡಲು ಉದ್ದೇಶಿಸಿರುವ ಒಂದು ಸಾವಿರ ರೂ. ಮಾಸಾಶನದಲ್ಲಿ ಮಾಡಿದ ಸಾಲ ತೀರಿಸಿಕೊಳ್ಳಬಹುದೆಂದು" ವಿವರಿಸಿದನು. ಇದರಿಂದ 60 ಸಾವಿರ ಸಾಲದ ಭಾರದಿಂದ ದಂಗಾಗಿ ಹೋಗಿದ್ದ ರಾಣಿಗೆ ದಿಕ್ಕೇ ತೋಚಲಿಲ್ಲ. ಇವೆಲ್ಲವುಗಳಿಂದ ಆರೋಗ್ಯವಂತ ರಾಣಿಗೆ ತಕ್ಷಣವೇ ಅನಾರೋಗ್ಯ ಆವರಿಸಿತು. ದೇಹದ ಒಂದು ಭಾಗ ಸಂಪೂರ್ಣ ಲಕ್ವಾ ಹೊಡೆದು ನಿತ್ಯದ ನೋವುತಾಳದಾದಳು. ರಾಣಿಗೆ ಸುರ್ಪುರದಲ್ಲಿ

ಒಂದು ಘಳಿಗೆಯೂ ಇರಲು ಮನಸ್ಸು ಒಪ್ಪಲಿಲ್ಲ. ತಿರುಪತಿ ಯಾತ್ರೆಗೆ ಹೊರಡಲು ಸಿದ್ಧಳಾದಳು. ಟೇಲರ ಯಾತ್ರೆಗಾಗಿ ಎಲ್ಲಾ ಏರ್ಪಾಡು ಮಾಡಿದ, ಅಂಗಸೂಗೂರು ಮಾರ್ಗದಿಂದ ತೆರಳುತ್ತಿರುವಾಗ ಅರ್ಧಾಂಗ ವಾಯುವಿನ ರೋಗದಿಂದ 27ನೇ ಮೇ, 1853ರಂದು ರಾಣಿ ದಾರಿಯಲ್ಲಿಯೇ ನಿಧನ ಳಾದಳು.[135]

ವ್ಯಕ್ತಿತ್ವ ವಿಶೇಷ :

ಪತಿಯ ಮರಣಾನಂತರ ಸಂಸ್ಥಾನದ ಸಾರಥ್ಯ ವಹಿಸಿದ ರಾಣಿ ಈಶ್ವರಮ್ಮ "ತೋರಿದ ಸಾಹಸ, ಸಾಧಿಸಿದ ಸಾಧನೆ ನಿಜಕ್ಕೂ ಶ್ಲಾಘನೀಯ." ಎದುರಿಸಿದ ಸಾವಿರಾರು ಸಮಸ್ಯೆಗಳನ್ನು ಸದೆಬಡಿದು ಸಂಸ್ಥಾನ ಉಳಿಸುವಲ್ಲಿ ಈ ಮಹಿಳೆ ತೋರಿದ ಹೋರಾಟ ಮೆಚ್ಚುವಂಥದ್ದು. ಅರಮನೆಯೊಳಗಿನ ಅಂತಃಕಲಹ ಹತ್ತಿಕ್ಕಿ, ಸಹಾಯಕರಿಂದ ಸಂಸ್ಥಾನ ಮುನ್ನಡೆಸುವಾಗ ಬಂದ ಆರೋಪಗಳು ಎಂಥ ಧೈರ್ಯವಂತರಿಗೂ ದಿಕ್ಕುತಪ್ಪಿಸುವಂಥವು.

ಇದಾವುದಕ್ಕೂ ಧೈರ್ಯಗುಂದದ ರಾಣಿ ಪಿತ್ಯಾನಾಯಕನ ಕಪಟತನ, ಟೇಲರನ ರಾಜ್ಯ ವಿರೋಧಿನೀತಿ, ನಿಜಾಮನ ಸಾಲದ ಶೂಲಗಳನ್ನೆಲ್ಲ ಎದುರಿಸಿ ಬಾಳಿದಳು. ಬಂದ ಎಲ್ಲಾ ದಾಳಿಗೂ ದಿಟ್ಟತನ ತೋರಿಸಿದಾಗ, ಅದನ್ನೇ ಒರಟುತನವೆಂದು ವ್ಯಾಖ್ಯಾನಿಸುವದರಲ್ಲಿ ಅರ್ಥವಿಲ್ಲ. ಟೇಲರ ನೀಡಿದ ಪ್ರತಿಯೊಂದು ಶಿಕ್ಷೆಯು ಈಶ್ವರಮ್ಮನ ಬೆನ್ನುಮೂಳೆಯ ಒಂದೊಂದು ಕೀಲುಗಳು ಕಿತ್ತಿದಂತಾದವು. ನ್ಯಾಯ ಕಸಿದುಕೊಂಡಾಗ, ಆಭರಣ ಒತ್ತೆ ಇಟ್ಟಾಗ, ಗಡಿಪಾರು ಮಾಡಿದಾಗಲೆಲ್ಲ ರಾಣಿಯ ಧೈರ್ಯ ದಿಕ್ಕೆಟ್ಟಿತ್ತು. ಆದರೆ "ಚೆನ್ನಬಸಪ್ಪ, ಕಾಸೀಮರೊಂದಿಗೆ ರಾಣಿಯ ಸಂಬಂಧ ಅನೈತಿಕತೆಯಿಂದ ಕೂಡಿತ್ತು."[136] ಎಂಬ ಆರೋಪ ತಳ್ಳಿಹಾಕಲು ಅವಳಿಂದ ಸಾಧ್ಯವಾಗಲೇ ಇಲ್ಲ. ಅಥವಾ ಸಂದರ್ಭವೇ ಆ ರೀತಿ ಸೃಷ್ಟಿಸಿ ಸಮರ್ಥಿಸಿಕೊಳ್ಳಲು ಸಹಾಯ ಮಾಡಲಿಲ್ಲವೋ ತಿಳಿಯದು. ಆದರೆ ಟೇಲರ ತನಿಖೆ ನಡೆಸಿದಾಗ 56 ಸಾಕ್ಷಿಗಳಲ್ಲಿ ಒಬ್ಬನೂ ರಾಣಿಯ ಶೀಲದ ಬಗ್ಗೆ ಶಂಕೆ ವ್ಯಕ್ತಪಡಿಸಿರಲಿಲ್ಲ.

ಇವೆಲ್ಲವುಗಳಿಗಿಂತ ರಾಣಿಯಲ್ಲಿ ಕಂಡುಬರುವ ಅತ್ಯಂತ ಕಟುಸ್ವಭಾವವೆಂದರೆ "ಅಧಿಕಾರ ದಾಹದಲ್ಲಿ ಮುಗ್ಧ ಮಗನನ್ನೇ ಮರೆತದ್ದು. ಟೇಲರನ ಪಕ್ಷವಹಿಸುತ್ತಾನೆಂಬ ಏಕೈಕ ಕಾರಣದಿಂದ

---

135. ಪೆರುವಳ್ಳ ಗುಂಡಾಚಾರ್ಯ – (ಸಗರನಾಡು ದರ್ಶನ) ಲೇಖನ: ಸು.ಸಂ.ಸಂ ಚಾರಿತ್ರಿಕ ದರ್ಶನ. ಪುಟ–199.

136. FPC 22 Aug 1846 No.97

ಮಗನನ್ನೇ ದೂರವಿಟ್ಟಳು. ಆದುದರಿಂದ ಈಶ್ವರಮ್ಮನ ಕಷ್ಟನಷ್ಟಗಳ ಹೆಚ್ಚಳಕ್ಕೆ ಇದೂ ಒಂದು ಕಾರಣವಾಯಿತು. ಸ್ವಂತ ಮಗನೆ ತಾಯಿಯನ್ನು ಸಂರಕ್ಷಿಸಲು ಹಿಂಜರಿದನೆಂದರೆ ಈಶ್ವರಮ್ಮ ಎಷ್ಟೊಂದು ಕಠೋರಿ, ಹಠಮಾರಿ, ವಿವೇಚನಾರಹಿತ ನೀತಿಯ ಹೆಣ್ಣೆಂದು ಅರ್ಥವಾಗುತ್ತದೆ. ಆದರೂ ಈಶ್ವರಮ್ಮನಲ್ಲಿರುವ ಸಂಘಟನಾ ಚಾತುರ್ಯ ಬಹುಶಃ ಸಂಸ್ಥಾನದ ಯಾವ ರಾಣಿಯರಲ್ಲಿಯೂ ಕಾಣೆವು. 12 ಸಾವಿರ ಮೂಲ ಬೇಡಬಲವನ್ನು ಟೇಲರನ ವಿರುದ್ಧ ತಿರುಗಿಸುವಲ್ಲಿ ಯಶ ಕಂಡಿದ್ದಳು. ಆದರೆ ಕೊನೆಯವರೆಗೆ ಆ ಸ್ಫೂರ್ತಿ ಸೈನ್ಯದಲ್ಲಿ ತುಂಬಲು ಅಸಮರ್ಥಳಾದಳು. ರಾಣಿಯ ಯಾವುದೇ ಕಾರ್ಯವಿರಲಿ ಅವು ಅಲ್ಪ ಸಮಯದವು ಎಂದೆನಿಸುತ್ತದೆ. ಅದೇನೆ ಇದ್ದರೂ ಸಂಸ್ಥಾನ ಎಂದೂ ಮರೆಯದ ಮಹಾರಾಣಿ ಈ ಮಹಿಳೆ.

ಆದರೆ ಇವಳ ಮೇಲಿರುವ ಇನ್ನೊಂದು ಸಂಶಯವೆಂದರೆ "ನಾಲ್ವಡಿವೆಂಕಟಪ್ಪನಾಯಕ ತನ್ನ ನಿಜವಾದ ಮಗನಲ್ಲವಾದುದರಿಂದ ಆತನನ್ನು ಸರಿಯಾಗಿ ನೋಡಿಕೊಂಡಿಲ್ಲವೆನ್ನುವುದು". ಇಲ್ಲಿ ಮಲತಾಯಿಯ ಮನಸ್ಸೇ ಕಾರ್ಯಪ್ರವೃತ್ತನಾಗಿದ್ದುದನ್ನು ಕಾಣುತ್ತೇವೆ.

(10) ನಾಲ್ವಡಿ ವೆಂಕಟಪ್ಪನಾಯಕ : (ಕ್ರಿ.ಶ.1842-1858)

ರಾಜಾ ಕೃಷ್ಣಪ್ಪನಾಯಕ ಮತ್ತು ರಾಣಿ ಈಶ್ವರಮ್ಮರ ಉದರದಿಂದ ಕ್ರಿ.ಶ.1834ರಲ್ಲಿ ಜನಿಸಿದ[137] ನಾಲ್ವಡಿ ವೆಂಕಟಪ್ಪನಾಯಕನು ತಂದೆ ತೀರಿಕೊಂಡಾಗ ಕೇವಲ 8 ವರ್ಷದ ಬಾಲಕನಾಗಿದ್ದ. ರಾಜನ ಮಗ ಯುವ ರಾಜನಾಗುವುದು ಮತ್ತು ಉತ್ತರಾಧಿಕಾರಿಯಾಗಿ ಬರುವುದು ಸಂಸ್ಥಾನದ ಪದ್ಧತಿಯೇನೋ ನಿಜ; ಆದರೆ "ಅಪ್ರಾಪ್ತನ ಅಧಿಕಾರದಿಂದ ಸಂಸ್ಥಾನದ ಸಂರಕ್ಷಣೆ ಸಾಧ್ಯವಾಗದೆಂಬ ಸೂತ್ರ ಹಿಡಿದ ಪಿಡ್ಡನಾಯಕನ ಬಣ ಎದ್ದು ಕುಳಿತಿತ್ತು." ಉತ್ತರಾಧಿಕಾರಿ ಅಪ್ರಾಪ್ತನಾಗಿದ್ದರೆ ಆತನ ಹೆಸರಿನಲ್ಲಿ ಬೇರೊಬ್ಬರು 'ರಾಜಪ್ರತಿನಿಧಿ'ಯಾಗಿ ರಾಜ್ಯಭಾರ ಗೈಯುವ ಹಕ್ಕನ್ನು ರಾಣಿ ಈಶ್ವರಮ್ಮ ಎತ್ತಿ ತೋರಿಸಿದಳು.

ತಂದೆ ತೀರಿದ ತರುವಾಯ ಜೂನ್ 12, 1843ರಂದು ಬಾಲ ವೆಂಕಟನಿಗೆ ಸುರಪುರದ ರಾಜನೆಂದು ನಾಮಕರಣ ಮಾಡಲಾಯಿತು.[138] ಗವರ್ನರ್ ಜನರಲನು ಹೈದ್ರಾಬಾದ್ ರೆಸಿಡೆಂಟನ ಮೂಲಕ 'ನೂತನ ರಾಜನಿಗೆ ಶುಭಕೋರಿ, ಆತ ಪ್ರೌಢಾವಸ್ಥೆಗೆ ಬರುವವರೆಗೂ ಒಳ್ಳೆಯ ಶಿಕ್ಷಣ

---

137. ಫಸಲಿ 1244, ಅಶ್ವಿನಿ ನಕ್ಷತ್ರದ ಆರನೆಯ ದಿನ ಜನನವಾಗಿದೆ. (FPC, 9 MAY 1851, No.54) ಆದರೆ ಈತನ ನಿಜವಾದ ತಾಯಿ ಈಶ್ವರಮ್ಮ ಅಲ್ಲ, ಎರಡನೆಯ ಹೆಂಡತಿ ಲಕ್ಷ್ಮಮ್ಮ ಎಂಬುವವಳು. (FPC 22 SEP 1849 No.102)

138. FPC 7 APR 1843 No.23

ಚಿತ್ರ 6 ನಾಲ್ವಡಿ ರಾಜಾ ವೆಂಕಟಪ್ಪನಾಯಕ

ಕೃಪೆ : ಸು.ಸಂ.ಇ.

ನೀಡಬೇಕೆಂದು ಆದೇಶಿಸಿದನು. ಆಗ ಬ್ರಿಟಿಷರ ಪ್ರತಿನಿಧಿಯಾಗಿ ಸಂಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಮೆಡೋಸ್ ಟೇಲರನ ಮೇಲೆ ಆ ಜವಾಬ್ದಾರಿ ಬಿತ್ತು. ಡಾ: ನೆಲ್ಸನ್, ರಾಮರಾವ್ ಮತ್ತು ಮುಂತಾದ ವಿದ್ವಾಂಸರಿಂದ ವೆಂಕಟನಿಗೆ ಶಿಕ್ಷಣ ನೀಡಿಸುವಲ್ಲಿ ಟೇಲರ ಸಂಪೂರ್ಣ ಕಾಳಜಿ ವಹಿಸಿದನು. ಇಂಗ್ಲೀಷ್, ಉರ್ದು, ಪರ್ಶಿಯನ್, ತೆಲುಗು ಭಾಷೆಗಳಲ್ಲಿ ಪರಿಣತಿ ಪಡೆದು ಮರಾಠಿ ಭಾಷೆಯನ್ನು ಆಳವಾಗಿ ಅಭ್ಯಸಿಸಿದನು. ಯಾಕೆಂದರೆ, ಸಂಸ್ಥಾನದ ಆಡಳಿತ ವ್ಯವಹಾರವೆಲ್ಲ ಮರಾಠಿಯಲ್ಲಿಯೇ ನಡೆಯುತ್ತಿತ್ತು. ಹೀಗಾಗಿ ಮಾತೃಭಾಷೆ ತೆಲುಗು, ಆಡಳಿತಭಾಷೆ ಮರಾಠಿ, ಸಂಪರ್ಕಭಾಷೆ ಇಂಗ್ಲೀಷ ಗಳಾಗಿರುವದರಿಂದ ಪಟ್ಟವೇರುವ ರಾಜನಿಗೆ ಮೂರು-ನಾಲ್ಕು ಭಾಷೆಗಳನ್ನು ಕಲಿಯುವದು ಅವಶ್ಯ ವಿತ್ತು; ಅನಿವಾರ್ಯವೂ ಆಗಿತ್ತು.

ಶಿಕ್ಷಣಶಾಸ್ತ್ರದಲ್ಲಿ ಅಲಕ್ಷ್ಯಯಾಗಿದ್ದ ವೆಂಕಟನಿಗೆ ತನ್ನ ಆರೋಗ್ಯದಲ್ಲೂ ಅಲಕ್ಷ್ಯ ಬೆಳೆಸಿಕೊಂಡಿದ್ದ. ದಷ್ಟಪುಷ್ಟನಾಗಿರದೆ ಸದಾ ಅನಾರೋಗ್ಯದಿಂದ ಬಳಲುತ್ತಿದ್ದ. ಆದರೂ ಸ್ವತ: ಟೇಲರನೇ ವೆಂಕಟಪ್ಪನಿಗೆ ಸಾರ್ವಜನಿಕ ವ್ಯವಹಾರದ ಬಗ್ಗೆ ಮಾಹಿತಿ ನೀಡಿ, ದರ್ಬಾರ ಸಮಯದಲ್ಲಿ ರಾಜ್ಯದ ಹಲವು ಕೊಡು-ಕೊಳ್ಳುವಿಕೆಯನ್ನು ಪರಿಚಯಿಸುತ್ತಿದ್ದ.

ಕುದುರೆ ಸವಾರಿ, ನಾವಿಪ್ರಯಾಣ, ಗರಡಿಮನೆ, ಕತ್ತಿವರಸೆ, ಯುದ್ಧಕಲೆ ಮುಂತಾದವುಗಳಲ್ಲಿ ಬಾಲವೆಂಕಟನನ್ನು ತೊಡಗಿಸಲಾಯಿತು.[139] ಈತನಲ್ಲಿ ಯುವರಾಜನ ಎಲ್ಲಾ ಪ್ರತಿಭೆಗಳನ್ನು ತುಂಬಲು ಪ್ರಯತ್ನಿಸುತ್ತಿದ್ದ ಟೇಲರ "ಪಾಶ್ಚಾತ್ಯ ದೇಶದ ಐತಿಹಾಸಿಕ ಕಥೆಗಳನ್ನು, ಮೈನವಿರೇಳಿಸುವ ಘಟನೆಗಳನ್ನು" ಹೇಳುತ್ತಿದ್ದ. ಇವುಗಳನ್ನೆಲ್ಲ ಕೇಳುತ್ತಿದ್ದ ಮಗುವಿನ ಮುಗ್ಧ ಮುಖದ ಮೇಲೆ ಬದಲಾಗುವ ಗೆರೆಗಳನ್ನು ಟೇಲರ ಅರಿಯದೇ ಇರಲಿಲ್ಲ. ಸಂಸ್ಥಾನಕ್ಕೆ ಓರ್ವ ಸಮರ್ಥ ಆಡಳಿತಗಾರನನ್ನಾಗಿ ರೂಪಿಸಲು ಶ್ರಮಿಸುತ್ತಿದ್ದ ಟೇಲರನಿಂದ ವೆಂಕಟಪ್ಪನಾಯಕನ ವ್ಯಕ್ತಿತ್ವ ವಿಕಾಸಗೊಳ್ಳತೊಡಗಿತು. ತಂದೆಯ ಸ್ಥಾನದಲ್ಲಿ ನಿಂತು ನೀಡಿದ ಈ ಶಿಕ್ಷಣ ಪ್ರಭಾವವೇ ವೆಂಕಟನಿಗೆ ತಾಯಿಯ ವಾತ್ಸಲ್ಯ, ವ್ಯಾಮೋಹಗಳಿಂದ ದೂರ ಸರಿಸಿತು. ಮತ್ತು ಟೇಲರನಿಗೆ ಕೊನೆಯವರೆಗೂ 'ಅಪ್ಪಾ' ಎಂದೇ ಸಂಬೋಧಿಸುವಲ್ಲಿ ಮಹತ್ವದ ಪಾತ್ರ ನೀಡಿತು.

---

139. FPP. A. DEC 1869; Nos. 11-13.

ಸಂಸ್ಥಾನದಲ್ಲಿ ಜರುಗುವ ಪ್ರಮುಖ ಉತ್ಸವಗಳಲ್ಲಿ 'ಮಹಾನವಮಿ' ಅತ್ಯಂತ ಶ್ರೇಷ್ಠವಾದುದು. ಸಂಸ್ಥಾನದ ಸಕಲ ರಾಜಪರಿವಾರ, ಅಧಿಕಾರ ವರ್ಗದ ಉಪಸ್ಥಿತಿಯಲ್ಲಿ ರಾಜನ ಭವ್ಯ ಮೆರವಣಿಗೆ ನಡೆಯುತ್ತಿತ್ತು. ಕ್ರಿ.ಶ. 1844 ಅಕ್ಟೋಬರ 21ರಂದು ಈ ಹಬ್ಬವಿತ್ತು. "ಮೆರವಣಿಗೆಯ ಸಂದರ್ಭದಲ್ಲಿ ಬಾಲವೆಂಕಟನ ಕೊಲೆ ಮಾಡಲಾಗುವದೆಂಬ" ವಾರ್ತೆ ಸುರಪುರ ನಗರದಾದ್ಯಂತ ಹಬ್ಬಿತು. "ಗದ್ವಾಲ ರಾಜರನ್ನು ಇದೇ ರೀತಿ ಕೊಂದು ಹಾಕಿದ ಹಿನ್ನೆಲೆಯಲ್ಲಿ ಸುರಪುರದ ಬಾಲ ರಾಜನ ಸಂರಕ್ಷಣೆ ಬಹು ಜವಾಬ್ದಾರಿಯಿಂದ ಕೂಡಿದೆ" ಎಂದು ಕ್ಯಾಪ್ಟನ್ ಮಾಲ್ಕೋಮನು ಟೇಲರನಿಗೆ ಸುದ್ದಿ ಕಳಿಸಿದ. ತಕ್ಷಣವೇ ಲಿಂಗಸೂಗೂರಿನ ಸೈನ್ಯ ತುಕಡಿಯೊಂದನ್ನು ತರಿಸಿಕೊಂಡ ಟೇಲರ ಅತ್ಯಂತ ವಿಶ್ವಾಸದ ಪಡೆಯನ್ನು ರಾಜನ ರಕ್ಷಣೆಗೆ ನೇಮಿಸಿದ. ರಾಜನಿಗೆ ಎಳ್ಳಷ್ಟು ಧಕ್ಕೆಯಾದರೂ ಅದು ಪಿಡ್ಡನಾಯಕ ಮತ್ತು ರೋಹಿಲ, ಅರಬರ ಮೇಲೆ ಬರುವದೆಂದು ಎಚ್ಚರಿಸಿದ. ಸಂಸ್ಥಾನದ ಸಂಪ್ರದಾಯದಂತೆ ಮಹಾನವಮಿ ಹಬ್ಬದ ಮೆರವಣಿಗೆಯಲ್ಲಿ ರಾಜನ ಸವಾರಿ ತೆಗೆಯಲಾಯಿತು. "ಸುದೈವದಿಂದ ಯಾವುದೇ ದುಷ್ಟ ಘಟನೆಗಳು ನಡೆಯಲಿಲ್ಲ. ಇದರಿಂದ ಟೇಲರನ ಜವಾಬ್ದಾರಿಗೆ ಕಿಂಚಿತ್ತು ಕಳಂಕ ಬರಲಿಲ್ಲ."

ರಾಜನಿಗೆ ಹನ್ನೊಂದು ವರ್ಷ ವಯಸ್ಸು ಪೂರ್ತಿಯಾಗುತ್ತಿರುವಂತೆ 'ಜಾವಳ' ಕಾರ್ಯಕ್ರಮವನ್ನು ಸಹ ಸಂಸ್ಥಾನದ ಸಕಲ ಗೌರವಗಳೊಂದಿಗೆ ಸಿದ್ಧನತೋಟದಲ್ಲಿ ಏರ್ಪಡಿಸಿ ಅನ್ನ ಸಂತರ್ಪಣೆಯೊಂದಿಗೆ ನೆರವೇರಿಸಲಾಯಿತು.[140] ಇವೆಲ್ಲವುಗಳಿಂದ ಟೇಲರನ ಕಾರ್ಯ ದಕ್ಷತೆ ಹೆಚ್ಚಿ ಸಂಸ್ಥಾನದ ಜನರ ಆದರ- ಗೌರವಗಳನ್ನು ಕೆಲವೇ ದಿನಗಳಲ್ಲಿ ಸಂಪಾದಿಸಿದ.

ರಾಜನು 16 ವರ್ಷಕ್ಕೆ ಬಂದನಂತರ ಟೇಲರನು ತನ್ನ ಸಂಪೂರ್ಣ ಗಮನವನ್ನು ಸಂಸ್ಥಾನದ ಆರ್ಥಿಕ ಪ್ರಗತಿಯತ್ತ ಹರಿಸಿದನು. ಆಗ ರಾಜ, ತಾಯಿಯ ಪೋಷಣೆಯಲ್ಲಿ ಬಂದ. "ತಿಮ್ಮಪ್ಪನೆಂಬ ಅಶಿಕ್ಷಿತ ವ್ಯಕ್ತಿಯ ಅಧೀನಕ್ಕೆ ರಾಜನ ರಕ್ಷಣೆ ಬಿಟ್ಟರು. ಇದರಿಂದ ರಾಜನಿಗೆ ಮಾನಸಿಕ, ದೈಹಿಕ ದುರ್ಬಲತೆ ಹೆಚ್ಚಿ ಅನೇಕ ದುಶ್ಚಟಗಳಿಗೆ ಬಲಿಯಾದ "ಸಾಧ್ಯವಾದಷ್ಟು ಸುಶಿಕ್ಷಿತರ ಮಧ್ಯೆ ತರಲು ಎಷ್ಟೋ ಪ್ರಯತ್ನಿಸಿದರು. ದಾರಿ ತಪ್ಪಿದ ವೆಂಕಟ ನನ್ನ ಮಾತು ಕೇಳದಾದ. ಇನ್ನೂ ಸರಿ-ತಪ್ಪು, ನಿರ್ಣಯ-ನಿರ್ಧಾರಗಳು ನಿಲುಕಿರಲಿಲ್ಲ. ಇಂಥ ಸಂದರ್ಭವನ್ನೇ ಉಪಯೋಗಿಸಿಕೊಂಡ ಒಂದು ಗುಂಪು ರಾಜನ ಪ್ರೌಢತ್ವದ ಮೇಲೆ ಕರಾಳ ಪ್ರಭಾವ ಬೀರಿತ್ತೆಂದು" ಟೇಲರ ತನ್ನ ಆತ್ಮಚರಿತ್ರೆಯಲ್ಲಿ ಬರೆದಿದ್ದಾನೆ. ಇದೇ ಸಂದರ್ಭದಲ್ಲಿ ರಾಣಿ ಈಶ್ವರಮ್ಮ ಟೇಲರನ ವಿರುದ್ಧ ಒಳಸಂಚು ನಡೆಸಿ,

---

140. FPC 23 MAY 1845 No.44

ಬೇಡ ಪಡೆಯ ಬಲವನ್ನು ರೊಚ್ಚಿಗೆಬ್ಬಿಸಿದಳೆಂದು ತಿಳಿದು ಬಂದಿತ್ತು. ಇವುಗಳ ಪರಿಹಾರಕ್ಕೆ ರೆಸಿಡೆಂಟನ ಸಲಹೆ ಕೇಳಿ ಟೇಲರ ಪತ್ರವೊಂದನ್ನು ಬರೆದು ರೆಸಿಡೆಂಟ ಫ್ರೇಜರನೆ ಸ್ವತಃ ಸುರಪುರಕ್ಕೆ ಬಂದು ಯುವರಾಜನೊಂದಿಗೆ ಕುಶಲೋಪರಿಗೈದ. ಆತನ ಜಾಣ್ಮೆ, ಪ್ರೌಢಿಮೆಗಳನ್ನು ಪರೀಕ್ಷಿಸಿದ. ಸುರಪುರದ ಅಲ್ಪಸ್ವಲ್ಪ ಅಧಿಕಾರವನ್ನು ಸಧ್ಯವೇ ಯುವರಾಜನಿಗೆ ಒಪ್ಪಿಸಿ ರಾಣಿ-ಈಶ್ವರಮ್ಮಳನ್ನು ಸುರಪುರದಿಂದ ಗಡಿಪಾರು ಮಾಡಲು ಆದೇಶಿಸಿದ.

ಒಂದೇ ಏಟಿಗೆ ಎರಡು ಹಕ್ಕಿಗಳನ್ನು ಹೊಡೆದುರುಳಿಸುವಲ್ಲಿ ರೆಸಿಡೆಂಟ ರೂಪಿಸಿದ ಯೋಜನೆ ಸಾಫಲ್ಯದತ್ತ ಸಾಗಿದವು. ರಾಜನ ಸುತ್ತಲಿರುವ ದುಷ್ಟಗುಂಪು ಆತನ ವ್ಯಕ್ತಿತ್ವವನ್ನೇ ಧ್ವಂಸ ಮಾಡುತ್ತಿರುವದನ್ನು ಟೇಲರ ಸೂಕ್ಷ್ಮವಾಗಿ ಛೇದಿಸಿದ. ತನ್ನೊಂದಿಗೆ ರಾಜ್ಯ ವೀಕ್ಷಣೆಗೆ, ಕಂದಾಯ ವಸೂಲಿಗೆ ಕರೆದೊಯ್ಯುತ್ತೊಡಗಿದ. ರಾಜನು ಸಹ ಕ್ರಮೇಣ ಹೊಂದಿಕೊಂಡು, ರಾಜ್ಯದ ಪ್ರಗತಿ ಬಗ್ಗೆ ಆಸಕ್ತಿ ವಹಿಸಿದ. ಆಗಾಗ್ಗೆ ಟೇಲರ ನೀಡುತ್ತಿದ್ದ ಸಲಹೆಗಳನ್ನು ಪಡೆದು ಪ್ರಶಂಸನೀಯತೆ ಗಳಿಸುತ್ತಿದ್ದ. ಸಂಸ್ಥಾನದ ಆರ್ಥಿಕ ಆಯ-ವ್ಯಯ ಅರ್ಥವಾಗತೊಡಗಿತು. ಜಮೀನುದಾರರು, ಜಹಗೀರದಾರರೆಲ್ಲ ರಾಜನ ರೀತಿಗೆ ಅಂತಹ ಒಪ್ಪಿಗೆಯಿತ್ತರು.

<u>ಯುವರಾಜನಿಗೆ ಅಧಿಕಾರ ವರ್ಗಾವಣೆ :</u>

ಪ್ರೌಢಾವಸ್ಥೆಗೆ ಬಂದ ನಾಲ್ವಡಿವೆಂಕಟಪ್ಪನಾಯಕನಿಗೆ 18 ವರ್ಷ ತುಂಬಿದವು. ಸಂಸ್ಥಾನದ ರಾಜ್ಯನೀತಿ ಪ್ರಕಾರ ಅಧಿಕಾರ ಚಲಾಯಿಸುವ ಅರ್ಹತೆ ಪಡೆದಂತಾಯಿತು. ಟೇಲರನ ವರದಿ ಮೇರೆಗೆ ಗವರ್ನರ ಜನರಲ್‌ನಾದ ಲಾರ್ಡ ಡಾಲಹೌಸಿಯು ಸುರಪುರದ ಅರಸೊತ್ತಿಗೆ ಕುರಿತು ' "ಯುವರಾಜನು ಕ್ರಮೇಣ ಜವಾಬ್ದಾರಿ ವಹಿಸಿಕೊಂಡು ರಾಜ್ಯದ ಆಡಳಿತೆಯನ್ನು ದಕ್ಷ ರೀತಿಯಿಂದ ನಿರ್ವಹಿಸಬೇಕು. ಸಂಸ್ಥಾನದ ಕಾರ್ಯಭಾರ ಸುಗಮವಾಗಿ ಸಾಗಿದರೆ ಬ್ರಿಟೀಷ ಪ್ರತಿನಿಧಿಯು ಕೇವಲ ರಾಜ್ಯದ ಲೆಕ್ಕಪತ್ರ ಮಾತ್ರ ಪರಿಶೀಲಿಸಬಹುದೆಂದು" ಹೈದ್ರಾಬಾದ ರೆಸಿಡೆಂಟನ ಮುಖಾಂತರ ಆಜ್ಞಾಪಿಸಿದ್ದ.[141] ಡಾಲಹೌಸಿಯ ಈ ಆದೇಶ ಪಡೆದ ಟೇಲರ, ಸಂಸ್ಥಾನದ ಎಲ್ಲಾ ಇಲಾಖೆಗಳ ಉಸ್ತುವಾರಿಯನ್ನು ರಾಜನಿಗೆ ವಹಿಸಲು ಒಪ್ಪಿಕೊಂಡನು. ಕಂದಾಯ ವಿಭಾಗದ ಆಡಳಿತೆಯು ಯುವರಾಜನಿಗೆ ಭಾರವಾಗಬಹುದೆಂದು ತನ್ನಲ್ಲೇ ಇಟ್ಟುಕೊಳ್ಳಲು ಯೋಜಿಸಿದನು. ಇದೇ ಸಂದರ್ಭದಲ್ಲಿ ರೆಸಿಡೆಂಟನಿಂದ ಟೇಲರನಿಗೆ ಬಂದ ಸೂಚನೆಗಳೆಂದರೆ " ಯುವರಾಜನಿಗೆ ಆಡಳಿತೆಯ ಎಲ್ಲಾ ಜವಾಬ್ದಾರಿ ಒಪ್ಪಿಸಿ, ಹಣಕಾಸಿನ ವ್ಯವಹಾರವನ್ನು

141. FPC 19 MAR 1852, No.109.

ಬಹುಗಂಭೀರವಾಗಿ ಪರಿಗಣಿಸಬೇಕೆಂದು ಮತ್ತು ರಾಜನು ಸಹ ದುಷ್ಟರನ್ನು ದೂರವಿಟ್ಟು ಸಾರ್ವಜನಿಕ ಕಲ್ಯಾಣ ಕಾರ್ಯಗಳಲ್ಲಿ ತೊಡಗಬೇಕೆಂದು ಸಲಹೆ ಮಾಡಿದ.

ಹೈದ್ರಾಬಾದನಲ್ಲಿ ನೂತನ ರೆಸಿಡೆಂಟನಾಗಿ ಕರ್ನಲ ಲೋ ಅಧಿಕಾರ ವಹಿಸಿಕೊಂಡ ಮೇಲೆ ಬೇರೇನು ಬದಲಾವಣೆಯಾಗಲಿಲ್ಲ. ಗೌರ್ನರ ಜನರಲನ ಆದೇಶಗಳನ್ನು ಕಾರ್ಯಗತಗೊಳಿಸಲು ಪ್ರಯತ್ನಿಸತೊಡಗಿದ. ಅಲ್ಲದೆ " ರಾಜನಿಗೆ ಅಧಿಕಾರ ವರ್ಗಾಯಿಸಿದಾಕ್ಷಣವೇ ಟೇಲರ ಅಲ್ಲಿಂದ ನಿರ್ಗಮಿಸಬೇಕಾಗುತ್ತದೆ. ಇದರಿಂದ ಯುವರಾಜನಿಗೆ ರಾಜ್ಯಾಧಿಕಾರದಲ್ಲಿ ನಿಯಂತ್ರಣ ತಪ್ಪಿ ಸುರಪುರವನ್ನು ದಿವಾಳಿಯತ್ತ ನೂಕಬಹುದೆಂದು ಯೋಜಿಸಿ, ಸಂಸ್ಥಾನದ ಸಮಗ್ರ ಪ್ರಗತಿಗೆ ಬ್ರಿಟಿಷ ಪ್ರತಿನಿಧಿಯ ಮಾರ್ಗದರ್ಶನ ಸುರಪುರಕ್ಕೆ ಅವಶ್ಯವಿದೆ. ಆದರ ಸೂಕ್ತ ಬಳಕೆ, ಸರಳ ಆಡಳಿತಕ್ಕಾಗಿ ಟೇಲರನನ್ನೇ ಪೊಲಿಟಿಕಲ' ಏಜಂಟನೆಂದು ಸುರಪುರದಲ್ಲಿಯೇ ಇರಿಸುವದು ಹಿತಕರವೆಂದು" ನಿರ್ಣಯಿಸಿದನು. ಟೇಲರನ ಈ ಸೇವೆಗೆ ಸಂಸ್ಥಾನವೇ ಮಾಸಿಕ 1500 ರೂ. ಸಂಬಳ ನೀಡಬೇಕೆಂದು ಸಹ ನಿರ್ದೇಶಿಸಲಾಯಿತು.[142]

ಕಕ್ಕ ಪಿಡ್ಡನಾಯಕನ ದಿವಾನಗಿರಿ, ತಾಯಿ ಈಶ್ವರಮ್ಮನ ಆಡಳಿತಗಳನ್ನು ಅತಿ ಸಮೀಪದಿಂದ ನೋಡಿ ಬಲ್ಲವನಾಗಿದ್ದ ವೆಂಕಟಪ್ಪನಾಯಕ ಇತ್ತೀಚೆಗೆ ಟೇಲರನ ಹಿಡಿತದಿಂದ ತಪ್ಪಿಸಿಕೊಂಡಿದ್ದನು. ಸಧ್ಯವೇ ರಾಜ್ಯದ ರಾಜ್ಯಭಾರವೆಲ್ಲ ತನ್ನ ಜವಾಬ್ದಾರಿಗೆ ಸೇರುತ್ತಿರುವುದನ್ನು ಕೇಳಿ ಆತಂಕನಂದಗೊಂಡ. ಸಂಸ್ಥಾನದ ಆರ್ಥಿಕ ಪರಿಸ್ಥಿತಿಯು ಅಲ್ಪಸ್ವಲ್ಪ ಪರಿಣಯ ಹೊಂದಿರುವದರಿಂದ ರಾಜ್ಯಾಡಳಿತವು ಚಿಕ್ಕಪುಟ್ಟ ಬೇಡು ಸಹ ಕಡಿತವನಾದುದರಿಂದ " ಟೇಲರನನ್ನು ರಾಜಕೀಯ ಪ್ರತಿನಿಧಿಯೆಂದು ಸುರಪುರದಲ್ಲಿ ಇಟ್ಟುಕೊಳ್ಳಲು ಇಷ್ಟಪಡಲಿಲ್ಲ. ಅಲ್ಲದೆ 1500 ರೂ. (ಸಂಸ್ಥಾನದ 1850 ರೂ.) ಸಂಬಳ ನೀಡಲು ಸಾಧ್ಯವಿಲ್ಲ" ವೆಂದನು. ಇದರಿಂದ ರೆಸಿಡೆಂಟ ಕುಪಿತನಾದರೂ ಗೌರ್ನರ ಜನರಲನ ಆದೇಶಕ್ಕೆ ತಲೆಬಾಗಿ ಮೌನವಹಿಸಬೇಕಾಯಿತು. ಲಾರ್ಡ ಡಾಲಹೌಸಿಯೂ ಸಹ ರಾಜನ ಉತ್ತರದಿಂದ ನೊಂದುಕೊಂಡನಾದರೂ ಭಾರತ ಸರಕಾರದ ನಿಲುವಿಗೆ ಬದ್ಧನಾಗಬೇಕಾಗಿತ್ತು. " ಕೂಡಲೇ ರಾಜನಿಗೆ ರಾಜ್ಯಾಧಿಕಾರ ವಹಿಸಬೇಕೆಂದು, ಒಂದುವೇಳೆ ಸಂಸ್ಥಾನದಲ್ಲಿ ಮೊದಲಿನಂತೆ ಅವ್ಯವಸ್ಥೆ ಉದ್ಭವವಾದರೆ ಕಂಪನಿ ಸರಕಾರ ಕೈ ಹಾಕಬಹುದೆಂದು" ಮತ್ತೊಂದು ಆದೇಶ

---

142. FPC 15 APR 1853, Nos.58-58.

ಹೊರಡಿಸಿದನು. ಆದೇಶದ ಪ್ರಕಾರ ಮೆಡೋಸ್ ಟೇಲರನು ಸಂಸ್ಥಾನದ ಸಮಸ್ತ ಜವಾಬ್ದಾರಿಯನ್ನು ಕ್ರಿ.ಶ.1853 ಜೂನ್ 30 ರಂದು ನಾಲ್ವಡಿ ವೆಂಕಟಪ್ಪನಾಯಕನಿಗೆ ವಹಿಸಿದನು.[143] ಸುರಪುರ ದರ್ಬಾರದಲ್ಲಿ ಕಿಕ್ಕಿರಿದು ಸೇರಿದ್ದ ರಾಜಪರಿವಾರ ಮತ್ತು ರಾಜ್ಯದ ಆಡಳಿತಾಧಿಕಾರಿಗಳೆದುರು ಯುವರಾಜನಿಗೆ ರಾಜ್ಯಾಧಿಕಾರವನ್ನು ವಹಿಸುವಾಗ ಸಂಸ್ಥಾನದ ಸಂಪ್ರದಾಯದಂತೆ ಸಕಲ ಗೌರವಗಳಿಂದ ಸತ್ಕರಿಸಲಾಯಿತು. ಈ ಸಂದರ್ಭದಲ್ಲಿ ರಾಜನ ತಂದೆ ಮತ್ತು ತಾಯಿಯರಿಲ್ಲದೊಂದೆ ಆವತ್ತಿನ ಸುದಿನಕ್ಕೆ ದುರ್ದೈವ.

<u>ನಿರ್ಗಮನ :</u>

ಡಿಸೆಂಬರ 10, 1842ರಂದು ಸುರಪುರ ಸಂಸ್ಥಾನದಲ್ಲಿ ಬ್ರಿಟಿಷರ ರಾಜಪ್ರತಿನಿಧಿಯಾಗಿ ಪ್ರವೇಶಿಸಿದ್ದ ಮೆಡೋಸ್ ಟೇಲರ ಹತ್ತು ವರ್ಷಗಳ ದೀರ್ಘ ಆಡಳಿತದ ತರುವಾಯ ಈಗ ಸುರಪುರದಿಂದ ನಿರ್ಗಮಿಸುತ್ತಿದ್ದಾನೆ. ರಾಜ್ಯದ ಕೃಷಿ, ಕಂದಾಯ, ನ್ಯಾಯ, ಆರೋಗ್ಯ, ಆಯ-ವ್ಯಯ, ಕೈಗಾರಿಕೆ, ವ್ಯಾಪಾರ, ಕಾನೂನು, ಧಾರ್ಮಿಕ ನೀತಿ, ಶಿಕ್ಷಣ ಮುಂತಾದವುಗಳಲ್ಲಿ ಆಮೂಲಾಗ್ರ ಬದಲಾವಣೆ ತಂದು ನವನಾಗರಿಕತೆ ನಿರ್ಮಿಸಿದ್ದ ಟೇಲರನನ್ನು ಬಿಟ್ಟುಕೊಡಲು ಸಂಸ್ಥಾನದ ಜನತೆಯ ಮನಸ್ಸು ಒಪ್ಪಲಿಲ್ಲ; ಇಟ್ಟುಕೊಳ್ಳಬೇಕೆಂದರೆ ಸಂಬಳ ನೀಡಲು ಸಂಸ್ಥಾನದಲ್ಲಿ ಹಣವಿಲ್ಲ. ಹೀಗಾಗಿ ತುಮುಲದ ಮಧ್ಯೆ ಕಣ್ಣೀರಿನ ಕಾಣಿಕೆಯೊಂದಿಗೆ ಟೇಲರನನ್ನು ಬೀಳ್ಕೊಡತೊಡಗಿದರು. ಟೇಲರನ ಮೇಲೆ ಸಂಸ್ಥಾನದ ಜನರು ಎಷ್ಟೊಂದು ಪ್ರೀತಿ ವಿಶ್ವಾಸವಿಟ್ಟಿದ್ದರೆನ್ನಲು ಕ್ರಿ.ಶ.1857ನೆಯ ಆಗಸ್ಟ 27ರಂದು ನಳದುರ್ಗದ ನಾಗರಿಕರು ಹಾಗೂ ರಾಜ್ಯದ ರಾಜ ಪರಿವಾರ ನೀಡಿದ ಮಾನಪತ್ರವೇ ಸಾಕ್ಷಿ. ಅದರಲ್ಲಿ "ನೀವು ಬಂದಂದಿನಿಂದ ನಾವು ಶ್ರೀಮಂತರಾಗಿದ್ದೇವೆ. ಸುಖಶಾಂತಿಗಳಾಗಿದ್ದೇವೆ. ನಮ್ಮ ಆಸ್ತಿ ರಕ್ಷಿಸಿ, ಆರೋಗ್ಯ ಸುಧಾರಿಸಿ ಮಹಾನ ಉಪಕಾರ ಮಾಡಿದ ನಿಮಗೆ ಏನೆಲ್ಲಾ ಕೊಟ್ಟರೂ ಸಾಲದು. 1842ರಲ್ಲಿದ್ದ ಅರಾಜಕತೆ ದೂರಮಾಡಿದಿರಿ. ನಮಗೊಂದು ನಾಗರಿಕ ಜೀವನವನ್ನು ರೂಪಿಸಿಕೊಟ್ಟ ನಿಮಗೆ ಸಾವಿರ ನಮನಗಳು" ಎಂದೆಲ್ಲಾ ಅವರ ಗುಣ, ಕಾರ್ಯಶೀಲತೆ ಹೊಗಳಿ, ಕೊಂಡಾಡಿದ ಈ ಪತ್ರಕ್ಕೆ 1123 ಜನ ಗಣ್ಯರೈತರು 986 ಜನ ರಾಜಪರಿವಾರದವರು ಹಾಗೂ ಪ್ರಮುಖ ನಾಗರಿಕರು ಸಹಿ ಹಾಕಿದ್ದಾರೆ. ಅಲ್ಲದೆ ರಾಜನ ರುಜು, ಮುದ್ರೆಯು ಇದರ ಮೇಲಿದೆ.[144] ಈ

---

143. SML Pp.279-81.
144. ಡಾ.ಆರ್.ಎಸ್.ಕುಳಕಿ – ಮೆಡೋಸಟೇಲರನ ಜೀವನ ಹಾಗೂ ಕೃತಿಗಳು. ಪುಟ-15-16.

ಪತ್ರದಿಂದ ಟೇಲರನ ಹಿರಿಮೆ, ಪರಿಶ್ರಮಗಳಲ್ಲದೆ ಜನತೆಯ ಮೇಲಿದ್ದ ಆತನ ಪ್ರೀತಿ, ನ್ಯಾಯ, ನೀತಿಗಳನ್ನು ಅರ್ಥೈಸಬಹುದಾಗಿದೆ.

ಮಿಸ್'' ಫಾಮರ್' ಟೇಲರನ ಹೆಂಡತಿ,ಮಕ್ಕಳು ಇದ್ದರು. ಕುಟುಂಬ ನಡೆಸಲು ಗುಡ್ಡದ ಮೇಲೊಂದು ಬಂಗ್ಲೆಯನ್ನು ಕಟ್ಟಿಕೊಂಡಿದ್ದ. ಆದರೆ ಆಡಳಿತೆಯ ಭಾರದಲ್ಲಿ, ಪ್ರದೇಶ, ಪರಿಸರದ ವಾತಾವರಣದಲ್ಲಿ ಮಡದಿ ಮಕ್ಕಳೆಲ್ಲ ಅಕಾಲ ಮೃತ್ಯುವಿಗೆ ಬಲಿಯಾಗಿದ್ದರು.[145] ಇಷ್ಟೆಲ್ಲಾ ತೊಂದರೆ ಅನುಭವಿಸಿದ್ದರೂ ಈ ಸಂಸ್ಥಾನದ ಮೂಲಕ ಭಾರತದ ಸಂಸ್ಕೃತಿಯನ್ನು ಅಪಾರವಾಗಿ ಪ್ರೀತಿಸುತ್ತಿದ್ದ. ಇಲ್ಲಿಯ ಬದುಕನ್ನು ಕುರಿತು ಇಂಗ್ಲೆಂಡ ಪತ್ರಿಕೆಗಳಿಗೆ ಬರೆಯುತ್ತಿದ್ದ. ಕಲೆ, ವಾಸ್ತು, ಶಿಲ್ಪ, ಸಾಹಿತ್ಯವನ್ನು ಮೆಚ್ಚಿ ತಾರಾ, ಟಿಪ್ಪೂ, ಕ್ವೀನ್ಸನಂಥ ಐತಿಹಾಸಿಕ ಕೃತಿಗಳನ್ನು ಕೊಟ್ಟ. ಸಂದಿಗ್ಧ ಸಂದರ್ಭ, ಆಡಳಿತೆಯ ಅವಿಶ್ರಾಂತ ಬದುಕಿನಲ್ಲೂ ಸಾಹಿತ್ಯ ರಚಿಸಿ, ತಾನೊಬ್ಬ ಅಸಾಮಾನ್ಯ ವ್ಯಕ್ತಿ ಎಂದು ನಿರೂಪಿಸಿದ. ಸಂಸ್ಥಾನದ ಸಮಗ್ರ ಸಾಂಸ್ಕೃತಿಕ ಲೋಕವನ್ನು ತನ್ನ ಆತ್ಮಕಥೆಯಲ್ಲಿ ಲೇಖಿಸಿದ್ದಾನೆ. ಪ್ರಾಮಾಣಿಕ ಆಡಳಿತಗಾರ, ಶಿಸ್ತು-ಶೀಲ ಸಂಪನ್ನ ಇತಿಹಾಸಕಾರನಾದ ಟೇಲರ ಸಂಸ್ಥಾನದ ಹಸಿವು ಹಿಂಗಿಸಬಲ್ಲ ವಿರಾಟಸ್ವರೂಪಿಯಾಗಿದ್ದ. " ಇಂಥ ಮಹಾನ್ ವ್ಯಕ್ತಿತ್ವದ ವ್ಯಕ್ತಿ ಟೇಲರ,ಇಂದು ಸುರಪುರವನ್ನು ಬಿಟ್ಟು ಹೋಗಿದ್ದಾನೆ. ಹೃದಯ ಕಲುಕುವ 'ಕಣ್ಣೀರು' ಜನತೆಯಿಂದ ಕಾಣಿಕೆಯಾಗಿ ಬರುತ್ತಿತ್ತು.' ಎಂದು ಕೃತಿಯ ಸಾಲುಗಳು ಮನದುಂಬಿ ಬಣ್ಣಿಸಿವೆ. ಈ ಮಧ್ಯೆ ಟೇಲರ ನಿರ್ಗಮಿಸಿದ.

1. <u>ದುರಾಡಳಿತೆಯತ್ತ, ಧೂರೆಯ ದರ್ಬಾರ :</u>

ರಾಜನೀತಜ್ಞ ಮೆಡೋಸ ಟೇಲರ ಸುರಪುರದಿಂದ ನಿರ್ಗಮಿಸಿದ ನಂತರ ಯುವರಾಜನ ಆಡಳಿತ ಆರಂಭವಾಯಿತು. ಅಲ್ಪವಯ, ಮತ್ತು ಅನನುಭವಿಯಾದ ರಾಜ ವಿಶಾಲ ಸಂಸ್ಥಾನದ ಅಧಿಕಾರವನ್ನು ತನ್ನ ತೋಳತೆಕ್ಕೆಯಲ್ಲಿ ತೆಗೆದುಕೊಳ್ಳಲು ಅಸಮರ್ಥನಾದ. ಗಡ್ಡಿಪಿಡ್ಡನಾಯಕನಿಂದ ಗಳಿಸುತ್ತ, ಗಡಿ ವಿಸ್ತರಿಸಿಕೊಳ್ಳುತ್ತ ಬಂದ ಸುರಪುರ ಸಂಸ್ಥಾನವು ಇಂದು ದುರ್ಬಲ ರಾಜನ ದುರಾಡಳಿತಕ್ಕೆ ಸಿಕ್ಕು ನರಳತೊಡಗಿತು. ಆಡಳಿತ ಯಂತ್ರದ ನಿಸ್ತೇಜದಿಂದ ಸಂಸ್ಥಾನದ ಕಲ್ಯಾಣ ಕಾರ್ಯವೆಲ್ಲ ಕುಸಿದವು. ಜಮೀನುದಾರ, ಜಹಗೀರುದಾರರೆಲ್ಲ ತಾವು ಎತ್ತಿಕೊಂಡ ಭೂತೆರಿಗೆಗಳನ್ನು ಖಜಾನೆಗೆ ತುಂಬದೆ ವಂಚಿಸಿದರು. ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟು, ಹೈದ್ರಾಬಾದಕ್ಕೆ ಸಾಲ

---

145. SML p-188

ತೀರಿಸದಂತಾಯಿತು. ಸಂಸ್ಥಾನದ ಸೈನ್ಯಕ್ಕೆ ಸಂಬಳ ನೀಡದೆ ಸೈನಿಕರೆಲ್ಲ ಸಿಡಿದೇಳುವಂತ ವಾತಾವರಣ ನಿರ್ಮಾಣಗೊಂಡಿತು. ಅನನುಭವಿ ನೌಕರರನ್ನು ಬದಲಿಸಿ ತನಗೆ ಬೇಕಾದ ಅತಿ ವಿನಯಿಗಳನ್ನು ನೇಮಿಸಿದ್ದು ಸಂಸ್ಥಾನದ ದುಸ್ಥಿತಿ ಸಾಯುವದಕ್ಕೆ ಮೂಲ ಕಾರಣವಾಯಿತು. ದೈನಂದಿನ ದರ್ಬಾರ ಆಡಳಿತದಲ್ಲಿ ಪಾಲ್ಗೊಳ್ಳದೆ, ಮಂತ್ರಿಗಳ ಮೇಲೆ ಎಲ್ಲಾ ಬಿಟ್ಟದ್ದರಿಂದ ಅವರೆಲ್ಲ ಸಹಜವಾಗಿ ಸಂಸ್ಥಾನದಲ್ಲಿ ಪ್ರಭಾವಿಗಳಾಗಿ ಮೆರೆಯತೊಡಗಿದರು. ದಿನಗಟ್ಟಲೇ ಕಾಡಿಗೆ ಬೇಟೆಗೆಂದು ಹೋಗುವದು, ಮರಳಿ ಬಂದ ಮೇಲೆ ನಿಯಂತ್ರಣ ತಪ್ಪುವಷ್ಟು ಪಾನಮತ್ತನಾಗುವದು, ನಿತ್ಯದ ದಿನಚರಿಯೆನಿಸಿತು. 'ನೀತಿ ಹೇಳುವ ತಾಯಿ, ನಡೆ ಕಲಿಸುವ ತಂದೆ' ಇವರಾರೂ ಇಲ್ಲದ ತರುಣ ಯುವರಾಜನಿಂದ ಸಂಸ್ಥಾನವು ದುರ್ಭಾಗ್ಯದ ದವಡೆಗೆ ಸೇರಿತು. ಸಂರಕ್ಷಣೆಯೆಂಬುದು ಸಂಸ್ಥಾನದಿಂದ ದೂರ ಸರಿದಾಗ ಪ್ರಜೆಗಳೆಲ್ಲ ಕಂಗಾಲಾದರು. ಇವೆಲ್ಲವುಗಳಿಗೆ ಕಾರಣ ರಾಜನನ್ನು ಸುತ್ತುವರೆದ ದುಷ್ಟಕೂಟ ಇಂಥ ಕಟುಕ, ಕೆಡುಕರ ಚಕ್ರವ್ಯೂಹದಲ್ಲಿಯೇ ರಾಜನಿಗೆ ಆನಂದ ಸಿಕ್ಕಿತು.

<u>ಕ್ಯಾಂಬೆಲ್ ವರದಿ :</u>

ಕ್ರಿ.ಶ.1854ರ ಎಪ್ರಿಲ 12ರಂದು 'ದೋಆಬ್' ಪ್ರದೇಶಕ್ಕೆ ಬ್ರಿಟಿಷರ ರಾಜಕೀಯ ಪ್ರತಿನಿಧಿಯೆಂದು ನೇಮಕವಾಗಿ ಬಂದಿದ್ದ ಕ್ಯಾಪ್ಟನ್ ಕ್ಯಾಂಬೆಲನಿಗೆ ಸುರಪುರ ಸಂಸ್ಥಾನದ ಆಡಳಿತದ ಬಗ್ಗೆಯೂ ವರದಿ ಮಾಡಲು ನಿರ್ದೇಶಿಸಲಾಗಿತ್ತು. ಇತ್ತೀಚಿನ ಘಟನೆಗಳನ್ನೆಲ್ಲ ಸಂಗ್ರಹಿಸಿದ ಕ್ಯಾಂಬೆಲ ದೀರ್ಘವಾದ ವರದಿಯೊಂದನ್ನು ಸಿದ್ಧಪಡಿಸಿದ. ಅದರಲ್ಲಿ "ಯುವರಾಜನ ಅಧಿಕಾರಾವಧಿಯಲ್ಲಿ ಸಂಬಂಧಿಕರೆಲ್ಲರೂ ಸಂಸ್ಥಾನದ ಒಡೆಯರಾಗಿದ್ದಾರೆ. ಸಂಪತ್ತೆಲ್ಲ ಖಾಸಗಿಯಾಗಿ ಕೊಳ್ಳೆ ಹೊಡೆಯುತ್ತಿರುವದರಿಂದ ನೌಕರರು, ವರ್ತಕರು ನಿಜಾಮನ ಮತ್ತು ಕಂಪನಿ ಸರಕಾರದ ಪ್ರಾಂತ್ಯಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆ. ವೇಶ್ಯೆಯರಲ್ಲದೆ, ಸಲಿಂಗ ಕಾಮುಕರೂ ರಾಜ ಬಲಿಯಾಗಿದ್ದು, ಖಜಾನೆಯ ಹಣವೆಲ್ಲ ಇಂಥ ದುಶ್ಚಟಗಳಿಗೆ ವ್ಯಯಿಸುತ್ತಿದ್ದಾನೆ. ಟೇಲರ ತಂದಿದ್ದ ಜನಕಲ್ಯಾಣ ಕಾರ್ಯಗಳೆಲ್ಲ ಈಗ ಸ್ಥಗಿತವಾಗಿವೆ. ಆಸ್ಪತ್ರೆ ಮುಚ್ಚಿದ ಪ್ರಯುಕ್ತ ರೋಗಿಗಳಿಗೆ ಶುಶ್ರೂಷೆಯೇ ಇಲ್ಲದಂತಾಗಿದೆ. ಬರಗಾಲದ ದವಡೆಗೆ ಸಿಲುಕಿರುವ ಸಂಸ್ಥಾನದಲ್ಲಿ ಕಳ್ಳರ ಕಾಟ ಅತಿಯಾಗಿದೆ. ಕಾನೂನು ವ್ಯವಸ್ಥೆ ಕುಸಿದಿದ್ದು, ಎಲ್ಲೆಲ್ಲೂ ಅಶಾಂತಿ ತಲೆದೋರಿದೆ. ಸೇವಕರ, ಸೈನ್ಯದ, ಸಿಬ್ಬಂದಿಯ ಸಂಬಳಕ್ಕಾಗಿ ಸಿಕ್ಕ ಶ್ರೀಮಂತರಲ್ಲೆಲ್ಲ ಸಾಲ ತಂದು ತೀರಿಸಿದರೂ ಇನ್ನೂ 2 ಲಕ್ಷ ರೂ.ಬಾಕಿ ಉಳಿದಿದೆ.

55 ಜನರಲ್ಲಿ ಎತ್ತಿದ 32 ಸಾವಿರ ರೂ. ಸಾಲ ರಾಜನ ತಲೆಯ ಮೇಲಿದೆ. ಬರಗಾಲ, ಕ್ಷಾಮ, ದರೋಡೆಗಳಿಂದ ಸಧ್ಯದ ರಾಜ್ಯಾದಾಯ ಒಂದೂವರೆ ಲಕ್ಷ ರೂ.ಕ್ಕೆ ಇಳಿದಿದೆ." ಎಂದು ಕ್ಯಾಪ್ಟನ್ ಕ್ಯಾಂಬೆಲ ಸುರಪುರದ ಸಮಗ್ರ ಪರಿಚಯ ವರದಿ ಮಾಡಿದ್ದ.

<u>ಸಂಬಂಧಿಕರೆಲ್ಲ ಶತ್ರುಗಳಾಗಿ :</u>

ಕಕ್ಕನಾದ ಪಿಡ್ಡನಾಯಕನಿಗೆ ಮೂರು ಜನ ಮಕ್ಕಳಿದ್ದರು. ಟೇಲರನು ಇವರ ತಂದೆಯ ಜಹಗೀರುಗಳನ್ನೆಲ್ಲ ಇವರಿಗೆ ಬಿಟ್ಟುಕೊಟ್ಟಿದ್ದ. ಆದರೆ ನಾಲ್ವಡಿ ವೆಂಕಟಪ್ಪನಾಯಕನು ರಾಜ್ಯಾಧಿಕಾರ ವಹಿಸಿಕೊಂಡ ಕೆಲವೇ ದಿನದಲ್ಲಿ ಕಕ್ಕನ ಮಕ್ಕಳ ಜಹಗೀರುಗಳನ್ನೆಲ್ಲ ಕಸಿದುಕೊಂಡು ಅವರನ್ನು ಸಂಸ್ಥಾನದಿಂದ ಹೊರಗಟ್ಟಿದ. ಇವರೆಲ್ಲ ಇಂಗ್ಲೀಷರ ಆಳ್ವಿಕೆಗೆ ಒಳಪಟ್ಟ ದೇವದುರ್ಗದಲ್ಲಿ ಆಶ್ರಯ ಪಡೆದರು. ಆಗ ಅಲ್ಲಿ ಲೆಪ್ಟಿನೆಂಟ್ ಟೇಲರನು ಡೆಪ್ಯುಟಿ ಕಮೀಷನರ್ ಆಗಿದ್ದ. ಈತನ ಕೈಕೆಳಗೆ ಝುರ್ಲಿಹಾಳಿ ಅಂಕಪ್ಪನಾಯಕ ಅಮಲ್ದಾರನೆಂದಿದ್ದ. ಪಿಡ್ಡನಾಯಕನ ಮಕ್ಕಳೆಲ್ಲ ಅಂಕಪ್ಪನಾಯಕನ ಬೆಂಬಲ ಪಡೆದರು. ಸಂಸ್ಥಾನದಿಂದ ಪದಚ್ಯುತಗೊಂಡ ಮುದ್ದೋಲಭೀಮರಾಯನು ಸಹ ಇವರೊಂದಿಗೆ ಒಳಸಂಚಿನ ಪ್ರಮುಖ ವ್ಯಕ್ತಿಯಾಗಿದ್ದ. ಇವರೆಲ್ಲರೂ ಸುರಪುರದ ನಾಲ್ವಡಿ ವೆಂಕಟಪ್ಪನಾಯಕನ ವಿರುದ್ಧ ಪಿತೂರಿ ನಡೆಸಿದರು.

ಕರ್ನಲ್ ಡೇವಿಡ್ಸನ್ನನೆಂಬ ರೆಸಿಡೆಂಟನು ಕ್ರಿ.ಶ.1855 ಏಪ್ರಿಲ್ 1 ರಂದು ಭಾರತ ಸರಕಾರದ ಕಾರ್ಯದರ್ಶಿಗೆ ಬರೆದ ಪತ್ರವೊಂದರಲ್ಲಿ "ಸುರಪುರದ ರಾಜನ ಬಂಧುಗಳೆಲ್ಲ ದೇವದುರ್ಗದಲ್ಲಿ ಬಂದು ಬಂಡು ಮಾಡಲಾರಂಭಿಸಿದ್ದಾರೆ. ಅವರ ಜಹಗೀರು ಕಸಿದುಕೊಂಡದ್ದೇ ಬಂಡಿಗೆ ಮೂಲಕಾರಣ. ಅಲ್ಲದೆ ಮೋತೀರನ ಸಾಲ ಮತ್ತು ನಿಜಾಮನಿಗೆ ಬರತಕ್ಕ 40 ಸಾವಿರ ರೂ. ಖಂಡಣಿ ರಾಜನಿಂದ ಇನ್ನೂ ಬಂದಿಲ್ಲ" ವೆಂದು ತಿಳಿಸಿರುವನು. ದೇವದುರ್ಗದ ಅಂಕಪ್ಪನಾಯಕನ ನೇತೃತ್ವದಲ್ಲಿ ರಾಜನ ವಿರುದ್ಧ ನಡೆದ ಒಳಸಂಚು ತೀವ್ರ ಸ್ವರೂಪಕ್ಕೇರಿತು. ಲೆ.ಕ. ಟೇಲರ ಇದೆಲ್ಲವನ್ನೂ ಸರಕಾರಕ್ಕೆ ವರದಿಸುತ್ತಲೇ ಇದ್ದನು. ಇದಕ್ಕೆಲ್ಲ ಮುದ್ದೋಲಭೀಮರಾಯನ ಚಿಂತೆಯೇ ಕಾರಣವೆಂದು ತಿಳಿದ ರಾಜ, ಮರಳಿ ಮತ್ತೆ ಆತನಿಗೆ ಸುರಪುರದ ದಿವಾನ ಪದವಿ ನೀಡಿದನು. ದಿವಾನ ಹುದ್ದೆಯೇರಿದರೂ ಮನದೊಳಗಿನ ಕ್ರೋಧ ಮಾತ್ರ ತಣ್ಣಗಾಗಿರಲಿಲ್ಲ.[146] ಚಂಚಲಚಿತ್ತದ ರಾಜನ ದ್ವಂದ್ವನೀತಿಗೆ ಸಂಸ್ಥಾನದ ಒಳಹೊರಗೆಲ್ಲ ಹೀಗೆ ವೈರಿಗಳೇ ತುಂಬಿಹೋದರು.

---

146. ಕೈಫಿಯತ್ತು. ನಂ.6.

2. ಭಾರತದಲ್ಲಿ ಬಂಡಾಯದ ಬಿರುಗಾಳಿ :

ವರ್ತಕ ಹಣೆಪಟ್ಟಿ ಹೊತ್ತು ಭಾರತಕ್ಕೆ ಬಂದ ಇಂಗ್ಲೀಷರು ಇಲ್ಲಿ ವಸಾಹತು ಸ್ಥಾಪಿಸಿಕೊಂಡರು. ಅದರ ಸಂರಕ್ಷಣೆಗೆ ಸೈನ್ಯವ ಕಟ್ಟಿಕೊಂಡರು. ಅಧಿಕಾರದಾಹ ಹೆಚ್ಚಿತು. ಅರಸರ ಮುಗ್ಧ ಮನಸ್ಸು ಅರ್ಥೈಸಿಕೊಂಡು ತಮ್ಮ ಸೀಳಿ ಆಳುವ ನೀತಿಯನ್ನು ಅದರ ಮೇಲೆ ಪ್ರಯೋಗಿಸಿದರು. ಆಗ ಇದ್ದ ಅರಸರ ಸಂಸ್ಥಾನಗಳ ಸಂಖ್ಯೆ 558 ರಿಂದ 600ಕ್ಕೆ ತಲುಪಿತ್ತು.[147] ಇವೆಲ್ಲ ಸಂಸ್ಥಾನಗಳು ಕಡ್ಡಾಯಕ್ಕೊಳಗಾದವು. ಕೊನೆಗೆ ಬ್ರಿಟಿಷರೆ ಇವರಿಗೆ ನ್ಯಾಯ ನೀಡುವ ನ್ಯಾಯಾಧೀಶರಾಗಿ ಬಂದರು. ಒಕ್ಕಟ್ಟು ಹೊಡೆದು ಚಕ್ಕಟ್ಟು ಆವರಿಸಿತು. ಗೊಂದಲಕ್ಕೀಡಾದ ಸಂಸ್ಥಾನಗಳೆಲ್ಲ ಬ್ರಿಟೀಷರ ನೆರಿಗಿನಲ್ಲಿ ಬಿದ್ದವು. ಹೀಗೆ ಉತ್ತರ ಹಿಂದುಸ್ತಾನವೆಲ್ಲ ಕ್ರಿ.ಶ.1800ರ ಸುಮಾರಿಗೆ ಇಂಗ್ಲೀಷರ ವಶವಾಗಿತ್ತು. ಸಂಸ್ಥಾನ ಕಳೆದುಕೊಂಡ ಸಂಸ್ಥಾನಿಕರೆಲ್ಲ ದಿಕ್ಕು ಪಾಲಾದರು. ಆಂಗ್ಲರ ದುರಾಡಳಿತ ಆರಂಭಗೊಂಡು ಸ್ವದೇಶ ಸಂಪತ್ತೆಲ್ಲ ಲೂಟಿಯಾಗತೊಡಗಿತು. ಆರ್ಥಿಕ ಸ್ಥಿತಿ ಹದಗೆಟ್ಟು ಹೋಗಿತ್ತು. ಭಾರತೀಯರ ಧಾರ್ಮಿಕ ಗ್ರಂಥಗಳ ಮೇಲೆ ಬ್ರಿಟೀಷರ ಸವಾರಿ ಯಥೇಚ್ಛವಾಯಿತು. ಭೂಕಂದಾಯದ ಬರ್ಬರವಸೂಲಿ, ಸಾಮ್ರಾಜ್ಯಶಾಹಿನೀತಿ, ಪಿಂಡಾರಿ ಆಡಳಿತಗಳಿಂದ ಜನ ರೊಚ್ಚಿಗೆದ್ದರು.[148] ಇದರ ಪರಿಣಾಮವೇ ಸಶಸ್ತ್ರದಂಗೆ.

ಭಾರತದಲ್ಲಿ ಬೇರೂರಿದ್ದ ಬ್ರಿಟೀಷ ಕೂಟವನ್ನು ಕಿತ್ತೊಗೆಯಲು ಕ್ರಿ.ಶ.1780ರಲ್ಲಿ ಒಕ್ಕೂಟವೊಂದು ರಚನೆಯಾಯಿತು. ನಾನಾಫಡ್ನವೀಸ, ನಿಜಾಮ, ಸಿಂಧ್ಯರೆಲ್ಲ ಒಕ್ಕೂಟದ ನೇತೃತ್ವವಹಿಸಿದರು. ಆಗ ಹೈದರ ಅಲಿ ದಕ್ಷಿಣದ ಪರವಾಗಿ ಸದಸ್ಯತ್ವ ಸ್ವೀಕರಿಸಿದ.[149] ಇಲ್ಲಿಂದ ಆರಂಭವಾದ ಬ್ರಿಟಿಷರ ವಿರೋಧಿ 'ರಣಬಲ' ಟಿಪ್ಪುವಿನ ಮುಖಂಡತ್ವದಲ್ಲಿ ಮುನ್ನಡೆಯಿತು.[150] ಉತ್ತರ ಭಾರತದಲ್ಲಿ ಸಂನ್ಯಾಸಿಗಳ ದಂಗೆ, ಚುಆರ್ ಬಂಡಾಯ, ವೀರಪಾಂಡ್ಯ ಕಟ್ಟಬೊಮ್ಮನ ಬಂಡಾಯ, ಒರಿಸ್ಸಾದ ಪೈಕರದಂಗೆ, ದಿವಾನವೇಲು ತಂಬಿಯ ಬಂಡಾಯ, ಆಂಧ್ರದ ತಾಲೂಕದಾರರ ದಂಗೆ ಜಾಟರಬಂಡಾಯ, ಭಿಲ್ಲರ ಬಂಡಾಯ, ಬುಂದೇಲರ ಬಂಡಾಯಗಳು ಬ್ರಿಟಿಷರ ದಮನ ನೀತಿವಿರುದ್ಧ ಎದ್ದ ಮೊದಲ ಬಂಡಾಯಗಳಾಗಿವೆ.[151] ಅದರಂತೆ ನಸೀರಾಬಾದ, ಬರೇಲಿ, ಕಾನ್ಪುರ, ಝಾನ್ಸಿ,

---

147. ಡಾ. ಶಿವಾನಂದ ಗುಬ್ಬಣ್ಣವರ — ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ — ಎಂಬ ಪುಸ್ತಕದಲ್ಲಿ ಬಟ್ಲರ ಹಾಗೂ ಸೈಮನ್ ಆಯೋಗದ ಪ್ರಕಾರ 562, ರಾಜ್ಯ ಮಂತ್ರಿಮಂಡಳ ಭಾರತ ಸರಕಾರದ ಪ್ರಕಾರ 558, ಭಾರತೀಯ ಘಟನಾ ಸುಧಾರಣೆ ಜಂಟಿ ಸಂಸದೀಯ ಸಮಿತಿ ವರದಿ ಪ್ರಕಾರ 600 ಸಂಸ್ಥಾನಗಳು ಇದ್ದವು.
148. ತಾರಾಚಂದ, ಅನು: ಡಾ. ಜಿ. ಎಸ್. ದೀಕ್ಷಿತ. ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿ (ಸಂಪುಟ-1)
149. ದಿವಾಕರ ಆರ್.ಆರ್ — ಕರ್ನಾಟಕದ ಪರಂಪರೆ. ಸಂಪುಟ-2. ಪುಟ-250. ಪುಟ-77.
150. ಮೊಹಿಬ್ಬುಲ ಹಸನ್ (ಅನು: ಸವೇತನಹಳ್ಳಿ ರಾಮರಾಯ) — ಟಿಪ್ಪೂ ಸುಲ್ತಾನನ ಇತಿಹಾಸ. ಪುಟ-215.
151. ನಾ. ಮುಂಡಯ್ಯ — ಅನು: ಆಧುನಿಕ ಭಾರತದ ನಿರ್ಮಾತೃಕರು. ಪುಟ-12-4.

ಲಖ್ನೋ, ಆರಾ, ಜಗದೀಶಪುರ, ಗ್ವಾಲಿಯರ ಪ್ರದೇಶಗಳಿಂದ ಸಂಸ್ಥಾನ ಕಳೆದುಕೊಂಡ ಆಳರಸರ ನೇತೃತ್ವದಲ್ಲಿ ಸಿಡಿದೆದ್ದ ಬೃಹತ್ ಬಂಡಾಯ[152] ದೇಶಾದ್ಯಂತ ಬಿಸಿ ಏರಿಸಿತು.

1857ರಲ್ಲಿ ಉತ್ತರದ ಕಾನಪುರ, ಮೀರತ್, ದೇಹಲಿ, ಲಖನೌ, ಕಾಶಿ, ಅಲಹಾಬಾದ ಮುಂತಾದೆಡೆ ನಡೆದ ಸ್ವಾತಂತ್ರ್ಯದಂಗೆ[153] ಬಿಸಿರಕ್ತದ ತರುಣರಿಗೆ ಬಡಿದೆಬ್ಬಿಸಿದವು. ಇವೆಲ್ಲವುಗಳ ಹಿಂದೆ ಭೂಗತನಾಗಿಯೇ ನಾನಾಸಾಹೇಬ ಕ್ರಾಂತಿಕಿಡಿ ಹೊತ್ತಿಸುತ್ತಿದ್ದ.

ಕರ್ನಾಟಕದಲ್ಲಿ ಕಿತ್ತೂರ, ಹಲಗಲಿ, ಮುಂಡರಗಿ, ನರಗುಂದ, ಕೊಪ್ಪಳ, ಮುಂತಾದ ಕಡೆ ಕಂಪನಿ ಸರಕಾರದ ಕ್ರೂರ ನೀತಿವಿರುದ್ಧ ರಣದ ಕಿಡಿಯನ್ನೇ ಸಿಡಿಸತೊಡಗಿದರು. ಅಬಲರೆಲ್ಲ ಅಧೀನರಾದಂತೆ ಸಬಲ-ಸಂಸ್ಥಾನಗಳೆಲ್ಲ ಸೈನ್ಯ ಕಟ್ಟುತ್ತಾ ಸಾಗಿದವು. 1857 ಮೇ 27 ರಂದು ಒಂದೇ ಬಾರಿಗೆ ದಂಗೆ ಏಳಲು[154] ಹಮ್ಮಿಗಿ, ಗಂಗಾಪೂರ, ವಡ್ಡರಹಳ್ಳಿ, ಸಿಂಗಟಾಲೂರ, ಬಂಕಾಪೂರ, ನವಲಗುಂದ, ಕುಕನೂರ, ಕುಂದಗೋಳ ಪಡೆಗೆ ಮುಂಡರಗಿ ಭೀಮರಾಯ ಕರೆನೀಡಿದ್ದ. ಶಸ್ತ್ರ ಬಲಕೂಡಿಸಿ ಸಜ್ಜುಗೊಳಿಸಿದ್ದ.

ಹೈದ್ರಾಬಾದ ಸಂಸ್ಥಾನವು ಬ್ರಿಟಿಷ ಸಾಮ್ರಾಜ್ಯವಾದದ ಒಂದು ಬಲಿಷ್ಠ ಕೋಟೆ ಮತ್ತು ಮುಸ್ಲಿಂ ಆಳಿಗ ಮಾನ್ಯದ ಕೇಂದ್ರವಾಗಿತ್ತು. 1857ರ ಸಮರಕ್ಕೆ ಮೊದಲೇ ಕೊಪ್ಪಳದ ಜಮೀನುದಾರ ವೀರಪ್ಪ 1818ರಲ್ಲಿ ಬ್ರಿಟಿಷರ ವಿರುದ್ಧ ಬಹಾದ್ದೂರ ಬಂಡ ಕೋಟೆಯಲ್ಲಿ ದಂಗೆಯೆದ್ದು ಗಲ್ಲಿಗೇರಿದ್ದ.[155] ಇದೇ ನಿಜಾಮನ ಪ್ರದೇಶದ ವ್ಯಾಪ್ತಿಗೆ ಬರುವ ಸುರಪುರವು ಬೇಡರೆಲ್ಲ ಬಂಡಾಯಗಳಿಂದ ಪ್ರೇರಣೆ ಪಡೆದು ಸ್ವಾತಂತ್ರ್ಯದ ಕಿಡಿಯನ್ನು ತನ್ನೊಳಗೆಯೂ ಹೊತ್ತಿಸುವಲ್ಲಿ ಆಸಕ್ತಿ ತಾಳಿತು.

3. <u>ಸಂಸ್ಥಾನದಲ್ಲಿ ಬಂಡಾಯದ ದಂಡು :</u>

ಕ್ರಿ.ಶ.1829ರಲ್ಲಿ ಬ್ರಿಟಿಷರ ವಿರುದ್ಧ ಹೋರಾಡಲು[156] ಸಜ್ಜಾದ ಸಂಗೊಳ್ಳಿ ರಾಯಣ್ಣನಿಗೆ ಸುರಪುರದ ರಾಜಾ ಕೃಷ್ಣಪ್ಪನಾಯಕ 300 ಜನ ಬೇಡರ ಪಡೆಯನ್ನು ಬೆಂಬಲಿಸಲು ಕಳಿಸಿಕೊಟ್ಟಿದ್ದ.[157] ಪರೋಕ್ಷವಾಗಿ ಆರಂಭವಾದ-ಈ ರೀತಿಯ ಬಂಡಾಯ ರಾಣಿ-ಈಶ್ವರಮ್ಮನ

---

152. ಸಾ. ಮಂಡಯ್ಯ – ಅನು: ಆಧುನಿಕ ಭಾರತದ ನಿರ್ಮಾಪಕರು, ಪುಟ-16.
153. ಕೊರಟಿ ಶ್ರೀನಿವಾಸರಾವ್ – ಮುಂಡರಗಿ ಭೀಮರಾಯ, ಪುಟ-22.
154. –ಅದೇ–, ಪುಟ-39.
155. ಹೈದ್ರಾಬಾದ ಸ್ವಾತಂತ್ರ್ಯಸಂಗ್ರಾಮದ ಚರಿತ್ರೆ, ಸಂ-1. ಪುಟ-10.
156. ಬಸವಿಕವಿ – ಸಂಗೊಳ್ಳಿರಾಯನಾಯಕನ ಬಂಡಾಯ ಲಾವಣಿ.
157. ನಾಯಕ ಪರಮಾರ್ಕರ – ಸುರಪುರದ ವೆಂಕಟಪ್ಪನಾಯಕ, ಪುಟ-7.

ಕಾಲಕ್ಕೆ ಪ್ರತ್ಯಕ್ಷ ಸ್ವರೂಪ ಪಡೆದುಕೊಂಡಿತು. ಇವಳ ಅಧಿಕಾರಾವಧಿಯಲ್ಲಿ ಸಂಸ್ಥಾನದ ಮೂಲ ಬೇಡ ಪಡೆಯೊಂದಿಗೆ ರೋಹಿಲೆ, ಅರಬರ ದಂಡು ಬಂಡಾಯವೆದ್ದಿತ್ತು. ಇದೆಲ್ಲವನ್ನು ಕಣ್ಣಾರೆ ಕಂಡಿದ್ದ ನಾಲ್ವಡಿ ವೆಂಕಟನಾಯಕನಿಗೆ ತನ್ನ ಸಂಸ್ಥಾನದ ಆಂತರಿಕ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ ಮಾಡುತ್ತಿರುವ ಇಂಗ್ಲೀಷರ ವಿರುದ್ಧ ಸಿಡಿದೇಳಲು ಸಿದ್ಧನಾದ. ಜಮಖಂಡಿ, ಮುಧೋಳ ಸಂಸ್ಥಾನದ ವ್ಯಾಪ್ತಿಯಲ್ಲಿ ಬಂಡಾಯದ ಬಿರುಗಾಳಿ ಎಬ್ಬಿಸಿದ ಹಲಗಲಿಯ ಬೇಡರ ದಂಗೆಯಂತೂ[158] ಇಂಗ್ಲೀಷರಿಗೆ ನೀಡಿದ ಮೊದಲ ರಣವೀಳ್ಯವಾಗಿತ್ತು. ಅದರ ಮೇಲೆ ಶಸ್ತ್ರನಿಷೇಧ ಕಾಯ್ದೆ ಜಾರಿಗೆ ತಂದಾಗ ಬೇಡರ ಭಯಂಕರ ವಿರೋಧ ಎದುರಿಸಬೇಕಾಯಿತು.[159] ಶಸ್ತ್ರಸಜ್ಜಿತ ಹೋರಾಟದಲ್ಲಿ ಬ್ರಿಟಿಷರ ದಾಳಿಗೆ ತುತ್ತಾದ ಹಲಗಲಿಯ ಬೇಡರು ಕೊನೆಗೆ ಸುರಪುರದಲ್ಲೇ ಆಶ್ರಯ ಪಡೆದರೆಂದು[160] ತಿಳಿದು ಬರುತ್ತದೆ. ಇವರಿಗೆ ರಕ್ಷಣೆ ನೀಡಿದ್ದರಿಂದಲೇ ಸುರಪುರದ ಮೇಲೆ ಕಂಪನಿ ಸರಕಾರ ಕೆಂಗಣ್ಣಿನ ಕಿಡಿ ಕಾರಲಿಟ್ಟಿತು.

1857ನೆಯ ಮೇ-10ರ ಮೀರತ ದಂಗೆಯ ನಂತರ[161], ಭಾರತೀಯರ ಬಗ್ಗೆ ಬ್ರಿಟಿಷರು ಸಂಶಯದಿಂದ ನೋಡಲಾರಂಭಿಸಿದರು. ಸ್ಥಳೀಯ ಸಂಸ್ಥಾನಗಳು ತಮ್ಮ ವಿರುದ್ಧ ಸಮರಕ್ಕೆ ಇಳಿಯುತ್ತಿರುವ ಸಂಗತಿ ಸ್ಪಷ್ಟಪಡಿಸಿಕೊಂಡರು. ಉತ್ತರದ ಕ್ರಾಂತಿಗೆ ನಾನಾಸಾಹೇಬ ನೇತೃತ್ವ ವಹಿಸಿದರೆ, ದಕ್ಷಿಣದ ಸಂಸ್ಥಾನಿಕರೆಲ್ಲ ಸುರಪುರದ ನಾಲ್ವಡಿ ವೆಂಕಟಪ್ಪನಾಯಕನನ್ನೇ ಮುಂದಾಳೆಂದು ಆಲೋಚಿಸಿದ್ದರು. ಆಗ ಉತ್ತರ ಮತ್ತು ದಕ್ಷಿಣದ ದಂಗೆಯ ನಡುವೆ ಸಂಬಂಧವೇರ್ಪಟ್ಟಿತು. ನಾನಾಸಾಹೇಬನ ರಾಯಭಾರಿಗಳನ್ನು ಬರಮಾಡಿಕೊಂಡ ವೆಂಕಟಪ್ಪನಾಯಕ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಸಂಘಟನೆಯಲ್ಲಿ ಧುಮುಕಲು ಒಪ್ಪಿಕೊಂಡನು. ಭೂಗತ ಕಾರ್ಯಗಳು ಬಿರುಸಾಗಿ ಸಾಗಿದವು. ಮದ್ದು-ಗುಂಡುಗಳ ಸಂಗ್ರಹ ಮತ್ತು ಸೈನ್ಯಕ್ಕೆ ಜನರನ್ನು ಹಗಲಿರುಳು ಸಾಗಿತು. ಈ ಚಟುವಟಿಕೆಗಳು ಯುವರಾಜನಾದ ವೆಂಕಟಪ್ಪನಾಯಕನ ಮೇಲೆ ಭಾರಿ ಪ್ರಭಾವ ಬೀರಿದವು. ಇಂಗ್ಲೀಷರ ವಿರುದ್ಧ ಸಿಡಿದೇಳಲು ಸ್ಫೂರ್ತಿ ತುಂಬಿದವು. ತಾನೂ ಸಹ ಹೈದ್ರಾಬಾದದ ಅರಬ್, ರೋಹಿಲರನ್ನು ಸೈನ್ಯಕ್ಕೆ ಸೇರಿಸಿಕೊಂಡು[162] ಇವರು ಬ್ರಿಟಿಷರ ವಿರುದ್ಧ 'ಜಿಹಾದ (ಧರ್ಮಯುದ್ಧ) ಸಾರಿದರು.

---

158. ಕ್ಯಾತನಹಳ್ಳಿ ರಾಮಣ್ಣ – ಹಲಗಲಿ ಬೇಡರು (ನಾಟಕ). ಪ್ರಸ್ತಾವನೆ.
159. HFMK Vol.1 p-220.
160. ಪಿ.ಬಿ.ಧುತ್ತರಗಿ – ವೆಂಕಟಪ್ಪನಾಯಕ (ನಾಟಕ –ಹಸ್ತಪ್ರತಿ),
161. FPC, 4 JULY 1856, No.64
162. ಕೈಫಿಯತ್ತು. ನಂ.6.

ಸದಾ ಸೇಡಿನ ಕಿಡಿಗಳಾದ ಇವರಿಂದ ಸುರಪುರದ ಸೈನ್ಯಬಲ ಸುಭದ್ರಗೊಂಡಿತು. ಇದನ್ನು ನಿಜಾಮನ ಮಂತ್ರಿಯಾದ ಸಾಲಾರಜಂಗನು 3ನೆಯ ಫೆಬ್ರುವರಿ 1857ರಂದು ಫಾರ್ನಹಿಲನಿಗೆ 'ಅರಬ್ ಜಮಾದಾರರು ಪೂರ್ವದ ಸೇಡಿಗಾಗಿ ಬ್ರಿಟಿಷರ ವಿರುದ್ಧ ಹೋರಾಡಲು ಮುನ್ನುಗ್ಗಬಹುದೆಂದು" ತಿಳಿಸಿದ್ದ.[163] ರೆಸಿಡೆಂಟ ಡ್ಯಾವಿಡ್‌ಸನ್ನನು ರಾಯಚೂರಿನ ಲೆಫ್ಟಿನೆಂಟ್ ಟೇಲರನಿಗೆ 1857 ಆಗಸ್ಟ 12ರಂದು ಪತ್ರವೊಂದನ್ನು ಬರೆದು 'ಸುರಪುರದ ರಾಜನ ಇತ್ತೀಚಿನ ಧೋರಣೆಗಳು ನಮ್ಮ ಸರಕಾರದ ವಿರುದ್ಧವೆ ಎನಿಸುತ್ತದೆ. 'ಕಾರಣ ಆತನನ್ನು ತೀವ್ರವಾಗಿ ಪರಿಗಣಿಸಬೇಕೆಂದು' ಹೇಳಿದ. ಪತ್ರದ ಆದೇಶ ಓದಿದ ಟೇಲರ 1857 ಸಪ್ಟಂಬರ್ 29ರಂದು ಸುರಪುರದ ರಾಜನಿಗೆ " ಬ್ರಿಟಿಷ ಸರಕಾರದ ಅಧೀನದಲ್ಲಿರುವ ನೀವು ನಿಮ್ಮನ್ನು ಮತ್ತು ನಿಮ್ಮ ರಾಜ್ಯವನ್ನು ರಕ್ಷಿಸಿಕೊಳ್ಳುವ ಬಯಕೆಯಿದ್ದರೆ ಕೂಡಲೇ ಸೇರಿಸಿಕೊಂಡಿರುವ ಅರಬ, ರೋಹಿಲರನ್ನು ಸೈನ್ಯದಿಂದ ತೆಗೆದುಹಾಕಬೇಕೆಂದು" ಆಗ್ರಹಿಸಿದ. ಆಗ ವೆಂಕಟಪ್ಪ ನಾಯಕ ಟೇಲರನಿಗೆ ಉತ್ತರಿಸಿ " ಎಂಟು ದಿನದೊಳಗೆ ಹೆಚ್ಚಿನ ಸೈನಿಕರೆಲ್ಲರನ್ನು ತೆಗೆದು ಹಾಕುವದಾಗಿ" ಒಪ್ಪಿಕೊಂಡನು. ಇದರಿಂದ ರಾಜನಲ್ಲಿರುವ ಅನಿರ್ದಿಷ್ಟ ನಿರ್ಣಯಗಳನ್ನು ಕಾಣುತ್ತೇವೆ. ಒಂದು ನಿಲುವಿಗೆ ಬಗ್ಗದ ವ್ಯಕ್ತಿತ್ವ-ಈತನದಾಗಿತ್ತು. ಅದರಂತೆ ಆಳರಸರ ಗೆಳೆತನದ ಬಳಗದಿಂದ ಹೊರಗೆ ಬರಲು ಸಹ ಅಸಾಧ್ಯವಾಗಿತ್ತು.

ಹೈದ್ರಾಬಾದ, ರಾಯಚೂರ, ಬಿಜಾಪೂರ, ಧಾರವಾಡ ಪ್ರಾಂತ್ಯಗಳಲ್ಲಿ ಇಂಗ್ರೇಜರ ಆಳ್ವಿಕೆ ಸ್ಥಿರಗೊಂಡಿದ್ದವು. ನಿಜಾಮನ ಆಡಳಿತೆಯೂ ಸಹ ಅವರ ಅಧೀನತೆಯನ್ನು ಒಪ್ಪಿಕೊಂಡಿತ್ತು. ವನಪರ್ತಿ ಅರಸ ಪ್ರಬಲನಾದರು. ಪ್ರತ್ಯೇಕತೆ ಬಯಸದೆ ರೆಸಿಡೆಂಟನ ಅಂಕಿತದಲ್ಲಿದ್ದ. ಇಂಗ್ಲೀಷರ ಚಕ್ರವ್ಯೂಹದಂತಿರುವ ಇವೆಲ್ಲ ರಾಜ್ಯಗಳ ಮಧ್ಯದಲ್ಲಿ ಸುರಪುರ ಸಂಸ್ಥಾನ ಸಿಕ್ಕಿತ್ತು. ಯಾವುದೇ ಸಹೋದರ ಸಂಸ್ಥಾನದೊಂದಿಗೆ ಗುಪ್ತವ್ಯವಹಾರ ಮಾಡಿದರು. ತಕ್ಷಣವೇ ಇಂಗ್ರೇಜ ಅಧಿಕಾರಿಗಳಿಗೆ ತಲುಪುತ್ತಿತ್ತು. ಅಂಥ ಕೆಲವು ಘಟನೆಗಳು ಸಂಸ್ಥಾನದಲ್ಲೂ ಘಟಿಸಿದವು

ಜಂಬಗಿಯ ದೇಶಮುಖ, ಬಸವಲಿಂಗಪ್ಪನು ಸುರಪುರಕ್ಕೆ ಬೆಂಬಲ ಮದ್ದುಗುಂಡುಗಳ ಸಾಮಗ್ರಿ ಸರಬರಾಜು ಮಾಡಲು ಒಪ್ಪಿಕೊಂಡಿರುವ ಸುದ್ದಿ ರಾಜ್ಯಾದ್ಯಂತ ಹಬ್ಬಿತು. ಕ್ರಾಂತಿ ಸಂದೇಶ ತಲುಪಿಸಲು ಸೊಲ್ಲಾಪುರಕ್ಕೆ ಬರುತ್ತಿರುವ ನಾನಾಸಾಹೇಬನ ರಹಸ್ಯವು ಅಲ್ಲಿಯ ಬ್ರಿಟಿಷ ಜಿಲ್ಲಾಧಿಕಾರಿಗೆ ತಿಳಿದುಬಿಟ್ಟಿತು. ಕೂಡಲೇ ಬಸವಲಿಂಗಪ್ಪನನ್ನು ಬಂಧಿಸಿ ಆತನ ಕೊಟ್ಯಾಲ ಕೋಟೆಯನ್ನು ನೆಲಸಮಮಾಡಿದನು.

163. FSMH Vol.II p-93

ದಕ್ಷಿಣ ಭಾರತದಲ್ಲಿ ದಂಗೆಗೆ ಬಿರುಸಿನ ಸಿದ್ಧತೆ ನಡೆದಾಗ ಸುರಪುರದ ರಾಜನು ಉತ್ತರ ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ಬಿರುಗಾಳಿ ವೇಗದಲ್ಲಿ ಸೈನ್ಯ ಸಂಘಟಿಸಿದನೆಂದು ಹಲವು ದಾಖಲೆ ದೃಢೀಕರಿಸುತ್ತವೆ. ಬ್ರಿಟೀಷ್ ಸೈನ್ಯದಲ್ಲಿರುವ ಭಾರತೀಯ ಸೈನಿಕರನ್ನು ಸ್ವಾತಂತ್ರ್ಯದಧ್ವಜದಡಿ ತರಲು ಸುರಪುರ ಹಿಂದೆ ಬೀಳಲಿಲ್ಲ. ಕೊಲ್ಹಾಪುರ, ಧಾರವಾಡ, ಬೆಳಗಾಂವಿಗಳಲ್ಲಿ ಬೀಡುಬಿಟ್ಟಿದ್ದ 27, 28, 29ನೆಯ ಬ್ರಿಟಿಷ್ ಸೈನ್ಯ ಪಾಳಿಯಲ್ಲಿ ಭಾರತೀಯರು ಸಿಂಹಪಾಲು ಸಂಖ್ಯೆಯಲ್ಲಿದ್ದರು. ಬೆಳಗಾವಿಯ 29ನೆಯ ಪಾಳಿಯಲ್ಲಿ ಸ್ವದೇಶ ಭಕ್ತಿ ಮೂಡಿಸಿ ಬ್ರಿಟಿಷರ ವಿರುದ್ಧ ತಿರುಗಿ ಬೀಳಲು ಸುರಪುರದಿಂದ ಮಹಿಪಾಲಸಿಂಗ್ ಎಂಬಾತ ಕಾರ್ಯಪ್ರವೃತ್ತನಾಗಿದ್ದ.[164] ದುರ್ದೈವದಿಂದ ಕಾರ್ಯಾಚರಣೆಯಲ್ಲಿರುವಾಗಲೇ ಬ್ರಿಟಿಷರ ಕೈಗೆ ಸಿಕ್ಕಿಬಿದ್ದ. ಆಗ ಮಹಿಪಾಲಸಿಂಗನನ್ನು 1857 ಆಗಸ್ಟ 14ರಂದು ವಿಚಾರಣೆಗೆ ಗುರಿಪಡಿಸಿದಾಗ ಹೊರಬಿದ್ದ ಸಂಗತಿಯೆಂದರೆ "ಈತ ಸುರಪುರದ ಗೂಢಚಾರನಾಗಿದ್ದು, ಅವರ ಪ್ರೇರಣೆಯಿಂದಲೇ ಬ್ರಿಟೀಷರ ವಿರುದ್ಧ ಪಿತೂರಿಯಲ್ಲಿ ತೊಡಗಿದ್ದನೆಂದು ಖಚಿತಪಡಿಸುವ ರಂಗಸೂಗೂರ ಅಧಿಕಾರಿಯ ಪತ್ರ ಹೀಗಿದೆ —

"ಬೆಳಗಾವಿಯಲ್ಲಿ ಇತ್ತೀಚೆಗೆ ಮರಣದಂಡನೆಗೆ ಗುರಿಯಾದ ಮಹಿಪಾಲಸಿಂಗನ ಹೇಳಿಕೆಯಂತೆ, ಸುರಪುರದ ರಾಜನು ಒಳಸಂಚಿನಲ್ಲಿ ಪ್ರತ್ಯಕ್ಷವಾಗಿ ಪಾಲುದಾರನಾಗದಿದ್ದರೂ ಆತನ ಗಮನಕ್ಕೆ ಬಾರದೆ ಈ ಕಾರ್ಯ ನಡೆದಿಲ್ಲವೆಂದು ನಂಬಬೇಕಾಗಿದೆ".[165] ಇದೇ ರೀತಿ ಮಹಿಪಾಲಸಿಂಗನ ಸಹಚರರಾದ ಬೇದಸಿಂಗ ಮತ್ತು ಲಕ್ಷ್ಮಣ ಪ್ರಸಾದರನ್ನು ಸಹ ಬಂಧಿಸಿ ಅವರಿಂದ ಅನೇಕ ವಿಷಯಗಳನ್ನು ಹೆಕ್ಕಿಸಿದರು. ಇವರಿಬ್ಬರು ಜಮಖಂಡಿ, ಸುರಪುರ ರಾಜರೊಂದಿಗೆ ನಿಕಟಸಂಪರ್ಕವಿಟ್ಟುಕೊಂಡವರಾಗಿದ್ದರು. ಜಮಖಂಡಿ ಸಂಸ್ಥಾನದ ರಾಜರನ್ನು ಪಿತೂರಿ, ಒಳಸಂಚುಗಳ ಆಪಾದನೆ ಮೇಲೆ ಬೆಳಗಾವಿಯಲ್ಲಿ ಬ್ರಿಟಿಷರು ಬಂಧಿಸಿದರು. ಅಲ್ಲದೆ ಜಮಖಂಡಿ ಕೋಟೆಯನ್ನು ಸಹ ವಶಪಡಿಸಿಕೊಂಡರು. ಇದರ ಬಿಸಿ ಸುರಪುರಕ್ಕೂ ತಟ್ಟಲು ಇಲ್ಲಿಂದಲೇ ಆರಂಭವಾಯಿತು.

ಸುರಪುರ ರಾಜನ ಒಳಸಂಚುಗಳ ಬಗ್ಗೆ ಸಂಸ್ಥಾನದ ವೈರಿಗಳಿಂದಲೇ ಬ್ರಿಟಿಷರಿಗೆ ರವಾನೆಯಾದವು. ಅವುಗಳಲ್ಲಿ ಪ್ರಮುಖವೆಂದರೆ 'ರಾಜನು ಗುಪ್ತವಾಗಿ ಅರಬ ಮತ್ತು ರೋಹಿಲರನ್ನು ಸೈನ್ಯಕ್ಕೆ ನೇಮಿಸಿಕೊಂಡು ಬ್ರಿಟಿಷರ ವಿರುದ್ಧ ಸಮರ ಸಾರಲು ಸನ್ನದ್ಧನಾಗುತ್ತಿರುವನೆಂದು'.[166]

---

164. FSMH Vol.II p-86
165. ತಿ. ತಾ. ಶರ್ಮ. —(ವಾಲ್ಮೀಕಿ ಸ್ಮರಣ ಸಂಚಿಕೆ) ಲೇಖನ: ಸುರಪುರ ವೆಂಕಟಪ್ಪನಾಯಕ. ಪುಟ-3.
166. R.N.Taylor to Thornhill FPC 9 SEPT 1957, No.137

ಸಂಸ್ಥಾನದ ಸಿಬ್ಬಂದಿ ಭೀಮರಾವನೆಂಬಾತ ಹೇಳಿದರೆ, 1857ರ ದಂಗೆಗೆ ರಾಜನು ಸಂಪೂರ್ಣ ಪ್ರೇರಕ ಶಕ್ತಿಯಾಗಿದ್ದನೆಂದು ಬೆಂಗಳೂರಿನ 'ಸೀತಾರಾಂ ಭವಾ ಆರೋಪಿಸಿದ್ದ.[167] ಇತ್ತೀಚಿನ ಇವೆಲ್ಲ ಬೆಳವಣಿಗೆಗಳು ಮೊದಲಿಗಿಂತಲೂ ಬಹು ಅಪಾಯಕಾರಿಯಾಗಿವೆ ಎಂದು ಭಾವಿಸಿದ ಬ್ರಿಟಿಷ ಅಧಿಕಾರಿ ಥಾರ್ನಹಿಲನು 24ನೆಯ ಡಿಸೆಂಬರ 1857ರಂದು ಕ್ಯಾಪ್ಟನ್ ಕ್ಯಾಂಬೆಲನಿಗೆ ಪತ್ರವೊಂದನ್ನು ಬರೆಯುತ್ತಾ, "ಸುರಪುರದಲ್ಲಿ ಇತ್ತೀಚಿನ ಅನೇಕ ಅತೃಪ್ತಿಕರ ಸಂಗತಿಗಳು ಕೇಳಿಬರುತ್ತಿವೆ. ಅಲ್ಲಿಯ ಸ್ವಭಾವ, ಪರಿಸ್ಥಿತಿ ಕುರಿತು ಸಾಕಷ್ಟು ವರದಿಗಳು ಬಂದಿವೆ. ಸಂಸ್ಥಾನವು ಸಧ್ಯದಲ್ಲಿ ಕಂಪನಿ ಸರಕಾರದ ವಿರುದ್ಧ ದಂಗೆ ಏಳುವ ಲಕ್ಷಣಗಳಿವೆಯಂತೆ. ಕಾರಣ,ನೀವು ಸುರಪುರಕ್ಕೆ ಹೋಗಿ ಇದುವರೆಗಿನ ವಿದ್ಯಮಾನಗಳ ಬಗ್ಗೆ ವಿಚಾರಣೆ ನಡೆಸಿ ಕೂಡಲೇ ವಿವರವಾದ ವರದಿ ಕಳುಹಿಸಬೇಕೆಂದು ಕರ್ನಲ ಡೇವಿಡಸನ್ ತಮಗೆ ತಿಳಿಸಿದ್ದಾರೆ.[168] ಅದಕ್ಕಾಗಿ ನೀವು ರಾಯಚೂರನ ಉಪಆಡಳಿತಾಧಿಕಾರಿ ಟೇಲರನೊಂದಿಗೆ ಪತ್ರ ಸಂಪರ್ಕವಿಟ್ಟು, ಸಂಸ್ಥಾನದ ಬಗ್ಗೆ ಸಂಗ್ರಹಿಸಿರುವ ಇದುವರೆಗಿನ ಪುರಾವೆಗಳನ್ನು ಆತನಿಂದ ಪಡೆಯಬೇಕು. ಕಾರ್ಯಾಚರಣೆಯಲ್ಲಿ ಸೈನ್ಯದ ಅವಶ್ಯಕತೆ ಬಿದ್ದರೆ ಲಿಂಗಸೂಗೂರಿನ ನಮ್ಮ ಪಡೆಯನ್ನು ಕರೆಯಿಸಿಕೊಳ್ಳಬಹುದು. ಸೈನಿಕರಿಗೆ ಬಂಡುಗೈಯಲು ಉಪದೇಶಿಸಿದ ಆರೋಪದ ಮೇಲೆ ಇತ್ತೀಚೆಗೆ ಬೆಳಗಾವಿಯಲ್ಲಿ ಗಲ್ಲಿಗೇರಿಸಲ್ಪಟ್ಟ ವೈಪಾಲಸಿಂಗನಿಂದ ಪಡೆದ ಹೇಳಿಕೆಯಲ್ಲಿ ತನಗೆ ರಾಜದ್ರೋಹವೆಸಗಲು ನಾಲ್ವಡಿ ವೆಂಕಟಪ್ಪನಾಯಕನೇ ಕಾರಣನೆಂದು ಹೇಳಿದ್ದಾನೆ. ಅದರ ಬಗ್ಗೆ ರಾಜನನ್ನು ಗಂಭೀರವಾಗಿ ಪರಿಗಣಿಸಬೇಕು. ಅಲ್ಲದೆ ಸುರಪುರದ ಆನಂದರಾವ್ ನೆಂಬಾತ ಬರೆದ ಒಳಸಂಚು ಪ್ರಚೋದಿಸುವ ಎರಡು ಪತ್ರಗಳು ಧಾರವಾಡ ಜಿಲ್ಲೆಯ ಮೋಹಿನಗೌಡನ ಮನೆಯಲ್ಲಿ ದೊರೆತಿವೆ. ಅದರಂತೆ ನಾನಾ ಶಂಕರನೆಂಬ ವಕೀಲನು ಸುರಪುರದ ಪ್ರತಿನಿಧಿಯಾಗಿ ನಾನಾಸಾಹೇಬನಲ್ಲಿ ವ್ಯವಹರಿಸಿದ ಬಗ್ಗೆ ಮಾಹಿತಿ ಬಂದಿದೆ. ಇವರಿಬ್ಬರು ಯಾರು? ಇವರಿಗೂ ರಾಜನಿಗೇನು ಸಂಬಂಧವೆಂಬುದನ್ನು ತಿಳಿಯಿರಿ.[169] ಸಾಲಾರಜಂಗನ ಅಭಿಪ್ರಾಯದಲ್ಲಿ 'ರಾಜನು ಈಗಾಗಲೇ ಸಾಕಷ್ಟು ಸೈನ್ಯ ಭರತಿಮಾಡಿ ಮದ್ದುಗುಂಡು ಮುಂತಾದ ಯುದ್ಧ ಸಾಮಗ್ರಿಗಳನ್ನು ಸಂಗ್ರಹಿಸಿರುವ ಆರೋಪವಿದೆ.[170] ತಕ್ಷಣವೇ ರಾಜನ ಎಲ್ಲಾ ಕೋಟೆಗಳನ್ನು ಶೋಧಿಸತಕ್ಕದ್ದು. ಇತ್ತೀಚೆಗೆ ಸಂಸ್ಥಾನದಲ್ಲಿ ಹಲವಾರು ದರೋಡೆ, ಲೂಟಿಗಳು ನಡೆದಿವೆ. ಸ್ವತಃ ರಾಜನೇ ಇದಕ್ಕೆ ಕಾರಣವಂತೆ. ಲೂಟಿಯ ಉದ್ದೇಶ ಮತ್ತು ಅಂಕಪ್ಪನಾಯಕನ ಜಹಗೀರು ಲೂಟಿಯ ಹಾನಿಯನ್ನು ಅಂದಾಜು ಮಾಡಬೇಕು. ಇವೆಲ್ಲವುಗಳ ಅಧ್ಯಯನದ ತರುವಾಯ ರಾಜ ತಪ್ಪು ಮಾಡಿದ್ದು ನಿಜವೆನಿಸಿದರೆ "ಜನರಲ ಲೋ" ನ ಆದೇಶದಂತೆ ಸಂಸ್ಥಾನವನ್ನು ಕಸಿದುಕೊಳ್ಳಲಾಗುವದೆಂದು ಎಚ್ಚರಿಸಬೇಕು"

---

167. FSC 28 MAY 1858, Nos.344-346.
168. HFMK Vol-I Pp.238-39.
169. HFMK Vol.I p-242 and FPSP 30 DEC 1859 No.155.
170. FSH Vol.II p-89.

—ಎಂಬ ಗುರುತರ ಆಪಾದನಾ ಪಟ್ಟಿಯನ್ನೇ ಥಾರ್ನ್‌ಹಿಲ ಕ್ಯಾಂಬೆಲನಿಗೆ ನೀಡಿದನು. ಸಮರ್ಥ ತನಿಖಾ ಅಧಿಕಾರಿಯಾದ ಕ್ಯಾ. ಕ್ಯಾಂಬೆಲ ಸಂಬಂಧಿಸಿದ ದಾಖಲಾತಿ ಪತ್ರಗಳನ್ನೆಲ್ಲ ಪಡೆದು ಸುರಪುರದತ್ತ ಪ್ರಯಾಣಿಸಿದನು.

4. <u>ಕ್ಯಾಪ್ಟನ್ ಕ್ಯಾಂಬೆಲನ ತೀವ್ರ ಕಾರ್ಯಾಚರಣೆ :</u>

ಅನೇಕ ತನಿಖೆಗಳಲ್ಲಿ ಅತಿ ದಕ್ಷತೆಯಿಂದ ಕಾರ್ಯನಿರ್ವಹಿಸಿದ್ದ ಇಂಗ್ಲೀಷ್ ಅಧಿಕಾರಿ ಕ್ಯಾ. ಕ್ಯಾಂಬೆಲ-ಈಗ ಸುರಪುರ ಸಂಸ್ಥಾನದ ಸವಾಲನ್ನು ಸ್ವೀಕರಿಸಿದ. ರೆಸಿಡೆಂಟ್ ಡೇವಿಡ್ಸನನ ಆದೇಶದ ಪ್ರಕಾರ ಥಾರ್ನಹಿಲ ತಿಳಿಹೇಳಿದ ಎಲ್ಲಾ ನಿಯಮಗಳನ್ನು ಪರಿಶೋಧಿಸಲು 1858 ಜನೇವರಿ 1ರಂದು 60 ಜನ ಸೈನಿಕರೊಂದಿಗೆ ಸುರಪುರ ತಲುಪಿದನು.[171] ಸಂಸ್ಥಾನದ ರಾಜ ಮತ್ತು ರಾಜಪರಿವಾರವೆಲ್ಲ ತನಗೆ ಭವ್ಯ ಸ್ವಾಗತ ನೀಡಿದ್ದನ್ನು ಕಂಡ ಕ್ಯಾಂಬೆಲ ಬಹು ಸಂತೋಷಗೊಂಡ. ಆದರೂ ತಾನೊಬ್ಬ ಬ್ರಿಟಿಷ ಅಧಿಕಾರಿಯೆಂಬುದು ಮಾತ್ರ ಮರೆಯಲಿಲ್ಲ. ಮೂಲದ ಮನೋಭಾವನೆ ಮರುಕಳಿಸಿಕೊಂಡ ಕ್ಯಾಂಬೆಲ ದರ್ಪದಿಂದಲೇ ವರ್ತಿಸತೊಡಗಿದ.

ರಾಜನೊಂದಿಗೆ ಕುಶಲೋಪರಿಗಳಿದಾಗ “ಕಂಪನಿ ಸರಕಾರದ ವಿರುದ್ಧ ಖಂಡಿತಾ ಭಿನ್ನಮತ ನನಗಿಲ್ಲ.[172] ನನ್ನನ್ನು ಸಾಕಿ ಸಲುಹಿ ಈ ರಾಜ್ಯದ ರಾಜನನ್ನಾಗಿ ಮಾಡಿದವರೆ ಅವರು. ನಾನು ಯಾವ ಬಂಡಾಯದ ಪ್ರಯತ್ನದಲ್ಲೂ ಪಾಲ್ಗೊಂಡಿಲ್ಲ. ಯುದ್ಧ ಸಾಮಗ್ರಿ ಸಂಗ್ರಹಿಸುವ ಮಾತು ದೂರವೇ ಉಳಿಯಿತು”

ಎಂದೆಲ್ಲ ರಾಜನ ಮಾತುಗಳಿಂದ ಕ್ಯಾಂಬೆಲನ ಮನಸ್ಸು ಕರಗಲಿಲ್ಲ. ಪ್ರತ್ಯಕ್ಷ ಪರೀಕ್ಷೆಯಲ್ಲಿ ನಿರತನಾದ. ದೀರ್ಘ ತನಿಖೆಯಲ್ಲಿ ಕಂಡುಬಂದ ಸತ್ಯವೆಂದರೆ “ಮೈಪಾಲಸಿಂಗನನ್ನು ರಾಜ ಕಳಿಸಿದನೆಂಬ ಆಪಾದನೆಗಾಗಲಿ, ಪೋಲೀಸಗೌಡನ ಮನೆಯಲ್ಲಿ ದೊರೆತ ಪತ್ರದ ವಿಷಯಗಳಿಗಾಗಲಿ ಯಾವ ಪುರಾವೆಗಳು ಇಲ್ಲಿ ದೊರೆಯಲಿಲ್ಲ. ಅವೆಲ್ಲ ನಕಲಿ ಪತ್ರಗಳೆಂದು ತಿಳಿಯಿತು. ನಾನಾ ಶಂಕರ ಗುಪ್ತಚಾರನಾಗಿ ನಾನಾಸಾಹೇಬನಲ್ಲಿ ಹೋಗಿದ್ದು ಸುಳ್ಳೆನಿಸಿತು. ಸಂಸ್ಥಾನದ ಪ್ರಸಿದ್ಧ ಕೋಟೆಗಳಾದ ವನದುರ್ಗ್, ರಾಯನಪಾಳ್ಯ, ವಾಗಣಗೇರಿ, ಮುಂತಾದ ಕಿಲ್ಲೆಗಳಲ್ಲಿ ಶೋಧಿಸಿದಾಗ ಯಾವ ಯುದ್ಧ ಸಾಮಗ್ರಿಗಳು ಸಂಗ್ರಹವಾಗಿರಲಿಲ್ಲ. ಇದರಿಂದ ರಾಜನ ಮೇಲೆ ಯಾವ ಆರೋಪಗಳು ಸಿದ್ಧವಾಗಲಿಲ್ಲ. ಸಂಸ್ಥಾನದ ಎಲ್ಲಾ ಮಾಹಿತಿಯನ್ನು ಪ್ರತ್ಯೇಕವಾಗಿ ಶೋಧಿಸಿದ ಕ್ಯಾಂಬೆಲ

---

171. HFMK Vol. I, Pp.240-42.

172. " Vol.1. P. 241

ರಾಜ ನಿರಪರಾಧಿಯೆಂದು ಸಾರುವ ನಿರ್ಧಾರಕ್ಕೆ ಬಂದ. ಅಂದು ರಾಜನೊಂದಿಗೆ ಯಥಾಪ್ರಕಾರ ಕುಶಲ ವಿಚಾರಿಸಿ ತನ್ನ ಶಿಬಿರಕ್ಕೆ ವಿಶ್ರಾಂತಿಗಾಗಿ ಹೋದ.

<u>ಕ್ಯಾಂಬೆಲನಿಗೆ ಸಿಕ್ಕ ಸಾಕ್ಷಿ :</u>

ಸುರಪುರದಲ್ಲಿ ಪ್ರತ್ಯೇಕ ಶಿಬಿರ ಮಾಡಿಕೊಂಡಿದ್ದ ಕ್ಯಾಂಬೆಲ ಆಯಾ ದಿನದ ತನಿಖೆಯನ್ನು ಅಂದೇ ರೆಸಿಡೆಂಟನಿಗೆ ರವಾನಿಸುತ್ತಿದ್ದ. ದಿನವಿಡೀ ಆದ ಚರ್ಚೆ, ಸಾಕ್ಷಿ, ಹೇಳಿಕೆಗಳನ್ನೆಲ್ಲ ಪಡೆದು ರಾತ್ರಿಯೆಲ್ಲ ಬರೆಯುತ್ತಿದ್ದ. ಏಳೆಂಟು ದಿನಗಳ ತನಿಖೆಯ ತರುವಾಯ ಸಂಸ್ಥಾನದ ರಾಜ ವೆಂಕಟಪ್ಪ ನಾಯಕನು ಸಂಪೂರ್ಣ ನಿರಪರಾಧಿಯೆಂಬ ನಿಲುವಿಗೆ ಅಂದು ಬಂದಿದ್ದ. ಇನ್ನೇನು ರೆಸಿಡೆಂಟನಿಗೆ ರಾಜನ ಪೂರಕ ನಡವಳಿಕೆ ಬಗ್ಗೆ ವರದಿ ಮಾಡಬೇಕೆನ್ನುವಷ್ಟರಲ್ಲೇ ಮಹತ್ವಪೂರ್ಣ ಸಾಕ್ಷಿಯೊಂದು ಕುಳಿತಲ್ಲಿ ಬಂದು ಕೈಗೆ ಸಿಕ್ಕಿತು.

ಅದೇನೆಂದರೆ, ರಾಜನಿಂದ ಅನೇಕ ಬಾರಿ ಅವಮಾನಕ್ಕೆ ಗುರಿಯಾಗಿ, ಮಂತ್ರಿಪದವಿಯಿಂದ ಉಚ್ಚಾಟನೆಗೊಂಡು, ಸಂಸ್ಥಾನದಲ್ಲಿ ಮರಳಿ ದಿವಾನನಾಗಿದ್ದ ಭೀಮರಾಯ ಹಿಂದೆ ರಾಜನಿಂದ ತನಗಾದ ಅವಮಾನಗಳ ಸೇಡನ್ನು ತೀರಿಸಿಕೊಳ್ಳಲು ಸದಾ ಹೊಂಚು ಹಾಕಿದ್ದ. ಕ್ಯಾಂಬೆಲನಿಂದಾದರೂ ತನ್ನ ಸೇಡನ್ನು ತೀರಿಸಿಕೊಳ್ಳಬೇಕೆಂದು ನಿಶ್ಚಯಿಸಿದ್ದ. ಆದರೆ ರಾಜನ ಮೇಲೆ ಯಾವ ಆರೋಪಗಳು ಸಾಬೀತಾಗದೆ ಹೋದಾಗ ಚಡಪಡಿಸತೊಡಗಿದ. ಕೊನೆಗೆ ತನ್ನ ಕುಟಿಲ ತಂತ್ರ ಉಪಯೋಗಿಸಿ ಅರಬ್ ಮತ್ತು ರೋಹಿಲಿಯರನ್ನು ಸಂಸ್ಥಾನದ ಸೈನ್ಯದಲ್ಲಿ ತುಂಬಿಕೊಳ್ಳುವಂತೆ ಇರುವ ಬಗ್ಗೆ ನಕಲಿ ಆದೇಶ ಪತ್ರಗಳನ್ನು ಸಿದ್ಧಪಡಿಸಿದ. ಮದ್ಯ ಸೇವಿಸಿ ಬಿದ್ದ ರಾಜನಿಂದ ರುಜು ಪಡೆದ ಭೀಮರಾಯ ಒತ್ತಾಯದಿಂದ ರಾಜ ಮುದ್ರೆಯನ್ನು ಹಾಕಿಕೊಂಡ. ಎಚ್ಚರವಾದ ಮೇಲೆ ರಾಜನಿಗೆ ಇದೆಲ್ಲ ಅರಿವಿಗೆ ಬಂತು. ಕೂಡಲೇ ಭೀಮರಾಯ ಎಲ್ಲಿರುವನೆಂದು ಅಬ್ಬರಿಸಿದ. ಬಸವಂತಸಿಂಗನು ರಾಜನ ಊಹೆಯಂತೆ ಕ್ಯಾಂಬೆಲನ ಶಿಬಿರಕ್ಕೆ ಹೋಗಿ ನೋಡಿದರೆ ಮೂರು ಆದೇಶ ಪತ್ರಗಳನ್ನು ಹಿಡಿದಿದ್ದ ಭೀಮರಾಯ ಕ್ಯಾಂಬೆಲನಿಗೆ ತೋರಿಸುತ್ತಿರುವುದು ಕಂಡಿತು.

ಅವುಗಳಲ್ಲಿ ಈ ರೀತಿ ಬರೆದಿತ್ತು.

<u>ಆದೇಶ ಪತ್ರ - 1 :</u>

-ಗೆ,

ಸಿದ್ದಿ ಸುಲೇಮಾನ ಸಾಹೇಬ
ಜಮಾದಾರ ಅವರಿಗೆ —

" ನನಗೆ ಐದು ನೂರು ಮಂದಿ ಅರಬ ಸೈನಿಕರ ಅವಶ್ಯಕವಿದೆ. ಪ್ರತಿಯೊಬ್ಬರಿಗೂ ಮಾಸಿಕ 15 ರೂ.ನಂತೆ ವೇತನ ನೀಡುತ್ತೇನೆ. ಆರು ತಿಂಗಳವರೆಗೆ ಮಾತ್ರ ಸಂಸ್ಥಾನದಲ್ಲಿ ಅವರ ಸೇವಾವಧಿ ಇರುತ್ತದೆ.

ಸಹಿ
ರಾಜಾ ನಾಲ್ವಡಿ ವೆಂಕಟಪ್ಪನಾಯಕ
ಬಹಿರಿ ಬಹಾದ್ದೂರ ಸಂಸ್ಥಾನ
ಸುರಪುರ.

<u>ಆದೇಶ ಪತ್ರ -2 :</u>

-ಗೆ,

ತುಸುದೂಕಹುಸೇನ ಶೇರ ನವಾಬ
ಜಮಾದಾರ ಅವರಿಗೆ,

" ನನಗೆ ಐದುನೂರು ಜನ ಸವಾರರ ಅವಶ್ಯಕತೆ ಜರೂರಿದೆ. ಪ್ರತಿಯೊಬ್ಬ ಸವಾರನಿಗೂ ಮಾಸಿಕ 35 ರೂ.ವೇತನ ನೀಡುವೆ. ಆರು ತಿಂಗಳು ಮಾತ್ರ ಅವರ ಸೇವಾವಧಿಯೆಂದು ತಿಳಿಯುವುದು. " ತಕ್ಷಣ ಕರೆತನ್ನಿ "

ಸಹಿ
ರಾಜಾ ನಾಲ್ವಡಿ ವೆಂಕಟಪ್ಪನಾಯಕ
ಬಹಿರಿ ಬಹಾದ್ದೂರ,ಸಂಸ್ಥಾನ
ಸುರಪುರ.

ಆದೇಶ ಪತ್ರ –3 :

–ಗೆ,

ಮೀರ ಆರಿಫ್ ಅಲಿ
ಜಮಾದಾರ ಅವರಿಗೆ,

" ನನಗೆ ಐದು ನೂರು ಜನ ಸೈನಿಕರ ಅನಿವಾರ್ಯತೆ ಬಹಳ ಇದೆ. ಅವರಿಗೆ ಮಾಸಿಕ 15 ರೂ. ಸಂಬಳ ನೀಡುವೆ. ಆದರೆ ಅವರ ಸೇವಾವಧಿ ಇರುವುದು ಕೇವಲ ಆರು ತಿಂಗಳು. ಕೂಡಲೇ 500 ಜನರನ್ನು ನಮ್ಮಲ್ಲಿ ಕರೆತರಬೇಕು. "

ಸಹಿ,
ರಾಜಾ ನಾಲ್ವಡಿ ವೆಂಕಟಪ್ಪನಾಯಕ
ಬಹಿರಿ ಬಹಾದೂರ ಸಂಸ್ಥಾನ
ಸುರಪುರ.

ಮೇಲಿನ ಮೂರೂ ಪತ್ರಗಳನ್ನು ದಿವಾನ ಭೀಮರಾಯ ಕ್ಯಾಂಪಬೆಲ್ಲಿಗೆ ಕೊಡುವುದನ್ನು ಕಣ್ಣಾರೆ ಕಂಡ ಬನವಂತಸಿಂಗ್ ಓಡೋಡಿಬಂದು ರಾಜನಲ್ಲಿ ವರದಿಮಾಡಿದ. ಈ ರಾಜ್ಯವಂಚನೆಯ ಕ್ರೂರ ಕಾರ್ಯದಿಂದ ಕೆಂಡದುಂಡೆ ನುಂಗಿದಂತೆ ಕೆರಳಿ ಆರ್ಭಟಿಸಿದ ರಾಜ ತಕ್ಷಣವೇ ಭೀಮರಾಯನನ್ನು ಗೃಹಬಂಧನದಲ್ಲಿಡಲು ಆಜ್ಞಾಪಿಸಿದ.

ಸಂಸ್ಥಾನದ ಗದ್ದುಗೆಯನ್ನೇ ಅಲುಗಾಡಿಸುವ ಮೇಲಿನ ಮೂರು ಸಾಕ್ಷಿಗಳು ಕ್ಯಾಂಪಬೆಲನ ಕೈಸೇರಿದವು.[173] ಡಿಸೆಂಬರ 29, 1857 ರಂದು ರಾಜನ ರುಜು, ರಾಜಮುದ್ರೆಯೊಂದಿಗೆ ಹೊರಡಿಸಿದ ಈ ಆದೇಶ ಪತ್ರಗಳು ಅರಬ ಜಮಾದಾರರಿಗೆ ಸಂಬಂಧಿಸಿದ್ದವು.

ಐದು ಜನ ಜಮಾದಾರರಾದ ಸಿದ್ದಿ ಸುಲೇಮಾನ, ಸಿದ್ದಿ ಸಾಹೇಬ, ತುಸುದೂಕಹುಸೇನ, ಇಜತ್‌ಖಾನ, ಮೀರ ಆರಿಫಅಲಿ ಎಂಬುವವರಿಗೆ ಪ್ರತಿಯೊಬ್ಬರೂ 500 ಜನ ಅಂದರೆ ಒಟ್ಟು 2500 ಜನ ಕೂಲಿಕಾರ ಅರಬ, ರೋಹಿಲರನ್ನು ಕರೆತರಲು ರಾಜ ಆದೇಶಿಸಿದ.

173. HFMK VOL.I, p-242.

ಆರು ತಿಂಗಳ ವರೆಗೆ ಆದ ಈ ಠರಾವು ಯುದ್ಧದ ಮುನ್ಸೂಚನೆಯನ್ನೇ ತೋರಿಸುವದೆಂದು ಕ್ಯಾಂಬೆಲ ಕೊನೆಯ ತೀರ್ಮಾನಕ್ಕೆ ಬಂದ. ಸುರಪುರದಲ್ಲಿ ಸ್ವತಃ ಶೋಧನೆಗೆ ಇಳಿದ ಕ್ಯಾಂಬೆಲ ಜನೆವರಿ 14, 1858 ರಂದು 150 ಜನ ರೋಹಿಲೆಯರ ದಂಡು ಮಸಲ್ದೆಯಲ್ಲಿದ್ದುದನ್ನು ಕಂಡ. ಅಲ್ಲದೆ ಕೂಲಿಕಾರ ಸಿಪಾಯಿಗಳು ತಂಡ ತಂಡವಾಗಿ ಸುರಪುರದಲ್ಲಿ ಬರುತ್ತಿರುವುದನ್ನು ಅರಿತುಕೊಂಡನು. ಇದರಿಂದ ಕ್ಯಾಂಬೆಲನಿಗೆ ರಾಜನ ಆದೇಶ ಪತ್ರಗಳಿಂದಲ್ಲ ಈ ಕಾರ್ಯವೆಂದರಿತನಲ್ಲದೆ ಸಮರಕ್ಕಾಗಿಯೇ ಮಾಡಿಕೊಂಡ ಸೈನ್ಯಭರತಿಯೆಂಬ ನಿಲುವಿಗೆ ಬಂದು ನಿಂತ. ತನಗಾದ ಈ ಖಚಿತ ಸಂಗತಿಗಳನ್ನು ಮತ್ತು ರಾಜನ ರುಜುವಿರುವ ಆದೇಶಪತ್ರಗಳನ್ನು ಡೇವಿಡ್ಸನ್ನನಿಗೆ ವರದಿ ಮಾಡಿದ.

ಕ್ಯಾಂಬೆಲನ ವರದಿಯು ಒಕ್ಕಣಿಕೆ ಓದಿದ ರೆಸಿಡೆಂಟನಿಗೆ ತನ್ನ ನಿರೀಕ್ಷೆ ನಿಜವೆನಿಸಿತು. ಚಿಗುರುತ್ತಿರುವ ರಾಜದ್ರೋಹದ ಚಿಗುರನ್ನು ಕೂಡಲೇ ಚಿವುಟ ಹಾಕುವುದು ಕ್ಷೇಮಕರವೆಂದು ಡ್ಯಾವಿಡ್ಸನ್ ಸುರಪುರದ ಮೇಲೆ ಸೈನ್ಯ ಸಾಗಿಸಲು ಭಾರತ ಸರಕಾರದ ಅನುಮತಿಗಾಗಿ ದೀರ್ಘವಾದ ಪತ್ರವೊಂದನ್ನು ಬರೆದು —

" ಸಂಬಳದ ಸೈನಿಕರು ಬೇರೆ ಬೇರೆ ಗುಂಪುಗಳಾಗಿ ಸುರಪುರ ಪ್ರವೇಶ ಮಾಡುತ್ತಿರುವರೆಂದು ನಂಬಲು ಕ್ಯಾಂಬೆಲನ ವರದಿಯೇ ಸಾಕ್ಷಿ. ಸಂಸ್ಥಾನದ ರಾಜನಾಗಲೀ ಅಥವಾ ಅವನ ಸೈನಿಕರಾಗಲೀ ನಮ್ಮ ಮೇಲೆ ಬಹಿರಂಗ ಯುದ್ಧವನ್ನಾರಂಭಿಸುವ ಕಾರ್ಯಗಳಲ್ಲಿ ತೊಡಗದೆ ಇದ್ದರೂ ಅವನು ಸಂಬಳದ ಸೈನಿಕರನ್ನು ಕೂಡಿಸಿ, ಬ್ರಿಟಿಷ ಸರಕಾರದ ವಿರುದ್ಧ ವೈರ ಕಾರ್ಯಕೈಕೊಳ್ಳುವ ಉದ್ದೇಶ ಹೊಂದಿದವನಾಗಿದ್ದಾನೆ.[174] ಆದುದರಿಂದ ಎಲ್ಲಾ ವಿಷಯಗಳನ್ನೂ ಸುರಪುರದ ರಾಜನ ನಡತೆ ಕ್ಷಮಾರ್ಹವಾದ ಒಂದಂಶವೂ ನನಗೆ ಕಂಡುಬರುವುದಿಲ್ಲ. ನಮ್ಮ ಪ್ರಭುತ್ವವಿರುದ್ಧ ಸೈನ್ಯ ಕಟ್ಟುತ್ತಿರುವ ಸ್ಪಷ್ಟ ಚಿತ್ರ ಗೋಚರವಾಗಿರುವದರಿಂದ ಅವನನ್ನು ಬಂಡಾಯಗಾರನೆಂದು ಭಾವಿಸಿ ದಂಡಿಸತಕ್ಕದ್ದೆಂದು ಇಲ್ಲವೆ ಸುರಪುರದಿಂದ ಗಡಿಪಾರು ಮಾಡಿ ದೂರದ ಸೆರೆಮನೆಗೆ ಹಾಕಿ ಆತನ ಸಂಸ್ಥಾನವನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದೆಂದು ನಾನು ಭಾವಿಸುತ್ತೇನೆ.

ರಾಜನು ತನ್ನ ಅನುಚರರೊಡನೆ, ಸಂಬಳದ ಪಡೆಯೊಡನೆ ಯುದ್ಧ ಕಾರ್ಯ ಆರಂಭಿಸಿದನಾದರೆ, ಮೇಲೆ ಸೂಚಿಸಿದ ಮಾರ್ಗ ಹಿಡಿಯದೆ ಅನ್ಯಥಾ ವಿಧಿಯೇ ಇಲ್ಲವೆಂಬುದು ಸ್ಪಷ್ಟ.

---

174. FSH Vol.II, Pp.88-98.

ಹಿಂದೂಸ್ಥಾನದಲ್ಲಿ ನಮ್ಮ ವಿರುದ್ಧ ಎದ್ದಿರುವ ಹಲವು ದಂಗೆಗಳಿಂದ ಸುರಪುರದರಸನು ಸ್ಫೂರ್ತಿ ಪಡೆದಿದ್ದಾನೆ. ಇದುವರೆಗೆ ಬುದ್ಧಿಹೇಳಿ, ಹದ್ದಿನಲ್ಲಿರಿಸಿಕೊಂಡಿದ್ದೆವು. ಈಗ ಸಂಪೂರ್ಣ ಕ್ರಮ ಮೀರಿದ್ದಾನೆ. ತಾನೊಬ್ಬ ಬ್ರಿಟೀಷ ವಿರೋಧಿಯೆಂದು ಒಳನಂಡು, ಸೈನ್ಯ ಸಂಗ್ರಹದಿಂದ ತೋರಿಸಿ ಕೊಟ್ಟಿದ್ದಾನೆ..[175]

—ಎಂಬ ಡ್ಯಾವಿಡ್ಸನನ ಬರೆವಣಿಗೆ ಓದಿದರೆ ಸುರಪುರದ ರಾಜನ ಮೇಲೆ ಈತನಿಗಿರುವ ದ್ವೇಷ, ಸಂಸ್ಥಾನ ಕಸಿಯುವದೆಂಬ ಭಾವನೆ ಸಹಜವಾಗಿಯೇ ಎದ್ದುಕಾಣುತ್ತದೆ.

ಹಿಂದೆ ಕೇವಲ 60 ಸೈನಿಕರೊಂದಿಗೆ ಸುರಪುರದ ಶಿಬಿರದಲ್ಲಿದ್ದ ಕ್ಯಾ. ಕ್ಯಾಂಬೆಲನಿಗೆ ಜೀವಭಯ ಸುರುವಾಗಿತ್ತು. ತಮ್ಮ ಆಳ್ವಿಕೆಯಲ್ಲಿರುವ ಮತ್ತು ಸುರಪುರದ ಶತ್ರುಗಳ ತಾಣವಾಗಿದ್ದ ದೇವದುರ್ಗಕ್ಕೆ ತೆರಳಲು ಅಪೇಕ್ಷೆ ಪಟ್ಟಿದ್ದ. ಸುರಪುರ ನಗರದಲ್ಲಿ ಯಾವ ಶತ್ರು ಸಿಕ್ಕರೂ ಸಂಸ್ಥಾನದ ಸೈನಿಕರ ಕೈಯಿಂದ ಪಾರಾಗುವ ಸ್ಥಿತಿಯಿರಲಿಲ್ಲ. ಇಂಥ ಗಂಡಾಂತರ ಪರಿಸ್ಥಿತಿಯಲ್ಲೂ ಸ್ವತಃ ರಾಜನೆ ಕ್ಯಾಂಬೆಲನನ್ನು ರಕ್ಷಿಸಿ ಅತನ ಇಚ್ಛಾನುಸಾರ 1858ನೇ ಫೆಬ್ರುವರಿ 1ರಂದು ದೇವದುರ್ಗಕ್ಕೆ ತೆರಳಲು ಕೃಷ್ಣಾನದಿ ದಾಟಿಸಿ ಬಂದಿದ್ದ. ಆದರೆ ರೆಸಿಡೆಂಟನ ಆದೇಶದಂತೆ ಲಿಂಗಸೂಗೂರ ಸೈನ್ಯ ಪಡೆಯ ಸಹಾಯವನ್ನು ಪಡೆಯಲು ಕ್ಯಾಂಬೆಲ ತೆರಳಿದ್ದು ಮುಗ್ಧ ರಾಜನಿಗೆ ಗೊತ್ತೇ ಇರಲಿಲ್ಲ.

5. <u>ಆಂಗ್ಲರ ಆಕ್ರಮಣ :</u>

ರೆಸಿಡೆಂಟನ ಆದೇಶದ ಮೇರೆಗೆ ಲಿಂಗಸೂಗೂರಿನಿಂದ ಸೈನ್ಯಾಧಿಕಾರಿ ವಿಂಢಮ್ 212 ಬಂದೂಕು 40 ಬಿಲ್ಲುಗಾರರು, 400 ಕಾಲ್ದಳದೊಂದಿಗೆ ಸುರಪುರದತ್ತ ಹೊರಟ.[176] ಅದರಂತೆ ಮುಂಬೈ, ಮದ್ರಾಸದ ತುಕಡಿಗಳು ಹ್ಯೂಗನ ನೇತೃತ್ವದಲ್ಲಿ ಸಾಗಿದವು. ಧಾರವಾಡದ ಬ್ರಿಟಿಷ ಪಡೆಯೂ ಸಹ ಸೈನ್ಯ ಸಹಾಯ ಕಳಿಸಲು ಒಪ್ಪಿತು.

ಜನೇವರಿ 31ನೆಯ ತಾರೀಖಿನವರೆಗೆ ಶಾಂತವಾಗಿದ್ದ ಸುರಪುರವು ಫೆಬ್ರುವರಿ 1, 1858ರಿಂದ ಕ್ರೋಧ ತಾಳಿತು. ಸುರಪುರದಿಂದ ದೇವದುರ್ಗ, ಲಿಂಗಸೂಗೂರುಗಳಿಗೆ ಹೋದ

---

175. F.S.H. Vol.II Pp.96-97.
176. FPSP, 30 DEC 1859, Nos.156-58.

ಕ್ಯಾಂಬೆಲ್ ಯುದ್ಧದ ಸರ್ವಸಿದ್ಧತೆಯನ್ನು ಮಾಡಿದ. ಯೋಜಿಸಿದಂತೆ ಸುರಪುರದತ್ತ ಬ್ರಿಟಿಷ ಸೈನ್ಯ ಸಾಗಿತು. ವಿಂಢಮನ ನಾಯಕತ್ವದಲ್ಲಿ ಸಾಗಿಬಂದ ಲಿಂಗಸೂಗೂರಿನ ಸೈನ್ಯ ತುಕಡಿ 1858 ಫೆಬ್ರುವರಿ 6ರಂದು ಬೆಳಗಿನ ಜಾವ ಯಕ್ಷಾಪೂರ ಬಯಲಿನಲ್ಲಿ ಬೀಡು ಬಿಟ್ಟಿತು. ಜೊತೆಯಲ್ಲಿ ಕಾ. ಕ್ಯಾಂಬೆಲ್ ಸೈನ್ಯ ಪಡೆಗೆ ಸ್ಫೂರ್ತಿ ತುಂಬುತ್ತಾ ಸುರಪುರದ ರಣರಹಸ್ಯಗಳನ್ನೆಲ್ಲ ತಿಳಿಸುತ್ತಿದ್ದ. "ಆಗ 18 ಪೌಂಡಿನ ಎರಡು ಬಂದೂಕು, 9 ಪೌಂಡಿನ ಎರಡು ಬ್ರಿಟಿಷ ಉತ್ಪಾದನಾ ಬಂದೂಕು, ಇನ್ನೆರಡು ಸಾಮಾನ್ಯ ಬಂದೂಕುಗಳಿದ್ದವು. ಅಲ್ಲದೆ ಐದೂವರೆ ಇಂಚಿನ ಎರಡು ಮದ್ದು ತುಂಬ ಹೊಡೆಯುವ ತೋಪು, ಜೊತೆಗೆ 200 ದಕ್ಷಿಣ ಮರಾಠರ ಕುದುರೆಗಳು, 400 ಜನರ ಆಂಗ್ಲ ಕಾಲ್ದಳ, ಮತ್ತು 900 ಜನರ ಸ್ಥಳೀಯ ಕಾಲ್ದಳವನ್ನು ಕ್ಯಾಂಬೆಲ್ ಮುನ್ನಡೆಸಲು" ಸಿದ್ಧನಾದ. ಹ್ಯೂಗನ್ ನೇತೃತ್ವದಲ್ಲಿ "9 ಪೌಂಡಿನ ಎರಡು ಬಂದೂಕು, 24 ಪೌಂಡಿನ ಒಂದು ಭೂಬಂದೂಕು ಅಲ್ಲದೆ ಒಂದು ಬಿಲ್ಲುಗಾರರ ಪಡೆ, ಇನ್ನೆರಡು ಗೆರಿಲ್ಲಾ ಪಡೆಯನ್ನು ಹಾಗೂ ಎರಡು ತುಕಡಿ ಕಾಲ್ದಳವನ್ನು" ನಿಯಂತ್ರಿಸಲ್ಪಟ್ಟಿತ್ತು. ಬಲರಾಮನಿಂದ ಕಾ. ಹ್ಯೂಡನು "ಐದೂವರೆ ಇಂಚಿನ ಎರಡು ಸಿಡಿಮದ್ದು ಸಿಡಿಸುವ ತುಬಾಕಿಗಳು, ಹಾಗೂ 6 ಪೌಂಡಿನ ಎರಡು ಬಂದೂಕು" ಹೊಂದಿದ್ದನು. ವಿಂಢಮ್ಯಾನು "12 ಪೌಂಡಿನ ಸಿಡಿಮದ್ದು ತುಬಾಕಿ, 40 ಸವಾರರು, 400 ಚಾಕು ಸಹಿತ ಬಂದೂಕು ದಾರಿಗಳನ್ನು ಜೊತೆಯಲ್ಲಿಟ್ಟುಕೊಂಡು ಯುದ್ಧಕ್ಕೆ ಸಿದ್ಧನಾಗಿದ್ದನು.[176ಎ]

ಇಷ್ಟೆಲ್ಲ ಯುದ್ಧ ಸಾಮಗ್ರಿಗಳೊಂದಿಗೆ ಸುರಪುರದ ವಿರುದ್ಧ ಸಿದ್ಧವಾಗಿ ಬಂದ ಬ್ರಿಟಿಷ ಸೈನ್ಯವು "ಸುರಪುರದ ಪತನದಿಂದಲೇ ತಮ್ಮ ಸೌಖ್ಯ ಸಾಧ್ಯವೆಂದು 23 ವರ್ಷ ವಯಸ್ಸಿನ ರಾಜಾ ನಾಲ್ವಡಿ ವೆಂಕಟಪ್ಪನಾಯಕನ ಮೇಲೆ ಯುದ್ಧ ಸಾರಿದರು. ಕೋಟೆ ಆಕ್ರಮಿಸಲು ಒಂದು ತುಕಡಿ ಮಾಲ್ಕಮನ ನೇತೃತ್ವದಲ್ಲಿ ಸಕಲ ಸಿದ್ಧತೆಯೊಂದಿಗೆ ಮುಂದೂಡಿಯಲ್ಪಟ್ಟಿತು.

ಸುರಪುರದ ಮೇಲೆ ಇಂಗ್ಲೀಷರ ಸೈನ್ಯ ಯುದ್ಧಕ್ಕಾಗಿ ಸಾಗಿಬಂದಿರುವ ಸುದ್ದಿ ಸಂಸ್ಥಾನದ ತುಂಬೆಲ್ಲಾ ಕಾಡ್ಗಿಚ್ಚಿನಂತೆ ಹಬ್ಬಿತು. ರಾಜನಿಂದ ಹಿಡಿದು ಸಂಸ್ಥಾನದ ಸಾಮಾನ್ಯರು ಸಹ ದಿಕ್ಕು ತೋಚದಂತೆ ಓಡಾಡತೊಡಗಿದರು. ನಗರದ ಹೊರವಲಯದಲ್ಲಿ ಬ್ರಿಟಿಷ ಸೈನ್ಯ ಹೂಡಿದ ಶಿಬಿರ, ನಡೆಸಿದ ಕವಾಯತು, ಸಿದ್ಧಗೊಳಿಸಿದ ಯುದ್ಧ ಸಾಮಗ್ರಿಗಳನ್ನೆಲ್ಲ ಕಂಡ ಸಂಸ್ಥಾನದ ಜನತೆ

---

176 ಎ. HPMK Vol.I 1962 p-243.

ದಿಗ್ಭ್ರಮೆಗೊಂಡರು. ಆಗಬಹುದಾದ ಘನಘೋರ ಯುದ್ಧದ ಭೀಕರ ದೃಶ್ಯಾವಳಿಗಳನ್ನೆಲ್ಲ ಕಲ್ಪಿಸಿಕೊಂಡ ಜನ ತತ್ತರಿಸಿಹೋದರು. ಸ್ವತಃ ರಾಜನೆ ನಿಯಂತ್ರಣ ತಪ್ಪಿ ಬೀಳತೊಡಗಿದನು. ಈ ಮಧ್ಯೆ ಹಿಡಿದೆದ್ದ ಸಂಬಳದ ಸೈನಿಕರೆಲ್ಲ ಪಾದರಸದಂತೆ ಓಡುತ್ತ ಯುದ್ಧ ಸನ್ನಾಹಕ್ಕೆ ಸಿದ್ಧರಾದರು.

ಆದರೆ ಮೂಲಬೀಡಪ್ಪ, ಮರಾಠ, ಮತ್ತಿನ್ನಿತರ ಸೈನಿಕರಿಗೆ ಆದೇಶ ಕೊಡುವವರೇ ಇಲ್ಲದಂತಾಗಿದೆ. ಸೈನ್ಯ ಮುನ್ನಡೆಸಬೇಕಾದ ರಾಜನೆ ಅರಮನೆಯಲ್ಲಿ ಅಡಗಿದ್ದಾನೆ. ನಿರ್ದಿಷ್ಟ ಧೋರಣೆ ತಾಳಲು ಆತನಿಗೆ ಸಾಧ್ಯವಾಗುತ್ತಿಲ್ಲ. ಇದು ಅಲ್ಪವಯದ ದೌರ್ಬಲ್ಯವೋ ಅಥವಾ ಬ್ರಿಟಿಷರನ್ನು ವಿರುದ್ಧ ಹಾಕಿಕೊಂಡು ಬದುಕುವುದೆಲ್ಲಿಗೆಂದು ಭಯವೋ ಗೊತ್ತಾಗಲ್ಲ. ರಾಜನಿಲ್ಲದ ರಣರಂಗದಲ್ಲಿ ಧುಮುಕುವವರಾರು? ಸೈನ್ಯಕ್ಕೆ 'ಶಿಸ್ತು ತುಂಬ, ಸ್ಫೂರ್ತಿ ನೀಡುವ ದಂಡಿನ ದೊರೆಯೇ ಇಲ್ಲದಾಗ ಮುನ್ನುಗ್ಗುವುದೆಲ್ಲಿಗೆ? 'ಸಂಸ್ಥಾನದ ಸಮಸ್ತ ಸಂರಕ್ಷಣೆ ಸೈನ್ಯದ ಮೇಲಿದೆ' ಎಂಬ ಬೀಜ ಮಂತ್ರ ಬಿತ್ತುವವರೇ ಇಲ್ಲದಾಗ 'ಬಲ'ಕ್ಕೆ ಬೆನ್ನೆಲುಬಾದರು ಎಲ್ಲಿಂದ ಬಂದೀತು? ಅಂತೂ — ಇಂತೂ ವೈರಿಗಳೆಲ್ಲ ಸುರಪುರವನ್ನು ಸುತ್ತುವರೆದು ರಣಕಣ ನಿರ್ಮಿಸಿಕೊಂಡು ನಿಂತಿರುವಾಗ ಸಂಸ್ಥಾನದ ಸ್ಥಿತಿ-ಈ ರೀತಿ ಚಿಂತಾಜನಕವಾಗಿತ್ತು. ನಿಂತನೆಲ ಇಲ್ಲದಂತೆ ಓಡುವ ನಗರದ ಜನತೆ ಸ್ವರಕ್ಷಣೆಯಲ್ಲಿಯೇ ತಲ್ಲೀನರಾಗಿದ್ದರೆ ಹೊರತು, ಸಂಸ್ಥಾನವನ್ನು ವೈರಿಗಳಿಂದ ರಕ್ಷಿಸಬೇಕೆಂಬುದು ಯಾರಲ್ಲೂ ಇರಲಿಲ್ಲ. ಇಂಥ ವಿಷಮ ಪರಿಸ್ಥಿತಿಯಲ್ಲಿ ವಾಗಿನಗೇರಿ ದಿವಾನ ಭೀಮರಾಯ ಬ್ರಿಟಿಷ ಸೈನ್ಯದೊಂದಿಗೆ ಬಾಂಧವ್ಯ ಬೆಳೆಸಿದ್ದ. ಕ್ಯಾಂಬೆಲನೊಂದಿಗೆ ಎಲ್ಲಾ ರೀತಿಯ ಸಂಪರ್ಕ ಹೊಂದಿದ್ದನೆನ್ನಲು ರೆಸಿಡೆಂಟನ ಪತ್ರಗಳೇ ಸಾಕ್ಷಿ. ಯುದ್ಧ ಪ್ರಸಂಗದಲ್ಲಿ ರಹಸ್ಯ ವರದಿ ಹೊರಬಿಡಬಾರದೆಂದು ಸುರಪುರದ ರಣನೀತಿಯಾಗಿದ್ದರೂ ಭೀಮರಾಯ ಅದನ್ನು ಉಲ್ಲಂಘಿಸಿದವರಲ್ಲಿ ಮೊದಲಿಗನಾಗಿದ್ದ. ಮೊದಲಿನಿಂದಲೂ ಕ್ಯಾಂಬೆಲನೊಂದಿಗೆ ಸಲುಗೆಯೊಂದಿದ್ದ-ಈತ 'ಸಂಸ್ಥಾನ ವಿರೋಧಿ' ಕೃತ್ಯದಲ್ಲಿ ಸದಾ ಎತ್ತಿದ ಕೈ ಎನಿಸಿದ್ದ.

— 'ಸುರಪುರವನ್ನು ಸುತ್ತುವರಿದ, ಬ್ರಿಟಿಷ ಸೈನ್ಯಕ್ಕೆ ಸಂಸ್ಥಾನದ ಸಂಪೂರ್ಣ ಸೈನ್ಯ ಪ್ರತಿಯಾಗಿ ಸಿದ್ಧಗೊಂಡಿತ್ತು' ಎನ್ನಲು ಯಾವ ದಾಖಲೆಗಳು ಇಂದು ದೊರೆತಿಲ್ಲ. ಆದರೆ ಸಂಸ್ಥಾನದ ಪರವಾಗಿ ಅರಬರು, ರೋಹಿಲೆಯರು ಮಾತ್ರ ಕೋಟೆಯ ಬುರುಜುಗಳ ಮೇಲೇರಿ ತೋಪುಗಳೊಂದಿಗೆ ಸಿದ್ಧರಾಗಿದ್ದರು. ಇವರ ಸಂಖ್ಯೆ ಅಲ್ಪಮಾತ್ರ. ಇಡೀ ಸಂಸ್ಥಾನದ ಸೈನ್ಯ

ಸಿಡಿದೆದ್ದರೆ ಈಗ ಸುತ್ತುವರೆದ ಬ್ರಿಟಿಷ ಸೈನ್ಯ ಎಂದೋ ಧೂಳೀಪಟವಾಗುತ್ತಿತ್ತು. ಇದಕ್ಕೆ ಪಾಂಡಿಚೇರಿ ಯುದ್ಧ ವಿಜಯವೇ ಉದಾಹರಣೆ.

ಈ ಎಲ್ಲಾ ಅಭದ್ರ ಸಂದರ್ಭ ಅರಿತುಕೊಂಡ ಬ್ರಿಟಿಷ ಬಣ ಫೆಬ್ರುವರಿ 7, 1858 ರಂದು ಬೆಳಗಿನ ಜಾವ ಸುರಪುರದ ಮೇಲೆ ನುಗ್ಗಿತು. ವೆಂಕಟಾಪೂರ ದಿಬ್ಬ ಅಗಸಿಗೆ ಬಳವಂತರಾವ ಘೋರಪಡೆ ಸುರಪುರದ ಪರವಾಗಿದ್ದು ಕಾವಲು ಹಾಕಿದ್ದ. ವೈರಿಗಳು ಮುನ್ನುಗ್ಗಲು ಸಾಧ್ಯವಾಗದ ಸರ್ಪಗಾವಲು ಇರಿಸಿತ್ತು. ಎರಡು ಕಡೆಯಿಂದ ತೋಪುಗಳು ಸಿಡಿಲಂತೆ ಅಬ್ಬರಿಸಿದವು. ಕೋಟೆಯ ಮೇಲಿಂದ ಗುಂಡಿನ ಸುರಿಮಳೆ ಸಿಡಿಯತೊಡಗಿತು. ಬಿಲ್ಲುಗಳಿಂದ ಬರುವ ಬಾಣಗಳು ವೈರಿಹೃದಯ .. ಸೀಳುವಂತಿದ್ದವು. ಬಿಸಿಲು ನೆತ್ತಿಗೇರಿತು. ವೈರಿಬ್ರಿಟಿಷ ಪಡೆ ನಿಧಾನವಾಗಿ ತನ್ನ ಶಿಬಿರವನ್ನು ಹಿಂದಕ್ಕೆ ಸ್ಥಳಾಂತರಿಸಿತು. ಫೆಬ್ರುವರಿ 7ರ ರಾತ್ರಿ ಯುದ್ಧದ ಸಂಪೂರ್ಣ ಯೋಜನೆ, ಗುಪ್ತಮಾರ್ಗ, ರಣರಹಸ್ಯಗಳೆಲ್ಲ ಸೈನ್ಯಾಧಿಕಾರಿಗಳಿಗೆ ಹೇಳಲಾಯಿತು. ಫೆಬ್ರುವರಿ 8ರ ಮುಂಜಾವಿನಲ್ಲಿ ಕರ್ನಲ ಸೈನ್ಯಪಡೆಯೊಂದಿಗೆ ಮೇಜರ ಹ್ಯೂಗ ಬಂದು ಸೇರಿಕೊಂಡನು. ಇದರಿಂದ ಇಂಗ್ರೇಜ ಲಷ್ಕರ ಬಲಯುತಗೊಂಡಿತು. ವಿಂಢಮ್, ಕ್ಯಾಂಬೆಲ ಮಾಲ್ಕಮ್, ನ್ಯೂಬೆರಿ, ಸ್ಟುಅರ್ಟ ಮತ್ತು ಇದೀಗ ಬಂದ ಹ್ಯೂಗರ ನೇತೃತ್ವದಲ್ಲಿ ಬ್ರಿಟಿಷ ಸೈನ್ಯ ಸುರಪುರವನ್ನು ಸುಟ್ಟು ಬೂದಿಮಾಡಲು ಸಿದ್ಧವಾಯಿತು. ಸುರಪುರದ ನಾಲ್ಕು ಮುಖ್ಯ ಮಾರ್ಗಗಳಿಗೆ ತಮ್ಮ ತುಕಡಿಗಳೊಂದಿಗೆ ಬಂದು ಯುದ್ಧ ಕಹಳೆ ಊದಿದರು. ಇತ್ತ ಸಿದ್ದಾಪೂರ ಅಗಸಿ ಮಾಲಕ ನುಗ್ಗುತ್ತಿರುವಂತೆ, ಅತ್ತ ವೆಂಕಟಾಪೂರ ದಿಬ್ಬಯಿಂದ ವೈರಿಗಳು ಧುಮುಕಿದರು. ಗುಂಡಿನ ಚಕಮಕಿ ನಡೆಯಿತು. ಎರಡು ಬಣದಲ್ಲಿ ಹೆಣಗಳುರುಳಿಬಿದ್ದವು.[177] ರೊಚ್ಚಿಗೆದ್ದ ರೋಹಿಲರು ರಣದಲ್ಲಿ ರಕ್ತದೋಕುಳಿಗೈಯತೊಡಗಿದರು. ಸ್ಟುಅರ್ಟನ ಮೂಳೆ ಮುರಿದವು. ಅದೇ ಸಂದರ್ಭದಲ್ಲಿ ಕ್ಯಾ.ನ್ಯೂಬೆರಿ ಇವರ ಹೊಡೆತಕ್ಕೆ ಸಿಲುಕ್ಕುರುಳಿದ. ಕೂಡಲೇ ಓರ್ವ ರೋಹಿಲ ಓಡಿ ಹೋಗಿ ಅವನ ರುಂಡವನ್ನೇ ಕತ್ತರಿಸಿಕೊಂಡು ಬಂದನು. ಮೊದಲು ಅರಸನಿಗೆ ಈ ರುಂಡ ತೋರಿಸಿ ಬಹುಮಾನ ಪಡೆಯಬೇಕೆಂದು ಅರಮನೆಗೆ ರಕ್ತ ಸುರಿಯುವ ರುಂಡದೊಂದಿಗೆ ಓಡಿದನು. ರುಂಡ ಕಂಡ ರಾಜ ಭಯದಿಂದ ತತ್ತರಿಸಿ ಹೋದ. ತನಗೆ ಮತ್ತು ಸಂಸ್ಥಾನಕ್ಕೆನ್ನು ಕೊನೆಯಕಾಲವೆಂದು ತಿಳಿದುಕೊಂಡ. ಕೋಟೆಯ ಗಡಿಯಲ್ಲಿ ಗುಂಡಿನ ಸಪ್ಪಳದ ಭಯಂಕರ ಶಬ್ದ ಅರಮನೆಯ ಗೋಡೆಗೆ ಅಪ್ಪಳಿಸುತ್ತಿದ್ದವು. ರಾಜನಿಗೆ

177. ಭೀಮಣ್ಣ ಬೊನ್ನಾಳ — ಸುರಪುರ ವೆಂಕಟಪ್ಪನಾಯಕ (ನಾಟಕ), ಪುಟ-18.

ಯುದ್ಧಮಾಡುವ ಮನಸ್ಸಿಲ್ಲ. ಸೋಲುವೆನೆಂಬ ಭಯ ಮನದಲ್ಲಿ ಸಂಪೂರ್ಣ ಆವರಿಸಿದೆ. ಮೊದಲೇ ಸೋಲು ಬಂದಾಯ್ತು, ದಂಗೆಗಳಿದ್ದ ಸ್ಪೂರ್ತಿ ಉಕ್ಕುತ್ತಿತ್ತು. ಈಗ ಪ್ರತ್ಯಕ್ಷ ರಣಪಣದಲ್ಲಿ ತನ್ನ ಹಣೆಬರಹ ಎಷ್ಟೆಂದು ಬರೆದುಕೊಳ್ಳಬೇಕಾಗಿ ಬಂತು. ಸಂಜೆಯಾಗುತ್ತ ಬಂದಾಗ ಪಟ್ಟದರಾಣಿ ರಂಗಮ್ಮನನ್ನು ಮತ್ತು ಇನ್ನುಳಿದ ಪತ್ನಿಯರೆಲ್ಲ ಕರೆಯಿಸಿದ ರಾಜ ಕೂಡಲೇ ಸುರಪುರ ಬಿಟ್ಟು ತೆರಳಲು ಸೂಚಿಸಿದ. ಇದ್ದ ಮೈಮೇಲಿನ ಬೆಳ್ಳಿ-ಬಂಗಾರ ಬಟ್ಟೆ ಹುಟ್ಟುದಬಟ್ಟೆಯ ಮೇಲೆ ರಾಣಿಯರೆಲ್ಲ ಅರಸನ ಆಜ್ಞೆ ಮೇರೆಗೆ ಅರಮನೆಯಿಂದ ಹೊರಬಿದ್ದರು. ಹರಪನಹಳ್ಳಿ ಬಸಪ್ಪನನ್ನು ಅವರೊಂದಿಗೆ ಜೊತೆಯಾಗಿ ಕಳುಹಿಸಲಾಯಿತು.[178]

ಸಂಜೆಯಾಗುತ್ತಲಿತ್ತು. ದಿವಾನ ಭೀಮರಾಯ ಓಡಿಬಂದವನೆ “ ಮಹಾರಾಜ, ತಾವು ತಕ್ಷಣವೇ ಸಂಸ್ಥಾನದಿಂದ ಹೊರಡಬೇಕು. ಇಲ್ಲವಾದರೆ ಒಳನುಗ್ಗುತ್ತಿರುವ ವೈರಿಗಳಿಂದ ನಿಮಗೆ ಅಪಾಯವಿದೆ. ಹೈದ್ರಾಬಾದ ರೆಸಿಡೆಂಟನಿಗೆ ಇಲ್ಲವೆ ನಿಜಾಮ ಸರಕಾರಕ್ಕೆ ಭಿನ್ನವಿಸಿಕೊಂಡು ಯುದ್ಧ ನಿಲ್ಲಿಸಲು ಮನವಿ ಮಾಡಿಕೊಳ್ಳಿ. ಸುಮ್ಮನೆ ಸುರಪುರ ಸಂಪೂರ್ಣ ಸುಟ್ಟುಬೂದಿ ಆಗುತ್ತದೆ. ಅದನ್ನು ಉಳಿಸುವ ಜವಾಬ್ದಾರಿ ತಮ್ಮ ಮೇಲಿದೆ. ”

ಎಂದು ಕೈಯೊಡ್ಡಿ ಬೇಡಿದ ವೃದ್ಧ ಮಂತ್ರಿ ಭೀಮರಾಯನ ಮಾತಿಗೆ ರಾಜ ಮನಸೋತ. ಮೊದಲಿನಂತೆ ಮೋಸ ಮಾಡಬಹುದೆಂದು ಎಳ್ಳಷ್ಟು ಆತನಿಗೆ ಅನಿಸಲಿಲ್ಲ. ತಕ್ಷಣವೇ ಬೋನಾಳ ರಾಮಪ್ಪ, ಕೃಷ್ಣರೊಂದಿಗೆ ತನ್ನ ಮೃಗರಾಜ ಕುದುರೆ ಏರಿದ ವೆಂಕಟಪ್ಪನಾಯಕ ಅರಮನೆಯ ಪಶ್ಚಿಮದ ದಿಡ್ಡಿಬಾಗಿಲಿನಿಂದ ಸಿದ್ಧನ ತೋಟಕ್ಕೆ ಪಾರಾಗಿ ಬಂದ. ತೋಷಖಾನೆಯ ವಸ್ತು — ಒಡವೆ, ಜಮದಾರ ಖಾನೆಯಿಂದ ತೆಗೆದ ಬೆಳ್ಳಿ — ಬಂಗಾರವೆಲ್ಲ ದಿವಾನ ಭೀಮರಾಯನಿಗೆ ಒಪ್ಪಿಸಿ ಸಿದ್ಧನ ತೋಟಕ್ಕೆ ಬರಲು ತಿಳಿಸಿದ್ದ. ಆದರೆ ಕೊನೆಗೂ ಭೀಮರಾಯ ಮೋಸ ಮಾಡಿದ್ದ. ರಾಜ ಹೇಳಿದ ಸ್ಥಳಕ್ಕೆ ಬರಲೇ ಇಲ್ಲ. ಬೆಳ್ಳಿ-ಬಂಗಾರದೊಂದಿಗೆ ಪರಾರಿಯಾಗಿದ್ದ. ಈಗ ತಡವಾದರೆ ಮುಂದಿನ ಕೆಲಸ ಕೆಡುವುದೆಂದ ರಾಜ ಹೈದ್ರಾಬಾದನತ್ತ ತನ್ನ ಪ್ರಯಾಣ ಬೆಳೆಸಿದ.

6. <u>ಸಂಸ್ಥಾನದ ಪತನ : ರಾಜನ ಬಂಧನ :</u>

ಫೆಬ್ರುವರಿ 8, 1858 ರಂದು ಸುರಪುರದ ಕೋಟೆಯ ಗಡಿಯಲ್ಲಿ ವೈರಿಗಳು ನುಗ್ಗತೊಡಗಿದರು.[179] ಗುಂಡಿನ ಚಕಮಕಿಯಲ್ಲಿ ವಾತಾವರಣ ಭಯಂಕರ ಸ್ವರೂಪ ತಾಳಿತು.

---

178. FPC 16 APR 1858, No.86.
179. ಡಾ. ಸೂರ್ಯನಾಥ ಕಾಮತ — ಕರ್ನಾಟಕ ಇತಿಹಾಸ ಕಥಾಮಂಜರಿ, ಪುಟ-75.

ಬ್ರಿಟೀಷರ ಬಲದೆದುರು ಸಂಸ್ಥಾನದ ಸೈನ್ಯ ಹಿಂದೆ ಸರಿಯುತೊಡಗಿತು. ಅಷ್ಟಿಷ್ಟು ಸೈನಿಕರು ತಮ್ಮ ಪ್ರಾಣದ ಹಂಗು ತೊರೆದು ಯುದ್ಧ ಮಾಡುತ್ತಿರುವಾಗಲೇ 'ರಾಜ ವೆಂಕಟಪ್ಪ ನಾಯಕ ಓಡಿಹೋದ' ಎಂಬ ಸುದ್ದಿಯನ್ನು ಸೈನ್ಯದಲ್ಲಿ ಯಾರೋ ಹಬ್ಬಿಸಿದರು. ಇದನ್ನು ಕೇಳಿದಾಕ್ಷಣವೇ ಸುರುಪುರದ ಪರ ಸೈನ್ಯ ಪಲಾಯನ ಮಾಡಿತು. ಸುರಪುರ ನಗರವೆಲ್ಲ ಸೋಲಿನ ಭಯದಿಂದ ತತ್ತರಿಸಿತು. ಕೈಗೆ ಸಿಕ್ಕ ವಸ್ತು ಒಡವೆಗಳೊಂದಿಗೆ ಜೀವಗಳ್ಳರಾಗಿ ಊರಿನ ಜನರೆಲ್ಲ ದಿಕ್ಕುಪಾಲಾಗಿ ಓಡಿದರು. ಫೆಬ್ರವರಿ 8 ರಂದು ರಾತ್ರಿ ಸುರಪುರಕ್ಕೆ ಸಂಪೂರ್ಣ ಮೌನ ಆವರಿಸಿ ಮಸಣವಾಗಿತ್ತು. ಅಂತಃಪುರದಿಂದ ರಾಣಿಯರೆಲ್ಲ ನಿನ್ನೆಯಿಂದೆ ಸ್ಥಳಾಂತರಿಸಲಾಗಿತ್ತು. ರಾಜನು ಸಹ ಇಂದು ಹೈದರಾಬಾದಿಗೆ ಹೋಗಿದ್ದ.[180] ಇದೆಲ್ಲವನ್ನು ಕ್ಯಾಂಬೆಲನಿಗೆ ದಿವಾನ ಡಾಗಿಣಗೇರಿ ಭೀಮರಾಯ ವರದಿ ಮಾಡುತ್ತಲೇ ಇದ್ದ.

ಫೆಬ್ರವರಿ 9, 1958 ರಂದು ಬೆಳಗಿನ ಜಾವ ಗಡಿಯಲ್ಲಿದ್ದ ಬ್ರಿಟಿಷ ಪಡೆ ಸುರಪುರದೊಳಗೆ ನುಗ್ಗಿತು. ಸುರಪುರ ಸಂಸ್ಥಾನ ಪತನವಾಗಿತ್ತು. ಅದು ಈಗ ಬ್ರಿಟೀಷರ ವಶವಾಯಿತು. ಅರಮನೆ ಮೇಲೆ ಜಾಕಧ್ವಜ ಏರಿತು. ಸೈನಿಕರೆಲ್ಲ ನಗರವನ್ನು ಲೂಟಿ ಮಾಡಿದರೆ, ಅಧಿಕಾರಿಗಳೆಲ್ಲ ಅರಮನೆಯನ್ನು ಆಕ್ರಮಿಸಿದರು. ನೂರಾರು ವರ್ಷಗಳಿಂದ ಮೆರೆದ ಸಂಸ್ಥಾನವಿಂದು ಬ್ರಿಟಿಷ ಸೈನ್ಯದಿಂದ ಸಂಪೂರ್ಣ ಸುಲಿಗೆಯಾಯಿತು. ತಡೆಯುವರಾರು ಇಲ್ಲದಾದಾಗ ಬಡಿಯುವವರಿಗೇನು? ಪ್ರಾಣ ಉಳಿಸಿಕೊಳ್ಳಲು ಓಡಿಹೋದ ಜನರ ಸಂಪತ್ತೆಲ್ಲ ಸಂಸ್ಥಾನದಲ್ಲಿ ಇತ್ತು. ಅದೆಲ್ಲವೂ ನಿರಾಯಾಸವಾಗಿ ಶತ್ರುಗಳ ವಶಕ್ಕೆ ಬಂತು. 12 ಆನೆ, 50 ಒಂಟೆ, 500 ಕುದುರೆ ಮುಂತಾದ ಯುದ್ಧ ಸಾಮಗ್ರಿಗಳು ಇಂಗ್ಲೀಷರ ಸ್ವಾಧೀನವಾದವು. ವಿಂಢಮ್ಮನು ಸಂಸ್ಥಾನವನ್ನು ತನ್ನ ಸೈನ್ಯದ ಹತೋಟಿಗೆ ತೆಗೆದುಕೊಂಡರೆ, ಕ್ಯಾಂಬೆಲ ಸುರಪುರದ ಅಧಿಕಾರದ ಸೂತ್ರ ಹಿಡಿದನು.

ಅತ್ತ, ದಿವಾನ ಭೀಮರಾಯನ ಮಾತಿಗೆ ಮರುಳಾದ ಸುರಪುರದ ರಾಜ ಹೈದ್ರಾಬಾದ ಮಾರ್ಗಹಿಡಿದು ಹೊರಟಿದ್ದ. ರಾಮಪ್ಪ ಮತ್ತು ಕೃಷ್ಣಪ್ಪರನ್ನು ಬಿಟ್ಟರೆ ಜೊತೆಗಾರರೆಂದರೆ ಕುದುರೆಗಳು ಮಾತ್ರ. ಭೀಮಾನದಿಯನ್ನು ದಾಟಿ ನಾಲ್ವಾರಕ್ಕೆ ಬಂದರು. ಸಂಸ್ಥಾನದ ಸಂಪರ್ಕದಲ್ಲಿದ್ದ ದೊಡ್ಡಪ್ಪನೆಂಬ ಆ ಊರ ಗೌಡನನ್ನು ಭೇಟಿಯಾಗಿ ವಾಕಲಪರವಿ, ಹಣಮನಗಡ್ಡಿ ಮಾರ್ಗವಾಗಿ ಮುನ್ನಡೆದನು. ಷಮಸಾಬಾದಿಯಿಂದ ಹೊರಟು ಕೊನೆಗೆ ಹೈದ್ರಾಬಾದ ತಲುಪಿದನು.

ಸುರಪುರದಿಂದ 80 ಕಿ.ಮಿ. ದೂರದ ಹೈದ್ರಾಬಾದನ್ನು ಊಟವಿಲ್ಲದೆ ಕ್ರಮಿಸಿದ ರಾಜ ಬಹಳ ಆಯಾಸಗೊಂಡಿದ್ದ. ಸಂಸ್ಥಾನ ಪತನದ ಮಾನಸಿಕ ವೇದನೆ ಒಂದೆಡೆ, ಈ ದೂರದ ಮಾರ್ಗ

---

180. FPSP, 30 DEC 1859, Nos. 174-76.

ಪ್ರಯಾಣ ಇನ್ನೊಂದೆಡೆಯಾಗಿ ಭಿಲ್ಲಿಯಂತೆ ನಡೆದಿದ್ದವು. ಇನ್ನೂ 24 ವರ್ಷ ವಯಸ್ಸು ತುಂಬದ ತರುಣ ನಾಲ್ವಡಿ ವೆಂಕಟಪ್ಪ ನಾಯಕ ತಾಯಿಯನ್ನು ಕಳೆದುಕೊಂಡ ಕರುವಿನಂತೆ ಹೈದ್ರಾಬಾದ ನಗರದಲ್ಲಿ ಕಂಗಾಲಾಗಿ ಅಲೆಯುತ್ತಿದ್ದ. ನಿಜಾಮನನ್ನು ಕಾಣುವ ಯತ್ನದಲ್ಲಿದ್ದಾಗ ವನಪರ್ತಿಯ ರಾಜನು ಈತನನ್ನು ಗುರುತಿಸಿ ಸಾಲಾರಜಂಗನಿಗೆ ತಿಳಿಸಿದರು. ಇದೀಗ ತಾನೆ ಸುರಪುರದಲ್ಲಿ ನಡೆದ ಯುದ್ಧದಿಂದ ರಾಜನ ಮೇಲೆ ರಾಜ್ಯದ್ರೋಹದ ಅಪಾದನೆಯಿದೆಯೆಂದು ಇವರಿರ್ವರು ಕೂಡಿ ರಾಜನನ್ನು ಬಂಧಿಸಿ ರೆಸಿಡೆಂಟನಿಗೆ ಒಪ್ಪಿಸಿದರು. ರೆಸಿಡೆಂಟ ಡೇವಿಡ್ಸನ್ ತಾನಿಟ್ಟ ಗುರಿ ಈಡೇರಿತ್ತೆಂದು ಅತಿ ಉಲ್ಲಾಸದಿಂದ 12ನೇ ಫೆಬ್ರುವರಿ 1858ರಂದು ರಾಜನನ್ನು ಸಿಕಂದರಾಬಾದ ಕಂಟೋನ್ಮೆಂಟಿನಲ್ಲಿ ಬಂಧಿಸಿಡಲು ಆಜ್ಞೆ ಮಾಡಿದ.

7. ಸಂಸ್ಥಾನ ಪತನದ ಸಿಂಹಾವಲೋಕನ:

ಗಡ್ಡಿಪಿಡ್ಡನಾಯಕನ ಪ್ರಯತ್ನದಿಂದ ಆರಂಭಗೊಂಡ ವಾಗಿನಗೇರಿ ಕಿಲ್ಲೆಯ ಪಾಳೆಗಾರಿಕೆಯು ಸುರಪುರವನ್ನು ಸ್ವತಂತ್ರ ರಾಜಧಾನಿಯಾಗಿ ಹೊಂದುವ ಮೂಲಕ ಶ್ರೀಮಂತ ಸಂಸ್ಥಾನವೆಂದು ಕ್ರಿ.ಶ. 1708ರಲ್ಲಿ ಸಾಬೀತು ಪಡಿಸಿತ್ತು. ಆಳಿದ ಹನ್ನೊಂದು ಜನ ಅಪ್ರತಿಮ ಅರಸರಲ್ಲಿ ನಾಲ್ವಡಿ ವೆಂಕಟಪ್ಪ ನಾಯಕನೇ ಸಂಸ್ಥಾನದ ಕೊನೆಯ ರಾಜನೆಂದು ವಿಧಿ ಈ ಯುದ್ಧದ ಮೂಲಕ ಬರೆದಿತ್ತು. ಸುಮಾರು ಎರಡೂವರೆ ಶತಮಾನಗಳ ದೀರ್ಘ ಆಳ್ವಿಕೆಯು ತರುಣ ರಾಜನ ಕೈಯಲ್ಲಿ ಕಳೆದುಹೋಯಿತು.

1858ನೇ ಫೆಬ್ರುವರಿ 7 ಮತ್ತು 8 ರಂದು ಸುರಪುರದ ಮೇಲೆ ನಡೆದ ಬ್ರಿಟಿಷರ ಭೀಕರ ಆಕ್ರಮಣ ಸಂಸ್ಥಾನವನ್ನೇ ಪತನಗೊಳಿಸಿತು. ಸುರಪುರದ ಪೂರ್ವಪರಿಚಯ ಮತ್ತು ಸಂಸ್ಥಾನ ಪತನದ ಪರಿಸರವನ್ನು ಅಧಿಕೃತವಾಗಿ ತಿಳಿಸುವ ಮೂರು ಆಧಾರಗಳನ್ನು[181] ಕಪಟರಾಳ ಕೃಷ್ಣರಾಯರು ತಮ್ಮ ಅಧ್ಯಯನಕ್ಕೆ ಬಳಸಿಕೊಂಡಿದ್ದಾರೆ. ಅವುಗಳೆಂದರೆ :

(1) ಸಂಸ್ಥಾನದಲ್ಲಿ ಸಿಬ್ಬಂದಿಯಾಗಿದ್ದ ಮುಜುಮದಾರ ಲಿಂಗಪ್ಪನು ಬರೆದಿಟ್ಟಿರುವ 'ಹಕೀಕತ್ತು' ಎಂಬ ಬರೆಹವು ಬಹು ಮಹತ್ವದ್ದಾಗಿದೆ. ಯುದ್ಧ ಪ್ರಸಂಗವನ್ನೆಲ್ಲ ಪ್ರತ್ಯಕ್ಷವಾಗಿ ಕಂಡ ಲಿಂಗಪ್ಪನು ಅಲ್ಪಸ್ವಲ್ಪ ಕಲ್ಪನೆಯನ್ನು ಬೆರಸಿ ಬರೆದಿದ್ದಾನೆ. ಬರೆಹದುದ್ದಕ್ಕೂ ಸಂಸ್ಥಾನದ ಪರವಾಗಿಯೇ ವಾದವಿರುವದೊಂದು ಇಲ್ಲಿಯ ವಿಶೇಷ. ಇದು ಬ್ರಿಟಿಷ್ ಆಳ್ವಿಕೆಯ ವಿರೋಧಿ ಮನೋಭಾವನೆಯನ್ನು ಸೂಚಿಸುತ್ತದೆ. ವರ್ಣನಾತ್ಮಕ ಕಥನಕ್ರಿಯೆ ಗುಣವೇ ಇಲ್ಲಿಯ ವೈಶಿಷ್ಟ್ಯ. ಐತಿಹಾಸಿಕ ಘಟನೆಗಳಿಗೆ ರಂಜನೆ, ರೋಮಾಂಚನ ಬೆರೆಸುವುದರಿಂದ ಮೂಲ ಸತ್ಯ ಕೈಗೆಟುಕದೆ ಹೋಗುವ ಅಪಾಯವು

181. ಸು.ಸಂ. ಇ. ಪು. 187.

ಇದೆ. ಬ್ರಿಟಿಷ ಮತ್ತು ನಿಜಾಮನ ಹೈದ್ರಾಬಾದ ಆಳ್ವಿಕೆ ಹಾಗೂ ಅವರಲ್ಲಿಯ ಧೋರಣೆ, ಆದ ಒಪ್ಪಂದಗಳ ಪೂರ್ವಕಲ್ಪನೆ ಬರೆಹಗಾರನಿಗೆ ಬಹಳಷ್ಟಿಲ್ಲವೆಂಬುದೊಂದೆ ಕೊರಗು. ಇದು ಬಿಟ್ಟರೆ ಸಂಸ್ಥಾನದ ಕೊನೆಗಾಲವನ್ನು ಸಮಗ್ರವಾಗಿ ಚಿತ್ರಿಸುವ ಪ್ರಾಮಾಣಿಕ ಕೃತಿಯಿತ್ತು ಈ 'ಹಕೀಕತ್ತು'.

(2) ರೆಸಿಡೆಂಟ್ ಡ್ಯಾವಿಡ್ಸನನು 1858 ಫೆಬ್ರವರಿ 18ರಂದು ಗೌರ್ನರ್ ಜನರಲನಿಗೆ ಬರೆದ ದೀರ್ಘ ಪತ್ರವು ಪತನದ ಪ್ರತಿಬಿಂಬವಾಗಿದೆ. ಕ್ಯಾಂಪಬೆಲ್ ಇನ್ನಿತರರ ವರದಿಯನ್ನು ಆಧರಿಸಿ ಹೈದ್ರಾಬಾದನಲ್ಲಿ ಕುಳಿತುಕೊಂಡೆ ಇದನ್ನೂ ಬರೆಯಲಾಗಿದೆ.

ಸ್ವದೇಶದ ಸ್ವಾತಂತ್ರ್ಯಕ್ಕೆ ಹೋರಾಡುವ ಪ್ರತಿಯೊಬ್ಬ ಭಾರತೀಯನು ಬ್ರಿಟೀಷರ ದೃಷ್ಟಿಯಲ್ಲಿ ರಾಜ್ಯದ್ರೋಹಿ, ಅಪರಾಧಿ ಆರೋಪಿ, ಇದು ಕಂಪನಿ ಸರಕಾರದ ಸ್ಪಷ್ಟ ನಿಲುವು. ಇಂಥ ಧ್ಯೇಯ ಧೋರಣೆಗೆ ಅನುಗುಣವಾಗಿ ಅರ್ಥೈಸುವುದಾದರೆ ಸುರಪುರದ ರಾಜ ಬ್ರಿಟಿಷ ರಾಜ್ಯದ ರಾಜದ್ರೋಹಿಯೆನ್ನಲೇಬೇಕಾಗುತ್ತದೆ. ರೆಸಿಡೆಂಟನ ದೃಷ್ಟಿ ಸಹ ಇದೆ ಆಗಿತ್ತು. ಅಂದಮೇಲೆ ರೆಸಿಡೆಂಟನಿಂದ ಹೊರಬಿದ್ದ ಮೇಲಿನ ವರದಿ ಹೇಗಿರಬಹುದು? ಬ್ರಿಟಿಷರ ಪರ ಪ್ರಮುಖ ಪಾತ್ರವಹಿಸಿರಲೇಬೇಕಲ್ಲ ಹೌದು, ಆದರೆ ಸಂಸ್ಥಾನದ ಅಂತ್ಯಕ್ಕೆ ಘಟಿಸಿದ ಘಟನಾವಳಿಗಳನ್ನು ಅಭ್ಯಾಸಿಸಲು ಇವು ಜೀವಂತ ದಾಖಲೆಯೆನ್ನುವುದು ಮಾತ್ರ ಮರೆಯಲಾಗದು.

(3) ಹತ್ತು ವರ್ಷ ಸಂಸ್ಥಾನದಲ್ಲಿದ್ದು ಶ್ರೀಮಂತ ಆಡಳಿತ ನಡೆಯಿಸಿಕೊಟ್ಟ ಮೆಡೋಸ್ ಟೇಲರನ ಆತ್ಮಕಥೆ (ಸ್ಟೋರಿ ಆಫ್ ಮೈ ಲೈಫ್) ಅಪರೂಪದ ಕೃತಿ. ಸಂಸ್ಥಾನದ ಸಂವೇದನೆಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದ ಟೇಲರ ತನ್ನ ಆತ್ಮಕತೆಯ ಸಿಂಹಪಾಲು ಭಾಗ ಸುರಪುರದ ಘಟನೆಗಳಿಗೆ ಮೀಸಲಿಟ್ಟಿದ್ದಾನೆ. ಡ್ಯಾವಿಡ್ಸನನಂತೆ ಈತನು ಸಹ ಇಂಗ್ಲೀಷ ಅನ್ನ, ನೀರು ಉಂಡ ಅಧಿಕಾರಿಯೆಂಬುದರಲ್ಲಿ ವಿಶೇಷವಿದೆ. ದಾಖಲಿಸುವಾಗ ಬ್ರಿಟಿಷ್ ಸಾಮ್ರಾಜ್ಯದ ಪರವೇ ಸತ್ಯವನ್ನು ತಿರುಚಿಕೊಳ್ಳುವ ಲೇಖನಿ ರದಾಗಿತ್ತು ಎಂದರೆ ಅಚ್ಚರಿ ಪಡಬೇಕಿಲ್ಲ. ಆದರೆ ನಾಲ್ವಡಿ ವೆಂಕಟಪ್ಪನಾಯಕನ ಮೇಲೆ ಈತನಿಗೆ ಅಪಾರ ವ್ಯಾಮೋಹ. 'ಹಡೆದ ತಂದೆ ಕೃಷ್ಣಪ್ಪನಾಯಕನಾದರೆ ತಿದ್ದಿದ ತಂದೆ ಟೇಲರನಾಗಿದ್ದ', ರಾಜ ಕೊನೆಯವರೆಗೂ 'ಅಪ್ಪಾ' ಎಂದೇ ಈತನನ್ನು ಸಂಬೋಧಿಸುತ್ತಿದ್ದ. ಈ ಸುರಪುರದರಸನ ಕೊನೆಯ ದಿನಗಳಲ್ಲಿ ಬಹು ಹತ್ತಿರವಾಗಿದ್ದ ಅಧಿಕಾರಿಯೆಂದರೆ ಟೇಲರ ಮಾತ್ರ. ಹೀಗಾಗಿ ಸಂಸ್ಥಾನದ ಪತನ, ರಾಜನ ಬಂಧನದ ಬಗ್ಗೆ 'ಆತ್ಮಕಥೆ' ಯು ಮುಖ್ಯ ದಾಖಲೆಯಾಗುತ್ತದೆ.

<u>ಮುಜುಮುದಾರ ಲಿಂಗಪ್ಪನ 'ಹಕೀಕತ್' :</u>

'ಸುರಪುರದ ರಾಜನ ಮೇಲಿರುವ ಆರೋಪಗಳು ಸ್ಥಿರವಾಗದೆ ಹೋದಾಗ ತನ್ನ ಹಿಂದಿನ ಸೇಡನ್ನು ತೀರಿಸಿಕೊಳ್ಳಲು ದಿವಾನ ಭೀಮರಾಯನು ಆಡಳಿತ ವರ್ಗದಲ್ಲಿ ಒಳಸಂಚು ನಡೆಸಿದನು. ರೋಹಿಲೆ ಅರಬರನ್ನು ಹಿಂದೆ ಸೈನ್ಯಕ್ಕೆ ತುಂಬಿಕೊಂಡ ಬಗ್ಗೆ ಲಿಂಗೋಭೀಮರಾವ್ ಮುಜುಮುದಾರನ ಹತ್ತಿರ ರಾಜನ ರುಜುವಿರುವ ಆದೇಶ ಪತ್ರಗಳಿದ್ದವು. ಅವುಗಳ ತಪಾಸಣೆಯಲ್ಲಿ ತೊಡಗಿ ಕೊನೆಗೆ ಸಿಗದಾಗ ನಕಲೀ ಆದೇಶಪತ್ರಗಳನ್ನು ಸೃಷ್ಟಿಸಿ ಕ್ಯಾಂಬೆಲನಿಗೆ ಕೊಟ್ಟ. ಅದನ್ನೇ ಬಲವಾದ ಆಧಾರವೆಂದು ರುಜುವಾತು ಪಡಿಸಿ ರಾಜನ ಮೇಲೆ ರಾಜ್ಯದ್ರೋಹದ ಅಪಾದನೆ ಹೊರಿಸುವಲ್ಲಿ ಯಶಸ್ವಿಯಾದರು. ವಿಷಯ ತಿಳಿದ ರಾಜ ದಿವಾನ ಭೀಮರಾಯನನ್ನೂ ಗೃಹ ಬಂಧನದಲ್ಲಿರಿಸಿ ಬಲವಾದ ಪಹರೆ ಹಾಕಿಸಿದ. ಮಂತ್ರಿ ಪದವಿಯಿಂದ ಪದಚ್ಯುತ ಹೊಂದಿದ ಭೀಮರಾಯ ಸಂಸ್ಥಾನದ ರಾಜನ 'ವಿರುದ್ಧ' ಹಲ್ಲು ಕಡಿಯತೊಡಗಿದ.

ಕ್ಯಾಂಬೆಲನ ವರದಿ ರೆಸಿಡೆಂಟನಿಗೆ ಮುಟ್ಟುವದರೊಂದೆ ತಡ ನಾಲ್ಕು ಕಡೆಯಿಂದ ಅಂಗ್ರೇಜ ಲಷ್ಕರ ಸುರಪುರವನ್ನು ಆಕ್ರಮಿಸಲು ಧಾವಿಸಿ ಬಂದವು. ಈಗಾಗಲೇ ದೇವದುರ್ಗದಲ್ಲಿ ನಂಗಮುಗೊಂಡಿದ್ದ ಕೆಲವು ತುಕಡಿ ಸುರಪುರದ ಮೇಲೆ ಏರಿಬಂದು ರುಕ್ಮಾಪುರದ ಬೈಲಿನಲ್ಲಿ ಮಾಘವದ್ಯ ನವಮಿಯ ದಿನ ಬೀಡುಬಿಟ್ಟವು. ನಂತರ ಮಾಘವದ್ಯ ದಶಮಿ ಆದಿತ್ಯವಾರ ಶಕ 1267ನೇ ಅರುಣೋದಯದಂದು ಉಳಿದ ಎಲ್ಲಾ ಅಂಗ್ರೇಜಿ ಸೈನ್ಯ ಬಂದಿಳಿಯಿತು. ಇನ್ನೇನು ಕೋಟೆಯ ಮೇಲೆ ದಾಳಿಯಿಡಲು ವೈರಿ ಶಿಬಿರದಲ್ಲಿ ಯೋಜನೆಗಳು ನಡೆದಿದ್ದವು. ನಗರದಲ್ಲಿದ್ದ ನೂರು ಜನ ರೋಹಿಲೆಯರು ಕೋಟೆಯ ಮೇಲೆ ಏರಿನಿಂತರು. ಇಂಥ ತ್ವೇಷಮಯ ಪರಿಸ್ಥಿತಿಯಲ್ಲಿ ತರುಣರಾಜ ಎಚ್ಚರತಪ್ಪಿ ಬೀಳತೊಡಗಿದ ಮಾಘವದ್ಯ 10 ರ ಪ್ರಾತ:ಕಾಲದಲ್ಲಿ ರಾಣಿ ರಂಗಮ್ಮನನ್ನು ಮತ್ತು ಉಳಿದ ರಾಣಿಯರನ್ನೂ ಹರಪನಹಳ್ಳಿ ಬಸಪ್ಪನೊಂದಿಗೆ ಸುರಪುರದಿಂದ ಬೇರೆಡೆ ರಕ್ಷಿಸಿಕೊಳ್ಳಲು ಹೇಳಿ ಕಳಿಸಿಕೊಟ್ಟ. ಇತ್ತ ಕೋಟೆಯ ಗಡಿಯಲ್ಲಿ ಗುಂಡಿನ ಚಕಮಕಿ ನಡೆದು ಯುದ್ಧ ಆರಂಭವೇ ಆಗಿತ್ತು. ಸುರಪುರದ ರಕ್ಷಣೆಗೆ ಬಸವಂತರಾವ್, ರೋಹಿಲೆ, ಅರಬರು ಭದ್ರ ಕಾವಲು ಹಾಕಿದ್ದರು. ಕೊನೆಗೆ ನ್ಯೂಬೆರ್ರಿಯನ್ನು ಕೊಲ್ಲುವಲ್ಲಿ ರೋಹಿಲೆಯರು ಯಶಸ್ವಿಯಾದರು. ಸ್ಟುಅರ್ಟನ ಮೊಳಕೆಯೊಂದು ಛಿದ್ರವಾಯಿತು ಇದರಿಂದ ರಾಜ ಭಯಭೀತನಾದ. ಬಂಧನದಲ್ಲಿದ್ದು ಬಿಡುಗಡೆಯಾಗಿದ್ದ ದಿವಾನ ಭೀಮರಾಯನನ್ನು ಕರೆಯಿಸಿ ಮುಂದಿನ ವಿಚಾರಗಳೇನೆಂದಾಗ 'ಹೈದ್ರಾಬಾದಕ್ಕೆ ಹೋಗಿ ನಿಜಾಮ ಇಲ್ಲವೆ ರೆಸಿಡೆಂಟ್

ಸಾಹೇಬರಲ್ಲಿ ವಿನಂತಿಸುವುದೊಂದೇ ಉಳಿದಿರುವ ಮಾರ್ಗವೆಂದ' ಅದನ್ನೇ ನಂಬಿ ರಾಜ ತನ್ನ 'ಮೃಗರಾಜ' ಕುದುರೆ ಏರಿ ಹೈದ್ರಾಬಾದಕ್ಕೆ ತೆರಳಿದ. ಅಲ್ಲಿ ವನಪರ್ತಿ ರಾಜನ ದ್ರೋಹದಿಂದ ಸಾಲರಜಂಗನ ಕಪಟತೆಯಿಂದ ಬಂಧನಕ್ಕೊಳಗಾದ. ರೆಸಿಡೆಂಟ ಡ್ಯಾವಿಡ್ಸನ್ ಬಂಧಿಸಿದ ರಾಜನನ್ನು ಸಿಕಂದರಾಬಾದ ಕಾಂಟೊನ್ಮೆಂಟನಲ್ಲಿ ಇರಿಸಿದ.

ಇತ್ತ ಸುರಪುರವು ರಾಜನ ಪಲಾಯನದಿಂದ ಸೈನಿಕರೆಲ್ಲ ರಣರಂಗಕ್ಕೆ ಬೆನ್ನು ತೋರಿಸಿದರು. ಜನರೆಲ್ಲ ಊರುಬಿಟ್ಟರು. ಮರುದಿನ ಸಂಸ್ಥಾನವು ಕ್ಯಾಂಬೆಲನ ಸ್ವಾಧೀನವಾಗಿತ್ತು. ಸತತ ಮೂರುದಿನ ಲೂಟಿ, ಸುಲಿಗೆಗೆ ಒಳಗಾಗಿತ್ತು'.

ಹೀಗೆ ಮುಜುಮದಾರ ಲಿಂಗಪ್ಪನ ಬರೆಹದಲ್ಲಿ ಮುಖ್ಯ ಸಾರಾಂಶವಿದೆ. ತನಗೆ ಕಂಡ, ತಾನು ಕೇಳಿದ ಕೆಲವು ಘಟನೆಗಳನ್ನು ಪ್ರಾಮಾಣಿಕವಾಗಿ ದಾಖಲಿಸಲು ಪ್ರಯತ್ನಿಸಿದ್ದಾನೆ. ಕ್ಯಾಂಬೆಲ ಬ್ರಿಟಿಷ ನೀತಿ ಬೆಂಬಲಿಸಿದರು, ಸಂಸ್ಥಾನದ ಪರವಾಗಿ ವರ್ತಿಸುತ್ತಿದ್ದನೆಂಬುದು ಮತ್ತು ದಿವಾನ ಭೀಮರಾಯನೇ ಸಂಸ್ಥಾನದ ಪತನಕ್ಕೆ ಕಾರಣನೆಂದು ಈತನ ಬಲವಾದ ನಂಬುಗೆ. 12 ಸಾವಿರ ಮೂಲ ಬೇಡ ಪಡೆ, ಕೋಲೆಗಾರರು, ಮರಾಠರು, ಸಿಲೇದಾರರು, ಪಾಗದಿ ಮುಂತಾದ ಸಂಸ್ಥಾನದ ಶಕ್ತಿಯುತ ಸೈನ್ಯದ ಬಗ್ಗೆ ಎಲ್ಲಿಯೂ ಉಲ್ಲೇಖವೇ ಇಲ್ಲ. ಕೇವಲ ರೋಹಿಲೆ ಮತ್ತು ಅರಬರಿಂದಲೇ ಯುದ್ಧ ನಡೆಯುತ್ತದೆಂದು ಹೇಳುತ್ತಾನೆ. ಸಂಪೂರ್ಣ ಭಯಭೀತನಾದ ರಾಜ ಅರಮನೆಯಲ್ಲಿಯೇ ಅಳುತ್ತಿದ್ದನೆಂದು ಹೇಳಲಾಗಿದೆ.

<u>ಭಾರತ ಸರಕಾರಕ್ಕೆ ಹೈದ್ರಾಬಾದ ರೆಸಿಡೆಂಟನು ಬರೆದ ದಿನಾಂಕ 18.2.1858 ರಂದಿನ ದೀರ್ಘಪತ್ರ:</u>

'ಜನೇವರಿ 31, 1858 ರವರೆಗೆ ಸುರಪುರದಲ್ಲಿ ಸಂಪೂರ್ಣ ಶಾಂತವಾತಾವರಣವಿತ್ತು. ನಮ್ಮ ಸೈನ್ಯವು ಸಂಸ್ಥಾನವನ್ನು ಮುತ್ತಿಗೆ ಹಾಕಲಿದೆ ಎಂಬ ಸುದ್ದಿ ತಿಳಿದಾಕ್ಷಣ ಜನರು ಕಳವಳದಿಂದ ಉದ್ವೇಗಗೊಂಡರು. ಇದನ್ನರಿತ ಕ್ಯಾಂಬೆಲ್ ಸದ್ಯದ ಸ್ಥಿತಿಯಲ್ಲಿ ಸುರಪುರದಲ್ಲಿರುವುದು ಕ್ಷೇಮವಲ್ಲವೆಂದು ತಿಳಿದು ಫೆಬ್ರವರಿ 1, 1858 ರಂದು ವಿಂಢಮನ ಲಿಂಗ ಸೂಗೂರ ಕ್ಯಾಂಪಿಗೆ ಹೊರಟನು. ಆಗ ದಿವಾನ ಭೀಮರಾಯನು ಕ್ಯಾಂಬೆಲನಿಗೆ ಎಲ್ಲಾ ರೀತಿಯಿಂದ ಸಹಾಯ ಮಾಡಿ ಸುರಪುರದಿಂದ ಪಾರಾಗುವಂತೆ ನೋಡಿಕೊಂಡನು. ಫೆಬ್ರವರಿ 4 ರಂದು ವಿಂಢಮನ ಕ್ಯಾಂಪಿನಲ್ಲಿ ಕ್ಯಾಂಬೆಲನನ್ನು ಭೀಮರಾಯ ಭೇಟಿಯಾಗಿ ಬಂದ. ಲಿಂಗಸೂಗೂರಿನಿಂದ ವಿಂಢಮ್ ನೇತೃತ್ವದ ತುಕಡಿ ಫೆಬ್ರವರಿ 6 ರಂದು ಸುರಪುರದ ಹತ್ತಿರ ಶಿಬಿರ ಹೂಡಿತು. ಈ ಶಿಬಿರಕ್ಕೆ ಭೀಮರಾಯ ಎಲ್ಲಾ ರೀತಿಯಿಂದ ಸಾಮಾನುಗಳನ್ನು ಒದಗಿಸಿ ಶಿಬಿರದಲ್ಲಿದ್ದ ಕ್ಯಾಂಬೆಲನೊಂದಿಗೆ ದೀರ್ಘ ಚರ್ಚೆಯಲ್ಲಿರುತ್ತಿದ್ದ.

ಇದುವರೆಗೆ ಶಾಂತವಿದ್ದ ಸುರಪುರವು ಫೆಬ್ರವರಿ 7 ರಂದು ಆಕ್ರೋಶ ತಾಳಿಕೋಟೆಯ ಮೇಲೆ ತೋಪುಗಳನ್ನು ಏರಿಸಿತು. ಶಸ್ತ್ರಗಳಿಂದ ಸನ್ನದ್ಧರಾದ ಜನರು ಪಹರೆ ನಡೆಸಿದರು. ಆ ದಿನ ರಾತ್ರಿ ನಮ್ಮ ಕ್ಯಾಂಪಿನ ಮೇಲೆ ಸುರಪುರ ಸೈನ್ಯವು ತೋಪುಗಳನ್ನು ಹಾರಿಸಿತು. ಪ್ರತಿಯಾಗಿ ನಮ್ಮ ಸೈನ್ಯವು ಹಾರಿಸಿತು. ಫೆಬ್ರವರಿ 8 ರಂದು ಮೇಜರ ಹ್ಯೂಗನು ಕರ್ನೂಲ ಸೈನ್ಯದೊಂದಿಗೆ ಬಂದಿಳಿದು ಕೂಲಿಕಾರ ಸೈನಿಕರಾದ ಸುರಪುರದ ಅರಬ, ರೋಹಿಲೆಯರನ್ನು ತಳ್ಳಲು ಮುಂದುವರೆದ. ಇದೇ ಸಮಯದಲ್ಲಿ ನಮ್ಮ ಕ್ಯಾಪ್ಟನ್ ನ್ಯೂಬೆರಿ ಸತ್ತ, ಲೆಫ್ಟನೆಂಟ ಸ್ಟೂವರ್ಟ ಗಾಯಗೊಂಡ. ಫೆಬ್ರವರಿ 9 ರಂದು ಬೆಳಿಗ್ಗೆ ನಮ್ಮ ಸೈನ್ಯಾಧಿಕಾರಿಗಳಿಗೆ ತಿಳಿದು ಬಂದದ್ದೇನೆಂದರೆ 'ಸುರಪುರದ ರಾಜ, ಮಂತ್ರಿ, ವಡದಿ, ಜನರೆಲ್ಲ ಓಡಿ ಹೋಗಿದ್ದಾರೆಂದು' ಕೂಡಲೇ ನಮ್ಮ ಸೈನ್ಯ ಸುರಪುರ ನಗರದಲ್ಲಿ ನುಗ್ಗಿ ಸಂಸ್ಥಾನವನ್ನು ವಶಪಡಿಸಿಕೊಂಡಿತು. ಆಗ ಕ್ಯಾಂಬೆಲನೇ ಸಂಸ್ಥಾನದ ತಾತ್ಕಾಲಿಕ ಅಧಿಕಾರಿಯಾದ. ಕಣ್ಮರೆಯಾದ ರಾಜನನ್ನು ಹಿಡಿದುಕೊಟ್ಟವರಿಗೆ 5 ಸಾವಿರ ರೂ. ಬಹುಮಾನ ಘೋಷಿಸಲಾಗಿತ್ತು.

ಫೆಬ್ರವರಿ 12 ರಂದು ಸುರಪುರದ ರಾಜ ಹೈದ್ರಾಬಾದನಲ್ಲಿ ಪ್ರತ್ಯಕ್ಷನಾದ ಯಾವುದೋ ಮಾರ್ಗದಿಂದ ಬಂದ ಈತ ಬಹು ಆಯಾಸಗೊಂಡಿದ್ದ. ಶರಣಾಗತಿಗಾಗಿ ಅಲೆದಾಡುತ್ತಿದ್ದ ಸಂದರ್ಭದಲ್ಲಿ ಈತನನ್ನು ವನಪರ್ತಿರಾಜನ ಸುಳಿವಿನ ಮೇರೆ ಸಾಲಾರಜಂಗ ಬಂಧಿಸಿದ, ನನ್ನ ಸ್ವಾಧೀನ ಪಡಿಸಿದ. ಈಗ ರಾಜನನ್ನು ಸಿಕಂದರಾಬಾದ ಕಾಂಟೋನ್ಮೆಂಟನಲ್ಲಿ ಬಂಧಿಸಿಡಲಾಗಿದೆ.

ಇತ್ತೀಚೆಗೆ ಸುರಪುರದಿಂದ ಕ್ಯಾಂಬೆಲ ಮಾಡಿದ ವರದಿಯೇನೆಂದರೆ, ಓಡಿಹೋದ ನಾಗರಿಕರೆಲ್ಲ ಸುರಪುರಕ್ಕೆ ಮರಳಿ ಬರುತ್ತಿದ್ದಾರಂತೆ. ಆಡಳಿತದ ಪರಿಪೂರ್ಣ ವ್ಯವಸ್ಥೆ ಮಾಡಲಾಗಿದ್ದು, ದಿವಾನ ಭೀಮರಾಯನು ತುಂಬಾ ಆಸಕ್ತಿಯಿಂದ ದುಡಿಯುತ್ತಿದ್ದಾನೆ. ಇದುವರೆಗೂ ಸಂಸ್ಥಾನದ ಯಾವ ಬೇಡರಿಂದಲೂ ಪ್ರತಿರೋಧ ಬಂದಿಲ್ಲವೆಂಬುದೆ ಸಂತಸವೆಂದು ಕ್ಯಾಂಬೆಲ ತಿಳಿಸಿದ್ದಾರೆ.

ಬಂಡಾಯದ ಪ್ರವಾಹದಲ್ಲಿ ಧುಮುಕಿದ್ದ ರಾಜನಿಗೆ ನಮ್ಮ ವಿರುದ್ಧ ಈಜಲಾಗಲಿಲ್ಲ. ಶಕ್ತಿಗುಂದಿ, ಧೈರ್ಯಕಳೆದುಕೊಂಡು ಪಲಾಯನ ಮಾಡಿದನೆಂದು ನನ್ನ ಭಾವನೆ. ಸುರಪುರದ ಪರವಾಗಿ ಯುದ್ಧ ಮಾಡಲು ಅನೇಕ ಅರಬರನ್ನು ಹೈದ್ರಾಬಾದನಿಂದ ರವಾನಿಸಲಾಗುತ್ತಿತ್ತು. ಇದರ ಮೇಲ್ವಿಚಾರಣೆಯನ್ನು ಅಬ್ದುಲ್ಲಾ ಬಿನ್ ಅಲಿ, ಉಮರಬಿನ್ ಓತರಿಂಬ ಜಮಾದಾರರು ನಿರ್ವಹಿಸುತ್ತಿದ್ದರೆಂದು

ಇತ್ತೀಚೆಗೆ ತಿಳಿದು ಬಂದಿದೆ. ಇವರನ್ನು ನಿಯಂತ್ರಿಸುವಲ್ಲಿ ಹೈದ್ರಾಬಾದ ನಿಜಾಮನು ಸಹ ಅಸಮರ್ಥನಾಗಿದ್ದಾನೆ".

ಹೀಗೆ ರೆಸಿಡೆಂಟ ಡ್ಯಾವಿಡ್ಸನನು ಭಾರತ ಸರಕಾರಕ್ಕೆ ಬರೆದ ದೀರ್ಘ ಪತ್ರದ ಸಂಕ್ಷಿಪ್ತ ರೂಪವನ್ನು ಮೇಲಿನಂತಿದೆ. ಇದರಲ್ಲಿ ಅತ್ಯಂತ ಪ್ರಮುಖ ವಿಚಾರಗಳು ಹೊರಬಿದ್ದಿವೆ. ಸಂಸ್ಥಾನದ ರಾಜ ಯಾವ ತಪ್ಪು ಮಾಡಿಲ್ಲ. ಪುರಾವೆಗಳೂ ಇಲ್ಲ. ಅನೇಕ ಆರೋಪಗಳು ನಿಜವಲ್ಲವೆಂಬ ಸಂಗತಿ ಇದರಿಂದ ಸ್ಪಷ್ಟವಾಗುತ್ತದೆ. ಕ್ಯಾಂಬೆಲನಿಗೆ ರಾಜ ರಕ್ಷಣೆ ನೀಡಿಲ್ಲ. ದಿವಾನ ಭೀಮರಾಯನೇ ಸರ್ವ ರೀತಿಯಿಂದ ಸಹಕಾರ ಮಾಡಿದನೆನ್ನುವಲ್ಲಿ ಸಂಸ್ಥಾನ ವಿರೋಧಿ ಕೃತ್ಯದಲ್ಲಿ ಭೀಮರಾಯ ಸಂಪೂರ್ಣ ಶಾಮೀಲು ಆಗಿರುವದೆಂದು ಅರ್ಥವಾಗುತ್ತದೆ. ಕ್ಯಾಂಬೆಲನು ರೆಸಿಡೆಂಟನಿಗೆ ಏನೆಂದು ವರದಿ ಮಾಡಿದನೋ ಗೊತ್ತಿಲ್ಲ. ಆದರೆ ರೆಸಿಡೆಂಟನು ಸಂಸ್ಥಾನದ ಮೇಲೆ ದಾಳಿ ಮಾಡಲು ಸೈನ್ಯಕ್ಕೆ ಅಪ್ಪಣೆ ಕೊಟ್ಟು ಕಳಿಸಿದ್ದು ಯಾವ ಅಪರಾಧಕ್ಕಾಗಿ ಎಂಬುದೇ ತಿಳಿಯಲಿಲ್ಲ. ಇಂಥ ಅನೇಕ ಪ್ರಶ್ನೆಗಳಿಗೆ ಈ ಪತ್ರದಲ್ಲಿ ಉತ್ತರವೇ ಇಲ್ಲ. ಹೀಗಾಗಿ ರೆಸಿಡೆಂಟನ ಆಕ್ರಮಣಕಾರಿ ನೀತಿಯನ್ನು ಬೆಂಬಲಿಸಿ, ಅನುಸರಿಸಿದ ಕ್ಯಾಂಬೆಲನು ದಿವಾನ ಭೀಮರಾಯನ ಸಹಕಾರದೊಂದಿಗೆ ಸುರಪುರ ಸಂಸ್ಥಾನ ಪತನಗೊಳಿಸಿದನೆಂಬುದೇ ನಮ್ಮ ವಾದ.

<u>ಮೆಡೋಸ್ ಟೇಲರನ 'ಆತ್ಮಕಥೆ' :</u>

'ಉತ್ತರ ಕರ್ನಾಟಕದ ಸಂಸ್ಥಾನಿಕರು ನಾನಾಸಾಹೇಬನ ಸಂಗಡ ಒಳಸಂಚು ಮಾಡಿ ದೊಡ್ಡ ಪ್ರಮಾಣದಲ್ಲಿ ಬಂಡೆಬ್ಬಿಸಬೇಕೆಂದು ನಿರ್ಧರಿಸಿದ್ದರು. ಇವರ ಜೊತೆಗೂಡಿದ ಸುರಪುರದ ರಾಜನು ಅವರಿಗೆ ಉತ್ತೇಜನ ಕೊಟ್ಟನು. ಧಾರವಾಡ, ಬೆಳಗಾವಿ, ರಾಯಚೂರ ಜಿಲ್ಲೆಯ ಬೇಡರು ಈ ರಾಜನನ್ನು ತಮ್ಮ ಮುಖಂಡನೆಂದು ಒಪ್ಪಿ ಹುರಿದುಂಬಿಸಿದ್ದರು. ಆಗ ಸ್ವಜಾತಿ ಬೇಡರಲ್ಲದೇ ಅರಬ, ರೋಹಿಲರನ್ನು ಸೇರಿಸಿಕೊಂಡು ಕೂಲಿಕಾರ ಸಿಪಾಯಿಗಳೊಂದಿಗೆ ಸಂಬಂಧ ಬ್ರಿಟಿಷ ಸರ್ಕಾರದ ವಿರುದ್ಧ ಬಂಡಾಯ ಹೂಡಲು ಸನ್ನದ್ಧನಾದ ಸುರಪುರದ ರಾಜ ವೆಂಕಟಪ್ಪ ನಾಯಕನನ್ನು ಉಳಿಸಿಕೊಳ್ಳಬೇಕು ಪರಿವರ್ತಿಸಬೇಕೆಂದು ರೆಸಿಡೆಂಟ ಎಷ್ಟೇ ಪ್ರಯತ್ನಪಟ್ಟರೂ ವಿಫಲವಾಯಿತು; ವ್ಯರ್ಥವೆನಿಸಿತು. ಮೈಸೂರು, ಅರ್ಕಾಟನಿಂದ ಬಂದ ಜನರು ರಾಜನಿಗೆ ತಲೆತುಂಬಿದ್ದರು. ಈ ಎಲ್ಲ ಪರಿಸ್ಥಿತಿ ಅಧ್ಯಯನ ಮಾಡಿದ ಕ್ಯಾಂಬೆಲ ಲಿಂಗಸೂಗೂರ, ಕರ್ನೂಲ ಮುಂತಾದ ಕಡೆಯಿಂದ ಸೈನ್ಯವನ್ನು ಕರೆಯಿಸಿಕೊಳ್ಳಬೇಕಾಯಿತು.

ಸುರಪುರದ ಬೆಟ್ಟ ಕೆಳಗೆ ಶಿಬಿರ ಹೂಡಿದ್ದ ಬ್ರಿಟಿಷ ಪಡೆಯ ಮೇಲೆ ರಾಜನ ಬೇಡರು ಹಾಗೂ ಕೂಲಿಕಾರ ಸಿಪಾಯಿಗಳೆಲ್ಲ ಕೂಡಿ ಹಲ್ಲೆಗೈದರು. ಆದರೆ ಕರ್ನಲ್ ಹ್ಯೂಗ, ಎಂಥೆಮ್ ಬಹು ಜಾಣಾಕ್ಷತನದಿಂದ ಪಾರಾದರು. ತರುವಾಯ 8ನೇ ತಾರೀಖಿನಂದು ವಿಂಥೆಮನ ನೇತೃತ್ವದ ಪಡೆ ಗುಡ್ಡದ ಮೇಲಿದ್ದ ಸಂಸ್ಥಾನದ ಸೈನ್ಯವನ್ನು ಸದೆಬಡಿದನು. ಉಳಿದವರೆಲ್ಲ ಓಡಿದರು. ದುರ್ದೈವದಿಂದ ಕ್ಯಾಪ್ಟನ್ ನ್ಯೂಬೆರ್ರಿ ಕೊಲ್ಲಲ್ಪಟ್ಟರೆ, ಸ್ಟುವರ್ಟ ಗಾಯಗೊಂಡನು. ಇದನ್ನರಿತ ರಾಜ ರಾತ್ರಿಯಲ್ಲಿಯೇ ಸುರಪುರದಿಂದ ಹೈದ್ರಾಬಾದಕ್ಕೆ ನಡೆದನು. ನಾನು ನಳದುರ್ಗದಲ್ಲಿರುವೆನೆಂದು ಅಲ್ಲಿಯೇ ನನ್ನನ್ನು ಕಾಣಬೇಕೆಂದು ರಾಜ ಯೋಚಿಸಿದ್ದ. ಆದರೆ ನಾನು ವರ್ಹಾಡದಲ್ಲಿರುವ ಸುದ್ದಿ ತಿಳಿದು ಹೈದ್ರಾಬಾದನತ್ತ ಪ್ರಯಾಣಿಸಿದ. ಹೈದ್ರಾಬಾದನಲ್ಲಿ ಅರಬರ ಆಶ್ರಯ ಪಡೆಯಲು ವ್ಯರ್ಥವಾಗಿ ಪ್ರಯತ್ನಿಸಿ ಸಾಲರಜಂಗನಿಂದ ಬಂಧನಕ್ಕೊಳಗಾದನು[4].

ಎಂದು ಮೆಡೋಸ್ ಟೇಲರನ ಆತ್ಮಕಥೆಯ ಮಾತುಗಳನ್ನು ನೋಡಿದಾಗ 'ನಿಜವಾಗಲೂ ರಾಜ ಬಂಡಾಯಗಾರನೆಂದು ಭಾಸವಾಗುತ್ತದೆ. ಸಿಪಾಯಿದಂಗೆಗೆ ಉತ್ತೇಜನ ನೀಡಿದನಲ್ಲದೆ ಸ್ವತಃ ತಾನೆ ಸೈನ್ಯ ಸಂಗ್ರಹಿಸಿ ಯುದ್ಧಕ್ಕೆ ಸಿದ್ಧನಾಗಿದ್ದನೆಂದು ವ್ಯಕ್ತವಾಗುತ್ತದೆ. ಆದರೆ ರೆಸಿಡೆಂಟನ ಮಾರಕ ನಿಲುವನ್ನು ತಿಳಿದ ಸಂಸ್ಥಾನದೊಂದಿಗೆ ಅತ ಸ್ನೇಹದಿಂದಲೇ ಇದ್ದನೆಂದು ಸಮರ್ಥಿಸಿಕೊಳ್ಳುವುದು. ಟೇಲರನ ಆತ್ಮವಂಚನೆಯು ಪರಮಾವಧಿಯಾಗಿದೆ. ರೆಸಿಡೆಂಟನ ತಪ್ಪು ನಿರ್ಧಾರವೇ ಕ್ಯಾಂಪಬೆಲನನ್ನು ಕದನಕ್ಕಿಳಿಸಿ ಸುರಪುರವನ್ನು ಸೋಲಿಸಿತು ಎಂಬುದೇ ನಮ್ಮ ಮೂಲವಾದ.

<u>ಟೇಲರನ ಭೇಟಿ :</u>

1858 ಫೆಬ್ರವರಿ 12 ರಂದು ಹೈದ್ರಾಬಾದನಲ್ಲಿ ಬಂಧನಕ್ಕೊಳಗಾದ ರಾಜನ ಸುದ್ದಿ ವರ್ಹಾಡದಲ್ಲಿದ್ದ ಮೆಡೋಸ್ ಟೇಲರನಿಗೆ ತಲುಪಿತು. ತನ್ನ ಸ್ವಂತ ಮಗನಂತೆ ರಾಜನನ್ನು ಸಾಕಿ ಸಲಹಿದ್ದ ಭಾಷೆ, ವಿಷಯಗಳನ್ನು ಕಲಿಸಿದ್ದ ರಾಜ್ಯದ ವ್ಯವಹಾರಗಳನ್ನು ಪರಿಚಯಿಸುತ್ತ ಯುವರಾಜನ ಸಾಮರ್ಥ್ಯವನ್ನೆಲ್ಲ ಅವನಲ್ಲಿ ತುಂಬಿದ್ದ. 'ಅಪ್ಪಾ' ಎಂದು ಕರೆದಾಗೊಮ್ಮೆ ಪುಳಕಿತನಾಗುತ್ತಿದ್ದ ಅದೇ ಟೇಲರ ಇಂದು ಬಂಧನದ ವಾರ್ತೆಯಿಂದ ದಿಗ್ಮೂಢನಾಗಿ ರಾಜನನ್ನು ಕಾಣಲು ಹೈದ್ರಾಬಾದಕ್ಕೆ ಧಾವಿಸಿ ಬಂದ. ಸಂಸ್ಥಾನವೆಲ್ಲ ಕ್ಯಾಂಪಬೆಲನ ಕೈವಶವಾದದ್ದು, ರಾಜದ್ರೋಹದ ಅಪಾದನೆ ಮೇಲೆ

ರಾಜನನ್ನು ಬಂಧಿಸಲಾಗಿರುವ ಸಂಗತಿ ಅಧಿಕಾರಿಗಳಿಂದ ಅರಿತುಕೊಂಡ. ಮಾನಸಿಕ ವೇದನೆಯಿಂದ ಮತ್ತು ಸಂಸ್ಥಾನದ ಪತನದಿಂದ ಬಳಲಿ ಹೋಗಿದ್ದ ರಾಜ ನಾಲ್ವಡಿ ವೆಂಕಟಪ್ಪ ನಾಯಕನಿಗೆ ಸಮಾಧಾನಪಡಿಸಲು ಟೇಲರನೆ ಬಂಧನದ ಸ್ಥಳಕ್ಕೆ ಹೋದ. 'ಮೊದಲ ಭೇಟಿಯಲ್ಲಿ 'ಅಪ್ಪಾ' ಎಂದು ಓಡಿ ಬಂದ ರಾಜ ತನ್ನನ್ನು ಬಿಗಿದಪ್ಪಿಕೊಂಡನೆಂದು, ಉಮ್ಮಳಿಸಿ ಬರುವ ದು:ಖದಲ್ಲಿ ತುಟಿಯಿಂದ ಬಂದ ಮಾತು ಸಹ ಹೊರಡುತ್ತಿರಲಿಲ್ಲವೆಂದು' ಟೇಲರನೇ ತನ್ನ ಆತ್ಮಚರಿತ್ರೆಯಲ್ಲಿ ವಿವರವಾಗಿ ಬರೆದುಕೊಂಡಿದ್ದಾನೆ.

'ರೆಸಿಡೆಂಟ ನಿನ್ನ ನೋಡಲು ಬಯಸಿದ್ದಾನೆ' ಎಂದಾಗಂತು ಸಿಡಿಲಂತೆ ಕಿಡಿಕಾರಿದ ರಾಜ 'ಅದೆಂದಿಗೂ ಆಗದ ಮಾತು, ನಾನು ನನ್ನ ಜೀವದ ಸಲುವಾಗಿ ಬೇಡಿಕೊಳ್ಳಲೆಂದು ರೆಸಿಡೆಂಟನ ಇಚ್ಛೆ ಇದ್ದಿರಬಹುದು. ಹೇಡಿಯಂತೆ ಬೇಡಿಕೊಳ್ಳಲಾರೆ, ನನ್ನವರಿಗೆ ನಾನು ವಿಶ್ವಾಸ ಘಾತುಕನಾಗಲಾರೆ' ಎಂದು ರಾಜ ನುಡಿದನಂತೆ. ಮತ್ತೊಂದು ದಿನ ಭೇಟಿಯಾದಾಗ 'ಕರಿ ನೀರಿಗೆ ಕಳಿಸಲ್ಪಡುವುದಕ್ಕಿಂತಲೂ ನಾನು ಸಾಯುವುದೇ ಲೇಸು, ಅವರು ನನಗೆ ಕೊಡುವ ಶಿಕ್ಷೆಯಿಂದ ನಾನೆಂದಿಗೂ ಸಹಿಸಲಾರೆ, ನನ್ನನ್ನು ತೋಪಿನ ಬಾಯಿಗೆ ಕಟ್ಟಿದರೆ ನಾನಂಜಲಾರೆ, ಕಳ್ಳನಂತೆ ನನ್ನನ್ನು ಗಲ್ಲಿಗೆ ಹಾಕಬಾರದು. ಶೂಲಗೇರಿಸಲ್ಪಡುವಂಥ ದುಷ್ಟ ಕಾರ್ಯವನ್ನು ನಾನು ಮಾಡಿಲ್ಲ' ಎಂಬ ರಾಜನ ಬಿಸಿ ಮಾತುಗಳೆಲ್ಲವನ್ನು ಟೇಲರ ಉಲ್ಲೇಖಿಸಿದ್ದಾನೆ. ಇವೆಲ್ಲವುಗಳನ್ನು ರೆಸಿಡೆಂಟನಿಗೆ ತಲುಪಿಸುವಲ್ಲಿ ಟೇಲರ ಮರೆಯಲಿಲ್ಲ. ಆಯುಷ್ಯ ಮತ್ತು ಅನುಭವ ಎರಡರಲ್ಲೂ ರಾಜ ಇನ್ನೂ ಕಿರಿಯ, ಹೀಗಾಗಿ ಆಡುವ ಮಾತುಗಳಲ್ಲಿ ಬಿಸಿಯುಸಿರುವುದು ಸಹಜವೆಂದು ರೆಸಿಡೆಂಟ ನುಡಿದಿದ್ದ. ಆದರೂ ರಾಜನಿಂದ ಗೌಪ್ಯಸತ್ಯ ಹೊರತೆಗೆಯಲು ಟೇಲರನನ್ನು ಮತ್ತೆ ರಾಜನಲ್ಲಿಗೆ ಕಳಿಸಿದ. 1858 ರ ಮಾರ್ಚ 23, 25, 27 ರಂದು ಮೂರು ಬಾರಿ ರಾಜನಲ್ಲಿ ಟೇಲರ ಕುಶಲೋಪರಿ ಮಾಡುತ್ತ ಆತನಲ್ಲಿರಬಹುದಾದ ಬಂಡಾಯದ ಬಗ್ಗೆ ಕೆದಕಿದ. ಆಗ ಹೊರಬಿದ್ದ ವಿಚಾರವೆಂದರೆ 'ಕ್ಯಾಂಬೆಲ್ ನನ್ನು ಕೊಲ್ಲಲು ದಕ್ಷಿಣದ ಮರಾಠ ರಾಜ್ಯಗಳಾದ ಕೊಲ್ಹಾಪೂರ, ಅಕ್ಕಲಕೋಟೆ, ಜಮಖಂಡಿ, ಮುಧೋಳ ಜತ್, ಮಿರಜ ಮುಂತಾದ ಪ್ರದೇಶಗಳಿಂದ ತನಗೆ ಪ್ರೇರಣೆ ಬಂತೆಂದು' ರಾಜ ಒಪ್ಪಿಕೊಂಡನಂತೆ. ಸಂಸ್ಥಾನದಲ್ಲಿ ಬ್ರಿಟಿಷರ ವಿರುದ್ಧ ಬಂಡಾಯವೆದ್ದ ಒಟ್ಟು 86 ಜನರ ಪಟ್ಟಿಯನ್ನೇ[182] ಟೇಲರನ ಪ್ರೀತಿಯ ಮಾತಿಗೆ ಮರುಳಾದ ವೆಂಕಟಪ್ಪನಾಯಕ ನೀಡಿಬಿಟ್ಟ. ಆ ಪಟ್ಟಿಯಲ್ಲಿ ಅರಬರು ರೋಹಿಲೆ, ಜಮಾದಾರರು, ಸಂಬಂಧಿಗಳು, ದಿವಾನ ಭೀಮರಾಯನು ಸೇರಿದ್ದರು. ಇವೆಲ್ಲ ದಾಖಲೆಗಳನ್ನು ಪಡೆದ ಟೇಲರ ನೇರವಾಗಿ ರೆಸಿಡೆಂಟನ ಕೈಗೆ ಒಪ್ಪಿಸಿದ.

---

182. FPSP 30 DEC Nos.182-84.

ಅಲ್ಲದೆ ಈಗಾಗಲೇ ಬಂಧನ ಸಮಯದಲ್ಲಿ 'ತಾನು ಬ್ರಿಟೀಷರ ಪರವಾಗಿ ವಿಧೇಯನಾಗಿರುವೆನೆಂದು, ಇದೆಲ್ಲ ತನ್ನ ಚಿಕ್ಕಪ್ಪ ಕೃಷ್ಣಪ್ಪನಾಯಕನ ಕುತಂತ್ರದ ಪ್ರಚೋದನೆಯಿಂದ ನಡೆದಿದೆಯೆಂದು ಮತ್ತು ರೋಹಿಲೆ, ಅರಬರನ್ನು ಅತನೆ ನೇಮಿಸಿಕೊಂಡು ಸಂಸ್ಥಾನವನ್ನು ಕಬಳಿಸಲು ಹೊಂಚು ಹಾಕಿದನೆಂದು ಹೇಳಿಕೆ ನೀಡಿದ್ದ. ರಾಜನ ಈ ಹೇಳಿಕೆಗಳನ್ನೆಲ್ಲ ಮುಂದಿನ ವಿಚಾರಣೆಗಾಗಿ ಕಾಯ್ದಿರಿಸಲಾಯಿತು.

ಟೇಲರನು ಬಂಧನದಲ್ಲಿದ್ದ ರಾಜ ವೆಂಕಟಪ್ಪನಾಯಕನನ್ನು ಭೇಟಿಯಾದದ್ದು 'ಸತ್ಯ ಹೊರತೆಗೆಯಲೆ ಹೊರತು ಪ್ರೀತಿಯಿಂದಲ್ಲ' ವೆಂಬ ಸಂಗತಿ ಮೇಲಿನ ಭೇಟಿಯ ಒಳಮರ್ಮ ಹೇಳುತ್ತದೆ. ರಾಜನಿಂದ ಹೊರಬಿದ್ದ ಗೌಪ್ಯ ವಿಷಯಗಳನ್ನೆಲ್ಲ ರೆಸಿಡೆಂಟನಿಗೆ ಟೇಲರ ತಿಳಿಸುವುದರಿಂದ ರಾಜನಿಗೆ ಅಪಾಯದ ಆಹ್ವಾನವೇ ಎಂದು ಇತ್ಯಂತಾಯಿತೆಂದು ಯಾರಿಗಾದರೂ ಅನಿಸುತ್ತದೆ.

8. ಮರಳಿದ ಜನರು : ಮತ್ತೆ ಅಧಿಕಾರ :

ಸಂಸ್ಥಾನ ಪತನವಾಗುವ ಮೊದಲನೆಯ ದಿನವೇ ರಾಜನ ಆಜ್ಞೆ ಮೇರೆಗೆ ಅಂತಃಪುರದಿಂದ ಹೊರಬಿದ್ದ ಪಟ್ಟದರಾಣಿ ರಂಗಮ್ಮ ಮತ್ತು ಇನ್ನಿತರ ರಾಣಿಯರು ಸಿದ್ಧಾಪುರದ ಮಾರ್ಗವಾಗಿ ಹಸಪುರಕ್ಕೆ ನಡೆದು ತರುವಾಯ ತಪ್ಪಿಸಿಕೊಂಡರು. ಅಲ್ಲಲ್ಲಿ ವಿಶ್ರಾಂತಿ ಪಡೆಯುತ್ತ ಸಾಮಾನ್ಯ ಮಹಿಳೆಯರ ವೇಷದಲ್ಲಿ ಮುನ್ನಡೆದರು. ಜೊತೆಯಲ್ಲಿ ಹರಪನಹಳ್ಳಿ ಬಸಪ್ಪನಿದ್ದ. ಅದೇ ರಾತ್ರಿಯಲ್ಲಿ ಭೀಮಾನದಿಯನ್ನು ದಾಟಿ ಜಿನವಳ್ಳಿ ಗ್ರಾಮ ಸೇರಿದರು. ಆ ಊರಿನ ವೆಂಕಟರಾಯನು ಸಂಸ್ಥಾನದಲ್ಲಿ ಹಿಂದೆ ಮಂತ್ರಿಯಾಗಿದ್ದ ರಾಣಿಯನ್ನು ಗುರುತಿಸಿದ ಅತ ಆದರೋಪಚಾರಗಳಿಂದ ಬರಮಾಡಿಕೊಂಡು ಒಂದು ತಿಂಗಳವರೆಗೆ ಯಾವ ಕೊರತೆಯಿಲ್ಲದೆ ಸಂರಕ್ಷಿಸಿದ. ಇದೇ ಸಂದರ್ಭದಲ್ಲಿ ರಾಜನು ಹೈದ್ರಾಬಾದನಲ್ಲಿ ಬಂಧನಕ್ಕೊಳಗಾಗಿರುವ ಸುದ್ದಿ ತಿಳಿದು ದುಃಖತರಾದರು. ಅಲ್ಲದೆ ಪತನಗೊಂಡ ಸಂಸ್ಥಾನವನ್ನು ಸ್ವಾಧೀನ ಪಡಿಸಿಕೊಂಡ ಇಂಗ್ಲೀಷರು ಮೂರು ದಿನಗಳಲ್ಲಿ ಸತತ ಏಳು ಭಾರಿ ಲೂಟಿ ಮಾಡಿದ ಕ್ರೂರ ಕಾರ್ಯವನ್ನು ಕೇಳಿದ ರಾಣಿ ಕಣ್ಣೀರಿಟ್ಟಳು.

ಒಂದು ತಿಂಗಳ ತರುವಾಯ ಸುರಪುರ ಶಾಂತಗೊಂಡಿತು. ತಲೆಮರೆಯಿಸಿಕೊಂಡ ನಗರದ ಜನರೆಲ್ಲ ಮರಳಿ ಬರುತ್ತಿರುವ ಸುದ್ದಿ ತಿಳಿದಾಕ್ಷಣ ರಾಣಿಯು ಸಹ ಕ್ಯಾಂಬೆಲನಿಗೊಂದು ಪತ್ರ ಬರೆದು ತಾವು ಸಹ ಸಂಸ್ಥಾನಕ್ಕೆ ಮರಳಿ ಬರುವ ವಿಚಾರ ವ್ಯಕ್ತಪಡಿಸಿದಳು. 'ಆಗ' ಖಂಡಿತಾ ಬರಬಹುದೆಂದು, ಸಂಪೂರ್ಣ ರಕ್ಷಣೆ ಒದಗಿಸುವೆಂದು' ಕ್ಯಾಂಬೆಲ್ ಆಶ್ವಾಸನೆ ನೀಡಿದ. ಆಡಳಿತಾಧಿಕಾರಿಯಾಗಿ

ಕ್ಯಾಂಬೆಲ್‌ನ ಸ್ವಾಗತದ ಮೇರೆಗೆ ರಾಣಿ ರಂಗಮ್ಮ ಮತ್ತು ಇನ್ನಿತರರು ಮಾರ್ಚ್ 17, 1858 ರಂದು ಸುರಪುರಕ್ಕೆ ಬಂದರು. ಅರಮನೆ ತುಂಬಿಹೋಗಿತ್ತು. ರಾಣಿಯರೆಲ್ಲ ನಗರದ ತಮ್ಮ ತಮ್ಮ ಮನೆಗೆ ಹೋಗಿ ನೆಲೆಸಿಕೊಂಡರು.

ಹತ್ತು ವರ್ಷ ಸುರಪುರ ಸಂಸ್ಥಾನದಲ್ಲಿ ಆಳ್ವಿಕೆ ನಡೆಸಿ ಅಪಾರ ಅನುಭವ ಹೊಂದಿದ ಮೆಡೋಸ್ ಟೇಲರನನ್ನೇ ಈಗ ಸುರಪುರಕ್ಕೆ ಜಿಲ್ಲಾಧಿಕಾರಿಯನ್ನಾಗಿ ಸರ್ಕಾರ ನೇಮಿಸಿತ್ತು. 'ಇಂದು ಸೈನ್ಯಾಡಳಿತಕ್ಕೆ ಒಳಪಟ್ಟಿರುವ ಸುರಪುರವು ಸಂಪೂರ್ಣ ಜರ್ಜರಿತವಾಗಿತ್ತು, ಅದರ ಆಡಳಿತ ಯಂತ್ರ ಕುಸಿದಿದೆ. ಈ ಸಂಕಷ್ಟ ಸಮಯದಲ್ಲಿ ಸುರಪುರದ ಕಾಯಕಲ್ಪವೆಂದರೆ ಟೇಲರ ಮಾತ್ರ' ವೆಂದು ಬ್ರಿಟಿಷ್ ಸರ್ಕಾರ ನಂಬಿತ್ತು. ಏಪ್ರಿಲ್ 1, 1858 ರಂದು ಟೇಲರ ಸುರಪುರಕ್ಕೆ ಎರಡನೆಯ ಭಾರಿ ಆಡಳಿತ ಅಧಿಕಾರಿಯಾಗಿ ಅಧಿಕಾರ ವಹಿಸಿಕೊಂಡನು. ಪತನದ ತರುವಾಯ ಸುರಪುರವನ್ನು ಪ್ರವೇಶಿಸುತ್ತಿರುವ ಟೇಲರನಿಗೆ ಜನತೆ ಅತ್ಯಂತ ಉತ್ಸಾಹದಿಂದ ಸ್ವಾಗತ ಕೋರಿದರು. ಸಂಸ್ಥಾನದ ಸಂಪೂರ್ಣ ಅಧಿಕಾರವನ್ನು ಅಧಿಕಾರಿಯಾಗಿ ಬಂದ ಟೇಲರ ಕ್ಯಾಂಬೆಲನಿಂದ ಸ್ವೀಕರಿಸಿದನು. ದು:ಖಿತರಾದ ರಾಣಿಯರಿಗೆ, ಜನತೆಗೆ ಧೈರ್ಯ ತುಂಬಿದ, ಸೆರೆಮನೆಯಲ್ಲಿರುವ ರಾಜನನ್ನು ಉಳಿಸಿಕೊಳ್ಳಲು ಸರ್ವ ಪ್ರಯತ್ನ ಮಾಡುವುದಾಗಿ ಆಶ್ವಾಸನೆ ನೀಡಿದಾಗಲಂತೂ ಸಂಸ್ಥಾನದ ಜನತೆ ಹರ್ಷತಾಳಿದರು.

<u>9. ನ್ಯಾಯಾಂಗ ವಿಚಾರಣೆ :</u>

ಸಿಕಂದರಾಬಾದ ಸೆರೆಮನೆಯಲ್ಲಿ ಬಂಧಿಸಲ್ಪಟ್ಟ ಸುರಪುರದ ರಾಜನನ್ನು ನ್ಯಾಯಾಂಗ ವಿಚಾರಣೆಗೆ ಒಳಪಡಿಸಿದ ಬಗ್ಗೆ ಬಹು ಶ್ರಮ ಪಟ್ಟು ಸಂಗ್ರಹಿಸಿದ ಎಂ.ಬಿ. ಕೃಷ್ಣರಾವ್ ಮತ್ತು ಜಿ.ಎಸ್. ಹಾಲಪ್ಪನವರ ಮೂಲ ದಾಖಲೆಗಳ ನೇರ ಅನುವಾದವನ್ನು ಈ ಮುಂದಿನ ವಿವರಣೆಯಲ್ಲಿ ವಿಶ್ಲೇಷಿಸ ಲಾಗಿದೆ. ಈ ನ್ಯಾಯಾಂಗ ವಿಚಾರಣ ಸಂದರ್ಭವು ಅತ್ಯಂತ ಮೌಲ್ಯಿಕವಾದ ಭಾಗ. ಇಲ್ಲಿ ಗಮನಿಸಬೇಕಾದ ಕೆಲವು ಗಮನಾರ್ಹ ವಿಷಯಗಳೆಂದರೆ ನ್ಯಾಯಾಂಗ ವಿಚಾರಣಾ ಸಮಿತಿಯಲ್ಲಿ ಕೇವಲ ಬ್ರಿಟಿಷ್ ಅಧಿಕಾರಿ ಗಳು ಮಾತ್ರ ಇದ್ದು, ವಿಚಾರಣೆ ತರುವಾಯ ತೀರ್ಪು ನೀಡುವವರು ಅವರೇ ಆಗಿದ್ದರು. ಸುರಪುರದ ರಾಜನ ಪರವಾಗಿ ಸಾಕ್ಷಿ ಹೇಳಲು ಬಂದವರಿಗೆ ಕೇಳುವ ಪ್ರಶ್ನೆಗೂ ಮತ್ತು ತಮ್ಮ ಪ್ರತಿನಿಧಿ ಕ್ಯಾಂಬೆಲ್ ಇನ್ನಿತರರಿಗೆ ಕೇಳುವ ಪ್ರಶ್ನೆಗಳಿಗೂ ವ್ಯತ್ಯಾಸವಿದೆ. ಸಂಸ್ಥಾನದ ಮೇಲೆ ಬ್ರಿಟಿಷ್ ಪಡೆಯ ಆಕ್ರಮಣ

ಸೂಕ್ತವಾದುದು ಎನ್ನುವ ರೀತಿಯಲ್ಲಿ ಉತ್ತರ ಬರಮಬರುವಂತೆ ಪ್ರಶ್ನಿಸಲಾಗಿರುವ ಗುಟ್ಟು ವಿಚಾರಣೆಯಿಂದಲೂ ಎದ್ದು ಕಾಣುತ್ತದೆ. ಅದರ ದೀರ್ಘ ವಿವರಣೆಯನ್ನು ನೋಡುವ,[183]

ಬ್ರಿಟೀಷರ ವಿರುದ್ಧ ಬಂಡಾಯವೆದ್ದ ನಾಲ್ವಡಿ ವೆಂಕಟಪ್ಪ ನಾಯಕನನ್ನು ಫೆಬ್ರವರಿ 12, 1858 ರಂದು ರಾಜದ್ರೋಹದ ಆಪಾದನೆ ಮೇಲೆ ಸಿಕಂದರಬಾದ ಕಾಂಟೋನ್ಮೆಂಟನಲ್ಲಿ ಬಂಧಿಸಲಾಗಿತ್ತು. ರಾಜನ ಬಂಧನಕ್ಕೆ ವನಪರ್ತಿಯ ಅರಸು ಹಾಗೂ ನಿಜಾಮ ನಾಸಿರಜಂಗ ಬ್ರಿಟಿಷರಿಗೆ ಬಹುವಾಗಿ ನೆರವಾಗಿದ್ದರು.

ಕ್ಯಾಪ್ಟನ್ ಗ್ರಿನ್ಲೀ, ಕ್ಯಾಪ್ಟನ್ ಕ್ಯಾಂಬೆಲ್, ಮೆಡೋಸ್ ಟೇಲರ್, ಲೆಫ್ಟನೆಂಟ್ ಕರ್ನಲ್ ಟೇಲರ್, ಕ್ಯಾಪ್ಟನ್ ಹಿಂಡೆಮ್, ಮುಂತಾದವರು ಸುರಪುರದ ರಾಜನ ಮೇಲೆ ಗುರುತರ ಆರೋಪಗಳನ್ನು ಹೊರಿಸಿದ್ದರು, ಅವೆಲ್ಲವುಗಳನ್ನು ಪಡೆದ ರೆಸಿಡೆಂಟ ಡ್ಯಾವಿಡ್ಸನ್ನನು ಯುದ್ಧದಲ್ಲಿ ಸ್ಯಾಬೆರ್ರಿಯ ಸಾವು, ಗಾಯಗೊಂಡ ಸ್ಟ್ಯಾರ್ಟನ ಪ್ರಕರಣವನ್ನೇ ಪ್ರಧಾನವಾಗಿರಿಸಿಕೊಂಡನು. ಇದಕ್ಕೆಲ್ಲ ಮೂಲ ಕಾರಣನಾದ ಸುರಪುರದ ರಾಜ ನಾಲ್ವಡಿ ವೆಂಕಟಪ್ಪ ನಾಯಕನ ಮೇಲೆ ನ್ಯಾಯಾಂಗ ವಿಚಾರಣೆ ನಡೆಸಲು ಭಾರತ ಸರ್ಕಾರದ ಅನುಮತಿಯೊಂದಿಗೆ[184] ಸಿದ್ಧನಾದನು.

ಹೈದ್ರಾಬಾದನ ರೆಸಿಡೆಂಟ ಲೆಫ್ಟನೆಂಟ ಕರ್ನಲ್ ಡ್ಯಾವಿಡ್ಸನ್ ಮತ್ತು ಹಿಧನೆಸನ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದ ಈ ಕೆಳಗಿನ ನ್ಯಾಯಾಂಗ ವಿಚಾರಣಾ ಆಯೋಗವು ದಿನಾಂಕ 28.4.1858ರಂದು ತನಿಖೆ ಆರಂಭಿಸಿತು. ತನಿಖೆಯಲ್ಲಿ —

ಅಧ್ಯಕ್ಷ : ಬ್ರಿಗೇಡಿಯರ್ ವಿಲಿಯಂ ಹಿಲ್
ಹೈದ್ರಾಬಾದ ಸೈನ್ಯವಾಹಿನಿ ನಿರ್ವಾಹಕ

ಸದಸ್ಯರು : 1. ಕರ್ನಲ್ ಫ್ರೀಡರಿಕ್ ಹಾಲ್
ಸ್ಥಳೀಯ 49ನೇ ಕಾಲ್ದಳ ಅಧಿಕಾರಿ.

2. ಲೆ.ಕ. ಮ್ಯಾಕಲಿಯಾಡ್
ಸ್ಥಳೀಯ 42ನೇ ಕಾಲ್ದಳ ಅಧಿಕಾರಿ.

3. ಲೆ.ಕ. ಅಲೆಕ್ಝಾಂಡರ್, ಇ. ಫ್ರೆಡ್ರಿಕ್
ಪ್ರಥಮ ಸೈನ್ಯ ದಂಡನಾಯಕ.

4. ಸ್ಟೀವನ್ ಚಾರ್ಲ್ಸ್ ಬ್ರಿಗ್ಸ್
ಹೈದ್ರಾಬಾದ ರೆಸಿಡೆಂಟನ
ಸೈನಿಕ ಕಾರ್ಯದರ್ಶಿ.

---

183. FPSP 30 DEC 1859, Nos.182-84.
184. -do-

5. ಮೇಜರ್ ಚಾರ್ಲ್ಸ್ ಬರ್ಟನ್
ನ್ಯಾಯಾಧೀಶ, ನ್ಯಾಯವಾದಿ ಮತ್ತು
ಹೈದ್ರಾಬಾದ ಪ್ರಾಂತ್ಯ ನಿಯಮಾವಳಿ
ನಿಯಮ ನಿರ್ವಾಹಕ.

6. ಹೆನ್ರಿ ಚಾರ್ಲ್ಸ್ ರೈಟ್
ಸ್ಥಳೀಯ 42ನೇ ಪಡೆಯ ಮುಖ್ಯಸ್ಥ
ಮತ್ತು ನ್ಯಾಯಾಲಯದಲ್ಲಿಯ ಸಂಭಾಷಣೆ
ಅನುವಾದಕ.

ಸಿಕಂದರಾಬಾದನ ಪ್ರತ್ಯೇಕ ನ್ಯಾಯಾಲಯದಲ್ಲಿ ಸೇರಿದ್ದ ಮೇಲಿನ ಅಧ್ಯಕ್ಷರು, ಸದಸ್ಯರು, ನ್ಯಾಯವಾದಿ, ನ್ಯಾಯಾಧೀಶರು ಮತ್ತು ಸಮಿತಿ ಸದಸ್ಯರೆಲ್ಲರೆದುರು 'ಸುರಪುರದ ಅಸ್ತಿತ್ವ, ಆದಿಲಶಾಹಿ, ಪೇಶ್ವೆ, ನಿಜಾಮ ಸಂಬಂಧ ಹಾಗೂ ಸಾಲಾಗಾರ ಸಂಸ್ಥಾನದ ಸಹಾಯಕ್ಕೆ ಬ್ರಿಟಿಷ ಅಧಿಕಾರಿಗಳು' ಹೀಗೆ ಇತ್ಯಾದಿ ಪೂರ್ವ ಅಂಶಗಳ ಸಂಕ್ಷಿಪ್ತ ವರದಿಯನ್ನು ಓದಲಾಯಿತು. ಇವೆಲ್ಲ ಸಂಭಾಷಣೆಗೆ ದುಭಾಷಿಗಳನ್ನು ನೇಮಿಸಲಾಗಿತ್ತು. ತರುವಾಯ ಕೈದಿಯಾಗಿದ್ದಂಥ ಸುರಪುರದ ರಾಜನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ[185]

ನ್ಯಾಯಾಧೀಶರ ಪ್ರಶ್ನೆ : 'ವೆಂಕಟಪ್ಪನಾಯಕ, ನಿನ್ನ ಮೇಲಿನ ಆರೋಪಗಳ ಬಗ್ಗೆ ನಮ್ಮ ಸಮಿತಿಯಲ್ಲಿ ಯಾರಿಂದ ವಿಚಾರಣೆಗೆ ಒಳಪಡಲು ಬಯಸುತ್ತೀಯಾ?

ವೆಂಕಟಪ್ಪನಾಯಕ : ನಾನು ಆರೋಪಿಯೇ ಅಲ್ಲ. ತಮ್ಮಲ್ಲಿ ನನಗೆ ಇಂಥವರೆ ವಿಚಾರಣೆ ಬೇಕೆಂಬ ಅಪೇಕ್ಷೆಯು ಇಲ್ಲ. ಮಾಡಿದರೆ ಆಕ್ಷೇಪವು ಇಲ್ಲ.

ಕೋರ್ಟ : ನಿಮ್ಮ ಮೇಲಿರುವ ಗುರುತರ ಆಪಾದನೆಗಳು ಸತ್ಯವೇ?

ವೆಂಕಟಪ್ಪನಾಯಕ : ದಯವಿಟ್ಟು ನಂಬಬೇಡಿ. ಅವೆಲ್ಲ ಸುಳ್ಳಿನ ಕಂತೆ. ನಾನ್ಯಾವ ಅಪರಾಧವನ್ನು ಮಾಡಿಲ್ಲ.

ರಾಜನ ವಿಚಾರಣೆಯ ತರುವಾಯ, ಕ್ಯಾಂಬೆಲನನ್ನು ಪ್ರಶ್ನಿಸಲು ಸಮಿತಿ ಕರೆಯಿಸಿಕೊಂಡಿತಲ್ಲದೆ, ವಿಚಾರಣೆಗೆ ಗುರಿಪಡಿಸಿತು[186]

ಕ್ಯಾಂಬೆಲ : 'ನಾನು ಜನೇವರಿ 11, 1858 ರಂದು ಸುರಪುರಕ್ಕೆ ರಾಜನ ಬಗ್ಗೆ ತನಿಖೆ ನಡೆಸಲು ರೆಸಿಡೆಂಟನ ಆದೇಶದ ಮೇರೆಗೆ ಹೋಗಿದ್ದೆ. ಹಲವು ಬಾರಿ

---

185. HFMK Vol.I, 1962 p-486.
186. -do- p-491.

ರಾಜನನ್ನು ಭೇಟಿಯಾದೆ. ಬ್ರಿಟೀಷರ ವಿರುದ್ಧ ರಾಜನು ಸೈನ್ಯ ಸಂಘಟಿಸಿದ್ದಾನೆ, ಎಂಬ ಪ್ರಬಲ ಆರೋಪದ ಬಗ್ಗೆ ಪರಿಶೀಲಿಸತೊಡಗಿದೆ. ಆಗ ನನ್ನ ಕಣ್ಣಿಗೆ ಕಂಡದ್ದೇನೆಂದರೆ ದಿನ ನಿತ್ಯ ಸಂಬಳದ ಸೈನಿಕರು ಎಲ್ಲಿಂದಲೋ ಬಂದು ಸುರಪುರವನ್ನು ಸೇರತೊಡಗಿದ್ದರು. 1857 ಡಿಸೆಂಬರ್ 29 ರಂದು ರಾಜನು ಸುಮಾರು 2500 ಅರಬ, ರೋಹಿಲರ ನೇಮಕಾತಿಗೆ ಆದೇಶಿಸಿದ್ದ ಸಂಗತಿ ಸತ್ಯವೆನಿಸಿತು. ಅವರೆಲ್ಲರೂ ನಗರದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣಕ್ಕೆ ಕಾರಣರಾದರು. ಸದ್ಯದ ಸ್ಥಿತಿಯಲ್ಲಿ ನಾನು ನನ್ನಂತವರು ಇಲ್ಲಿ ಉಳಿಯುವಂಥ ಸಂದರ್ಭವಲ್ಲವೆಂದು ಅರಿತು ನಾನು ಲಿಂಗಸೂಗೂರಿನ ವಿಂಢೆಮ್ ಪಡೆಯಲ್ಲಿಗೆ ಹೋದೆ. ರೆಸಿಡೆಂಟನ ತನಿಖಾ ಆದೇಶ ಪೂರ್ಣಗೊಳಿಸಲು ಮತ್ತೆ ನಾನು ವಿಂಢೆಮನ ಸೈನ್ಯದೊಂದಿಗೆ ಸುರಪುರದತ್ತ ಧಾವಿಸಿದೆ. ಫೆಬ್ರವರಿ 7, 1858ರಂದು ಸಂಜೆ 5 ಗಂಟೆ 30 ನಿಮಿಷಕ್ಕೆ ಹಠಾತ್ತನೆ ರಾಜನ ಸೈನ್ಯ ನಮ್ಮ ಮೇಲೆ ಆಕ್ರಮಿಸಿತು. ಇದರಿಂದ ನನ್ನ ತನಿಖೆಗೆ ಅಡ್ಡಿಯಾಯಿತಲ್ಲದೆ, ನಮ್ಮ ರಕ್ಷಣೆ ಅನಿವಾರ್ಯವೆನಿಸಿತು. ಆ ದಿನ ರಾತ್ರಿ 12 ರವರೆಗೆ ರಾಜನ ಸೈನ್ಯ ಗುಡ್ಡದ ಮೇಲೆ ನಿಂತು ನಮ್ಮ ಶಿಬಿರದ ಮೇಲೆ ಗುಂಡು ಹಾರಿಸುತ್ತಲೇ ಇತ್ತು.

ಕೋರ್ಟಿನ ಪ್ರಶ್ನೆ : ಮೊದಲಬಾರಿಗೆ ವೆಂಕಟಪ್ಪನಾಯಕನನ್ನು ಭೇಟಿಯಾಗಲು ನೀನು ಸೈನ್ಯದೊಂದಿಗೆ ಹೋಗಿದ್ದೆಯಾ?

ಕ್ಯಾಂಬೆಲ : ಹೌದು ನನ್ನೊಂದಿಗೆ 50 ಸಿಪಾಯಿಗಳು, 6 ಜನ ಸವಾರರಿದ್ದರು.

ಕೋರ್ಟ : ಯಾರ ಆದೇಶದ ಮೇಲೆ ತೆರಳಿದೆ?

ಕ್ಯಾಂಬೆಲ್ : ರೆಸಿಡೆಂಟನ ಅನುಮತಿ ಮೇರೆಗೆ,

ಕೋರ್ಟ : ರಾಜನ ಅನುಮತಿ ಕೇಳದೆ ಸೈನ್ಯ ತೆಗೆದುಕೊಂಡು ಹೋಗಿದ್ದೆಯಾ ಅಥವಾ ಪರವಾನಿಗೆ ಪಡೆದುಕೊಂಡಿದ್ದೆಯಾ?

ಕ್ಯಾಂಬೆಲ್ : ಇಲ್ಲ, ರಾಜನ ಅನುಮತಿ ಅವಶ್ಯವಿರಲಿಲ್ಲ.

ಕೋರ್ಟ : ಸ್ನೇಹಮಯ ಮಾತುಕತೆಯೊಂದಿಗೆ ತನಿಖೆಗೆ ಹೋಗಿರುವ ನಿಮಗೆ ಸೈನ್ಯ ಅವಶ್ಯವಿತ್ತೆ:

ಕ್ಯಾಂಬೆಲ : ರಾಜನು ನಮ್ಮ ವಿರುದ್ಧ ಬಂಡಾಯ ಹೂಡಲು 2500 ಸೈನಿಕರನ್ನು ಜಮಾಯಿಸಿದ್ದು ಗಮನಿಸಿದೆ. ಇದಕ್ಕಾಗಿ ಲಿಂಗಸೂಗೂರ ತುಕಡಿಯನ್ನು ಉಪಯೋಗಿಸಿಕೊಳ್ಳಲು ರೆಸಿಡೆಂಟರ ಆದೇಶ ಸಹ ಇತ್ತು.

ಕೋರ್ಟ : ರಾಜನು ಸೈನ್ಯ ತುಂಬಿಕೊಂಡದ್ದು ಏಕೆ? ಆತ ಆಗ ನಿನಗೆ ಏನೆಂದು ಹೇಳಿದ.

ಕ್ಯಾಂಬೆಲ್ : ಮರಾಠರಿಂದ ತನ್ನ ರಾಜ್ಯದ ಮೇಲೆ ದಾಳಿಯಾಗುತ್ತ ಅಪಾಯವಿದೆಯೆಂದು, ಹುಟ್ಟು ಜನರ ಹೇಳಿಕೆ ಮೇರೆಗೆ ಅರಬರನ್ನು ನೇಮಿಸಿಕೊಂಡಿದ್ದಾಗಿ ಹೇಳಿದ.

ಕೋರ್ಟ : ಸುರಪುರದ ಮೇಲೆ ನೀವು ಹೇಗೆ ಪ್ರತಿದಾಳಿ ಮಾಡಿದಿರಿ?

ಕ್ಯಾಂಬೆಲ : ಫೆಬ್ರುವರಿ 7 ರಂದು ಕ್ಯಾ. ವಿಂಢೆಮನು ಸೈನ್ಯದೊಂದಿಗೆ ನಾನೂ ಹೂಡಿದ ಶಿಬಿರದಲ್ಲಿಗೆ ಬಂದಿಳಿದ. ಆಗ ಸುರಪುರದ ಕೋಟೆಯ ಮೇಲೆ ಹಲವಾರು ಅರಬ, ರೋಹಿಲರು ಯುದ್ಧಕ್ಕಾಗಿ ಸನ್ನದ್ಧರಾಗಿ ನೆರೆತೊಡಗಿದ್ದರು. ಅದುವರೆಗೆ ನಾವು ಶಾಂತವಾಗಿಯೇ ವೀಕ್ಷಿಸುತ್ತಿದ್ದೆವು. ಸಂಜೆಯಾಗುತ್ತಲೇ ಸನ್ನದ್ಧರಾದ ಸುರಪುರದ ಸೈನ್ಯ ವಿಕೋಪಕ್ಕೆಡೆ ಮಾಡಿತು. ಸಂಜೆ 5–30 ಕ್ಕೆ ಕೋಟೆಗೋಡೆ, ಗುಡ್ಡದ ಮೇಲೆ ನಿಂತು ರಾಜನ ಸೈನ್ಯ ಗುಂಡಿನ ದಾಳಿ ಆರಂಭಿಸಿತು. ಪ್ರತಿಯಾಗಿ ತಾವು ಅವರ ಗುಂಪಿಗೆ ಪ್ರತ್ಯುತ್ತರ ನೀಡುವುದು, ಅನಿವಾರ್ಯವಾಗಿತ್ತು, ನೀಡಿದೆವು.

ಕ್ಯಾ, ಕ್ಯಾಂಬೆಲನ ವಿಚಾರಣೆ ಮುಗಿಯಿತು. ರಾಜನ ಪರವಾಗಿ ಸಾಕ್ಷಿ ನುಡಿಯಲು ಸುರಪುರದಿಂದ ನಂದರಾಜಪ್ಪ ರತ್ನಗಿರಿ, ಕೇಶವರಾವ್ ಅಲಂಪೂರ, ಲಿಂಗೋಭೀಮರಾವ್ ಮುಜುಮದಾರ, ನಾನಾ ಸಾಹೇಬ ಗುರ್ಲ ಹೊಸೂರು, ಮುದ್ದೋಭೀಮರಾವ್ ದಿವಾನ್, ವಾಗಿನಗೇರಿ ರಾಮಣ್ಣ ಮತ್ತು ವಿದ್ಯಾಗುರು ಭಾಸ್ಕರಯ್ಯ ಹಾಗೂ ಬಳವಂತರಾವ್ ಘೋರ್ಪಡೆಯನ್ನು ಟೇಲರ ಹೈದ್ರಾಬಾದಕ್ಕೆ ಕಳಿಸಿಕೊಟ್ಟದ್ದನು.[187] ಇವರನ್ನೆಲ್ಲ ಮೈಸೂರಿನ ಲಷ್ಕರಕ್ಕೆ ಸಂಬಂಧಿಸಿದ ಸರದಾರ ಲಕ್ಷ್ಮಣರಾವ್ ಕರೆದೊಯ್ದಿದ್ದ.

---

187. ಸು. ಸಂ.ಇ. ಪು. 211 (ಮುಜುಮದಾರ ಲಿಂಗಪ್ಪನ ಬರೆಹ)

ಜಂದ್ರಘಾಟದ ಬಾಪ್ರಶೇಟನ ಬಂಗ್ಲೆಯಲ್ಲಿ ವಸತಿ ಸೌಕರ್ಯ ನೀಡಲಾಗಿತ್ತು. ಇವರಲ್ಲಿ ದಿವಾನ ಭೀಮರಾಯನನ್ನು ಮೊದಲು ಸಾಕ್ಷಿ ನುಡಿಯಲು ಕೋರ್ಟ ಆಹ್ವಾನಿಸಿತು. ರಾಜನ ರುಜು, ಮುದ್ರೆ ಇರುವ ಮುರಾರು ಸೈನ್ಯ ನೇಮಕಾತಿ ಆದೇಶ ಪತ್ರಗಳನ್ನು ಭೀಮರಾಯನಿಗೆ ತೋರಿಸಿದ ಕೋರ್ಟ–

ಕೋರ್ಟ : ಈ ಪತ್ರದಲ್ಲಿನ ರುಜು, ಮುದ್ರೆ ರಾಜನದೆ?

ದಿವಾನ : ಹೌದು

ದಿವಾನ ಭೀಮರಾಯನ ವಿಚಾರಣೆ ತರುವಾಯ ಕೋರ್ಟ ಇಂದು ವಿಸರ್ಜನೆಗೊಂಡಿತು. ಮರುದಿನ 29.4.1858 ರಂದು ಮತ್ತೆ ಸರ್ವಸದಸ್ಯರೊಂದಿಗೆ ಸೇರಿದ ಸಭೆ ಭೀಮರಾಯನ ವಿಚಾರಣೆ ಮುಂದುವರೆಸಿತು.

ಕೋರ್ಟ : ಕ್ಯಾಂಬೆಲ್ ಸುರಪುರಕ್ಕೆ ಬಂದು ಏನು ಮಾಡಿದ?

ದಿವಾನ : ಕೇಶವರಾವ್ ಸುರಪುರದ ದಿವಾನನಾಗಿದ್ದಾಗ ರೆಸಿಡೆಂಟನಿಂದ ರಾಜನಿಗೊಂದು ಪತ್ರ ಬಂದಿತ್ತು. ಕ್ಯಾ. ಕ್ಯಾಂಬೆಲನು ರಾಜನ ವಿಚಾರಣೆಗೆ ಬರುವನೆಂದು ಅದರಲ್ಲಿ ಬರೆದಿತ್ತು. 1858 ಜನೇವರಿ 11 ರಂದು ಮಧ್ಯಾಹ್ನ 12 ಗಂಟೆಗೆ ಕ್ಯಾಂಬೆಲ್ ಸಾಹೇಬರು ರಾಜನನ್ನು ಭೇಟಿಯಾದರು. ಶೇಖರಿಸಿದ ಸೈನ್ಯವನ್ನೆಲ್ಲ ವಿಸರ್ಜನೆ ಮಾಡಲು ಆಜ್ಞಾಪಿಸಿದರು. ನಾನು ಸಿದ್ದಿ ಸುಲೇಮಾನನ್ನು ಕರೆದು ಎಲ್ಲಾ ಅರಬ, ರೋಹಿಲರನ್ನು ಅಮಾನತ್ತು ಮಾಡೆಂದೆ. ಆ ಜಮಾದಾರರಿಗೆ, ಸೈನ್ಯಕ್ಕೆ ಜನರನ್ನು ಕರೆತರಬೇಕೆಂದು ಮುಜುಮುದಾರ ಲಿಂಗಪ್ಪನು 3 ಆದೇಶ ಪತ್ರ ಬರೆದಿದ್ದ.

ಕೋರ್ಟ : (ಮುಜುಮುದಾರ ಲಿಂಗಪ್ಪನನ್ನು ಕರೆಯಿಸಿ)[188] ಆದೇಶ ಪತ್ರ ನೀನು ಬರೆದದ್ದು ನಿಜವೆ?

ಲಿಂಗಪ್ಪ : ಐದು ಜನರ ಅರಬು ಜಮಾದಾರರು ಆಜ್ಞಾಪತ್ರ ಬರೆದು ಕೊಡಲು ನನಗೆ ಒತ್ತಡ ತಂದರು. ರಾಜನ ಅಪ್ಪಣೆಯಿಲ್ಲದೆ ಬರೆಯಲಾರೆನೆಂದು ಹಠಹಿಡಿದ ನನಗೆ ಜೀವಭಯ ಹಾಕಿದರು. ಆಗ ಭಯಪಟ್ಟ ನಾನು ಐದು ಜನರಿಗೆ ಹುಕುಮುಗಳನ್ನು ಬರೆದು ಕೊಟ್ಟೆ. ರಾಜನ ರುಜು

188. HFMK Vol.I, 1962 p-495.

ಪಡೆಯಲು ಅವರ ಹೋದರು. ರಾಜ ಬ್ಯಾರಕ್ಯಿಂದ ಶಿಲೆಗಳ ಮಧ್ಯ ಎಡ್ವರ ತಪ್ಪಿ ಬಿದ್ದರು. ರಾಜಮುದ್ರೆ ರಕ್ಷಕ ಬಸಪ್ಪನನ್ನು ಬೆದರಿಸಿ ತಾವೆ ರಾಜ ಮುದ್ರೆ ಹಾಕಿಕೊಂಡರು. ನಿಯಂತ್ರಣ ತಪ್ಪಿದ ರಾಜನಿಂದ ರುಜು ಪಡದೇ ಬಿಟ್ಟರು. ಕೆಲವು ಗಂಟೆಗಳ ತರುವಾಯ ಎಡ್ವರಗೊಂಡ ರಾಜನಿಗೆ ನಡೆದ ಘಟನೆಯೆಲ್ಲ ಹೇಳಿದೆ. ದಿಗ್ಭ್ರಮೆಗೊಂಡ ರಾಜ ಕ್ಯಾಂಬೆಲ್ ನಿಗೆ ಈ ವಿಷಯ ತಿಳಿಸದಿರಲು ಮತ್ತು ಕೂಡಲೇ ಅರಬ್ ರೋಹಿಲರನ್ನು ಸೈನ್ಯದಿಂದ ಅಮಾನತ್ತುಗೊಳಿಸಿ ಅವರಿಗೆ ಪರಿಹಾರ ನೀಡಿ ಹೊರಗೆ ಕಳಿಸಲು ನನಗೆ ಆದೇಶಿಸಿದರು. ನಾನಾಗ ಪರಿಹಾರ ನೀಡಲು ಖಜಾನೆ ತೆರೆದು ನೋಡಿದೆ, ಹಣವಿರಲಿಲ್ಲ.

ಕೋರ್ಟ : ಪರಿಹಾರ ನೀಡಲು ತಿಳಿಸಿದಾಗ ಎಷ್ಟು ಜನ ಅರಬರಿದ್ದರು?

ಲಿಂಗಪ್ಪ : 450 ಜನ.

ಕೋರ್ಟ : ಅವರಲ್ಲಿ ಎಷ್ಟು ಜನರಿಗೆ ಅಮಾನತ್ತುಗೊಳಿಸಿದಿರಿ.

ಲಿಂಗಪ್ಪ : 200 ಜನರನ್ನು

ಕೋರ್ಟ : ಉಳಿದ 250 ಜನರು ಯಾರು?

ಲಿಂಗಪ್ಪ : ಅವರು ಇಜ್ಜತ್ಖಾನ ಮತ್ತು ಸಿದ್ದೀನಸೀಬ ಜಮಾದಾರರ ನೇತೃತ್ವದಲ್ಲಿ ದ್ದವರು.

ಈ ರೀತಿ ಸಾಕ್ಷಿ ಹೇಳಿದ ಲಿಂಗಪ್ಪ ತೆರಳಿದನು. ತರುವಾಯ ಜ್ಯೆನಿಟಿಂಗ್ ಡವ್ಹಾಸಿಯನ್ನು ಸಾಕ್ಷಿ ನುಡಿಯಲು ಕೋರ್ಟ ಕರೆಯಿತು.[189]

ಕೋರ್ಟ : ಸುರಪುರದಲ್ಲಿ ಆಗ ನೀನು ಅರಬರನ್ನು ಹೇಗೆ ಕಂಡೆ?

ಸಿಂಗ್ : : ಜನೇವರಿ 11 ರಂದು ನಾನು ಕ್ಯಾಂಬೆಲ್ ಸಾಹೇಬ್ರುದೊಂದಿಗೆ ಸುರಪುರಕ್ಕೆ ಹೋದೆ. ಅರಬ ಮತ್ತು ರೋಹಿಲರನ್ನು ಪತ್ತೆ ಹಚ್ಚುವ ಕಾರ್ಯದಲ್ಲಿದ್ದ ನಮಗೆ ದಿನನಿತ್ಯ 10 ರಿಂದ 20 ಜನರ ಅರಬರು ಸುರಪುರಕ್ಕೆ ಬಂದು ಸೇರುವುದು ಗಮನಿಸಿದೆವು. ಅವರನ್ನು ವಿಚಾರಿಸಲಾಗಿ ತಾವು ಬೇರೆ ಬೇರೆ ಜಮಾದಾರರ ನೇತೃತ್ವದವರೆಂದು, ಬ್ರಿಟೀಷರ ವಿರುದ್ಧ ಹೋರಾಡಲು ಬಂದಿರುವುದಾಗಿ ಹೇಳಿಕೊಂಡರು.

---

189. HFMK Vol.I 1962 p-495.

ಕೋರ್ಟ : ಯುದ್ಧ ನಡೆದ ದಿನ ಆಕ್ರಮ ಹೇಗಾಯಿತು?

ಸಿಂಗ್ : ಕ್ಯಾಪ್ಟನ್ ವಿಂಡ್ಹಮ್ ಪಡೆಯ ಮೇಲೆ ಸಂಸ್ಥಾನದ ಸುಮಾರು 5 ಸಾವಿರ ಸೈನ್ಯ ಗುಂಡಿನ ಮಳೆಗರೆದರು. ಇದು ರಾತ್ರಿ 11 ರವರೆಗೆ ಮುಂದುವರೆಯಿತು.

ಕೋರ್ಟ : 5 ಸಾವಿರ ಜನ ಯಾರ ಕಡೆಯವರು?

ಸಿಂಗ್ : ರಾಜನ ಕಡೆಯವರು

ಕೋರ್ಟ : ಮೊದಲು ಯಾರು ಗುಂಡು ಹಾರಿಸಿದರು.

ಸಿಂಗ್ : ರಾಜನ ಕಡೆಯವರೇ?

ಜೈನಿಸಿಂಗನ ತರುವಾಯ ಸಂಸ್ಥಾನದ ಸೈನ್ಯಕ್ಕೆ ಮುಖಂಡನಾಗಿದ್ದ, ರಾಜನ ಆಪ್ತನೂ ಆಗಿದ್ದ ಜಮಾದಾರ ಬಲವಂತರಾವ್ ಘೋರ್ಪಡೆಯನ್ನು ಸಾಕ್ಷಿ ಹೇಳಲು ಕೋರ್ಟ ಕರೆಯಿತು.

ಘೋರ್ಪಡೆ : ಬ್ರಿಟೀಷರ ಲಷ್ಕರ ಫೆಬ್ರುವರಿ 7 ರಂದು ಸುರಪುರವನ್ನು ಸುತ್ತುವರೆದು ನಿಂತಿತ್ತು. ವಿಷಯ ತಿಳಿದ ರಾಜನು ಯುದ್ಧ ನಡೆಯದಂತೆ ನೋಡಿಕೊಳ್ಳಲು ಮತ್ತು ಸುರಪುರ ನಗರವನ್ನು ರಕ್ಷಿಸಲು ನನಗೆ ತಿಳಿಸಿದ. ನಾನು ಕ್ಯಾ. ಕ್ಯಾಂಬೆಲನು ಇಳಿದುಕೊಂಡ ಶಿಬಿರಕ್ಕೆ ಹೋಗಿ ರಾಜನ ನಿಲುವು ತಿಳಿಸಿ ನಗರದತ್ತ ಮರಳುತ್ತಿದ್ದ, ಅಷ್ಟರಲ್ಲಿ 50 ಜನ ಸೈನಿಕರೊಂದಿಗೆ ತುಮಾದಾರ ಹುಸೇನನು ಹೊರಟಿದ್ದ. ನಾನು ಕೆಲವು ಹೆಜ್ಜೆ ಮುಂದಿಟ್ಟಿದ್ದ ಶಿಬಿರದ ಮೇಲೆ ಗುಂಡು ಹಾರಿಸಿದ ಸಪ್ಪಳ ಕೇಳಿಸಿತು.[190] ಘಾತವಾಯಿತೆಂದು ತಕ್ಷಣವೇ ನಾನು ರಾಜನ ಆದೇಶದ ಮೇರೆಗೆ ಸುರಪುರ… ರಕ್ಷಣೆಗಾಗಿ ಕೋಟೆಯ ಬಾಗಿಲುಗಳನ್ನು ಭದ್ರಪಡಿಸಿ ಕಾವಲು ನಿಂತೆ. ಕೆಲವು ಜನ ಸೈನಿಕರು ನನ್ನ ಜೊತೆಯಲ್ಲಿ ಇದ್ದರು. ನಗರದ ಜನರನ್ನು… ಬ್ರಿಟೀಷರ ಶಿಬಿರದತ್ತ ಬರದಂತೆ ತಡೆಯುತ್ತಿದ್ದೆವು.

ಘೋರ್ಪಡೆಯ ಹೇಳಿಕೆ ನಂತರ ನಿರ್ಗಮಿಸಿದ ತರುವಾಯ, ಬ್ರಿಟಿಷ ಸೈನ್ಯದೊಂದಿಗಿದ್ದ ಮಂಕೋಜಿ ಮೋನಾಕ ಜಮಾದಾರನು ಯುದ್ಧದಲ್ಲಿ ಪ್ರತ್ಯಕ್ಷ ಪ್ರತಿನಿಧಿಯಾಗಿದ್ದ. ಆತನನ್ನು ಸಾಕ್ಷಿಗಾಗಿ ಕೋರ್ಟ ತನ್ನ ಮುಂದೆ ಕರೆದುಕೊಂಡು —

---

190. TBRPS p-197.

ಕೋರ್ಟ್ : ಫೆಬ್ರವರಿ 8, 1858 ರಂದು ಸುರಪುರದಲ್ಲಿ ಏನು ನಡೆಯಿತು?

ಮಂಕೋಜೀ : ಅಂದು ಫೆಬ್ರವರಿ 8 ಸೋಮವಾರವಾಗಿತ್ತು. ಕ್ಯಾ. ನ್ಯೂಬೆರಿ ದೇವದುರ್ಗದ ಮೂಲಕ ಸುರಪುರದತ್ತ ಸೈನ್ಯಸಾಗಿಸಿದ. ಅದರೊಂದಿಗೆ ನಾನು ಇದ್ದೆ. ಸುರಪುರದ ಬೆಟ್ಟ ಹತ್ತಲು ನಾವು ಮುಂದೆ ನುಗ್ಗಿದೆವು. ಆರಂಭವಾದ ಯುದ್ಧದಲ್ಲಿ ಕ್ಯಾ. ನ್ಯೂಬೆರಿಯನ್ನು ಸಂಸ್ಥಾನದ ಸೈನಿಕರು ಕೊಂದರು?

ಕೋರ್ಟ್ : (ಮೈಸೂರಿನ ಲಕ್ಷ್ಮಣನಿಗೆ)[191] ನ್ಯೂಬೆರಿ ಹೇಗೆ ಕೊಲ್ಲಲ್ಪಟ್ಟ, ಯಾರಿಂದ?

ಲಕ್ಷ್ಮಣ : ನ್ಯೂಬೆರಿಯು ಅಂದು ವಿಪರೀತ ಮದ್ಯ ಸೇವಿಸಿದ್ದ. ಸುರಪುರದ ಬೆಟ್ಟದ ಮೇಲಿರುವ 12 ಜನ ರೋಹಿಲೆಯರ ಕಡೆ ನುಗ್ಗಿ ಹೋದ. ಅವರ ಪತಾಕೆಗಳನ್ನು ಕಸಿದುಕೊಂಡಾಗ ಮಾರಕಾಸ್ತ್ರಗಳಿಂದ ನಿಂತಿದ್ದ ಅವರು ನ್ಯೂಬೆರಿಯ ರುಂಡವನ್ನೇ ಕತ್ತರಿಸಿಕೊಂಡು ಹೋದರು.[192]

ಇಲ್ಲಿಗೆ ಇಂದಿನ ವಿಚಾರಣೆ ಮುಗಿಸಿದ ನ್ಯಾಯಾಲಯವು 4 ನೇ ಮೇ 1858 ಮಂಗಳವಾರದಂದು ಮತ್ತೆ ಸಭೆ ಸೇರಲು ನಿರ್ಧರಿಸಿತು.

<u>4.5.1858:</u>

ಇದುವರೆಗೆ ಸಾಕ್ಷಿಗಳು ನೀಡಿದ ಸಾಕ್ಷ್ಯಗಳಲ್ಲಿ ಸಂಗ್ರಹಿಸಿಕೊಂಡ ನ್ಯಾಯಾಂಗವು ವೆಂಕಟಪ್ಪ ನಾಯಕನಿಂದ ಮತ್ತೆ ದೀರ್ಘ ವಿಚಾರಣೆ ಬಯಸಿತು.

ಕೈದಿಯಾಗಿದ್ದ ಸುರಪುರದ ರಾಜನನ್ನು ಮತ್ತೆ ಕೋರ್ಟ್ ಇಂದು ವಿಚಾರಣೆಗಾಗಿ ಕರೆಯಿಸಿಕೊಂಡಿತು—[193]

ಕೋರ್ಟ್ : ಸಂಬಳದ ಸೈನಿಕರನ್ನು ತುಂಬಿಸಿಕೊಳ್ಳುವಲ್ಲಿ ಹೊರಡಿಸಿದ ಆದೇಶ ಪತ್ರದ ಬಗ್ಗೆ ಏನು ಹೇಳುತ್ತೀರಿ?

---

191. HFMK Vol.I, 1962 p-495.
192. ಸು.ಸಂ.ಇ., ಪುಟ-212.
193. HFMK Vol.I, 1962 p-499.

ರಾಜ : ಅಂದು ಬೇಟೆಗೆಂದು ಅಡವಿಗೆ ಹೋಗಿದ್ದ ನಾನು ಮರಳಿ ಸಂಜೆ ಅರಮನೆ ಸೇರುತ್ತಿದ್ದೆ. ಆಗ ಜಮಾದಾರರಾದ ತುಸಾದುಖಾ ಅರಿಫಅಲಿ, ಸುಲೇಮಾನರು ನನ್ನ ಬಳಿ ಓಡೋಡಿ ಬಂದು 'ಬ್ರಿಟೀಷರು ನಮ್ಮ ಮೇಲೆ ಆಕ್ರಮಣ ಮಾಡಲಿದ್ದಾರೆಂದು' ಹೇಳಿದರು. ದಿಗ್ಭ್ರಮೆಗೊಂಡ ನಾನು ಗೊಂದಲಕ್ಕೀಡಾಗಿ ಮದ್ಯ ಸೇವಿಸಿ ಎಚ್ಚರ ತಪ್ಪಿ ಬಿದ್ದೆ. ಎಷ್ಟು ಕುಡಿದಿದ್ದೆನೋ ಗೊತ್ತಿಲ್ಲ. ಆಗ ಈ ಮೂರು ಜನ ಜಮಾದಾರರು 500 ಜನ ಸೈನಿಕರ ನೇಮಕದ ಆದೇಶ ಪತ್ರ ಬರೆದುಕೊಂಡು ನನ್ನ ರುಜು, ಮುದ್ರೆ ಪಡೆದುಕೊಂಡಿದ್ದಾರೆ. ಇದಾವುದು ನನಗೆ ತಿಳಿದಿಲ್ಲ. ನನಗೆ, ಬ್ರಿಟಿಷರ ವಿರುದ್ಧ ಯಾವುದೇ ದುರುದ್ದೇಶವಿಲ್ಲ. ಅದು ಇದ್ದರೆ ನಾನು ಹೈದ್ರಾಬಾದಕ್ಕೆ ಬರುತ್ತಿರಲಿಲ್ಲ. ರಣರಂಗದಲ್ಲಿಯೇ ನಿಮ್ಮ ಸೈನ್ಯವನ್ನು ಎದುರಿಸುತ್ತಿದ್ದೆ.

ಕೋರ್ಟ್ : ಕ್ಯಾ. ಕ್ಯಾಂಬೆಲರಿಗೆ ಈಗ ನೀವು ನೇರವಾಗಿ ಪ್ರಶ್ನಿಸಬಹುದು.

ರಾಜ : :(ಕ್ಯಾಂಬೆಲಗೆ) ಯುದ್ಧ ಸಾಮಗ್ರಿ ಸಂಗ್ರಹಿಸಿದ್ದೇನೆ ಎಂಬ ಸಂಶಯದಿಂದ ನೀವು ನನ್ನ ಸುರಪುರ, ರಾಯನಪಾಳ್ಯ, ವಾಗಿನಗೇರಿ ಕೋಟೆಗಳಲ್ಲಿ ಶೋಧಿಸಿದಾಗ ಅಲ್ಲಿ ಸೈನ್ಯ, ಸಾಮಗ್ರಿ ಸಿಕ್ಕೀತೆ?

ಕ್ಯಾಂಬೆಲ್ : ಇಲ್ಲ, ಯಾವುದೇ ಸೈನ್ಯವಾಗಲಿ, ಯುದ್ಧ ಸಾಮಗ್ರಿಯಾಗಲಿ ಇರಲಿಲ್ಲ.

ರಾಜ : ಸುರಪುರದಲ್ಲಿ ಜೀವಭಯವಿದೆ ಎಂದು ದೇವದುರ್ಗಕ್ಕೆ ಹೊರಟ ನಿಮಗೆ ನಾನು ಸಂಪೂರ್ಣ ರಕ್ಷಣೆ ಒದಗಿಸಿ ಒಂಟೆ, ಕುದುರೆ, ಕೊಟ್ಟು ಸಹಾಯಕರನ್ನು, ವಕೀಲರನ್ನು ಜೊತೆಯಲ್ಲಿ ಕಳಿಸಲಿಲ್ಲವೇ?

ಕ್ಯಾಂಬೆಲ್ : ಹೌದು ರಕ್ಷಣೆ ಮತ್ತು ಸಹಾಯಕರನ್ನು ಕೊಟ್ಟಿದ್ದಿರಿ.

ರಾಜ : ಸೈನ್ಯ ನೇರ್ಪಡೆಯ ಆದೇಶ ಪತ್ರ ಕುರಿತು ನಾನು ಮತ್ತು ದಿವಾನ ನಿಮ್ಮನ್ನು ಭೇಟಿಯಾಗಿ ಮಾತನಾಡಿದ್ದು ಯಾವಾಗ?

ಕ್ಯಾಂಬೆಲ : ಜನೇವರಿ 27, 1858 ರಂದು ದಿವಾನನು ನನಗೆ ದರಬಾರಿಗೆ ಬರಲು ಹೇಳಿದನು, ನಾನಾಗ ಅಲ್ಲಿಗೆ ಹೋದಾಗ ನೀವೆ ಸ್ವತಃ ಆದೇಶ ಹೊರಡಿಸಿರುವುದಾಗಿ ಒಪ್ಪಿಕೊಂಡಿರಿ.

ರಾಜ : ನಿಮ್ಮ ಸಲಹೆಯಂತೆ ನಾನು ನನ್ನ ಸೈನ್ಯದಲ್ಲಿಯ ಅರಬ ರೋಹಿಲರನ್ನು ಅಮಾನತ್ತು ಮಾಡಲಿಲ್ಲವೇ?

ಕ್ಯಾಂಬೆಲ್ : ಮಾಡುವ ಮಾತು ಕೊಟ್ಟಿದ್ದಿರಿ.

ರಾಜ : ನನಗೆ ರಾಜ್ಯ ಒಪ್ಪಿಸಿದಾಗ ಖಜಾನೆಯಲ್ಲಿ ಹಣವಿತ್ತೆ?

ಕ್ಯಾಂಬೆಲ : ಇಲ್ಲ

ರಾಜ : ಮಾಲ್ಕಂ ಭೇಟಿಯಾಗಲು ವಕೀಲನನ್ನು ಕಳಿಸೆಂದು ಕೋರಿದಾಗ ನಾನು ಕಳಿಸಲಿಲ್ಲವೆ?

ಕ್ಯಾಂಬೆಲ : ನಾನು ಕೋರಿದಾಗ, ಕಳಿಸಿದಿರಿ.

ಕೋರ್ಟ : (ರಾಜನಿಗೆ) ಒಪ್ಪಂದದಂತೆ ಬ್ರಿಟೀಷ ಸೈನ್ಯ ಸಂಸ್ಥಾನದಲ್ಲಿ ಬರಬಹುದು. ಆದರೆ ಮಾಲ್ಕಮ್ ಬರುವಾಗ ನಿಮ್ಮ ವಕೀಲನನ್ನು ಆತನ ವಿರುದ್ಧ ಕಳಿಸಿದರೇಕೆ?

ರಾಜ : ನನ್ನ ರಾಜ್ಯ ಬಹು ಆತಂಕದಲ್ಲಿತ್ತು. ಎಲ್ಲೆಡೆ ಗೊಂದಲವೆದ್ದಿತ್ತು. ಹಾಗಾಗಿ ಮಾಲ್ಕಂ ಬರುವಾಗ ನನ್ನ ಸೈನಿಕರಿಂದ ಆತನಿಗೆ ಏನೂ ತೊಂದರೆಯಾಗಬಾರದೆಂದು ಕಳಿಸಿದನಷ್ಟೆ.

ಕೋರ್ಟ : (ಕ್ಯಾಂಬೆಲಗೆ) ಸುರಪುರಕ್ಕೆ ಹೋದಾಗ ನಿನಗೆ ರಾಜನಿಂದ ಮತ್ತು ರಾಜನ ಸೈನಿಕರಿಂದ ಪ್ರಾಣಭಯ ಉಂಟಾಯಿತೆಂದು ಹೇಳುವೆ ಅದನ್ನು ರೆಸಿಡೆಂಟನಿಗೆ ವರದಿ ಮಾಡಿದೆಯಾ?

ಕ್ಯಾಂಬೆಲ್ : ಹೌದು ಮಾಡಿರುವೆ. ನನ್ನ ಮತ್ತು ನನ್ನ ಪಡೆಯ ರಕ್ಷಣೆಗೆಂದು ಲಿಂಗಸೂರಿನ ವಿಂಢಮ್ ಸೈನ್ಯದ ಸಹಾಯ ಪಡೆಯಲು ಸಲಹೆ ನೀಡಿದರು.

ಕ್ಯಾಂಬೆಲನೊಂದಿಗೆ ರಾಜನ ಪ್ರಶ್ನಾವಳಿ ಮುಗಿದಾಗ ದಿವಾನ ಭೀಮರಾಯನನ್ನು ರಾಜನೆದುರು ಉತ್ತರ ನೀಡಲು ಕೋರ್ಟ ಕರೆಯಿಸಿತು.

ರಾಜ : ಸಿದ್ದಿ ಸುಲೇಮಾನನು ಆದೇಶ ಪತ್ರವನ್ನು ನಿನಗೆ ಎಂದು ತೋರಿಸಿದನು

ದಿವಾನ : ನನಗೆ ನೆನಪಿಲ್ಲ

ರಾಜ : ಆದೇಶ ಪತ್ರ ನೋಡಿದನಾಕ್ಷಣವೇ ನೀನು ಕ್ಯಾಂಬೆಲಗೆ ವರದಿ ಮಾಡಿದೆಯಾ?

ದಿವಾನ : ಹೌದು, ಅದು ನಿಮ್ಮ ಆಜ್ಞೆ ಮೇರೆಗೆ

ರಾಜ : ಬ್ರಿಟೀಷ ಪಡೆಗಳ ಮೇಲೆ ನಮ್ಮ ದಾಳಿ ತಡೆಗಟ್ಟಲು ನಾನು ತೆಗೆದುಕೊಂಡ ಕ್ರಮಗಳೇನು, ಹೇಳಬಲ್ಲೆಯಾ?

ದಿವಾನ : ತುಸುದೂರ ಹುಸೇನನು ಬ್ರಿಟೀಷರ ಮೇಲೆ ದಾಳಿ ಮಾಡುತ್ತಾನೆಂದು ನಿಮಗೆ ತಿಳಿದಾಕ್ಷಣವೇ ಸೇವಕರು ಕಳಿಸಿ ಅವನನ್ನು ತಡೆಯಲು ಪ್ರಯತ್ನಿಸಿದಿರಿ.

ರಾಜ : ನ್ಯಾಬಿರ್ರಿಯನ್ನು ಕೊಂದಾಗ, ಆ ವಿಷಯ ತಂದಾಗ ನೀನು ಅಲ್ಲಿದ್ದೆಯಾ?

ದಿವಾನ : ಇಜ್ಜತಖಾನನು ನ್ಯಾಬಿರ್ರಿಯ ಟೋಪಿಯೊಂದಿಗೆ ಬಂದು ಅವನನ್ನು ಕೊಂದದ್ದಾಗಿ ತಿಳಿಸಿದನು. ಜೊತೆಯಲ್ಲಿ ರಕ್ತಸಿಕ್ತ ಖಡ್ಗ ಹಿಡಿದ ರೋಹಿಲರು ಇದ್ದರು. ಇದನ್ನು ಕೇಳಿದಾಕ್ಷಣವೇ ನೀನು ಪ್ರಜ್ಞಾಹೀನರಾದಿರಿ. ಆಗ ನಿಮ್ಮ ಚಿಕ್ಕಪ್ಪನು ಕೊಂದು ಬಂದವರಿಗೆಲ್ಲ ಬಹುಮಾನ ನೀಡಿ ಕಳಿಸಿದ.

ಇಲ್ಲಿಗೆ, ರಾಜ ಮತ್ತು ದಿವಾನ ಭೀಮರಾಯನ ಮಧ್ಯದ ಪ್ರಶ್ನೋತ್ತರ ಕೇಳಿದ ಕೋರ್ಟ ದಿವಾನ ಭೀಮರಾಯನಿಂದ ದೀರ್ಘ ಹೇಳಿಕೆ ಬಯಸಿತು. ಆಗ[194]

" 7ನೇ ಫೆಬ್ರವರಿಯಂದು 6 ಗಂಟೆಗೆ ವಿಂಢಮನ ಶಿಬಿರದ ಮೇಲೆ ರಾಜನ ಪಡೆ ದಾಳಿ ಮಾಡಿದೆ ಎಂದು ಗೊತ್ತಾಯಿತು. ನಾನು ರಾಜನೊಂದಿಗೆ ಅರಮನೆಯಲ್ಲಿದ್ದೆ. ಆಗ ತುಪಾಕಿಯಿಂದ

---

194. HFMK Vol.I, 1962 p-515.

ಸಿಡಿಯುವ ಗುಂಡಿನ ಸದ್ದು ಕೇಳಿಸುತ್ತಿತ್ತು. ರಾಜನು, ವಕೀಲರನ್ನು ಕಳಿಸಿ ರೋಹಿಲ, ಅರಬರನ್ನು ಹಿಂದೆ ಸರಿದು ಸ್ವಸ್ಥ ಉಳಿಯಲು ತಿಳಿಸಿರೆಂದನು. ಪ್ರಯತ್ನ ವಿಫಲವಾಯಿತು. ತುಸುದೂಕ ಮತ್ತು ಲಕ್ಷ್ಮಣಸಿಂಗರು ಸಂಘಟಿಸಿದ ಈ ದಾಳಿ ಬಿರುಸುಗೊಂಡಿತೇ ವಿನ: ಹಿಂದೆ ಸರಿಯಲಿಲ್ಲ. ಯುದ್ಧ ನಡೆದ ಸ್ಥಳಕ್ಕೆ ಹೋದರೆ ವ್ಯರ್ಥ ಯತ್ನವೆಂದು ಬಯಸಿದ ರಾಜ ದಿಕ್ಕು ತಪ್ಪಿ ಅರಮನೆಯ ಗೋಡೆಗೆ ಹಾಯತೊಡಗಿದ. ಅದೇ ಸಂದರ್ಭದಲ್ಲಿ ಅರಮನೆಗೆ ಬಂದ ತುಸುಹೂಕ ಹುಸೇನನು 'ವೆಂಕಟಪ್ಪನಾಯಕನನ್ನು ದಿವಾನನನ್ನಾಗಿ, ಪುಟ್ಟಸ್ವಾಮಿಯನ್ನು ಸರದಾರನನ್ನಾಗಿ' ಮಾಡಲು ಕೋರಿದ. 8ನೇ ತಾರೀಖಿನಂದು ಬೆಳಿಗ್ಗೆ 5-30ಕ್ಕೆ ನನ್ನನ್ನು ರಾಜ ಬರಹೇಳಿದ್ದ. ತಾನು ಕ್ಯಾಂಬೆಲನನ್ನು ಕಾಣಲು ಹೋಗುವುದಾಗಿ ತಿಳಿಸಿ ಸಿದ್ಧನಾಗುತ್ತಿದ್ದ, ಅದೇ ಸಂದರ್ಭದಲ್ಲಿ ಇದ್ದಕ್ಕಿದ್ದಂತೆಯೇ ಇಜ್ಜತಖಾನ ಮತ್ತು ಇತರ ರೋಹಿಲೆಯರು 'ತಾವು ಕ್ಯಾ. ನ್ಯೂಬೆರಿಯನ್ನು ಕೊಂದ' ಸುದ್ದಿ ತಂದರು. ದಿಗ್ಭ್ರಮೆಗೊಂಡ ರಾಜ ಸತ್ತ ನ್ಯೂಬೆರಿ ಬಗ್ಗೆ ಕರುಣೆ ವ್ಯಕ್ತಪಡಿಸಿದ.

ಈಗ ಕ್ಯಾಂಬೆಲನನ್ನು ಕಾಣುವುದು ಅಸಾಧ್ಯವೆಂದು ಅರಿತ ರಾಜ ತಾನು ರಾತ್ರಿ ಹೈದ್ರಾಬಾದಕ್ಕೆ ಹೊರಟು ರೆಸಿಡೆಂಟ ಮತ್ತು ನಿಜಾಮರಿಗೆ ಭೇಟಿಯಾಗುವ ಇಚ್ಛೆ ವ್ಯಕ್ತಪಡಿಸಿದ. ಅಲ್ಪ ಸ್ವಲ್ಪ ಆಭರಣ ಒಡವೆಯೊಂದಿಗೆ ರಾಜ ಫೆಬ್ರುವರಿ 8 ರ ರಾತ್ರಿಯೇ ಸುರಪುರದಿಂದ ತಪ್ಪಿಸಿಕೊಂಡು ಹೈದ್ರಾಬಾದ ದಾರಿ ಹಿಡಿದಿದ್ದರು. ನಾನು ಭೇಟಿಯಾಗಲು ಬರುವಷ್ಟರಲ್ಲಿ — ಚಿತ್ತಾಪೂರ ಮೂಲಕ ರೆಸಿಡೆಂಟನನ್ನು ಕಾಣಲು ಹೋಗಿರುವ ಸುದ್ದಿ ತಿಳಿಯಿತು.

ದಿವಾನ ಭೀಮರಾಯನಿಂದ ಮೇಲಿನಂತೆ ದೀರ್ಘ ಹೇಳಿಕೆ ಪಡೆದ ಕೋರ್ಟ ಆರೋಪಿ ವೆಂಕಟಪ್ಪನಾಯಕನಿಂದಲೂ ಸಮಗ್ರ ಹೇಳಿಕೆ ನೀಡಲು ಆದೇಶ ಹೊರಡಿಸಿತು. ಆಗ ಕೋರ್ಟಿನ ಬೇಡಿಕೆಯಂತೆ ರಾಜನು ತನ್ನ ಕೊನೆಯ ಮನವಿಯನ್ನು ನೀಡಿದನು.

<u>ಕೊನೆಯ ಮನವಿ:</u>[195]

ಮಾನ್ಯ ಅಧ್ಯಕ್ಷರೆ, ನ್ಯಾಯಾಧೀಶರೆ,

ಸಮಿತಿಯ ಸದಸ್ಯರು,

'ಆಂಗ್ಲ ಸರಕಾರಕ್ಕೆ ನಾನೆಂದು ವಿರೋಧಿಸಿಲ್ಲ. ಯಾವ ರೀತಿಯ ದ್ರೋಹವ

---

195. HFMK Vol.I 1962 pp.517-18

ಮಾಡಿಲ್ಲ. 2500 ಜನ ಅರಬ, ರೋಹಿಲೆರನ್ನು ನೇಮಿಸಿಕೊಂಡಿರುವೆನೆಂಬ ಆರೋಪ ನಿಜವಲ್ಲ. ಅವರು ಇದ್ದದ್ದು ಕೇವಲ 100 ರಿಂದ 200 ಮಾತ್ರ. ತನಿಖೆಗೆಂದು ಬಂದ ಕ್ಯಾ. ಕ್ಯಾಂಬೆಲ ನನ್ನ ಚಿಕ್ಕಪ್ಪನ ಮಗನನ್ನು ಸುರಪುರದ ಗಾದಿಗೇರಿಸುವ ತಂತ್ರ ಹೂಡಿದ್ದಾನೆಂದು[196] ನನ್ನ ನಂಬಲರ್ಹ ಮೂಲಗಳಿಂದ ತಿಳಿದುಕೊಂಡೆ. ಇದರಿಂದ ನಾನು ವಿಪರೀತ ಗೊಂದಲದಲ್ಲಿ ಬಿದ್ದೆ.

ನೇಮಿಸಿಕೊಂಡಿರುವ ಅರಬ, ರೋಹಿಲೆರನ್ನು ಸೈನ್ಯದಿಂದ ಕೂಡಲೇ ಕಿತ್ತೊಗೆಯ ಬೇಕೆಂಬ ಕ್ಯಾಂಬೆಲನ ಮಾತಿಗೆ ನಾನು ನಾಲ್ಕು ತಿಂಗಳ ಸಮಯಾವಕಾಶ ಕೇಳಿದೆ. ಯಾಕೆಂದರೆ ಅವರನ್ನೆಲ್ಲ ಅಮಾನತ್ತುಗೊಳಿಸಿದರೆ ಅವರಿಗೆ ಪರಿಹಾರ ಧನ ಕೊಡಲು ನನ್ನಲ್ಲಿ ಹಣವಿರಲಿಲ್ಲ. ಸುರಪುರದಲ್ಲಿ ಭಯಭೀತನಾದ ಕ್ಯಾಂಬೆಲಗೆ ನಾನು ಸಂಪೂರ್ಣ ರಕ್ಷಣೆ ನೀಡಿ ಆತ ಇಚ್ಛಪಟ್ಟ ಪ್ರದೇಶಕ್ಕೆ ತೆರಳಲು ಸಹಕರಿಸಿದ್ದೇನೆ. ತರುವಾಯ ಫೆಬ್ರವರಿ 7 ಮತ್ತು 8 ರಂದು ನನ್ನ ಕೋಟೆಯ ಗಡಿಯಲ್ಲಿ ಕ್ಯಾಂಬೆಲ್ ಮತ್ತು ಆತನನ್ನು ಬೆಂಬಲ ಬಂದ ಬ್ರಿಟೀಷ ಪಡೆಗಳು ಆಕ್ರಮಿಸಿದವು. ತೋಪಿನ ಸಿಡಿಮದ್ದು ಸಪ್ಪಳ ಅರಮನೆಗೆ ಕೇಳಿಸುತ್ತಿತ್ತು. ಸಮಯ ಉರುಳಿದಂತೆಲ್ಲ ಗಡಿಯಲ್ಲಿ ಗುಂಡಿನ ಚಕಮಕಿ ಹಾಗೂ ಕದನ ತೀವ್ರಗೊಂಡಿತು. ಸ್ಥಿಮಿತ ಕಳೆದುಕೊಂಡು ನಾನು ವಿಶ್ರಾಂತಿ ಪಡೆಯುವ ನೆಪದಲ್ಲಿ ಅರಮನೆಯ ಹಿಂಬಾಗಿಲನಿಂದ ಹೊರಬಿದ್ದೆ. ಮಧ್ಯರಾತ್ರಿಯಾಗಿತ್ತು. ಸಿದ್ದನತೋಟಕ್ಕೆ ಹೋದೆ. ನಿನ್ನೆಯ ದಿನವೇ ನನಗಿದ್ದ ಒಬ್ಬ ಮಗ, ಒಬ್ಬ ಮಗಳು ಹಾಗೂ ನನ್ನ ಎಂಟು ಜನ ರಾಣಿಯರನ್ನು ಶಹಾಪುರಕ್ಕೆ ಕಳುಹಿಸಿದ್ದೆ. ಈಗ ನಾನೊಬ್ಬನೆ ಆಗಿದ್ದೆ. ನನ್ನೊಂದಿಗೆ ಇಬ್ಬರು ಸವಾರರು ಮಾತ್ರ ಇದ್ದರು.

2-3 ತಿಂಗಳು ನನ್ನ ಸಲಹೆಗಾರರು ಹೈರಾಣರಾಗಿದ್ದರು. ಮೀರಲಸಾಹೇಬ, ಸಹ ನನ್ನ ಇಲಾಖೆಗೆ ಸೇರಿದ್ದು, ಅವರು ನನ್ನ ಹಿತಚಿಂತಕರಾಗಿರುವುದರಿಂದ ಅವರು ಹೇಳಿದ ಮಾತನ್ನು ನಂಬುತ್ತಿದ್ದೆ. ಪಿಡ್ಡನಾಯಕನ ಮಗನನ್ನು ಸಂಸ್ಥಾನದ ಗಾದಿಗೆ ಕೂಡಿಸುತ್ತಾರೆಂಬ ಮಾತನ್ನು ಇವರು ಧೃಢಪಡಿಸಿದ್ದರು. ನಾನು ನಂಬಿಬಿಟ್ಟೆ. ಸೈನ್ಯ ಶಿಬಂದಿ ಅವಶ್ಯವೆಂದರೂ. ತುಸುವಾಕಹುಸೇನ, ಮೀರ ಸಾಹೇಬ ಮುಂತಾದ ಅರಬ ಜಮಾದಾರರಿಗೆ 6 ತಿಂಗಳ ಮಟ್ಟಿಗೆ 2500 ಜನ ಸೈನಿಕರು ಬೇಕೆಂದು ಆದೇಶ ನೀಡಿದ್ದೆ. ಇದು ನಿಜ. ಇದು ನನ್ನ ಚಿಕ್ಕಪ್ಪನ ಮಗನನ್ನು ವಿರೋಧಿಸಿ ಸಂಘಟಿಸಿದ ಸೈನ್ಯವೇ ಹೊರತು ಬ್ರಿಟೀಷ ಸರಕಾರದ ವಿರುದ್ಧ ಬಂಡೇಳಲು ಅಲ್ಲ.

---

196. SML p-403.

ನಾನು ಮಹಿಪಾಲಸಿಂಗನನ್ನು ನೋಡಿಯೇ ಇಲ್ಲ. ಮಾತಾಡುವದಂತು ದೂರವೇ ಉಳಿಯಿತು. ನನ್ನ ದಿವಾನ ಕೇಶವರಾಯನಿಗೆ ಆತನ ಪರಿಚಯವಿರಬಹುದು. ಕೇಶವರಾಯ ಆತನಿಗ ಯಾವ ಆದೇಶ ಕೊಟ್ಟಿದ್ದನೋ ಗೊತ್ತಿಲ್ಲ.

ನಾನು ನನ್ನ ಪರಿಚಿತ ಸಂಸ್ಥಾನಿಕರೊಂದಿಗೆ ಮಾತ್ರ ಸಂಪರ್ಕವಿಟ್ಟುಕೊಂಡಿದ್ದೆ. ಅಕ್ಕಲಕೋಟ, ಜಮಖಂಡಿ, ರಾಜರೊಂದಿಗೆ ಮಾತನಾಡಿದ್ದೆ 'ಸುರಖ' ರಾಜ ಯಾರೋ ನನಗೆ ಗೊತ್ತಿಲ್ಲ. ಆನೆಗುಂದಿ ರಾಜ ನನಗಿಂತಲೂ ಶ್ರೇಷ್ಠ. ಹೀಗಾಗಿ ನನ್ನಲ್ಲಿ ಆತ ಬರುತ್ತಿರಲಿಲ್ಲ. ನನ್ನ ಸಂಸ್ಥಾನದ ಅಭಿವೃದ್ಧಿಗಾಗಿ ಇವರೆಲ್ಲರೊಂದಿಗೆ ನಾನು ಸಂಪರ್ಕವಿಟ್ಟುಕೊಂಡದ್ದು, ಸ್ನೇಹ ಬೆಳೆಸಿದ್ದು ತಪ್ಪೆ? ಇದನ್ನೇ ಬಂಡಾಯದ ಒಕ್ಕೂಟವೆಂದು ಆರೋಪಿಸುವುದು ಸರಿಯೇ?

ನನ್ನ ಲೆಕ್ಕಪತ್ರ ವ್ಯವಹಾರಗಳೆಲ್ಲ ವೆಂಕಟರಾವ ಸುಬ್ಬರಾವ್, ಮಾಸುಮಸಾಬ್, ಲಕ್ಷ್ಮೀಕಾಂತರಾವ್, ಲಕ್ಷ್ಮಣರಾವ್ ಇತರರು ನೋಡಿಕೊಳ್ಳುತ್ತಿದ್ದರು. ವೆಂಕಟರಾವ್, ವೆಂಕಟಪ್ಪ ಹನುಮಂತರಾವ್ ಇವರೆಲ್ಲ ದಫ್ತರದಾರಿಗಳಾಗಿದ್ದರು. ಇವರಲ್ಲಿ ಯಾರು ಅನ್ಯ ಸಂಸ್ಥಾನದ ಬಂಡಾಯದೊಂದಿಗೆ ಬೆರೆತಿಲ್ಲ. ಬಂಡಾಯಗಾರರೊಂದಿಗೆ ಪತ್ರವ್ಯವಹಾರವು ಮಾಡಿಲ್ಲ.

ನನ್ನ ಮೇಲಿರುವ ಆರೋಪಗಳಿಗೆ ನಾನು ನೀಡಿರುವ ಮೇಲಿನ ಉತ್ತರ ಸತ್ಯವಾಗಿದೆಯೆಂದು ಮಾತ್ರ ಹೇಳಬಲ್ಲೆ".

ವಿಶ್ವಾಸದ

ಸಹಿ.
ರಾಜಾ ನಾಲ್ವಡಿ ವೆಂಕಟಪ್ಪ ನಾಯಕ
ಬಹರಿ ಬಹಾದೂರ ಸಂಸ್ಥಾನ
ಸುರಪುರ.

ಇದುವರೆಗಿನ ನ್ಯಾಯಾಂಗ ವಿಚಾರಣೆಯಲ್ಲಿ ಮಂಡಿಸಲಾದ ಮನವಿ, ಸಾಕ್ಷಿ ಹೇಳಿಕೆ, ಪ್ರಶ್ನೆ, ಉತ್ತರಗಳನ್ನೆಲ್ಲ ಸಂಗ್ರಹಿಸಿ ಅಧ್ಯಯನ ಮಾಡಿದ ನ್ಯಾಯಾಲಯವು ದಿನಾಂಕ 7.5.1858 ರಂದು ತೀರ್ಪು ನೀಡುವ ನಿರ್ಧಾರ ಪ್ರಕಟಿಸಿತು. ಫೆಬ್ರವರಿ 12 ರಂದು ಬಂಧಿಸಲ್ಪಟ್ಟ ರಾಜ ಇದುವರೆಗೆ ಬ್ರಿಟಿಷರ ಸಿಕಂದರಾಬಾದ ಕಾಂಟೋನ್ಮೆಂಟ ಸೆರೆಮನೆಯಲ್ಲಿಯೇ ಬಂಧಿಯಾಗಿದ್ದಾನೆ. ಸುರಪುರದಿಂದ

ಜೊತೆಯಲ್ಲಿ ಬಂದಿದ್ದ ಸವಾರ ಕೃಷ್ಣ ಮತ್ತು ರಾಮಪ್ಪರನ್ನೂ ಸಹ ರಾಜನ ಜೊತೆಯಲ್ಲಿಯೇ ಬಂಧಿಸಲಾಗಿತ್ತು. ರಾಜನ ಸೇವೆಗಾಗಿ ಅವರನ್ನು ಬಳಸಿಕೊಳ್ಳಲು ರೆಸಿಡೆಂಟ ಆದೇಶಿಸಿದ್ದ. ಆದರೆ ದಿವಾನ ಭೀಮರಾಯ ಅವರನ್ನು ತೆಗೆದು ಅವರ ಸ್ಥಾನದಲ್ಲಿ ಕನಕಗಿರಿ ಕನಕಪ್ಪನನ್ನು ನೇಮಿಸಿದ[197] ಸಾಕ್ಷಿ ನೀಡಲು ಬಂದಿದ್ದ ಸುರಪುರದವರೆಲ್ಲ (8 ಜನರು) ಮರಳಿಹೋದರು.

<u>ತೀರ್ಪು:</u>

ದೀರ್ಘ ವಿಚಾರಣೆ, ದಾಖಲೆಗಳ ಸಮಗ್ರ ತನಿಖೆ, ಸಾಕ್ಷಿ ಹೇಳಿಕೆಗಳ ಸಂಪೂರ್ಣ ಅಧ್ಯಯನದ ತರುವಾಯ ನ್ಯಾಯಾಂಗವಿಚಾರಣಾ ಸಮಿತಿಯು ದಿನಾಂಕ 7.5.1858 ರಂದು ಐತಿಹಾಸಿಕ ತೀರ್ಪು ಕೊಡಲು ಸದಸ್ಯರ ಸಭೆ ಕರೆಯಿತು.[198]

<u>ನ್ಯಾಯಾದೇಶ:</u>

'ಸುರಪುರದ ರಾಜ ನಾಲ್ವಡಿ ವೆಂಕಟಪ್ಪನಾಯಕನ ಮೇಲಿದ್ದ ಹಲವಾರು ಗುರುತರ ಆಪಾದನೆ ಕುರಿತು ಇಲ್ಲಿಯವರೆಗೆ ವಿಚಾರಣೆ ಮಾಡಲಾಗಿದೆ. ಆರೋಪ ಕುರಿತು ಹೇಳಿಕೆ ನೀಡಿದ ಸಾಕ್ಷಿಗಳ ಪರ ಮತ್ತು ವಿರೋಧ ನಿಲುವನ್ನು ಗಮನಿಸಲಾಗಿದೆ. ಇವೆಲ್ಲವುಗಳಿಂದ ಕಂಡು ಬಂದ ಸಂಗತಿಯೆಂದರೆ, ರಾಜನು ಮನಃಪೂರ್ವಕ ಗೊಂದಲ ಸೃಷ್ಟಿಸಿಲ್ಲ; ಬಂಡಾಯವೆದ್ದಿಲ್ಲವೆಂಬುದು ಆದಾಗ್ಯೂ ತೀರ್ಮಾನಗಳು ಅವನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತವೆ. ಸುರಪುರದ ರಾಜ ತಾನೆ ಒಪ್ಪಿಕೊಂಡಂತೆ ಪೂರ್ಣವಾಗಿ ಬ್ರಿಟಿಷ ಚಕ್ರಾಧಿಪತ್ಯದ ಮೇಲೆ ಅವಲಂಬನೆಯಾಗಿದ್ದಾನೆ. ಚಿಕ್ಕಂದಿನಿಂದಲೂ ರಾಜನನ್ನು ಬೆಳೆಸಿದೆ, ಪೋಷಿಸಿದೆ, ಕೆಲವೊಮ್ಮೆ ಹೆದರಿಸಿದೆ, ಮಾರ್ಗದರ್ಶನವು ನೀಡಿದೆ, ಇದೆಲ್ಲವನ್ನು ಕಂಡುಂಡು ಬೆಳೆದ ರಾಜ, ತದನಂತರ ಬೆಳೆಸಿದ ಬ್ರಿಟಿಷರನ್ನೇ ಪ್ರತಿಭಟಿಸಿದ್ದು ನೈತಿಕ ಅಪರಾಧ.

ಬ್ರಿಟೀಷ ಸರ್ಕಾರವು ಶೀಘ್ರವಾಗಿ ಸುರಪುರದ ಗಡಿಗೆ ಸೈನ್ಯ ಕಳಿಸಿ ತನ್ನ ಪಡೆಯನ್ನು ಮತ್ತು ನಂಬಿದ ಜನರನ್ನು ಸಂರಕ್ಷಿಸಿಕೊಂಡದ್ದು ಸಮರ್ಥನೀಯವಾದುದು. ಕ್ಯಾಂಬೆಲ್ ಮತ್ತು ಆತನ ಸಂಗಡಿಗರು ತನಿಖೆಗೆ ಬಂದವರೆ ಹೊರತು ಯುದ್ಧಕ್ಕಲ್ಲವೆಂಬ ಅಂಶ ರುಜುವಾತಾಗಿದೆ.

---

197. HFMK Vol.1, 1962 Pp.503-505.
198. ಸು.ಸಂ.ಇ. ಪು. 212.

ಬ್ರಿಟೀಷರ ವಿರುದ್ಧ ಸೈನ್ಯ ಸಂಘಟಿಸಿದ್ದು, ಸಂಘಟಿಸಿದ ಸೈನ್ಯವನ್ನು ಬ್ರಿಟೀಷ ಪಡೆಯ ಮೇಲೆ ರಾಜ ದಾಳಿ ಮಾಡಿಸಿದ್ದು ಖಂಡನೀಯ. ಇದೆಲ್ಲ ಪೂರ್ವಯೋಜಿತವೆನ್ನಲು ಕ್ಯಾಂಬೆಲನು ಜೀವಭಯದಿಂದ ತತ್ತರಿಸಿದ್ದು, ಬಲವಂತರಾವ್ ಭೇಟಿಯಾದದ್ದು, ಪಡೆಗಳು ಅನಿರೀಕ್ಷಿತ ದಾಳಿಗಿಳಿದದ್ದು, ಇವೆಲ್ಲ ಜೀವಂತ ಸಾಕ್ಷಿಗಳಾಗಿವೆ. ಅಲ್ಲದೆ ಕ್ಯಾ. ನ್ಯೂಬೆರ್ರಿಯ ಭೀಕರ ಕಗ್ಗೊಲೆ ರಾಜ ಎಸಗಿದ ಘೋರ ಅಪರಾಧ; ಇಂಥ ಸಂದರ್ಭಗಳಲ್ಲಿ ರಾಜ ನೇರವಾಗಿ ಪಾಲ್ಗೊಳ್ಳದೆ ಇರಬಹುದು. ಆದರೆ ರಾಜನ ಗಮನಕ್ಕೆ ಬಾರದೆ ಯಾವ ಕಾರ್ಯವೂ ನಡೆದಿಲ್ಲವೆನ್ನಲು ಅನೇಕ ಆಧಾರಗಳಿವೆ. ನ್ಯೂಬೆರ್ರಿಯ ಕೊಲೆ ಉದ್ದೇಶ ಪೂರ್ವಕವಾಗಿಲ್ಲವೆಂದು ರಾಜವಾದಿಸಿದನೇನೋ ನಿಜ. ಆದರೆ ಸಮರ್ಥಿಸಿಕೊಳ್ಳಲು ಸಾಕ್ಷಿಗಳು ಆತನಲ್ಲಿ ಇಲ್ಲದಿರುವುದೇ ಆತ ಮಾಡಿದ ಅಪರಾಧ ನಿಜವೆಂದು ಸಾಬೀತುಪಡಿಸಿದಂತಾಗಿದೆ.

ಕಾನೂನು ದೃಷ್ಟಿಯಲ್ಲಿ ಸುರಪುರದ ರಾಜ ಪ್ರಜೆಗಳ ಹಿತಾಸಕ್ತಿ ಕಾಪಾಡುವಲ್ಲಿ ಅಸಮರ್ಥನಾಗಿದ್ದಾನೆ ಮತ್ತು ತಪ್ಪು ನಿರ್ಧಾರಗಳನ್ನೇ ತಳೆದಿದ್ದಾನೆ. ಕುಡಿದ ಅಮಲಿನಲ್ಲಿ ಯಾವ ಆಜ್ಞೆಯು ಹೊರಡಿಸಬಾರದೆಂದು ಗೊತ್ತಿದ್ದಯೂ ಸೈನ್ಯ ನೇಮಕಾತಿ ಆದೇಶ ಹೊರಡಿಸಿದ್ದು ಅಪರಾಧವಲ್ಲದೆ ಮತ್ತೇನು. ಒಂದು ಕಡೆ ನನಗೆ ಯಾವುದು ಗೊತ್ತಿಲ್ಲ, ಎಂದರೆ, ಮತ್ತೊಂದೆಡೆ ತಾನೆ ಪತ್ರಕ್ಕೆ ಸಹಿ ಹಾಕಿದೆ ಎಂದನು. ಇನ್ನೊಂದೆಡೆ ನಾನು ಕುಡಿದ ಅಮಲಿನಲ್ಲಿದ್ದೆ ಎನ್ನುವನು. ಇವೆಲ್ಲ ರಾಜನನ್ನು ಅಪರಾಧಿತನ ಸ್ಥಾನದಲ್ಲಿ ಭದ್ರವಾಗಿ ನೆಲೆಯೂರಲು ಸಹಾಯಕವಾಗಿವೆ.

ಮೇಲಿನೆಲ್ಲ ಅಪಾದನೆಗಳಿಗೆ ಗುರಿಯಾಗಿರುವ ಆರೋಪಿ ನಾಲ್ವಡಿ ವೆಂಕಟಪ್ಪ ನಾಯಕನಿಗೆ ಈ ನ್ಯಾಯಾಲಯವು ಮರಣದಂಡನೆ ಶಿಕ್ಷೆ ವಿಧಿಸಿದೆ.[199]

ಸಹಿ.

ವಿಲಿಯಂ ಹಿಲ
ಬ್ರಿಗೇಡಿಯರ್
ಅಧ್ಯಕ್ಷರು
ನ್ಯಾಯಾಂಗ ವಿಚಾರಣಾ ಆಯೋಗ

1. ಎಚ್.ಸಿ. ರೈಟ್
ನ್ಯಾಯಾಲಯ ಅನುವಾದಕ.
2. ಚಾರ್ಲ್ಸ್ ಬರ್ಟನ್
ನ್ಯಾಯಾಲಯ ನಿಯಮಾವಳಿಗಳ
ಮುಖ್ಯಸ್ಥ.

---

199. HFMK Vol.I 1962 p-77.

ಸಾವಿನ ಸುದ್ದಿ:

ಫೆಬ್ರವರಿ 7 ರಂದು ಸುರಪುರದ ಮೇಲೆ ಬ್ರಿಟೀಷ ಪಡೆಗಳು ನುಗ್ಗಿದವು. ಎರಡೂವರೆ ಶತಮಾನಗಳ ಸಂಸ್ಥಾನ ಪತನಗೊಂಡು ವೈರಿಗಳ ವಶವಾಗಿತ್ತು. ಕೈಬಿಟ್ಟು ಹೋದ ರಾಜ್ಯ ಕೊಳ್ಳೆ ಹೊಡೆಯುವ ಲೂಟಿಗಾರರಿಗೆ ಆಹಾರವಾಗಿತ್ತು. ಇಂಥ ಮೂರು ತಿಂಗಳು ನೋವಿನಲ್ಲಿಯೇ ಮತ್ತೊಂದು ದುರಂತ ಮೇ 7. ದುರ್ದೈವಿ ರಾಜನಿಗೆ ಮರಣದಂಡನ ಶಿಕ್ಷೆ. ವಿಚಾರಣೆಯ ಗುಂಗಿನಲ್ಲಿದ್ದ ಸುರಪುರದವರಿಗೆ ಕೋರ್ಟ ವಿಧಿಸಿದ ಮರಣದಂಡನೆ ಶಿಕ್ಷೆ ಬಗ್ಗೆ ಇನ್ನೂ ಗೊತ್ತಿರಲಿಲ್ಲ.

ಸುರಪುರಕ್ಕೆ ಎರಡನೆಯ ಬಾರಿ ಆಡಳಿತಾಧಿಕಾರಿಯಾಗಿ ಆಗಮಿಸಿದ್ದ ಮೆಡೋಸ್ ಟೇಲರನ ಆಳ್ವಿಕೆಯನ್ನು ಸಂಸ್ಥಾನದ ಜನ ಬಹು ಪ್ರೀತಿಯಿಂದ ಸ್ವೀಕರಿಸಿದರು. ತಬ್ಬಲಿಯಾದ ರಾಣಿ, ರಾಜಪರಿವಾರದವರಿಗೆ ಧೈರ್ಯ ಹೇಳುತ್ತಿದ್ದ ಟೇಲರ ರಾಜನನ್ನು ಖಂಡಿತಾ ಬಿಡಿಸಿಕೊಂಡು ಬರುವುದಾಗಿ ಸಂಸ್ಥಾನಕ್ಕೆ ವಿಶ್ವಾಸ ವ್ಯಕ್ತಪಡಿಸಿದ್ದ. ಅರಮನೆಯಲ್ಲಿ ವಾತಾವರಣ ಬರಲು ದಿನಂಪ್ರತಿ ಪ್ರಯತ್ನಿಸಿ ತಿಳಿಗೊಳಿಸಿದ್ದ. ವಿಚಾರಣೆಗೊಳಪಟ್ಟ ರಾಜನನ್ನು ಕಂಡಿತೆ ಮುಗ್ಧ ಜನರು ಕೇಳುವ ಪ್ರತಿಯೊಂದು ಪ್ರಶ್ನೆಗೂ ಟೇಲರ ತಾಳ್ಮೆಯಿಂದ ಉತ್ತರಿಸುತ್ತಿದ್ದ. ಅದೇ ಸಂದರ್ಭದಲ್ಲಿ ಹೈದ್ರಾಬಾದಿನಿಂದ ಪತ್ರವೊಂದು ಬಂತು. ರಾಜನಿಗೆ ವಿಧಿಸಿದ್ದ ದೇಹಾಂತ ಶಿಕ್ಷೆಯನ್ನು ಆಮರಣಾಂತ ಗಡಿಪಾರು ಶಿಕ್ಷೆಗೆ ರೆಸಿಡೆಂಟ ಬರೆದಿದ್ದ. ಉನ್ನತ ಅಧಿಕಾರ ಪಡೆದ ಗೌರ್ನರ ಜನರಲನು ರಾಜನ ಮೇಲಿನ ಮಮತೆಯಿಂದ ಅದನ್ನು ಕೇವಲ ನಾಲ್ಕು ವರ್ಷಕ್ಕೆ ಇಳಿಸಿ, ರಾಜನನ್ನು ಮದ್ರಾಸ ಸಮೀಪದ ಚಂಗಲಪೇಟೆ ದುರ್ಗದಲ್ಲಿಡಲು ಆಜ್ಞಾಪಿಸಿದ್ದ,[200] ಮತ್ತು ರಾಜನಿಗೆ ಬೇಕಾದ ಪ್ರೀತಿಯ ಪತ್ನಿಯರನ್ನು ಜೊತೆಯಲ್ಲಿಯೇ ಇಟ್ಟುಕೊಳ್ಳಲು ಹೇಳಿ, ನಾಲ್ಕು ವರ್ಷದ ಸೆರೆಯಲ್ಲಿ ಉತ್ತಮ ನಡವಳಿಕೆ ತೋರಿದರೆ ಆತನ ರಾಜ್ಯ ಮರಳಿ ಆತನಿಗೆ ಕೊಡಬೇಕೆಂದು ತೀರ್ಪು ನೀಡಿದ್ದ.

ಇದನ್ನು ಕೇಳಿದ ರಾಣಿ, ರಾಜ ಪರಿವಾರ, ಇತಿ ಸಂಸ್ಥಾನದ ಜನತೆ ಮೈಮರೆತು ಕುಣಿದರು, ಖುಷಿಪಟ್ಟರು. ಟೇಲರನಿಗೂ ಅವರಷ್ಟೇ ಹರ್ಷ ಉಕ್ಕಿತು. ಇದರಿಂದ ಸಂಸ್ಥಾನಕ್ಕೆ

---

200. ನಾಯಕ ಪಲಮಾರ್ಕರ್, ಸುರಪುರ ವೆಂಕಟಪ್ಪ ನಾಯಕ 1976. ಪು. 41.

ಎಲ್ಲಿಲ್ಲದ ಸ್ಫೂರ್ತಿ ವಿದ್ಯುತ್ ಸಂಚಾರವಾಯಿತು. ನಿಂತಕಾಲು ನಡೆದಾಡಿದವು, ನಡೆದಾಡುವವರು ಓಡಾಡಿದರೆಂದು ಸಂಸ್ಥಾನದಲ್ಲಿಯ ಜನಪದ ಕಾವ್ಯ, ಕಥೆಗಳು ಎದೆತುಂಬಿ ಹೇಳಿವೆ. ಸಂತೋಷದ ವಾರ್ತೆಯಿಂದ ಉಬ್ಬಿ ಹೋದ ರಾಣಿರಂಗವ್ವ ಮತ್ತು ಇನ್ನಿತರ ಪತ್ನಿಯರು ರಾಜನನ್ನು ಕಾಣಲು ಕನ್ನೂರಿಗೆ ಸಿದ್ಧರಾಗತೊಡಗಿದರು. ರೆಸಿಡೆಂಟನ ಆದೇಶ ಪತ್ರವಿಡಿದ 'ಟೇಲರ ಇಬ್ಬರು ರಾಣಿಯರು ಹೊರಡಲು ಮಾತ್ರ ಅನುಮತಿ ಇತ್ತ. ತವಕ, ಕಾತುರಗಳ ಕಾರಂಜಿಯಾದ ರಾಣಿಯರು ಮತ್ತು ಅರಮನೆಯಲ್ಲಿಯ ಆನಂದಗಳು ವರ್ಣಿಸಲು ಅಸಾಧ್ಯವಾಗಿತ್ತು. ಮತ್ತು ಉಲ್ಲಾಸದೊಂದಿಗೆ ವಿಶಾಲವಾದ ಅರಮನೆ ಸಭಾಂಗಣದಲ್ಲಿ ಆಡಳಿತವರ್ಗವೆಲ್ಲ ಸೇರಿತ್ತು. ಬ್ರಾಹ್ಮಣರು ವಾರ್ಷಿಕದಕ್ಷಿಣೆ ಪಡೆಯಲೆಂದು ಬಂದಿದ್ದರು. ಅವರೆಲ್ಲರೊಂದಿಗೆ ಟೇಲರ ಆತ್ಮೀಯ ಕುಶಲೋಪರಿಯಲ್ಲಿ ಸೇರಿದ್ದ. ಅಷ್ಟರಲ್ಲಿ ಹರಕಾರೆ ವ್ಯಕ್ತಿಯ ಕೊರಳಿನ ಗೆಜ್ಜೆ ಸಪ್ಪಳ ಕೇಳಿಬಂತು.

ಲಕೋಟೆಯೊಂದಿಗೆ ಓಡುತ್ತ ಬಂದ ಹರಕಾರೆಯವನು ಲಕೋಟೆಯನ್ನು ಟೇಲರನ ಕೈಗಿತ್ತ. ಅಲ್ಲಿ ಸೇರಿದವರೆಲ್ಲ ಕುತೂಹಲದಿಂದ ಕಿವಿ ನಿಮಿರಿಸಿ, ಲಕೋಟೆಯೆಡೆ ಕಣ್ಣರಳಿಸಿ ಕುಳಿತರು. ಪತ್ರ ಹೊಡೆದು ಓದುತ್ತಿದ್ದಂತೆ ಟೇಲರನ ಕೈಬೆರಳು ಕಂಪಿಸತೊಡಗಿದವು. ತನಗರಿಯದಂತೆ ಕಣ್ಣೀರು ಸುರಿಯತೊಡಗಿದಾಗ ನೆರೆದ ಜನರೆಲ್ಲ ಗಾಬರಿಯಿಂದ ಭಯಭೀತರಾದರು. ತನ್ನಲ್ಲಿಯೇ ಗಟ್ಟಿ ಧೈರ್ಯ ತುಂಬಿಕೊಂಡು ಪತ್ರದಲ್ಲಿನ ವಾಕ್ಯ ಓದತೊಡಗಿದ –

'ಗವರ್ನರ ಜನರಲ್‌ನ ಆದೇಶದ ಮೇರೆಗೆ ನಮ್ಮ ಅಧಿಕಾರಿಗಳು ಸುರಪುರದ ರಾಜಾ ವೆಂಕಟಪ್ಪ ನಾಯಕನನ್ನು ಚೆಂಗಲಪೇಟೆಯ ಜೈಲಿಗೆ ಸಾಗಿಸುತ್ತಿದ್ದರು. ಆಗ ಹಾದಿಯಲ್ಲಿ ವಿಶ್ರಾಂತಿಗೆಂದು ತಂಗಿದಾಗ ರಾಜಾ ಆತ್ಮಹತ್ಯೆ ಮಾಡಿಕೊಂಡ. ಉಳಿದ ವಿಷಯ ತರುವಾಯ ತಿಳಿಸಲಾಗುವುದು'.[201]

ಈ ನಾಲ್ಕು ಸಾಲಿನ ಸಿಡಿಲಿನ ಸುದ್ದಿಯನ್ನು ಕೇಳಿದ ಸಂಸ್ಥಾನ ದಿಕ್ಕೆಟ್ಟು ಚೀರಿತು. ರಾಣಿಯರು, ಪರಿವಾರ, ನಿಂತನೆಲವಿಲ್ಲದಂತೆ ನೆಲಕ್ಕುರುಳಿ ಬಿದ್ದರು 'ದುರಂತಗಳ ಏರಿ ಮೇಲೆ ಸಂಸ್ಥಾನದ ನಾವೆ ಈ ರೀತಿ ಸಾಗಿತ್ತು'.

---

201. ಸು.ಸಂ.ಇ.ಪು. 215

24ರ ಹದಿಹರೆಯದ ತರುಣ ನಾಲ್ವಡಿ ವೆಂಕಟಪ್ಪ ನಾಯಕ ನಿಗೂಢ ಸಾವಿಗೆ ಬಲಿಯಾಗಿದ್ದ. 24 ವರ್ಷ ವಯಸ್ಸನ್ನು ರಾಜಾ ಪೂರ್ತಿಗೊಳಿಸಲಾರನೆಂಬ ಸಂಸ್ಥಾನದ ಶಾಸ್ತ್ರೀಯ ಜ್ಯೋತಿಷ್ಯ ನಿಜವಾಗಿತ್ತು.

ಎರಡನೆಯ ದಿನ ರೆಸಿಡೆಂಟನಿಂದ ಬಂದ ಮತ್ತೊಂದು ಪತ್ರದಲ್ಲಿ 'ರಾಜನನ್ನು ಬಿಗಿಬಂದೋಬಸ್ತ ಮಧ್ಯೆ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ಸಿಕಂದರಾಬಾದಿನಿಂದ ಬೆಳಿಗ್ಗೆ ' ಬೆಂಗಲ ಪೇಟೆಗೆ ಹೊರಡಲಾಗಿತ್ತು. ಬೆಳಗಿನ ಉಪಹಾರಕ್ಕೆಂದು ಸಾಲ್ಕು ಮೈಲಿನ ಪ್ರಯಾಣದ ನಂತರ ಅಂಬರಪೇಟೆಯಲ್ಲಿ ಇಳಿಯಲಾಗಿತ್ತು. ರಾಜನ ಕಾವಲಿನಲ್ಲಿದ್ದ ಲೆಫ್ಟನೆಂಟ್ ಫಿಕ್ಕೆಲ್ ಬಾರುಮಾಡಿದ ರಿವಾಲ್ವರನ್ನು ರಾಜನ ಹತ್ತಿರ ಬಿಟ್ಟು ಮುಖ ತೊಳೆಯಲೆಂದು ಹೊರಗಡೆ ಹೋಗಿದ್ದ. ಆಗ ಇದ್ದಕ್ಕಿದ್ದಂತೆ ಶಿಬಿರದ ಒಳಗಡೆ ಗುಂಡಿನ ಸದ್ದು ಕೇಳಿಸಿತು. ಓಡಿ ಹೋಗಿ ನೋಡುವಷ್ಟರಲ್ಲಿ ರಾಜಾ ರಕ್ತದ ಮಡುವಿನಲ್ಲಿ ಬಿದ್ದು ಹೊರಳಾಡುತ್ತಿದ್ದ. ರಿವಾಲ್ವರಿನ ಗುಂಡು ಹೊಟ್ಟೆ ಒಳಗಿನಿಂದ ನುಗ್ಗಿ ಬೆನ್ನಲ್ಲಿ ಪಾರಾಗಿತ್ತು. ರಾಜಾ ಆತ್ಮಹತ್ಯೆ ಮಾಡಿಕೊಂಡನೆಂದು ಸರ್ಕಾರದಿಂದ ನಿರ್ಧರಿಸಲಾಯಿತು.[202]

ರೆಸಿಡೆಂಟ ಬರೆದ ಮೇಲಿನ ಪತ್ರದಿಂದ ರಾಜ ಹೇಗೆ ಸತ್ತನೆಂದು ತಿಳಿಯಬಹುದೇ ಹೊರತು, ಸತ್ತ ರಾಜನನ್ನು ಸಂಸ್ಥಾನಕ್ಕೆ ಬದುಕಿಸಿಕೊಡಲು ಸಾಧ್ಯವೇ? ಆದರೆ ಆತ್ಮಹತ್ಯೆಯೆಂದು ಹೇಳುವ ಬ್ರಿಟಿಷ ದಾಖಲೆಗಳು ಸಂಸ್ಥಾನಕ್ಕೆ ಎಂಥ ಮೋಸ ಮಾಡಿವೆ ಎಂದು ಇದರಿಂದ ಸ್ಪಷ್ಟವಾಗುತ್ತದೆ. ಪತ್ರ ಬರೆದ ರೆಸಿಡೆಂಟ, ಓದಿದ ಟೇಲರನ ವಾದ ವಿಚಾರ ನೋಡಿದರೆ ಅನೇಕ ಆಭಾಸಕಾರಿ ಅಂಶಗಳು ದಿಟಗೊಂಡಿವೆ. ಹಲವಾರು ವಿದ್ವಾಂಸರು, ಇತಿಹಾಸಕಾರರು ಇದರ ಬಗ್ಗೆ ಮಹತ್ವಪೂರ್ಣ ವಾದಗಳನ್ನು ವ್ಯಕ್ತಪಡಿಸಿದ್ದಾರೆ. ರಾಜನ ಕೊಲೆಯೇ ನಿಜವೆಂದು ಸಾಬೀತುಪಡಿಸಿವೆ; ಸಮರ್ಥಿಸಿವೆ.

<u>10. ರಾಜನ ಕೊಲೆ ನಿಜ :</u>

ತರುಣ ವೆಂಕಟಪ್ಪ ನಾಯಕನು ಫಿಕ್ಕೆಲನ ಹೊಸ ರಿವಾಲ್ವರ ಕಂಡು ಕುತೂಹಲದಿಂದ ತಿರುಗಿಸುತ್ತ ಕುದುರೆ ಎಳೆದುಕೊಂಡು ಅಸುನೀಗಿದನೆಂದು ಹೇಳುವ ಮೆಡೋಸ್ ಟೇಲರನ ಮಾತು ಕಪೋಲ ಕಲ್ಪಿತ; ತನ್ನ ಜನಾಂಗದ ಸರ್ಕಾರಕ್ಕೆ ಟೇಲರನು ಈ ರೀತಿ ಋಣ ತೀರಿಸುವ ಮೂಲಕ

202. Letter's No.32 and 40, 12th and 25th May 1858.

ರಾಜನಿಗೆ ಮೋಸ ಮಾಡಿದನೆಂದು ಹೇಳದೆ ವಿಧಿಯಿಲ್ಲ. ರಾಜನಿಗೆ ಅಜ್ಞಾನೆಯಿತ್ತು, ಒಪ್ಪೋಣ. ಆದರೆ ಶತಮಾನಗಳ ಸಂಸ್ಥಾನದ ಸಂಸ್ಕಾರವನ್ನು ಕಂಡುಂಡ ಬೆಳೆದ ಒಂದು ಸಂಸ್ಥಾನದ ರಾಜನಿಗೆ ರಿವಾಲ್ವಾರ ಪರಿಚಯವಿರಲಿಲ್ಲವೇ? ದಿನನಿತ್ಯ ನೂತನ ತಾಂತ್ರಿಕಯುದ್ಧ ಸಾಮಗ್ರಿಗಳೊಂದಿಗೆ ಬೆರೆತಿದ್ದವನಿಗೆ ಬಂದೂಕೂ, ರಿವಾಲ್ವಾರ ಅಪರಿಚಿತವೇ? ಹೈದ್ರಾಬಾದ, ಲಿಂಗಸೂಗೂರ, ದೇವದುರ್ಗ ಮುಂತಾದ ನಗರಗಳಿಂದ ಬರುವ ಇಂಗ್ಲೀಷ ಮೇಲಾಧಿಕಾರಿಗಳೊಂದಿಗೆ ದಿನಗಟ್ಟಲೆ ಬೆರೆತು ಬೆಳೆದ ರಾಜನಿಗೆ ರಿವಾಲ್ವಾರ ಮಾತ್ರ ಕುತೂಹಲ ಹುಟ್ಟಿಸಿತೆ? ಈ ಪ್ರಶ್ನೆಗಳಿಗೆ ಟೇಲರನಲ್ಲಿ ಉತ್ತರವಿಲ್ಲ. ಹಾಗಾದರೆ ಸುರಪುರದ ರಾಜನನ್ನು ಇಂಗ್ಲೀಷರು ಬಂಧಿಸುವ ಶಿಕ್ಷೆ ವಿಧಿಸುವ ನಾಟಕವಾಡಿ ಕೊಲೆ ಮಾಡಿದ್ದು ನಿಜವೆಂದು ಒಪ್ಪಬೇಕಾಗುತ್ತದೆ.

'ಆಕಸ್ಮಾತ ರಿವಾಲ್ವಾರದಿಂದ ಸಿಡಿದ ಗುಂಡು ರಾಜನನ್ನು ಬಲಿತೆಗೆದುಕೊಂಡಿರಬೇಕು. ವಾಸ್ತವವಾಗಿ ಏನಾಯಿತೆಂದು ಯಾರು ನೋಡಿಲ್ಲ. ಆತ ಚಿಕ್ಕಂದಿನಿಂದಲೂ ನನಗೆ ಹತ್ತಿರ, ಸ್ವಭಾವದ ಬಗ್ಗೆ ಸಂಪೂರ್ಣ ಬಲ್ಲೆ. ಆದುದರಿಂದ ಇದು ಆತ್ಮಹತ್ಯೆ ಅಲ್ಲವೆಂದೆನಿಸುತ್ತದೆ[203] ಎನ್ನುವ ಟೇಲರನ ದ್ವಂದ್ವ ಹೇಳಿಕೆ ಸತ್ಯವನ್ನು ಮರೆಮಾಚುವ ತಂತ್ರವಾಗಿದೆ. ಶಿಕ್ಷೆ ಬಿಟ್ಟರೆ ರಾಜನ ಸ್ಥಳಾಂತರ, ಸಾವು, ಪಂಚನಾಮೆ ಘಟನೆಗಳ ಬಗ್ಗೆ ಟೇಲರ ಪ್ರತ್ಯಕ್ಷದರ್ಶಿಯಾಗಿರದೆ ಇರಬಹುದು. ಆದರೆ ನಡೆದ ಸತ್ಯ ಘಟನೆಯ ಗುಟ್ಟು ಟೇಲರನಿಂದ ಅಪರಿಚಿತವಾಗಿಲ್ಲ.

ರಾಜನ ಶುಶ್ರೂಷೆಯಲ್ಲಿದ್ದ ರಾಮಣ್ಣ ಮತ್ತು ಕೃಷ್ಣರನ್ನು ದಿವಾನ ಭೀಮರಾಯ ಬದಲಾಯಿಸಿದಾಗಲೇ ಸಾವಿನ ಸಂಶಯ ಮೂಡಿತ್ತು. ಕನಕಗಿರಿ ಕನಕಪ್ಪನಾದರೂ ಆ ಸಂದರ್ಭದಲ್ಲಿ ಎಲ್ಲಿ ಹೋಗಿದ್ದ? ರಾಜ ಸತ್ತು ಬಿದ್ದಾಗ ಅವನನ್ನು ಶಿಬಿರದೊಳಗೆ ಏಕೆ ಬಿಡಲಿಲ್ಲ? ಮುಜುಮದಾರ ಲಿಂಗಪ್ಪನು ನೀರು ತರಲು ಹೋಗಿದ್ದು ನಿಜವೆ? ಈತ ಸಾಕ್ಷಿಗಳೊಂದಿಗೆ ತೀರ್ಪಿನ ಹಿಂದಿನ ದಿನವೇ ಸುರಪುರಕ್ಕೆ ಮರಳಿರಲಿಲ್ಲವೇ?

ಕೊಲೆಗಾರರೆ ಶವದ ಪಂಚನಾಮೆ ಮಾಡಿ[204] ಆತ್ಮಹತ್ಯೆಯೆಂದು ನಿರ್ಣಯಿಸಿದಾಗ ನ್ಯಾಯವಾದರು ಹೇಗೆ ದೊರೆತೀತು ಯಾಕೆಂದರೆ ರಾಜನ ಹೊಟ್ಟೆಯೊಳಗಿಂದ ಹಾರಿದ ಗುಂಡು

---

203. Tayler - Story of my life chapter XV
204. Letter No.40, 25th May 1858.

ಬೆನ್ನಲ್ಲಿ ತೂರಿತು ಎನ್ನುವ ಮೂಲಕ ತಮ್ಮ ತೀರ್ಪಿಗೆ ಪೂರಕ ಸಾಕ್ಷಿ ಸೃಷ್ಟಿಸಿಕೊಂಡಿದ್ದಾರೆ. ಇಲ್ಲವಾದರೆ ಬೆನ್ನಲ್ಲಿ ಗುಂಡು ಹಾರಿದರೆ ಕೊಲೆಯೆಂದು ಸಹಜವಾಗಿ ತಿಳಿಯುತ್ತಿತ್ತು. ಇದೆಲ್ಲ ಬಲ್ಲ ಬ್ರಿಟಿಷರು ಪೂರ್ವಯೋಜಿತ ಕೊಲೆಯನ್ನು ಕೈಗೂಡಿಸಿಕೊಂಡಿದ್ದಾರೆ.

"ಕೈಸೆರೆ ಸಿಕ್ಕನಲ್ಲ ಎಂಬ ಅವಮಾನವನ್ನು, ವಿಚಾರಣೆಗೆ ಒಳಪಡಿಸಿದರಲ್ಲ ಎಂಬ ನೋವನ್ನು, ದೀರ್ಘಕಾಲ ಬಂಧನದಲ್ಲಿರಬೇಕಲ್ಲ ಎಂಬ ಭಯವನ್ನು ಸಹಿಸಲಾರದೆ ರಾಜ ಸಿಕ್ಕ ಮೊದಲ ಅವಕಾಶದಲ್ಲೇ ತನ್ನ ಜೀವನಾಂತ್ಯಗೊಳಿಸಿಕೊಂಡ"[205] —ಎಂಬ ವಾದವೂ ಸಹ ಆತ್ಮಹತ್ಯೆಯನ್ನು ಸಮರ್ಥಿಸುತ್ತದೆ. ಆದರೆ ಇದು ಬ್ರಿಟಿಷ ದಾಖಲೆಗಳ ಪ್ರೇರಿತ ಬರೆಹವೆಂಬುದು ಮರೆಯುವಂತಿಲ್ಲ. "ರಿವಾಲ್ವರನಿಂದ ಗುಂಡು ಹಾರಿಸಿಕೊಂಡ"[206] ಎಂಬ ಪದೇ ಪದೇ ಹೇಳುವ ಸುಳ್ಳುಗಳು ಇಲ್ಲಿ ಸತ್ಯವಾಗಲು ಯತ್ನಿಸುತ್ತಿವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ದಕ್ಷಿಣ ಮಹಾರಾಷ್ಟ್ರದಲ್ಲಿ ಮತ್ತು ಉತ್ತರ ಕರ್ನಾಟಕದಲ್ಲಿ ಬ್ರಿಟಿಷರ ವಿರುದ್ಧ ಬಂಡಾಯದ ಯೋಜನೆಗಳಿದ್ದವೆಂದು ವೆಂಕಟಪ್ಪನಾಯಕನ ವಿಚಾರಣೆಯಿಂದ ವಿಶದವಾಗುತ್ತದೆ.[207] ಮೀರತ್, ಕೊಲ್ಹಾಪೂರ, ನರಗುಂದ, ಕೊಪ್ಪಳ, ರಾಯಚೂರ ಸುರಪುರ ಮುಂತಾದವು ಬಂಡಾಯದ ಕೇಂದ್ರಗಳಾಗಿದ್ದವೆಂಬುದು[208] ಮಾತ್ರ ಸ್ಪಷ್ಟ. ಉತ್ತರದಲ್ಲಿ ನಾನಾಸಾಹೇಬ ಇರುವಂತೆ ದಕ್ಷಿಣದಲ್ಲಿ ಸುರಪುರದ ಈ ವೆಂಕಟಪ್ಪನಾಯಕನನ್ನೇ ತಮ್ಮ ಮುಖಂಡನೆಂದು ಸ್ವೀಕರಿಸಿದ ಸಂಸ್ಥಾನಿಕರ ಮನಸ್ಸನ್ನು ಬ್ರಿಟಿಷರು ಅರ್ಥೈಸಿಕೊಂಡಿದ್ದರು. ಮುಂದೊಂದು ಸಲ ಇವರ ಸಂಘಟನೆಯಾದರೆ ಭಯಂಕರ ಸಂಗ್ರಾಮದ ಸ್ಫೋಟವಾಗಬಹುದು, ತಮ್ಮ ಪತನಕ್ಕೆ ಮುಂಚೆಯೇ ಮುಖಂಡನಾದ ರಾಜನನ್ನು ಇಂಗ್ಲೀಷರು ಕೊಲೆ ಮಾಡಿರುವದರಲ್ಲಿ ಆಶ್ಚರ್ಯವೇನಿದೆ !!

00000 — 00000

205. Western India Before and during the mutinies by-Major General Sir George -le grand Jacob Edn.II p-218.
206. FSH, Vol.II, 11 p-99.
207. ತಿ. ತಾ. ಶರ್ಮಾ — ವಾಲ್ಮೀಕಿ ಜ್ಯೋತಿ ಸ್ಮರಣ ಸಂಚಿಕೆ. ಲೇಖನ : ಸುರಪುರದ ವೆಂಕಟಪ್ಪನಾಯಕ. ಪುಟ-1 —10.
208. FSH Vol.II p-97.

(ಈ) <u>ಅರಸರ ಹೆಸರು ಮತ್ತು ಅವರ ಬಿರುದು:</u>

ಸುರಪುರ ಸಂಸ್ಥಾನವನ್ನು ಅಧಿಕೃತವಾಗಿ ಆಳಿದ ಹಲವು ಅರಸರಲ್ಲಿ ಕೆಲವು ವಿಶಿಷ್ಟವಾದ ಅಂಶಗಳಿವೆ. ಅವುಗಳಲ್ಲಿ ಗುರುತಿಸಬೇಕಾದವುಗಳೆಂದರೆ ಅವರ ಹೆಸರು ಮತ್ತು ಅವರಿಗಿದ್ದ ಬಿರುದು. ಗಡ್ಡಪಿಡ್ಡನಾಯಕನ ಪೂರ್ವಜರಲ್ಲಿ ವಿಜಯನಗರ ಪಾಳೆಯಗಾರರಲ್ಲಿಯ ಎಲ್ಲಾ ಹೆಸರುಗಳೊಂದಿಗೆ ಸಾಮಿಪ್ಯವಿದೆ. ಕಲ್ಲಪ್ಪನಾಯಕನು ತನ್ನ ಏಳು ಜನ ಮಕ್ಕಳಿಗೆ ಹಣಮಪ್ಪನಾಯಕನೆಂದೇ ಹೆಸರಿಸಿದ್ದ, ಇತ್ತೀಚೆಗೆ ಅವರನ್ನು ಇಮ್ಮಡಿ, ಮುಮ್ಮಡಿ, ನಾಲ್ವಡಿ ಎಂಬಿತ್ಯಾದಿಯಾಗಿ ಗುರುತಿಸಿದ್ದೇವೆಯಷ್ಟೆ. ಆದರೆ ಅವರು ಕರಿಹಣಮ, ಚಿನ್ನಹಣಮ, ಬಿಲ್ಲಹಣಮ ಎಂಬ ಕಿರುಹೆಸರುಗಳಿಂದ ಕರೆಯುತ್ತಿದ್ದರು. ಕರಿ, ಚಿಕ್ಕ, ಚಿನ್ನ, ಬಿಲ್ಲ ಎಂಬವುಗಳು ಅನ್ವರ್ಥಕ ನಾಮಗಳು. ಹಣಮ ಎಂಬುದು ಮಾತ್ರ ಅವರ ಆರಾಧ್ಯದೈವ ಆಂಜನೇಯನದು 'ನಾಯಕ' ವೆಂಬುದು ಮುಂದಾಳು, ಮುಖಂಡವೆಂಬರ್ಥದಲ್ಲಿ ಬಳಸಲಾಗಿದೆ.

ಕಕ್ಕೇರಿ, ಕೊಡೆಕಲ ಭಾಗದಲ್ಲಿ ಮೊದಲು ಜಮೀನುದಾರನಾಗಿ ಆಳ್ವಿಕೆ ಆರಂಭಿಸಿದ ಗಡ್ಡಪಿಡ್ಡನಾಯಕನ ಹೆಸರು ಸಹ ಬಹು ಕುತೂಹಲಕಾರಿಯಾಗಿದೆ. ತಂದೆ ಜಕ್ಕಪ್ಪನಾಯಕ ತನ್ನ ಮಕ್ಕಳಾದ ರಂಗನಾಯಕ ಮತ್ತು ಪಿಡ್ಡನಾಯಕರನ್ನು ಕಕ್ಕೇರಿಯ ಕೆಲವು ಗಡ್ಡಗಳಲ್ಲಿ ಆಡಳಿತಕ್ಕೆ ಇಟ್ಟ ಪ್ರಯುಕ್ತ ಇವರೀರ್ವರ ಹೆಸರಿನ ಹಿಂದೆ 'ಗಡ್ಡ' ಎಂಬ ವಿಶೇಷಣ ಸೇರಿತು. ಇದನ್ನು ಬ್ರಿಟೀಷ ಕಮೀಷನರ ಫ್ರಮಾರಜಂಗನು " ಪಿಡ್ಡನಾಯಕನಿಗೆ ಗಡ್ಡವಿದ್ದವೆಂದು, ಅದಕ್ಕಾಗಿಯೇ 'ಗಡ್ಡ' ಎಂಬ ಹೆಸರು ಬಂತೆಂದು ತಪ್ಪಾಗಿ ಅರ್ಥೈಸಿದ್ದಾನೆ.

ಸುರಪುರದ ಅರಸರ ಪೂರ್ವಜರೆಲ್ಲ ತೆಲಂಗಾಣಕ್ಕೆ ಸಂಬಂಧಿಸಿದವರು, ಮುಂದೆ ಸಹ ತೆಲುಗು ಪ್ರದೇಶದ ದಟ್ಟ ಪ್ರಭಾವದಲ್ಲಿ ಬೆಳೆದರು. ತೆಲುಗಿನಲ್ಲಿ 'ಪೆದ್ದ' ನೆಂದರೆ ಹಿರಿಯ, ಪಂಡಿತ ನೆಂದರ್ಥ. ಜನಸಾಮಾನ್ಯರ ಬಳಕೆಯಲ್ಲಿ 'ಪೆದ್ದ' ಹೋಗಿ 'ಪಿಡ್ಡ' ವೆಂದಾಯಿತು. ಪಿಡ್ಡ ನಾಯಕನ ತರುವಾಯ ವಾಗಿನಗೇರಿ ಕಿಲ್ಲೆ ಆಳಿದ ಅರಸು ಹಸರಂಗಿ ಪಾಮನಾಯಕ. 'ಹಸಿರು' ಬಟ್ಟೆ ತೊಡುತ್ತಿರುವದರಿಂದಲೇ ಈತನಿಗೆ ಹಸರಂಗಿ ಎಂಬ ಹೆಸರು ಬಂತೆಂದು ಕೆಲವು ವಿದ್ವಾಂಸರು ಗುರುತಿಸಿದ್ದಾರೆ. ಆದರೆ ಇದು ತೃಪ್ತಿ ತಂದವಾದವಲ್ಲವಾದುದರಿಂದ ಇನ್ನಷ್ಟು ಶೋಧನೆ ಬೇಕಿದೆ.

ತೆಲುಗಿನ 'ಪಾಮು' ಕನ್ನಡದಲ್ಲಿ 'ಹಾವು' ಎನಿಸಿದೆ. ಚಿಕ್ಕಮಗುವಿನ ಮೇಲೆ ಹಾವೊಂದು ಹೆಡೆಯೆತ್ತಿ ಆಡಿದರ ಪರಿಣಾಮವಾಗಿ ಆತನಿಗೆ 'ಪಾಮ' ನಾಯಕ ಎಂಬ ಹೆಸರು ರೂಢಿಗೆ ಬಂತೆಂದು ಐತಿಹ್ಯವಿದೆ. ಕನ್ನಡಿಗರ ನಾಲಿಗೆ-ಮೇಲೆ ಕೆಲವು ವರ್ಣಗಳು ಜಾರುತ್ತವೆ, ಇಲ್ಲವೆ ಪಲ್ಲಟವಾಗುತ್ತವೆ. ಆದುದರಿಂದ ತೆಲುಗಿನ 'ಪೆದ್ದಮ' ಇಲ್ಲಿ 'ಪಾಮ' ವಾಗಿರಬಹುದೆಂದು ಡಾ. ಎಂ. ಎಂ. ಕಲಬುರ್ಗಿಯವರು ಊಹಿಸಿದ್ದಾರೆ. ಹಸರಂಗಿ ಪಾಮನಾಯಕನ ದತ್ತಕಪುತ್ರ 'ಪೀತಾಂಬರ' ಪಿಡ್ಡನಾಯಕನೆಂಬಾತ. 'ಹಸರಂಗಿ' 'ಪೀತಾಂಬರ' ಇವು ಬಟ್ಟೆಯ ಸಾಂಕೇತ ಸೂಚಿಸುತ್ತಿದ್ದು, ಜನತೆ ಗುರುತಿಸಲು ಮಾಡಿಕೊಂಡ ಒಪ್ಪಂದವಷ್ಟೆ. ಸುರಪುರವನ್ನು ಆಳಿದ ಅರಸರಲ್ಲಿ ಓರ್ವ ಪ್ರಬಲ ಆಡಳಿತಗಾರ ಮೊಂಡುಗೈ ವೆಂಕಟಪ್ಪ ನಾಯಕ. "ವೈರಿಗಳ ಕುದುರೆಯೊಂದನ್ನು ಜಿದ್ದಿನಿಂದ ಕದ್ದುತರಲು ಕತ್ತಲಲ್ಲಿ ಹೋದ. ಏಳು ಗೇಣಿನ ಆ ಬಿಳಿಯ ಕುದುರೆಯನ್ನು ಇನ್ನೇನು ಬಿಚ್ಚುತ್ತಿರುವಷ್ಟರಲ್ಲೇ ಕುದುರೆ ಹೂಂಕರಿಸಿತು. ಕೂಗು ಕೇಳಿದ ಕುದುರೆಯ ಒಡೆಯ ಎದ್ದು ಹೊರಗೆ ಬರುವದೊಂದೆ ತಡ, ಕುದುರೆ ಬಿಚ್ಚುತ್ತಿರುವ ವೆಂಕಟಪ್ಪನಾಯಕ ಅದೇ ಕುದುರೆಯ ಗೋದಲಿಯಲ್ಲಿ ಅಂಗಾತ ಬಿದ್ದು ಮೈಮೇಲೆ ಹುಲ್ಲು ಎಳೆದುಕೊಂಡನು. ಕತ್ತಲಲ್ಲಿ ಬಂದ ಒಡೆಯ ಬಿಚ್ಚಿಕೊಂಡ ಕುದುರೆಯ ಗೂಟವನ್ನು ಮತ್ತೆ ನೆಲದಲ್ಲಿ ಜೋರಾಗಿ ಜಡಿದ. ದುರ್ದೈವದಿಂದ ವೆಂಕಟಪ್ಪ ನಾಯಕನ ಎಡಮುಂಗೈ ಗೂಟ ಬಡಿಯುವ ಸ್ಥಳದಲ್ಲೇ ಇತ್ತು. ಒಡೆಯ ಬಡಿದ ಆ ಗೂಟ ನಾಯಕನ ಮುಂಗೈಯಲ್ಲಿ ಹಾಯ್ದು ಹೋಗಿತ್ತು. ಆಗ ಹಿಂದೆ-ಮುಂದೆ ಯೋಚಿಸದೆ ಟೊಂಕದಲ್ಲಿದ್ದ ಕಿರು ಖಡ್ಗವನ್ನು ಕಿತ್ತಿದವನೇ ತನ್ನ ಮುಂಗೈಯನ್ನು ತಾನೆ ಕತ್ತರಿಸಿಕೊಂಡ. ಕುದುರೆಯೊಂದಿಗೆ ಜಿದ್ದಿನಿಂದ ಗೆದ್ದುಬಂದ" —ಎಂಬ ದಂತಕಥೆಯೊಂದು ಈ "ಮೊಂಡುಗೈ" ಮಹತ್ವವನ್ನು ಇಂದಿಗೂ ಹೇಳುತ್ತದೆ.

ಎಡಮುಂಗೈ ಮಾತ್ರ ವೆಂಕಟಪ್ಪನಾಯಕನಿಗೆ ಮೊಂಡಾಗಿತ್ತೆಂಬುದು ಮಾತ್ರ ಸತ್ಯ. ಯಾಕೆಂದರೆ ಆತ ಕಬ್ಬಿಣದ ಕೃತಕ ಕೈಯನ್ನು ಧರಿಸುತ್ತಿದ್ದ. ಸುರಪುರದ ಅರಮನೆಯಲ್ಲಿ ಇಂದಿಗೂ ನೋಡಲು ಸಿಗುತ್ತದೆ. ಆದರೆ ಮುಂಗೈ ಮಹತ್ವ ಮಾತ್ರ ಸಂಶಯಾಸ್ಪದ. ಯಾವುದೋ ಯುದ್ಧವೊಂದರಲ್ಲಿ ಕತ್ತರಿಸಿದ್ದರೆ ಕೈಫಿಯತ್ತಾದರೂ ಹೇಳುತ್ತಿದ್ದವು. ಅಥವಾ ವೈರಿಯಿಂದ ಆದ ಹಾನಿಯೆಂದು ಮೌನವಹಿಸಿವೆಯೋ ತಿಳಿಯದು. ತಿರುಪತಿ ವೆಂಕಟರಮಣನ ಭಕ್ತರಾಗಿ, ರಾಮಾನುಜತತ್ವ ಪಾಲನೆಯಲ್ಲಿ ತೊಡಗಿದ ಸುರಪುರದ ಅರಸರು 'ವೆಂಕಟಪ್ಪನಾಯಕ'

ನೆಂದು ಹೆಸರಿಸಿಕೊಳ್ಳತೊಡಗಿದರು. ಇಲ್ಲಿಂದ ಆರಂಭವಾದ ಈ ಹೆಸರು ಮುಂದೆ ಬಹು ಪ್ರಸಿದ್ಧಿಗೆ ಬಂತು.

ಮರಾಠರ ಸಂಪರ್ಕ ಹೊಂದಿದ್ದ ಸುರಪುರವು ಅವರ ಹೆಸರುಗಳಿಂದಲೂ ಪ್ರಭಾವ ಪಡೆದಿರಬೇಕು. ಇಮ್ಮಡಿ ವೆಂಕಟಪ್ಪನಾಯಕನ ಮಗನ ಹೆಸರು 'ಬಾಪುಸಾಹೇಬ' ನೆಂದಿದೆ. ಇದು ಶಿಷ್ಟಪದದ ಛಾಯೆ. ಕುತೂಹಲದ ಸಂಗತಿಯೆಂದರೆ ಉಪಪತ್ನಿಯರ ಇಲ್ಲವೆ ಬೇರೆ ಜಾತಿಯಿಂದ ಬಂದು ಪತ್ನಿಯಾದವರ ಮಕ್ಕಳ ಹೆಸರುಗಳು 'ವೆಂಕಪ್ಪ' ನೆಂದು ಮಾತ್ರ ಇವೆ. ಇವರಿಗೆ 'ನಾಯಕ' ಪದ ಬೆರೆಸಿಲ್ಲ. ಸುರಪುರದ ವೇಣುಗೋಪಾಲಸ್ವಾಮಿಯ ಇನ್ನೊಂದು ಹೆಸರು ಶ್ರೀಕೃಷ್ಣ. ಇದನ್ನೇ ಮುಮ್ಮಡಿ ವೆಂಕಟಪ್ಪನಾಯಕನ ಮಗನಿಗೆ 'ಕೃಷ್ಣಪ್ಪನಾಯಕ' ನೆಂದು ಇಟ್ಟರು. ಹೀಗೆ ಸುರಪುರದ ಆರಾಧ್ಯದೈವ ಮತ್ತು ವಂಶಪಾರಂಪರ್ಯದ ವ್ಯಕ್ತಿ ನಾಮಗಳನ್ನೇ ಮುಂದುವರಿಸುತ್ತ ಬರಲಾಗಿದೆ.

<u>ಬಿರುದು</u> :

ಸುರಪುರದ ಪೂರ್ವಜನಾದ ಕಲ್ಲಪ್ಪನಾಯಕನಿಗೆ 'ಬಸವಶಂಕರ' ನೆಂಬ ಬಿರುದಿತ್ತು.[209] ಇದು ವೀರಶೈವ ಪಂಥದ ಪ್ರಭಾವವಿರಬೇಕು. ಆದಿಲಶಾಹಿ ಅರಸರು ಪಿಡ್ಡನಾಯಕನಿಗೆ ತಮ್ಮ ಜಮೀನುದಾರನೆಂದು ಗುರುತಿಸಿ ಹಲವು ಪ್ರದೇಶಗಳನ್ನು ಜಹಗೀರು ಹಾಕಿಕೊಟ್ಟರು. ಮತ್ತು ಸ್ವತಂತ್ರ ಆಳ್ವಿಕೆ ನಡೆಸುತ್ತ ಕಂದಾಯ ಬಾಬತ್ತು ಸಲ್ಲಿಸಲು ಹೇಳಿ ಹಲವು ಸನದುಗಳನ್ನು ನೀಡಿದರು. ಅಲ್ಲದೆ ಮದ್ದಾನೆಯೊಂದಿಗೆ ಕಾದಿಗೆದ್ದ ಪ್ರಯುಕ್ತ 'ಗಜಗಂಡಬಹರಿ', ಮದಗಜಭೇರುಂಡ, ಮದಗಜಮಲ್ಲ, ವಾಗಿನಗೇರಿ ರಾಜ್ಯ ಸಂಸ್ಥಾಪಕ ಎಂಬಿತ್ಯಾದಿ ಬಿರುದಿದ್ದವು.[210] ಅಂದಿನಿಂದ ನಗರನಾಡಿನ ಅಧಿಪತಿಯಾದುದರಿಂದ ಸರದೇಸಾಯಿ ಮಾಮುರಿನಸರತಾಬಾದ, ಪಿಡ್ಡನಾಯಕ ಮಾಮುರಿ ನಸರತಾಬಾದ ಎಂಬ ಅಧಿಕಾರ ಸೂಚಕ ಬಿರುದಿತ್ತರು. ಹಸರಂಗಿ ಪಾಮನಾಯಕನಿಗೆ ಸರದೇಸಾಯಿ ಮಾಮುರಿ ನಸರತಾಬಾದ, ಮತ್ತು ಸರಸರದೇಸಾಯಿ ಶಹರ ಅಹಸನಾಬಾದಿ ಎಂದು ಆದಿಲಶಾಹಿ — ಸನದು ಸಂಬೋಧಿಸುತ್ತವೆ.

ಅದರಂತೆ ಮೊಘಲರು ಪೀತಾಂಬರ ಬಹಿರಿ ಪಿಡ್ಡನಾಯಕನಿಗೆ " ಮನಸಬ ಹತ್ತಹಜಾರಿಜಾತ, ಪಂಚಹಜಾರಿ ಸವಾರ ಜಾಮಿನ ಮಾಫ್ ನಜರಾಣಿ ಮಾಫ್" ಎಂಬ ಅಧಿಕಾರ, ವ್ಯಕ್ತಿಸೂಚಕ ಬಿರುದಿತ್ತು ಸನ್ಮಾನಿಸಿದರು. ಮೊಂಡುಗೈ ವೆಂಕಟಪ್ಪನಾಯಕನು ಪುದುಚೆರಿ (ಪಾಂಡಿಚೇರಿ) ಕಾಳಗದಲ್ಲಿ ನಿಜಾಮನಿಗೆ ವಿಜಯಸಾಧಿಸಿಕೊಟ್ಟ ನಿಮಿತ್ತ " ಬಲವಂತ ಬಹಿರಿರಾ ಬಜಂಗ ಮುತಹರುದ್ದೌಲಾ

---

209. ಸು.ಸಂ.ಇ.ಪುಟ-3.
210. –ಅದೇ–, ಪುಟ-15.

ಬಬರುಲ್ಮುಲುಕ" ಎಂಬ ಹೊಸ ಬಿರುದನ್ನು ನೀಡಿದರು. ಇದನ್ನೇ ಮುಂದುವರಿಸಿಕೊಂಡು ಬರಲಾಯಿತು. ಆದರೆ ಈ ಬಿರುದು ಧರಿಸಿಕೊಳ್ಳಬೇಕಾದರೆ ನಿಜಾಮನಿಗೆ ಇಂತಿಷ್ಟು ನಜರಾಣಿಯನ್ನು ಸಲ್ಲಿಸಬೇಕಿತ್ತು.[211] ದೇವದುರ್ಗದ ಕೊಳ್ಳಿರಂಗಪ್ಪನಾಯಕನು ಕೊನೆಯಾದ ತರುವಾಯ ಅಲ್ಲಿಯ ಜಹಗೀರುಗಳನ್ನೆಲ್ಲ ಇಮ್ಮಡಿ ವೆಂಕಟಪ್ಪನಾಯಕನಿಗೆ ನೀಡಿದ ನಿಜಾಮ — 'ಬಬರುಲಮುಲುಕು ಮುತಹರುದ್ದೌಲಾ" ಮತ್ತು "ರವಾಬ — ಜಂಗ — ಮುತಹರುದ್ದೌಲಾ", ಎಂಬ ಬಿರುದು ನೀಡಿ ಗೌರವಿಸಿದನು. ವನದುರ್ಗ ಕೋಟೆಯ ಮಹಾದ್ವಾರದ ಮೇಲಿರುವ ಪೀತಾಂಬರ ಬಹಿರಿ ಪಿಡ್ಡನಾಯಕನ ಶಾಸನವೊಂದರಲ್ಲಿ[212] "ಬಹಿರಿ ಬಹಾದ್ದೂರ ಪಿಡ್ಡನಾಯಕ ಶ್ರೀ ವೇಣುಗೋಪಾಲರ ಕ್ಷೇತ್ರಪಾಲಕ" ನೆಂದಿದೆ.

ಇಮ್ಮಡಿ ವೆಂಕಟಪ್ಪನಾಯಕನ ಆಳಿತಾವಧಿಯಲ್ಲಿ ಅರಸನಿಗಿರುವ ಸಮಸ್ತ ಬಿರುದುಗಳ ಬಗ್ಗೆ ವರ್ಣನೆಗಳಿವೆ. ಮಂತ್ರಿ ಮಹೋದಯರಿಂದ ತುಂಬಿದ ಆಸ್ಥಾನಕ್ಕೆ ಅರಸು ಬರುತ್ತಿರುವಾಗ ಚೋಪದಾರರು ಹೊಗಳುತ್ತಿದ್ದ ಬಿರುದಾವಳಿಗಳೆಂದರೆ —

"ಮಹಾರಾಜಧಿರಾಜ, ರಾಜಕಂಠೀರವ, ರಾಜಾಧಿಶಿರೋಮಣಿಕಟಕ, ಗೋಸಲಪಾದೋದಯ, ಶತತೂರ್ಣೋಮಜನಿತ, ಶಶಾಂಕೋಪತ್ರೀಜ, ಪುಂಜ ವಿರಾಜಿತ, ಶ್ರೀಮಂತ ವೆಂಕಟಪ್ಪನಾಯಕ ಬಹರಿ, ಬಲವಂತ ಬಹಾದ್ದೂರ ಬಿರುದಾಂಕಿತ, ದಿಲ್ಲಿಶಾಧೀಶ ಡುಮಡುಮಧ್ವನಿ ಕೋಲಾಹಲ ಹನುಮಧ್ವಜ, ಸುವರ್ಣ ಪಂಚಕಳಶ, ಏಕದಂತ, ರಾಮಬಾಣ, ಸುವರ್ಣಪಂಜ, ರವಾಬಜಂಗ, ಮುತಹರುದ್ದೌಲಾ, ಬಬರುಲ್ಮುಲುಕ, ಸರಸರದೇಸಾಯಿ ಮಾಮಲಿನಸರತಾಬಾದ, ಮಾಮಲಿಹಸನಾಬಾದ ದಾರುಲ್ಮುಜಫರ ಬಿಜಾಪುರ, ಕಿಲ್ಲೆವಾಗಿನಗೇರಿ, ಸಂಸ್ಥಾನ ಸುರಪುರ" ಎಂದು ಹೊಗಳಿದ ಬಗ್ಗೆ ದರ್ಬಾರದ ದಾಖಲೆಗಳಲ್ಲಿ ಉಲ್ಲೇಖಸಲಾಗಿದೆ.[213] ನಾಲ್ವಡಿ ವೆಂಕಟಪ್ಪನಾಯಕನು ಆಸ್ಥಾನಕ್ಕೆ ಬರುತ್ತಿರುವಾಗ 'ರಾಜಾಧಿರಾಜ, ಮಹಾರಾಜ, ಪ್ರಜಾರಕ್ಷಕ, ಸುರಪುರದ ಹುಲಿ ಗಂಡುಗರ ಎಂದು ಹೊಗಳಿ ಗೌರವಿಸುತ್ತಿದ್ದರು.[214]

---

211. ಸು.ಸಂ.ಇ. ಪುಟ-61.
212. ರಂಗರಾಜ. ಲೇಖನ. ಶಾಸನಪತ್ರ. ಸಂಯುಕ್ತ ಕರ್ನಾಟಕ, ದಿನಾಂಕ :16-6-1994.
213. ಸು.ಸಂ.ಇ. ಪುಟ-123.
214. ಭೀಮಣ್ಣ ಬೋನ್ಹಾಳ (ನಾಟಕ) ಸುರಪುರದ ವೆಂಕಟಪ್ಪನಾಯಕ. ಪುಟ-1.

ಹೀಗೆ ಚಕ್ರಾಧಿಪತಿ, ಸಾಮ್ರಾಜ್ಯ ಅಧಿಪತಿ ಇರುವ ಸರ್ವಬಿರುದುಗಳೆಲ್ಲ ಸುರಪುರ ಅರಸರು ಸಂಪಾದಿಸಿದ್ದರು. ಕನ್ನಡ, ಸಂಸ್ಕೃತ, ಪರ್ಶಿಯನ್, ದುನಿ ಭಾಷೆಯಲ್ಲಿ ಬಳಸಿದ ಈ ಬಿರುದಾವಳಿಗಳನ್ನು ಉತ್ಸವಾದಿಗಳಲ್ಲಿ ಪಾಳ್ಯಗಾರ ಸಂಸ್ಥಾನದರಸರಿಗೆ ಇವುಗಳನ್ನು ಸಂಬೋಧಿಸುವ ಮೂಲಕ ಗೌರವ ಸೂಚಿಸಲಾಗುತ್ತಿತ್ತು.

<u>(ಉ) ರಾಣಿಯರು ಮತ್ತು ಅವರ ಆಳಿಕೆ :</u>

ವಾಗಿನಗೇರಿ ತರುವಾಯ ಸುರಪುರ ಸಂಸ್ಥಾನವನ್ನು ಆಳಿದ ಹಲವು ಅರಸರಿಗೆ ನಾಲ್ವತ್ತೆಂಟು ಜನ ರಾಣಿಯರಿದ್ದರು. ಇವರ ಉದರದಿಂದ ಮೂವತ್ತಾರು ಮಕ್ಕಳು ಜನಿಸಿದ್ದರು. ಅಲ್ಲದೆ ಇನ್ನೂ ದಾಖಲೆಗೆ ಒಳಪಡದ ಎಷ್ಟೋ ಪುತ್ರ, ಪುತ್ರಿ, ಪರಿವಾರವಿರಬಹುದು. ಆದರೆ ನಾಲ್ವತ್ತೆಂಟು ಜನ ರಾಣಿಯರ ಬಗ್ಗೆ ಅಧ್ಯಯನ ಮಾಡುವುದು ಸದ್ಯ ಅತ್ಯವಶ್ಯವಿದೆ. ಯಾಕೆಂದರೆ ಅಧಿಕೃತವಾಗಿ ಮತ್ತು ರಾಜಪ್ರತಿನಿಧಿಯಾಗಿ ಸುರಪುರವನ್ನು ಆಳಿ, ಮುನ್ನಡೆಸಿದ ಕೀರ್ತಿ ಇವರಲ್ಲಿಯ ಕೆಲವರಿಗಿದೆ.

ಒಬ್ಬ ಅರಸನಿಗೆ ಪಟ್ಟದರಸಿ ಇರುವುದು ಒಬ್ಬಳೆ ಮಾತ್ರ. ಉಳಿದವರೆಲ್ಲ ಎನ್ನುವದೊಂದು ಪ್ರಶ್ನೆ. ಆದುದರಿಂದ ಸಂಸ್ಥಾನದ ಅಧ್ಯಯನದ ದೃಷ್ಟಿಯಿಂದ ಪಟ್ಟದರಸಿ, ಪತ್ನಿ, ಉಪಪತ್ನಿಯರೆಂದು ಮೂರು ಭಾಗ ಮಾಡಿಕೊಳ್ಳಬಹುದೆನಿಸುತ್ತದೆ. ಅರಸರ ತರುವಾಯದ ಅಧಿಕಾರ ಪಟ್ಟದ ಅರಸಿಗೆ ಮಾತ್ರ ಇರುತ್ತಿತ್ತು. ಅದಕ್ಕಾಗಿ ಪಟ್ಟದರಸಿ ಸ್ಥಾನಕ್ಕಾಗಿ ಭಾರಿ ಪೈಪೋಟಿಯೇ ಇತ್ತು. ನಂತರದ ಪತ್ನಿಯರಿಗೆ ಇನ್ನುಳಿದ ಅಧಿಕಾರವೇನೂ ಇತ್ತು. ಆದರೆ ಉಪಪತ್ನಿಯರಿಗೆ ರಾಜ್ಯಾಡಳಿತದಲ್ಲಿ ಅಧಿಕಾರ ಚಲಾಯಿಸುವ ಹಕ್ಕು ಇರಲಿಲ್ಲ. ಇವರು ತಾಳಿಬಂಧನಕ್ಕೆ ಒಳಪಟ್ಟವರು. ಯಾಕೆಂದರೆ ಊರದೈವದ ಎದುರು ಇವರು ಅರಸನ ಜೊತೆ ಹಸೆಮಣೆ ಏರಿದವರಲ್ಲ. ಹೀಗಾಗಿ ಅರಸನ ಕಾಮತೃಷೆಗೆ ಮಾತ್ರ ಒಳಪಟ್ಟವರಿವರಾಗಿದ್ದರು.

ಸುರಪುರ ಸಂಸ್ಥಾನವು ಆರಂಭದಿಂದಲೂ ದತ್ತಕಪುತ್ರರ ಮೇಲೆ ಬಹಳಷ್ಟು ಅವಲಂಬಿಸಿದೆ. ಗಡ್ಡಿಪಿಡ್ಡನಾಯಕನಿಗೆ ಆರುಜನ ಅರಸಿಯರಿದ್ದರೂ ಮಕ್ಕಳಾಗಲಿಲ್ಲ. ಆಗ ಗುಡುಗುಂಟಿಯವರ ಮೊರೆ ಹೋಗಬೇಕಾಯಿತು. ನಂತರ ಬಂದ ಹಸರಂಗಿ ಪಾಮನಾಯಕನಿಗೆ ಐದುಜನ ರಾಣಿಯರಿದ್ದರೂ ಸಂತಾನ ಭಾಗ್ಯಸಿಗಲಿಲ್ಲ. ಮತ್ತೆ ಗುಡಗುಂಟಿಯ ಪಿಡ್ಡನಾಯಕನನ್ನು ದತ್ತಕಪುತ್ರನಾಗಿ ಪಡೆದು

ಆತನನ್ನು ವಾಗಿನಗೇರಿ ಕಿಲ್ಲೆಯ ಪಾರುಪತ್ಯಗಾರನೆಂದು ಪಟ್ಟಲಾಯಿತು. ಪಟ್ಟಕಟ್ಟಿದ ಕೆಲವೇ ದಿನದಲ್ಲಿ ಹಸರಂಗಿ ಪಾಮನಾಯಕನ ಪತ್ನಿ ಲಕ್ಷ್ಮವ್ವನ ಉದರದಿಂದ ಚಕ್ಕಪ್ಪನಾಯಕ ಜನಿಸಿದ. ಇದೇ ಆಧಾರವಿಟ್ಟು ಪಟ್ಟದರಸಿ ಅಮ್ಮನಾಗತಿ ಎರಡು ವರ್ಷ ರಾಜಪ್ರತಿನಿಧಿಯಾಗಿ ಆಳಿದಳು. ಪಾಮನಾಯಕನಿಗೆ ವೃದ್ಧಾಪ್ಯ ಆವರಿಸಿದಾಗ ಪಡೆದ ದತ್ತಕ ಪುತ್ರನನ್ನು ಪಟ್ಟದಿಂದ ತಳ್ಳಿ ಆಳಿದ ಅಮ್ಮನಾಗತಿ "ಸಂಸ್ಥಾನದ ಇತಿಹಾಸದಲ್ಲಿ ಆಡಳಿತ ನಡೆಸಿದ ಮೊದಲ ರಾಣಿ". ದತ್ತು ಪುತ್ರ ಪಿಡ್ಡನಾಯಕನಿಗೆ ಪ್ರಬಲ ವಿರೋಧ ನೀಡಿ ತನ್ನ ತಂಗಿಯ ಮಗ ಚಕ್ಕಪ್ಪನಾಯಕನೇ ನಿಜವಾದ ಉತ್ತರಾಧಿಕಾರಿಯೆಂದು ವಾದಿಸಿದಳು. ಕೊನೆಗೆ ಪಿಡ್ಡನಾಯಕನ ಪ್ರಾಬಲ್ಯ ಹೆಚ್ಚಿದಾಗ ಪಟ್ಟಬಿಟ್ಟುಕೊಟ್ಟಳು.

ಇಮ್ಮಡಿ ವೆಂಕಟಪ್ಪನಾಯಕನ ಪಟ್ಟದರಸಿ 'ಕಾಟಮ್ಮ' ಸುರಪುರದ ರಾಜ್ಯಾಡಳಿತದಲ್ಲಿ ಮೆರೆದ ಮತ್ತೊರ್ವ ಮಹಿಳೆ. ತನ್ನ ಅಕ್ಕ ಲಕ್ಷ್ಮಮ್ಮ ತೀರಿಕೊಂಡ ತಕ್ಷಣವೇ ಪತ್ನಿಯಾದವಳು ಪಟ್ಟದರಸಿಯಾಗಿ ಬಡ್ತಿ ಹೊಂದಿದ್ದಳು. ಲಕ್ಷ್ಮಮ್ಮನ ಉದರದಿಂದ ಹುಟ್ಟಿದ ವೆಂಕಟರಾಘಮ್ಮನನ್ನು ಮುಂದಿಟ್ಟುಕೊಂಡು ರಾಜ್ಯಭಾರ ಗೈಯುವ ಹಟ ಹಿಡಿದಳು. ಆಗ ಸಂಸ್ಥಾನದಲ್ಲಿ ಕಲಹ ಆರಂಭವಾಯಿತು. ಮಹಿಳೆಗೆ ಮತ್ತೊರ್ವ ಮಹಿಳೆ ರಾಜಪ್ರತಿನಿಧಿಯಾಗುವದೇ? " ಎಂಬ ಪ್ರತಿಕೂಲ ಪ್ರಶ್ನೆಗಳು ತಲೆತ್ತಿದವು. ಈ ಸಂದರ್ಭದಲ್ಲಿ ಕಾಟಮ್ಮನ ಸರ್ವ ವಿಚಾರಗಳಿಗೆ ತಿಮ್ಮಪ್ಪನೆಂಬ ಮಂತ್ರಿ ಮೊದಲಾಗಿ ಸಹಕರಿಸಿದ. ಆದರೆ ಸಂಸ್ಥಾನದ ಸೈನಿಕರು, ಸರದಾರರು, ಮುಜುಮದಾರರು, ಆಪ್ತೇಷ್ಟ ಬಂಧುಗಳೆಲ್ಲ ಈ ಸ್ತ್ರೀ ರಾಜ್ಯಕ್ಕೆ ವಿರೋಧಿಸಿದರು. ನಿಜಾಮನ ದಬ್ಬಾಳಿಕೆ ಹಾಗೂ ಬ್ರಿಟಿಷರ ಕಪಟ ನಾಟಕಗಳ ಮಧ್ಯೆ ಸಂಸ್ಥಾನದ ಇಂಥ ಅಂತಃಕಲಹಗಳನ್ನು ಕಾಟಮ್ಮನಿಗೆ ಎದುರಿಸಲು ಶಕ್ಯವೆ? ಎಂದು ಪ್ರಶ್ನಿಸಿದರು. ರಾಜ್ಯದಲ್ಲಿ ಎರಡು ಬಣಗಳಾಗಿ ಸಿಡಿದುನಿಲ್ಲಲು ರಾಣಿ ಕಾಟಮ್ಮ ಕಾರಣಳಾದಳು. ಇಡೀ ವ್ಯವಸ್ಥೆಯೇ ದಿಗ್ಭ್ರಾಂತವಾಗುವಂತೆ ಸಮಸ್ಯೆ ಹುಟ್ಟುಹಾಕುವಲ್ಲಿ ರಾಣಿ ಯಶಸ್ವಿಯಾಗಿದ್ದಳು. ಇಷ್ಟು ಧೈರ್ಯ, ಶೌರ್ಯ, ಸಾಹಸ, ವಿಚಾರ, ವೈವಿಧ್ಯ — ವ್ಯಕ್ತಿತ್ವಗಳೆಲ್ಲ ತಂದೆಯಾದ ಕನಕಗಿರಿಯ ಅರಸು ರಾಜಾ ರಂಗಪ್ಪನಾಯಕನಿಂದ ಇವಳಿಗೆ ಬಳುವಳಿಯಾಗಿ ಬಂದಿದ್ದವೆನ್ನಬಹುದಷ್ಟೆ. ಕೊನೆಗೆ ಸಂಸ್ಥಾನದ ಪಟ್ಟಕ್ಕೆ ಉತ್ತರಾಧಿಕಾರಿಯನ್ನು ದೂರದ ಊರಿಂದ ಹುಡುಕಿಕೊಂಡು ಬಂದ ವೇರಿ ರಾಜಪ್ರತಿನಿಧಿ ಸ್ಥಾನದಿಂದ ರಾಣಿ ಕಾಟಮ್ಮ ನಿವೃತ್ತಿಗೊಂಡಳು.

ರಾಣಿ ಈಶ್ವರಮ್ಮನ ವೀರೋಚಿತ ವ್ಯಕ್ತಿತ್ವ ಸಂಸ್ಥಾನದ ರಾಣಿಯರಲ್ಲಿಯೇ ಪ್ರಖ್ಯಾತವಾದುದು. ಮೈದುನ ಪಿಡ್ಡನಾಯಕನ ಕುತಂತ್ರಗಳಿಗೆ ಸಂಸ್ಥಾನವನ್ನು ಬಲಿಕೊಡದಂತೆ ಕಾಪಾಡಿಕೊಂಡು ಬಂದ ಧೀರಮಹಿಳೆ. ಬೇಡರೆಲ್ಲರ ಭಾವನೆಗಳನ್ನು ಸಂಘಟಿಸಿ, ಅಪ್ರಾಪ್ತ ಪುತ್ರ ಬಾಲವೆಂಕಟನ ರಾಜಪ್ರತಿನಿಧಿಯಾಗುವ ಮೂಲಕ ಸ್ವಾಭಿಮಾನ ಪ್ರಕಟಿಸಿದ ಸಮರ್ಥ ಸಂಸ್ಥಾನಿಕಳು. ಆದರೆ ಬ್ರಿಟಿಷರ ರಾಜಕೀಯ ಪ್ರತಿನಿಧಿಯಾಗಿ ಬಂದ ಮೆಕ್ಲೋಸ್ ಟೀಲರ ರಾಣಿಯ ಅಧಿಕಾರವನ್ನು ಮೊಟಕುಗೊಳಿಸಿದ. ಆಗಲೂ ಶಕ್ತಿಮೀರಿ ಪ್ರಯತ್ನಿಸಿದ ಸಾಹಸದ ಘಟ್ಟಗಳನ್ನು ರೋಮಾಂಚಕಾರಿಯಾದುದು.

ಪತನವಾದ ಸಂಸ್ಥಾನದಲ್ಲಿ ಪ್ರವೇಶಿಸಿದವಳು ನಾಲ್ವಡಿ ವೆಂಕಟಪ್ಪ ನಾಯಕನ ಪಟ್ಟದರಾಣಿ ರಂಗಮ್ಮ. ನ್ಯಾಯಾಂಗ ವಿಚಾರಣೆಯಲ್ಲಿದ್ದ ರಾಜನನ್ನು ಉಳಿಸಿಕೊಳ್ಳಲು ಹಗಲಿರುಳು ಶ್ರಮಿಸಿದ ಈ ರಾಣಿಯ ಅನಾಥ ಜೀವನದಲ್ಲಿ ಹಟವಾದಿ ಭಾವ ಕಾಣುತ್ತೇವೆ. ರಸ್ತಾಪೂರ ಭೀಮ ಕವಿಯ ಹಲವಾರು ಪದ್ಯಗಳು ರಾಣಿ ರಂಗಮ್ಮಳ ವ್ಯಕ್ತಿತ್ವದ ವೈಶಾಲ್ಯ ಬಿಂಬಿಸುತ್ತವೆ. ಅತ್ತೆಗೆ ತಕ್ಕ ಸೊಸೆಯಾದಳು ರಾಣಿ ರಂಗಮ್ಮ.

೦೧೦

Chapter - 3

ಅಧ್ಯಾಯ ಮೂರು

ಆಡಳಿತ ಹಾಗೂ ಆರ್ಥಿಕ ಸ್ಥಿತಿ-ಗತಿ

ಕ್ರಿ.ಶ. 1700ನೇ ಇಸ್ವಿಯಲ್ಲಿದ್ದ ಸುರಪುರ ಸಂಸ್ಥಾನದ ಆಡಳಿತ ಪ್ರದೇಶ.

ಅಧ್ಯಾಯ-ಮೂರು

ಆಡಳಿತ ಹಾಗೂ ಆರ್ಥಿಕ ಸ್ಥಿತಿ-ಗತಿ

(ಅ) ಆಡಳಿತ

(1) ಆಡಳಿತ ಪ್ರದೇಶ :

ದಕ್ಷಿಣ ಹಿಂದುಸ್ತಾನದಲ್ಲಿ ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡ ಹಲವು ಅರಸರಲ್ಲಿ ಆದಿಲಶಾಹಿ, ಮೊಘಲ, ಪೇಶ್ವೆ, ಇಂಗ್ಲೀಷ, ನಿಜಾಂ ಮನೆತನಗಳು ಬಹು ಪ್ರಮುಖವಾದವು. ಇವರ ವಿಶಾಲ ರಾಜ್ಯಕ್ಕೆ ಸಹಕರಿಸಿದ ಸಂಸ್ಥಾನಿಕರೆಲ್ಲ ಸಾಮಂತರಾದರು. ಅವರಲ್ಲಿ ಸುರಪುರ ಸಂಸ್ಥಾನವೂ ಒಂದು. ಆರಂಭದಿಂದ ಅಂತ್ಯದವರೆಗೂ ಸಾಮ್ರಾಜ್ಯ ಅಧಿಪತಿಗಳ ಸ್ವಾಧೀನದಲ್ಲೇ ಬದುಕಿದ ಸುರಪುರವು ಕೊನೆಯವರೆಗೂ ಸ್ವತಂತ್ರವಾಗಲೇ ಇಲ್ಲ. ಆದರೂ ತನ್ನ ವ್ಯಾಪ್ತಿಗೆ ಒಳಪಟ್ಟ ಪ್ರದೇಶವನ್ನು ಆಳುವಲ್ಲಿ ಸಂಪೂರ್ಣ ಸ್ವಾತಂತ್ರ್ಯ ಪಡೆದಿತ್ತು ಎಂಬ ಅಂಶ ಮಾತ್ರ ಮರೆಯುವಂತಿಲ್ಲ. ಇಂಥ ಪ್ರದೇಶದ ವಿಸ್ತಾರ ಎಷ್ಟಿತ್ತು ಎಂಬುದೇ ಇಲ್ಲಿಯ ಮುಖ್ಯ ಉದ್ದೇಶ.

ಚಿನ್ನಹಣಮನಾಯಕ ಮತ್ತು ಹಿರೇಪಾಮನಾಯಕರ ಮಾರ್ಗದಲ್ಲಿ ಮುನ್ನಡೆದ ಪಕ್ಕಪ್ಪ ನಾಯಕನು ಕೇವಲ ಬೈದಬಾಳ ಸಮುತಿನ ದೇಸಾಯಿಯಾಗಿದ್ದ. ಆಗ ಸಂಸ್ಥಾನದ ಯಾವುದೇ ಸ್ವರೂಪವಿರಲಿಲ್ಲ. ತರುವಾಯ ಬಂದ ಗಡ್ಡಿಪಿಡ್ಡನಾಯಕನು ಮಾಮರಿ ನಸರತಾಬಾದ, ಆಲಮೇಲ, ತಾಳಿಕೋಟೆ, ನಾಲತ್ವಾಡ, ಕೊಡೇಕಲ್ ಮುಂತಾದ ಪ್ರದೇಶವನ್ನು ವಿಜಾಪೂರ ಆದಿಲಶಾಹಿ ಅರಸನಿಂದ ಪಡೆಯುವ ಮೂಲಕ ವಾಗಿನಗೇರಿಯನ್ನು ಕೇಂದ್ರವಾಗಿಟ್ಟುಕೊಂಡಿದ್ದ. ಇಲ್ಲಿಂದಲೇ ಸಂಸ್ಥಾನ ಪೊಂದಿದರ ಸ್ಪಷ್ಟ ಲಕ್ಷಣ ಮೂಡಿಬಂದವು. ವಿಜಾಪೂರಕ್ಕೆ ವಜೀರನಾಗಿ ಬಂದ ಖವಾಸಖಾನನು ಹಸರಂಗಿ ಪಾಮನಾಯಕನಿಗೆ ಮಾಮರಿ ನಸರತಾಬಾದ (ಶಾಪುರ), ಮಾಮರಿರಾಯದೂರ, ಬಾಗೂಡಿ, ಶಹರ ಅಹಸನಾಬಾದ (ಕಲಬುರ್ಗಿ), ಇಬ್ರಾಹಿಂಗಡ (ಯಾದಗೀರ)—ಭಾಗಕ್ಕೆ ಒಳಪಡುವ ಸಂಪೂರ್ಣ ಪ್ರದೇಶವನ್ನು ನೀಡಿದನು. ಕೇವಲ ನಗರನಾಡಿನ ಆಡಳಿತ ನಿರ್ವಹಿಸುತ್ತಿದ್ದ ವಾಗಿನಗೇರಿಯು ಇಲ್ಲಿಂದಲೇ ತನ್ನ ಅಧಿಕಾರ ಪ್ರದೇಶದ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡಿತು.

ಗಡ್ಡಿಪಿಡ್ಡನಾಯಕ ಮತ್ತು ಹಸರಂಗಿ ಪಾಮನಾಯಕರಿಗೆ 'ಇನಮುತ್ತುಮಗಾ' ಹಾಗೂ 'ಇನಾಮಬದಲವತನ' ಎಂಬ ಎರಡು ರೀತಿಯ ಇನಾಮುಗಳನ್ನು ವಿಜಾಪೂರ ಆದಿಲಷಾಹಿ ಅರಸರಿಂದ ದೊರೆತಿತ್ತು. 'ನಗರ ನಾಡನ್ನು ಇನಾಮಮುತ್ತುಮಗಾ' ಎಂದು ಕೊಡಲಾಗಿತ್ತು. ಅಲ್ಲದೆ ಸರದೇಸಗತಿ ಸರಸರದೇಸಗತಿ, ಸರನಾಡಗೌಡಕಿ—ಮುಂತಾಗಿ 'ದಾಹಿಜಾ' ಹುಸುಮು ಹಕ್ಕು ಹಸ್ತಾಂತರಿಸಲಾಗಿತ್ತು.

ವಿಜಾಪೂರ, ತಾಳಿಕೋಟೆ, ನಾಲ್ವತ್ವಾಡ, ಕಲಬುರ್ಗಿ, ಅಕ್ಕಲಕೋಟೆ, ರಾಯಚೂರ, ಬೀದರ ಮಾಮಲೆಗಳ ಮೇಲೆ-ಈ ದಾಹಿಜಾ· ರುಸುಮು ವಸೂಲಿಯ ಅಧಿಕಾರ ಇವರಿಗಿತ್ತು·[1] ಆದುದರಿಂದ ಪಾಮನಾಯಕನ ಆಳ್ವಿಕೆಯಲ್ಲಿ ಪೂರ್ವಕ್ಕೆ ರಾಯಚೂರ, ಪಶ್ಚಿಮಕ್ಕೆ ಬಿಜಾಪೂರ, ದಕ್ಷಿಣಕ್ಕೆ ಕೃಷ್ಣಾನದಿ, ಉತ್ತರಕ್ಕೆ ಕಲಬುರ್ಗಿಯು ಸುರಪುರ ಸಂಸ್ಥಾನದ ಗಡಿಗಳಾಗಿದ್ದವು· ಈ ಭೂಪ್ರದೇಶದ ಮೇಲಿರುತ್ತಿದ್ದ ಕಂದಾಯದ ಕಾಲುಭಾಗವನ್ನು ವಿಜಾಪೂರ ಅರಸೊತ್ತಿಗೆಗೆ ಅರ್ಪಿಸಬೇಕಿತ್ತು·

ಮೇಲಿನ ಎಲ್ಲಾ ಪ್ರದೇಶವು ಕೊನೆಯವರೆಗೂ ಸುರಪುರದ ಆಳ್ವಿಕೆಗೆ ಒಳಪಡಲಿಲ್ಲ. ಆಶ್ರಯನೀಡಿದ ರಾಜ, ರಾಜ್ಯಗಳು ಬದಲಾವಣೆಗೊಂಡಂತೆ ಇವರ ಆಳ್ವಿಕೆಯ ಪ್ರದೇಶದಲ್ಲೂ ಹಿಗ್ಗು-ಕುಗ್ಗುವಿಕೆ ಉಂಟಾದವು· ಹನರಡಿ ಪಾಮನಾಯಕನ ಆಳ್ವಿಕೆ ಬಿಟ್ಟರೆ ಉಳಿದ ಅರಸರ ಆಳಿತೆಯಲ್ಲಿ ಕುಗ್ಗಿದ್ದೇ ಹೆಚ್ಚು. ಔರಂಗಜೇಬನ ಆಕ್ರಮಣಕ್ಕೆ ತುತ್ತಾದ ಸುರಪುರವು ತನ್ನ ಕೆಲವು ಗಡಿ ಪ್ರದೇಶಗಳನ್ನು ಕಳೆದುಕೊಂಡಿತು· ಬಿಜಾಪೂರ, ಕಲಬುರ್ಗಿ, ರಾಯಚೂರ, ಯಾದಗಿರಿಯ ಗಡಿ ಪ್ರದೇಶಗಳೇ ಕೈಬಿಟ್ಟವು· ಕೇವಲ ಸಗರನಾಡು ಮಾತ್ರ ಸುರಕ್ಷಿತವಾಗಿತ್ತು· ಅದರಲ್ಲಿಯೂ ಸಗರದ ಕೋಟೆ ಕಸಿದುಕೊಂಡಿದ್ದ ಮೊಘಲರು ಅಲ್ಲಿ ತಮ್ಮ ಸುಭೇದಾರನನ್ನು ನೇಮಿಸಿದ್ದರು· ತರುವಾಯ ಅದು ಅವರ ಅಧೀನಕ್ಕೆ ಒಳಪಟ್ಟಾಗ ಪೂರ್ವದಂತೆ ನಡೆದುಬಂದ ವಂಶಪಾರಂಪರ್ಯ ಆಸ್ತಿಯನ್ನು ಒಪ್ಪಿಸಿದ ಬಗ್ಗೆ ತಿಳಿಯುತ್ತದೆ·

ಮರಾಠರ ವಿರುದ್ಧ ಸೈನ್ಯ ಸಹಾಯ ಮಾಡಿದ ಇಮ್ಮಡಿ ವೆಂಕಟಪ್ಪನಾಯಕನಿಗೆ ಹೈದ್ರಾಬಾದ ನಿಜಾಮನು ಚಿತ್ತಾಪೂರ, ಮಳಖೇಡ, ಕೋರಳಿ, ಕಲಬುರ್ಗಿ, ಸೇಡಂ, ಕಮಲಾಪೂರ ಚಿಂಚೋಳಿ, ಯಾದಗೀರ ಮುಂತಾದ ಎರಡು ಲಕ್ಷ ರೂ·ಮೌಲ್ಯದ ಪ್ರದೇಶವನ್ನು 'ಚೌಥ' ಪದ್ಧತಿಯ ಮೇಲೆ ನೀಡುತ್ತಾನೆ· ಮೊಘಲರ ಕಾಲದಲ್ಲಿ ಕೈಬಿಟ್ಟು ಹೋದ ಅನೇಕ ಪ್ರದೇಶಗಳೊಂದಿಗೆ ಇಂಥ ಹಲವು ಹೊಸ ಪ್ರದೇಶಗಳು ಸುರಪುರ ಸಂಸ್ಥಾನದ ಆಳ್ವಿಕೆಗೆ ಸೇರ್ಪಡೆಯಾದವು·[2] ಕೆಲವು ಕಾಲ ಕೃಷ್ಣಾನದಿ ದಾಟಿ ದೇವದುರ್ಗ, ಗುಡಗುಂಟ ಪ್ರಾಂತ್ಯವನ್ನು ಸಹ ತಮ್ಮಲ್ಲಿ ವಿಲೀನ ಮಾಡಿಕೊಂಡಿದ್ದರು·

1· ಸು·ಸಂ·ಇ; ಪುಟ-245·
2· ಕೈಫಿಯತ್ತು· ನಂ·4·

(2) ಆಡಳಿತ ವಿಭಾಗ :

ಆಡಳಿತದ ಅನುಕೂಲಕ್ಕಾಗಿ ಸುರಪುರ ಸಂಸ್ಥಾನವು ಅನೇಕ ಬಗೆಯಾಗಿ ವಿಂಗಡಿಸಿತ್ತು. ಇಲ್ಲಿ ವಿಜಯನಗರ ಸಾಮ್ರಾಜ್ಯದ ದೃಷ್ಟಾಂತ ಕಾಣುತ್ತೇವೆ. ವಿಜಯನಗರವು ನಾಡು, ಗ್ರಾಮ, ಅಗ್ರಹಾರ, ಪಟ್ಟಣಗಳೆಂಬ ನಾಲ್ಕು ವಿಧದ ಆಡಳಿತ ಸಂಸ್ಥೆಗಳನ್ನು ರಚಿಸಿಕೊಂಡಿತ್ತು.[3] ಹಲವು ಗ್ರಾಮಗಳನ್ನು ಸೇರಿಸಿ ಮಾಡಿದ 'ಸ್ಥಳ' ವನ್ನೇ ಮುಂದೆ ಸಮತು[4] ಎಂದು ಕರೆಯಲಾಗಿತ್ತು.

ಸುರಪುರದಲ್ಲಿ ಆಡಳಿತದ ಮುಖ್ಯ ಕೇಂದ್ರ ರಾಜಧಾನಿಯಾಗಿದ್ದು, ಉಳಿದ ವಿಭಾಗಗಳು ಅದರ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು. ಹಸರಾಗಿ ಪಾಮನಾಯಕನ ಕಾಲಕ್ಕೆ ರಾಜ್ಯವಿಸ್ತಾರವಾಗಿತ್ತು. ಬಹುತೇಕವಾಗಿ ಆಗ ಹುಟ್ಟಿಕೊಂಡ ವಿಭಾಗಗಳೇ ಮುಂದುವರೆದವು. ಅವುಗಳೆಂದರೆ ಪರಗಣಿ, ಸಮತು, ಪೇಟೆ, ಮಹಲು, ಠಾಣೆಗಳೆಂದು ರಚಿಸಿ ಅಂತೂ 'ನಾಡಿ'ನಲ್ಲಿ ಅವುಗಳನ್ನು ಕೇಂದ್ರೀಕರಿಸಲಾಗಿತ್ತು. ಅಲ್ಲದೆ ಅವುಗಳ ಮೇಲೆ ಪ್ರತ್ಯೇಕ ಆಡಳಿತಾಧಿಕಾರಿಯನ್ನು ನೇಮಿಸಿದರೂ ಆಡಳಿತಾತ್ಮಕವಾಗಿ ಆ ವ್ಯಕ್ತಿ ರಾಜಧಾನಿಯೊಂದಿಗೆ ವ್ಯವಹರಿಸಬೇಕಿತ್ತು. ಕೆಲವು ಸಲ ನಾಡು, ಕಿಲ್ಲೆ, ಕೋಟೆಗಳೆಂದು ಪ್ರಮುಖ ಪ್ರದೇಶಗಳನ್ನು ಗುರುತಿಸಿದ್ದು ಈ ಸಂಸ್ಥಾನದಲ್ಲಿ ಕಂಡುಬರುತ್ತದೆ. ಆಡಳಿತದ ಕೊನೆಯ ಘಟಕವೆಂದರೆ ಗ್ರಾಮ.

ನಗರನಾಡಿನ ವ್ಯಾಪ್ತಿಯಲ್ಲಿ ಐದು ಪರಗಣಿಗಳು, ಹತ್ತು ಸಮತುಗಳು, ಮೂರು ಪೇಟೆಗಳು ಹಾಗೂ ಕೆಲವು ಮಹಲ ಕಿಲ್ಲೆಗಳು ಒಳಗೊಂಡಿದ್ದವು. ಬಾಗೋಡಿಯನ್ನು ಏಳು ಪರಗಣಿ, ಐದು ಸಮತುಗಳಾಗಿ ಸೀಳಲಾಗಿತ್ತು. ನಾಲ್ವತ್ವಾಡ ಪ್ರದೇಶದಲ್ಲಿ ಅತಿ ಹೆಚ್ಚು ಅಂದರೆ ಹದಿನೇಳು ಸಮತುಗಳು, ಒಂಬತ್ತು ಠಾಣೆಗಳು ಕಾರ್ಯನಿರ್ವಹಿಸುವಂತೆ ವಿಭಜಿಸಲಾಗಿತ್ತು. ಅಲ್ಲದೆ ಕಲಬುರ್ಗಿ, ರಾಯಚೂರ ಶಹರಗಳನ್ನು ರಾಜಧಾನಿಯೇ ನಿಯಂತ್ರಿಸುತ್ತಿತ್ತೆಂದು ತೋರುತ್ತದೆ.

ಕ್ರಿ.ಶ. 1674ರಲ್ಲಿ ಬಿಜಾಪೂರ ಬಾದಷಹನು ಪಾಮನಾಯಕನಿಗೆ ನೀಡಿದ ಫರ್ಮಾನಿನಲ್ಲಿ[5] ಈ ಕೆಳಕಂಡ ಜಹಗೀರುಗಳನ್ನು ನೀಡಿದ್ದಾನೆ. ಅದರಲ್ಲಿ ಅನೇಕ ವಿಭಾಗಗಳನ್ನು ಗುರುತಿಸಿಕೊಂಡಿದ್ದು ಸಹ ಕಾಣುತ್ತೇವೆ. ಇದು ಸಂಸ್ಥಾನದುದ್ದಕ್ಕೂ ನಡೆದುಬಂದ ಕ್ರಮವಾಗಿದೆ. ಅವುಗಳ ದೀರ್ಘ ವಿವರಣೆಯನ್ನು ಈ ರೀತಿ ಸಮೀಕ್ಷಿಸಬಹುದು.

---

3. ಡಾ ಬಿ.ಬಿ.ವೆಂಕಟರತ್ನಂ — ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರಕಾರ. ಪುಟ-23.
4. —ಅದೇ—, ಪುಟ-22.
5. ಸು.ಸಂ.ಇ., ಪುಟ-30.

(1) ಮೂಮರಿ ನಸರತಾಬಾದ ವ್ಯಾಪ್ತಿಯ ಅಧಿಕಾರ ಮತ್ತು ವಿಭಾಗ

ಅ) ಬದಲವತನ ಇನಾಮುಗಳು :

1. ಪರಗಣಿಗಳು : ತಾಳಿಕೋಟೆ, ಕಂಭಾವಿ, ಮೂಮರಿ ಮಹಮದಪೂರ (ನಾಲ್ವತ್ವಾಡ), ಅಲಮೇಲ, ದೇವಪುರ.

2. ಸಮತುಗಳು: ಮುದ್ದರಕಿ, ಅಂದೇರಿ, ಜೇವರ್ಗಿ ರಸ್ತಾಪೂರ, ಹೇಮನೂರ, ಶಿರವಾಳ, ಮಳ್ಳಿ, ಚಿಗೇರಿ, ಮಾಲಗತ್ತಿ, ನೆಲವಗಿ.

3. ಪೇಟೆಗಳು : ಶಹಪುರಪೇಟೆ, ಅಫಜಲಪುರಪೇಟೆ, ಎಖಲಾಸಪುರ ಪೇಟೆ (ಉಸ್ಮಾಬಾದ ಕಸಬಾ)

4. ಮಹಲುಗಳು: ಗೋಗಿ, ದೇವದುರ್ಗ ಅಲ್ಲದೆ ಕೆಲವು ಸಮತಿನ ಹಳ್ಳಿಗಳು.[6]

ಆ) ವಿಶೇಷರಾಸಿಗಳು :

ಸರದೇಸಗತಿ, ದೇಸಗತಿ, ದೇಶಕುಳಕರಣಿ, ಸರನಾಡಗೌಡಕಿ, ನಾಡಗೌಡಕಿ, ದಾಹಿಜಾ, ವರತನದ ಹಕ್ಕು, ಪಣಿ, ಮೀರಾಸವಾರಕ (ಉಪ್ಪಿನಮೊಳೆ), ಚಾವರಾಂ ಇನಾಮು ಇತ್ಯಾದಿ.

(2) ಶಹರ ಅಹಸನಾಬಾದ (ಕಲಬುರ್ಗಿ) ವ್ಯಾಪ್ತಿಯ ಅಧಿಕಾರ :

ಸರಸರದೇಸಗತಿ, ಸರನಾಡಗೌಡಕಿ, ಲವಾಜ ಮೊಹಿತ, ದಾಹಿಜಾ, ಪಸಗಿ, ಮೀರಾಸಮಾರ್ಗ, ದಿಸವಾ-ಮುಂತಾದ ಬಾಬತ್ತು ಹೊಂದಿ ಇಪ್ಪತ್ತೆರಡು ಹಳ್ಳಿಗಳನ್ನು[7] ಮತ್ತು ಪುಣ್ಯ, ಮಹಲುಗಳನ್ನು ವಂಶಪಾರಂಪರ್ಯವಾಗಿ ಅನುಭವಿಸಲು ಬಾದಶಹ ಆದೇಶ ಹೊರಡಿಸಿದ್ದ.

(3) ಮಹಮ್ಮದ ಶಾಹಿ (ಬಾಗಲೋಟಿ) ವ್ಯಾಪ್ತಿಯ ಅಧಿಕಾರ ಮತ್ತು ವಿಭಾಗ:

1. ಪರಗಣಗಳು : ಅಕ್ಕಲಕೋಟ, ಭತಗಾಂವ, ನರಗುಂದ, ಆಳಂದ, ಮಂಠಲಾ, ಮಳಖೇಡ, ಮೈಂದರ್ಗಿ,

---

6. ರಂಗನೂಗಾರು, ದೆತ್ತಾಪೂರ, ಕೋನಮ್ಯಲದಲ್ಲಿ ಬರುವ ಐದೈದು ಹಳ್ಳಿಗಳು. ಮತ್ತು ಕಲ್ಲೂರು, ಜೀನಗಿ, ಚಾವರಗುಡ್ಡ, ಕಾರಲೂರು, ಸಾಗನೂರು, ಸಂತಿ, ರಾಡರಾಪೂರ, ಬನಹಟ್ಟಿ, ಮೊರಬ, ಹೂಲವಡಿಗೇರಿ ಮಹಾಜೆಗಳನ್ನು ಪಾಮನಾಯಕನ ಕಾಲಕ್ಕೆ ನೀಡಲಾಗಿತ್ತು.

7. ಮಹಾಜೆಗಳಾದ ನೀರಲಾ, ಹಿರೇಸಾವಳಗಿ, ಬಂಟಹಿಪ್ಪರಗಿ, ಬಾದನೂರು, ದಾಕಾಪೂರ, ಎಲಗೇರಿ, ನಲಗರ ಮಜೇಯಾನಿ, ಹಳೇಸಂಗಾಯಿ, ಬೆಳಗುಂದಿ, ಹೊಸಿರೂರು; ಹೊಲಕುಂದಿ, ನೀರಲ ಕೋಡ, ಕಾಡೂರು, ಆಲೂರು, ಬಂಕಲಗಿ, ಬಮ್ಮನಹಳ್ಳಿ, ನಡಕನೂರು, ದಂಡಗುಂಡ, ಅರಳಹಳ್ಳಿ, ಅರಲೂರ, ಬಲೋರಿ.

2. ಸಮತುಗಳು : ಬಾಚೂರು, ಬಾಗಲೋಟಿ, ಚಿಂಚೋಳಿ, ಕಲಾದಿ
ಕಾರಕಿ.

(4) ಮೌಜೆ ಮಹಮ್ಮದಪುರ (ನಾಲತ್ವಾಡ) ವ್ಯಾಪ್ತಿಯ ಅಧಿಕಾರ ಹಾಗೂ ವಿಭಾಗ :

1. ಸಮತುಗಳು : ಉಕ್ಕಲಿ, ಬಾಗೇವಾಡಿ, ಕೊಳಬನೂರ, ಜಾಲವಾದಿ, ಹಿಪ್ಪರಗಿ, ಜಾನಕೋಟಿ, ಮೂಲವಾರ, ತಾಂಬಾ, ಇಂಡಿ, ಹನಸಗಿ, ಕಂಚಿ, ಎರಡೂಲ ಹೋರತಿ, ಜತ್ತ ಅಥಣಿ, ಹೊನವಾರ, ಗೋಲಗೇರಿ, ಹವಾರ ಬಂಕಸಿಂಗ್.

2. ಠಾಣಿಗಳು : ಜಂಬಗಿ, ನರಗುಂದ, ಕೋಲಾರ, ಮದ್ದೂರ, ಹೊಸೂರು, ಮಹಾಂದರಿ, ಬೀಳೋಟಿ, ನರನಾಡ, ದೋಯಿವಾಡಿ.

ನಾಲತ್ವಾಡ ವ್ಯಾಪ್ತಿಗೆ ಬರುವ 15 ಸಮತುಗಳು, 9 ಠಾಣಿಗಳು ಹಾಗೂ 9 ಗ್ರಾಮ[8]ಗಳ ಮೇಲೆ ಸುರಪುರದ ನರಸರದೇಸಗತಿ, 'ದಾಹಿಜಾ' ಮುಂತಾದ ಹಕ್ಕುಗಳನ್ನು ಪಡೆದಿತ್ತೆಂದು ಸದರಿ ಫರ್ಮಾನು ದೃಢೀಕರಿಸುತ್ತದೆ.

(5) ಮೌಜೆ ರಾಂಪುರ ಮತ್ತು ಇಬ್ರಾಹಿಂಗಡ (ಶಹಾಪೂರ) ವ್ಯಾಪ್ತಿಯ ಅಧಿಕಾರ ಹಾಗೂ ವಿಭಾಗಗಳಲ್ಲಿ ಬರುವ ಪರಗಣಿ, ಮೌಜೆ, ಸಮತು, ಕಸಬೆ, ಪೇಟಿ, ಹಳ್ಳಿಗಳಿಗೆ ಸಂಬಂಧಿಸಿದಂತೆ ಸುರಪುರದ ನರಸರದೇಸಗತಿ ಹಕ್ಕು ಸಂಪಾದಿಸಿತ್ತು.

ಹಸರಂಗಿ ಪಾಮನಾಯಕನ ಕಾಲಕ್ಕೆ ಸಗರನಾಡಿನಲ್ಲಿ ಇದ್ದ 10 ಸಮತುಗಳನ್ನು ನಾಲ್ವಡಿ ವೆಂಕಟಪ್ಪನಾಯಕನ ಆಳ್ವಿಕೆಯಲ್ಲಿ 16 ಸಮತುಗಳಾಗಿ ವಿಸ್ತರಿಸಿಕೊಳ್ಳಲಾಯಿತು. ಆಶ್ಚರ್ಯವೆಂದರೆ ರಸ್ತಾಪೂರ, ಸಗರ, ಕಕ್ಕೇರಿ, ದೇವಪುರ, ಕೊಡೇಕಲ್, ಹುಣಸಗಿ, ಬೈಲಕೂಳ ಪರಗಣಿಗಳು ಸಮತುಗಳಾಗಿ ತಮ್ಮ ಅಧಿಕಾರ ಮತ್ತು ವ್ಯಾಪ್ತಿಯನ್ನು ಕುಗ್ಗಿಸಿಕೊಂಡವು. ಇದು ಆಡಳಿತದ ಅನುಕೂಲಕ್ಕಾಗಿ ಮಾಡಿಕೊಂಡಿರುವ ಸಾಧ್ಯತೆಯಿದೆ.

---

8. ಕೊಳಬನೂರು, ಕಡಕೋಳ, ಹಂದಲ, ಮುತ್ತಗಿ, ಅಲಸಂಗಿ, ಬಂದಾಲವಾರ, ಎಲಗೂಲ, ಕಾವನಕೇರಿ, ಅಮರಾನ್.

ಸುರಪುರ ಸಂಸ್ಥಾನದಲ್ಲಿ ಸುಮಾರು 25-30 ಪರಗಣಗಳು, ಕಾರ್ಯನಿರ್ವಹಿಸುತ್ತಿದ್ದವು. 'ಮಹಲ' ಪರಗಣದ ಉಪಭಾಗವಾದರೆ 'ಕಸಬಾ' ವು ಪರಗಣೆಯ ಮುಖ್ಯಪಟ್ಟಣ. ಆಡಳಿತಾತ್ಮಕ ಘಟಕ ಹಾಗೂ ಸಂತೆಗಳಿಂದ ಕೂಡಿದ ನಗರಗಳು,'ಪೇಠೆ' ಗಳಾಗಿದ್ದವು. ಠಾಣೆಗಳು ಕೇಂದ್ರ ಪೋಲೀಸ ಕಚೇರಿಗಳಾಗಿ 'ಠಾಣೇದಾರ' ನೆಂಬ ಮುಖ್ಯಸ್ಥನ ಅಡಿಯಲ್ಲಿ ಕ್ರಿಯಾಶೀಲವಾಗಿದ್ದವು.

(3) <u>ಆಡಳಿತ ವರ್ಗ :</u>

ಮಧ್ಯಕಾಲೀನ ಕರ್ನಾಟಕವು ತನ್ನ ಸಂಪೂರ್ಣ ಆಡಳಿತ ವ್ಯವಸ್ಥೆಯನ್ನು ವಿಜಯನಗರ ರಾಜ್ಯಕ್ಕೆ ಮಾರ್ಗಾಯಿಸಿತ್ತು.[9] ಈ ವಿಜಯನಗರ ಸಾಮ್ರಾಜ್ಯದ ದಟ್ಟ ಪ್ರಭಾವ ಹೊಂದಿರುವ ಸುರಪುರ ಸಂಸ್ಥಾನವು ಆಡಳಿತ ಹಲವಾರು ಅಂಶಗಳನ್ನು ಅಲ್ಲಿಂದಲೇ ಮುಂದುವರಿಸಿಕೊಂಡು ಬಂದಿತು. ಆದರೆ ಆದಿಲಷಾಹಿ,ಪೇಶ್ವೆ, ಮೊಘಲ, ನಿಜಾಮ, ಇಂಗ್ಲೇಜರ ಅಧೀನತೆ ಒಪ್ಪಿಕೊಂಡ ಪ್ರಯುಕ್ತ ಅವರ ಆಡಳಿತ ಪದ್ಧತಿಯನ್ನೇ ಅನುಸರಿಸಬೇಕಾಯಿತು. ಹೀಗಾಗಿ ಇಲ್ಲಿ ಹಲವು ಸಂಗಮ ಸ್ವರೂಪ ಕಾಣುತ್ತಿದೆಯಾದರೂ ಪೇಶ್ವೆಗಳನ್ನೇ ಬಹಳಷ್ಟು ಅವಲಂಬಿಸಿದ್ದು ಎದ್ದು ತೋರುತ್ತದೆ. ಕೊನೆಯ ವರೆಗೂ ಮರಾಠಿಯನ್ನೇ ಸಂಸ್ಥಾನದ ಆಡಳಿತ ಭಾಷೆಯಾಗಿ ಅಳವಡಿಸಿಕೊಂಡದ್ದು ಅದಕ್ಕೆ ಸಾಕ್ಷಿ.

<u>ರಾಜ :</u>

ಬಹಮನಿ ಅರಸರ ಕಾಲಕ್ಕೆ ರಾಜನೇ ಸರ್ವಶ್ರೇಷ್ಠನಾಗಿದ್ದ. ಸೈನ್ಯ, ನ್ಯಾಯ, ಸಾರ್ವಜನಿಕ ಅಂಗಗಳೆಲ್ಲ ಆತನ ಅಡಿಯಲ್ಲಿದ್ದವು. ಆತನನ್ನು ಸಾಕ್ಷಾತ್‌ದೇವರ ಸರಿಯೆಂದು ಭಾವಿಸಲಾಗಿತ್ತು.[10] ಅದನ್ನೇ ಆದಿಲಷಾಹಿಗಳು 'ಸುಲ್ತಾನ' ಪದದಿಂದ ಗುರುತಿಸಿಕೊಂಡು 'ಸುಲ್ತಾನನು ಶಕ್ತಿಯ ಸಂಕೇತ ವೆಂದು' ಗೌರವಿಸಿದರು. ಮೊದಲಶ್ರೇಣಿಯ ಈ ಪದವಿಯನ್ನು ಮೊಘಲರು, ಪೇಶ್ವೆಗಳು, ಇದೇ ರೀತಿ ಮುಂದುವರಿಸಿಕೊಂಡು ಬಂದರು. ನಂತರ ಹೈದ್ರಾಬಾದ ನಿಜಾಮನು 'ನಿಜಾಮುಲ್ಮುಲ್ಕ" ಎಂದು ತನ್ನ ಹುದ್ದೆಯನ್ನು ತಾನೆ ಎತ್ತರಿಸಿಕೊಂಡ.

ಸುರಪುರ ಸಂಸ್ಥಾನವು ಸಹ ಪ್ರಾಂತ್ಯಾಡಳಿತವಾದರು ತನ್ನ ಮುಖ್ಯ ಅಧಿಕಾರಿಯನ್ನು 'ರಾಜ' ನೆಂದೆ ಸಾರಿಕೊಂಡಿತು. ಸಂಸ್ಥಾನದ ಸರ್ವ ಆಡಳಿತಕ್ಕೂ ಈತನೆ ಕೇಂದ್ರವ್ಯಕ್ತಿ. ದರ್ಬಾರ ನೇರಿದಾಗೊಮ್ಮೆ ಜನತೆಗೆ ಅವಶ್ಯವಿರುವ ಶಾಸನಗಳನ್ನು ರೂಪಿಸಿ, ಜಾರಿಗೆ ತರಲಾಗುತ್ತಿತ್ತು.

---

9. Dr.G.S.Dirit -Local Self: Government in Mediaval Karnataka p-179.

10. Second Cource in History, p-175.

ಇದಕ್ಕೆ ಆಳಿತ ವರ್ಗದ ಬೆಂಬಲ ಬೇಕೆನಿಸಿದರೂ ರಾಜನ ತೀರ್ಮಾನವೇ ಅಂತಿಮವೆನಿಸಿತ್ತು. ರಾಜನ ತರುವಾಯ ಯುವರಾಜ, ರಾಣಿ, ರಾಜಪ್ರತಿನಿಧಿಗಳ ಪಾತ್ರ ಇಲ್ಲಿ ಮುಖ್ಯವಾಗಿದೆ. ರಾಜ್ಯದ ರಾಜ ಅಶಕ್ತ, ವೃದ್ಧ, ರೋಗಿಯಾಗಿದ್ದರೆ ಯುವರಾಜ ಅಧಿಕಾರ ವಹಿಸಿಕೊಳ್ಳಬಹುದಿತ್ತು. ಒಂದು ವೇಳೆ ಯುವರಾಜ ಅಪ್ರಾಪ್ತ ವಯಸ್ಕನಾಗಿದ್ದರೆ ಪಟ್ಟದರಾಣಿಯರು ಆ ಸ್ಥಾನವನ್ನು ಅಲಂಕರಿಸುತ್ತಿದ್ದರು. ಆದರೆ ಪಟ್ಟದ ಮೇಲೆ ಕುಳಿತ ವ್ಯಕ್ತಿ ಅಪ್ರಾಪ್ತನಾಗಿದ್ದು, ತಾನು ಪಟ್ಟದರಸಿಯಾಗಿದ್ದರೆ ಮಾತ್ರ ರಾಜ್ಯದರ್ಬಾರದ ಅರ್ಹತೆಯಿತ್ತು. ಒಂದು ರೀತಿ ಇದು ರಾಜಪ್ರತಿನಿಧಿಯ ಇನ್ನೊಂದು ರೂಪವಷ್ಟೆ. ಇಂಥ ಸಂದರ್ಭಗಳು ಸಂಸ್ಥಾನದಲ್ಲಿ ಅನೇಕ ಸಲ ಬಂದಿವೆ. ಆಳಿತಿಯೂ ನಡೆದಿವೆ. ಆದರೆ ಬಹುದಿನ ಬದುಕಿಲ್ಲ.

<u>ದಿವಾನ (ಮಂತ್ರಿ):</u>

ಸರಕಾರಿ ಅಧಿಕಾರದ ಮುಖ್ಯಸ್ಥನ ಹುದ್ದೆ ಸೂಚಿಸುವ 'ದಿವಾನ' ಪದವು ಪರ್ಶಿಯನ್ ಮೂಲದ್ದು. ಇದನ್ನೇ ಪೇಶ್ವೆಗಳು ಅನುಸರಿಸಿದರು. ಸಂಸ್ಥಾನದಲ್ಲಿ ದಿವಾನ ಸ್ಥಾನ ರಾಜನಷ್ಟೆ ಮಹತ್ವಪೂರ್ಣವಾಗಿತ್ತು. ಆಳಿತದ ಎಲ್ಲಾ ಅಂಗಗಳು ಇವನ ಅಡಿಯಲ್ಲಿಯೇ ಕಾರ್ಯ ನಿರ್ವಹಿಸುತ್ತಿದ್ದವು. ಮುಖ್ಯವಾಗಿ ಸೈನ್ಯ, ಹಣಕಾಸು ಖಾತೆಗಳು ನೇರವಾಗಿ ದಿವಾನನ ಮುಖಾಂತರವೇ ನಿಯಂತ್ರಿಸಲ್ಪಟ್ಟಿದ್ದವು.

ಮಂತ್ರಿಯು ಬಹಮನಿ ಮತ್ತು ಆದಿಲಶಾಹಿ ಅರಸರಲ್ಲಿ 'ವಕೀಲ ಉಸ್ ಸುಲ್ತಾನ' ನೆಂಬ ಹೆಸರಿನಿಂದ ಗುರುತಿಸಲ್ಪಟ್ಟು ರಾಜನ ತರುವಾಯದ ಸ್ಥಾನವನ್ನು ವಹಿಸಿಕೊಂಡಿದ್ದನೆಂದು ಹೇಳಲಾಗಿದೆ. ಆದರೆ ಸಂಸ್ಥಾನದಲ್ಲಿ 'ವಕೀಲ' ನೆಂಬಾತ ಕೇವಲ ರಾಯಬಾರಿ ಮಾತ್ರ. ಪೇಶ್ವೆಗಳ ಆಳಿತ ರೂಢಿಯ 'ದಿವಾನ' ಪದ ಸುರಪುರದಲ್ಲೂ ಪ್ರಚಲಗೊಳಿಸಿ ಚಲಾವಣೆಗೆ ತರಲಾಗಿತ್ತು.

ಸುರಪುರವು 'ಬೇಡರ ರಾಜ್ಯ' ವಾಗಿರುವುದರಿಂದ ತಮ್ಮ ಸ್ವಜಾತಿಯ ಗುರಿಕಾರನನ್ನೇ ಈ ದಿವಾನ ಸ್ಥಾನಕ್ಕೆ ಏರಿಸಿದ ಬಗ್ಗೆ ದಾಖಲೆಗಳಿವೆ.

<u>ಮುಖ್ಯ ದಿವಾನರು:</u>

ಸುರಪುರ ಸಂಸ್ಥಾನದಲ್ಲಿ ಅನೇಕ ಜನ ದಿವಾನ (ಮಂತ್ರಿ) ರು ಆಗಿ ಹೋಗಿದ್ದಾರೆ. ವಾಗಿನಗೇರಿ ಕೋಟೆಯಿಂದ ಆರಂಭವಾದ ಆಳ್ವಿಕೆಯಲ್ಲಿ ಸ್ವತಃ ರಾಜರೆ ಎಲ್ಲಾ ಆಡಳಿತಾಂಗಗಳನ್ನು

ನೋಡಿಕೊಳ್ಳುತ್ತಿದ್ದರು. ಅಲ್ಲಿ ಮಾರ್ಗದರ್ಶಕ ಎಂಬಂಥ ಮಂತ್ರಿಗಳು ಮಾತ್ರ ಇದ್ದರು. ಸಂಸ್ಥಾನಕ್ಕೆ ಸುರಪುರ ನಗರ ರಾಜಧಾನಿಯಾದ ಮೇಲೆ ದಿವಾನರ ಅವಶ್ಯಕತೆ ಅತ್ಯವಶ್ಯವಾಯಿತು. ಅಂದಿನಿಂದ ಕಾರ್ಯನಿರ್ವಹಿಸುತ್ತ ಬಂದ ಕೆಲವು ಪ್ರಮುಖ ಮಂತ್ರಿಗಳನ್ನು ಮಾತ್ರ ಇಲ್ಲಿಯ ಸಮೀಕ್ಷೆಗೆ ಎತ್ತಿಕೊಳ್ಳಲಾಗಿದೆ.

<u>ನಿಷ್ಠಿ ಕಡ್ಲಪ್ಪ :</u> ಚಿಂಚೋಳಿ ತಾಲೂಕಿನ ಸುಲೇಪೇಟ ಗ್ರಾಮವು ಸುರಪುರಕ್ಕೆ ಮೂರು ಜನ ಮುಖ್ಯ ದಿವಾನರನ್ನು ಕೊಟ್ಟಿದೆ. ವರ್ತಕವೃತ್ತಿಯಲ್ಲಿದ್ದ ಈ ಪಟ್ಟಣಶೆಟ್ಟಿ ಕುಟುಂಬವೇ ಮುಂದೆ ಸಂಸ್ಥಾನದಲ್ಲಿ 'ನಿಷ್ಠಿ' ಮನೆತನವೆಂದು ಪ್ರಸಿದ್ಧವಾಯಿತು. ನಿಷ್ಠಿಯವರಲ್ಲಿ ಅನೇಕರು ಸಂಸ್ಥಾನದ ಸಿಬ್ಬಂದಿಯಾಗಿದ್ದರು. ಅವರಲ್ಲಿ ಕಡ್ಲಪ್ಪ, ವೀರಪ್ಪ, ಮಲಕಪ್ಪ ಮುಖ್ಯರಾದವರು.[11] ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಿಕ ಚಟುವಟಿಕೆಯ ಕೇಂದ್ರಬಿಂದುವಾದ ನಿಷ್ಠಿ ಕಡ್ಲಪ್ಪ 18ನೆಯ ಶತಮಾನದ ಅಂತ್ಯದಲ್ಲಿ ದಿವಾನ – ಪದವಿ ನಿರ್ವಹಿಸುತ್ತಿದ್ದ. ವೀರಶೈವ ಪರಂಪರೆ ಮತ್ತು ಸಂಸ್ಕೃತಿಯನ್ನು ಮುಂದುವರೆಸಿದ ಇವರು 101 ದಾಸೋಹ ಮಠಗಳನ್ನು ಹಾಗೂ 101 ಬಾವಿಗಳನ್ನು ನಿರ್ಮಿಸಿದನೆಂದು[12] ಐತಿಹ್ಯವಿದೆ. ಇವುಗಳ ನಿರ್ಮಾಣಕ್ಕೆ ಮುಖ್ಯ ಕಾರಣ ಸಂಸ್ಥಾನದಲ್ಲಿ ಆಗ ಬರಗಾಲ ವ್ಯಾಪಿಸಿ ಜನ ಅನ್ನ, ನೀರಿಲ್ಲದೆ ತತ್ತರಿಸಿ ಹೋಗಿದ್ದರು. ಅಂಥ ಭೀಕರ ಪರಿಸ್ಥಿತಿಯಿಂದ ಸಂಸ್ಥಾನವನ್ನು ರಕ್ಷಿಸಿದ ಕೀರ್ತಿ ಕಡ್ಲಪ್ಪನವರಿಗೆ ಸಲ್ಲುತ್ತದೆ.

<u>ನಿಷ್ಠಿ ಮಲಕಪ್ಪ :</u> ಇಮ್ಮಡಿ ವೆಂಕಟಪ್ಪನಾಯಕನ ಆಳ್ವಿಕೆಯಲ್ಲಿ ಮುಖ್ಯ ಅಧಿಕಾರಿಯಾಗಿ, ದಿವಾನನಾಗಿ ಸಂಸ್ಥಾನದ ಶಕ್ತಿಯಾಗಿ ಸೇವೆಸಲ್ಲಿಸಿದ ವ್ಯಕ್ತಿ ನಿಷ್ಠಿ ಮಲಕಪ್ಪ. ಈತನ ಕಾಲಕ್ಕೆ ನಗರದಲ್ಲಿ ಅನೇಕ ಕಟ್ಟಡಗಳು ತಲೆಯೆತ್ತಿದವು. ಇವುಗಳಲ್ಲಿ ಬಹು ಮುಖ್ಯವಾದದ್ದು ದರ್ಬಾರ ಸಭಾಂಗಣ.

<u>ನಿಷ್ಠಿ ವೀರಪ್ಪ :</u> ಚತುರ ರಾಜಕಾರಣಿ, ದಕ್ಷ ಅಧಿಕಾರಿ, ಮುತ್ಸದ್ದಿ ಮಂತ್ರಿಯಾದ ನಿಷ್ಠಿ ವೀರಪ್ಪ ಸಂಸ್ಥಾನದಲ್ಲಿ ಅತಿಹೆಚ್ಚು ಕಾಲ ದಿವಾನಗಿರಿ ನಿರ್ವಹಿಸಿದ ವ್ಯಕ್ತಿ. ಮುಮ್ಮಡಿ ಪಾಮನಾಯಕ ಹಾಗೂ ಇಮ್ಮಡಿ ವೆಂಕಟಪ್ಪನಾಯಕರ ಅಧಿಕಾರ ಅವಧಿಯಲ್ಲಿ ವೀರಪ್ಪ ಸಲ್ಲಿಸಿದ ಸೇವೆ ಅದ್ವಿತೀಯವಾದುದು. ರಾಜ್ಯದ ರಾಜನಿಂದ 'ಅಣ್ಣ' ನೆಂದೇ ಕರೆಯಿಸಿಕೊಳ್ಳುವ ಮಟ್ಟಿಗೆ ಗೌರವಾನ್ವಿತನಾಗಿದ್ದನು. ಆಡಳಿತದಲ್ಲಿ ನೂತನ ಪ್ರಯೋಗಗಳು ಬೆಳಕು ಕಂಡದ್ದು ಈತನ ಕಾಲಕ್ಕೆ ಎಂಬುದು ಅಭಿಮಾನದ ಸಂಗತಿ.

---

11. ಡಾ. ಬಿ. ಜಿ. ಪೂಜಾರ – (ಸಾರಂಗಶ್ರೀ.) ಲೇಖನ: ನಿಷ್ಠಿ ಸಚಿವ ಸಹೋದರರು. ಪುಟ-434.
12. ಡಾ ಬಿ. ಜಿ. ಪೂಜಾರ – ನಿಷ್ಠಿ ಕಡ್ಲಪ್ಪ ಮತ್ತು ವೀರಪ್ಪನವರು. ಪುಟ-13.

ಕಡ್ಲಪ್ಪನ ಅನೇಕ ಕಾರ್ಯಗಳನ್ನು ಮುಂದುವರಿಸಿದನಲ್ಲದೆ ಕಂದಾಯ ಇಲಾಖೆಯ ಉತ್ಕ್ರಾಂತಿಗೆ ಕಾರಣನಾದನು. ಈತ ನಿರ್ಮಿಸಿದ ಅನೇಕ ಕಟ್ಟಡ, ಕೋಟೆ, ಮಠ, ಭಾವಿ, ಕೆರೆ, ಕಾಲುವೆ, ಛತ್ರಗಳು ಎತ್ತಿ ಹೇಳಲೇಬೇಕಾದವು.

ಜೇವರ್ಗಿಯ ಪಣ್ಯಾಳ ಶಿವಯೋಗಿಗಳ ಮಠವನ್ನು ಈತನೇ ಕಟ್ಟಿಸಿದನೆಂದು ಅಲ್ಲಿಯ ಮಹಾದ್ವಾರದ ಮೇಲಿನ ಶಾಸನ ಸ್ಪಷ್ಟಪಡಿಸುತ್ತದೆ. ವೀರಪ್ಪನ ಕಾಲಕ್ಕೆ ಸಂಸ್ಥಾನದಲ್ಲಿ ಆದ ಮಹತ್ವದ ಬೆಳವಣಿಗೆಯೆಂದರೆ 'ಮುರ್ಕ್ಯವ್ಯವಸ್ಥೆ'' ಪ್ರಾಚೀನ ಕಂದಾಯಪದ್ಧತಿಯನ್ನು ನವೀಕರಿಸಿ ಫಲವತ್ತತೆ ಆಧಾರದ ಮೇಲೆ ನೂತನ ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತಂದನು. ನಗರದಲ್ಲಿ ಪ್ರವೇಶಿಸುವ ಮಾರಾಟ ವಸ್ತುಗಳ ಮೇಲೆ ಕರಹಾಕಿ ಸಂಸ್ಥಾನದ ಭಂಡಾರವನ್ನು ಶ್ರೀಮಂತಗೊಳಿಸಿದ ಏಕೈಕ ದಿವಾನನೆಂದರೆ ವೀರಪ್ಪ. ''ಸಂಸ್ಥಾನದ ನ್ಯಾಯಾಂಗಕ್ಕೆ ವೀರಪ್ಪ ಕಟ್ಟಿಸಿದ ಬಳ್ಳದ ಕಟ್ಟು, ನ್ಯಾಯದ ಕಟ್ಟುಗಳೇ ಅಂದು ಕಾನೂನುಗಳಾಗಿದ್ದವು'' —ಎಂದರೆ ಅಚ್ಚರಿಪಡಬಹುದು. ವ್ಯವಸಾಯದಲ್ಲಿ ವೈಜ್ಞಾನಿಕ ಬಳಕೆಯನ್ನು ಜಾರಿಗೊಳಿಸುವಲ್ಲಿ ಬಹುವಾಗಿ ಶ್ರಮಿಸಿದ ವೀರಪ್ಪ ಕೃಷ್ಣಾನದಿ ನೀರನ್ನು ಕಾಲುವೆ ಮೂಲಕ ಹರಿಸಿ ಸಂಸ್ಥಾನದ 105 ಹಳ್ಳಿಗಳಿಗೆ ನೀರಾವರಿ ಸೌಲಭ್ಯ ಒದಗಿಸಬೇಕೆಂದು ಯೋಜಿಸಿದ್ದ. ಅದಕ್ಕೆ 6 ಲಕ್ಷ ರೂ.ವೆಚ್ಚದ ಅಂದಾಜು ಸಹ ತಯಾರಿಸಿದ್ದ. ಆದರೆ ಸಂಸ್ಥಾನದ ಆರ್ಥಿಕ ಮುಗ್ಗಟ್ಟು ವೀರಪ್ಪನ ಈ ಕಾರ್ಯಕ್ಕೆ ತಡೆಯೊಡ್ಡಿತು. ಕೊನೆಯ ದಿನಗಳಲ್ಲಿ ವೀರಪ್ಪನ ಬದುಕು ಕಷ್ಟದಾಯಕವಾಗಿತ್ತು. ಸಂಸ್ಥಾನದ ಆಡಳಿತ ನೀತಿಗೆ ವಿರೋಧಿಯಾದನೆಂಬ ಆರೋಪದ ಮೇಲೆ ಬಂಧಿಸಿ ಬಿಡುಗಡೆಗೊಳಿಸಲಾಯಿತು.

<u>ಇತರರು :</u>

ಇಂಗ್ಲೀಷರ ಬೆಂಬಲದಿಂದ ರಾಣಿ ಈಶ್ವರಮ್ಮನ ಅಕ್ಕೆಯನ್ನೇ ಅಲುಗಾಡಿಸಿದ ದಿವಾನ ಪಿಡ್ಡನಾಯಕ ಅಧಿಕಾರಕ್ಕಾಗಿ ಬಂಡಾಯವೆದ್ದ ಮಂತ್ರಿ. ಸುರಪುರದ ಅರಸೊತ್ತಿಗೆಗೆ ಬರುವ ವ್ಯಕ್ತಿ ಅಪ್ರಾಪ್ತ ವಯಸ್ಕನಾಗಿರುವದರಿಂದ ನ್ಯಾಯಯುತವಾಗಿ ತನಗೆ ಆ ಪಟ್ಟ ಸಲ್ಲಬೇಕೆಂದು ಹಠ ಹಿಡಿದು ಹೋರಾಡಿದ. ಬ್ರಿಟಿಷ ಮತ್ತು ನಿಜಾಮ ಸರಕಾರಕ್ಕೆ ಸಂಸ್ಥಾನದ ಪಟ್ಟ ದೊರಕಿಸಿ ಕೊಟ್ಟರೆ ಅಪಾರ ಹಣ ನೀಡುವದಾಗಿ ವಾಗ್ದಾನ ಮಾಡಿದ್ದ. ಆಡಳಿತದಲ್ಲಿ ಬಿಕ್ಕಟ್ಟು ತಲೆದೋರಿದಾಗ ಬ್ರಿಟಿಷ ಅಧಿಕಾರಿಯೊಬ್ಬ ನ್ಯಾಯನೀಡಲು ಸಂಸ್ಥಾನಕ್ಕೆ ಬರಬೇಕಾಯಿತು. ಬಂದ ಬ್ರಿಟಿಷ ಅಧಿಕಾರಿ

ಪಿಡ್ಡನಾಯಕನ ಪಾದವನ್ನೇ ಎತ್ತಿ ಹಿಡಿದು ಆತನ ಹಿತಾಭಿವೃದ್ಧಿ ಕಾಪಾಡುವಲ್ಲಿ ಯಶಸ್ವಿಯಾದನು. ರಾಜಪ್ರತಿನಿಧಿಯಾಗಿದ್ದ ಈಶ್ವರಮ್ಮಳನ್ನೇ ಪದಚ್ಯುತಗೊಳಿಸುವಲ್ಲಿ ಒಳಸಂಚು ನಡಿಸಿ ಸಿಂಹಪಾಲು ಜಯಶೀಲನಾದ. ಕೊನೆಗೆ ಈಶ್ವರಮ್ಮನ ಅವಮಾನ ಬಳಿಕ ಶಕ್ತಿಯುತವೆಂದೆನಿಸಿದಾಗ ರಾಜ ಪದವಿ ಬಿಟ್ಟು ದಿವಾನ ಹುದೆಗೆ ಪಿಡ್ಡನಾಯಕ ತೃಪ್ತಿಪಟ್ಟುಕೊಳ್ಳಬೇಕಾಯಿತು.

ದಿವಾನ ಪಿಡ್ಡನಾಯಕನ ಅಧಿಕಾರ ಅವಧಿಯಲ್ಲಿ ಸಂಸ್ಥಾನದ ಪ್ರಜಾನತ್ತೆ ಸಂತೃಪ್ತಿ ಪಡುವಂಥ ಕೆಲಸಗಳೇನು ಕಂಡಿಲ್ಲ. ಅಧಿಕಾರಕ್ಕೆ ಕಚ್ಚಾಟ, ಪದಚ್ಯುತರಾಗಿ ಪಿತೂರಿ ಮಾಡುವದರಲ್ಲೇ ಈತನ ಸಮಯ ಸರಿದುಹೋಯಿತು. ಬ್ರಿಟಿಷ ಸರಕಾರದಿಂದ ನಿಜಾಮನಿಗೆ ಸಾಲದ ನ್ಯಾಯ ದೊರಕಿಸಿಕೊಡಲು 'ರಾಜಕೀಯ ಪ್ರತಿನಿಧಿ' ಯಾಗಿ ಬಂದಿದ್ದ ಮೆಡೋಸ ಟೇಲರನೆ ಸಂಸ್ಥಾನದ ಸಂಪೂರ್ಣ ಅಧಿಕಾರ ಚಲಾಯಿಸುತ್ತಿದ್ದ. ವಾಸ್ತವವಾಗಿ ಸಂಸ್ಥಾನದ ರಾಜ, ಹಾಗೂ ಆಡಳಿತ ವರ್ಗ ಟೇಲರನ ಹಿಡಿತದಿಂದ ಗ[illegible]ಗೊಂಡರು.

ನಾಲ್ವಡಿ ವೆಂಕಟಪ್ಪನಾಯಕನು ಸುರಪುರದ ಅಧಿಕಾರ ಹಿಡಿದಾಗ ದಿವಾನನಾಗಿ ಬಂದ ಭೀಮರಾಯ ವೈವಿಧ್ಯಮಯ ಒಳಸಂಚುಗಾರ. ಈ ದೃಷ್ಟಿಯಿಂದ ಪಿಡ್ಡನಾಯಕ ಎಷ್ಟೋ ಪಟ್ಟು ಉತ್ತಮ. ಬ್ರಿಟಿಷ ದಾಖಲೆಗಳಲ್ಲಿ ದಿವಾನ ಭೀಮರಾಯನನ್ನು ಶಿಷ್ಟಾಚಾರಿ, ಶೀಲವಂತ, ದಕ್ಷಾಧಿಕಾರಿ ಎಂದೆಲ್ಲ ವರ್ಣಿಸಿರುವುದನ್ನು ನೋಡಿದರೆ ಈತನ ಸ್ವದೇಶಾಭಿಮಾನದ ವ್ಯಂಗ್ಯವಾಗಿದೆ. ಇಂಥ ರಾಜ್ಯ ವಿರೋಧಿ ನೀತಿಯ ದೃಷ್ಟಿಯಿಂದಲೇ ದಿವಾನ ಹುದ್ದೆಯ ಉಚ್ಚಾಟನೆಗೊಳ್ಳಬೇಕಾಯಿತು.

ಇದುವರೆಗೆ ಒಳಸಂಚುಗಳಲ್ಲಿ ಮುಖತೋರಿಸಿದ್ದ ಭೀಮರಾಯನಿಗೆ ರಾಜನ ವಿರುದ್ಧ ಬಹಿರಂಗ ಬಂಡಾಯ ಸಾರಿರಲು ದೇವದುರ್ಗದ ಶತ್ರುಶಿಬಿರದಲ್ಲಿ ಮುಖ್ಯಸ್ಥಾನ ಸಿಕ್ಕಿತು. ಅದಕ್ಕೆಲ್ಲ ಈತನೆ ಸೂತ್ರಧಾರಿಯೂ ಆದನು. ಕೊನೆಗೆ ಸಂಸ್ಥಾನದ ವಿರೋಧಿ ಬಣದಿಂದ ಮತ್ತು ಬ್ರಿಟಿಷರ ಬಲದ ಒತ್ತಾಯದಿಂದ ಭೀಮರಾಯನಿಗೆ ಮರಳಿ ದಿವಾನ ಪದವಿಯನ್ನು ಸುರಪುರದ ರಾಜ ನೀಡಿದ. " ಇಲ್ಲಿಂದಲೇ ಸುರಪುರದಲ್ಲಿ ಕರಾಳ ಅಧ್ಯಾಯವೊಂದರ ಪೀಠಿಕೆ ಆರಂಭಗೊಂಡಿತು. ಬ್ರಿಟೀಷ ಅಧಿಕಾರಿ ಕ್ಯಾಂಬೆಲ್ಲನೊಂದಿಗೆ ಕೈಗೂಡಿಸಿ ಎರಡುನೂರು ವರ್ಷ ಇತಿಹಾಸ ಹೊತ್ತ ಸುರಪುರದ ಸಂಸ್ಥಾನವನ್ನು ಪತನಗೊಳಿಸಿದನು " ಎಂಬಿತ್ಯಾದಿ ಆರೋಪಗಳು ಭೀಮರಾಯನ ಮೇಲಿವೆ.

1. ಸಂಬಳದ ವರ್ಗ :

ಸಂಸ್ಥಾನದಲ್ಲಿ 'ಧುನಿ' ಒಂದು ಸೈನ್ಯಭಾಗದ ಮುಖ್ಯಸ್ಥರಾಗಿದ್ದರು. ದರ್ಬಾರಕ್ಕೆ ರಾಜ ಬರುವಾಗ ಇವರು ಕುಳಿತುಕೊಂಡೇ ಗೌರವ ನೀಡುತ್ತಿದ್ದ ಸರ್ದಾರರು ಇವರಾಗಿದ್ದರು.[13] ಮೂಲತಃ ಇವರು ವಿಜಾಪೂರ ರಾಜ್ಯದ ಸೈನ್ಯಾಧಿಪತಿಗಳಾಗಿದ್ದರಿಂದ ಸಂಸ್ಥಾನದಲ್ಲಿ ಪ್ರತಿಯಾಗಿ ಈ ಸನ್ಮಾನ ಸಿಕ್ಕಿತ್ತು. ಮುಸ್ಲಿಂ ರಾಜ್ಯಗಳಲ್ಲಿ 'ನಜೀರ' ನೆಂಬಾತ ರಾಜ್ಯದ ಲೆಕ್ಕಪತ್ರಗಳನ್ನು ನೋಡಿಕೊಂಡರೆ, ಸಂಸ್ಥಾನದಲ್ಲಿ 'ಮುಜುಮದಾರ' ನು ಹಣಕಾಸು ಖಾತೆಯ ಲೆಕ್ಕಪರಿಶೋಧಕನಾಗಿದ್ದ. ಇಡೀ ಸಂದರ್ಭದಲ್ಲಿ 'ಮುಲ್ಕಿ ಖಾತೆ' ಯೊಂದನ್ನು ಆರಂಭಿಸಿ ಅಲ್ಲಿ ದಫ್ತರದಾರ, ಜಮದರ್ಯಾನಿ, ಮುಜುಮದಾರ ಮುಂತಾದ ಹುದ್ದೆಗಳನ್ನು ಸೃಷ್ಟಿಸಲಾಗಿತ್ತು. ಇವರು 'ದಿವಾನ' ನ ಅಧಿಕಾರ ವ್ಯಾಪ್ತಿಗೆ ಒಳಪಟ್ಟವರಾಗಿದ್ದರು. ಅಬೀರ, ಹೇಜಬ ಇವರ ತರುವಾಯದ ಸ್ಥಾನ ಪಡೆದಿದ್ದರು. ಮುಂದೆ ನಿಜಾಮನ ಕಾಲಕ್ಕೆ ಇವರು ನಿರ್ವಹಿಸಿದ ಕೆಲವು ಹುದ್ದೆಗಳೆ 'ಮುನ್ಸಿ' ಎಂದು ಪರಿವರ್ತಿಸಲಾಯಿತು.

ವಕೀಲನು ಅನ್ಯರಾಜ್ಯದಲ್ಲಿ ರಾಜನ ಅಧಿಕೃತ ಪ್ರತಿನಿಧಿಯಾಗಿದ್ದ. ಆದರೆ ಇಲ್ಲಿ 'ರಾಯಬಾರಿ' ಯಾಗುವ ಅಧಿಕಾರ ಹೊಂದಿದ್ದ. ಅಲ್ಲದೆ ಅರಮನೆಯ ಉಸ್ತುವಾರಿಯನ್ನು ಸಹ ಈತನೆ ನಿರ್ವಹಿಸುತ್ತಿದ್ದನೆಂದು ತಿಳಿಯುತ್ತದೆ. ಸೈನ್ಯದ ಇನ್ನೊಬ್ಬ ಮುಖ್ಯಸ್ಥನೆಂದರೆ 'ಹವಾಲ್ದಾರ'. ಈತನಿಗೆ 'ಕಿಲ್ಲೆ' ಗಳ ಜವಾಬ್ದಾರಿ ನೀಡಲಾಗಿತ್ತು. ಆದ್ದರಿಂದಲೇ ಕೆಲವೆ ಕಿಲ್ಲೆದಾರ, ಠಾಣೆದಾರನೆಂಬ ಹೆಸರುಗಳು ಹವಾಲ್ದಾರನಿಗೆ ಪ್ರಾಪ್ತವಾಗಿವೆ. ಮೊಘಲರು ಮೇಲೆ ಆಕ್ರಮಣ ಮಾಡುತ್ತಿದ್ದಾಗ ಸುರಪುರದ ಸರ್ದಾರ, ಸುಭೇದಾರ, ಹವಾಲ್ದಾರ, ಸಿಲೇದಾರ, ಕಿಲ್ಲೆದಾರ, ಜಮಾದಾರ ಎಂಬ ಕೆಲವು ಶ್ರೇಣಿಗಳನ್ನು ಹವಾಲ್ದಾರ ಹುದ್ದೆಗೆ ಸಮನಾಗಿ ಸ್ಥಾಪಿಸಿಕೊಂಡಿತ್ತು. 'ಹವಾಲ್ದಾರ' ನ ಮೇಲೆ 'ಸರಹವಾಲ್ದಾರ', ನೌಬತ್ತನ ಮೇಲೆ ಸರನೌಬತ್ತರಿದ್ದರು. ಸಮಂತ ಮತ್ತು ಪರಗಣೆಗಳಿಗೆ ದೇಸಾಯಿ, ನಾಡಗೇರರ, ಸಂಗಮ ಸೇವೆ ಒದಗಿಸಲಾಗಿತ್ತು. ಎತ್ತಿದ ಕಂದಾಯವನ್ನು ಹವಾಲ್ದಾರ ಪಡೆದು ಠಾಣೆದಾರನ ಮೂಲಕ ಅದನ್ನು ಕಿಲ್ಲೆದಾರನು ಸರಕಾರಿ ಖಜಾನೆಗೆ ತುಂಬುತ್ತಿದ್ದ. ಪರಗಣದ ಮುಖ್ಯಸ್ಥರಾದ ದೇಶಮುಖ, ದೇಶಪಾಂಡೆ, ದೇಶಕುಲಕರ್ಣಿ ಮುಂತಾದ ಹುದ್ದೆಗಳು ಮೇಲಿನ ವ್ಯಕ್ತಿಗಳಿಗೆ ಪರ್ಯಾಯವಾಗಿ ಪ್ರಯೋಗಿಸಲ್ಪಟ್ಟವೆ.

---

13. ಸು.ಸಂ.ಇ., ಪುಟ-127.

ಸಂಸ್ಥಾನದಲ್ಲಿದ್ದ ಸಣ್ಣಪುಟ್ಟ ಅಧಿಕಾರ ವ್ಯಕ್ತಿಗಳು ಬಹುಪ್ರಮುಖ ಕಾರ್ಯದಲ್ಲಿ ತೊಡಗಿದ್ದರು. 'ನಾಯಕವಾಡಿ' ಊರಿನ ಜವಾಬ್ದಾರಿ ಹೊತ್ತಿದ್ದ. ಊರಲ್ಲಿ ಯಾರೇ ಅಪರಿಚಿತರು ಪ್ರವೇಶ ಬಯಸಿದರೂ ಈತನ ಅಪ್ಪಣೆ ಬೇಕಿತ್ತು. ಊರ ಜನರಲ್ಲಿಯ ಸಣ್ಣ ಸಣ್ಣ ಕಲಹಗಳನ್ನು 'ಕಟ್ಟೆಮನಿ' ಯಲ್ಲಿ ತಂದು ಕೊಡುವ ಕೆಲಸ ಸಹ ಈತನದೇ ಆಗಿತ್ತು. ಹೀಗೆ ನಾಯಕವಾಡಿ ಊರನ್ನು ಹಗಲಿರುಳು ಸಂರಕ್ಷಿಸಿದರೆ, ಧಾನ್ಯಗಳಿಂದ ತುಂಬಿದ ಹೊಲದ ಬೆಳೆಯನ್ನು ಕಾಯುವ ಕೆಲಸ 'ಕವಲ್ದಾರ' ನಿರ್ವಹಿಸುತ್ತಿದ್ದ. ಊರಿನ ರೈತರ ಹೊಲದ ಬೆಳೆಗಳನ್ನು ಕಳ್ಳರಿಂದ ರಕ್ಷಿಸುವಲ್ಲಿ ಸದಾ ಕಾವಲು ಇರುತ್ತಿದ್ದ ಕವಲ್ದಾರನಿಗೆ ಸಂಸ್ಥಾನವು ಒಂದು ಮದ್ದಿನ ಬಂದೂಕನ್ನು ನೀಡಿತ್ತು. ಬೇರೆ ರಾಜ್ಯದ ಸುದ್ದಿಯನ್ನು ಅರಮನೆಯ ಅಧಿಕಾರಿಗಳಿಗೆ ತಲುಪಿಸುವ ಸುದ್ದಿ ವಾಹಕನಿಗೆ 'ಹರಕಾರ' ಎನ್ನಲಾಗಿದೆ. ಗೆಜ್ಜೆಯಿಂದ ಕೋಲು ಹಿಡಿದು ನಗರದಲ್ಲಿ ಬಂದನೆಂದರೆ ಯಾವುದೇ ಮಹತ್ವದ ವಾರ್ತೆ ತಂದಿರುವನೆಂದೇ ಅರ್ಥ. ನಗರದ ಆಚೆಯಲ್ಲಿ ನಿಂತು ಹೊರಗಿನಿಂದ ಬರುವ ಯಾವುದೇ ಸಂಗತಿಗಳನ್ನು ಮೊದಲು ಸಂಸ್ಥಾನದ ಅಧಿಕಾರ ವರ್ಗಕ್ಕೆ ತಲುಪಿಸುತ್ತಿದ್ದ ಈತನಿಗೆ ಸಂದೇಶವಾಹಕ, ಪತ್ರಕಾರ, ಗುಪ್ತಚರ ಸದಸ್ಯನೆಂದು ಕರೆಯಲಾಯಿತು. ಮುಂದೆ ಇದು ಕೆಲವು ಸುದ್ದಿಗಳನ್ನು ತಲುಪಿಸುವ, ತರುವ ಪ್ರಯುಕ್ತ ಈತನಿಗೆ ತಳವಾರ, ಓಲೆಕಾರನೆಂದು ಪರಿವರ್ತಿಸಲಾಯಿತು. ಕಳ್ಳರನ್ನು ಹಿಡಿಯುವ ವ್ಯಕ್ತಿಗಳಿಗೆ 'ದೋರಗಸ್ತಿ' ಯವರೆಂದು ಕರೆಯಲಾಗಿದೆ. ಇವರು ನಗರದಲ್ಲಿ ರಾತ್ರಿಯಿಡೀ ಸಂಚರಿಸುತ್ತ, ಕಳ್ಳರ ಕಾವಲುಗಾರರಾಗಿರುವವರಾಗಿದ್ದರು. ರಾಜನು ದರ್ಬಾರು ಪ್ರವೇಶಿಸುವಾಗ ಆತನ ಬಿರುದಾವಳಿಗಳನ್ನು ಹೊಗಳುವ ಗುಂಪೊಂದು ಸಂಸ್ಥಾನದಲ್ಲಿತ್ತು. ಅವರಿಗೆ 'ಚೋಬದಾರ' ರೆಂದು ಸೂಚಿಸಲಾಗಿದೆ. ಇವರ ಕೈಯಲ್ಲಿ ಬೆಳ್ಳಿಯ ಬೆತ್ತವೊಂದು ಇರುತ್ತಿತ್ತು. ನ್ಯಾಯದಂಡ, ರಾಜ್ಯದಂಡ, ಜಾತಿದಂಡ, ದಿವಾನದಂಡ ಇನ್ನಿತರ ದಂಡಗಳಂತೆ ಇದೊಂದು ರೀತಿಯ 'ರಾಜದಂಡ' ವೆನ್ನಬಹುದು.

ಇದುವರೆಗೆ ಹೇಳಲಾದ ಹಲವು ವೃತ್ತಿ, ಹುದ್ದೆಗಳು ಸಂಸ್ಥಾನದಲ್ಲಿ ಸಂಬಳದಿಂದ ನಡೆಸಲ್ಪಟ್ಟಿದ್ದವು. ಅಂಥಾ ವೃತ್ತಿಗೆ ನೇಮಕಗೊಂಡ ವ್ಯಕ್ತಿ ಮಾಸಿಕ ವೇತನವನ್ನು ಪಡೆಯುವ ಅರ್ಹತೆ ಪಡೆದಿದ್ದ.

2. ಸ್ವತಂತ್ರ ವರ್ಗ:

ಆದಿಲಶಾಹಿ, ಪೇಶ್ವೆಗಳಲ್ಲಿ 'ಜಹಗೀರು' ಹಾಕಿಕೊಡುವ ಪದ್ಧತಿ ಇತ್ತು. ಇವರು ಸಂಸ್ಥಾನಿಕರಾಗುವ ಮೊದಲು ಅಂಥಾ 'ಜಹಗೀರು' ಗಳಿಗೆ 'ಜಹಾಗೀರದಾರ' ಎನಿಸಿಕೊಳ್ಳುತ್ತಿದ್ದರು. ಸುರಪುರ ಸಂಸ್ಥಾನದಲ್ಲಿ ಜಹಗೀರದಾರರು ಕಂದಾಯದ ಸ್ವಾತಂತ್ರ್ಯ ಪಡೆದವರಾಗಿ, ಪ್ರತ್ಯೇಕ ಆಡಳಿತಾಂಗ ಹೊಂದಿದ್ದರೆಂಬುದು ತೋರುತ್ತದೆ. ಆದರೆ ಕೊನೆಯ ತೀರ್ಮಾನ ಮಾತ್ರ ಸಂಸ್ಥಾನದ ಕೇಂದ್ರ ಆಡಳಿತದಿಂದಲೇ ನಿರ್ಣಯಿಸಲ್ಪಡುತ್ತಿತ್ತು. ಆದುದರಿಂದ ಹಲವು ಜಹಗೀರುಗಳ ಸಂಸ್ಥಾನಕ್ಕೆ ಕಂದಾಯ ನೀಡುವ ಮೂಲಗಳಾಗಿದ್ದವು. 'ಜಹಗೀರು' ಗಳು ಊಳಿಗಮಾನ್ಯದ ಗೇಣಿ ಪದ್ಧತಿಯನ್ನೇ ಅನುಸರಿಸಿದ್ದವೆನ್ನಲು ಸಂಸ್ಥಾನದಲ್ಲಿ ಅನೇಕ ಉದಾಹರಣೆಗಳು ದೊರೆತಿವೆ. ಅಲ್ಲದೆ ಇವುಗಳನ್ನು ಅಂಥಾ ಪ್ರಬಲ ವ್ಯಕ್ತಿಗಳಿಗೆ ಕಂದಾಯದ ಆಧಾರದ ಮೇಲೆ ವಂಶಪಾರಂಪರ್ಯ ಅನುಭೋಗಕ್ಕಾಗಿ ಬಿಡಲಾಗಿತ್ತು. ಆದರೆ ಇವುಗಳ ಮೇಲೆ ಕಂದಾಯದ ನಿರ್ಬಂಧವಿರಲಿಲ್ಲ ಎಂಬ ಹೇಳಿಕೆ[14] ಸಂಸ್ಥಾನದ ಆಡಳಿತ ವ್ಯವಸ್ಥೆ ಓದಿದವರಿಗೆ ನಿಜವೆನಿಸದು. ಸುರಪುರವು ಹೊಂದಿದ್ದ ಎಲ್ಲಾ ಜಹಗೀರುಗಳಲ್ಲಿ 213 ಹಳ್ಳಿಗಳಿಂದ ಕೂಡಿದ ಜಹಗೀರು ಅತಿದೊಡ್ಡದೆನಿಸಿದೆ.[15] ಅತ್ಯಂತ ಸಣ್ಣ ಜಹಗೀರುಗಳೆಂದರೆ 5 ಹಳ್ಳಿಯವು ಇದ್ದವು. ಹಲವು ಜಾಹಾಗೀರುಗಳು ಸಂಸ್ಥಾನದ ರಾಜಪರಿವಾರ ಮತ್ತು ಸೇವಕ ವೃತ್ತಿಯವರಿಗೆ ಬಿಟ್ಟುಕೊಡಲಾಗಿತ್ತು. ಇವು ಉಪಜೀವನದ ಉದ್ದೇಶ ಹೊಂದಿದವುಗಳು ಆಗಿರುವದರಿಂದ 'ಇನಾಮು' ಎನಿಸಿಕೊಳ್ಳುತ್ತವೆ. ಇಂಥವು ಮಾತ್ರ ಕಂದಾಯ ವ್ಯಾಪ್ತಿಯಿಂದ ವಿನಾಯಿತಿ ಪಡೆದಿದ್ದವು. ಇವುಗಳ ಮೇಲೆ ಹಕ್ಕು ಪಡೆದ ಇನಾಮದಾರರಿಗೆ ಜಹಗೀರುದಾರರೆಂದು ಕರೆಯುವಂತಿರಲಿಲ್ಲ.

ಆಡಳಿತದಲ್ಲಿಯ ಇನ್ನೊಂದು ಮುಖ್ಯ ವಿಭಾಗವೆಂದರೆ 'ಮಮಾಲೆ' ಬ್ರಿಟಿಷರು ರೂಪಿಸಿದ ಜಿಲ್ಲೆಯಷ್ಟು ಇದರ ವ್ಯಾಪ್ತಿ. ಮಮ್ಲತದಾರನೆ ಇದರ ಮೇಲಿನ ಉಸ್ತುವಾರಿ, ಈತ ಅಲ್ಲಿಯ ಚಿಕ್ಕ ಘಟಕದ ಅಧಿಕಾರಿಗಳೊಂದಿಗೆ ಬೆರೆತು ಕೇಂದ್ರ ಸರಕಾರಕ್ಕೆ ಕೊಂಡಿಯಾಗಿ ನಡೆಯಬೇಕಿತ್ತು. ಸಂಸ್ಥಾನದಲ್ಲಿ ಪ್ರಮುಖವಾಗಿ ನಾಲ್ಕು ಮಾಮಲೆಗಳಿದ್ದವು. ಇವುಗಳಿಗೆ ಇದ್ದ ಒಬ್ಬೊಬ್ಬ ಮಾಮಲೆದಾರ ಸುರಪುರದ ಅಭಿವೃದ್ಧಿಯಲ್ಲಿ ತೊಡಗಿದ್ದ.

ಪ್ರತ್ಯೇಕವಾಗಿ ಕಂದಾಯದ ಬಾಬತ್ತಿಗೆ ಸಂಬಂಧಪಟ್ಟ 'ಜಮೀನುದಾರ' ಹುದ್ದೆಯು ಸ್ಥಳೀಯ ಕಂದಾಯದ ಉಸ್ತುವಾರಿಗೆ ಚೇತನ ಹೊಂದಿತ್ತು. ಶೇಖರಣೆಯಾದ ಕಂದಾಯದಲ್ಲಿ

---

14. TBRPS p-295
15. " p-62.

ತನ್ನ ಪಾಲು ಪಡೆದು ಉಳಿದ ಎಲ್ಲವನ್ನೂ ಸರಕಾರಕ್ಕೆ ಸಲ್ಲಿಸುವ ಹಕ್ಕು ಜಮೀನುದಾರ ಪಡೆದವನಾಗಿದ್ದ. ಇದಕ್ಕಾಗಿ ಇವರಿಗೆ ಸಂಸ್ಥಾನದಿಂದ ಜಮೀನುಗಳನ್ನು ವಂಶಪಾರಂಪರ್ಯವಾಗಿ ಬಿಡಲಾಗಿತ್ತು. ಇದನ್ನು 'ವತನದಾರಿಕೆ' ಯ ಇನ್ನೊಂದು ರೂಪವೆಂದು ಕೆಲವೆಡೆ ಕರೆದಿದ್ದಾರಾದರೂ ಅದು ಭಿನ್ನ ಅರ್ಥ ಕೊಡುತ್ತದೆ. 'ಸಮತು, ಪರಗಣೆಗಳನ್ನು ದೇಸಾಯಿ, ದೇಶಪಾಂಡೆಗಳ ಮೇಲ್ವಿಚಾರಣೆಯಲ್ಲಿ ಬಿಡಲಾಗಿತ್ತು. ಇಂಥ ಹತ್ತೆಂಟು ಸಮತುಗಳಿಂದ ಕೂಡಿದ 'ಮಾಮಲಿ' ಗೆ ಒಬ್ಬ ಜಮೀನುದಾರನಿರುತ್ತಿದ್ದ. ಈತನಿಗೆ ಸರದೇಸಾಯಿ ಎಂತಲೂ ಕರೆಯಲಾಗಿತ್ತು. ಸಸರತಾಬಾದ ಒಂದು ಮಾಮಲಿಯಾಗಿತ್ತು.[16] ಎನ್ನುವ ವಿವರಣೆ ವಿಚಾರಾರ್ಹ.

ಮೊಘಲಸರಕಾರದಲ್ಲಿ ಸೈನ್ಯಾಧಿಕಾರಿಯಾಗಿದ್ದ 'ಮನಸಬದಾರಿ' ಯು 'ಸುರಪುರ ಸಂಸ್ಥಾನದಲ್ಲಿ ನಾಗರಿಕ ಆಡಳಿತಾಧಿಕಾರಿಯೆನಿಸಿದ. ಒಂದು ಅಂದಾಜಿನ ಪ್ರಕಾರ ಈತ ಹತ್ತುಸಾವಿರ ಜನಸಂಖ್ಯೆಯ ವ್ಯಾಪ್ತಿಗೆ ಒಡೆಯನಾಗಿದ್ದ. ಇಂಥ 'ಮನಸಬದಾರಿ' ಗೂ ಪಿತ್ರಾರ್ಜಿತ ಆಸ್ತಿ ಹಕ್ಕನ್ನು ಸಂಸ್ಥಾನ ದಯಪಾಲಿಸಿತ್ತು. ಅದಕ್ಕಾಗಿ ಇವರೂ ಸಹ ಮಮ್ಲತದಾರರಂತೆ ಆಗಾಗ ಅಧಿಕಾರ ಚಲಾಯಿಸಲು ಅರ್ಹತೆಯುಳ್ಳವರಾಗಿದ್ದರು. ಇದು ಪೂರ್ವದಲ್ಲಿ ಅಂದರೆ, ಬಹಮನಿ ಸುಲ್ತಾನರ ಕಾಲದಲ್ಲಿ ಅತ್ಯಂತ ದೂರದ ಪ್ರದೇಶಗಳನ್ನು ನೋಡಿಕೊಳ್ಳಲು ಇರಿಸಿದ ಅಧಿಕಾರ ವರ್ಗ ಇದಾಗಿತ್ತು. ನಂತರ ಆದಿಲಶಾಹಿ, ಶಿವಾಜಿ ಸಹ ಇದನ್ನೇ ಅನುಸರಿಸಿದರಾದರೂ 'ಪರಗಣ' 'ಸುಭಾ' ಗಳನ್ನು ಜಹಗೀರ ನರಿಗೇ ಸೀಳಿ ಆಡಳಿತಕ್ಕೆ ಅನುಕೂಲಮಾಡಿಕೊಂಡರು.[17] ಇವುಗಳ ವರ್ಗಾವಣೆ ಅಧಿಕಾರ ಮಾತ್ರ ಸುಲ್ತಾನನಿಗೆ ಇತ್ತು. ದೊರೆತ ಇನ್ನೊಂದು ದಾಖಲೆಯ ಪ್ರಕಾರ ಹೇಳುವುದಾದರೆ — 'ಹೋಬಳಿ' ಯೊಂದರ ವ್ಯಾಪ್ತಿಯಲ್ಲಿ 'ಸುಭೆ' ಗಳನ್ನು ಮಾಡಲಾಗಿತ್ತು. ಇದರ ನಿರ್ವಹಣೆಗೆ ಸುಭೇದಾರನೋರ್ವನಿದ್ದ. ಇಂಥ ಒಂಬತ್ತು ಜನ ಸುಭೇದಾರರು ಇಮ್ಮಡಿ ವೆಂಕಟಪ್ಪನಾಯಕನ ಆಳ್ವಿಕೆಯಲ್ಲಿದ್ದರು.

ಅನೇಕ ಹಳ್ಳಿಗಳನ್ನು ಒಳಗೊಂಡ ಜನವಸತಿಯ ಕೇಂದ್ರಸ್ಥಾನವನ್ನು ಕಂದಾಯ ಘಟಕವಾಗಿ ಮಾಡಲಾಗಿತ್ತು. ಅದಕ್ಕೆ 'ವತಾಜಿ' ಎಂದು ಕರೆದು, ನಿಯಮಿತವಾಗಿ ಹಳ್ಳಿಗಳನ್ನು ಇದರ ಜೊತೆ ವ್ಯವಹರಿಸುವಂತೆ ವ್ಯವಸ್ಥೆ ಕಲ್ಪಿಸಲಾಗಿತ್ತು.

---

16. ಶ.ತಾ.ದ. ಪುಟ-58.
17. V.T.Gune - The Judicial System of the Marath's p-10.

ತೆರಿಗೆ ಎತ್ತುವ ಕಂದಾಯ ಕೇಂದ್ರವೆಂತಲೂ ಕರೆಯುವ 'ಮೊಕಾಸ' ಗಳು ಸಂಸ್ಥಾನದಲ್ಲಿ ಸಾಕಷ್ಟಿದ್ದವು. ಇದರ ಮೇಲಿನ 'ಮೊಕಾಶಿ' ಎಂಬ ಅಧಿಕಾರಿ ಗ್ರಾಮ ಘಟಕಗಳೊಂದಿಗೆ ಹೊಂದಿಕೊಂಡಿದ್ದ. 'ಮೊಕಾಸ' ಗಳು 'ಕಸಬಾ' ದಷ್ಟು ವಿಸ್ತೀರ್ಣವನ್ನು ಹೊಂದಿದ್ದವೆನ್ನಲು ಇನ್ನೂ ಶೋಧಿಸಬೇಕಿದೆ.

'ಸ್ವತಂತ್ರ ವರ್ಗ' ದಲ್ಲಿ ಸೇರಿರುವ ಮೇಲಿನವರು ಸಂಸ್ಥಾನದ ಮುಖ್ಯಭಾಗಗಳಾಗಿದ್ದರು. ಆಡಳಿತ ಯಂತ್ರಕ್ಕೆ ಒದಗಿಸುವ ಕಂದಾಯ ಬಾಬತ್ತು ಇವರ ಮೂಲಕವೇ ಸಂಸ್ಥಾನದ ಖಜಾನೆಗೆ ಹರಿದು ಬರುತ್ತಿತ್ತು. ಇದರಲ್ಲಿ ಕೆಲವರಿಗೆ ವೃತ್ತಿಫಲವೆಂದು ಜಹಗೀರು ಬಿಟ್ಟಂತೆ ಸಂಬಳದ ರೂಪದಲ್ಲಿ ವಸ್ತು, ಧವಸ ಧಾನ್ಯಗಳನ್ನು ನೀಡುತ್ತಿದ್ದ ಬಗ್ಗೆ ಉಲ್ಲೇಖಗಳಿವೆ.

18 ನೆಯ ಶತಮಾನದ ಅಂತ್ಯದಲ್ಲಿ ಸಂಸ್ಥಾನವು ಪ್ರಖ್ಯಾತ ಅರಸು ಇಮ್ಮಡಿ ವೆಂಕಟಪ್ಪ ನಾಯಕನ ಆಳ್ವಿಕೆ ಹೊಂದಿತ್ತು. ಆಗ ನಿರ್ಮಾಣವಾಗಿದ್ದ ಆಡಳಿತವರ್ಗ ಮತ್ತು ಸಂಸ್ಥಾನದ ಸಿಬ್ಬಂದಿಯ ಸಂಪೂರ್ಣ ಮಾಹಿತಿಯನ್ನು ನಾಲ್ಕನೆಯ ನಂಬರಿನ ಕೈಫಿಯತ್ತು ವಿವರವಾಗಿ ನೀಡಿದೆ. ಇವರೆಲ್ಲ ರಾಜ್ಯದರ್ಬಾರದಲ್ಲಿ ಪಡೆದ ಶ್ರೇಣೀಕೃತ ಹುದ್ದೆಗಳನ್ನು ಸಹ ಇದರಲ್ಲಿ ಉಲ್ಲೇಖಿಸಲಾಗಿದೆ. ಈ ದೃಷ್ಟಿಯಿಂದ ಸಂಸ್ಥಾನದ ಆಡಳಿತ ಪದ್ಧತಿ ಮತ್ತು ವ್ಯವಸ್ಥೆಯ ಮೇಲೆ ಸದರಿ ಕೈಫಿಯತ್ತು ಹೊಸ ಬೆಳಕು ಚೆಲ್ಲಿದೆ.

ದರ್ಬಾರ ನಡೆವ ಸಂದರ್ಭದಲ್ಲಿ ಪಾಲ್ಗೊಳ್ಳುವ ಆಡಳಿತ ವರ್ಗ (ಸಂಬಳ ಹಾಗೂ ಸ್ವತಂತ್ರ) ದ ಆಸನ ವ್ಯವಸ್ಥೆಯನ್ನು ಈ ಕೆಳಗಿನಂತೆ ಮಾಡಲಾಗಿತ್ತು.[18]

ರಾಜನ <u>ಬಲಭಾಗಕ್ಕೆ</u> : ದಬನಿ, ಸದರಬಾರಗೀರ, ಹಾವಿನಾಳ ಮರಾಠೆ ಇಂದೋಲೀಕಾರ, ಗುರಿಕಾರ, ನಿಷಿಂ, ಸರನೌಬತ್ತು, ಸರಹವಾಲ್ದಾರ, ಗಾರದಿ, ಸರ್ವಸಮತುಗಳ ದೇಸಾಯಿಗಳು, ಸುಬನವೀಸ, ಹುದ್ದಾರ, ಒಂಬತ್ತು ಹೋಬ್ಳಿಯ ಸುಭೇದಾರರು, ಕಚೇರಿಯ ಹವಾಲ್ದಾರ, ಗುರಿಕಾರ, ನಾಯಕವಾಡಿಗಳು, ಜಟ್ಟೇರು, ವಾಗಿನಗೇರಿ, ಕಿಲ್ಲೇದಾರ, ಪಡಕೋಟಿ.ಮರಾಠೆ, ರಾಯನಪಾಳ್ಯ ಕಿಲ್ಲೇದಾರ, ಮುದಬೂಳ ಸಿರಿದಾರ, ಸಡಬೋಳಿ ಸಿರೀದಾರ, ಜಮಾದಾರ ಮಹಲ್ದಾರ.

---

18. ಸು.ಸಂ.ಇ., ಪುಟ 122-23.

ರಾಜನ ಎಡಭಾಗಕ್ಕೆ : ಮುಜುಮದಾರ, ದಫ್ತರದಾರ, ಡಬೀರ, ಹೇಜೀಬ್, ಪ್ರಕಾಶವಂಡ, ದಫ್ತರಬಂದ, ಧಿಕತ್ಕೋಡಿ, ವಕೀಲ, ಶೆಟ್ಟಿ, ಕಪ್ಪಡಮಹಾಲ, ತುಪ್ಪಮಹಾಲ (ಧಾನ್ಯ ಇಡುವವರು), ಆಡ್ಡಮಹಾಲ (ನೀರು ಪೂರೈಕೆಯುವರು), ಮುದಬಾಕು (ಅಡಿಗೆಯವರು, ಜಮದಖಾನಿ, ತೋಪಖಾನಿ, ಪಾಗಾ, ಕೋಟಿಖಾನೆ, ಎಲ್ಲಾ ಸಮುತುಗಳ ಮಾಮಲೆದಾರರು, ಹದಿನಾಲ್ಕು ಕೇರಿಯ ಅಧಿಕಾರಿಗಳು, ಹರಸೂರ ನಾಯಕ, ಹುಜರೇ ಸೇವಕರು, ಹುಜರಾತಿ, ಪಾವಡಿಗೋಪಾಲಪ್ಪ, ಹರಕಾರಿ, ಡೋಲಗಟ್ಟುಯುವರು, ಡೋಪದಾರರು.

ಸಂಸ್ಥಾನದ ದರ್ಬಾರ ಪದ್ಧತಿಯಲ್ಲಿ ಹಲವಾರು ಹುದ್ದೆಗಳ ವ್ಯಕ್ತಿಗಳು ಪ್ರತಿನಿಧಿಗಳಾಗಿ ಪಾಲ್ಗೊಳ್ಳುತ್ತಿದ್ದರೆಂದು ಮೇಲಿನ ಅಂಶದಿಂದ ವ್ಯಕ್ತವಾಗುತ್ತದೆ. ಇಂಥ ಅನೇಕ ವ್ಯಕ್ತಿಗಳ ವೃತ್ತಿ ಸೇವೆಗಾಗಿ ಸಂಸ್ಥಾನವು ಹಲವಾರು ಊರುಗಳನ್ನು ಜಹಗೀರು ಹಾಕಿಕೊಟ್ಟಿತ್ತು.

ಬಳ್ಳಪ್ಪಣದ ಗುರುಗಳಿಗೆ	.. ಚಿಕ್ಕಹೈಯಾಳ, ಹೆವನ್ನಡಗಿ
ಪುರುಷಾಕಾರಿಯ ವರಿಗೆ	.. ಚಿಕ್ಕನಹಳ್ಳಿ
ರಾಜಪುರೋಹಿತರಿಗೆ	.. ಹಾಂತಪೂರ
ರಾಜಪುರೋಹಿತರ ಸಹಾಯಕರಿಗೆ	.. ಶಾರದಹಳ್ಳಿ
14 ಸಮುತುಗಳ ನಾಡಗೌಡ, ದೇಸಾಯಿ; ದೇಶ ಪಾಂಡೆಯವರಿಗೆ	. 42 ಗ್ರಾಮಗಳು
ಮುಜುಮದಾರರಿಗೆ	.. ಮುದರಕಲ್ಲು, ಕಣ್ಣಹಂಗರಗಿ, ಬಸವಂತಪುರ.
ದಫ್ತರದಾರರಿಗೆ	... ಎಂಕಂಚಿ, ಧರಿಯಾಪುರ, ನೀಲಕೋಡ
ನಿಷ್ಠೆಯವರಿಗೆ	.. ಮುತ್ತುಕೋಡ
ಕಾರಕುಂಟ ಪಾಳೆಗಾರರಿಗೆ	.. 2 ಗ್ರಾಮಗಳು
ಸರನೌಬತ್ತರಿಗೆ	.. 2 ಗ್ರಾಮಗಳು
12ಜನ ಗುಂಡಿಕಾರರಿಗೆ	.. 12 ಗ್ರಾಮಗಳು

ರಾಜ ವೈದ್ಯರಿಗೆ	.. ಮಾಗಣ್ಣಗೇರಿ
ತಿಮ್ಮಪ್ಪ ಸುಭೇದಾರನಿಗೆ	.. 4 ಗ್ರಾಮಗಳು
ಕೊಡಿಹಾಳ ಸುಭೇದಾರನಿಗೆ	.. 4 ಗ್ರಾಮಗಳು
ಹಣಮಂತರಾವ ಸಿಲೇದಾರನಿಗೆ	.. 2 ಗ್ರಾಮಗಳು
ಗೋಪಣಿ ಸಿಲೇದಾರನಿಗೆ	.. 5 ಗ್ರಾಮಗಳು

ಇವೆಲ್ಲವುಗಳನ್ನು ಮುಮ್ಮಡಿ ಪಾಮನಾಯಕನ ಆಳಿತಾವಧಿಯಲ್ಲಿ ಕೊಡಲ್ಪಟ್ಟಿತ್ತು.[19] ಎಂಬುದು ಗಮನಾರ್ಹ.

3. ಸೈನಿಕವರ್ಗ :

'ಯಾವುದೇ ಸಂಸ್ಥಾನ, ಇಲ್ಲವೆ ಸಾಮ್ರಾಜ್ಯಗಳ ಸ್ಥಾಪನೆ ಹಿಂದೆ ಸೈನ್ಯ ಶಕ್ತಿಯ ಪಾತ್ರ ಪ್ರಧಾನವಾಗಿರುತ್ತದೆ' ಎಂಬ ಮಾತಿಗೆ ವಾದ ಎಡೆಯಿಲ್ಲ. 'ತಲೆಯೊಳಗಿನ ಯುಕ್ತಿ, ತೋಳ್ಬಲದ ಶಕ್ತಿ' ಇವೆರಡು ಜೊತೆಗೂಡಿದರೆ 'ಅಸಾಧ್ಯ' ಪದವನ್ನೇ ಅಳಿಸಿ ಹಾಕಬಹುದು. ಇಂಥ ರಣನೀತಿ ಹೊತ್ತ ಸುರಪುರ ಸೈನ್ಯವು ಸಂಸ್ಥಾನಕ್ಕೆ ಭದ್ರಬುನಾದಿ ಒದಗಿಸಿತ್ತು. ಪೂರ್ವದಲ್ಲಿ ಸಾಮಾನ್ಯ ಸೈನಿಕರಾಗಿದ್ದ ಸುರಪುರದ ಬೇಡರು ವಿಜಯನಗರ ಸಾಮ್ರಾಜ್ಯದ ಸಂದರ್ಭದಲ್ಲಿ ಪಾಳೆಯಗಾರರಾದರು. ಇದಕ್ಕೆ ಮುಖ್ಯ ಕಾರಣ ಇವರಲ್ಲಿರುವ ಕ್ಷಾತ್ರತೇಜಸ್ಸು. 'ರಣರಂಗದಲ್ಲಿ ವೈರಿಗಳೊಂದಿಗೆ ಹೋರಾಡುವ ಇವರ ವೀರದೃಶ್ಯ ಎಂಥ ಹೇಡಿಗೂ ರೋಮಾಂಚನ ತುಂಬುತ್ತದೆ' ಎಂಬ ವಿದ್ವಾಂಸರ ವ್ಯಾಖ್ಯಾನ ನಿಜವೆನಿಸುತ್ತದೆ. ಹೀಗಾಗಿ ತಮ್ಮ ಬಾಹುಬಲವನ್ನೇ ನಂಬಿದ ಬೇಡರಿಗೆ ಹಲವು ರಾಜ್ಯಗಳು ತಮ್ಮ ಸೈನ್ಯಕ್ಕೆ ಕೈಮಾಡಿ ಕರೆದವು.

ತಾಳಿಕೋಟೆ ಕದನಾನಂತರ ಚದುರಿಹೋದ ಕೆಲವು ವೀರರು ಅನೇಕ ಸಾಮ್ರಾಜ್ಯದಲ್ಲಿ ಸಾಮಂತರಾದರು. ಸಾಮರ್ಥ್ಯವುಳ್ಳ ಹಲವರು ಸ್ವತಂತ್ರ ಸಂಸ್ಥಾನ ಸ್ಥಾಪಿಸುವಲ್ಲಿ ಯಶಕಂಡರು. ವಿಶೇಷವೆಂದರೆ ಸಾಮಂತರಾದ ಸುರಪುರದವರು ಸ್ವತಂತ್ರರಾ ಆಗಿದ್ದರೆಂಬುದು. ಅದಕ್ಕಾಗಿ ಇವರು ಎರಡು ಶತಮಾನಗಳ ದೀರ್ಘ ಆಳ್ವಿಕೆ ನಡೆಸಿದುದರ ಒಳಗುಟ್ಟು 'ಸೈನ್ಯಬಲವೆ' ಆಗಿದೆ.

---

19. ಸು.ಸಂ.ಇ., ಪುಟ-107-08.

1) <u>ಸೈನಿಕ ಆಯ್ಕೆ :</u>

'ಸ್ವಾರಸ್ಯಕರ ಸಂಗತಿಯೆಂದರೆ ಸಂಸ್ಥಾನದಲ್ಲಿ ಹುಟ್ಟಿದ ಪ್ರತಿಯೊಂದು ಗಂಡುಮಗು ಸೈನಿಕನಾಗಿಯೇ ಬೆಳೆಯಬೇಕಾಗಿತ್ತು.'' ಎಲ್ಲಾ ಬೇಡರ ಕುಟುಂಬದ ಜನನ – ಮರಣ ಹಾಗೂ ಜನಸಂಖ್ಯೆಯ ಲೆಕ್ಕ ಹೊಂದಿದ 'ಗುರಿಕಾರ' ನು ರಾಜನ ಅಧಿಕೃತ ಪ್ರತಿನಿಧಿಯಾಗಿ ಸೈನ್ಯ, ನ್ಯಾಯ ಮತ್ತು ಇನ್ನಿತರ ಸಾರ್ವಜನಿಕ ಆಡಳಿತದ ಅಧಿಕಾರಗಳನ್ನು ಸಹ ಚಲಾಯಿಸುತ್ತಿದ್ದ. 'ಸಬನವೀಸ' ಗುರಿಕಾರನ ಕೈಗೆಳಗಿರುವ ಸೈನ್ಯದ ಗಣತಿಕಾರ. ಯಾವುದೇ ಬೇಡರ ಕುಟುಂಬದಲ್ಲಿ ಗಂಡುಮಗು ಹುಟ್ಟಿದಾಕ್ಷಣ ಆತ ಗುರಿಕಾರನಿಗೆ ತಿಳಿಸಬೇಕಿತ್ತು. ಆಗ ಸಂಸ್ಥಾನದ ಖಜಾನೆಯಿಂದ ಆ ಮಗುವಿನ ಹಾಲು, ಬೆಣ್ಣೆಗಾಗಿ ಮಾಸಿಕ ನಾಲ್ಕು ರೂಪಾಯಿ ನೀಡಲಾಗುತ್ತಿತ್ತು. ಪ್ರೌಢನಾಗುವವರೆಗೂ ಸಂಸ್ಥಾನದ ಖರ್ಚಿನಲ್ಲಿಯೇ ಬೆಳೆಯುವ ಆತನಿಗೆ ಶಸ್ತ್ರಾಸ್ತ್ರ ವಿದ್ಯೆ, ಕುದುರೆ ಸವಾರಿ, ಈಜು, ಮುಷ್ಟಿಯುದ್ಧ ಜಟ್ಟಿ ಕಾಳಗ ಮುಂತಾದವುಗಳನ್ನು ಹೇಳಿಕೊಡಲು ಗರಡಿಮನೆಯಲ್ಲಿ ದಿನಂಪ್ರತಿ ತರಬೇತಿ ನೀಡುತ್ತಿದ್ದರು. ಕೊನೆಗೊಮ್ಮೆ ಸಂಸ್ಥಾನದ ಉತ್ಸವೊಂದರಲ್ಲಿ ಆತನನ್ನು ಪರೀಕ್ಷಿಸಿ ಸೈನ್ಯದೀಕ್ಷೆ ತೊಡಿಸುವ ಮೂಲಕ ಆಜನ್ಮ ಸೈನಿಕನಾಗಿಯೇ ಉಳಿಯುವಂತೆ ಏರ್ಪಾಡು ಮಾಡುತ್ತಿದ್ದರು. ಇಂಥ 12 ಸಾವಿರ ಮೂಲಬೇಡ ಪಡೆಯ ಬಲವೇ ಸಂಸ್ಥಾನಕ್ಕಿದ್ದ ಸೈನ್ಯವಾಗಿತ್ತು.

ರಾಜನು ಯುದ್ಧಕ್ಕೆ ಹೊರಟರೆ, ಸರದಾರರು ರಣಕೊಂಬು ಊದಿಸಿ ಎಲ್ಲಾ ಸೈನಿಕರನ್ನು ಗೊತ್ತುಪಡಿಸಿದ ಸ್ಥಳದಲ್ಲಿ ಸೇರಿಸುತ್ತಿದ್ದರು. ರಾಜಾಜ್ಞೆಯಾದ ತಕ್ಷಣವೇ ಶಸ್ತ್ರ ಧರಿಸಿ ಕದನಕ್ಕೆ ಸಿದ್ಧರಾಗಿ ಸಂಸ್ಥಾನದ ಆರಾಧ್ಯದೈವ ಶ್ರೀ ವೇಣುಗೋಪಾಲಸ್ವಾಮಿಗೆ ಪೂಜೆ ಸಲ್ಲಿಸಿ ತರುವಾಯ ದಂಡಿನ ಮರಗಮ್ಮನ ಮೈದಾನಕ್ಕೆ ಬರುತ್ತಿದ್ದರು.[20] ಇಲ್ಲಿ ಸೈನಿಕರಿಗೆ ಶಸ್ತ್ರಸಜ್ಜಿತಗೊಳಿಸಿ ಯುದ್ಧಸ್ಫೂರ್ತಿ ತುಂಬುವದರೊಂದಿಗೆ ರಣರಹಸ್ಯಗಳನ್ನೇ ಬೋಧಿಸಲಾಗುತ್ತಿತ್ತು. ಇದರಲ್ಲಿ ಪ್ರಬಲವಾದ 12 ಸಾವಿರ ಸ್ವಜಾತಿ ಬೇಡಪಡೆ, ಕಾಲ್ದಳ, ಗುಪ್ತದಳ, ಅಶ್ವದಳಗಳಾಗಿ ಗುರಿಕಾರನ ನಿಯಮವನ್ನು ಪಾಲಿಸುತ್ತಿದ್ದವು. ರಾವುತರ ಮೇಲಾಧಿಕಾರಿಯಾದ ಸರನೌಬತ್ತು, ಕಾಲ್ದಳದ ಮುಖಂಡನಾದ ಸರಹವಾಲ್ದಾರರು ಸೈನ್ಯದ ಮುಂದಾಳಿಯಲ್ಲಿರುತ್ತಿದ್ದರು. ಪ್ರತ್ಯೇಕ ಪಡೆಗಳಾದ ಮರಾಠಿ ಸಿಲೇದಾರರು, ದಖನಿಮುಸಲ್ಮಾನರು, ಕೋಟಗಾರರು, ಜಟ್ಟರು, ಮಾದಿಗರು ಮುಂತಾದ

---

20. ಎಸ್.ಎಂ. ವೆಂಕಟಪ್ಪನಾಯಕ : ಸುರಪುರದ ಶಿಸ್ತಿನ ಸೈನ್ಯ. (ನಗರನಾಡ ದರ್ಶನ), ಪುಟ-280.

ಸರದಾರನ ನೇತೃತ್ವದಲ್ಲಿ ನಡೆಯುತ್ತಿದ್ದರು. ಆಹಾರ ಸಾಮಗ್ರಿಯವರು, ವೈದ್ಯರು ಸಹ ಈ ಸೈನ್ಯದ ಜೊತೆಯಲ್ಲಿ ಸಾಗಬೇಕಿತ್ತು.

ಕೋಟೆಯನ್ನು ಸದಾ ಸಂರಕ್ಷಿಸುವ ಕೋಟೆಗಾರರು ಸಂಸ್ಥಾನದ ಸೈನ್ಯಕ್ಕೆ ಎಲ್ಲಿಲ್ಲದ ಬಲ ತುಂಬಿದ್ದರು. ಹೊಲೆಯ ಜಾತಿಯವರಾದರೂ ರಾಜನ ಅಂಗರಕ್ಷಕರಾಗಿ ರಾಜನಾಜ್ಞೆಗೆ ಮಾತ್ರ ಒಳಪಟ್ಟವರಾಗಿದ್ದರೆಂದರೆ ಇವರ ಪ್ರಾಬಲ್ಯ ಎಷ್ಟಿತ್ತೆಂದು ಅರ್ಥವಾಗುತ್ತದೆ. ಕೋಟೆಗೋಡೆಗಳನ್ನು ದಕದಕನೆ ಹತ್ತುವ ಕುಶಲಮತಿಗಳು ಈ ಕೋಟೆಗಾರರು. ಪ್ರತಿಯೊಬ್ಬರೂ ಒಂದೊಂದು ಉಡ, ರೇಶಿಮೆ ಹಗ್ಗಗಳನ್ನು ಹೊಂದಿ ಯುದ್ಧಕ್ಕಿಳಿಯುತ್ತಿದ್ದರು. ರಾಜನ ರಕ್ಷಕರಾದ ಇವರಿಗೆ ಬಿಚ್ಚುಗತ್ತಿ ಬೇಡರ ಕಾವಲು ಬೇರೆ ಇತ್ತು. ಇವೆಲ್ಲ ನೋಡಲಾಗಿ ಧೈರ್ಯ, ಶೌರ್ಯ, ಸಾಹಸಕ್ಕೆ ಸಂಸ್ಥಾನದಲ್ಲಿ ಇನ್ನೊಂದು ಹೆಸರು ಈ ಕೋಟೆಗಾರರೆಂದರೆ ತಪ್ಪಲ್ಲ. ಪಾಂಡಿಚೇರಿ ಯುದ್ಧ ವಿಜಯ ಇವರಿಂದಲೇ ಸಾಧ್ಯವಾದಾಗ ಸಂಸ್ಥಾನದ ಜನತೆ ಇವರಲ್ಲಿ ಅಪಾರ ಅಭಿಮಾನ ತಾಳಿತು. ಇವರಂತೆ ಪಾಳೆಕೋಟೆಯ ಸೈನಿಕರು ಹಾಗೂ ಮುನಿಗಳು ಸಹ ಶೂರ ಸೇನಾನಿಗಳಾಗಿದ್ದರು.

2) <u>ಸಮರದಲ್ಲಿ ಸೈನ್ಯಬಲ :</u>

ಗಿಡ್ಡಪಿಡ್ಡನಾಯಕನು ವೀರಗೊಟ್ಟದ ಮೂಲಕ ಹೊರಟಾಗ ಸಂಗಡವಿದ್ದ ಸೈನ್ಯಬಲವೆಂದರೆ 6 ಸಾವಿರ ಬೇಡರು, 3 ಸಾವಿರ ಗೊಲ್ಲರು, ದೇವಪುರದ ಕೆಲವರು. ಇನ್ನು 37 ಜನ ಆಪ್ತವಲಯದವರು ಮಾತ್ರ. ಇಲ್ಲಿಂದಲೇ ಸೈನ್ಯ ಸಂಗ್ರಹ ಆರಂಭಗೊಂಡಿತು. ಶಹಪುರ ಕೋಟೆ ವಶವಾದಾಗ 5 ನೂರು ಜನರ ಅಶ್ವದಳ, 4 ಸಾವಿರ ಜನರ ಕಾಲ್ದಳವಿತ್ತೆಂದು ತಿಳಿಯುತ್ತದೆ. ಬಿಜಾಪೂರ – ಬಾದಷಹರ ಮಾಂಡಳಿಕತ್ವ ಒಪ್ಪಿಕೊಂಡ ಮೇಲೆ ಮೊಘಲರ ವಿರುದ್ಧ ಮೊದಲ ಹೋರಾಟ ಮಾಡಬೇಕಾಯಿತು. ಆಗ ಸಂಸ್ಥಾನದ ಸೈನ್ಯ ಸಂಖ್ಯೆ 30 ಸಾವಿರ ದಾಟಿತ್ತು. ಇಂಥ ವೀರರ ವಿರಾಟ ಹೋರಾಟ ಕಂಡು ಆಶ್ಚರ್ಯಪಟ್ಟ ಔರಂಗಜೇಬನು "ಪ್ಯಾದಶಹಾ ಕರ್ನಾಟಕಿಯಾಂ" ಎಂದು ಕರೆದ. ಕರ್ನಾಟಕದ ಸೈನ್ಯವೆಂದರೆ ನಗರನಾಡಿನ ಬೇಡ ಪಡೆಯೆಂದೇ ಆತನ ಮಾತಿನರ್ಥ. ಮತ್ತೊಮ್ಮೆ ಹಸರಂಗಿ ಪಾಮನಾಯಕನು ತನ್ನ ಮಗನ ನೇತೃತ್ವದಲ್ಲಿ ಬಿಜಾಪೂರ ಸೈನ್ಯವನ್ನು ಬೆಂಬಲಿಸಿ 34 ಸಾವಿರ ಕಾಲ್ದಳ, ತುರುಗದಳಗಳನ್ನು ಕಳಿಸಿದ್ದನೆಂದಾಗ ಸಂಸ್ಥಾನದ ಸೈನ್ಯಬಲ ಏರುತ್ತಾ ಹೊರಟಿತ್ತೆಂದು ತಿಳಿಯುತ್ತದೆ. ಇದರ ಸೇಡನ್ನು ತೀರಿಸಿಕೊಳ್ಳಲು ಸ್ವತಃ ಔರಂಗಜೇಬನೆ ಒಂದು ಲಕ್ಷ ಸೈನ್ಯ

ದೊಂದಿಗೆ ವಾಗಿನಗೇರಿ ಮೇಲೆ ದಾಳಿ ಮಾಡಿದಾಗ ಪೀತಾಂಬರ ಬಹಿರಿ ಪಿಡ್ಡನಾಯಕನು 50 ಸಾವಿರ ಕಾಲ್ದಳ, 34 ಸಾವಿರ ಅಶ್ವದಳದೊಂದಿಗೆ ಪ್ರತಿಭಟಿಸಿದ ಬಗ್ಗೆ ಕೈಫಿಯತ್ತು ದಾಖಲೆಯಾಗಿದೆ. ಅಶ್ವದಳದಲ್ಲಿ ಮರಾಠರ 24 ಸಾವಿರ ಜನ ಬಿಟ್ಟರೆ ಉಳಿದ ಸೈನ್ಯಬಲವೆಲ್ಲ ಸಂಸ್ಥಾನದ್ದೇ ಆಗಿತ್ತು.

ಹೈದ್ರಾಬಾದ ನಿಜಾಮನು ಇಮ್ಮಡಿ ಪಾಮನಾಯಕನಿಗೆ ಸಖ್ಯ ಬೆಳೆಸಿ ಕನಕಗಿರಿಯ ರಂಗಪ್ಪನಾಯಕನ ಮೇಲೆ ಏರಿ ಹೋಗಲು ಹೇಳಿದ. ಆಗ ಪಾಮನಾಯಕನು 18 ಸಾವಿರ ಕುದುರೆ, 10 ಆನೆ, 20 ಸಾವಿರ ಬಲದೊಡನೆ ಕಾದಿದನೆಂದು ಫ್ರಾಮರಜ್ ಜಂಗನ ಬರಹ ಹೇಳುತ್ತದೆ. ಇಲ್ಲಿ ಅಶ್ವದಳದ ಶಕ್ತಿ ದ್ವಿಗುಣಗೊಂಡಿದೆ. ನಿಜಾಮನಲ್ಲಿಟ್ಟ ಪ್ರೀತಿ-ವಿಶ್ವಾಸದ ಪ್ರತೀಕವೇ ಪಾಂಡಿಚೇರಿ ವಿಜಯ. ಇದೊಂದು ನಿರ್ಣಾಯಕ ಯುದ್ಧವೇ ಸರಿ. 12 ಸಾವಿರ ಮೂಲಬೇಡ ಪಡೆಯೊಂದಿಗೆ 9 ನೂರು ಕೋಟೆಗಾರರು ಅಲ್ಲದೆ ಇನ್ನುಳಿದ 6 ಸಾವಿರ ಜನ ಸಹಾಯಕರೊಂದಿಗೆ ರೋಮಾಂಚನ ಜಯ ಸಾಧಿಸಿದ ಕೀರ್ತಿ ಸುರಪುರ ಸೈನ್ಯದ್ದು.

ಸದಾ ಸ್ನೇಹ ಕೋರಿದ ಪೇಶ್ವೆಗಳು ಕೆಲವೊಂದು ತೆರಿಗೆ ವಿಷಯದಲ್ಲಿ ಸಂಸ್ಥಾನದೊಂದಿಗೆ ವೈರತ್ವ ಕಟ್ಟಿಕೊಂಡರು. ಹೈದ್ರಾಬಾದ ನಿಜಾಮನೊಂದಿಗೆ ಸ್ನೇಹದ ಹಸ್ತಚಾಚಿ ಸಂಸ್ಥಾನದ ಹಳ್ಳಿಗಳನ್ನು ಲೂಟಿ ಮಾಡತೊಡಗಿದರು. ಆಗ ಮುಮ್ಮಡಿ ಪಾಮನಾಯಕನು ಐದು ನೂರು ಕುದುರೆ, ನಾಲ್ಕು ಸಾವಿರ ಕಾಲಾಳು, ಐದುನೂರು ದುಟೀರು, ಎರಡು ಸಾವಿರ ಸುಭೆ ಪಾಗಾದೊಂದಿಗೆ ಹಂದರಕಿಯಲ್ಲಿ ಸಮರಗೈದ ವಿಷಯ ಸಂಸ್ಥಾನದ ಚರಿತ್ರೆಯಲ್ಲಿದೆ. ಕ್ರಿ.ಶ. 1795ರಲ್ಲಿ ಖರ್ಡೆಯಲ್ಲಿ ಜರುಗಿದ ಯುದ್ಧಕ್ಕೆ ಮರಾಠರ ವಿರುದ್ಧ ಹೈದ್ರಾಬಾದನ ನಿಜಾಮನಿಗೆ ಬೆಂಬಲಿಸಲು 'ಸಂಸ್ಥಾನ' ಒಪ್ಪಿತು. ಅರಸನಾಗಿದ್ದ ಇಮ್ಮಡಿ ಪಾಮನಾಯಕನು 14 ಸಾವಿರ ಕಾಲ್ದಳ, 12 ನೂರು ಸವಾರರ ನೇತೃತ್ವ ವಹಿಸಿ ಸಮರ ಮಾಡಿದ್ದ. ಇದರಲ್ಲಿ ನಿಜಾಮನ ಸೈನ್ಯವು ಸೇರಿದಾಗ ಒಟ್ಟು 10 ಸಾವಿರ ಅರಬರು, 6 ಸಾವಿರ ರೋಹಿಲರು, 3 ಸಾವಿರ ಸಿದ್ದೀರು, 14 ಸಾವಿರ ಸವಾರರು, 1 ನೂರು ಅಂಬಾರಿ ಆನೆಗಳು, 5 ಕೊತ್ವಾಲ ಆನೆ, 2 ಸುರಪುರದ ಆನೆಗಳು ಪಾಲ್ಗೊಂಡಿದ್ದವು. ನಿಜಾಮ ಮತ್ತು ಸುರಪುರದ ಒಕ್ಕೂಟವನ್ನು ಎದುರಿಸಿ ಬಂದ ಮರಾಠರು 10 ಸಾವಿರ ಕಾಲಾಳು, 15 ಸಾವಿರ ಸವಾರರು, 14 ಸರದಾರರನ್ನು ಕೊಂದರು. ಮತ್ತು ಮೂರು ಸಾವಿರ ಜನಕ್ಕೆ ಗಾಯಗೊಳಿಸಿದರೆಂದು ನಾಲ್ಕನೆಯ ನಂಬರಿನ ಕೈಫಿಯತ್ತು ಆಧಾರ ನೀಡಿದೆ.

ಇನ್ನೊಂದು ಮುಖ್ಯ ಅಂಶವೆಂದರೆ ಜಟ್ಟರು, ಕೋಲುಕಾರರು ಮತ್ತು ಕಕ್ಕೇರಿ, ನರಬೋಳಿ ಬೇಡರು ಕಾಲ್ದಳದಲ್ಲಿದ್ದರು. ಸದರ ಬಾರಗೀರ, ಹಾವಿನಾಳ ಸಿಲೇದಾರ, ಪಡುಕೋಟೆ ಸರದಾರರು ಕುದುರೆ ಸವಾರಿಯಲ್ಲಿದ್ದರು.

ಇಮ್ಮಡಿ ವೆಂಕಟಪ್ಪನಾಯಕನೊಂದಿಗೆ ಸಾಲದ ವಿವಾದವೆಬ್ಬಿಸಿದ್ದ ಗುಡಗುಂಟಿ ದೊರೆಯು 4 ನೂರು ಸವಾರರು, 6 ಸಾವಿರ ಕಾಲಾಳು ಅಲ್ಲದೆ ನಾಲ್ಕು ಪ್ರಬಲ ಮದ್ದಿನ ತೋಪುಗಳನ್ನು ಎದುರಿಸಬೇಕಾಯಿತು. ಕರಿಗುಡ್ಡದ ಮೇಲೆ ದಾಳಿಯಿಟ್ಟ ವೆಂಕಟಪ್ಪನಾಯಕನು 3 ನೂರು ದಫೇರು, 7 ನೂರು ಸಿಲೇದಾರರೊಂದಿಗೆ ವೆಂಕಟರಾಯನ 1 ಸಾವಿರದಳ, ಸುಭೇದಾರ ವೆಂಕಪ್ಪನ 1 ಸಾವಿರ ಸೈನ್ಯ ಹೊಂದಿದ್ದ. ಜೊತೆಗೆ 18 ಸಾವಿರ ಮೂಲಬಲದೊಂದಿಗೆ 12 ನೂರು ಪಾಗಾ ರಾವುತರು ಸೇರಿಕೊಂಡರು. 18ದ ಆನೆ, 4 ಸಾವಿರ ಕುದುರೆಗಳೊಂದಿಗೆ ಸ್ವತಃ ಇಮ್ಮಡಿ ವೆಂಕಟಪ್ಪನಾಯಕ ಯುದ್ಧ ಮಾಡಿದ ಸನ್ನಿವೇಶ ಕೆಲವೆಡೆ ವರ್ಣಿತವಾಗಿದೆ.

3) <u>ಸಂರಕ್ಷಣೆಯಲ್ಲಿ ಸೈನ್ಯ :</u>

'ಪೀತಾಂಬರ ಬಹಿರಿ ಪಿಡ್ಡನಾಯಕನು ಕ್ರಿ.ಶ.1708–10ರೊಳಗೆ ಸುರಪುರ ನಗರವನ್ನು ನಿರ್ಮಿಸಿ ಅದಕ್ಕೆ ರಾಜಧಾನಿ ವೈಭವ ನೀಡಿದ' ಬಗ್ಗೆ ಹಲವು ದಾಖಲೆಗಳು ದೊರೆತಿವೆ. ವೈರಿ ದಾಳಿಯಿಂದ ಸಂಸ್ಥಾನದ ರಾಜಧಾನಿ ರಕ್ಷಿಸಲು ಬಲವಾದ ಸೈನ್ಯಗಾವಲು ಹಾಕಿದ್ದನ್ನು ಕೈಫಿಯತ್ತು ಈ ಕೆಳಗಿನ ವಿವರಣೆ ಕೊಟ್ಟಿದೆ.[21] ಸ್ಥಾಪನೆಯ ಕಾಲಕ್ಕೆ ಹದಿನಾಲ್ಕು ಕೇರಿಗಳ ಜನವಸತಿಯನ್ನು ಕಲ್ಪಿಸಿತ್ತು. ಅಂಥಾ ಕೇರಿಗಳಿಗೆ ಅಲ್ಲಿಯ ಜನಜಾತಿಯ ಮೇರೆಗೆ ಹೆಸರಿಸಲಾಗಿತ್ತು. ಸಾಮಾನ್ಯವಾಗಿ ಬೇಡರೆ ಎಲ್ಲಾ ಕಡೆ ಬಹುಸಂಖ್ಯಾತರಿದ್ದರು. ಇವರೆಲ್ಲರ ರಕ್ಷಣೆಯ ಭಾರ ಸಂಸ್ಥಾನದ ಮೇಲಿದ್ದ ಪ್ರಯುಕ್ತ ಕೇರಿಯ ಗಾತ್ರದ ಮೇಲೆ ಸೈನ್ಯ ಸಂರಕ್ಷಣೆಯಿತ್ತು.

ನಡುಗೇರಿ	...300 ಬೇಡರ ಕಾವಲು
ಮ್ಯಾಗೇರಿ	...300 ಬೇಡರ ಕಾವಲು
ಹಳೇ ವಜೀರಗೇರಿ	...250 ಹಂಡೆ ಕುರುಬರ ಕಾವಲು

---

21. ಸು.ಸಂ.ಇ., ಪುಟ–74.

ದೊಣ್ಣೆಗೇರಿ	...200	ಬೇಡರ ಮತ್ತು
	100	ಕೋಟೆಗಾರರ ಕಾವಲು
ಜಗ್ಗದಕೇರಿ	...450	ಬೇಡರು ಕಾವಲು
ಹುಲಕಲ್ಲಗೇರಿ	...600	ಕೋಟೆಗಾರರ
ಭೋಯಿಗೇರಿ	...600	ಮ್ಯಾದರರು ಮತ್ತು
	200	ಭೋಯಿಯರು
ರಾಮಪುರಕೇರಿ	...800	ಬೇಡರು ಮತ್ತು
	600	ಕೋಟೆಗಾರರು
ಕುರುಬಗೇರಿ	...500	ಕುರುಬರು
ಗುರಿಕಾರ ಗೇರಿ	...600	ಬೇಡರು
ನರಸಬಡಗೇರಿ	...300	ಬೇಡರು ಮತ್ತು
	200	ಕೋಟೆಗಾರರು
ಗೋನಾಳಕೇರಿ	...450	ಬೇಡರು
ಪಲ್ಲೇದಕೇರಿ	...300	ಬೇಡರು

ಮೇಲಿನ ಕೇರಿಗಳಲ್ಲಿ ಇದ್ದ ಒಟ್ಟು 7050 ಜನರ ಸಂಖ್ಯೆಯನ್ನು ಕಾಣುತ್ತೇವೆ. ಇವರಲ್ಲಿ ಸಂರಕ್ಷಣೆಗಿದ್ದ ಸೈನಿಕರು ಕೆಲವರು ಮಾತ್ರ. ಉಳಿದವರೆಲ್ಲ ವಸತಿಮಾಡಿದ ಸಂಸ್ಥಾನದ ಮೂಲ ನಿವಾಸಿಗಳೆಂದು ಹಲವರ ಅಭಿಪ್ರಾಯವಾಗಿದೆ. ಅದೇನೆ ಇದ್ದರೂ ಸಂಸ್ಥಾನದಲ್ಲಿದ್ದ ಪ್ರತಿಯೊಬ್ಬ ವ್ಯಕ್ತಿಯು ಸೈನಿಕನೆ ಎಂಬ ಮಾತು ಒಪ್ಪಿದಾಗ ಈ ವಾದ ತಳ್ಳಿಹಾಕಬೇಕಾಗುತ್ತದೆ.

ಸಂಸ್ಥಾನದ ಅರಸರಲ್ಲಿಯೇ ಅತ್ಯಂತ ಪ್ರಖ್ಯಾತಿ ಪಡೆದ ಮುಮ್ಮಡಿ ಪಾಮನಾಯಕನು ವಿಶೇಷವಾದ ದಂಡಿನ ವ್ಯವಸ್ಥೆ ಇಟ್ಟಿದ್ದ. ರಾಜಧಾನಿಯಲ್ಲದೆ ಉಳಿದ ಪ್ರಮುಖ ಊರುಗಳು ಸಹ ಸೈನ್ಯ ರಕ್ಷಣೆಯಿಂದ ಸುಭದ್ರವಾಗಿದ್ದವು. ಬೆಳೆಯುತ್ತಿರುವ ಜನಸಂಖ್ಯೆಗೆ ಸೈನ್ಯಬಲವು ಅದೇ ಪ್ರಮಾಣದಲ್ಲಿ ಒದಗಿಸಲಾಗಿತ್ತು. ಅದ್ಭುತವಾದ ಇಂಥ ಪದ್ಧತಿಯನ್ನು ಪಾಮನಾಯಕನ ಆಳ್ವಿಕೆಯಲ್ಲಿ ಈ ರೀತಿ ಕಾಣುತ್ತೇವೆ.[22]

---

22. ಸು.ಸಂ.ಇ; ಪುಟ-104-5.

ಗ್ರಾಮಗಳು	ಕುದುರೆ:ಸವಾರರು
ದೇವಪುರ	120
ಗೋಗಿಠಾಣಿ	100
ನಗನೂರು	150
ವಡಿಗೇರಿ	100
ತಿಂಥಣಿ	100
ಕಕ್ಕೇರಿ	125
ರಾಯನಪಾಳ್ಯ	050
ಕೋಳಿಹಾಳ	150
ಭಂಟನೂರ	050
ಅಂಬಲಿಹಾಳ	075
ವಾಗಿನಗೇರಿ	175
ಮಳ್ಳಿ	025
ಇಟ್ಗಿಗೋತಣಿಠಾಣಿ	150
ನರಬೋಳಿ	050
ದೋರನಹಳ್ಳಿ	050

ಇಲ್ಲಿ ಕಂಡುಬರುವ ಕುದುರೆ ಮತ್ತು ಸವಾರರ ಸಂಖ್ಯೆಗಳನ್ನು ನೋಡಿದರೆ ಸಂಸ್ಥಾನವು ತನ್ನ ಪ್ರಮುಖ ಊರು ಹಾಗೂ ಗಡಿಗಳನ್ನು ಕಾಯ್ದುಕೊಂಡಿತ್ತೆಂದು ತೋರುತ್ತದೆ. ಇಲ್ಲಿಯೂ ಸಹ ಪ್ರತಿಪಾದವೊಂದಿದೆ. ಕೆಲವೆಡೆ ಕೇವಲ ಕುದುರೆಯ ಪಾಗಾಗಳು ಮಾತ್ರ ಕಟ್ಟಿಸಲಾಗಿತ್ತು. ಉಳಿದೆಡೆ ಕುದುರೆಗಳಿದ್ದವೆಂಬ ಭಿನ್ನಾಭಿಪ್ರಾಯವು ಇದೆ. ಸುರಪುರ ನಗರದಲ್ಲಿ ಸಂರಕ್ಷಿಸಿದ್ದ ಸಂಸ್ಥಾನದ ದಂಡು ಪಾಮನಾಯಕನ ಕಾಲಕ್ಕೆ ದ್ವಿಗುಣಗೊಂಡ ಬಗ್ಗೆ ಈ ಕೆಳಗಿನ ಗಣತಿ ಖಚಿತ ಪಡಿಸುತ್ತದೆ.

ಆನೆಗಳು	018	ಮಾಲಬೇಡ ಪಡೆ	 12000
ಒಂಟೆಗಳು	...150	ದುಣೇರು	 00300
ಸವಾರಿತೋಪು	...008	ಸದರ ಬಾರಗೀರ	 00300
ಮಕರಡಬ್ಬ	...004	ಕೋಟಗಾರರು	 01200
ಜರ್ರೋದಾಳು	...500	ಮಾದರು	 00800
		ರಾಮಬಾಣದವರು	 00120
		ಜಟ್ಟಿರು	 00200
		ಸಿಬ್ಬಂದಿಬೇಡರು	 01200
		ಹುಜರಾತಿಯವರು	 00300
		ಕಕ್ಕೇರಿ ಬೇಡರು	 00300
		ನರಬೋಳಿಬೇಡರು	 00300
		ಮುಡಬೂಳ ಬೇಡರು	 00300
		ಹರನೂರ ಬೇಡರು	 00250
		ಡೋರ ಆಗಸಿಯವರು	 00250
		ಸುರಪುರ ತಳವಾರರು	 00050

—ಇವರೆಲ್ಲರೊಂದಿಗೆ ಆನೆಕಟ್ಟುವ ಗಡೇಕಾರರು, ಕಂಬಾರರು ಮತ್ತು ಸೈನ್ಯಬಲಕ್ಕೆ ಅತ್ಯವಶ್ಯವಿದ್ದವರೆಲ್ಲ ಸಂಸ್ಥಾನದ ಸಂರಕ್ಷಣೆಯಲ್ಲಿ ತೊಡಗಿದ್ದರು. ಇವರಿಗೆಲ್ಲ ಸುರಪುರ ಸಂಸ್ಥಾನದಿಂದ ಇಂತಿಷ್ಟು ಸಂಬಳ ಗೊತ್ತು ಮಾಡಲಾಗಿತ್ತು. ಕಕ್ಕೇರಿ, ನರಬೋಳಿ, ಹರನೂರ, ಮುಡಬೂಳ, ಬೇಡರು ಸುರಪುರ ನಗರದ ರಕ್ಷಣೆಯಲ್ಲಿದ್ದರೂ ಅಥವಾ ಅವರ ಊರ ರಕ್ಷಣೆಗೆ ಸಂಸ್ಥಾನ ಸೇವಿಸುತ್ತಿ ತಿಳಿಯುದು.

4) <u>ಸೈನಿಕ ಹುದ್ದೆಗಳು :</u>

ಸುರಪುರ ಸಂಸ್ಥಾನದ ಸಮಸ್ತ ಸೈನ್ಯಕ್ಕೆ 'ಗುರಿಕಾರ' ನೇ ಸೇನಾಧಿಪತಿ. ರಾಜನ ಅಧಿಕೃತ ವಕ್ತಾರ ಮತ್ತು ಸ್ವಜಾತಿಯ ಆಪ್ತನಾದ ಗುರಿಕಾರನು ಸೈನ್ಯದ ಎಲ್ಲಾ ಮುಖಂಡರನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿದ್ದ. ಸೈನ್ಯದಲ್ಲಿದ್ದ ಪ್ರಮುಖ ಹುದ್ದೆಗಳೆಂದರೆ ಸರನೌಬತ್ತು,

ಸರಹವಲ್ದಾರ, ಕಿಲ್ಲೇದಾರ, ಸಿಲೇದಾರ, ಹಸರಂಗಿ ಪಾಮನಾಯಕನ ಆಳ್ವಿಕೆಯಲ್ಲಿ ಸಬನವೀಸ, ಗರಡಿ ಸವಾರ, ದುಂಡೇಕಾರ, ಮರಾಠಿಸವಾರ, ಹದ್ದುದ್ದಮನಿ ಎನ್ನುವ ಅಧಿಕಾರ ವರ್ಗ ಅಸ್ತಿತ್ವಕ್ಕೆ ಬಂದಿತು. ಸೂಕ್ಷ್ಮ ಪ್ರದೇಶದಲ್ಲಿ ಕಾಯ್ದುಕೊಳ್ಳ ಪಡೆಯನ್ನು ನಿಯೋಜಿಸಿ ಅವುಗಳ ಮೇಲೆ ಸುಭೆದಾರರನ್ನು ನಿಯುಕ್ತಿಗೊಳಿಸಲಾಗಿತ್ತು. ಅವರಲ್ಲಿ ಗೋಗಿ, ದೇವಪುರ, ತಿಂಥಣಿ, ವಜ್ಜಲ, ಕೊಡೇಕಲ, ಅಮಲಿಹಾಳ, ನರಬೋಳಿ, ದೋರನಹಳ್ಳಿ ಸುಭೇದಾರರು ಉಲ್ಲೇಖನಾರ್ಹರರು. ಇಂಥ ಸೈನ್ಯದ ಪ್ರಮುಖ ಸರದಾರ ಹಾಗೂ ಅಧಿಕಾರಿಗಳ ಶೌರ್ಯ ಮೆಚ್ಚಿ ಅನೇಕ ಭೂಮಿಗಳನ್ನು ಸಂಸ್ಥಾನದಿಂದ ಇನಾಮು ಆಗಿ ಬಿಡಲಾಗಿದೆ. ಅವು ಭಂಟ ಮಾನ್ಯದ ಹೊಲಗಳೆಂದೆ ಇಂದಿಗೂ ಪ್ರಸಿದ್ಧವಾಗಿವೆ. ರಣರಂಗದಲ್ಲಿ ವೀರಸ್ವರ್ಗ ಸೇರಿದ ಸೈನಿಕರ ಕುಟುಂಬಕ್ಕೂ ಸಂಸ್ಥಾನವು ಸಕಲ ರಕ್ಷಣೆ ಒದಗಿಸಿದ ಸಂಗತಿಗಳಿವೆ.

ನಾಲ್ವಡಿ ವೆಂಕಟಪ್ಪ ನಾಯಕನು ಸುಮಾರು 50 ಸಾವಿರ ರೂ.ಹಣವನ್ನು ಸುರಿದು ಸೈನ್ಯ ವ್ಯವಸ್ಥೆ ಮಾಡಿದ್ದ. ಯುರೋಪಿಯನ್ ಮಾದರಿಯಲ್ಲಿ ಬಿಲ್ಲುಗಾರರು, ಅಂಗೋಳ, ಪೇದೆಗಳು, ಗೋಲಂದಾಜ ಸಿದ್ಧಗೊಳಿಸಿದ್ದ. ಇಷ್ಟೆಲ್ಲ ಸೈನಿಕಬಲ ಹೊಂದಿದ ಸುರಪುರವು ಬೆರಳೆಣಿಕೆಯ ಬ್ರಿಟೀಷ ಸೈನ್ಯಕ್ಕೆ ಬಲಿಯಾದರು ಎನ್ನುವದು ಆಶ್ಚರ್ಯವಾಗಿದೆ. ಕೃಷ್ಣಪ್ಪನಾಯಕನ ಕಾಲಕ್ಕೆ ಅರಬ, ರೋಹಿಲರನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವ ಕಾರ್ಯವೇನೂ ಸಾಗಿತ್ತು. ಅದು ನಾಲ್ವಡಿ ವೆಂಕಟಪ್ಪನಾಯಕನ ಆಳ್ವಿಕೆಯಲ್ಲಿ ಎರಡು ಸಾವಿರ ಮಿಕ್ಕಿರಬಹುದು. ಆದರೆ ವಯಾಲ ಬೇಡ ಬಲದ ಮುಂದೆ ಇದು ಮತ್ತು ಬ್ರಿಟಿಷರ ಸೈನ್ಯ ಯಾವ ಲೆಕ್ಕ. ಕ್ಯಾಂಬೆಲ್ನ ವಿರುದ್ಧ ಹೋರಾಡಿದವರು ಕೇವಲ ರೋಹಿಲ ಹಾಗೂ ಅರಬರು ಮಾತ್ರವೆಂದು ಉಲ್ಲೇಖಿಸುವ ಬ್ರಿಟಿಷ ದಾಖಲೆಗಳಲ್ಲಿ ನೈಜ ಅಂಶ ಶೋಧಿಸುವದು ಅಗತ್ಯ. ಅರಬರನ್ನು ಸಂಸ್ಥಾನದ ವಿರುದ್ಧ ಎತ್ತಿಕಟ್ಟುವ ಉದ್ದೇಶ ಇವರಿಗಿತ್ತೆಂದು ಊಹಿಸಬಹುದು. ಯಾಕೆಂದರೆ ನಾಲ್ವಡಿ ವೆಂಕಟಪ್ಪನಾಯಕನ ಜಾವಳ ಮತ್ತು ರಾಜ್ಯಾರೋಹಣ ಮತ್ತು ಮಹಾನವಮಿ ಮೆರವಣಿಗೆಯಲ್ಲಿ ಹೈದ್ರಾಬಾದ ಅರಬರು ಕೊಲ್ಲುತ್ತಾರೆಂದು ಹುಸಿ ಸುಳ್ಳು ಹಬ್ಬಿಸಲಾಗಿತ್ತು. ಇದರಿಂದ ಸಂಸ್ಥಾನದ ಜನತೆ ಅರಬ ರೋಹಿಲರ ವಿರುದ್ಧ ರೊಚ್ಚಿಗೇಳಲೆಂದೇ ಇರಬೇಕು. ವೈರಿಯನ್ನು ವೈರಿಯಿಂದಲೇ ಮುಗಿಸುವ ನೀತಿ ಬ್ರಿಟಿಷರದಾಗಿತ್ತೆಂದು ಬೇರೆ ಹೇಳಬೇಕಿಲ್ಲ.

(ಅ) ಆರ್ಥಿಕ ಸ್ಥಿತಿ-ಗತಿ

"ಯಾವುದೇ ಒಂದು ರಾಜ್ಯವನ್ನು ಕೆಲವೇ ಶಕ್ತಿಗಳು ತಮ್ಮ ಹತೋಟಿಯಲ್ಲಿಟ್ಟುಕೊಂಡು ಆಳುತ್ತವೆ" ಎನ್ನುವುದಕ್ಕೆ ಹಲವಾರು ಘಟನೆಗಳು ಇತಿಹಾಸದುದ್ದಕ್ಕೂ ಸಮರ್ಥಿಸುತ್ತವೆ. ಪ್ರತ್ಯಕ್ಷವಾಗಿ ರಾಜ್ಯದ ರಾಜ್ಯಭಾರ ಅಲ್ಲಿಯ ರಾಜನಿಂದ ನಡೆಯಬಹುದು. ಆದರೆ 'ಧರ್ಮ' ಮತ್ತು 'ಅರ್ಥ' ಗಳು ಆ ದೇಶವನ್ನು ಪರೋಕ್ಷವಾಗಿ ಆಳುತ್ತವೆ. ಆದರಂತೆ ಪ್ರಬಲ ರಾಜನಿಂದ ಪ್ರಬಂಧ, ಅಧಿಕಾರ, ಸುಭದ್ರ ಸರಕಾರ ಸಿಗಬಹುದು. ಆದರೆ ಸಂಪನ್ಮೂಲ ಬಳಸಿಕೊಳ್ಳದ ಆಳಿತ ಸಮೃದ್ಧವಾಗದು. ಪುರುಷಾರ್ಥದ ಎರಡನೆಯ ಆದಿಗಲ್ಲು 'ಅರ್ಥ'. ಅತ್ಯುತ್ತಮ ಆರ್ಥಿಕ ನೀತಿ ಅನುಸರಿಸುವ ಯಾವುದೇ ರಾಜ್ಯವಿರಲಿ ಅದು ಪ್ರಜಾಸತ್ತೆಯ ಪ್ರಗತಿ ಬಯಸುತ್ತಿರುತ್ತದೆ. ಇದರರ್ಥ ರಾಜಸತ್ತೆಯಿಂದಾದ ಜನಕಲ್ಯಾಣ ಜಾಗೃತಿ.

ಈ ನಿಟ್ಟಿನಲ್ಲಿ ಸುರಪುರ ಸಂಸ್ಥಾನದ ಆರ್ಥಿಕ ನೀತಿಯನ್ನು ಅಧ್ಯಯನ ಮಾಡುವುದು ಅತ್ಯಗತ್ಯ. ತನ್ನ ಪ್ರಾರಂಭದಿಂದ ಪತನದವರೆಗೂ ಆರ್ಥಿಕ ಸವಾಲುಗಳನ್ನೇ ಎದುರಿಸಿದ ಸುರಪುರವು ಅಭ್ಯಾಸಿಗರಿಗೆ ಅಪರೂಪದ ಆಹ್ವಾನ ನೀಡಿದೆ. ನಮ್ಮ ನಾಡಿನ ಅಮೂಲ್ಯ ಆಸ್ತಿಯಾದ ನಾಣ್ಯಗಳು ಇತಿಹಾಸದ ರಚನೆಗೆ ಅಪಾರ ಸಾಮಗ್ರಿಗಳನ್ನು ಒದಗಿಸುತ್ತವೆ. ಸುರಪುರದ ಆರ್ಥಿಕ ನೀತಿ ನಿರ್ಣಯಿಸುವ ಪೂರ್ವದಲ್ಲಿ ಚಲಾವಣೆಗಿದ್ದ ಇಲ್ಲಿಯ ನಾಣ್ಯಗಳ ಸ್ವರೂಪ ತಿಳಿಯುವುದು ತುಂಬಾ ಅವಶ್ಯವಾದುದು.

1. ನಾಣ್ಯ ಚಲಾವಣೆ :

ವಿಜಯನಗರ ಸಾಮ್ರಾಜ್ಯದ ಪತನಾನಂತರ ಹುಟ್ಟಿಕೊಂಡ ಅನೇಕ ಸಣ್ಣಪುಟ್ಟ ರಾಜ್ಯಗಳು ವಿಜಯನಗರದ ನಾಣ್ಯಗಳನ್ನೇ ಅನುಕರಿಸಿದವು.[1] ಮುಂದೆ ಬಂದ ಚಿತ್ರದುರ್ಗ ಪಾಳೆಗಾರರ ಪರಿಸರದ ಹಲವು ಮಾಂಡಲಿಕರಿಗೂ ಇವರೆ ವಸ್ತುತಃ ಮೇಲ್ಪಂಕ್ತಿ ಹಾಕಿಕೊಟ್ಟರು.[2] ವಿಜಯನಗರ ದೊರೆಗಳ ನಾಣ್ಯದ ಮೇಲೆ ಅನೇಕ ಬಗೆಯ ಲಾಂಛನಗಳಿದ್ದವು. ದೇವತೆಗಳಾದ — ಲಕ್ಷ್ಮೀನಾರಾಯಣ, ಲಕ್ಷ್ಮಿ, ನರಸಿಂಹ, ವೆಂಕಟರಮಣ, ಬಾಲಕೃಷ್ಣ, ಉಮಾಮಹೇಶ್ವರ, ದುರ್ಗಾ, ಸರಸ್ವತಿ, ಬ್ರಹ್ಮ, ಶ್ರೀರಾಮ, ಹನುಮಂತ, ಅದರಂತೆ ವರಾಹ, ಗರುಡ, ಆನೆ, ಸಿಂಹ, ಗಂಡಭೇರುಂಡದಂತಹ ಮುಂತಾದ

---

1. ಡಾ. ಎ. ವಿ. ನರಸಿಂಹಮೂರ್ತಿ — ಕರ್ನಾಟಕ ನಾಣ್ಯಸಂಪತ್ತು. ಪುಟ-30.
2. B.C.Rice (Ed) Mysore Vol.2 West-Minster 1897, p-82.

ಪ್ರಾಣಿ ಪಕ್ಷಿಗಳ ಚಿತ್ರಗಳೂ ಇದ್ದವು. ಇವೆಲ್ಲ ನಾಣ್ಯದ ಮೇಲ್ಭಾಗದಲ್ಲಿದ್ದು, ಹಿಂಬದಿಯಲ್ಲಿ ಆಳುವ ದೊರೆಯ ಹೆಸರನ್ನು ಕನ್ನಡ ಇಲ್ಲವೆ ದೇವನಾಗರಿ ಲಿಪಿಯಲ್ಲಿ ಕೆತ್ತಲಾಗಿರುತ್ತಿತ್ತು. ಗದ್ಯಾಣ, ಕಾಟಿ, ಪಣ, ಹಾಗ, ಚಿನ್ನ, ತಾರಾ, ಜಿತಲ್ ಎಂಬ ಹೆಸರಿರುವ ನಾಣ್ಯಗಳನ್ನು ಬಂಗಾರ, ಬೆಳ್ಳಿ, ತಾಮ್ರಗಳಿಂದ ತಯಾರಿಸುತ್ತಿದ್ದರೆಂದು[3] ಚರಿತ್ರೆಯಿಂದ ತಿಳಿದುಬರುತ್ತದೆ.

ಸುರಪುರ ಸಂಸ್ಥಾನದ ಆರಂಭವೇ ಆದಿಲ್‌ಶಾಹಿ ದವಡೆಯಲ್ಲಿ ಆರಂಭವಾಗಿದೆ. ಹೀಗಾಗಿ ಸ್ವತಂತ್ರ ನಾಣ್ಯ ಟಂಕಿಸಿ ಚಲಾವಣೆಗೆ ತಂದಿರುವ ಸಾಧ್ಯತೆಗಳಂತೂ ಇಲ್ಲ. ಮೊದಲು ಇದೂ ಸಹ ವಿಜಯನಗರದ ನಾಣ್ಯವನ್ನೇ ಜಾರಿಗೆ ತಂದಿರಬಹುದು. ಬಹಮನಿಗಳು ದೇಹಲಿ ದೊರೆಗಳ ಚಿನ್ನ, ಬೆಳ್ಳಿ ತಾಮ್ರದ ನಾಣ್ಯಗಳನ್ನೇ ಅಚ್ಚುಹಾಕಿಸಿದರು. ಖಿಲ್ಜಿ, ತುಘಲಕ ನಾಣ್ಯಗಳ ಪ್ರಭಾವ ಹೆಚ್ಚಿತ್ತು. ತರುವಾಯ ಆದಿಲ್‌ಶಾಹಿಗಳು ಬಹಮನಿಯ ನಾಣ್ಯಪದ್ಧತಿಯನ್ನೇ ಆರಂಭದಲ್ಲಿ ಅನುಕರಿಸಿದರು. ಮೊದಲಬಾರಿಗೆ ಅಲಿಆದಿಲ್‌ಶಾಹಿ ಮುದ್ರಿಸಿದ ತಾಮ್ರದ ನಾಣ್ಯಗಳೆ ಚಲಾವಣೆಗೆ ಬಂದವು. ಯಾಕೆಂದರೆ ಸಾಮಂತ ರಾಜ್ಯವಾದುದರಿಂದ ಇವುಗಳನ್ನೇ ಸುರಪುರವು ಸಹ ಒಪ್ಪಿಕೊಳ್ಳಬೇಕಾಯಿತು. ಹಿಂಬದಿ ಮತ್ತು ಮುಂಬದಿಗಳಲ್ಲಿ ಬರೆಹ ರಾಜನ ಹೆಸರು ಹಾಗೂ ಒಂದು ಸಾಲಿನ ಪರ್ಶಿಯನ್ ಪದ್ಯವನ್ನು ಇಲ್ಲಿ ಅಚ್ಚಿಸಿದರು. ಔರಂಗಜೇಬನ ಕಾಲದಲ್ಲಿ ಚಿನ್ನದ 'ಪಣಂ' ಎಂಬ ನಾಣ್ಯಗಳನ್ನು ದೇವನಹಳ್ಳಿ ನಂದಿ ಟಂಕಸಾಲೆಯಲ್ಲಿ ಮುದ್ರಿಸಿ ಚಲಾವಣೆಗೆ ತಂದರು. ಇವರ ಆಳ್ವಿಕೆಯಲ್ಲಿ ನಗರನಾಡಿನ ಕೇಂದ್ರ ಕೋಟೆಯಾದ ನಗರವು ಮೊಘಲರ ಬೆಳ್ಳಿ, ಬಂಗಾರದ ನಾಣ್ಯಗಳನ್ನು ಮುದ್ರಿಸುವ ಟಂಕಸಾಲೆ ಸ್ಥಳವಾಗಿತ್ತೆಂದು ಉಲ್ಲೇಖಿಸಲಾಗಿದೆ.[3ಎ] ತರುವಾಯ ಮರಾಠರೂ ಸಹ ಮೊಘಲರ ರೀತಿಯ ವಿಶೇಷ ನಾಣ್ಯಗಳನ್ನು ರೂಢಿಸಿದರು. ಸುರಪುರವು ಇಂಥ ರಾಜರ ಅಧೀನವಿರುವ ಪ್ರಯುಕ್ತ ಅವರ ನಾಣ್ಯವನ್ನು ತನ್ನ ಜನರಿಗೆ ನೀಡುತ್ತಾ ಹೋಯಿತೆಂದು ಮಾತ್ರ ಈಗ ಊಹಿಸಬಹುದು.

ಸುರಪುರ ಅರಸರ ಪರಿಸರದಲ್ಲಿದ್ದ ಕರ್ನಾಟಕದ ಕೆಲವೊಂದು ರಾಜರ ನಾಣ್ಯಪದ್ಧತಿಯ ವೈಶಿಷ್ಟ್ಯ ನೋಡುವದಾದರೆ '' ಹೈದರ ಅಲಿಯು ಕ್ರಿ.ಶ.1779ರಲ್ಲಿ ಚಿತ್ರದುರ್ಗವನ್ನು ವಶಪಡಿಸಿಕೊಂಡಾಗ ಅಲ್ಲಿ ಚಿನ್ನದ ನಾಣ್ಯಗಳಾದ ಗಬರು, ಮೊಹರು, ಪುತಲಿ, ದಾರವಾಡಿ, ಅಚ್ಯುತರಾಯ

---

3. R.S.Panchamukhi - The Coinage of the Vijayanagar Dynastics, V.S.C. Vol. 1936, p-110.

3ಎ. Annual Report of the Archaeological Department of His Exalted Highness the Nizam's Dominions 1924-25 p-19.

ಹೊನ್ನು, ಶಿವರಾಯಿಹೊನ್ನು, ದೊಡ್ಡಹೊನ್ನು, ಪ್ರಲಾಯಕಾವೇರಿಹೊನ್ನು, ದೇವರಾಯ ಹೊನ್ನು, ಪಾಪನಾಯಕಿಹೊನ್ನು ದೊರಕಿದವು.[4] ಎಂದು ಭೀಮಾಜಿ ಪಂತನ ಬಖೈರು ಹೇಳುತ್ತದೆ. ಅದರಂತೆ "ಬೆಳ್ಳಿಯ ನಾಣ್ಯಗಳಾದ ರಾಯಲ, ಅಷ್ರಫಿ, ಪವುರ" ಎಂಬವು[5] ಇದ್ದವಂತೆ 'ಶಿವರಾಯ' ಎಂಬುದು ಶಿವಾಜಿ ಹೆಸರನ್ನು ಸೂಚಿಸುತ್ತದೆ.[6] 'ಲಾರಿ' ಎಂಬ ಪರ್ಶಿಯನ್ ಮೂಲದ ಒಂದು ಬೆಳ್ಳಿ ನಾಣ್ಯವನ್ನು ಅಲ್ಲಿಯ ವ್ಯಾಪಾರಿಗಳು ಇಲ್ಲಿಗೆ ತಂದರೆಂದು,[7] ಅದೇ ಮುಂದೆ ವಿಜಾಪೂರದ ದೊರೆಗಳು ಬಳಸಿಕೊಂಡರೆಂದು ಸಭಾಸದ್ ತನ್ನ ಬಖೈರದಲ್ಲಿ ಬರೆದಿದ್ದಾನೆಂದು ಡಾ: ದೇಶಪಾಂಡೆ ಹೇಳಿದ್ದಾರೆ. ಇವೆಲ್ಲ ಉದಾಹರಿಸುವ ಉದ್ದೇಶವಿಷ್ಟೆ: ಸುರಪುರವು ಇವರೆಲ್ಲರ ಪರಿಸರದಲ್ಲಿ ಬದುಕಿದ ಸಂಸ್ಥಾನ. ಈ ಸಂದರ್ಭದಲ್ಲಿ ಸುರಪುರವು ಸ್ವಂತ ಟಂಕಸಾಲೆಯನ್ನು ಸ್ಥಾಪಿಸಿ, ನಾಣ್ಯ ಮುದ್ರಿಸಿ ಚಲಾವಣೆಗೆ ತಂದಿರುವ ಸಾಧ್ಯತೆ ಇಲ್ಲ. ಯಾಕೆಂದರೆ ಸ್ವತಂತ್ರ ನಾಣ್ಯ ಮುದ್ರಿಸುವಷ್ಟು ವಿಶಾಲ ಮತ್ತು ಶ್ರೀಮಂತ ಸಂಸ್ಥಾನ ಇದಾಗಿರಲಿಲ್ಲ. ಇದರ ಬಗ್ಗೆ ದಾಖಲೆಗಳಂತೂ ಇದುವರೆಗೆ ದೊರೆತಿಲ್ಲ. ವಿಜಾಪೂರ ಮತ್ತು ಪೇಶ್ವೆಗಳೊಂದಿಗೆ ವ್ಯವಹರಿಸುತ್ತಿದ್ದ ಸಂಸ್ಥಾನವು 'ಹೊನ್ನು' ಎಂದೇ ಬಳಸಿದೆ. ಇದು ಬಂಗಾರದ ನಾಣ್ಯವಿರುವ ಸಾಧ್ಯತೆ ಇದೆ. ತರುವಾಯ ಹೈದ್ರಾಬಾದ ನಿಜಾಮನ ಅಧೀನಕ್ಕೆ ಒಳಪಟ್ಟ ಮೇಲೆ ಸಂಪೂರ್ಣ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದುಕೊಂಡಿತು. ಗದ್ವಾಲದಲ್ಲಿ ಮುದ್ರಣಗೊಳ್ಳುತ್ತಿದ್ದ ಬೆಳ್ಳಿ ನಾಣ್ಯಗಳು ಸುರಪುರದಲ್ಲಿ ಚಲಾವಣೆಗೆ ತಂದ ಬಗ್ಗೆ ಅಧಿಕೃತ ಆಧಾರಗಳಿವೆ. 'ಗದ್ವಾಲ' ನಿಜಾಮನ ಸಾಮಂತಿಕೆ ಒಪ್ಪಿಕೊಂಡ ಸಂಸ್ಥಾನ, ಸುರಪುರವಷ್ಟೆ ವ್ಯಾಪ್ತಿಯುಳ್ಳದ್ದು. ನಿಜಾಮನ ಆದೇಶದ ಮೇರೆಗೆ ಅದು ಟಂಕಸಾಲೆ ಸ್ಥಳ ಮಾತ್ರ ಹೊಂದಿತ್ತು. ಆದರೆ ಅಧಿಕಾರ ಅದಕ್ಕಿರಲಿಲ್ಲ. ಇದೇ ಸಂದರ್ಭದಲ್ಲಿ ಮುದ್ರಣಗೊಳ್ಳುತ್ತಿದ್ದ ಹೈದ್ರಾಬಾದ ನಾಣ್ಯಗಳು ಸಂಸ್ಥಾನದಲ್ಲಿ ಅತ್ಯಂತ ಪ್ರಚಾರದಲ್ಲಿದ್ದವು. ನಿಜಾಮನ ರಾಜ್ಯದಲ್ಲಿ ಏಕರೂಪದ ನಾಣ್ಯ ವ್ಯವಸ್ಥೆ ಇರಲಿಲ್ಲ. ಯಾಕೆಂದರೆ ಕ್ರಿ.ಶ.1833ರಲ್ಲಿ ಮುದ್ರಣಗೊಂಡ Quarter Anna (Rs.1/64) ನಾಣ್ಯಗಳು ಬ್ರಿಟೀಷ ಸರಕಾರದ ಸಹಯೋಗದೊಂದಿಗೆ ಬಿಡುಗಡೆ ಮಾಡಿದವುಗಳಾಗಿವೆ. ಒಂದು ಬದಿಯಲ್ಲಿ ಎರಡು ಸಿಂಹಗಳು ಜಾಕ್ ಧ್ವಜವನ್ನು ಎತ್ತಿ ಹಿಡಿದಿವೆ. ಮಧ್ಯದಲ್ಲಿ ಧ್ವಜಸ್ತಂಭವಿದ್ದು ಅದರ

---

4. ಡಾ. ಎಚ್. ಟಿ. ದೇಶಪಾಂಡೆ — ಹರತಿ ಸಿರಿ. ಲೇಖನ: ಚಿತ್ರದುರ್ಗದ ಪಾಳೆಗಾರರ ನಾಣ್ಯಪದ್ಧತಿ. ಪುಟ-456.
5. ಎಂ. ಎಸ್. ಪುಟ್ಟಣ್ಣ — ಚಿತ್ರದುರ್ಗದ ಪಾಳೆಗಾರರು. ಪುಟ-103.
6. ಶಂಕರ ನಾರಾಯಣ ಜೋಷಿ —(ಸಂ) ಕೃಷ್ಣಾಜಿ ಅನಂತ ಸಭಾಸದ — ಛತ್ರಪತಿ ಶ್ರೀ ಶಿವಾಜಿ ರಾಜೇಯಾಂಚಿ ಬಖರ (ಮರಾಠಿ) ಪೂನಾ, ಪುಟ-36.
7. Maharashtra in the age of Shivaji, p-247.

ಮೇಲೊಂದು ಸಣ್ಣ ಸಿಂಹದ ಆಕೃತಿ ಇಳಿಸಲಾಗಿದೆ. ಹಿಂಬದಿಯಲ್ಲಿ ಉರ್ದುವಿನಲ್ಲಿ ಬರೆಯಲಾದ ಅಂಕಿ, ಅಕ್ಷರಗಳು ಹಾಗೂ ಸಮನಾಂತರ ನಿಂತ ತಕ್ಕಡಿ ಚಿಹ್ನೆ ಇದೆ. ಸುತ್ತಲೂ quarter Anna ಎಂಬ ಇಂಗ್ಲೀಷ ಅಕ್ಷರ ಬರೆಯಲಾಗಿದೆ ಆದುದರಿಂದ ಹೈದ್ರಾಬಾದ ವ್ಯಾಪ್ತಿಯಲ್ಲಿ ಜಾರಿಗೆ ಬಂದ ಈ ನಾಣ್ಯಗಳು ಸರಕಾರಗಳೆರಡರ "ನಾಣ್ಯ ಒಪ್ಪಂದ" ಪದ್ಧತಿಯನ್ನು ಪ್ರಚುರಪಡಿಸುತ್ತವೆ. ಆದರೆ ಕ್ರಿ.ಶ. 1840ರಲ್ಲಿ ಮುದ್ರಿತಗೊಂಡ 'One Quarter Anna' ನಾಣ್ಯಗಳು ಬ್ರಿಟಿಷ ಅರಸೊತ್ತಿಗೆಯ ಅಧಿಕಾರಕ್ಕೆ ಸಂಬಂಧಿಸಿದ್ದು ತೋರಿಸುತ್ತವೆ. ಇವು ಕಂಪನಿ ಸರಕಾರ ಹೊರಡಿಸಿದ ಸ್ವತಂತ್ರ ನಾಣ್ಯಗಳು. ಬೆಳ್ಳಿಯಿಂದ ವರ್ತುಲಾಕಾರ ವ್ಯಾಪಿಸಿದೆ. ಹಿಂಬದಿಯಲ್ಲಿ 6ನೆಯ ಜಾರ್ಜನ ಭಾವಚಿತ್ರವಿದೆ. ಇದು ಇಂಗ್ಲೆಂಡ ಮತ್ತು ಇಂಡಿಯಾ ಐಕ್ಯತೆ ಸೂಚಿಸುತ್ತದೆ. ಈ ನಾಣ್ಯಕ್ಕೂ ಸುರಪುರ ಸಂಸ್ಥಾನದಲ್ಲಿ ಚಲಾವಣೆಗಾಗಿ ಮುಕ್ತ ಅವಕಾಶ ಕಲ್ಪಿಸಿಕೊಡಲಾಗಿತ್ತು.

ಸುರಪುರಕ್ಕೆ ಆಡಳಿತಾಧಿಕಾರಿಯಾಗಿ ಬಂದಿದ್ದ ಮೆಡೋಸ್ ಟೇಲರ ತಮ್ಮ ಕಂಪನಿ ನಾಣ್ಯಗಳನ್ನು ಸಂಸ್ಥಾನದಲ್ಲಿ ಚಲಾವಣೆಗೆ ತಂದಾಗ ಆಗ ಇಲ್ಲಿದ್ದ ಗದ್ವಾಲ ಮತ್ತು ಹೈದ್ರಾಬಾದ ನಾಣ್ಯಗಳು ನಿಧಾನವಾಗಿ ದೂರವಾಗತೊಡಗಿದವು.[8] ಯಾಕೆಂದರೆ ಹೈದ್ರಾಬಾದದ 112 ನಾಣ್ಯಕ್ಕೆ ಕಂಪನಿ ಸರಕಾರದ 100 ನಾಣ್ಯ ಸಮವೆಂದು ಸಾರಲಾಗಿತ್ತು. ಇದರ ಬಗ್ಗೆ ಸಂಸ್ಥಾನದಲ್ಲಿ ವಿಶೇಷ ಕಾಯ್ದೆ ತಂದು ವಿನಿಮಯ ಸುಗಮಕ್ಕಾಗಿ ಪಟವಾರಿಗಳನ್ನು ಇಡಲಾಗಿತ್ತು.[9]

ಪತನವಾದ ಸಂಸ್ಥಾನದ ಜನರು ತಾಮ್ರದ ಕೆಲವು ದುಡ್ಡುಗಳಿಗೆ ಹಾರ, ಗಾಡಿ, ಆಣಿ, ದುಡ್ಡು, ಬಿಲ್ಲೆಗಳೆಂದು ಕರೆದುಕೊಂಡಿದ್ದಾರೆ. ತೂತುಬಿಲ್ಲೆ, ಗಟ್ಟಿದುಡ್ಡುಗಳೂ ಇದ್ದವು. ಬ್ರಿಟಿಷರ ನಾಣ್ಯಗಳಿಗೆ ನಮ್ಮ ಜನಪದರು ರಾಜನ ರೂಪಾಯಿ, ರಾಣಿ ರೂಪಾಯಿಗಳೆಂದು ಗುರುತಿಸಿಕೊಂಡಿದ್ದರು. ಯಾಕೆಂದರೆ ಅವುಗಳ ಮೇಲೆ ಜಾರ್ಜ ಮತ್ತು ವಿಕ್ಟೋರಿಯಾ ರಾಣಿಯ ಭಾವಚಿತ್ರಗಳಿದ್ದವು.

2. ಕಂದಾಯ ಅಧಿಕಾರಿಗಳು :

ಸಾಮ್ರಾಜ್ಯದ ಅಧಿಪತಿಗಳು ತಮಗೆ ಸೈನ್ಯ ಸಹಾಯ ಸಲ್ಲಿಸಿದ ತಮ್ಮ ಸಾಮಂತರಿಗೆ ಅನೇಕ ಇನಾಮುಗಳನ್ನು ಹಾಕಿಕೊಡುತ್ತಿದ್ದರು. ಇವುಗಳಲ್ಲಿ ಬಿಜಾಪೂರ ಬಾದಷಹರ 'ಇನಾಮುತ್ತ

---

8. S.N.Prasad -Paramuntcy under Dalhousie p-211.
9. F.D.P. Part-A June 1960 No.420.

ಮಗ' ಮತ್ತು 'ಇನಾಮ ಬದಲವರ್ತನ' ಗಳು ಬಹು ಪ್ರಮುಖ. 'ಇನಾಮುತ್ತಮಗಾ' ವು
ಮತ್ತು 'ಇನಾಮ ಬದಲವತನ' ಗಳು ಬಹುಪ್ರಮುಖ. 'ಇನಾಮುತ್ತುಮಗಾ' ವು ವಂಶಪಾರಂಪರ್ಯವಾಗಿ ನಡೆದು ಬರುವ ಜಹಗೀರಂತೆನಿಸಿದರೆ 'ಇನಾಮ-ಬದಲ-ವತನ' ವು ಕೆಲವು ಪ್ರದೇಶದ ಮೇಲಿನ ದೇಶಗತಿ, ಸರದೇಸಗತಿ, ಸರಸರದೇಸಗತಿ, ಸರನಾಡಗೌಡಕಿ ಮುಂತಾದ ಅಧಿಕಾರದ ಕೊಡುಗೆಗಳಾಗಿವೆ. ಪ್ರಾಂತದ ಉತ್ಪನ್ನದೊಳಗೆ ಇಂತಿಷ್ಟು ಕೊಡಬೇಕೆನ್ನುವ ರಕಮುವೇ 'ಬದಲವತನ' ಎಂದು ಕರೆಯಿಸಿಕೊಳ್ಳುತ್ತದೆ. ಗಡ್ಡಿಪಡ್ಡನಾಯಕನಿಗೆ ಸಗರನಾಡು ಪ್ರದೇಶದ ಮೇಲೆ ಹಾಗೂ ಹಸರಂಗಿ ಪಾಮನಾಯಕನಿಗೆ ನಸರತಾಬಾದ, ಬಾಗಲೋಡಿ, ಯಾದಗೀರ, ಕಲಬುರ್ಗಿ, ರಾಯಚೂರ, ಅಕ್ಕಲಕೋಟ, ನಾಲ್ವತ್ವಾಡ, ದೇವದುರ್ಗ ಮುಂತಾದ ಪ್ರಾಂತ್ಯದ ಮೇಲೆ ಇಂಥ ಹಕ್ಕನ್ನು ಬಿಜಾಪೂರ ಬಾದಷಹರು ಕೊಡಮಾಡಿದ್ದರು. ಅಲ್ಲದೆ ದೇಶಗತಿ, ಸರದೇಸಗತಿ, ಸರಸರದೇಸಗತಿ, ಸರನಾಡಗೌಡಕಿ, ದಾಹಿಜಾ ಅಧಿಕಾರಗಳನ್ನು ಮತ್ತು ವರತನದ ಹಕ್ಕು, ಮಿಸಮು ಪಸಗಿ,[10] ಪಳಗಿ,[11] ಮೀಟವೂರಕ,[12] ದಾವರಾರ ಇನಾಮು, ದಿನಮಾ ಬೀಟ, ಮಿನ್ನಾ, ಇನಾಮ್ಮ ಅನೇಕ ಕಂದಾಯದ ಚಿತ್ತನವನ್ನು ಬಿಜಾಪೂರ ಅರಸರು ಬಿಟ್ಟುಕೊಟ್ಟಿದ್ದರು. ಇವರ ಸನದುಗಳಲ್ಲಿ 'ಸರದೇಸಾಯಿ' ರುಸೂಮಿಗೆ 'ದಾಹಿಜಾ' ಎನ್ನಲಾಗಿದೆ. ಫಾರಸಿ ಭಾಷೆಯ 'ದಹ' ಪದವೇ ಇಲ್ಲಿ ದಾಹಿಜಾ ಎಂದಾಗಿದೆ. ಮೇಲಿನಲ್ಲಿ ಪ್ರದೇಶದ ಉತ್ಪನ್ನದಲ್ಲಿ ಶೇ.10 ರಷ್ಟು ಅಧಿಲ್ಷಾಹಿಗಳಿಗೆ ತುಂಬಿಸಲು ಸುರಪುರದವರಿಗೆ ಆದೇಶಿಸಲಾಗಿತ್ತು. ಮೊಘಲರ ಕಾಲಕ್ಕೆ ಇದು ಶೇ.20,25ಕ್ಕೂ ಹೋಗಿತ್ತು. ಇದನ್ನೇ ಪೇಶ್ವೆಗಳು 'ಚೌಥು' ಪದ್ಧತಿಯಿಂದು ಪ್ರಾರಂಭಿಸಿದರು. ತಮ್ಮ ಆಧೀನಕ್ಕೆ ಒಳಪಟ್ಟ ರಾಜ್ಯದಲ್ಲಿ 'ಚೌಥ' ವಸೂಲಿಗಾಗಿ ಅನೇಕ ಸರದಾರರನ್ನು ನೇಮಿಸಿದರು. ಒಂದು ವೇಳೆ ಚೌಥ ಕೊಡದ ಪ್ರಾಂತ್ಯಗಳನ್ನು ವಶಪಡಿಸಿಕೊಂಡು ಆ ಪ್ರದೇಶಕ್ಕೆ ತಮ್ಮ ಸರದಾರರನ್ನು ನೇಮಿಸುತ್ತಿದ್ದರು. ಇವರೇ ಮುಂದೆ ಸರಂಜಾಮಿ ಸರದಾರರೆನಿಸಿಕೊಂಡರು. ರಾಸ್ತೆ, ಪಟವರ್ಧನ ಮುಂತಾದವರು ಪೇಶ್ವೆಗಳ ಸರಂಜಾಮಿ ಸರದಾರರಾಗಿದ್ದರು. ರಾಕ್ಷಸಭುವನ, ಉದಗೀರ ಯುದ್ಧದಲ್ಲಿ ನಿಜಾಮನು ಸೋತ ಪ್ರಯುಕ್ತ ಪೇಶ್ವೆಗಳು ಬಿಜಾಪೂರ ಭಾಗವನ್ನು ಕಸಿದುಕೊಂಡರು. ಇಲ್ಲಿ ಸುರಪುರದ ಸರದೇಸಗತಿ, ಬೇಡರ ಟಣೆ ಇತ್ತು. ಈ ರುಸೂಮುಗಳ ಸಲುವಾಗಿಯೇ ಪೇಶ್ವೆ ಮತ್ತು ಸರಂಜಾಮಿ ಸರದಾರರಿಗೆ ಕಲಹಗಳಾದವು.

---

10. ಪಸಗಿ — ಸಂತೆಯಲ್ಲಿ ಮಾರಾಟಕ್ಕಿಟ್ಟ ತರಕಾರಿಗಳ ಮೇಲಿನ ಇಂತಿಷ್ಟು ಭಾಗ ತೆರಿಗೆ
11. ಪಳಗಿ — ಗಾಣಿಗರು ಮಾರುವ ಎಣ್ಣೆಯ ಮೇಲಿನ ಇಂತಿಷ್ಟು ಭಾಗಕರ.
12. ಮೀಟವೂರಕ — ಉಪ್ಪಿನ ಮಾರಿ ಮೇಲಿನ ಇಂತಿಷ್ಟು ಭಾಗ ಕಂದಾಯ.

3. ಆದಾಯದ ವಿವಿಧ ಮೂಲಗಳು :

ಆದಾಯದ ಮೂಲ ವರಮಾನ ತೆರಿಗೆಯಾಗಿತ್ತು. ಸಂಸ್ಥಾನದ ಆರಂಭದಿಂದಲೂ ಅನೇಕ ಅರಸರು ಆರ್ಥಿಕ ನೀತಿಯಲ್ಲಿ ಹಲವು ಬದಲಾವಣೆ ಮಾಡುತ್ತಾ ಬಂದಿದ್ದಾರೆ. ಕಾರಣ ತೆರಿಗೆ ಕೊಡಲು ತತ್ತರಿಸುವ ಮೂಲಗಳನ್ನು ಬದುಕಿಸಬೇಕಿತ್ತು. ನೈಸರ್ಗಿಕ ವಿಕೋಪಗಳಿಂದ ಸಂಪನ್ಮೂಲಗಳ ಸದ್ಬಳಕೆಯಾಗದೆ ಹೋದಾಗ ಕಂದಾಯ ವಸೂಲಿ ಕಷ್ಟವಾಗುತ್ತದೆ. ಆಗ ಖಜಾನೆ ಖಾಲಿ ಇರುವ ಪ್ರಸಂಗ ಎದುರಾಗಿ ಯೋಜನೆಗಳೆಲ್ಲ ಬುಡಮೇಲಾಗುವ ಸಾಧ್ಯತೆ ಸೃಷ್ಟಿಸಿದಂತಾಗುತ್ತದೆ. ಆದರೂ ಮುತ್ಸದ್ದಿ ಮಂತ್ರಿಗಳು ಹೊಸ ಆರ್ಥಿಕ ವ್ಯವಸ್ಥೆಯಲ್ಲಿ ಅತೀವ ಆಸಕ್ತಿ ತಳೆದು ಸಂಸ್ಥಾನವನ್ನು ಶ್ರೀಮಂತಗೊಳಿಸಿದರು. ಒಂದು ದೃಷ್ಟಿಯಿಂದ ಅರಸರು ಕೇವಲ ಜಹಗೀರು ವಿಸ್ತರಣೆ ಮಾಡಿದರೆ ಆಡಳಿತಗಾರರು ಆರ್ಥಿಕ ಸುಧಾರಣೆ ಕೈಗೊಂಡಿದ್ದಾರೆನ್ನಬಹುದು. ಕಾಣಿಕೆ, ಪೌಢು, ಖಂಡಣಿ, ನಜರಾಣ ಇನ್ನಿತರ ರೂಪದ ಹಣ ಸಂದಾಯಕ್ಕಾಗಿ ಮೇಲಿನಿಂದ ಸಂಸ್ಥಾನದ ಅರಸರಿಗೆ ಒತ್ತಾಯ ಬರುತ್ತಿತ್ತು. ಆಗ ರಾಜ್ಯದ ವಿವಿಧ ಮೂಲಗಳು ತೆರಿಗೆ ಭಾರದಿಂದ ತತ್ತರಿಸಿ ಹೋದವು. ಇಂಥ ಸಂದರ್ಭದಲ್ಲೂ ಸಂಸ್ಥಾನವನ್ನು ಆರ್ಥಿಕವಾಗಿ ಬದುಕಿಸಿದ ಮೂಲ ಆದಾಯಗಳೆಂದರೆ—

1. ಭೂಕಂದಾಯ
2. ಮಾರಾಟ ತೆರಿಗೆ
3. ವೃತ್ತಿ ತೆರಿಗೆ
4. ಗುತ್ತಿಗೆ ತೆರಿಗೆಗಳು ಬಹು ಪ್ರಮುಖವಾದವುಗಳು.

1. ಭೂಕಂದಾಯ : ಸಂಸ್ಥಾನಕ್ಕೆ ಮೂಲ ಆದಾಯವೆಂದರೆ ಭೂಕಂದಾಯ. ಭೂಮಿಯ ಫಲವತ್ತತೆ ಆಧಾರದ ಮೇಲೆ ಭೂತೆರಿಗೆಯನ್ನು ವಿಧಿಸಲಾಗಿತ್ತು.[13] ಕಂದಾಯ ಇಲಾಖೆಯ ದಿವಾನನಾಗಿದ್ದ ನಿಹಿಂ ವೀರಪ್ಪನು ಸಂಸ್ಥಾನದ ಭೂಭಾಗಗಳನ್ನು 'ಮಂಡೇವಾಳ ಮರಡಿ, ತೋರಣಹಳ್ಳಿ ಮಸಬು, ಅಂದೇರ ಎರಿ' ಎಂದು ವಿಭಾಗಿಸಿದ್ದ.[14] ಅದರಂತೆ ನೀರಾವರಿ, ಬಂಜರು, ಜೋಳಗು, ಕಲ್ಲ ಗಳೆಂದು ಸಹ ವರ್ಗೀಕರಿಸಲಾಗಿತ್ತು. ಮಂತ್ರಿ ವೀರಪ್ಪ ಕಟ್ಟಿಸಿದ ಬಹಳ ಕಟ್ಟೆಗಳೇ ಭೂಮಿಯ

---

13. ಸು.ತಾ.ದ. ಪುಟ-50.
14. ಡಾ.ವಿ.ಶಿವಾನಂದ — ಸಗರನಾಡಿನ ಶಿವಶರಣರು. ಪುಟ-6.

ಅಳತೆಗೆ ಮಾಪನವಾದವು.[15] ಇದರ ಸುತ್ತ ಹಗ್ಗವಿಡಿದು ಅಳತೆ ಮಾಡಿ 'ಬಿಘಾ' ಪ್ರಮಾಣವೆಂದು ಗುರುತಿಸಿಕೊಳ್ಳುತ್ತಿದ್ದರು. ಮುಂಗಾರಿ, ಹಿಂಗಾರಿ ಬೆಳೆಗಳಿಗೆ ನಿಜಾಮನ ಕಾಲದಲ್ಲಿ ಖಾರಿಫ್, ಮತ್ತುರಾಬಿ ಎಂದ್ಹೆಸರು.

ಮಂತ್ರಿ ನಿಸ್ಸೀಮ ವೀರಪ್ಪನು ಸಂಸ್ಥಾನದಲ್ಲಿ ಮುಲ್ಕಿ ವ್ಯವಸ್ಥೆಗೆ ಮಹತ್ವದ ಹೊಸತನ ತುಂಬಿದ.[16] ಇದರಿಂದ ಭೂಮಿಯ ಪುನರ್ ವರ್ಗೀಕರಣ, ತೆರಿಗೆ, ಜಮಾಬಂಧಿ ಕಾರ್ಯಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದ್ದವು. ಕಂದಾಯಗಳಾದ ಮೊಹತ್ರಫ್, ಕಲಾಲ, ಶಾಹಿದ, ಅಬಕಾರಿಗಳಲ್ಲಿ[17] ಭೂಕಂದಾಯವನ್ನು ವಿಶೇಷವಾಗಿ ಪರಿಗಣಿಸಲಾಯಿತು. ದೇವರು, ಧರ್ಮ, ಶಿಕ್ಷಣದ ಹೆಸರಲ್ಲಿ ಕೊಟ್ಟ ಇನಾಮು ಜಮೀನುಗಳ ಮೇಲೆ ಕಂದಾಯವಿರಲಿಲ್ಲ. ಅದರಂತೆ ರಾಜಪರಿವಾರಕ್ಕೆ ನೀಡಿದ ಜಹಗೀರುಗಳು ಸಹ ತೆರಿಗೆಯಿಂದ ಹೊರಗುಳಿದಿದ್ದವು. ಸಂಸ್ಥಾನದ ಭೂಕಂದಾಯಕ್ಕೆ ಇವುಗಳಿಂದ ಬಲವಾದ ಹೊಡೆತ ಬಿದ್ದಿತ್ತು. ಅನಿಶ್ಚಿತ ಮಳೆಗಾಲದಿಂದ ಬರಗಾಲ ಬಿದ್ದಾಗ ಮತ್ತು ನೈಸರ್ಗಿಕ ವಿಕೋಪಗಳಿಗೆ ತುತ್ತಾದಾಗ ಕಂದಾಯ ವಿನಾಯಿತಿ ನೀಡಿದ ಬಗ್ಗೆ ದಫ್ತರಗಳು ದಾಖಲಿಸಿವೆ. ಈ ಎಲ್ಲಾ ಪರಿಸ್ಥಿತಿಗಳಲ್ಲಿ 'ಭೂಕಂದಾಯದ ಸಮಪಾತಳಿ ಕಾಪಾಡಿಕೊಂಡು ಮೂಲ ಆದಾಯಕ್ಕೆ ಧಕ್ಕೆ ಆಗದಂತೆ ಎಚ್ಚರ ವಹಿಸಿದ್ದು' ಸಂಸ್ಥಾನದ ಭೂ ಆರ್ಥಿಕ ನೀತಿಯ ವಿಶೇಷವಾಗಿದೆ.

ಚಕ್ರವರ್ತಿಗಳಿಗೆ 'ಚೌಥ' ಭಾಗ ಕಡ್ಡಾಯವಾಗಿ ಕೊಡಬೇಕಾಗಿರುವುದರಿಂದ ಇಲ್ಲಿಯ ರಾಜರು ತಪ್ಪದೆ 'ದಾಹಿಜಾ' ಎತ್ತುತ್ತಿದ್ದರು. ಭೂಹಿಡುವಳಿ, ಮಣ್ಣಿನಗುಣ, ಬೆಳೆಗಳ ಆಧಾರದ ಮೇಲೆ ಕಂದಾಯ ನಿಗದಿಗೊಳಿಸಿದ್ದರೂ ಕೆಲವೊಂದು ಸಲ ರೈತರಿಗೆ ಭಾರಿ ಬೆಲೆತೆತ್ತ ಬೇಕಾದ ಪ್ರಸಂಗ ಎದುರಾಗಿದ್ದವು. ಎರಡೆರಡು ಸಲ ತೆರಿಗೆ ಕಟ್ಟಿದ ದುರ್ದೈವಿಗಳು, ಜಮೀನುದಾರರ ದಬ್ಬಾಳಿಕೆಗೆ ಬಗ್ಗದೆ ಸಂಸ್ಥಾನವೆ ಬಿಟ್ಟು ನಿಜಾಮ ರಾಜ್ಯದಲ್ಲಿ ಆಶ್ರಯ ಪಡೆದ ಉದಾಹರಣೆಗಳು ಸಾಕಷ್ಟಿವೆ. ದೇಸಾಯಿ, ದೇಶಪಾಂಡೆ, ನಾಡಗೌಡ, ನಾಡಕುಲಕರ್ಣಿ, ಪಟವಾರಿ ಮುಂತಾದವರಿಂದ ಜನರಿಗೆ ನಿಜವಾದ ಕಂದಾಯ ಅಧಿಕಾರಿ ಯಾರೆಂಬುದೆ ಗೊಂದಲಹುಟ್ಟುತ್ತಿತ್ತು. ಕೊಡು-ಕೊಳ್ಳುವಿಕೆಗೆ ರಶೀದಿಗಳಿಲ್ಲದಿರುವದೆ ಈ ಎಲ್ಲಾ ದ್ವಂದ್ವ ವ್ಯವಸ್ಥೆಗೆ ಮೂಲಕಾರಣವಾಗಿತ್ತು. ಪ್ರತಿಯೊಬ್ಬ ರೈತನ ವೈಯುಕ್ತಿಕ ದಾಖಲೆ, ಬಾಕಿ, ಬೆಳೆ, ಭೂಮಿ ಬಗ್ಗೆ ವಿವರಗಳೇ ಇಟ್ಟಿರಲಿಲ್ಲ.

---

15. ಡಾ. ವಿ. ಜಿ. ಪೂಜಾರ — ಕಡ್ಲಪ್ಪ ಮತ್ತು ವೀರಪ್ಪನವರು. ಪುಟ-29.
16. TBRPS p-7.
17. FDP Part-A June 1860 No.420

<u>ವಸೂಲಿ :</u> ಕಂದಾಯ ಅಧಿಕಾರಿಗಳು 'ಕಸಬೆ'ಯನ್ನು ಕೇಂದ್ರವಾಗಿಟ್ಟುಕೊಂಡು ಹಳ್ಳಿಗಳಲ್ಲಿ ಅಧಿಕೃತವಾಗಿ ತೆರಿಗೆ ವಸೂಲ್ಗೈಯುತ್ತಿದ್ದರು. ಜಮೀನುದಾರ, ಜಹಗೀರುದಾರ, ನಾಡಗೌಡ, ನಾಡಕುಲಕರ್ಣಿಗಳಿಂದ ವಸೂಲಿ ಮಾಡಲು ಅಧಿಕಾರ ನೀಡಿದ್ದರು. ರಾಜನಿಗೆ ವರ್ಷಕ್ಕೊಮ್ಮೆ ಕಾಣಿಕೆ ಜೊತೆ ಈ ಭೂಕಂದಾಯ ಸಲ್ಲಿಸುವ ಪದ್ಧತಿ ಇವರು ಹಾಕಿಕೊಂಡಿದ್ದರು.

ನಿಜಾಂ ವೀರಪ್ಪನ ಭೂಕಂದಾಯ ವ್ಯವಸ್ಥೆ ಜನಾನುರಾಗ ಗಳಿಸಿತಲ್ಲದೆ ಸಂಸ್ಥಾನಕ್ಕೆ ಸಾಕಷ್ಟು ಆದಾಯ ತಂದಿತ್ತು. ಆದರೆ ಬಹುದಿನ ಈ ವ್ಯವಸ್ಥೆಯನ್ನು ಜಮೀನುದಾರರು ಬಾಳಲು ಬಿಡಲಿಲ್ಲ. ಯಾಕೆಂದರೆ ವಸೂಲಿಯಾದ ಕಂದಾಯವು ನೇರವಾಗಿ ಸಂಸ್ಥಾನಕ್ಕೆ ಸಲ್ಲುತ್ತಿರುವುದರಿಂದ ಮಧ್ಯವರ್ತಿಗಳು ನಗಣ್ಯರಾದರು. ಗೌಣಗೊಂಡವರೆಲ್ಲ ರಾಜನ ಮೇಲೆ ಒತ್ತಡ ತಂದು ಪೂರ್ವದ ವಾರ್ಷಿಕ ಪದ್ಧತಿಗೆ ಮತ್ತೆ ಪೀಠಿಕೆ ಹಾಡಿದರು. ಅನೇಕ ಮಮ್ಲತದಾರರು ಒಳ್ಳೆಯ ಜಮೀನುಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದರಲ್ಲದೆ, ಅದರ ಕಂದಾಯವೇ ಕಟ್ಟುತ್ತಿರಲಿಲ್ಲ. ಕಂದಾಯ ಕಡಿಮೆಯಾದಾಗ ಯಾವಾಗಲೂ ಬೆಳೆನಷ್ಟವಾದಾಗ ಮಾಡಿದ ಕಂದಾಯ ಮನ್ನಾವನ್ನು ಈಗ ಎತ್ತಿ ಭರ್ತಿ ಮಾಡಿಕೊಳ್ಳುತ್ತಿದ್ದ ಅಪರೂಪದ ಘಟನೆ ಸಂಸ್ಥಾನದಲ್ಲಿ ಜರುಗಿವೆ. ಅನೇಕ ಜಹಗೀರು, ಜಮೀನುಗಳು ಅಧಿಕೃತವಿರಲಿಲ್ಲ. ಇವೆಲ್ಲ ಭೂಕಂದಾಯಕ್ಕೆ ವಂಚಿಸುವ ವತನಗಳಾಗಿದ್ದವು. ಬ್ರಾಹ್ಮಣ, ಪೂಜಾರಿ, ಬೇಡ ಮುಖಂಡ, ರಾಜ, ಸೇವಕ, ಮುತ್ಸದ್ದಿ, ಸಿಲ್ಲೇದಾರ, ಜೋಷಿ, ಜಂಗಮ, ಮುಸ್ಲಿಂ, ಮುನಿ, ನೃತ್ಯಗಾತಿ ಮುಂತಾದವರು ಇಂಥ ಜಮೀನುಗಳ ವಾರಸುದಾರರಾಗಿ ಕೂರಿಗೆ[18] ಕೇವಲ 3 ರೂ.ಭೂ ತೆರಿಗೆ ಕಟ್ಟುತ್ತಿದ್ದರೆಂದು ಟೇಲರ ಹೇಳುತ್ತಾನೆ.[19]

ಭೂಕಂದಾಯ ಕಕ್ಷೆಯೊಳಗಿರದ ಇಂಥ ಎಷ್ಟೋ ಜಹಗೀರುಗಳು ರಾಜ್ಯದ ಬೊಕ್ಕಸಕ್ಕೆ ಭಾರಿ ಹಾನಿಯನ್ನುಂಟು ಮಾಡುತ್ತಿವೆಯೆಂದು ರಾಜನ ಗಮನಕ್ಕೆ ಬಂದಿರಲಿಲ್ಲವೆಂದಲ್ಲ; ಇವರ ಮೇಲೆಯೇ ಕಾನೂನು ಜರುಗಿಸಿ ಆಡಳಿತ ಕಳೆದುಕೊಳ್ಳಲು ಹಾಗೂ ಅಂತಃಕಲಹವೆಬ್ಬಿಸಿಕೊಳ್ಳಲು ಅರಸರು ಸಿದ್ಧರಿಲ್ಲ. ಇದೇ ಸಂದರ್ಭದಲ್ಲಿ ಆಗಮಿಸಿದ ಮೆಡೋಸ್ ಟೇಲರನಿಂದ ಸಂಸ್ಥಾನವು ಭೂಕಂದಾಯದಲ್ಲಿ ಭಾರಿ ಬದಲಾವಣೆ ಬಯಸಿತು. ಭೂಕಂದಾಯ ವಂಚಕರ ಮೇಲೆ ತೀವ್ರ ನಿಗಾ ಇಟ್ಟು ಖಾಲಿಯಾದ ಖಜಾನೆಗೆ ಕಾಯಕಲ್ಪವಾದ. ಒಬ್ಬ ರೈತ ಪದೇ ಪದೇ ತೆರಿಗೆ ವಸೂಲಿಗೆ ಒಳಗಾಗುವದನ್ನು

18. 1 ಕೂರಿಗೆ — 30 ಬಿಘಾ ಭೂಮಿ.
19. FPC 29 Nov. 1845 No.249

ತೆಯಲು ರಾಜ ಮುದ್ರೆ ಮತ್ತು ರುಜುವಿರುವ ರಸೀದಿಗಳನ್ನು ನೀಡಿದ. ಈ ವ್ಯವಸ್ಥಿತವಾದ ದಾಖಲಾತಿಗಳಿಂದ ಕಂದಾಯ ವಸೂಲಿಗಾರರೆಲ್ಲ ಜಡಪಡಿಸಿದರು.

ಉತ್ಪಾದನೆ ಆಧಾರದ ಮೇಲೆ ಭೂಮಿಯ ಬೆಲೆ, ಬೆಳೆಯ ಪ್ರಮಾಣ, ಭೂಮಿಯ ಬಗೆಗಳನ್ನು ನಿರ್ಧರಿಸಿ ಭೂಕಂದಾಯದ ಪದ್ಧತಿ ಅವಲಂಬಿಸುವಂತೆ ಮಾಡಿದನು. ಅತಿಹೆಚ್ಚು ತೆರಿಗೆ ವಸೂಲಿ ಮಾಡಿದ ಪಟೇಲ, ಪಟವಾರಿ, ಕುಲಕರ್ಣಿಗಳಿಗೆ ಬಹುಮಾನ ನೀಡುವ ನೂತನ ಆರ್ಥಿಕ ನೀತಿ ಜಾರಿಗೆ ತಂದು[20] ಭೂ-ಸಂಪನ್ಮೂಲಗಳ ಸಮಗ್ರ ಸಂಪತ್ತನ್ನು ಸಂಸ್ಥಾನಕ್ಕೆ ಬಳಸಿಕೊಳ್ಳುವಲ್ಲಿ ಯಶತಾಳಿದ ಬಗ್ಗೆ ಕಡತಗಳು ಇಂದಿಗೂ ಸಾಕ್ಷಿ ನುಡಿಯುತ್ತವೆ.

ಹುಣಸಗಿ ಮತ್ತು ಕಕ್ಕೇರಿ ಭಾಗದಲ್ಲಿ ಸ್ವತಃ ತಾನೆ ಜಮಾಬಂದಿಗೆ ಹೋದ ಟೇಲರನು ಪೂರ್ವದ ಎಲ್ಲಾ ಭೂ-ಕಂದಾಯದ ಲೆಕ್ಕಪತ್ರಗಳನ್ನು ಪರಿಶೀಲಿಸಿದ. ದೊಡ್ಡಹಿಡುವಳಿ – ಚಿಕ್ಕ ಹಿಡುವಳಿ ಎಂಬ ಯಾವ ಲೆಕ್ಕವಿಲ್ಲದೆ ಎತ್ತುತ್ತಿದ್ದ ತೆರಿಗೆ ಪದ್ಧತಿ ಕಿತ್ತೊಗೆದು 30 ಬಿಘಾಭೂಮಿಗೆ 7½ ರೂ. ವಾರ್ಷಿಕ ತೆರಿಗೆಯನ್ನು ಏರಿಸಿದನು. ಫಲವತ್ತಾದ ಜಮೀನುಗಳಿಗೆ ವಾರ್ಷಿಕ 3 ರೂ. ತೆರಿಗೆ ವಿಧಿಸಿ 6 ವರ್ಷದವರೆಗೆ ಗುತ್ತಿಗೆ ನೀಡುತ್ತಿದ್ದನು. ಇದರಿಂದ ಹುಣಸಗಿಯಿಂದ 1850ರೂ.ಗಳನ್ನು ಕಕ್ಕೇರಿಯಿಂದ 500 ರೂ.ಗಳನ್ನು ತೆರಿಗೆ ರೂಪದಲ್ಲಿ ವಸೂಲಿಯಾಗತೊಡಗಿತು. ಕಡಿಮೆ ಆದಾಯ ಬಂದರೆ ಅದು ಜಮೀನು ಫಲವತ್ತತೆಯ ವೈಫಲ್ಯವೆಂದು ಬಗೆದ ಟೇಲರನು ಬಂಜರು ಭೂಮಿಯನ್ನು ಉಳಿಗಕ್ಕೆ ಯೋಗ್ಯಗೊಳಿಸಿದ. ಸುಮಾರು 7,50,000-00 ಬಿಘಾ ಜಮೀನನ್ನು ಉಳಿಮೆಗೆ ಸಿದ್ಧಪಡಿಸಿ ಅದರ ಮೇಲೆ ಕಂದಾಯ ಹಾಕಿ ನೂತನ ಆರ್ಥಿಕ ಕ್ರಾಂತಿ ಮಾಡಿದನು.[21] ಇದರಿಂದ ಯಾರಿಗೂ ತೊಂದರೆಯಾಗುತ್ತಿರಲಿಲ್ಲ. ಕಂದಾಯ ಸಂಗ್ರಹಣೆ ತನ್ನಿಂದ ತಾನೆ ದ್ವಿಗುಣಗೊಂಡಿತು. ಇದೇ ತಾಂತ್ರಿಕತೆ ಮುಂದುವರಿಸಿ ಬಹು ದಕ್ಷತೆಯಿಂದ ಕಾರ್ಯನಿರ್ವಹಿಸಿದ ಟೇಲರನು ಭೂಕಂದಾಯದ ಕೊಡಿಕೆಯಲ್ಲಿ ದಾಖಲೆ ಸಾಧಿಸಿದ.

ತೆರಿಗೆ ದರದಲ್ಲೂ ಸ್ವಲ್ಪ ಬದಲಾವಣೆ ತಂದು ಒಂದು ಬಿಘಾಕ್ಕೆ 6¾ ಪೈಸೆಯಷ್ಟು ಹೆಚ್ಚು ಮಾಡಿದ.[22] ಇಂಥ ಏರಿಕೆಯ ತೆರಿಗೆಯಲ್ಲೂ ಯಾರೂ ತಪ್ಪಿಸಿಕೊಳ್ಳುವಂತಿರಲಿಲ್ಲ.[23] ಹಲವಾರು

---

20. FPC 23 JAN 1852 No.165
21. Letter to Reeve No.38
22. F.P.C. 16 SEPT 1848 No.79
23. F.P.C. 31 DEC 1847 No,634.para 2-8.

ನೈಸರ್ಗಿಕ ವಿಕೋಪಗಳ ಮಧ್ಯೆಯೂ ಟೇಲರ ತನ್ನ ದಕ್ಷತೆ ಹಾಗೂ ಶ್ರಮಗಳಿಂದ ಸಂಸ್ಥಾನದ ಭೂಕಂದಾಯದಲ್ಲಿ ಭಾರಿ ಬದಲಾವಣೆ ತಂದಿದ್ದನೆನ್ನಲು ಈ ಕೆಳಗಿನ ಸಮೀಕ್ಷೆಯೇ ಸಾಕ್ಷಿ.

ಕ್ರಿ.ಶ. 1842	ರಲ್ಲಿಯ	ಆದಾಯ	ರೂ.	99,715
.. 1843	..	..	ರೂ.	1,52,984
.. 1844	..	..	..	1,63,637
.. 1845	..	..	..	1,85,401
.. 1846	..	..	..	2,10,783
.. 1847	..	..	..	2,29,018
.. 1848	..	..	..	2,19,774
.. 1849	..	..	..	1,82,137
.. 1850	..	..	..	1,85,928
.. 1851	..	..	..	1,83,298

ಕ್ರಿ.ಶ. 1842ರಲ್ಲಿ ಸಂಸ್ಥಾನಕ್ಕೆ ಆಗಮಿಸಿದಾಗ ಕೇವಲ ಒಂದು ಲಕ್ಷದೊಳಗಿದ್ದ ಭೂಕಂದಾಯವನ್ನು ನಂತರ ಒಂದು ವರ್ಷದಲ್ಲೇ ಎರಡು ಪಟ್ಟು ಆದಾಯ ಹೆಚ್ಚೀಕರಣಗೊಳಿಸಿದ್ದು ಸಾಮಾನ್ಯ ಮಾತಲ್ಲ. ಅದರಂತೆ ಕ್ರಿ.ಶ. 1846,47,48ರಲ್ಲಿ ಸಂಸ್ಥಾನದ ಭೂತೆರಿಗೆ ಸಂಪಾದನೆ ಸಮೃದ್ಧವಾಗಿತ್ತು. ನಂತರ ಪ್ರಕೃತಿ ವಿಕೋಪಕ್ಕೆ ಒಳಗಾದಾಗ ರೈತರ ಫಸಲು 'ತೆರಿಗೆ ಕಟ್ಟಲೂ' ಸಹ ಅಸಮರ್ಥವಾದ ಸಂಗತಿಯನ್ನು ಇಲ್ಲಿಯ ಸಂಖ್ಯೆಗಳು ಸಾಬೀತು ಪಡಿಸುತ್ತವೆ. "ಸುರಪುರ ಸಂಸ್ಥಾನವು ಬಹು ಉತ್ಕೃಷ್ಟವಾಗಿತ್ತು. ಕಂದಾಯದ ಎಲ್ಲಾ ಬಾಬುಗಳಿಂದ ವರ್ಷಕ್ಕೆ ಸುಮಾರು 10 ರಿಂದ 30 ಲಕ್ಷ ಬರುತ್ತಿತ್ತು."[24] ಎಂಬ ಟೇಲರನ ಹೇಳಿಕೆಯಲ್ಲಿ ಸತ್ಯಾಂಶ ಶೋಧಿಸಬೇಕಿದೆ.

2. <u>ವ್ಯಾಪಾರ ತೆರಿಗೆ:</u> ಸಂಸ್ಥಾನದಲ್ಲಿ ಮೊದಲಿನಿಂದಲೂ ಸ್ಥಳೀಯ ವ್ಯಾಪಾರಗಳಿಗೆ ಪ್ರೋತ್ಸಾಹ ನೀಡಲಾಗಿತ್ತು. ರೈತರ ಬೆಳೆಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡುವದರೊಂದಿಗೆ ಮಾರುಕಟ್ಟೆಯಲ್ಲಿ ಅವರ ಬೆಲೆಗಳನ್ನು ಕಾಪಾಡಲಾಗುತ್ತಿತ್ತು. ಅದರಂತೆ ಆಗಿನ ಮೇಲಿನ ವ್ಯಾಪಾರ ತೆರಿಗೆಗಳನ್ನು ರಾಜ್ಯದ

---

24. S.M.L. pp.226-27.

ಕಂದಾಯ ಆಡಳಿತ ಸಮಪ್ರಮಾಣದಲ್ಲಿ ನಿಗದಿಗೊಳಿಸಿತ್ತು. ಮಾರಾಟ ತೆರಿಗೆಯಲ್ಲಿ ಮುಖ್ಯವಾಗಿ ಗುರುತಿಸಬೇಕಾದದ್ದು ಸಂಸ್ಥಾನದ ಜಕಾತಿ ವ್ಯವಸ್ಥೆ. ಮುಮ್ಮಡಿ ಪಾಮನಾಯಕನ ಆಳ್ವಿಕೆಯಲ್ಲಿ ದಿವಾನನಾಗಿದ್ದ ನಿಷ್ಠಿ ವೀರಪ್ಪನು ಈ ವ್ಯವಸ್ಥೆಯ ಜನಕ. ಸುರಪುರ ನಗರಕ್ಕೆ ಮಾರಾಟವಾಗಲು ಬರುತ್ತಿದ್ದ ತರಕಾರಿ, ದವಸಧಾನ್ಯ, ಹಣ್ಣುಹಂಪಲುಗಳ ಮೇಲೆ ಈ ಕೆಳಗಿನ ತೆರಿಗೆ ಜಾರಿಗೆ ತಂದನೆಂದು,[25] ಇದು ಹಂಚಿಹಿತ ರೂಪದಲ್ಲಿ ಸಂಸ್ಥಾನಕ್ಕೆ ಸಂದಾಯವಾಗುತ್ತಿತ್ತೆಂದು ತಿಳಿದುಬರುತ್ತದೆ.

1) ಒಂದು ಮಣ ಕಾಯಿಪಲ್ಯೆಗೆ ನಾಲ್ಕು ಸೇರು ಧಾನ್ಯ. ಇದರಲ್ಲಿ 1 ಸೇರು ಸರಕಾರಕ್ಕೆ ಸಲ್ಲಿಸಿ ಉಳಿದ 3 ಸೇರನ್ನು ಪಟ್ಟಣಶೆಟ್ಟಿ, ತಳವಾರ, ಡೋರಗಸ್ತಿಯವರು ಸಮನಾಗಿ ಹಂಚಿಕೊಳ್ಳುತ್ತಿದ್ದರು. ಇದರರ್ಥ ಜಕಾತಿ ವಸೂಲಿಗಾರರು ಸ್ಥಳದಲ್ಲಿ ಅದರ ಫಲ ಪಡೆದುಕೊಳ್ಳುತ್ತಿದ್ದರೆಂಬುದು. ಅಲ್ಲದೆ ನಗರದಲ್ಲಿ ಅನ್ಯ ಊರುಗಳಿಂದ ಪ್ರವೇಶಿಸುವ ಮಾರಾಟ ವಸ್ತುಗಳ ಮೇಲೆ ಈ ನಾಲ್ಕು ಜನರ ಅಧಿಕಾರ ಒಂದೇ ಪ್ರಮಾಣದಲ್ಲಿತ್ತು.

2) ಬಾಳೆಹಣ್ಣು, ನಿಂಬೆಹಣ್ಣು, ಮಾವು ಮುಂತಾದ ಹಣ್ಣು-ಹಂಪಲುಗಳ ಮೇಲಿನ ಸುಂಕವನ್ನು ಒಂದು ಎತ್ತಿನ ಒಜ್ಜೆಗೆ 100 ಹಣ್ಣುಗಳೆಂದು ನಿಗದಿಪಡಿಸಲಾಗಿತ್ತು. ಈ ಹಣ್ಣುಗಳನ್ನು ಸಹ ಸರಕಾರ, ಪಟ್ಟಣಶೆಟ್ಟಿ, ತಳವಾರ, ಡೋರಗಸ್ತಿಯವರು ಸಲುವಾಗಿ ಹಂಚಿಕೊಳ್ಳುವ ಅಧಿಕಾರ ಕಲ್ಪಿಸಿಕೊಡಲಾಗಿತ್ತು.

3) ಜೋಳ ಮುಂತಾದ ಧವಸಧಾನ್ಯಗಳು ಸುರಪುರದ ಮಾರುಕಟ್ಟೆಗೆ ಬರುವದಾದರೆ ಒಂದು ಎತ್ತಿಗೆ 6 ಸೇರು ನೀಡಬೇಕಿತ್ತು. ಇದು ಮಾತ್ರ ನೇರವಾಗಿ ಸರಕಾರಕ್ಕೆ ಸಲ್ಲಬೇಕೆಂಬ ನಿಯಮವಿತ್ತು.

4) ಸಕ್ಕರೆ, ಅಡಕೆ, ಉತ್ತತ್ತಿ ಮುಂತಾದ ಕಿರಾಣಿ ಸಾಮಾನುಗಳ ಮೇಲೆ ಒಂದೆತ್ತಿನ ಒಜ್ಜೆಗೆ 12 ರೂಪಾಯಿ ತೆರಿಗೆ ವಿಧಿಸಲಾಗಿದ್ದು, ಇದೂ ಸಹ ಸರಕಾರದ ಬೊಕ್ಕಸಕ್ಕೆ ಸೇರಬೇಕಾಗಿತ್ತು.

5) ಹುಲ್ಲು ಹರಾಜಿನಿಂದ ಬಂದ ಉತ್ಪನ್ನವು ಸರಕಾರವಾಗಿತ್ತು. ಅದರಂತೆ ಖಾಲಿಯಾದ ಜಹಗೀರು ಗ್ರಾಮಗಳಲ್ಲಿದ್ದ ಹುಣಸಿಗಿಡಗಳ ಆದಾಯವು ಸರಕಾರ ಮತ್ತು ಮಾಲಿಕರಿಗೆ ಸಮನಾಗಿ ಹಂಚಲ್ಪಡುತ್ತಿತ್ತು. ಸರಕಾರದ ಸ್ವಾಧೀನಕ್ಕೆ ಒಳಪಟ್ಟ ಗಿಡವಾಗಿದ್ದರೆ ಅದರಲ್ಲಿ ಯಾರ ಖಾಸಗಿ ಹಕ್ಕೂ ಇರಲಿಲ್ಲ.

---

25. ಕೈಫಿಯತ್ತು, ನಂ. 4.

—ಮೇಲಿನ ಐದು ಅಂಶಗಳಿಂದ ಸಂಸ್ಥಾನದ ಮಾರುಕಟ್ಟೆ ವ್ಯವಸ್ಥೆ ಅಂದು ಹೇಗಿತ್ತೆಂದು ತಿಳಿಯುವದಲ್ಲದೆ, ಕಾಯಿಪಲ್ಲೆಯಿಂದ ಹಿಡಿದು ಉಪ್ಪು, ಔಷಧಗಳ ಮೇಲೂ ತೆರಿಗೆ ಏರಿದ್ದು ಕಂಡುಬರುತ್ತದೆ.

3. <u>ವೃತ್ತಿ ತೆರಿಗೆ :</u> ಸಂಸ್ಥಾನದಲ್ಲಿ ಮೂಲ ಉದ್ಯೋಗ ಮಾಡಿಕೊಂಡಿದ್ದ ಹಲವರನ್ನು ಸಾಮಾಜಿಕ ಅಧ್ಯಯನದ ದೃಷ್ಟಿಯಿಂದ 'ಆಯಗಾರ' ರೆಂದು ಸಂಬೋಧಿಸುತ್ತೇವೆ. ರೈತನ ಬದುಕು ಬೇಡಿಕೆಗೆ ಇವರೆಲ್ಲ ಅನಿವಾರ್ಯ. ಎಲ್ಲರೊಂದಿಗೆ ಅನ್ಯೋನ್ಯ ಬಾಂಧವ್ಯ–ಹೊಂದಿದ ಆಯಗಾರರು ಕಲಾಜೀವಿಗಳಾಗಿದ್ದರು. ಒಂದು ರೀತಿಯಿಂದ ಇವರ "ಕಸುಬೆ ಕಲೆ, ಕಲೆಯೇ ಕಸುಬು" ಆಗಿದೆ. ಇಂಥವರೂ ಸಂಸ್ಥಾನದ ಕರಪದ್ಧತಿ ವ್ಯಾಪ್ತಿಗೆ ಒಳಪಟ್ಟಿದ್ದರು. ಅದನ್ನೇ "ಮೊಹತರ್ಫಾ" ದ ತೆರಿಗೆ ಎನ್ನಲಾಗಿದೆ.

ಅಕ್ಕಸಾಲಿಗ	ರೂ. 6	ಬಡಿಗ	ರೂ. 3
ಕಂಬಾರ	ರೂ. 4	ಪಿಂಜಾರ	" 1
ಕಂಚಗಾರ	" 2	ಹೂಗಾರ	" 3
ಗಂಧದೆಣ್ಣೆಗಾರ	" 3	ಬಳೆಗಾರ	" 6
ಕುಂಬಾರ	" 1	ಅಗಸ	" 1
ಕ್ಷೌರಿಕ	" 1	ಜಿನಿವಾರ	" 1

ಅಲ್ಲದೆ, ಸಾಳೇರು ಒಂದು ಮಗ್ಗಕ್ಕೆ 3 ರೂ., ಮಿಠಾಯಿಗಾರ 6 ರೂ. ವಾರ್ಷಿಕವಾಗಿ ಸುರಪುರ ಸರಕಾರಕ್ಕೆ ಕಡ್ಡಾಯವಾಗಿ ಕಟ್ಟಬೇಕಿತ್ತು. ಹೊಲೆಯರು ಸಹ ಸತ್ತ ದನಗಳ ಮಾಂಸ ತಿನ್ನಬಹುದಿತ್ತು. ಆದರೆ ಆ ದನದ ಚರ್ಮವನ್ನು ಸರಕಾರಕ್ಕೆ ನೀಡದಿದ್ದರೆ ಆತ ತೆರಿಗೆ ಅಪರಾಧಿಯೆನಿಸುತ್ತಿದ್ದ. ಇಂಥ ಎಲ್ಲ ವರ್ಗಗಳ ಮೇಲೆ ಹಾಕಿದ ತೆರಿಗೆಯಿಂದ ಸು. 8000 ರೂ ರಾಜ್ಯಾದಾಯ ಹೆಚ್ಚಳವಾಯಿತು.

ಸಂಸ್ಥಾನದ ಹಳ್ಳಿಗಳಲ್ಲಿ ಅನೇಕ ಗೃಹ ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿದ್ದವು. ಬಟ್ಟೆ ನೇಯುವ ಮೇದಾರರು ಸಂಸ್ಥಾನದ ಆರಂಭದಿಂದಲೂ ತಮ್ಮ ಕಸುಬು ಕೈಗೊಂಡಿದ್ದಾರೆ. ಸುರಪುರ ನಗರ ನಿರ್ಮಾಣವಾದಾಗ ವ್ಯಾಪಾರದ ಓಣಿಯೊಂದನ್ನು ಪ್ರತ್ಯೇಕ ರಚಿಸಲಾಗಿದ್ದು-ಈ ಹಿಂದೆ ಕಂಡಿದ್ದೇವೆ. ನೇಕಾರರ ಕುಟುಂಬಗಳು ಕೈಮಗ್ಗದ ಮೂಲಕವೇ ತಮ್ಮ ಬದುಕನ್ನು ರೂಪಿಸಿಕೊಂಡಿದ್ದರು. ಮುದನೂರ, ಹುಣಸಗಿ, ಕೆಂಭಾವಿ, ರಂಗಂಪೇಟೆ, ಸುರಪುರ ಮತ್ತಿತರ

ಊರುಗಳಲ್ಲಿ ನೆಲಸಿದ್ದ ನೇಕಾರರು ಬಟ್ಟೆ ನೇಯುವ ಉದ್ಯೋಗದಲ್ಲಿದ್ದರು. ಸಂಸ್ಥಾನದಲ್ಲಿ 'ಹತ್ತಿ' ಯು ಇಳುವರಿ ಸಮೃದ್ಧವಾಗಿತ್ತು. ಹೀಗಾಗಿ ಕೈಮಗ್ಗಕ್ಕೆ ಬೇಕಾದ ಕಚ್ಚಾ ಪದಾರ್ಥಕ್ಕೇನು ಕೊರತೆಯಿರಲಿಲ್ಲ. ಆದರೆ ಪ್ರತಿಯೊಂದು ಮಗ್ಗಕ್ಕೂ 3 ರೂ. ತೆರಿಗೆ ಹಾಕಿದ ಪ್ರಯುಕ್ತ ಹಾಗೂ ಇನ್ನಿತರ ತೊಂದರೆಗಳ ನಿಮಿತ್ತ ಬಡವರ ಮಗ್ಗಗಳು ವಲಸೆ ಹೊರಟವು. ಸುಮಾರು 300 ಜನ ನೇಕಾರರು ಹುಣಸಗಿಯಿಂದ ಬೇರೆಡೆ ಹೋದರು. ಕೆಂಭಾವಿಯಲ್ಲಿದ್ದ ನೇಕಾರರೂ ಸಹ ಸ್ಥಳ ತೆರವು ಮಾಡಿದರು. ಇದರ ಮೂಲ ತೊಡಕನ್ನು ಅರಿತುಕೊಂಡ ಮೆಡೋಸ್ ಟೇಲರನು ಹಲವಾರು ನೇಕಾರ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಿ, ಕುಲಕಸುಬು ಕೈಬಿಡದಿರಲು ಒತ್ತಾಯಿಸಿದನು.[26] ಆದರೆ ವಲಸೆ ಹೋದ ನೇಕಾರರು ಮರಳಲಿಲ್ಲ.

ಟೇಲರನ ಕಾಲಕ್ಕೆ ಸಂಸ್ಥಾನದಲ್ಲಿ ವ್ಯಾಪಾರ — ವಹಿವಾಟು ಕ್ರಿಯೆಗೆ ಹೊಸ ಜೀವಬಂತು. ಸಂಸ್ಥಾನದಲ್ಲಿ ಇದುವರೆಗೆ ಇದ್ದ ಮುಖ್ಯ ಮೂರು ಪಟ್ಟಣಗಳಾದ ಶಹಪುರ, ಸುರಪುರ, ಅಂದೋಲಗಳನ್ನು[27] ಬಿಟ್ಟು ನೆಲೋಗಿ, ಜೇರಟಗಿ, ವಡಗೇರಿಗಳಲ್ಲಿ ಮಾರುಕಟ್ಟೆ ನಿರ್ಮಿಸಿ ಅದರ ಅಭಿವೃದ್ಧಿಗಾಗಿ ಶ್ರಮಿಸತೊಡಗಿದನು.[28] ಇದರಿಂದ ಸೊಲ್ಲಾಪೂರದ ವರ್ತಕರು ನೆಲೋಗಿ ಸಂತೆಗೆ ಬಂದು ಹತ್ತಿ ಖರೀದಿಸತೊಡಗಿದರು. ಹಲವಾರು ವ್ಯಾಪಾರಿಗಳು ಸುರಪುರದ ಮಾರ್ಗವಾಗಿ ನಿಜಾಮ ಜಿಲ್ಲೆಗಳಿಗೆ ವ್ಯಾಪಾರ ಸಂಬಂಧ ಬೆಳೆಸಿದರು. ಇದರ ಪ್ರಯೋಗದಿಂದ ಮಾರುಕಟ್ಟೆಗೆ ಎಲ್ಲಿಲ್ಲದ ಬೇಡಿಕೆ ಪ್ರಾಪ್ತವಾಯಿತು.

ಸೊಲ್ಲಾಪೂರದ ಕಂಚು, ಹಿತ್ತಾಳೆ, ತಾಮ್ರ ವ್ಯಾಪಾರಿಗಳನ್ನು ಸುರಪುರಕ್ಕೆ ಕರೆಯಿಸಿದ ಟೇಲರ ಇಲ್ಲಿಯ ಉದ್ಯೋಗ ಮಾಡಲು ಅನುಕೂಲ ಕಲ್ಪಿಸಿದನು.[29] ಹತ್ತಿ ಬೆಳೆಯುವ ಭೂಮಿಗಳನ್ನು ವೈಜ್ಞಾನಿಕ ಪದ್ಧತಿಗೆ ಅಳವಡಿಸಿ ಕೈಗಾರಿಕ ನೀತಿಗೆ ಹೊಸ ತಿರುವು ತಂದನು. ಕಚ್ಚಾ ಪದಾರ್ಥವನ್ನು ಇಲ್ಲಿಯೆ ಉಪಯೋಗಿಸಿಕೊಳ್ಳಲು ಹಾಗೂ ಹಲವಾರು ಕೈಗಳಿಗೆ ಉದ್ಯೋಗ ಒದಗಿಸಲು ಹತ್ತಿಜಿನ್ನಿಂಗ್ ಯಂತ್ರ ಸ್ಥಾಪಿಸಿದನು. ಇದರಿಂದ ಸಂಸ್ಥಾನದ ಶ್ರಮಜೀವಿಗಳಿಗೆ ದುಡಿದು ಉಣ್ಣಲು ಅನುಕೂಲವಾಯಿತು.

4. ಗುತ್ತಿಗೆ ತೆರಿಗೆ : ರೈತರ ಉತ್ಪಾದನೆಯಲ್ಲದೆ ಇನ್ನೂ ಅನೇಕ ಉತ್ಪಾದಕ ಘಟನೆಗಳು ಸಂಸ್ಥಾನಕ್ಕೆ ಅಪಾರ ಆದಾಯ ನೀಡುತ್ತಿದ್ದವು. ಕೆಲವು ಉತ್ಪಾದನೆಗಳು ಗುತ್ತಿಗೆ ಕೊಡುವ ಮೂಲಕ ಸರಕಾರದ

---

26. FPC 9 MAR 1844 Nos.89-95.
27. Capt.Jackson's Memo FPC 19 APR 1841 No.103.
28. FPC 29 NOV 1845 No.249
29. FPC 5 SEPT 1845 No.90.

ಬೊಕ್ಕಸ ಶ್ರೀಮಂತಗೊಂಡಿತ್ತು. ವೀಳ್ಯದೆಲೆ, ತಂಬಾಕು, ಎಣ್ಣೆ, ನೊರೆಯುಪ್ಪು ಮತ್ತು ಸಿಂದಿ (ಸರಾಯಿ) ಗುತ್ತಿಗೆಯೂ ಮುಖ್ಯ ಭಾಗಗಳು. ಹರಾಜು ಪದ್ಧತಿ ಅನುಸರಿಸಿ ಇವುಗಳನ್ನು ಗುತ್ತಿಗೆ ಕೊಡುವ ವ್ಯವಸ್ಥೆಯಿತ್ತು. ಅಲ್ಲದೆ ಕುಲಾಚಾರಿಕೆ, ಗಣಾಚಾರಿಕೆಗಳು ಹರಾಜು ಮಾಡಲ್ಪಟ್ಟು ಅತಿಹೆಚ್ಚು ಬೆಲೆ ನೀಡಿದವರಿಗೆ ಅವುಗಳ ಮೇಲಿನ ಅಧಿಕಾರವನ್ನು ಇಂತಿಷ್ಟು ವರ್ಷಗಳ ವರೆಗೆಂದು ವರ್ಗಾಯಿಸಲಾಗುತ್ತಿತ್ತು. ನೀರಾವರಿ ಭೂಮಿಯನ್ನು ಸಹ ಗುತ್ತಿಗೆ ಕೊಡುವ 'ಜಕೀಕಾಂ' ಎಂಬ ಹೊಸ ನಮೂನೆ ಜಾರಿಗೆ ಬಂತು.

ಗುತ್ತಿಗೆ ಮುಖಾಂತರ ರಾಜ್ಯದ ಕಂದಾಯ ಹೆಚ್ಚಿಸುವ ಮೆಡೋಸ ಟೇಲರನ 'ಸುಂಕನೀತಿ' ಯು ಸಿಂದಿ(ಸರಾಯಿ) ಯಲ್ಲಿ ಯಶಸ್ವಿ ಪ್ರಯೋಗ ಕಂಡಿತು. "ಸುಂಕ ಎತ್ತಿ ಕೊಳ್ಳುವದನ್ನು" ಗುತ್ತಿಗೆ ನೀಡುವ ವಿನೂತನ ಪದ್ಧತಿಯೂ ಇದೇ ಸಂದರ್ಭದಲ್ಲಿ ಸಂಪೂರ್ಣ ಕಾರ್ಯಗತಗೊಳಿಸಲಾಯಿತು. ಇಂಥ 'ಗುತ್ತಿಗೆ' ಯಿಂದ ಸರಕಾರಕ್ಕೆ ಕ್ರಿ.ಶ.1843ರಲ್ಲಿ 14 ಸಾವಿರ ಇದ್ದದ್ದು,[30] ಕ್ರಿ.ಶ.1853ರಲ್ಲಿ 27 ಸಾವಿರ ಮೇಲ್ಪಟ್ಟು ನಿವ್ವಳ ಆದಾಯ[31] ತೋರಿಸಿತು. ಅದರಂತೆ ಒಟ್ಟು 'ಗುತ್ತಿಗೆ' ಯಿಂದ ಇದೇ ಸಮಯದಲ್ಲಿ 44,875 ರೂ. ದೊರೆತದ್ದು ತರುವಾಯ 72,457 ರೂ.ಗಳಿಗೆ ಏರಿತು. ವಿಶೇಷವೆಂದರೆ ಎಲ್ಲಾ ಗುತ್ತಿಗೆದಾರರು ತಮ್ಮ ಆಯ-ವ್ಯಯದ ದಾಖಲೆಗಳನ್ನು ಸರಕಾರದ ಗಮನಕ್ಕೆ ವರ್ಷಕ್ಕೊಮ್ಮೆ ಕಡ್ಡಾಯವಾಗಿ ತರಬೇಕಿತ್ತು.

4. <u>ಆಯ – ವ್ಯಯ :</u>

ಸಂಸ್ಥಾನಕ್ಕೆ ಮೇಲಿನೆಲ್ಲ ಮೂಲಗಳಿಂದ ಆದಾಯ ಸಂಗ್ರಹವಾಗುತ್ತಿತ್ತು. ಅದರಲ್ಲಿಯೇ ಸಂಸ್ಥಾನದ ಆರ್ಥಿಕ ವ್ಯವಸ್ಥೆ ನಂಬಿದ್ದು "ಕಂದಾಯ ಬಾಬತ್ತುಗಳಿಂದ ಮಾತ್ರ" ಬರುವ-ಈ ವರಮಾನವನ್ನು ರಕ್ಷಣೆಯಂಥ ಅನುತ್ಪಾದಕ ಬಾಬುಗಳಿಗೆ ಅತಿಹೆಚ್ಚು ವಿನಿಯೋಗಿಸುವದರೊಂದಿಗೆ ಅನೇಕ ರಾಜರು ತಮ್ಮ ದುಶ್ಚಟಕ್ಕೂ ಭಂಡಾರದ ಹಣವನ್ನೇ ಬಳಸಿಕೊಳ್ಳುತ್ತಿದ್ದರು. ಹೀಗಾಗಿ ಬಂದ ಮೂಲ ಆದಾಯವು ಅಷ್ಟಕಷ್ಟೇ ಎನಿಸಿತ್ತು. ರಾಜ್ಯದ ಉತ್ಪನ್ನವೂ ಸಹ ಪ್ರಕೃತಿ ಮುನಿಸಿನಿಂದ ತನ್ನ ಸ್ಥಿತಿಯಲ್ಲಿ ಏರಿಳಿತ ಕಂಡಿತು. ಇಳಿತವೇ ಹೆಚ್ಚಾಗಿತ್ತೆಂದರೂ ಅಡ್ಡಿಯಿಲ್ಲ. ಆರಂಭದಿಂದ ಅಂತ್ಯದವರೆಗೂ ಸಂಸ್ಥಾನದ ಆಯ-ವ್ಯಯ ಸಮೀಕ್ಷಿಸಲು ಕೆಲವು ದಾಖಲೆಗಳು ದೊರಕಿವೆ.

---

30. FPC 9 MAR 1844, Nos.89-95.
31. FPC 27 JAN 1852, No.165 para-41.

ಸಂಸ್ಥಾನದ ಆರಂಭ ಕಕ್ಕೇರಿಯಿಂದಲೇ ಕಾಣುತ್ತೇವೆಯಾದುದರಿಂದ 'ಕಕ್ಕೇರಿ' ಕಂದಾಯವು ಅಂದಾಜು 2,25,500 ರೂ. ಇತ್ತೆಂದು[32] ಉಲ್ಲೇಖಿಸಲಾಗಿದೆ. ಮುಂದೆ ಸಗರ, ಹುಣಸಗಿ, ಕೊಡೇಕಲ ಪ್ರದೇಶದಿಂದ 80 ಸಾವಿರ ರೂ. 'ಚೌಥ' ಮತ್ತು ಮೊಕಾಸ ನೀಡಬೇಕಿತ್ತೆನ್ನುವ[33] ಅಂಶದಿಂದ ಅದರ ಮೂಲ ಆದಾಯ ಸುಮಾರು 2 ಲಕ್ಷ 40 ಸಾವಿರ ರೂ.ವಾಗಿತ್ತೆಂದು ತೋರುತ್ತದೆ.

ಪಿಡ್ಡನಾಯಕನು ಕ್ರಿ.ಶ.1844 ರಲ್ಲಿ ಸಂಸ್ಥಾನದ ದಿವಾನನಾಗಿದ್ದಾಗ 2,18,887 ರೂ.ಗಳ ವೆಚ್ಚ ತೋರಿಸಲಾಗಿತ್ತು. ಅದಕ್ಕೆ ಟೇಲರನು ಆದರಲ್ಲಿಯೇ 1 ಲಕ್ಷ ರೂ. ಖರ್ಚು ಕಡಿತಗೊಳಿಸಬೇಕೆಂದು ಹೇಳಿ ಅರ್ಧದಷ್ಟು ನೌಕರರನ್ನು ತೆಗೆದು ಹಾಕುವಂತೆ ಸಲಹೆ ಮಾಡಿದ. ಪಿಡ್ಡನಾಯಕನು 1,27,328 ರೂ.ಗಳನ್ನು ಯಾವುದೇ ಕಾರಣ ನೀಡದೆ ವೆಚ್ಚ ಮಾಡಿದ್ದನ್ನು ಟೇಲರ ಬಲವಾಗಿ ಖಂಡಿಸಿದ. ಆಗ ಪಿಡ್ಡನಾಯಕನು ತಾನು ಕೇವಲ 5,396 ರೂ ಮಾತ್ರ ವೈಯಕ್ತಿಕ ಖರ್ಚು ಮಾಡಿರುವುದಾಗಿ ಒಪ್ಪಿಕೊಂಡ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಂಸ್ಥಾನದಿಂದ ಆಗುತ್ತಿರುವ ವೆಚ್ಚ ಉತ್ಪಾದಕ ಬಾಬುಗಳನ್ನು ನೇರುತ್ತಲೇ ಇರಲಿಲ್ಲವೆಂಬುದು. ಇದರಿಂದ ಪ್ರಗತಿ ಶೂನ್ಯವಾಯಿತು. ಇದನ್ನು ಅರಿತುಕೊಂಡ ಟೇಲರ ಆ ವರ್ಷದ ಆಯ-ವ್ಯಯದ ನಿರೀಕ್ಷೆಯೊಂದನ್ನು ಸಿದ್ಧಪಡಿಸಿದ.

ವೆಚ್ಚ ...1,10,000-00 ರೂ.
ಆಯ ನಿರೀಕ್ಷೆ. 2,23,800-00 ರೂ.
ಉಳಿತಾಯ ...1,15,000-00 ರೂ.

ಎಂದು ಯೋಜನೆ ಹಾಕಿದ. ಇದು ಅಷ್ಟೊಂದು ಫಲಪ್ರದವಾಗಲಿಲ್ಲ. ಕಾರಣ ದಿವಾನ ಆಳ್ವಿಕೆಯ ಅಸಮರ್ಥತೆ, ರಾಣಿ-ಈಶ್ವರಮ್ಮಳ ಬಂಡಾಯವಾಗಿದ್ದವು. ಕ್ರಿ.ಶ.1847 ರಲ್ಲಿ ಸಂಸ್ಥಾನದ ಆಡಳಿತ ಸೂತ್ರ ಹಿಡಿದಿದ್ದ ಮೆಡೋಸ ಟೇಲರನು ಸುರಪುರದ ಆದಾಯವನ್ನು ಐದೂವರೆ ಲಕ್ಷ ರೂ.($5\frac{1}{2}$) ಮೀರಿಸುವಂತೆ ಶ್ರಮಿಸಿದನು. ಆರ್ಥಿಕ ಸುಭದ್ರತೆ ಪಡೆದ ಸಂಸ್ಥಾನವು —

32. B.P.Modak and D.G.Vaze -History of the Adilshahi dynasty of Bijapur (Marathi)

33. FPC 15 OCT 1852 Nos.49-51.

ಭೂಕಂದಾಯದಿಂದ	...ರೂ.2,80,000-00
ಜಹಗೀರುಗಳಿಂದ	...ರೂ.1,30,000-00
ಇತರ	...ರೂ.0,40,000-00
ರುಸೂಮು	...ರೂ.1,00,000-00
ಒಟ್ಟು	ರೂ.5,50,000-00 ಗಳಿಕೆ ಸಾಧಿಸಿತು.

ಇದನ್ನೇ ಟೀಲರ ಹೈದ್ರಾಬಾದ ರೆಸಿಡೆಂಟನಿಗೆ ಸಮಗ್ರ ವರದಿಯೊಂದರ ಮೂಲಕ ರವಾನಿಸುತ್ತಾ ಸಂಸ್ಥಾನದ ಸಂಪೂರ್ಣ ಸ್ವರೂಪ ಕೊಟ್ಟು ಕಳಿಸಿದನು. ಅದರಲ್ಲಿ—

ಆಯ	;... ರೂ.3,51,556-2-9
ವ್ಯಯ	... ರೂ.3,45,276-11-6
ಉಳಿತಾಯ	... ರೂ.1,06,279-7-3
ರೈತರಿಂದ ವಸೂಲಿಬರಬೇಕಾದದ್ದು	ರೂ.0,15,124-7-0
ಒಟ್ಟು ಉಳಿತಾಯ	... ರೂ.1,21,403-11-3.

ಇದು ಕ್ರಿ.ಶ.1845 ರಿಂದ 50 ರ ಮಧ್ಯದಲ್ಲಿ ಆದ ಸಂಸ್ಥಾನದ ಆಯ-ವ್ಯಯ ಸಮೀಕ್ಷೆ. ಟೀಲರನು ತನ್ನ ಜಾಗ್ರತೆಯಿಂದ ಸರ್ವ ಇಲಾಖೆಗಳ ಅಂಕಿ-ಸಂಖ್ಯೆ ಶೇಖರಿಸಿದ್ದು ಮೇಲಿನ ವರದಿಯಿಂದ ಕಂಡುಬರುತ್ತದೆ. ಈ ಆದಾಯವೂ ಸಹ ಖಜಾನೆಗೆ ಸಮರ್ಪಕವಾಗಿ ಸೇರುತ್ತಿರಲಿಲ್ಲ. ರಾಜನ ಅಸಮರ್ಥತೆ, ಸೇವಕರ ಅಪ್ರಮಾಣಿಕತೆ, ಅಧಿಕಾರಿ ಆಶ್ರಿತವರ್ಗದವರ ಭ್ರಷ್ಟಾಚಾರದಿಂದಲೇ ರಾಜ್ಯದ ಆದಾಯ ಸೋರಿ, ಸಂಸ್ಥಾನವನ್ನು ದಿವಾಳಿಯತ್ತ ಕೊಂಡೊಯ್ಯುವಲ್ಲಿ ಕಾರಣರಾಗಿದ್ದರು.

ಸುಮಾರು 20 ಸಾವಿರ ರೂ.ನಾಗರಿಕ ಪೂರೈಕೆಗಾಗಿ ವಿನಿಯೋಗಿಸಲಾಗುತ್ತಿತ್ತು. ರಾಜನ ದುಂದುವೆಚ್ಚದಿಂದ ವಿಪರೀತ ಹಣ ಪೋಲಾಗುತ್ತಿತ್ತು. ಪಿಡ್ಡನಾಯಕನ ದಿವಾನಗಿರಿಯಲ್ಲಿ ಖರ್ಚು ಆದಾಯಕ್ಕಿಂತ ಮೇಲೇರಿ ಹೋಗಿತ್ತು. ತರುವಾಯ ಟೀಲರನ ಹಿಡಿತದಿಂದ 1,90,000 ರೂ.ಗೆ ಇಳಿದದ್ದು ಕಾಣುತ್ತೇವೆ. ಪ್ರತಿವರ್ಷ ಎಷ್ಟೇ ಪ್ರಯತ್ನಿಸಿದರೂ ಈ ವೆಚ್ಚ ಕುಗ್ಗಿಸಲು ಸಾಧ್ಯವಾಗಲಿಲ್ಲ. ರಕ್ಷಣಾ ಖಾತೆಗೆ ಆದಾಯದ ಅರ್ಧಭಾಗ ಸೇರಿದರೆ, ಉಳಿದ ಹಣದಲ್ಲಿ ಭ್ರಷ್ಟ ಆಶ್ರಿತ

ಮಂಡಳಿ ಹಂಚಿಕೊಳ್ಳುತ್ತಿತ್ತು. ಆಸ್ಥಾನದಲ್ಲಿ ವಂಶಪಾರಂಪರ್ಯವಾಗಿ ಇರುವ ಸೇವಕರ ವೆಚ್ಚಕ್ಕೆ ಹೆಚ್ಚು ಹಣ ವ್ಯಯವಾಗುವದನ್ನು ಟೇಲರ ತಡೆಯಲು ಯತ್ನಿಸಿದ. ವರ್ಷದ ವೇತನದಲ್ಲಿ ಕೇವಲ 9 ತಿಂಗಳ ಸಂಬಳ ಮಾತ್ರ ನೀಡಿ ಉಳಿದ ಹಣ ನೀಡಲು ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲವೆಂದು ಅವರಿಗೆ ತಿಳಿಹೇಳುತ್ತಿದ್ದ.

ಕಂದಾಯ ವಸೂಲಿಗಾರರಿಗೆ ಆದಾಯದ ಮೇಲೆ ಇಂತಿಷ್ಟು ಕಮೀಷನ್ ಎಂದು ನೀಡಲಾಗುತ್ತಿತ್ತು. ಇದರಿಂದ ತೆರಿಗೆ ವಸೂಲಿ ಸುಲಭವಾಯಿತೇನೋ ನಿಜ. ಆದರೆ ವೆಚ್ಚ ಮಾತ್ರ ಕಡಿಮೆಯಾಗಲಿಲ್ಲ. ರಾಜನ ಸಿಂಹಾಸನರೋಹಣದಂದು ದರ್ಬಾರ ಸಮಾರಂಭ ಏರ್ಪಡಿಸುವದಕ್ಕೆ ಮತ್ತು ದಸರಾ, ಯುಗಾದಿ, ಹೋಳಿ, ಮುಂತಾದ ಹಬ್ಬಗಳಿಗೆ ಭಂಡಾರದ ಹಣವನ್ನೇ ಬಳಸಿಕೊಳ್ಳುತ್ತಿದ್ದರು. ಮದುವೆ, ಹುಟ್ಟು, ಸಾವು, ಶೃಂಗಾರಗಳಿಗೆಲ್ಲ ಇಲ್ಲಿಯ ಹಣವೇ ವಿನಿಯೋಗಿಸುತ್ತಿದ್ದರು. ಬ್ರಾಹ್ಮಣ, ಪೂಜಾರಿ, ದಾನ — ಧರ್ಮ — ದತ್ತಿಗಳಿಗೆಲ್ಲ ಸಂಸ್ಥಾನದ ಆದಾಯವನ್ನೇ ಅವಲಂಬನಲಾಗಿತ್ತು. ಇವೆಲ್ಲ ಬಾಬುಗಳು ಸಂಸ್ಥಾನದ ಪ್ರಗತಿಗೆ ಮಾರಕವಾಗಿದ್ದವು. ಈ ಖರ್ಚು—ವೆಚ್ಚದಿಂದ ಯಾವ ಉತ್ಪಾದನೆಯೂ ಆಗುತ್ತಿರಲಿಲ್ಲ. ಹೀಗಾಗಿ ಇವುಗಳಿಗೆ ವಿನಿಯೋಗಿಸುವ ಹಣದಲ್ಲಿ ಟೇಲರ ಅತ್ಯಂತ ಕಟ್ಟುನಿಟ್ಟು ತಂದು ಕಡಿತಗೊಳಿಸಿದ.

ಸೈನಿಕರಿಗೆ ಸಂಬಳ, ವಸತಿ, ಉಡಿಗೆ, ತೊಡಿಗೆಗಾಗಿಯೂ ಅಪಾರ ಹಣ ವ್ಯಯವಾಗುತ್ತಿತ್ತು. ಇದು ಅತ್ಯಂತ ಅವಶ್ಯವಾದುದರಿಂದ ಯಾವುದೇ ರೀತಿ ಕಡಿತದ ಕ್ರಮ ಕೈಗೊಳ್ಳುವಂತಿರಲಿಲ್ಲ. ಕಾಲರಾ, ಮಲೇರಿಯಾ ಮತ್ತಿನ್ನಿತರ ಮಾರಕ ರೋಗಗಳಿಗೆ ಜನ ತುತ್ತಾಗುವದನ್ನು ತಪ್ಪಿಸಲು ಅನಿರೀಕ್ಷಿತ ವೆಚ್ಚ ಭರಿಸಬೇಕಾಗಿತ್ತು. ಸಾಲಪಾವತಿ ಮಾಡುವ ಮಹತ್ವದ ಜವಾಬ್ದಾರಿ ಕೆಲವೊಂದು ಅರಸರಿಗಂತೂ ವಿಪರೀತ ಕಾಡಿತು. ಬಂದ ಆದಾಯದಲ್ಲಿ ಸಾಲ ಪಾವತಿ ಮಾಡಿ ಜನಪರ ಕಾರ್ಯಗಳಿಗೆ ಖರ್ಚುಮಾಡಲು ಖಜಾನೆಯಲ್ಲಿ ಹಣವೇ ಇರುತ್ತಿರಲಿಲ್ಲ. ಕ್ರಿ.ಶ. 1850ರ ಸುಮಾರಿಗೆ ಸಂಸ್ಥಾನದ ಖಜಾನೆಯಲ್ಲಿ ಸುಮಾರು 2,15,515 ರೂ. ಇತ್ತು. ತೆರಿಗೆ ಇತ್ಯಾದಿ ಬಾಬುಗಳಿಂದ 3,05,095 ರೂ.ರಷ್ಟು ಹಣ ಬರಬೇಕಿತ್ತು. ಟೇಲರನ ಆಡಳಿತದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಿತ್ತೆನ್ನಲು ಜನಕಲ್ಯಾಣ ಕಾರ್ಯಗಳಿಗೆ ಆತ ನೀಡಿದ ಪ್ರಥಮ ಪ್ರಾಶಸ್ತ್ಯವೇ ಕಾರಣ.

ಭೂಕಂದಾಯದ ದಕ್ಷಕ್ರಮಗಳಿಂದ, ಗುತ್ತಿಗೆ ಹಣದ ಏರಿಕೆಯಿಂದ, ನಿರಂತರ ತೆರಿಗೆ ವಸೂಲಿಯಿಂದ, ಸರ್ದೇಶಮುಖಿ ರಸುಮುಗಳಿಂದ ಸಂಸ್ಥಾನದ ಉತ್ತರಕಾಲೀನ ಮೂಲ ಆದಾಯದಲ್ಲಿ ಆದ ಹೆಚ್ಚಳವನ್ನು ಈ ಕೆಳಗಿನ ಸಮೀಕ್ಷೆ ಸಮಗ್ರ ಮಾಹಿತಿ ನೀಡುತ್ತದೆ.

ಕ್ರಿ.ಶ.1842ರಲ್ಲಿ	...	ರೂ.1,98,851-00
,, 1843ರಲ್ಲಿ	...	,, 2,20,913-00
,, 1844ರಲ್ಲಿ	...	,, 2,33,507-00
,, 1845ರಲ್ಲಿ	...	,, 2,75,952-00
,, 1846ರಲ್ಲಿ	...	,, 3,25,066-00
,, 1847ರಲ್ಲಿ	...	,, 3,46,550-00
,, 1848ರಲ್ಲಿ	....	,, 3,35,882-00
,, 1849ರಲ್ಲಿ	....	,, 2,98,715-00
,, 1850ರಲ್ಲಿ	...	,, 3,20,729-00

ಕ್ರಿ.ಶ.1847 ರಿಂದ ಮೇಲಿಂದ ಮೇಲೆ ಆದ ಪ್ರಕೃತಿ ವಿಕೋಪಗಳು ಸಂಸ್ಥಾನದ ಮೂಲಾದಾಯಕ್ಕೆ ಧಕ್ಕೆ ತಂದವು.[34] ಉಳಿದಂತೆ ತುಂಬಾ ಶ್ರೀಮಂತ ಬೊಕ್ಕಸವನ್ನು ಸುರಪುರದ ಅರಸರು ಪಡೆದಿದ್ದರು.

5. <u>ಹಣ ಕಾಣಿಕೆ :</u>

ಆದಿಲ್‌ಶಾಹಿ, ಮೊಘಲ್, ಪೇಶ್ವೆ ಹಾಗೂ ಹೈದ್ರಾಬಾದ ನಿಜಾಮರಲ್ಲಿ ಸಾಮಂತರಾಗಿದ್ದ ಸುರಪುರ ದೊರೆಗಳು ಅನೇಕ ಕಂದಾಯ ಅಧಿಕಾರಗಳನ್ನು ಪಡೆದಿದ್ದರು. ಸಾಮಂತಿಕೆ ಒಪ್ಪಿಕೊಂಡ ಪ್ರಯುಕ್ತ ಚೌಥ ಮತ್ತು ಇನ್ನಿತರ ಕಾಣಿಕೆಗಳನ್ನು ಅವರಿಗೆ ಸಲ್ಲಿಸಬೇಕಾಗಿತ್ತು. ಬಿಜಾಪುರ ಬಾದಷಹರಿಗೆ ಸೈನ್ಯ ಸಹಾಯ ಒದಗಿಸುವುದರೊಂದಿಗೆ ಕಾಣಿಕೆಯನ್ನು ಸಹ ಕೊಡುತ್ತಿದ್ದರು. ಮೊಘಲರ ಕಾಲಕ್ಕೂ ಇದೇ ಪದ್ಧತಿ ಮುಂದುವರೆಯಿತು. ಆದರೆ ಮೊಘಲರ ಅವನತಿ ತರುವಾಯ ದಕ್ಷಿಣದಲ್ಲಿ ತಲೆತ್ತಿದ ಪೇಶ್ವೆ ಹಾಗೂ ನಿಜಾಮ ರಾಜ್ಯಗಳು ಸುರಪುರವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡವು. ಇವರೀರ್ವರ

34. FPC 23 JAN 1852. No.65.

ಆಧಿಪತ್ಯಕ್ಕೆ ಒಳಪಟ್ಟ ಸಂಸ್ಥಾನವು ತನ್ನ ಪರಂಪರಾಗತ ಕಾಣಿಕೆಗಳನ್ನು ಅರ್ಪಿಸಲು ಒಪ್ಪಿತು. ಕ್ರಿ.ಶ. 1767ರಲ್ಲಿ ನಿಜಾಮ ಮತ್ತು ಪೇಶ್ವೆಗಳ ಮಧ್ಯೆ ಆದ ಒಪ್ಪಂದದಂತೆ ಮುಮ್ಮಡಿ ಪಾಮನಾಯಕನು ಕೊಡಬೇಕಾದ ಪೇಷಕಷ್ ಈ ಕೆಳಗಿನಂತಿತ್ತು.

<u>ನಿಜಾಮನ ಪೇಷ್ಕಷ್ :</u>

ರೂ...50,000-00	ಒಟ್ಟು ಖಂಡಣಿ
.. ...10,000-00	ನಿಜಾಮನಿಗೆ ನಜರಾಣಿ
.. ...10,000-00	ದಿವಾನ ರುಕುಮುದ್ದೌಲಾ
.. ...06,666-00	ದರ್ಬಾರಿ ಖರ್ಚು
.. ...02,500-00	ರಾಬೀತಾ
ರೂ.. 79,166-00	

<u>ಪೇಶ್ವೆ ಪೇಷಕಷ್ :</u>

ರೂ. 50,000-00	ಖಾಸ ಖಂಡಣಿ
.. 05,000-00	ದರ್ಬಾರಿ ಖರ್ಚು
.. 11,000-00	ಸ್ವತಃ ಪೇಶ್ವೆ ಸವಾರಿ ಬಂದದ್ದಕ್ಕೆ
.. 29,000-00	ಕಾಪಡಖಾನಾ
.. 14,000-00	ದಾಥ
ರೂ.1 09,000-00	ಒಟ್ಟು ಕಾಣಿಕೆಯ ಹಣ
ರೂ.. 15,000-00	ವಿನಾಯಿತಿ
ರೂ.. 94,000-00	

ಉಭಯ ರಾಜ್ಯಗಳಿಗೆ ಒಟ್ಟು 1,73,166 ರೂಪಾಯಿಗಳನ್ನು ಸುರಪುರವು ಕೊಡಬೇಕೆಂದು ಒತ್ತಡ ಬಂದಾಗ ಸಂಸ್ಥಾನದ ಆರ್ಥಿಕ ನೀತಿಯೇ ನೆಲಕಚ್ಚಿತು. ಉತ್ಪನ್ನಕ್ಕಿಂತ ವ್ಯಯವೇ ಹೆಚ್ಚಾದಾಗ

ಅರಸೊತ್ತಿಗೆಗೆ ಆರ್ಥಿಕ ಮುಗ್ಗಟ್ಟು ಆವರಿಸಿತು. ಅದಲ್ಲದೆ ಮೇಲಿನ ಎರಡು ರಾಜ್ಯಗಳು ತಮಗೆ ಸಲ್ಲಬೇಕಾದ ಕಾಣಿಕೆ ಹಣ ಸಲ್ಲದೆ ಹೋದರೆ ಸುರಪುರಕ್ಕೆ ನೀಡಿದ ಕಂದಾಯ ಅಧಿಕಾರಗಳೆಲ್ಲ ರದ್ದುಪಡಿಸುವುದಾಗಿ ಬೆದರಿಕೆ ಬೇರೆ ಒಡ್ಡಿದವು. ಪ್ರತಿವರ್ಷ 14,000-00 ರೂ. ಬಾಧ ಕಟ್ಟಬೇಕೆಂಬ ಪೇಶ್ವೆಗಳ ಕಟ್ಟಳೆ ಮುಂದಿನ ಅನೇಕ ಸಮಸ್ಯೆಗಳಿಗೆ ಹಾದಿಯಾಯಿತು. ಅದರಂತೆ ತಮ್ಮ ಸಂಸ್ಥಾನದಲ್ಲಿ ತಾವು ಉತ್ತರಾಧಿಕಾರಿಗಳಾಗಲು ಸುರಪುರವು ನಿಜಾಮನಿಗೆ ನಜರಾಣಿ ಸಲ್ಲಿಸಬೇಕಿತ್ತು. ಇಂಥ ಹತ್ತು ಸಾವಿರದಷ್ಟು ಅಪಾರ ಭಾರವಲ್ಲದೆ ಇನ್ನಿತರ ರಕಮುಗಳು ಬೇರೆ. ಇಬ್ಬರು ಸಮನಾಗಿ 50 ಸಾವಿರ ಖಂಡಣಿ ಹಾಕಿದುದಲ್ಲದೆ ತಮ್ಮ ಸೈನ್ಯದ ವೆಚ್ಚ ಸಹ ಹೊರಿಸಿದರು. ಇವೆಲ್ಲ ನೋಡಿದರೆ " ಸಂಸ್ಥಾನವನ್ನು ಆರ್ಥಿಕವಾಗಿ ಸುರಿದು, ರಾಜಕೀಯವಾಗಿ ಮುಗ್ಗರಿಸುವಿಕೆಗೆ ಕಾರಣವಿರಬೇಕೆಂದು ಮೇಲ್ನೋಟಕ್ಕೆ ತಿಳಿಯುತ್ತದೆ.

ಪೇಶ್ವೆಗಳ ವಿಜಾಪೂರ ಪ್ರಾಂತ್ಯದಲ್ಲಿ ಸುರಪುರದವರು ಅತಿಹೆಚ್ಚು ಸರಸರದೇಶಗತಿ, ಸರನಾಡಗೌಡಕಿ ರುಸುಮುಗಳನ್ನು ಎತ್ತಿ ಕೊಂಡಿದ್ದಾರೆಂಬ ಆರೋಪ ಇಮ್ಮಡಿ ವೆಂಕಟಪ್ಪನಾಯಕನ ಆಳ್ವಿಕೆಯಲ್ಲಿ ಬಂತು. ಸಮೀಕ್ಷೆ ಮಾಡಿ ಪರಿಶೀಲಿಸಿದಾಗ ಅದು ಸತ್ಯವೆಂದು ತಿಳಿಯಿತು. ಈ ಕಂದಾಯಕ್ಕಾಗಿ ಕಲಹಗಳು ಆರಂಭವಾದವು. ಸುರಪುರದವರಿಂದ ತೃಪ್ತಿಪಡದ ಪೇಶ್ವೆಗಳು ಕಲ್ಕತ್ತಾ ನ್ಯಾಯಾಲಯದ ಕಟ್ಟೆ ಹತ್ತಿದರು. ಕೆಲವು ಕಾಲದ ತರುವಾಯ ಇವರ ಇಲ್ಲಿಯ ರಾಜ್ಯವೆಲ್ಲ ಇಂಗ್ಲೀಷರ ವಶವಾದಾಗ ಸುರಪುರದಿಂದ ಸಲ್ಲಬೇಕಿದ್ದ 34 ಲಕ್ಷ ರೂ. ಬಾಕಿ ಹಣದ ವಾರಸುದಾರರು ಬ್ರಿಟಿಷರಾದರು.

ಕ್ರಿ.ಶ.1800 ರಲ್ಲಿ ಬ್ರಿಟೀಷರೊಂದಿಗೆ ಒಪ್ಪಂದ ಮಾಡಿಕೊಂಡ ನಿಜಾಮನು ತನ್ನೆಲ್ಲ ಬಾಕಿ ವಸೂಲಿಗಾಗಿ ಅವರಿಂದ ಸರ್ವರೀತಿಯ ಸಹಾಯ ಅಪೇಕ್ಷಿಸಿದ. ಇದರನ್ವಯ ಕ್ರಿ.ಶ.1802 ರಲ್ಲಿ ಸಂಸ್ಥಾನವು ನಿಜಾಮನಿಗೆ 1,45,000-00 ರೂ. ಕಾಣಿಕೆ ಕೊಡತಕ್ಕದೆಂದು ಠರಾವು ಆಯಿತು. ವಸೂಲಿಗಾಗಿ ಬಂದ ಬ್ರಿಟಿಷ ಅಧಿಕಾರಿಯು ತನ್ನ ಖರ್ಚನ್ನೂ ಸಹ ಸಂಸ್ಥಾನದ ಮೇಲೇರಿ ಒಟ್ಟು 1,75,000-00 ರೂಪಾಯಿಗಳಿಗೇರಿಸಿದ. ಹೀಗೆ ಸಂಸ್ಥಾನದ ಮೇಲೆ ಆರ್ಥಿಕ ಪ್ರಹಾರ ಯಥೇಚ್ಛವಾಯಿತು.

ಕೃಷ್ಣಪ್ಪನಾಯಕ ಸುರಪುರದ ಗಾದಿಯೇರಲು ಬಂದಾಗ ಮಲತಮ್ಮ ಹಣಮಪ್ಪ ನಾಯಕ ಅದಕ್ಕೆ ತಡೆಯೊಡ್ಡಿ ಸಿಂಹಾಸನರೋಹಣವನ್ನು ವಿವಾದಕ್ಕೆಳೆದ. ನಿಜಾಮನಲ್ಲಿಗೆ ನ್ಯಾಯಕ್ಕೆ ಹೋಯಿತು. ನಿಜಾಮನೆ — ನ್ಯಾಯಾಧೀಶನಾದಾಗ ಕೇಳುವದೇನು. ತನಗೆ 15 ಲಕ್ಷ ರೂ. ನಜರಾಣಿ ಸಲ್ಲಿಸಿದ ವ್ಯಕ್ತಿ ಸುರಪುರದ ಉತ್ತರಾಧಿಕಾರಿಯಾಗಬಹುದೆಂದು ನಿರ್ಣಯಿಸಿ ತೀರ್ಪು ಹೊರಡಿಸಿದ. ನಿಜಾಮನ ಈ ತೀರ್ಪಿಗೆ ಬದ್ಧನಾದ ಕೃಷ್ಣಪ್ಪನಾಯಕ ನಾಲ್ಕೂವರೆ ($4\frac{1}{2}$) ಲಕ್ಷ ರೂ. ಸಿಂಹಾಸನರೋಹಣ ಸಮಾರಂಭದಲ್ಲಿ ಕೊಟ್ಟು ಉಳಿದ 1,25,000-00 ರೂ.ಗಳನ್ನು ಕಂತಿನ ಮೇಲೆ ಕಟ್ಟುವದಾಗಿ ಒಪ್ಪಿದ. ಈ ಸಾಲದ ಸಮಸ್ಯೆಯನ್ನು ಪರಿಹರಿಸಲು ಬಂದಿದ್ದ ಬ್ರಿಟಿಷ ಅಧಿಕಾರಿ ಕ್ಯಾ. ಗ್ರಿನ್ಲೇಯು ಸುರಪುರ ರಾಜರು ನೀಡಬೇಕಾದ ಸಾಲದ ವಿವರವನ್ನು ಈ ಕೆಳಗಿನಂತೆ ರೆಸಿಡೆಂಟನಿಗೆ ವರದಿ ಮಾಡಿದ್ದಾನೆ.[35]

ಕ್ರಿ.ಶ.1802 ರಲ್ಲಿ ಕಾಣಿಕೆ ಮೊತ್ತ ...	ರೂ.1,45,000-00
ಪೇಶ್ವೆಗಳ ಪ್ರದೇಶದಿಂದ ...	ರೂ.0,15,000-00
ಒಟ್ಟು	ರೂ.1,60,000-00

ಇದು ಕ್ರಿ.ಶ.1823ರಲ್ಲಿ 1,75,000-00 ರೂ.ಗಳವರೆಗೆ ಏರಿತು. ಜೊತೆಗೆ ನಜರಾನ 15 ಲಕ್ಷ ರೂ. ಸೇರಿತು.[36] ಕ್ರಿ.ಶ.1828ರಲ್ಲಿ ವಾರ್ಷಿಕ ಕರ ಇತ್ಯಾದಿ ಕೂಡಿ ರೂ. 2,30,600-00 ಕೊಡಬೇಕಾಯಿತು. ಸುರಪುರದ ರಾಜ ಮತ್ತು ರಾಜ್ಯ ನಿಜಾಮನ ಸಾಲದಲ್ಲಿ ಬಿದ್ದುದು ಈ ರೀತಿ. ಇದರ ಹೊಡೆತಕ್ಕೆ ಸಂಸ್ಥಾನ ಮುಗ್ಗರಿಸಿ ಭೀಕರ ಆರ್ಥಿಕ ದಿವಾಳಿತನ ಎದುರಿಸಿತು. 'ಬಾಕಿ' ವ್ಯವಹಾರ ಬಗೆಹರಿಸಲು ಬಂದಿದ್ದ ಗ್ರೀನ್ಲೆಯು ಮೇಲಿಂದ ಹಣವನ್ನು ವಸೂಲ ಮಾಡುವಲ್ಲಿ ಪೀಡಿಸತೊಡಗಿದ. ಇಂಥ ದೊಡ್ಡ ಪ್ರಮಾಣದ ಸಾಲದಿಂದ ತತ್ತರಿಸಿ ಹೋಗಿದ್ದ ಸಂಸ್ಥಾನಕ್ಕೆ ಪಾವತಿ ಮಾಡುವದು ಅಸಾಧ್ಯವಾಗಿತ್ತು. ಆಗ ಹೈದ್ರಾಬಾದನ ಲೇವಾದೇವಿ ವ್ಯಾಪಾರಿ ಮೋತೀರ ಗೋಸಿಯಾನನು ಸಂಸ್ಥಾನಕ್ಕೆ ಬಡ್ಡಿ ರೂಪದಲ್ಲಿ ಸಾಲ ನೀಡಿ ನಿಜಾಮನ ಬಾಕಿ

35. FPC 8 JUNE 1842 Nos. 167-68.

36. ಸುರಪುರದ ಅರಸರಾದ ಮುಮ್ಮಡಿ ಪಾಮನಾಯಕನು 10 ಸಾವಿರ ರೂ.; ಮುಮ್ಮಡಿ ವೆಂಕಟಪ್ಪನಾಯಕನು 6 ಲಕ್ಷ ರೂ.; ಕೃಷ್ಣಪ್ಪನಾಯಕನು 15 ಲಕ್ಷ ರೂ.ಗಳನ್ನು ಹೈದ್ರಾಬಾದನಿಜಾಮನಿಗೆ "ನಜರಾನ" ವೆಂದು ಸಲ್ಲಿಸಿದ್ದಾರೆ.

(D.A.Malkolm's memo on Surapur FPC 19 APR 1841 No.102)

ತೀರಿಸಲು ಸಹಕರಿಸಿದ. ಈ ಸಹಾಯಕ್ಕೆ ಕೆಲವು ಜಮೀನು ಒತ್ತೆ ಇಡಬೇಕಾಯಿತು. ಇದರಿಂದ ಮತ್ತೆ ಗೊಂದಲವಿದ್ದಾಗ ಅಧಿಕಾರಿಯಾಗಿ ಬಂದ ಟೇಲರ ಪೂರ್ವದ ಎಲ್ಲಾ ಲೆಕ್ಕಪತ್ರ ಪರಿಶೀಲಿಸಿದ. ಸಂಸ್ಥಾನದ ನಿಜವಾದ ಉತ್ಪನ್ನ ಮತ್ತು ಕಾಣಿಕೆಗೂ ತುಲನೆ ಮಾಡಿ, ಸುರಪುರವು "ಇನ್ನು ಮುಂದೆ ಕೇವಲ 60 ಸಾವಿರ ರೂ. ಸಲ್ಲಿಸಿದರೆ ಸಾಕು" ಎಂದು ತೀರ್ಪು ಕೊಟ್ಟು ಉಭಯತರಿಗೂ ಒಪ್ಪಿಸಿದ. ಆದರೆ ಹಿಂದಿನ ಬಾಕಿ ವಿಷಯದಲ್ಲಿ ಮೌನ ತಳೆದುದು ಮಾತ್ರ ದ್ವಂದ್ವ ನೀತಿಯಾಗಿತ್ತು.

ದಿವಾನ ಗಾದಿಗಾಗಿ ಹಗರಣಗಳು ಬ್ರಿಟಿಷರ ಪಾದಸೇವೆಯಲ್ಲಿದ್ದ ಪಿಡ್ಡನಾಯಕನಿಗೆ ಅವರ ರಕ್ಷಣೆ ದೊರೆಯಿತು. ಇದುವರೆಗೆ ಸಂಸ್ಥಾನದ ಉತ್ಪನ್ನ ಎತ್ತಿ ಕೊಡಿದ್ದ ರಾಣಿ ಈಶ್ವರಮ್ಮಳಿಗೆ ವಿಪರೀತ ಕಷ್ಟ ನೀಡಿ ವಸೂಲಿ ಮಾಡಲಾಯಿತು. ತರುವಾಯ ಅಧಿಕಾರಕ್ಕೆ ಬಂದ ನಾಲ್ವಡಿ ವೆಂಕಟಪ್ಪ ನಾಯಕನಲ್ಲಿ ಸಹ ಟೇಲರನ ಸಂಬಳಕ್ಕಾಗಿ ವಿವಾದವೆದ್ದಿತು.

ಹೀಗೆ ಸಂಸ್ಥಾನದಿಂದ ತಮಗೆ ಸಲ್ಲಬೇಕಾದ ಕಾಣಿಕೆಗಾಗಿ ಪೇಶ್ವೆ ಮತ್ತು ನಿಜಾಮರು ಮನಬಂದಂತೆ ಕಸಿದಿದ್ದಾರೆ. ತಮ್ಮ ಆನೆಯನ್ನು ಬ್ರಿಟಿಷರ ಮೂಲಕ ವ್ಯವಸ್ಥಿತವಾಗಿ ಸುಲಿದಿದ್ದಾರೆ.

6. <u>ಸಿರಿವಂತರಿಂದ ಸಾಲ :</u>

ಆರ್ಥಿಕ ವ್ಯವಸ್ಥೆಯಲ್ಲಿ 'ಸಾಲದ ಕೊಡುಕೊಳ್ಳುವಿಕೆ' ಬಹು ಮಹತ್ವದ ಪಾತ್ರ ವಹಿಸುತ್ತದೆ. 'ಸಾಲ' ವೆಂದಾಗ 'ಆರ್ಥಿಕ ನೆರವು' ಎಂಬ ಪದ ಗೌಣಗೊಳ್ಳುವುದು ಸಹಜ. ಸಾಲದ ಸ್ವರೂಪದಲ್ಲಿ ಬಡ್ಡಿ, ಕಂತು, ಜಾಮೀನು, ಮುಟ್ಟುಗೋಲು ಮುಂತಾದವು ಮುಖ್ಯವಾಗಿರುತ್ತವೆ. ಇಂಥ ಪದ್ಧತಿಯನ್ನೇ ರೂಢಿಸಿಕೊಂಡ ಬಂದ ಹೈದ್ರಾಬಾದನ ಲೇವಾದೇವಿ ವ್ಯಾಪಾರಸ್ಥ ಮೋತಿಗೀರ ಗೋಲಿಯಾನ, ಡಾ: ಬಾಲಪ್ರಸಾದ, ಸಂಕೇಶ್ವರಸ್ವಾಮಿ ಮತ್ತು ಬಾಗಲಕೋಟೆಯ ಸಾಹುಕಾರ ಸಿದ್ಧಪ್ಪ ಪ್ರಮುಖರು. ಇವರು ಅಂದಿನ ಸರಕಾರಗಳಿಗೇ ಸಾಲಕೊಡುವಷ್ಟು ಶ್ರೀಮಂತರಾಗಿದ್ದರು. ಸುರಪುರ ಸಂಸ್ಥಾನವು ನಿಜಾಮನ ಸಾಲದ ಹೊರೆಯಲ್ಲಿ ನರಳುತ್ತಿರುವಾಗ ಇವರು ಮಧ್ಯವರ್ತಿಗಳಾಗಿ ಬಂದು ಸಂಸ್ಥಾನಕ್ಕೆ ಸಾಲ ನೀಡಿದರು. ಕೊನೆಗೆ ಸಂಸ್ಥಾನವನ್ನೇ ಕಸಿದುಕೊಳ್ಳುವಲ್ಲಿ ಬ್ರಿಟಿಷರೊಂದಿಗೆ ಕೈಗೂಡಿಸಿದರು.

<u>ಮೋತೀರ ಗೋಸಿಂಯಾನ :</u>

ಹೈದ್ರಾಬಾದ ನಗರದಲ್ಲಿ ಅತ್ಯಂತ ಶ್ರೀಮಂತನೆಂದೆನಿಸಿಕೊಂಡಿದ್ದ ಲೇವಾದೇವಿ ವ್ಯವಹಾರದ ಮುಖ್ಯಸ್ಥನಾಗಿದ್ದ ಗೋಸಿಂಯಾನನು ಸರಕಾರಗಳಿಗೆ ಸಾಲ ನೀಡುವ ಮೂಲಕ ಇಂಗ್ಲೀಷ ಹಾಗೂ ನಿಜಾಮ ರಾಜ್ಯಗಳ ಮೇಲೆ ಬಹಳಷ್ಟು ಪ್ರಭಾವ ಬೀರಿದ್ದ. ಇದರಿಂದ ನಿಜಾಮನ ಅಧೀನದಲ್ಲಿ ಬರುವ ಸಂಸ್ಥಾನಗಳಿಗೆ ಸಾಲ ನೀಡಿ ತನ್ನ ವಿಶೇಷ ವರ್ಚಸ್ಸು ಹೆಚ್ಚಿಸಿಕೊಂಡಿದ್ದ. ಇದೇ ಸಂದರ್ಭದಲ್ಲಿ ಸುರಪುರವು ಕೃಷ್ಣಪ್ಪನಾಯಕನ ಆಳ್ವಿಕೆಯಲ್ಲಿ ಹೇಳತೀರದಷ್ಟು ಹದಗೆಟ್ಟಿತ್ತು. ನಿಜಾಮನ ಸಾಲ ವಸೂಲಿಯಲ್ಲಿ ಬ್ರಿಟಿಷರು ಪ್ರಹಾರ ಮಾಡುತ್ತಲೇ ಇದ್ದರು. ಈ ಹೊಡೆತದಿಂದ ತಪ್ಪಿಸಿಕೊಳ್ಳಲು ಯಾವ ದಾರಿಯು ಇರಲಿಲ್ಲ. ಆಗ ಸಂಸ್ಥಾನದ ಕಣ್ಣಿನಲ್ಲಿ ಕಲ್ಪವೃಕ್ಷ, ಕಾಮಧೇನುವಾಗಿ ಕಂಡವನು ಮೋತೀರ ಗೋಸಿಂಯಾನ. ಕೃಷ್ಣಪ್ಪನಾಯಕನು ನಿಜಾಮನಿಗೆ ಸಲ್ಲಿಸಬೇಕಾದ ಖಂಡಣಿ, ಪೇಷಕಷ, ನಜರಾಣಿ, ರಕಮು ಹಣವನ್ನು ತೀರಿಸಲು ಮೋತೀರನಲ್ಲಿ ಬಡ್ಡಿಯ ಮೇಲೆ ಸಾಲ ಎತ್ತಿದನು. ನಿಜಾಮನ ಕಿರುಕುಳವೇನೋ ತಪ್ಪಿತು. ಆದರೆ ಮೋತೀರನ ಸಾಲದ ಬಡ್ಡಿ ಬೆಳೆಯುತ್ತಲೇ ಹೋಗಿ ತೆಗೆದ ಸಾಲವನ್ನೂ ತೀರಿಸಲು ಅಸಾಧ್ಯವೆನಿಸುವ ಸ್ಥಿತಿ ನಿರ್ಮಾಣವಾಯಿತು. ಸಂಸ್ಥಾನ ಈತನ ಸಾಲಕ್ಕೂ ಕೈಚೆಲ್ಲಿ ಕುಳಿತಾಗ ಮತ್ತೆ ಇಲ್ಲಿಯೂ ಬ್ರಿಟಿಷ ಅಧಿಕಾರಿಗಳ ಪ್ರವೇಶ ಅನಿವಾರ್ಯವೆನಿಸಿತು.

ರೆಸಿಡೆಂಟ ಡ್ಯಾವಿಡ್ಸನನು ಕ್ರಿ.ಶ. 1858 ಫೆಬ್ರುವರಿ 3ರಂದು ಭಾರತ ಸರಕಾರಕ್ಕೆ ಬರೆದ ಪತ್ರದಲ್ಲಿ ಗೋಸಿಂಯಾನನಿಂದ ಪಡೆದ ಸಂಸ್ಥಾನದ ಸಾಲದ ಬಗ್ಗೆ ಈ ರೀತಿ ಪ್ರಸ್ತಾಪಿಸಿದ್ದಾನೆ.

" ಮೋತೀರನಿಗೆ ರಾಜ್ಯದ ಬಹುಭಾಗವನ್ನು ಒತ್ತೆ ಇಟ್ಟಿರುವ ಕೃಷ್ಣಪ್ಪನಾಯಕನು 1 ಲಕ್ಷ 50 ಸಾವಿರ ರೂ. ಕಂತಿನ ಪ್ರಕಾರ ಸಲ್ಲಿಸುವದಾಗಿ ಒಪ್ಪಿದ್ದ. ಒಪ್ಪಂದಕ್ಕೆ ಸ್ವತಃ ನಾನೇ ಸಾಕ್ಷಿಯಾಗಿದ್ದೆ. ಆದರೆ ರಾಜನು ತನ್ನ ರಾಜ್ಯದ ಉತ್ಪನ್ನ ಬಂದಿಲ್ಲವೆಂದು ಹೇಳಿ ಆ ಮೊದಲ ಒಪ್ಪಂದವನ್ನೇ ಮುರಿದುಬಿಟ್ಟ. ಆಗ ಕ್ಯಾ. ಹ್ಯಾಂಪ್ಟನನನ್ನು ಈ ದುಡ್ಡಿನ ವ್ಯವಹಾರ ಬಗೆಹರಿಸಲು ಕಳಿಸಿದೆ. ಆತನ ಮಧ್ಯಸಿಕೆ ಮೂಲಕ —

ಕ್ರಿ.ಶ. 1840–41ರಲ್ಲಿ	25,000–00 ರೂ.
ಕ್ರಿ.ಶ. 1841–42ರಲ್ಲಿ	30,000–00 "

ಕೊಟ್ಟು ಮುಟ್ಟಿಸುವ ಕರಾರು ಆಯಿತು. ಕರಾರು ಮುರಿದರೆ ಒತ್ತೆ ಇಟ್ಟ ಜಮೀನು ಗೋಸಿಂಯಾನನಿಗೆ ಬಿಟ್ಟುಕೊಟ್ಟು ನಮ್ಮ ಸ್ವಾಧೀನಪಡಿಸಬೇಕೆಂದು ಕಟ್ಟಳೆ ಹೇರಿದೆ" ಎಂದು ಹೇಳುವಲ್ಲಿ

'' 'ಓರ್ವ ಸಿರಿವಂತನ ಸಾಲದ ಪ್ರಕರಣ ಭಾರತ ಸರಕಾರಕ್ಕೂ ತಲುಪಿತ್ತು. ಅಲ್ಲದೆ ಸಾಲಗಾರರ ಕೈಯಲ್ಲಿ ನರಳುವ ಸ್ಥಿತಿ ಸಂಸ್ಥಾನಕ್ಕೆ ಬಂದಿತ್ತು'' ಎನ್ನುವದು.

ಮೇಲಿನ ವಾಗ್ವಾದ ತೀವ್ರಗೊಂಡಾಗ ಕ್ಯಾ. ಗ್ರಿಸ್ಲೇಯು ವಿಶೇಷ ಜವಾಬ್ದಾರಿ ಹೊತ್ತು ಪೂರ್ವದ ಲೆಕ್ಕವೆಲ್ಲ ಪರಿಶೀಲಿಸಿದನು. ಆಗ ಶೇ.24ರ ಬಡ್ಡಿದರದ ಮೇರೆ 3,60,653 ರೂ. ಬಾಕಿ ಹೊರಟಿತು. ಇದರಲ್ಲಿ ಮೂಲ ಅಸಲು ಕೇವಲ ರೂ.1,56,662-11 ಮಾತ್ರ. ಉಳಿದ ಹಣ ರೂ.2,03,990-03 ಗಳಷ್ಟು ಬಡ್ಡಿಯಾಗಿಯೇ ಬೆಳೆದಿತ್ತು. ಕೂಡಲೇ ಈ ಸಾಲವೆಲ್ಲ ಮೋತೀರನಿಗೆ ತೀರಿಸಬೇಕು. ಇಲ್ಲವಾದರೆ ಜಾಮೀನಿಟ್ಟ ಸಂಸ್ಥಾನದ ಪ್ರದೇಶವನ್ನು ವಶಪಡಿಸಿಕೊಳ್ಳುವದಾಗಿ ಹೇಳಿದನು.''

ಮುಮ್ಮಡಿ ಪಿಡ್ಡನಾಯಕನ ಕಾಲಕ್ಕೆ ಹಣಕಾಸಿನ ವ್ಯವಹಾರ ಆರಂಭಿಸಿದಂ.[37] ಮೋತೀರ ಗೋಸಿಂಯಾನನು ಕ್ರಿ.ಶ.1836ರಲ್ಲಿ ಸಾಲ ನೀಡಲು ನಿರಾಕರಿಸಿದ. ಕಾರಣ ಹಿಂದಿನ ಬಾಕಿಯೇ ಬಂದಿರಲಿಲ್ಲವೆಂಬುದಕ್ಕೆ. ಕ್ರಿ.ಶ.1837ರಲ್ಲಿ ತೀರಿಕೊಂಡ ಗೋಸಿಂಯಾನ ತನ್ನ ಮಕ್ಕಳಲ್ಲಿ ಹಣಕಾಸಿನ ಸಂಬಂಧ ಕಲಹವೆಬ್ಬಿಸಿದಂ. ಲಕ್ಷ್ಮಣಗೀರ ಮತ್ತು ಗುಹಪಟಗೀರರ ಮಧ್ಯೆ ತಂದೆಯ ಆಸ್ತಿಗಾಗಿ ನಿರಂತರ ಜಗಳ ನಡೆಯಿತು. ಸುರಪುರದಿಂದ ನಿಜವಾಗಿ ಸಾಲವೆಷ್ಟು ಬರಬೇಕೆಂಬುದರ ಬಗ್ಗೆ ಕ್ಯಾ. ಗ್ರಿಸ್ಲೇ ವಿಚಾರಣೆ ನಡೆಸಿದಾಗ ಒಂದೂವರೆ ($1\frac{1}{2}$) ಲಕ್ಷ ರೂ. ಹೊರಬಿತ್ತು.[38] ಆದರೆ ಗೋಸಿಂಯಾನನ ಮಕ್ಕಳು ಇದನ್ನು ಒಪ್ಪದೆ ತಮಗೆ 3,60,653-3-0 ರೂ.ರಷ್ಟು ಸಾಲದ ಹಣ ಬರಬೇಕೆಂದು ಪಟ್ಟು ಹಿಡಿದರು. ರಾಜ ಇವೆರಡೂ ಸುಳ್ಳು ಲೆಕ್ಕವೆಂದು ತಿರಸ್ಕರಿಸಿದಾಗ ಸಾಲದ ವಿವಾದ ವಿಕೋಪಕ್ಕೆ ಹೋಯಿತು. ಟೇಲರನ ಮುಂದೆ ಬಂದ ಈ ವ್ಯಾಜ್ಯ ಒಂದು ತಿರುವು ಪಡೆದು ಮತ್ತೆ ಪರಿಶೀಲನೆಗೆ ಒಳಪಟ್ಟಿತು. ಗೋಸಿಂಯಾನನ ಸಾಲದಲ್ಲಿ ಕೆಲವು ತಪ್ಪು ಸಿಕ್ಕವು. ಸಾಲದ ಬದಲಾಗಿ ಸಂಸ್ಥಾನ ನೀಡಿದ ಜಾಮೀನು ಜಮೀನು ಮತ್ತು ಅದರ ಉತ್ಪನ್ನ ವಸೂಲಿಯ ಬಗ್ಗೆ ಉಲ್ಲೇಖವೇ ಇರಲಿಲ್ಲ. ಇದುವರೆಗೆ ಸಂಸ್ಥಾನ ಮಾಡಿದ ಸಾಲ ಪಾವತಿಯನ್ನು ಗೋಸಿಂಯಾನ ತನ್ನ ಮೂಲ ಮೊತ್ತದಲ್ಲಿ ಕಳೆದುಕೊಂಡಿರಲೇ ಇಲ್ಲ.[39] ಬಡ್ಡಿಯ ದರಗಳು ಎರಡೆರಡು ರೀತಿ ಏರಿಸಲಾಗಿತ್ತು. ದಾಖಲೆಗಳು

37. FPC 21 DEC 1842 No.71
38. FPC 17 AUG 1842 Nos.151-53.
39. PLFC 2 JAN 1846

ಅಪರಿಪೂರ್ಣವಾಗಿರುವದನ್ನು ಒಪ್ಪಿಕೊಂಡ ಗೋಸಿಂಯಾನನ ಮಕ್ಕಳು ಕೊನೆಗೆ ಮೌನವಹಿಸಬೇಕಾಯಿತು. ಹೀಗಾಗಿ ಬೀಲರನು ಪರಿಶೀಲನೆಯ ತರುವಾಯ ರೂ.1,98,629-00 ಮಾತ್ರ ನಿವ್ವಳ ಸಾಲವೆಂದು ನಿರ್ಣಯಿಸಿದ.[40]

ಸಂಸ್ಥಾನಕ್ಕೆ ಸಾಲ ಕೊಟ್ಟ ಇನ್ನಿತರ ಪ್ರಮುಖರೆಂದರೆ ಬಾಗಲಕೋಟೆಯ ಸಾಹುಕಾರ ಸಿದ್ಧಪ್ಪ, ಸಂಕೇಶ್ವರ ಸ್ವಾಮಿ ಮತ್ತು ಡಾ: ಬಾಲಪ್ರಸಾದ. ಗೋಸಿಂಯಾನ ಒಳಗೊಂಡಂತೆ ಇವರೆಲ್ಲರೂ ಸಂಸ್ಥಾನಕ್ಕೆ ನೀಡಿದ ಸಾಲದ ಮೂಲ ಮೊತ್ತ ಒಟ್ಟು 17 ಲಕ್ಷ ರೂ.ವಾಗಿತ್ತೆಂದು ಅಧಿಕೃತವಾಗಿ ತಿಳಿಯುತ್ತದೆ. ಅಲ್ಲದೆ ದಾಯಾದಿ ಹಣಮಪ್ಪನಾಯಕನಿಗೆ 12,500-00 ರೂ. ಹಾಗೂ ಜರ್ಲಾಪಾಳಿ ಯಂಕಪ್ಪನಿಗೆ 3600 ರೂ.ಗಳ ಮಾಶಾಸನ ಬಾಕಿ ಹಾಗೆಯೇ ನೆನೆಗುದಿಗೆ ಬಿದ್ದವು.

ಮೇಲಿನ ವಿವರಣೆ ನೋಡಿದರೆ, " ಶ್ರೀಮಂತರ ಕೈಯಲ್ಲಿ ಸಿಕ್ಕ ಸಂಸ್ಥಾನದ ಸ್ಥಿತಿ-ಗತಿಯನ್ನು ಬಿಂಬಿಸುತ್ತದೆ. ಅಲ್ಲದೆ ಅಸಲಿಗಿಂತ ಬಡ್ಡಿಯೇ ಬೆಳೆದು ನಿಂತದ್ದು ಕಂಡರೆ ಸುರಪುರ ರಾಜರ ಸಾಲನೀತಿ ಹೇಗಿತ್ತೆಂಬುದು ಅರ್ಥವಾಗುತ್ತದೆ. ಜಾಮೀನಿಟ್ಟ ಜಮೀನನ್ನೇ ಮುಟ್ಟುಗೋಲು ಹಾಕಿಕೊಳ್ಳುವ[41] ಮಟ್ಟಕ್ಕೆ ಸಾಲ ನೀಡಿದವರು ಮುಂದುವರೆದಿದ್ದರೆಂದರೆ ಸಂಸ್ಥಾನವು ಎಂಥ ಹೀನ ಸ್ಥಾನ ತಲುಪಿತ್ತೆಂಬುದು ತಿಳಿಯುತ್ತದೆ. ಸಾಲ್ವಡಿ ವೆಂಕಟಪ್ಪನಾಯಕನು 55 ಜನರಲ್ಲಿ ಸಾಲ ತೆಗೆದಿದ್ದ. 8 ರೂಪಾಯಿಯಿಂದ 32, ಸಾವಿರ ರೂ.ವರೆಗೆ ಅದಿತ್ತು. 18 ಸಾವಿರ ರೂ. ಬರೆ ಬಟ್ಟೆ ಖರೀದಿಯದು, 8 ಸಾವಿರ ರೂ. ಆಭರಣ ತಂದ ಸಾಲವಿತ್ತು. ಇಂಥ ರಾಜರ ಆಳ್ವಿಕೆಯಿಂದಲೇ ಸಂಸ್ಥಾನ ಬಹುಬೇಗ ಪತನವಾಯಿತು.

<u>ಸಂಸ್ಥಾನ ನೀಡಿದ ಸಾಲ:</u>

1. ಗುಡಗುಂಟೆಯ ಸುರಪುರದ ಸಹೋದರ ಸಂಸ್ಥಾನ. ಅಲ್ಲಿಯ ಅರಸರೆಲ್ಲ ಸುರಪುರದವರ ರಕ್ತಸಂಬಂಧಿಗಳು. ಹೀಗಾಗಿ ಪ್ರತಿಯೊಂದಕ್ಕೂ ಇವರಲ್ಲಿ ಕೊಡುಕೊಳ್ಳುವಿಕೆ ನಡೆದಿತ್ತು. ಒಮ್ಮೆ ಗಜೇಂದ್ರಗಡದವರು ಗುಡಗುಂಟೆಯ ಮೇಲೆ ಆಕ್ರಮಣ ಮಾಡಿದ್ದರು. ಅಪಾರ

---

40. FPC 20 JUNE 1846 Nos.114-15.
41. Jackson's memo FPC 19 APR 1841 No.103.

ಹಾನಿ ಅನುಭವಿಸಬೇಕಾಯಿತು. ತಕ್ಷಣವೇ ಸುರಪುರದ ಇಮ್ಮಡಿ ವೆಂಕಟಪ್ಪನಾಯಕನರು ಶೇ. 1 ರೂ. ಬಡ್ಡಿ ದರದ ಮೇಲೆ 30 ಸಾವಿರ ಸಾಲ ಪಡೆದುಕೊಂಡರು. ಇದಕ್ಕೆ ಪ್ರತಿಯಾಗಿ ಹುಣಸಗಿ ಭಾಗದ 37 ಗ್ರಾಮಗಳನ್ನು ಒತ್ತೆ ಹಾಕಿದರು. ಕೆಲವು ದಿನಗಳ ತರುವಾಯ ಮೊದಲ ಒಪ್ಪಂದ ಮುರಿದುಬಿತ್ತು. ನೇಡಿನಿಂದ ಒಬ್ಬರ ಪ್ರದೇಶ ಇನ್ನೊಬ್ಬರು ಲೂಟಿ ಮಾಡತೊಡಗಿದರು. ಆಗ ಸುರಪುರದ ಕೈಮೇಲಾಯಿತು. ಇದೆಲ್ಲದರ ಅರ್ಥವಿಷ್ಟೆ : 'ಸಂಸ್ಥಾನವು ಸಹ ಸಾಲ ನೀಡುವ ಶಕ್ತಿ ಹೊಂದಿತ್ತು' ಎನ್ನುವುದು. ಸಂಬಂಧಿಕರಾದರೂ ಹಣದ ದೃಷ್ಟಿಯಿಂದ ಅವರು ಅನ್ಯರೆಂದೇ ಭಾವಿಸಿ, ಬಡ್ಡಿ ಹಾಕಿ, ಜಾಮೀನು ಇಟ್ಟುಕೊಂಡಿದ್ದರೆಂದು ತಿಳಿಯುತ್ತದೆ.

2. ಸಂಸ್ಥಾನವು ರೈತರಿಗೆ ಕೃಷಿಸಾಲ ನೀಡಿದ ಬಗ್ಗೆ ದಾಖಲೆಗಳಿವೆ. ವಿಶೇಷವಾಗಿ ಬರಗಾಲ ಬಂದಾಗ ಸರಳ ಬಡ್ಡಿಯ ಮೇಲೆ ನೀಡಲಾಗುತ್ತಿತ್ತು. ಹೊಸಬಾವಿ ತೆಗೆಸಲು, ಹಳೆಬಾವಿ ದುರಸ್ತಿ ಮಾಡಿಸಲು ಸಂಸ್ಥಾನ ಸಾಲ ರೂಪದಲ್ಲಿ ನೆರವಾಗಿದೆ. ಕ್ರಿ.ಶ.1847ರಲ್ಲಿ ಟೇಲರನು ಸಂಸ್ಥಾನದಿಂದ 15,124-00 ರೂ. ರೈತರಿಗೆ ಕೃಷಿಸಾಲವೆಂದು ನೀಡಿದ್ದ.

—— 00 ——

ಅಧ್ಯಾಯ ನಾಲ್ಕು

ಧಾರ್ಮಿಕ ಹಾಗೂ ಸಾಮಾಜಿಕವ್ಯವಸ್ಥೆ

ಅಧ್ಯಾಯ – ನಾಲ್ಕು

ಧಾರ್ಮಿಕ ಹಾಗೂ ಸಾಮಾಜಿಕ ವ್ಯವಸ್ಥೆ

ಅ. ಧರ್ಮ

" ಸಂಸ್ಕೃತದ 'ಧೃ' ಧಾತುವಿನಿಂದ 'ಧರ್ಮ' ಪದ ಜನಿಸಿತು. ಅದು ಎತ್ತಿಹಿಡಿ, ರಕ್ಷಿಸು ಎಂಬಿತ್ಯಾದಿ ಅರ್ಥ ಸ್ಫುರಿಸುವದೆಂದು" ಹಿಂದಿನ ವಿದ್ವಾಂಸರ ವ್ಯಾಖ್ಯಾನ. ಪುರುಷಾರ್ಥಗಳಲ್ಲಿ ಪ್ರಥಮ ಸ್ಥಾನ ದಕ್ಕಿಸಿಕೊಂಡ 'ಧರ್ಮ' ದ ಬಗ್ಗೆ ಅನೇಕ ವಿಚಾರವಾದಿಗಳು ಬರೆದಿದ್ದಾರೆ; ಬರೆಯುತ್ತಿದ್ದಾರೆ. ಧರ್ಮವೆಂದರೇನು ಎಂಬುದಕ್ಕೆ ಲೆಕ್ಕವಿಲ್ಲದಷ್ಟು ವ್ಯಾಖ್ಯಾನಗಳು ವಿದ್ವಾಂಸರಿಂದ ಈಗಾಗಲೇ ಹೊರಬಿದ್ದಿವೆ. ಅವೆಲ್ಲವುಗಳನ್ನು ಮರಳಿ ಪ್ರಸ್ತಾಪಿಸುವ ಬದಲು ಇತ್ತೀಚಿನ ಕೆಲವು ನಿಲುವುಗಳನ್ನು ಇಲ್ಲಿ ನೋಡಲಾಗಿದೆ.

" ಜಾತಿ, ಮತ, ಪಂಥ-ಪಂಗಡಗಳೆಲ್ಲ ಇಂದು 'ಧರ್ಮ' ಕ್ಕೆ ಸಂವಾದಿಯಾಗಿ ಬಳಸುತ್ತಿದ್ದಾರೆ. ಆದರೆ ಜಾತಿ, ಮತ ಮತ್ತಿನ್ನಿತರ ಪದಗಳು ಧರ್ಮದ ವ್ಯಾಪ್ತಿಯೊಳಗೆ ವ್ಯವಹರಿಸುವಂತವು" ವೆಂಬ ವಾದವೊಂದು ಈ ರೀತಿ ಹೇಳುತ್ತದೆ – " ಓರ್ವ ಪ್ರವಾದಿ ಇಲ್ಲವೆ ಪ್ರವರ್ತಕ ತನ್ನದೆ ಆದ ಸಿದ್ಧಾಂತದಡಿಯಲ್ಲಿ ಜಾತಿಯ ರೂಪರೇಷೆಗಳನ್ನೆಲ್ಲ ಹಿಗ್ಗಿಸಿ ಹೊಸ ತತ್ವ ಸ್ಥಾಪಿಸಿದ್ದರೆ ಅದು 'ಮತ' ವೆಂದು, ಶತಮಾನಗಳಿಂದಲೂ ಸಾಗಿಬಂದ ಜೀವನಮೌಲ್ಯ ಮತ್ತು ಲೋಕರೂಢಿಗಳನ್ನೇ ಅನುಸರಿಸಿ ಹಾಗೂ ಯಾವುದೇ ವ್ಯಕ್ತಿ ಅಥವಾ ಸ್ಥಾಪಕನ ಹೆಸರು ಪಡೆಯದಿದ್ದರೆ ಅದು 'ಧರ್ಮ' ವೆಂದು" ಪ್ರತಿಪಾದಿಸಿದ್ದಾರೆ. ಹಾಗಾದರೆ ಬೌದ್ಧ, ಜೈನ, ಕ್ರೈಸ್ತ, ಲಿಂಗಾಯತ, ಸಿಖ, ಮುಸ್ಲಿಂ ಮುಂತಾದವುಗಳನ್ನು ಇಲ್ಲಿ ಮತವೆಂದು ಕರೆಯಬೇಕಾಗುತ್ತದೆ. ಯಾಕೆಂದರೆ ಇವೆಲ್ಲ ಓರ್ವ ವ್ಯಕ್ತಿಗಳಿಂದ ಸ್ಥಾಪನೆಯಾದಂಥವು. ಆ ಸ್ಥಾಪಕನನ್ನೇ ಇವರು ತಮ್ಮ ಆರಾಧ್ಯ ದೈವನೆಂದು, ಪೂಜ್ಯನೆಂದು ಪೂಜಿಸುತ್ತಾರೆ. 'ಹಿಂದು' ಎನ್ನುವುದಕ್ಕೆ ಯಾವುದೇ ಸ್ಥಾಪಕನಿಲ್ಲ. ಓರ್ವ ವ್ಯಕ್ತಿಯನ್ನೇ ಆರಾಧಿಸುವುದೂ ಇಲ್ಲ. ಹೀಗಾಗಿ ಇದು ಧರ್ಮವಂತೆ.

ಇದೇನಿದ್ದರೂ ವಾದ-ಪ್ರತಿವಾದಿಗಳ ಬೌದ್ಧಿಕ ಕಸರತ್ತು ಅಷ್ಟೆ. ಆದರೂ ಸಹ ಇವುಗಳನ್ನು ಇಲ್ಲಿ ಚರ್ಚಿಸುವ ಅಗತ್ಯವೇನೆಂದರೆ ' ಸುರಪುರ ಸಂಸ್ಥಾನದ ದೊರೆಗಳ ಧರ್ಮ ಯಾವುದು? ಯಾವ ನಿಲುವನ್ನು ಸಂಸ್ಥಾನದ ಜನತೆ ಬೆಂಬಲಿಸಿದರು? ಅದನ್ನೇ ಏಕೆ ಪವಿತ್ರವೆಂದು ಪೂಜಿಸಿದರು? ಅರ್ಚಿಸಿ,

ಆರಾಧಿಸಿ ತಮ್ಮಲ್ಲಿ ಅದನ್ನು ಹೇಗೆ ಅಳವಡಿಸಿಕೊಂಡರು? ಸಂಸ್ಥಾನದಲ್ಲಿ ಅದನ್ನು ಹೇಗೆ ವ್ಯವಸ್ಥೆಗೊಳಿಸಿದರು? ಎಂಬಿತ್ಯಾದಿ ಪ್ರಶ್ನೆಗಳನ್ನು ಇಲ್ಲಿ ಪರಿಶೀಲಿಸಬೇಕಾಗಿದೆ.

ವರ್ಣಾಶ್ರಮ ವ್ಯವಸ್ಥೆಯನ್ನು ರೂಢಿಸಿಕೊಂಡು ಬಂದ ಹಿಂದು ಧರ್ಮವು ಅನೇಕ 'ಪಂಥ'ಗಳನ್ನು ತನ್ನ ಒಡಲಲ್ಲಿ ಸೇರಿಸಿಕೊಂಡಿತ್ತು. ಕಾಲ ಸರಿದಂತೆ, ಕರ್ಮದ ಮಡಿಲಲ್ಲಿ ಉಸಿರುಗಟ್ಟುವ ವಾತಾವರಣ ಸೃಷ್ಟಿಯಾಯಿತು. ಸಹಿಸಿಕೊಳ್ಳಲು ಸಾಧ್ಯವಾಗದ 'ಪಂಥ'ಗಳೆಲ್ಲ 'ಹಿಂದು'ವಿನ ಒಡಲನ್ನೇ ಸೀಳಿ, ಹೊರಬಂದವು. ಅಂಥವುಗಳಲ್ಲಿ ಬೌದ್ಧ, ಜೈನ, ಲಿಂಗಾಯತ ಮುಂತಾದ 'ಮತ'ಗಳು ಸ್ವತಂತ್ರ ಧಾರ್ಮಿಕ ನೆಲೆ ಗುರುತಿಸಿಕೊಂಡ ಇವು ಮುಂದೆ — ಸುಭದ್ರ ವ್ಯವಸ್ಥೆ ರೂಪಿಸಿಕೊಂಡವು. ಆದರೆ 'ಹಿಂದು'ವಿನ ಒಡಲಿಂದ ಸಿಡಿದೆದ್ದು ಬರದ 'ಪಂಥ'ಗಳು ಇನ್ನೂ 'ಹಿಂದು'ವಿನ ಸಹಯೋಗದೊಂದಿಗೆ ಸಾಗಿವೆ. ಅವುಗಳಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮುಖ್ಯವು. ಶಂಕರಾಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯ ಈ ಸಿದ್ಧಾಂತಗಳ ಮೂಲ ನೆಲೆಯೇ 'ವೈಷ್ಣವ'. ಈ 'ವೈಷ್ಣವ'ದ ಇನ್ನೊಂದು ಕವಲು ಶ್ರೀವೈಷ್ಣವ. ಇದುವೆ ಸುರಪುರ ದೊರೆಗಳ ಧರ್ಮ.

ಒಂದು ಧರ್ಮದ ಮೂಲ ಜೀವಾಳ 'ಜಾತಿ'. ಇದನ್ನೇ ಆಂಗ್ಲರು caste ಎಂದು ಕರೆದರು. ಮತ-ಧರ್ಮ, ಪಂಥ-ಪಂಗಡಗಳ ಮೂಲ ಮೊತ್ತ 'ಜಾತಿ' ಎನ್ನುವುದಾದರೆ ಶ್ರೀವೈಷ್ಣವ ಧರ್ಮದಲ್ಲಿಯ ಜಾತಿಗಳಾವುವು? ಇದರಲ್ಲಿ ಜಾತಿಗಳೇ ಇಲ್ಲವಾದರೆ ಇದನ್ನು ಧರ್ಮವೆಂದು ಕರೆಯಬಹುದೆ? ಎಂಬ ಪ್ರಶ್ನೆಗಳು ಏಳುವುದು ಸಹಜ. ಶ್ರೀವೈಷ್ಣವಕ್ಕೆ ಸ್ಥಾಪಕ ವ್ಯಕ್ತಿಯೊಬ್ಬನಿರುವುದರಿಂದ ಇದೊಂದು 'ಮತ'. ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ ಶ್ರೀವೈಷ್ಣವದಲ್ಲಿ ಎಲ್ಲಾ ಜಾತಿಯವರು ಪ್ರವೇಶ ಪಡೆಯಬಹುದಾಗಿತ್ತು. ಆದರೆ ರಕ್ತ ಸಂಬಂಧ ಬೆಳೆಸುವಂತಿರಲಿಲ್ಲ. ಇದಕ್ಕೆ ಸಾಕ್ಷಿ ಸುರಪುರ ಸಂಸ್ಥಾನ, ಸುರಪುರದ ದೊರೆಗಳು 'ಬೇಡ' ಜಾತಿಗೆ ಸೇರಿದ ಜನಾಂಗ. ಆದರೆ ಸ್ವೀಕರಿಸಿದ ಮತ ಶ್ರೀವೈಷ್ಣವ. ಸಂಸ್ಥಾನದಲ್ಲಿ ಸಿಂಹಪಾಲು ಜನಾಂಗ 'ಬೇಡರೆ' ಆಗಿರುವುದರಿಂದ ಇದು ಬಹು ಕುತೂಹಲಕಾರಿ ಅಧ್ಯಯನವಾಗಿದೆ. ಆದುದರಿಂದ 'ಬೇಡರು' ಜಾತಿಯ ಮೂಲ ಮತ್ತು ಅದರ ಪ್ರಭೇದಗಳನ್ನು ವಿಸ್ತಾರವಾಗಿ ಗುರುತಿಸುವ ಹಿನ್ನೆಲೆಯಲ್ಲಿ ಸುರಪುರ ದೊರೆಗಳ

ಮತ್ತು ಸಂಸ್ಥಾನದ ಜನತೆಯ ಧಾರ್ಮಿಕ ಪರಂಪರೆಯನ್ನು ಸಮೀಕ್ಷಿಸುವ ಯತ್ನ ಈ ಕೆಳಗಿನದು.

1. ಬೇಡರು :

ಬೇಟೆಯೇ ಬದುಕಿನ ಭಾಗವಾಗಿಸಿಕೊಂಡ ಬುಡಕಟ್ಟು ಜನಾಂಗವು 'ಬೇಡ' ರೆಂದು ಕರೆಯಿಸಿಕೊಂಡರು. ಕಾಡು-ಕಣಿವೆ, ಗುಡ್ಡ-ಗವಿಗಳೇ ಇವರ ವಾಸಸ್ಥಳವಾಯಿತು. ಚರ್ಮ, ತೊಗಟೆಗಳೇ ಉಡುಪುಗಳಾದವು. ಒಂದು ರೀತಿ ಆದಿಮಾನವನ ಎಲ್ಲಾ ಅವಸ್ಥೆಗಳನ್ನು ಹೊತ್ತುಕೊಂಡ ಇವರು ಕ್ರೂರ ಪ್ರಾಣಿಗಳ ಮಧ್ಯೆ ಬೇಟೆಯಾಡುತ್ತ ಬಾಳಿ ಬೇಡರು ಆದರು.[1] ಬೇಡ ಜನಾಂಗದ ಪ್ರಾಚೀನತೆ ಎಲ್ಲಿಂದ ಆರಂಭವಾಗುತ್ತದೆ ಎಂಬುದಕ್ಕೆ ನಿರ್ದಿಷ್ಟತೆ ಇಲ್ಲ. ಕೆಲವು ವಿದ್ವಾಂಸರು ಈ ನಿಟ್ಟಿನಲ್ಲಿ ನೀಡಿದ ಶೋಧನೆಗಳೆಂದರೆ –

(1) 'ಆದಿಮೂಲನಾದ ಭಗವಂತನೆ ಬೇಡರ ಮಗನಾಗಿ ಹುಟ್ಟಿ 'ಬೇಡರ' ಚಂಚು ಲಕ್ಷ್ಮಿಯನ್ನು ಮದುವೆಯಾಗಿ ಈ ವಂಶದ ಸಂತಾನದಲ್ಲಿ ತನ್ನ ಚೈತನ್ಯ ಬೆರೆಸಿದ[1ಅ] ನೆಂಬ ಊಹೆ ನೋಡಿದರೆ ಬೇಡ ಜನಾಂಗವನ್ನು ಶಿವನ ಮೂಲಕ್ಕು ಎಳೆದೊಯ್ಯಲಾಗಿದೆ.

(2) 'ಮನುವಿನ ಏಳನೆಯ ತಲೆಯವನಾಗಿ ಚಂದ್ರವಂಶದಲ್ಲಿ ಕಾರ್ತವೀರ್ಯಾರ್ಜುನ ಹುಟ್ಟಿದ. ಈತ ಹೇಹಯವೆಂಬ ರಾಜ್ಯ ಆಳುತ್ತಿದ್ದ. ವೈಷ್ಣವಯಾಗಾದಿ ಮಾಡುತ್ತಿದ್ದ. ಇದೇ ಸಂದರ್ಭದಲ್ಲಿ ಜಮದಗ್ನಿಯನ್ನು ಕೊಂದರು. ಇದರಿಂದ ಕುಪಿತನಾದ ಪರಶುರಾಮ ಕಾರ್ತವೀರ್ಯನನ್ನು ಹಾಗೂ ಅವನ ಮಕ್ಕಳನ್ನು ಕೊಂದು ಕ್ಷತ್ರಿಯರನ್ನು ಸದೆಬಡಿಯಲು 21 ಸಾರಿ ಭೂಮಿ ಮೇಲೆ ದಂಡಯಾತ್ರೆ ಕೈಗೊಂಡ. ಬೆದರಿದ ಕ್ಷತ್ರಿಯರೆಲ್ಲ ಕಾಡಿಗೆ ಹೋದರು. ಕಾಡು ವಾಸಿಗಳಾದರು. ಮುಂದೆ ಅವರೆ ಬೇಡರಾದರು[2] ಎಂಬ ವಾದವನ್ನು ಎತ್ತಿಕೊಂಡಾಗ ಶಾಕ ಶೌರ್ಯ ಸಾಹಸಗಳಿಂದ ಕ್ಷತ್ರಿಯರಿಗೂ ಬೇಡರಿಗೂ ಭಿನ್ನತೆಯಿಲ್ಲವೆಂಬುದನ್ನು ಹೇಳುವಲ್ಲಿ ಕ್ಷತ್ರಿಯರೇ ಮೂಲದವರು, ತರುವಾಯ ಬೇಡರು ಬಂದರೆಂದು ಒಪ್ಪಬೇಕಾಗುತ್ತದೆ.

---

1. ಬೇಡರ ಎಂದರೆ ಉರ್ದುವಿನಲ್ಲಿ ಯಾರಿಗು, ಯಾವುದಕ್ಕೂ ಎದರದವನೆಂದರ್ಥ. ಅದರಂತೆ ಮರಾಠಿಯಲ್ಲಿ ಎಂದಿಗೂ 'ಅಳದವ' ನೆಂದಿದೆ.(*

1ಅ. ಹೆಚ್.ವಿ. ವೀರನಾಯಕ. ಸಂಪಾದಕೀಯ, ವಾಲ್ಮೀಕಿ ಸ್ಮರಣ ಸಂಚಿಕೆ. ದಾವಣಗೆರೆ 1973 ಪು. 2

2. ಹೆಚ್. ವಿ. ವೀರನಾಯಕ, ಕ್ಷಾತ್ರಾಂಶ ಪ್ರಬೋಧ 1987 ಪು. 5.

(* The castes and tribes of medieval India by Rusal and H.Vali. Vol.II p-212)

(3) 'ಪಾಂಡವರಲ್ಲಿ ಪ್ರತಿಯೊಬ್ಬನಿಗೂ ಒಂದೊಂದು ಬೇಡರ ಪಡೆ ಇತ್ತು. ದಕ್ಷಿಣದ ಪೈನಗಂಗಾ ತೀರದ ಸುತ್ತಿನ ಪ್ರದೇಶ ಬೇಡರ ದೊರೆಯ ಆಳ್ವಿಕೆಯಲ್ಲಿತ್ತು. ಸೂರ್ಪಾರಕದಿಂದ ರತ್ನಗಿರಿವರೆಗಿನ ಪ್ರದೇಶ ಬೇಡರ ರಾಜ್ಯವಾಗಿತ್ತು'[3] ಎಂದು ಮಹಾಭಾರತ ಕಾಲೀನ ಬೇಡರ ರಾಜ್ಯವನ್ನು ಗುರುತಿಸಲಾಗಿದೆ.

(4) 'ಕಲಿಯುಗದ ಪ್ರಾರಂಭಕ್ಕೆ ದಕ್ಷಿಣ ದೇಶದಲ್ಲಿ ಬೇಡರು ವಿನಃ ಬೇರೆ ಯಾವ ಜನಾಂಗದವರು ಇರಲಿಲ್ಲ. ಅನಂತರದ ಮನೆತನಗಳಿಗೆಲ್ಲ ಬೇಡರೆ ಮೂಲರೆಂದು'[4] ಹೇಳುವಲ್ಲಿ ಬೇಟೆಯ ಪದ್ಧತಿಯನ್ನು ಪ್ರಧಾನವಾಗಿಟ್ಟುಕೊಳ್ಳಲಾಗಿದೆ.

(5) 'ಬೇಡರ ಜನಾಂಗವು ಮೂಲ ದ್ರಾವಿಡ ಜನಾಂಗ. ಅದಕ್ಕೆ ಪುಳಿಂದ, ಭಿಲ್ಲ, ಕಿರಾತ, ವ್ಯಾಧ, ಶಬರ, ನಿಷಾದ ಮುಂತಾದ ಪುರಾತನ ಹೆಸರುಗಳಿದ್ದುವು. ಅಂತೆಯೇ ದ್ರಾವಿಡ ಭಾಷೆಗಳಲ್ಲಿ ವೇಡನ್, ವೇಂದನ್, ವೆಟ್ಟುವನ್—ಎಂದೆಲ್ಲ ಕರೆಯಲಾಗಿದೆ. ಹಳಗನ್ನಡದಲ್ಲಿ ವೇಡರ್, ವೇಳರ್, ಬಿದಿರ್, ಬಿಲ್ಲ, ಬೆಂಟೆಯವರ್, ಬೇಂಟೆಕಾರ್, ಬಿಯದರ್, ಬಯದರ್, ಕುಣಿಂದರ್, ಕೋವರ ಎಂಬ ನಾಮಗಳಿವೆ. ರಾಷ್ಟ್ರಕೂಟರ ಕಾಲದ ಅಪಭ್ರಂಶ ಭಾಷೆಯಲ್ಲಿ ನಾಹಲ, ನಾಕಿಲ, ನಾಇಲ್ಲ, ವಾಹ, ಸವರ, ಸಿಬಿರ, ಬೆಲಾಡ, ಭಿಲ್ಲ, ವಾದಿಯ ಮುಂತಾಗಿ'[5] ಗುರುತಿಸಲಾಗಿದೆ. ಇವೆಲ್ಲ ವಾದಗಳು ಬೇಡ ಜನಾಂಗದ ಪ್ರಾಚೀನತೆಯನ್ನು ರಾಮಾಯಣ, ಮಹಾಭಾರತ ಕಾಲಕ್ಕೆ ಒಯ್ಯುತ್ತವೆಂಬುದು ದಿಟ.

ಸಂಸ್ಕೃತದ ವ್ಯಾಧ, ನಿಷಾದ, ಪುಳಿಂದ, ಭಿಲ್ಲ, ಕಿರಾತ ಪದಗಳು[6] ಕನ್ನಡದಲ್ಲಿ ಬ್ಯಾಡ, 'ಬೇಡ' ವಾಗಿವೆ. ಬೇಟೆಯನ್ನೇ ಮೂಲ ಬಂಡವಾಳವಾಗಿಸಿಕೊಂಡ 'ಬೇಡನು' 'ಗಾರ' ತದ್ಧಿತ ಪ್ರತ್ಯಯ ಸೇರಿಸಿಕೊಂಡು ಬೇಟೆಗಾರನಾದ. ಈ ವೃತ್ತಿ ಅನುಸರಿಸಿದವರೆಲ್ಲ 'ಬೇಡರು' ಎಂದಾದರು.

---

3. ವಿಷ್ಣುಹರಿ ಒಡೆಯರು (ಸಂ) ಸಹದೇವ ದಿಗ್ವಿಜಯ.
4. ಎಚ್.ಸಿ. ಬೋರಯ್ಯ, ರಾಷ್ಟ್ರಸೇವೆಯಲ್ಲಿ ನಾಯಕ ಜನಾಂಗ.
5. ಇತಿಹಾಸ ಚಂದ್ರಿಕೆ ಸಂಚಿ 2. ಸಂ. ಪು. 10, ಅಕ್ಟೋಬರ್ 1992 ಪು. 1.
6. ಹರತಿಕೋಟೆ ವೀರೇಂದ್ರ ಸಿಂಹ. ಸಂ. ವಾಲ್ಮೀಕಿ ಜ್ಯೋತಿ (ಸ್ಮರಣ ಸಂಚಿಕೆ) 1987 ಪು. 26.

'ಬೇಡ ಜನಾಂಗದ ಮೂಲ 'ವಾಲ್ಮೀಕಿ' ಯೆಂದು ಹಲವರ ಅನಿಸಿಕೆ. ಕಿರಾತರ ಯಜಮಾನನಾದ ಈತ ಕಾವುಕೇತು, ಲಕ್ಷ, ಮೀನ, ಮಲ್ಲರೆಂಬ ಇನ್ನಿತರ ಏಳು ಜನ ತನ್ನ ಮಕ್ಕಳ ನಾಯಕತ್ವದಲ್ಲಿ ಏಳು ಪಡೆ ರಚಿಸಿ ದರೋಡೆ ನಡೆಸುತ್ತಿದ್ದನು. ಮುಂದೆ ಕಾಡಿನಲ್ಲಿ ಚದುರಿ ಹೋದ ಈ ಪಡೆಗಳೆ 'ಬೇಡರ' ಜನಾಂಗದ ವಂಶ ವಿಕಾಸಕ್ಕೆ ನಾಂದಿ ಹಾಡಿದವು' ಎಂದು ಒಂದು ಐತಿಹ್ಯ. ಅದೇನೆ ಇದ್ದರೂ — ತೂರಿಹೋದ ಈ ತುಕಡಿಗಳು ಆಯಾ ಪ್ರದೇಶಗಳಲ್ಲಿ ವಾಸಿಸಿದರು. ಅವರೀಗ ಅಲ್ಲಿಯ ಹೆಸರುಗಳಿಂದಲೇ ಗುರುತಿಸಲ್ಪಡುತ್ತಿದ್ದಾರೆ. ಅದರ ಒಂದು ಪಟ್ಟಿ ಈ ರೀತಿ ನೋಡಬಹುದು.

ಪ್ರದೇಶ	ಬೇಡರ ಪರ್ಯಾಯ ಹೆಸರುಗಳು
ತಮಿಳುನಾಡು	ನಾಯಕನ್, ನಾಯಕ, ನಾಯ್ಕರ್, ವಾಲ್ಮೀಕಿ ವೇಡನ್, ವೆತ್ತಲೆ, ನಾಯಕರ್, ವೇತುಕಷ್, ಗೆಂಟು.
ಸಿಲೋನ	ವೇಟನ್, ವೇಡುವಾಸ, ವೆದಾಸ, ವೇಟೆಕಾರನ್
ಉತ್ತರ ಪ್ರದೇಶ, ಪಂಜಾಬ, ರಾಜಸ್ತಾನ	ಜಾಟ ಭಿಲ್, ಬಾಲಮೀಕಿ, ವಾಲ್ಮೀಕಿ, ನಾಯಕವಾಂಗ್
ಬಂಗಾಲ, ಬಿಹಾರ	ಸೇನ್
ಕೇರಳ ಮಲೇಶಿಯಾ	ನಾಯರ್
ಕಾಶ್ಮೀರ	ಡೋಗ್ರಾ
ಮಹಾರಾಷ್ಟ್ರ	ರಾಮೋಶಿ, ರಾಣವಾಸಿ
ಆಂಧ್ರ ಪ್ರದೇಶ	ಬೋವಿ, ಬೋಯಿ, ನಾಯುನಿ, ದೊರೆಬಿಡ್ಡಲು, ಸಿಹ್ಯನಾನಾ, ಬೋಯಾಸ

ಹೀಗೆ ಅನೇಕ ಪರ್ಯಾಯ ಹೆಸರುಗಳನ್ನು ಪಡೆದ ಬೇಡರು ಹೊರರಾಜ್ಯದಲ್ಲಿದ್ದಾರೆ. ಇನ್ನು ಅನೇಕ

ದೇಶ-ವಿದೇಶ ವಿದ್ವಾಂಸರು ಬೇಡರ ಬಗ್ಗೆ ಅಧ್ಯಯನ ನಡೆಯಿಸಿ ಸಾಕಷ್ಟು ಮಾಹಿತಿ ಒದಗಿಸಿದ್ದಾರೆ. ಇವರಿಗಿರುವ ಇನ್ನಷ್ಟು ಪರ್ಯಾಯ ಪದಗಳನ್ನು ಶೋಧಿಸಿದ್ದಾರೆ. ಇವೆಲ್ಲವುಗಳಲ್ಲಿ ಕರ್ನಾಟಕದ ಬೇಡರನ್ನು ಕುರಿತು ವಿಶೇಷತೆ ಇರುವುದರಿಂದ ಇಲ್ಲಿಯ ಸಮೀಕ್ಷೆಗೆ ಎತ್ತಿಕೊಳ್ಳಲಾಗಿದೆ.

'ಕರ್ನಾಟಕ ಮತ್ತು ಕೇರಳ ಪ್ರದೇಶದಲ್ಲಿ ಬೇಡ, ಬ್ಯಾಡರು, ಬೇಡರ್, ತಳವಾರ, ನಾಯಕ, ಕಿರಾತಕ, ಬಾರಿಕ, ಕನ್ನಯ್ಯ, ರಾಮೋಶಿ, ಬೈಡರ್' ಎಂಬ ಭಿನ್ನ ಹೆಸರು ಬೇಡರಲ್ಲಿ[7] ಕಾಣುತ್ತೇವೆ. ರಾಜಸ್ಥಾನದಲ್ಲಿಯೂ ಸಹ ಅವರು ಮಾಡುತ್ತಿರುವ ಕಸುಬನ್ನೇ ಆಧಾರವಾಗಿಟ್ಟುಕೊಂಡು ಬಾಲಮೀಕಿ, ವಾಲ್ಮೀಕಿ, ಭಿಲ್ಲ, ನಾಯಕ, ವೇಟನ್, ವೇಟೆಗಾರನ್, ಬಲ ನಾಯ್ಕರ್, ಕಾಟ್ಟುನಾಯಕರ್, ವೆತ್ತಿನಾಯ್ಕರ್, ವೇಟುವನ್, ತೋಟಿಯ ನಾಯ್ಕರ್ ಎಂದಿರುವ ಸಹಿಸರನ್ನು ಶೋಧಿಸಲಾಗಿದೆ.[8] ಕರ್ನಾಟಕದ ಕೆಲವು ಭಾಗದಲ್ಲಿ ನಾಯಕ, ನಾಯಕ ಮಕ್ಕಳು, ಅರಮನೆಯ ರಾಜಪರಿವಾರ, ಬೇಡರು, ಬೋಯಿಗಳು, ಪರಿವಾರದವರು ಇವರೆಲ್ಲ ಬೇಡರೆಂದು[9] ಗುರುತಿಸಲಾಗಿದೆ. ಬೇಡರಲ್ಲಿ 20 ಉಪಭಾಗಗಳಿರುವುದರಿಂದ[10] ಇವರಲ್ಲಿ ವುಲೊಯ್ಯೇಟಕ್ಕೆ ಭಿನ್ನತೆ ಕಾಣಬಹುದು. ಆದರ 'ಮೂಲ' ಮಾತ್ರ ಒಂದೆ[11] ಪಾಳೆಗಾರ, ಮ್ಯಾಸನಾಯಕ, ಬಾರಿಕ್, ರನ್ನಯ್ಯನ ಜಾತಿ, ಕಿರಾತಕ ಜಾತಿ ಎಂದು ಕರ್ನಾಟಕದ ಗಡಿಭಾಗದಲ್ಲಿ ಹೆಚ್ಚಾಗಿ ಪ್ರಚಲಿತವಿದೆ. ಇದರಲ್ಲಿ ಬೇಡ, ವೇದನ್, ಬಾರಕ್, ದೊರೆ ಬಡ್ಡನಾಯಕ, ನಾಯಕವಾಡಿ ಇನ್ನಿತರ ಉಪನಾಮಗಳನ್ನು[12] ನಿಖರವಾಗಿ ಹೇಳಲಾಗಿದೆ.

ಬೇಡರು ಪಂಜಾಬಿನ ಗಿರಿಶಿಖರಗಳಿಂದ ಬಂದವರೆಂದು ಇವರಿಗೆ ಬಲ್ಲರು, ನಾಯಕರು, ಬೇರಾರ ಎಂದು ಕರೆಯುತ್ತಿದ್ದರೆಂದು ಕೆಲವು ವಿದ್ವಾಂಸರ ಅಭಿಪ್ರಾಯವಿದೆ. ಅದರಂತೆ ಮಧ್ಯಪ್ರದೇಶದಲ್ಲಿರುವ ನಾಯಕರು ಮತ್ತು ಮುಂಬೈ, ಸಿಂಧೂದೇಶ, ಗುಜರಾತ, ಮಹಾರಾಷ್ಟ್ರಗಳಲ್ಲಿರುವ

---

7. Gazetteer of Bombay Presidency Vol.1, XV. Pp.359-362.
8. The Madras Provinge Caste and Tribes 1909 p-153
9. The Mysore Tribes and Castes Vol.II, by H.V.Nanjundiah and K.Ananthakrishnan Iyer 1920 Pp.196-238.
10. Report of Mysore Population Senses 1891-1901 p-185.
11. B.Le is and Rice Ciemras -Extract of Mysore Gazetteer Vol.I complied of Government.
12. R.E.Ethnoven -The Castes and Race of Bombay 1920.

ರಾಮೋಶಿಗಳು ಹಾಗೂ ಡೆಕ್ಕನ್ ಭೂಮಿ, ಉತ್ತರ ಇಂಡಿಯಾದಲ್ಲಿರುವ 'ಬಾಲಮೀಕಿ' ನಾಯಕರು ಇವರೆಲ್ಲ ಒಂದೇಯಾಗಿದ್ದಾರೆಂಬುದು[13] ಹಲವರ ಸ್ಪಷ್ಟ ವಿಚಾರ. ಬೇಡರಲ್ಲಿ ಕವಲೊಡೆದ ಅನೇಕ ಪಂಗಡಗಳು ಮುಂದೆ ಬಹು ಪ್ರಭಾವ ಪೂರ್ಣವಾಗಿ ಬೆಳೆದವು. ಅವುಗಳಲ್ಲಿ ಕೆಲವನ್ನು ವಿವರವಾಗಿ ನೋಡುವದು ಅವಶ್ಯವೆನಿಸುತ್ತದೆ.

<u>ವಾಲ್ಮೀಕಿ :</u>

'ತ್ರೇತಾಯುಗದ ಮೂಲಸಂವೇದನೆಯನ್ನು, ಬದುಕಿನ ಮೌಲ್ಯವನ್ನು, ಸೋಲು ಗೆಲುವುಗಳನ್ನೆಲ್ಲಾ ಒಟ್ಟಾಗಿ ಹಿಡಿದಿಟ್ಟ ದಾರ್ಶನಿಕ ಶಕ್ತಿ ವಾಲ್ಮೀಕಿಗೆ ದಕ್ಕಿತು. ಅದು ಶ್ರೀರಾಮಾಯಣ ರೂಪದಲ್ಲಿ ಹೊರಬಿತ್ತು,[14] ಇಂಥ ಶಕ್ತಿ ಸಿಗುವ ಮುನ್ನ ಆದಿಮಾನವನಂತೆ ಅಡವಿಯಲ್ಲಿ ಅಲೆಯುತ್ತಿದ್ದ ವಾಲ್ಮೀಕಿ ಪ್ರಚೇತಸ ಮತ್ತು ಪ್ರಮೋದೆಯರ ಮಗನಾಗಿ ತಮಸಾ ನದಿ ತೀರದಲ್ಲಿ ವಾಸವಾಗಿದ್ದನು.[15] ನಂತರ ಕಿರಾತರ ಯಜಮಾನನಾಗಿ ಕಾಮಕೇತು, ಲಕ್ಷ, ಮೀನಮುಲ್ಲರೆಂಬ ಹನ್ನೆರಡು ಮಕ್ಕಳಲ್ಲಿ[16] ಏಳು ಮಕ್ಕಳನ್ನು ಆಯ್ಕೆ ಮಾಡಿಕೊಂಡು ವಾಲ್ಮೀಕಿಯು ಅವರ ಮುಖಂಡತ್ವದಲ್ಲಿ ಪಡೆ ರಚಿಸಿ ದರೋಡೆ ನಡೆಸುತ್ತಿದ್ದನೆಂದು, ಮುಂದೆ ಕಾಡಿನಲ್ಲಿ ಚದುರಿಹೋದ ಈ ಪಡೆಗಳೇ 'ಬೇಡರ' ಜನಾಂಗದ ವಂಶ ವಿಕಾಸಕ್ಕೆ ಕಾರಣವಾಯಿತೆಂದು[17] ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ 'ಬೇಡ' ಜನಾಂಗದ ಮೂಲ ವಾಲ್ಮೀಕಿಯಿಂದೇ ಹಲವರ ವಾದ. ಇದರಿಂದ ಬೇಡರ ಒಂದು ಗುಂಪು ತಮ್ಮನ್ನು ವಾಲ್ಮೀಕಿ, ವಾಲ್ಮೀಕಿ ಮಕ್ಕಳೆಂದು ಕರೆಯಿಸಿಕೊಳ್ಳಲು ಇಚ್ಛಿಸುತ್ತಾರೆ. ಮಹಾರಾಷ್ಟ್ರದಲ್ಲಿ ಕಬ್ಬಲಿಗರು ವಾಲ್ಮೀಕಿ ಪೂಜಕರಾಗಿರುವುದರಿಂದ ಅವರಿಗೆ ವಾಳ್ಯಾ (ವಾಲ್ಮೀಕಿ) ಕೋಳಿ ಎನ್ನುತ್ತಾರೆ.[18] ಅದರಂತೆ ತ್ರೇತಾಯುಗದಲ್ಲಿ ಗುಹ, ಶಬರಿ, ದ್ವಾಪರದಲ್ಲಿ ಏಕಲವ್ಯ, ಧರ್ಮವ್ಯಾಧ, ಕಲಿಯುಗದಲ್ಲಿ ಬೇಡರ ಕಣ್ಣಪ್ಪರನ್ನು ಬೇಡರ ಜನಾಂಗದ ತಮ್ಮ ಆರಾಧ್ಯರೆಂದು

---

13. M.A.Shering -The Triber's and Castes of Hindu Vol.III 1879, p.3,8,321.

14. ಶ್ಯಾಮಸುಂದರ ಬಿದರಕುಂದಿ, ಲೇಖನ-ವಾಲ್ಮೀಕಿಜ್ಯೋತಿ (ವಾಲ್ಮೀಕಿಜ್ಯೋತಿ) 1989 ಪು. 19
15. ಅದೇ ಪು. 19
16. ಎಚ್. ವಿ. ವೀರನಾಯಕ, ಸಂಪಾದಕೀಯ (ವಾಲ್ಮೀಕಿ) 1973. ಪು. 2
17. ಲಕ್ಷ್ಮಣ ತೆಲಗಾವಿ ಲೇಖನ ಇತಿಹಾಸಕಾರ ವೀರನಾಯಕ (ಹರತಿಸಿ) ಪು. 1292.
18. ವಿ.ಕೆ. ಮಾಧವನವರ, ಕನಕದಾಸರು ಬೇಡ ಜನಾಂಗದವರು 1992 ಪು. 10.

ಹಾಗೂ ತಾವು ಆವರ ವಂಶದವರೆಂದು[19] ಹೇಳಿಕೊಳ್ಳುತ್ತಾರೆ. 'ವ್ಯಾಸನ ವಂಶಸ್ಥರ ಚರಿತ್ರೆ ಮಹಾಭಾರತವಾದರೆ, ವಾಲ್ಮೀಕಿ ತನ್ನ ವಂಶದ ಇತಿಹಾಸವನ್ನು ರಾಮಾಯಣವಾಗಿಸಿರಬಹುದೆ[20] ಎಂಬ ಬಲವಾದ ಊಹೆಯೊಂದು ಇದೆ.

<u>ತಳವಾರ:</u>

ಬೇಡರಲ್ಲಿಯೇ ಇನ್ನೊಂದು ಹೆಸರು 'ತಳವಾರ'. ಯವನರ ವಿರುದ್ಧ ಸದಾ ಖಡ್ಗಧಾರಿಯಾಗಿದ್ದ ಇವರು ವೃತ್ತಿಯಿಂದ ಯುದ್ಧಕ್ಕಾಗಿ ಹೊರಡುವ ಸೈನಿಕರಾಗಿದ್ದರು. ಆದುದರಿಂದಲೇ ಇವರಿಗೆ ತಲವಾರ್ (ಖಡ್ಗ) ಎಂಬ ಹೆಸರು ಬಂತು.[21] ಆದರೆ ಐತಿಹಾಸಿಕವಾಗಿ ನೋಡುವುದಾದರೆ ಕ್ರಿ. ಶ. ಮೂರನೆಯ ಶತಮಾನಕ್ಕೆ ಸಂಬಂಧಿಸಿದ ನಾಗಾರ್ಜುನಕೊಂಡದಲ್ಲಿಯ ಇಕ್ಷ್ವಾಕು ವಂಶದ ದೊರೆಗಳಲ್ಲಿ ಸಲವರ, ತಲವರ, ತಳವರ, ತಳಾರ, ತಳಾ, ತಳವಾರ, ಮಹಾತಲವಾರ, ನಾಡ ತಳವಾರ ಎಂಬ ರಕ್ಷಣ ವಿಭಾಗದ ಹುದ್ದೆಗಳಿದ್ದವೆಂದು[22] ಹೇಳಲಾಗಿದೆ. ಕ್ರಿ.ಶ. 5 ರಿಂದ 8 ನೇ ಶತಮಾನದ ಶಾಸನಗಳಲ್ಲಿ ತಳಾ, ತಳರ, ತಳವಾರನೆಂದು ಗುರುತಿಸಲ್ಪಟ್ಟಿದೆ. ವಡ್ಡಾರಾಧನೆಯಲ್ಲೂ ತಳವ ಎಂದು ಉಲ್ಲೇಖಿಸಲಾಗಿದೆ. ತಳವಾರನು, ಕಾವಲುಗಾರ, ಗ್ರಾಮರಕ್ಷಕ, ನಗರ ರಕ್ಷಕನಾಗಿ ಬೇಡರಲ್ಲಿ ವೀರನೆನಿಸಿದ್ದಾನೆ. ಇಂಥ ಅನೇಕ ತಳವಾರರು ಪಾಳೆಗಾರರ ಕೋಟೆಗಳನ್ನು ರಕ್ಷಿಸಿ ನಾಡ ತಳವಾರರಾಗಿದ್ದರು. ತರುವಾಯ ಸುದ್ದಿ ತಲುಪಿಸುವ, ಪತ್ರ ಒಯ್ಯುವ ಓಲೇಕಾರರಾಗಿ ಪರಿವರ್ತನೆಗೊಂಡರು.

<u>ಪರಿವಾರ :</u>

ಆಳ್ವಿಕೆ ನಡೆಸುತ್ತಿರುವ ಅರಸರಿಗೆ ಅಂಗರಕ್ಷಕರಾಗಿದ್ದವರೇ ಪರಿವಾರದವರು. ಇದರಿಂದ ತಾವು 'ರಾಜಪರಿವಾರ'ವೆಂದು ಕರೆದುಕೊಳ್ಳುತ್ತಾರೆ. ಪರಿವಾರ ಜಾತಿಯ ಪ್ರಾಚೀನ ಹೆಸರು

---

19. ಅರ್ಯ ರಾಜಣ್ಣ, ನಾಯಕ ಜನಾಂಗದ ಇತಿಹಾಸ. 1982. ಪು. 18
20. ಡಾ. ಎಂ.ಬಿ. ನೇಗಿನಾಳ ಲೇಖನ. ಕರ್ನಾಟಕದ ಬೇಡ ಜನಾಂಗ, ಒಂದು ಪರಿಚಯ. (ಹರತಿಸಿರಿ) ಪು. 331.
21. ಡಿ.ಬಿ. ಥಂಗ, ಜನಾಂಗ ಪರಿಚಯ. 1988. ಪು. 5.
22. ಇತಿಹಾಸ ಚಂದ್ರಿಕೆ. ಸಂಚಿ.2 ಸಂಪುಟ 10 ಅಕ್ಟೋಬರ್ 1982. ಪು. 2.

'ಪಡಿಮೆಂಯರ್' ಎಂಬುದಾಗಿ ಗುಂಡ್ಲುಪೇಟೆ ತಾಲ್ಲೂಕಿನ ಶಾಸನ ಸ್ಪಷ್ಟಪಡಿಸುತ್ತದೆ.[23] 'ಪರಿಯಮಿರ' ವೇ ಮುಂದೆ ಪರಿವಾರವಾಗಿದೆ.[24] ಪರಿವಾರದವರು ಬೇಡರಲ್ಲ[25] ವೆಂದು ಹೇಳುವುದು ಸರಿಯಲ್ಲ. ಉದ್ಭವಿಸಿದ್ದ ಬೇಟೆಗಾರರಾಗಿ, ಯೋಧರಾಗಿ, ಇದರ ಪಂಗಡದ ಮೂಲವೇ ವಾಲ್ಮೀಕಿ ವಂಶವೆಂದು ತಿಳಿದಿರುವಾಗ ಪ್ರತ್ಯೇಕವೆನ್ನುವ ಪ್ರಶ್ನೆಯೇ ಬರುವುದಿಲ್ಲ.

<u>ನಾಯಕ :</u>

ಬೇಡರ ಗುಂಪಿನಲ್ಲಿ ಶೂರನಾದ ವ್ಯಕ್ತಿ ಪಾಳೆಪಟ್ಟುಗಳನ್ನು ಕಟ್ಟಿ ಪಾಳೆಗಾರನೆನಿಸಿಕೊಂಡ. ಆತನೆ ಮುಂದೆ ಮುಖಂಡನಾದ. ನೇತೃತ್ವ ವಹಿಸಿದ ಈತನಿಗೆ 'ನಾಯಕ' ನೆಂದು ಗೌರವ ಸೂಚಕ ಅಭಿದಾನವಿತ್ತರು.[26] ನಾಯಕ ಎಂಬ ಪದವು ಕ್ರಿ.ಶ. 9ನೇ ಶತಮಾನಕ್ಕಿಂತ ಮೊದಲು ಎಲ್ಲಿಯೂ ಉಪನಾಮ ಇಲ್ಲವೆ ವ್ಯಕ್ತಿನಾಮವಾಗಿ ದೊರಕುವುದಿಲ್ಲ. ಇದಕ್ಕೆ ಸೇನಾಪತಿ, ಪಡೆವಳ, ಮುಂದಾಳು, ಮುಖ್ಯಸ್ಥನೆಂದು ಮಾತ್ರ ಅರ್ಥಗಳಿವೆ. ಬೇಡರ ಹೆಸರುಗಳ ಕೊನೆಗೆ 'ನಾಯಕ' ಪದ ಬಳಕೆಯಾಗುವ ಪೂರ್ವದಲ್ಲಿ ಬೋವ, ಬೋಯ, ಬೋಯಿ ಎಂದಿತ್ತು. ತಳವಾರ ವೃತ್ತಿಯ ಜನರಿಗೂ 'ನಾಯಕ' ಬಂದಿದೆ. ಬೇಡರ ಗಣ, ರಾಜ್ಯಗಳಿಗೆ ಬೇಡರಪಟ್ಟ, ಬೇಡರ ನಾಯಕರು, ಬೇಡರಪಟ್ಟು ಎಂದು ಕರೆದಿದ್ದಾರೆ. ಸು. 570 ವರ್ಷಗಳಷ್ಟು ದೀರ್ಘಕಾಲ ಇಂಥ ಪ್ರದೇಶದಲ್ಲಿಯ ಪಾಳೆಗಾರರು 'ಶ್ರೀಮನ್ಮಹಾನಾಯಕಚಾರ್ಯ' ಬಿರುದು ಹೊತ್ತು ಬಾಳಿದ್ದಾರೆ.[27]

'ನಾಯಕಾ' ವಂದರೆ ತುಳುವಿನಲ್ಲಿ ಅಪರಾಧಿ ಕೆಲಸ ಮಾಡುವವ ಎಂದಿದೆ. ಇದರಂತೆ ಅಡವಿಯಲ್ಲಿ ಬಟ್ಟೆಯಿಲ್ಲದೆ ತಿರುಗುವ ಜೋಳಿವಾಲನಾಯಕರನ್ನು ಇದೇ ಸಾಲಿಗೆ ಸೇರಿಸಲಾಗಿದೆ. ಇವರೆಲ್ಲ ಮೇಲಿನ 'ನಾಯಕ' ಶ್ರೇಣಿಗೆ ಸಂಬಂಧಿಸಿದವರಲ್ಲ.

<u>ಇನ್ನಿತರರು:</u>

ಮಹಾರಾಷ್ಟ್ರದಲ್ಲಿ ರಾಮೋಶಿ, ರಾಣವಾಸಿಗಳೆಂದು ಕರೆಯಿಸಿಕೊಳ್ಳುವವರು ತಾವು ಶ್ರೀರಾಮನ ವಂಶದವರೆಂದು ಹೆಮ್ಮೆ ಹೇಳುತ್ತಾರೆ. ಇದೇ ಪಂಥದ ರಾಮಕೊಂಡಾಡಿಗಳು 'ರಾಮನ'

---

23. ವಾಲ್ಮೀಕಿ ಸಂದೇಶ. 15 ಜನೇವರಿ 1984 ಪು. 18.
24. ಇತಿಹಾಸ ಚಂದ್ರಿಕೆ. ಸಂಚಿ. 2. ಸಂಪುಟ 10 ಅಕ್ಟೋಬರ್ 1982 ಪು. 9
25. ಅದೇ ಪು. 11
26. ವಾಲ್ಮೀಕಿ ಸಂದೇಶ ಮಾರ್ಚ್ 1987 ಪು. 18
27. ಅದೇ ಜೂನ 15 1986, ಪು. 18.

ಜಪ-ತಪ ಮಾಡುತ್ತ ಆತನ ಮಹಿಮೆಯನ್ನು ಕೊಂಡಾಡುತ್ತಾರೆ.[28] ಇವೆರಡರ ಮೂಲ 'ಬೇಡ ಪರಿವಾರವೇ ಆಗಿದೆ. ಇಟ್ಟಗುರಿ ತಪ್ಪದಂತೆ ಹೊಡೆಯುವ ಗುರಿಕಾರ, ಪಾಳೆಪಟ್ಟುಗಳನ್ನು ಕಟ್ಟಿಕೊಂಡು ಆಳುವ ಪಾಳೆಗಾರರೆಲ್ಲ ಬೇಡರು. ನಂತರ 'ನಾಯಕ' ನೆನಿಸಿಕೊಂಡರು. ನಾಯುಡು, ನಾಯಿನ ನೆಂದು ಕರೆದದ್ದೂ ಇದಕ್ಕಾಗಿಯೆ.

ಕರ್ನಾಟಕದ ಬೇಡರಲ್ಲಿ ಮುಖ್ಯವಾಗಿ ಎರಡು ಬಣಗಳನ್ನು ಕಾಣುತ್ತೇವೆ. ಮ್ಯಾಸ ಬೇಡರು, ಊರು ಬೇಡರೆಂದು, ಆಳುತ್ತಿರುವ ಅರಸನಿಗೆ ವೈರಿಗಳ ಬರುವಿಕೆ ಬಗ್ಗೆ ಗೂಢಚಾರಿಕೆ ತಿಳಿಸುತ್ತ ಅಡವಿಯಲ್ಲಿ ಅಲೆಯುತ್ತಿದ್ದವರೆ ಮ್ಯಾಸರಾದರು. ಊರಲ್ಲಿದ್ದವರೆಲ್ಲ ಊರಬೇಡರಾದರು. ಮ್ಯಾಸ ಬೇಡರಲ್ಲಿ ಊರುಮ್ಯಾಸ, ಅಡವಿಮ್ಯಾಸ, ಕಳ್ಳಮ್ಯಾಸ, ಮುಂಜಿಮ್ಯಾಸಗಳೆಂದು ವಿಧಗಳಿವೆ.[29] ಮೇಯಿಸ ಇದರರ್ಥವೇ ಮ್ಯಾಸವೆಂದಾಯಿತು ಎನ್ನುವ ವಾದವನ್ನು[30] ಡಾ. ಕೃಷ್ಣಮೂರ್ತಿ ಹನೂರ ವ್ಯಕ್ತಪಡಿಸಿದ್ದಾರೆ. 'ಮೀಸಲು' ನೈವೇದ್ಯವಾಗಿದ್ದ ಇವರ ವ್ಯುತ್ಪತ್ತಿಯನ್ನು ಶ್ರೀಸಾಮಾನ್ಯರಲ್ಲಿ 'ಮ್ಯಾಸವಾಯಿತೆನ್ನುವ' ಅಭಿಪ್ರಾಯವೂ ಇದೆ.

" ಇವರನ್ನೇ: ಊರುನಾಯಕರು, ಮ್ಯಾಸನಾಯಕರೆಂದು ಸಹ ಕೆಲವೆಡೆ ಗುರುತಿಸಲಾಗಿದೆ. ಮಾರಮ್ಮನಾಯಕರು, ಮುತ್ತಾಲ ನಾಯಕರು, ಹಾಲು ಬೇಡರು, ಮೊಂಡ ಬೇಡರು, ಸಂಚಲು ಭಿಲ್ಲರು, ರಾಜಪರಿವಾರದವರು, ಕೊಂಡರಾಜುಲು ಎಂದೆಲ್ಲ' ಇವರನ್ನು ಕರೆದರೂ ಒಂದೇ ಮೂಲವೆಂದು ಒಪ್ಪಿಕೊಳ್ಳಲಾಗಿದೆ. ಇವರಲ್ಲಿ ಕ್ರಮೇಣ ಊರುಕಟ್ಟಿ, ವಿಸ್ತರಿಸಿ ಅವುಗಳ ಮೇಲೆ ಒಡೆತನ ಸಾಧಿಸಿದವರು ರಾಜ್ಯಪಾಲಕರಾದರು, 'ರಾಜ' ರೆನಿಸಿದರು. ಇಂಥ ರಾಜರಿಗೆ ಸಹಾಯಕರಾಗಿ ದೇವತಾಪೂಜೆ ಮಾಡಿಕೊಂಡು ದೇವರ ನೈವೇದ್ಯಕ್ಕೆ ಮೀಸಲು ಹಾಲು ತರುವ ಉದ್ದೇಶದಿಂದ ದೊಡ್ಡ ಹಟ್ಟಿಗಳನ್ನು ಕಟ್ಟಿಕೊಂಡಿದ್ದವರೆಲ್ಲ ಗೋಪಾಲಕರಾದರು. ಅವರೆ ಮುಂದೆ 'ಯಾದವ' ರೆನಿಸಿದರು. ಇವರನ್ನೇ ಮ್ಯಾಸನಾಯಕರು, ಮೀಸಲು ನಾಯಕರು ಕೆಲವೆಡೆ ಕಾಡುಗೊಲ್ಲರೆಂದು ಕರೆಯಲಾಯಿತು. ಗಡಿ ಪ್ರದೇಶದಲ್ಲಿ ಶತ್ರುಗಳನ್ನು ಗುರುತಿಸುವ ಗೂಢಚಾರರು ಗುಪ್ತನಾಯಕರಾದರು. ಅಡವಿ

---

28. ಅದೇ ಡಿಸೆಂಬರ್ 15 1983. ಪು. 7.
29. ಎಂ.ಜಿ. ಈಶ್ವರಪ್ಪ ಮ್ಯಾಸಬೇಡರು. 1988 ಪು.9
30. ಡಾ. ಕೃಷ್ಣಮೂರ್ತಿ ಹನೂರ ಮ್ಯಾಸಬೇಡರ ಸಂಸ್ಕೃತಿ. 1993 ಪು. 16

ಯಲ್ಲಿಯೇ ಗುಡಿಸಲು ಹಾಕಿಕೊಂಡು ವೇಷ ಮರೆಯಿಸಿಕೊಂಡು ತಿರುಗುತ್ತ ವೈರಿ ಸುಳಿವು ನೀಡುವ ಗೂಢಚಾರರಿಗೆ ವತ್ತಡೇ ಮಾರಮ್ಮ ನಾಯಕರು ಮತ್ತು ಮುತ್ತ್ಯಾಲಮ್ಮ ನಾಯಕರು ಮೊಂಡರೆಂದಲ್ಲ ಶೋಧಕರೆಂದು ಗುರುತಿಸಿದ್ದಾರೆ. ಇವರೆಲ್ಲ ಅಲೆಮಾರಿಗಳಾಗಿಯೇ ಉಳಿದರು. ಅದರಂತೆ ಮೂಲ ಬೇಡ ವಂಶೀಯರಾದ ಬಲ್ಲರು ಸಹ ಅಡವಿಯಲ್ಲಿಯೇ ಬೇಟೆಯಾಡಿ ಜೀವಿಸ ತೊಡಗಿದರು. ಇವರಂತೆ ಸಂಚರು ಅಥವಾ ರಾಮಕೊಂಡಾಡಿಗಳು ರಾಮಜಪದಲ್ಲಿ ಸಂಚರಿಸಿ ಜೀವನ ನಡೆಸಲಾರಂಭಿಸಿದರು.[31]

'ಬೇಡರಲ್ಲಿ 101 ಕುಲ (ಗೋತ್ರ) ಗಳಿರುವುದರಿಂದ[32] ವಿಸ್ತಾರತೆ ಉಂಟಾಯಿತು. ಹಲವು ಪ್ರಭೇದಗಳಿಗೆ ಕಾರಣವಾಯಿತು' ಎಂಬುದನ್ನು ಮರೆಯುವಂತಿಲ್ಲ.

<u>ಬೆಡಗು (ಗೋತ್ರ) :</u>

'ಬೆಡಗು' ಪದವು ದ್ರಾವಿಡ ಮೂಲವುಳ್ಳದ್ದು, ವಿದ್ವಾಂಸರನೇಕರು ಇದರ ನಿಷ್ಪತ್ತಿಯನ್ನು 'ವೇಡನ್-ಕು ವೇಡಂಕು ವಿಡಂಕು ವೆಡಂಗು ಬೆಡಂಗು ಬೆಡಗು' ಎಂದು ಮಾಡಿದ್ದಾರೆ[33] ಬೇಡರ ಜನಾಂಗದಲ್ಲಿ 'ಬೆಡಗು' ಗಳು ಮೂರು ನೂರು ಮೇಲ್ಪಟ್ಟು ಇವೆಯೆಂದು ಕೆಲವು ತಜ್ಞರ ತರ್ಕ. ಇವು ಮದುವೆಗಳಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಒಂದೇ 'ಬೆಡಗು' ನವರಾದರೆ ಅವರು ಸಹೋದರರೆಂಬುದು ಸಾಮಾನ್ಯ ತಿಳುವಳಿಕೆ. 'ಸ್ವಗೋತ್ರ' ಗಮನ ನಿಷಿದ್ಧವಾಗಿರುವುದರಿಂದ ಸಂಬಂಧಗಳಲ್ಲಿ ಬೇರ್ಪಡೆ ಅನಿವಾರ್ಯವಾಗಿದೆ.

ಸುರಪುರ ದೊರೆಗಳ ಗಡಿಗೋತ್ರ 'ಗೋಸಲ' ಗೋತ್ರಗಳನ್ನು ಸಲುಹಿದ್ದ 'ಗೋಸಲ' ವೆಂದರೆಂದು ಕೆಲವರು ಹೇಳುತ್ತಾರೆ. ಅದರಂತೆ ಸಂಸ್ಥಾನದಲ್ಲಿ ಇರುವ ಬೇಡರು ಸಹ ಅನೇಕ ಬೆಡಗುಗಳನ್ನು ಹೊಂದಿದವರಾಗಿದ್ದಾರೆ. ಇವರೆಲ್ಲ ಮೊದಲು ಬೇರೆ ಬೇರೆ ಸ್ಥಳಗಳಿಂದ ಬಂದವರೆಂದು, ನಂತರ ಬಲಗಸ್ತನ ಬೆಳಸಿದವರೆಂದು ಇದರಿಂದ ಗೊತ್ತಾಗುತ್ತದೆ. ಸಂಸ್ಥಾನದಲ್ಲಿರುವ ಬೇಡರ ಹಲವು

---

31. ಲಕ್ಷ್ಮಣ ತೆಲಗಾವಿ ಲೇ. ಇತಿಹಾಸಕಾರ ವೀರನಾಯಕ (ಹರತಿಸಿರಿ) ಪು. 1299.
32. H.V.Nanjundiah - The Ethnographical Survey of Mysore 1906.

33. ಎಂ.ಬಿ. ಚಿತ್ರಲಿಂಗಯ್ಯ, ಲೇ. ಇತಿಹಾಸ ಚಂದ್ರಿಕೆ ಅಕ್ಟೋಬರ್ 1982.

ಬೆಡಗುಗಳನ್ನು ಈ ಕೆಳಗಿನ ಸಮೀಕ್ಷೆಯಲ್ಲಿ ಸಂಗ್ರಹಿಸಲಾಗಿದೆ. ಕೆಲವು 'ಬೆಡಗು' ಸಂಸ್ಥಾನದ ವ್ಯಾಪ್ತಿ ಮೀರಿ ಬೇರೆ ಪ್ರದೇಶಕ್ಕೆ ಸಂಬಂಧಿಸಿದ್ದರೂ 'ಬೇಡಜನಾಂಗ'ದ ಸಮಗ್ರತೆ ದೃಷ್ಟಿಯಿಂದ ಅವೆಲ್ಲವುಗಳನ್ನು ಇಲ್ಲಿ ಸೇರಿಸಿಕೊಳ್ಳಲಾಗಿದೆ.

ಗುಜ್ಜಲರು, ಹೊನ್ನಬಂಟ್ಲವರ, ಮಿನಗಲವರ, ಬಂಡ್ಲವರ, ಮೊರಾಡ್ಲವರ, ಮುಮ್ಮಡ್ಲವರ, ಕೈಶ್ಲವರ, ಜಟ್ಲವರ, ಜಗ್ಗಲವರ, ಮುರಾರಿಗೊಂಡ್ಲವರ, ಯರಮಲ್ಲವರ, ನೆಲ್ಕನವರ್, ಕಸ್ತೂರಿಯ ವರ್, ಗೊಸ್ಲವರ್, ಕ್ಯಾಶಕ್ತಿನವರ, ಮಲ್ಲನವರ, ಪೋತಗೊಳಿಯವರ ಘೋಶ್ತಲವರ, ಬವ್ವೇಲರ, ಬಡಕಲವರ, ಯಲ್ಲಮ್ಮನವರ[34] ಎಮ್ಮೆಯವರ, ಮಂದೆಯವರ, ಎತ್ತಿನವರ, ಹುರುಳಿಯವರ, ಜೇಮರು, ಪೂಲವರ, ಕೇಸುವರ, ಬುಂಡ್ಲವರ, ಗೋರ್ಲೇರು, ಮಲ್ಲವರ, ಕೆಂಗಾರ, ಅನ್ಯಾಕನವ, ಭಾಸ್ಲವರ, ಜಂಪ್ಲರ, ಕರಣಗಲವು, ತುಡಿನಾರ, ನಲ್ಲಬೋಡ್ಲು, ಜಿಡ್ಡಿಬೋಡ್ಲು, ನಾಕೇಲವು, ಇಮ್ಮಳ್ಳು, ಮಿನಗ್ಲವರ, ನೇಲಂಟೇಳ್ಳು, ನಲ್ಲವಾಳ್ಳು, ಬೊಳಗೂಗಳ್ಳು, ವೆದಮುಕ್ಕಲವು, ಮುದುಬ್ಬಿಲರು, ತಿಕ್ಕಲವರ, ಪೆದಮರಿಗೆವ್ರು, ಬೆಳ್ಳೇರ, ಹೊನ್ನಮಿನಗ್ಲವರ ಹೂವ್ವಮುಡ್ಲವ್ರು,[35] ಮಲ್ಲಗಿಯವ್ರು, ಹೂವಿನವ್ರ ಮೀನಿನವ್ರು, ಜೇವರ, ಮಂದೆಯವ್ರು,[36] ಪ್ಯಾಪಲೇರ, ಜಿಬ್ಬಗಲೆ, ಬಲ್ಲರ, ಪುರ್ಲೇರ, ಕಿರಾತಕರು, ಮಂಡ್ಲರು, ಗುರಿಕಾರರು, ನಿಷಾದರು,[37] ಮಂದಲೋರ, ಮಲ್ಲನಾಯಕನೋರ, ಮಳಿಲೋರ[38].

'ವಾಲ್ಮೀಕಿ ಪುರಾಣ'ದಲ್ಲಿ ಉಲ್ಲೇಖಿಸಲ್ಪಟ್ಟ ಹಲವು ಗೋತ್ರ ಉಪಗೋತ್ರಗಳೆಂದರೆ ಮುಂಡದಾಸ್ರು, ದೊಡ್ಡದಾಸ್ರು, ಜೋಳಿದಾಸ್ರು ಹಾಗೆಯೇ ನಾಮ, ಚೆನ್ನಯ, ರಂಗ, ಜಗನ್ನಾಥ, ಚಕ್ರ, ಪದ್ಮ, ಹನುಮ, ವಿಷ್ಣುದಾಸರನ್ನು ಕಾಣುತ್ತೇವೆ.[39]

---

34. ವಾಲ್ಮೀಕಿ ಸಂದೇಶ ಜೂನ 1989 ಪು. 4
35. ಅದೇ ಫೆಬ್ರವರಿ 1984. ಪು. 10.
36. ವಾಲ್ಮೀಕಿ ಸ್ಮರಣ ಸಂಚಿಕೆ ದಾವಣಗೇರೆ 1973.
37. ಆರ್.ಕೆ. ಸುಬೇದಾರ, ಲೇಖನ ನಾಯಕ ಜನಾಂಗದಲ್ಲಿ ಸಂಪ್ರದಾಯಗಳು (ವಾಲ್ಮೀಕಿ ಜ್ಯೋತಿ) ಪು. 36.
38. ಮೀರಸಾಬಿಹಳ್ಳಿ ಶಿವಣ್ಣ ಲೇಖನ, ನಾಯಕ ಜನಾಂಗ (ವಾಲ್ಮೀಕಿ ಜ್ಯೋತಿ) ಪು. 53.
39. ದೇವೇಂದ್ರ ಮಾಧವನವರ, ಕನಕದಾಸರು ಬೇಡ ಜನಾಂಗದವರು ಪು. 25

ಮ್ಯಾಸಬೇಡರಲ್ಲಿ ಹಲವಾರು ಗೋತ್ರಗಳಿದ್ದು ಅವುಗಳನ್ನು ಈ ಕೆಳಗಿನಂತೆ ಡಾ. ಹನೂರ ಸಂಗ್ರಹಿಸಿದ್ದಾರೆ.[40] ಸುರಪುರ ಸಂಸ್ಥಾನದಲ್ಲಿ ಮ್ಯಾಸಬೇಡರೆಂದು ಕರೆಯುವ ಪದ್ಧತಿ ಇಲ್ಲ. ಆದರೂ ಇಲ್ಲಿರುವವರೆಲ್ಲ ಊರ ಬೇಡರೇನಲ್ಲ. ಹೀಗಾಗಿ ಮುಂದಿನ ಅಭ್ಯಾಸದ ಅನುಕೂಲಕ್ಕಾಗಿ ಸೇರಿಸಿಕೊಳ್ಳುವುದಾದರೆ, ಮ್ಯಾಸಬ್ಯಾಡರಲ್ಲಿ ಮುಖ್ಯರಾದ ಮಲ್ಲಿ ನಾಯಕರ ಗೋತ್ರಗಳನ್ನು ನೋಡುವ.

ವಡೇರೋರ, ಕಾಟಮಲ್ಲಿ ನಾಯಕನೋರ, ಪೆದ್ದಾಳನಾಯಕನೋರ, ಬಂಗಾರನೋರ, ಓಬನಾಯಕನೋರ, ಚಿನ್ನಕಾಟನೋರ, ಪೇಯಿರೋರ, ಈಶ್ವರರೋರ, ಮೀಸಲೋರ, ರಾಯಬಲ್ಲೋರ, ಎನುಮಲೋರ, ಪಲ್ಲೆವರ.

<u>ಯರಮಂಚಿನೋರ :</u> ಯರಮಂಚಿ ನಾಯಕನವ್ರು, ಯರಗೋತ್ನವ್ರು, ಯರದಿಬ್ಯಾಂಯಕ ಯರಗಾಟನ್ವ್ರು, ವಡೇಲವರ, ಸುರೇಪಾಕಲವ್ರು, ನಲಗೇತ್ಲವ್ರು, ಕದಿನವ್ರು, ಅಡ್ಡಪಲ್ಲೋರ, ಎದಲುವ್ರು, ಪೂವಲವ್ರು, ಪಟ್ಟಲವ್ರು.

<u>ಮುಂದ್ಲವ್ರು:</u> ಕಾವುಕೇತುವ್ರು, ಬುಲ್ಲಡು, ಪಾಕೇಲವ್ರು, ಮೂಸೇಲೋರ, ದ್ಯಾವರೋರ, ಗಾದಮಲೋರ, ಬದ್ಯಲೋರ.

<u>ಮುಳಿಲೋರ :</u> ಕಾಲ್ಲುಮುಳೀಲೋರ, ಮೂಕನಡುಕು, ಮುಳೀಲೋರ, ಸೋಲುಮುಳೀಲ, ಮದ್ಯಾಪುರಮುಳೀಲು, ಕವಲುಮುಳೀಲು, ಗುತಿಕೋಟೆ ಮುಳೀಲು, ಸಿನಕುಮುತ್ತೀನ ಮುಳೀಲು.

<u>ಬುಟಕಲೋರ :</u> ಮಾರವ್ವ ಬುಟಕಲು, ಬೊಮ್ಮದೇವರ ಬುಟಕಲು, ಮಾದೇಲುಗನ ಬುಟಕಲು, ವಲ್ಲೀದೇವರ ಬುಟುಕಲು, ನಾಗೆವರಬುಟಕಲು, ಸಿದಪಲ್ಲಿಬುಟಕಲು, ಕುರಿಹಟ್ಟಿ ಬುಟಕಲು.

<u>ಪಾಮುಡಲೋರ :</u> ನಲ್ಲಪಾಮುಡೊಲ್ಲೇರ, ಪೂಜಾರಿಪಾಮುಡೊಲ್ಲೇರ, ಯರಪಾಮುಡೊಲ್ಲೇರ,

<u>ಪಚ್ಚವರ :</u> ತಾಂಯ್ರೋಣಿ ಪಚ್ಚವರ, ಕೋನಸಾಗರ ಪಚ್ಚವರ.

<u>ಮುಂದ್ಲವರ :</u> ಗೋಡಗುದಾಸರು, ಮುಂಡಾದಾಸರು, ಬೋಡದಾಸರು, ಗರ್ರಿದಾಸರು, ಡೊಂ ದಾಸರು, ಮುದ್ದಿಲೋರ, ಕರಿನೋರ, ಬೋಡಿಪಾಲು, ಬದ್ಯಲೋರ, ಜಾಗನೋರ, ಜನ್ನೆನೋರ,

---

40. ಡಾ. ಕೃಷ್ಣಮೂರ್ತಿ ಹನೂರ ಮ್ಯಾಸಬೇಡರ ಸಂಸ್ಕೃತಿ. ಪು.86 ರಿಂದ 89.

ಅಜ್ಜಡಲೋರ, ಗಜಗಡೋಳ್ಳೋರ, ಬೋನೆರೋರ, ಗಟ್ಟಿಮುತ್ತಿಲೋರ, ಮಾನೇಲೋರ, ಮುಂದಿಗೋಡ್ಲವರ, ಬಜ್ಜಡಲು, ಅಲಕೇರು.

ಇದುವರೆಗೆ ನೋಡಲಾದ ಬೇಡರಲ್ಲಿಯ ಹಲವಾರು ಗೋತ್ರಗಳು ಇಂದಿಗೂ ಮುಂದುವರೆದಿವೆ. ಆದರೆ ಲಕ್ಷಿಸಬೇಕಾದ ಒಂದಂಶವೆಂದರೆ 'ಮೂಲ ಗೋತ್ರಗಳಿಂದ ಸಿಡಿದು ಬಂದು, ಪ್ರತ್ಯೇಕ ಅಸ್ತಿತ್ವ ಪಡೆದುಕೊಂಡ' ಬೆಡಗು' ಗಳು ಇವೆ ಎನ್ನುವುದು ಡಾ. ಹನೂರರ ಸಮೀಕ್ಷೆಯಲ್ಲಿಯ ಪುನರಾವರ್ತನೆಗೊಂಡ ಕೆಲವು ಬೆಡಗು ಇದನ್ನೇ ಪ್ರತಿನಿಧಿಸುತ್ತವೆ.

ಸುರಪುರದ ದೊರೆಗಳು ಮೂಲತಃ ತೆಲಂಗಾಣದಿಂದ ಬಂದು ವಿಜಯನಗರ ಸಾಮ್ರಾಜ್ಯದಲ್ಲಿ ಸೇರ್ಪಡೆಯಾಗುವಾಗ 'ಗೋನಲ' ಗೋತ್ರದ ಸಾಮಾನ್ಯ ಬೇಡರಾಗಿದ್ದರು. ತರುವಾಯ ಸೈನ್ಯ ಇನ್ನಿತರ ವ್ಯವಸ್ಥೆಯಲ್ಲಿ ಅಧಿಕಾರ ದೊರೆತಾಗ ತಳವಾರ, ಪಾಳೆಗಾರ ವೃತ್ತಿ ಹುದ್ದೆಗಳನ್ನು ಹಿಡಿದರು. ಮುಂದೆ ತಮ್ಮ ಬಲಿಷ್ಠ ಬೇಡ ಪಡೆಯೊಂದಿಗೆ ಪಾಳೆಪಟ್ಟುಗಳನ್ನು ಗಟ್ಟಿಗೊಳಿಸಿ 'ನಾಯಕ' ರಾದರು. ಬೇಡ ರಾಜ್ಯವಾದ ಸುರಪುರ ಸಂಸ್ಥಾನದಲ್ಲಿ 'ರಾಜ' ಎಂಬ ಪದ ಶ್ರೇಷ್ಠವಾದುದು. ಆತನೆ ನಾಡಿನ ಒಡೆಯ, ಅಧಿಪತಿ. ಈತನ ಅಧಿಪತ್ಯದಲ್ಲಿದ್ದವರೆಲ್ಲ ಕ್ರಮವಾಗಿ ದೊರೆಗಳು, ಬೇಡರು, ತಳವಾರ, ವಾಲೀಕಾರರೆಂದು ಶ್ರೇಣೀಕೃತಗೊಳಿಸಲಾಯಿತು. ಜಹಗೀರದಾರ, ಸುಬೇದಾರ ಸರಸೌಬತ್ತು, ಹವಲ್ದಾರ, ಜಮೀನುದಾರ, ಸರ್ದಾರ, ಗುರಿಕಾರರೇನಾದರು ಬೇಡ ಜಾತಿಗೆ ಸೇರಿದ್ದರೆ ದೊರೆಯ ತರುವಾಯದ ಸ್ಥಾನ ಪಡೆಯುತ್ತಿದ್ದರು. ಇದನ್ನೇ ಸಂಸ್ಥಾನದಲ್ಲಿ ಜಾತಿವ್ಯವಸ್ಥೆಯಾಗಿ ಅನುಸರಿಸಲಾಯಿತು. ರಾಜನಾದವನು ಕೆಳವರ್ಗದ ಇಲ್ಲವೆ ಬೇರೆ ಜಾತಿಯ ಹೆಣ್ಣನ್ನು ಮದುವೆಯಾಗಬಹುತ್ತಿದ್ದು. ಉದಾಹರಣೆಗೆ, ಗಡ್ಡಿಪಿಡ್ಡನಾಯಕನು ಮರಾಠಿ ಜಾತಿಯ ಲಕ್ಷ್ಮಮ್ಮನನ್ನು, ಮುಮ್ಮಡಿ ಪಿಡ್ಡನಾಯಕನು ರೆಡ್ಡಿ ಜಾತಿಯ ಅವ್ವಾಭೀಮವ್ವನನ್ನು ಮದುವೆಯಾಗಿದ್ದರು. ಆದರೆ ಅನ್ಯ ಜಾತಿಯ ಹೆಣ್ಣು ಪಟ್ಟದ ರಾಣಿಯಾಗಿರುವಸಂಗತಿ ಮಾತ್ರ ಯಾವ ಸಂಸ್ಥಾನದಲ್ಲಿ ಕಂಡುಬರುವುದಿಲ್ಲ. ಇಂಥವರಿಂದ ಹುಟ್ಟಿದ ಮಗನನ್ನು ಪಟ್ಟಕ್ಕೆ ಏರಿಸಲು ಪ್ರಯತ್ನಿಸಿದ ಜಕ್ಕಪ್ಪನಾಯಕನ ಘಟನೆಯೊಂದಿದೆ. ತಾಳಿಬಂಧನದ ಪತ್ನಿಯರೆಂದು ಕೆಲವರನ್ನು 'ರಾಜರು' ಇಟ್ಟುಕೊಳ್ಳುತ್ತಿದ್ದರು. ಇವರೆಂದಿಗೂ ಪಟ್ಟದ ರಾಣಿಯಾಗುವಂತಿರಲಿಲ್ಲ. ತಮ್ಮ ಸಂಸ್ಥಾನಕ್ಕೆ

ಸರಿಗಟ್ಟುವ ಸಂಸ್ಥಾನದ ಸಂಬಂಧಗಳನ್ನು ಬೆಳೆಸಿದ್ದಾರೆ. ತಮ್ಮ ಕೈಕೆಳಗಿನ ಅಧಿಕಾರಿಯ ಮಗಳನ್ನು ಮದುವೆಯಾದ ದೊರೆಗಳು ತಮ್ಮ ಮಗಳನ್ನು ಇಂಥವರಿಗಾಗಲಿ, ಅನ್ಯ ಜಾತಿಯ ವರನಿಗಾಗಲಿ ಕೊಟ್ಟಿಲ್ಲ. ಗೋಷಾ ಪದ್ಧತಿ ಕಟ್ಟು ನಿಟ್ಟು ಇತ್ತು.

2. ಶ್ರೀವೈಷ್ಣವ ಧರ್ಮ :

ಸುರಪುರ ಸಂಸ್ಥಾನದ ದೊರೆಗಳು ಮೂಲತಃ ಬೇಡರ ಜಾತಿಗೆ ಸೇರಿದವರಾದರೂ, ಆಚರಣ ಪದ್ಧತಿಗಳ ಮೂಲಕ ಶ್ರೀವೈಷ್ಣವ ಮತಾನುಯಾಯಿಗಳಾದರು. ಹುಟ್ಟಿನಿಂದ ಸಾಯುವರೆಗೂ ಇದೇ ಧರ್ಮದ ರೀತಿ ನೀತಿಗಳನ್ನೇ ಅನುಸರಿಸಿದ ಸಂಸ್ಥಾನವು ರಾಮಾನುಜ ಪಂಥವನ್ನು ಮತ್ತು ಅವರು ಬೋಧಿಸಿದ ವಿಶಿಷ್ಟ ಅದ್ವೈತ ತತ್ವ ಸ್ವೀಕರಿಸಿತ್ತು.

ಹೊಯ್ಸಳ ವಿಷ್ಣುವರ್ಧನನ ಸ್ವಾಗತದೊಂದಿಗೆ ಕರ್ನಾಟಕದಲ್ಲಿ ಕಾಲಿರಿಸಿದ ಶ್ರೀವೈಷ್ಣವ ಮತವು ವಿಜಯನಗರ ಅರಸರ ಆಳ್ವಿಕೆಯಲ್ಲಿ ಅಪಾರ ಜನಮೆಚ್ಚುಗೆಯನ್ನು ಸಂಪಾದಿಸಿತ್ತು.[41] ಇವರ ಕುಲಪುರೋಹಿತರೇ ಶ್ರೀವೈಷ್ಣವ ಸಂಪ್ರದಾಯದ ಆಚಾರ್ಯ ಪುರುಷರು. ವಿಜಯನಗರದ ಚಿಕ್ಕಪುಟ್ಟ-ಪಾಳೆಪಟ್ಟುಗಳು ಸಹ ಇದೇ ಧರ್ಮವನ್ನು ಅನುಸರಿಸಿದವು. ಅವುಗಳಲ್ಲಿ ಸುರಪುರವು ಒಂದು ಇದಕ್ಕೊಂದು ಬಲವಾದ ಕಾರಣವಿದೆ. 'ಬೇಡರ' ಕುಲ ಬಹು ಕಿರಿದು ಸಮಾಜದಲ್ಲಿ ತಲೆ ಎತ್ತಿ ಬಾಳಲು ಮೇಲ್ವರ್ಗದ ಮಾರ್ಗ ಅನಿವಾರ್ಯವಾಯಿತು. ಆಗ ಶ್ರೀವೈಷ್ಣವ ಮತದ ತೆಕ್ಕೆಗೆ ಹೊಕ್ಕರು. ಕ್ರಿ.ಶ. 17-18ನೇ ಶತಮಾನದಲ್ಲಿ ಹರಪನಹಳ್ಳಿ, ಮತ್ತೋಡು, ಗುಡಿಕೋಟೆ, ಬಾಣರಾವಿ, ರಾಯದುರ್ಗ ಮುಂತಾದ ಬೇಡ ಜಾತಿಯ ಪಾಳೆಗಾರರು ವೀರಶೈವ ಧರ್ಮಕ್ಕೆ ಪರಿವರ್ತಿತರಾದರು[42] ಈ ಕಾಲಕ್ಕೆ ವೀರಶೈವವೊಂದೆ ತನ್ನ ತೆಕ್ಕೆಯಲ್ಲಿ ಕೆಳಜಾತಿಯವರನ್ನು ಕರೆದುಕೊಳ್ಳುತ್ತಿತ್ತು.[43] ವಿಶೇಷವೆಂದರೆ 'ಬೇಡ' ಜಾತಿಯನ್ನು ಬಿಟ್ಟು ಹೋದ ಇವರಿಗೆ 'ಬೆಡಗು' ಮಾತ್ರ ಇವರ ಬೆನ್ನು ಬಿಡಲಿಲ್ಲ. ಇಂದು ಮೇಲ್ವರ್ಗದ ಸಾದರ ಲಿಂಗಾಯತರೆಂಬ ಬೆಡಗು ಉಳ್ಳವರು, ನರನಾಯಕ, ನರಸನಾಯಕ ಎಂಬಿತ್ಯಾದಿ ಅಡ್ಡಹೆಸರುಗಳಿಂದ ವ್ಯವಹರಿಸುವವರು ಹಿಂದೊಮ್ಮೆ 'ಬೇಡರ' ಜಾತಿಗೆ

---

41. ಪ್ರೊ. ಎಸ್.ಕೆ. ರಾಮಚಂದ್ರರಾವ ತಿರುಪತಿ ತಿಮ್ಮಪ್ಪ 1980 ಪು. 62
42. ಎಂ.ವಿ. ಚಿತ್ರಲಿಂಗಯ್ಯ ಇತಿಹಾಸ ಚಂದ್ರಿಕಾ ಸಂ. 2 ಸಂಪುಟ 11 ಅಕ್ಟೋಬರ 1982
43. ಡಾ.ಎಂ.ಎಂ. ಕಲ್ಬುರ್ಗಿ ಮತ್ತೋಡು ಪಾಳೆಗಾರರು' ವಿಚಾರಣ ಸಂಕಿರಣ ಧಾರವಾಡದಲ್ಲಿ.

ನೇರಿದವರು ಎಂಬ ಮಾತು ಒಪ್ಪಬೇಕಾಗುತ್ತದೆ. ಇದೆಲ್ಲ ಇಲ್ಲಿ ಚರ್ಚಿಸುವ ಅವಶ್ಯಕತೆ ಇಷ್ಟೆ. ಶ್ರೀವೈಷ್ಣವ ಧರ್ಮ ಸ್ವೀಕರಿಸಿದ ಸುರಪುರದವರು ಕೇವಲ ಆಚರಣೆಗಳಿಂದ ಮೇಲ್ವರ್ಗವೆನಿಸಿಕೊಂಡರೆ ಹೊರತು ರಕ್ತ ಸಂಬಂಧ ಬೆಳಸಲಿಲ್ಲ. ಬೆಳೆಸಲು ಶ್ರೀವೈಷ್ಣವದಕಟ್ಟಳೆ ಒಪ್ಪಿಗೆ ಕೊಡಲಿಲ್ಲ. ಹೀಗಾಗಿ 'ಬೇಡ' ರಾಗಿಯೇ ಉಳಿದರು. ಇನ್ನು ವೀರಶೈವ ಧರ್ಮ ಪ್ರವೇಶಿಸಿದವರು ಅದರೊಂದಿಗೆ ನೇರವಾಗಿ ಕೂಡಿಕೊಳ್ಳುವಿಕೆಯಿಂದ ರಕ್ತ ಸಂಬಂಧ ಬೆಳೆಸಿದರು. ಸಂಪೂರ್ಣ ವಿಲೀನವಾಗಿ ಹೋದರು. ಆದರೆ ಮೂಲದ 'ಬೆಡಗು' ಮಾತ್ರ ಅವರೊಂದಿಗೆ ಇಂದಿಗೂ ಇದೆ. 'ಬೇಡ' ಜಾತಿಯ ಪಾಳೆಗಾರರು ಮೇಲ್ವರ್ಗದ ಧರ್ಮವನ್ನು ನೇರಿದಾಗ ಆದ ಪರಿಣಾಮಗಳಿವು.

ಸುರಪುರ ಸಂಸ್ಥಾನದ ದೊರೆಗಳಿಗೆ ಶ್ರೀವೈಷ್ಣವ ಮತವು ಸಂಪೂರ್ಣ ತೃಪ್ತಿ ನೀಡಿತೇ? ತಮ್ಮ ಕಿರಿಯ ಕುಲವನ್ನು ಕಳೆದುಕೊಳ್ಳಲು ಶಕ್ಯವಾಯಿತೇ? ಎಂಬೆಲ್ಲ ಪ್ರಶ್ನೆಗಳಿಗೆ ಸಂಸ್ಥಾನದಿಂದ ಉತ್ತರವೆ ಇಲ್ಲ. ಇದು ಕೇವಲ ಪುರೋಹಿತ ಶಾಹಿಗಳು ತಮ್ಮ ಉಪಜೀವನಕ್ಕಾಗಿ ಮಾಡಿಕೊಂಡ ಒಂದು ಆಶ್ರಯ ಮಾರ್ಗವಾಗಿತ್ತು. ಅಷ್ಟೆ ಸುರಪುರದವರಿಗೆ 'ಬೇಡ' ಕುಲ ಬಿಡಲಾಗಲಿಲ್ಲ. ಇವರನ್ನು ಶ್ರೀವೈಷ್ಣವ ಧರ್ಮ ಸಂಪೂರ್ಣ ಸೆಳೆದುಕೊಳ್ಳಲೂ ಇಲ್ಲ. ಆದ್ದರಿಂದ ಸಂಸ್ಥಾನಕ್ಕೆ ಧರ್ಮದಿಂದ ತೃಪ್ತಿ ಸಿಕ್ಕಿಲ್ಲವೆಂಬುದೇ ನಮ್ಮ ವಾದ.

ದೊರೆಗಳು ಸ್ವೀಕರಿಸಿದ್ದೇ ಸಂಸ್ಥಾನದ ಜನತೆಯು ಅನುಸರಿಸಬೇಕಾಗಿತ್ತು. ಇದು ಅನ್ಯಜಾತಿಯವರಿಗೆ ಅನ್ವಯವಿಲ್ಲ. ಬೇಡರೆಲ್ಲ ತಮ್ಮ ಹಳ್ಳಿಯಲ್ಲಿ ಸಂಸ್ಥಾನದ ಮತ ಆಚರಣೆಗಳನ್ನೇ ಜಾರಿಗೆ ತಂದರು. ರಾಮಾನುಜರು ಬೋಧಿಸಿದ ತತ್ವಗಳನ್ನು ತಿಳಿಯತೊಡಗಿದರು. ತಿರುಪತಿ ತಿಮ್ಮಪ್ಪ ಮತ್ತು ವೇಣುಗೋಪಾಲಸ್ವಾಮಿ ಆರಾಧ್ಯ ಕುಲದೈವವಾದರು.

<u>ಶ್ರೀವೈಷ್ಣವ ಸಿದ್ಧಾಂತ :</u>

'ಶ್ರೀ' ಮತ್ತು 'ವಿಷ್ಣು'ವಿನ ಸಂಗಮವಾದ ಶ್ರೀವೈಷ್ಣವ ಮತವು ನಾಲ್ಕು ವೇದಗಳ ಸಂಕೇತ. ಮಹಾವಿಷ್ಣುವೇ ಈ ಮತದ ಮುಖ್ಯ ಆರಾಧ್ಯ ದೈವ. ಸರ್ವಕಾಲಕ್ಕೂ ವಿಷ್ಣು ತನ್ನ ಕಾಂತೆಯಾದ ಲಕ್ಷ್ಮಿಯೊಡನೆ ಇರುತ್ತಾನೆಂಬುದು[44] ಪ್ರಸಾರಕರ ಭಾವನೆ. ಅದ್ವೈತ ಸಿದ್ಧಾಂತ

---

44. ಆರ್.ಆರ್. ದಿವಾಕರ ಸಂ. ಕರ್ನಾಟಕ ಪರಂಪರೆ ಸಂಪುಟ 1. 1970 ಪು. 497.

ಬೋಧಿಸಿದ ಶಂಕರಾಚಾರ್ಯರು ‘ಬ್ರಹ್ಮನೇ ಸತ್ಯ, ಜ್ಞಾನವೇ ಮೋಕ್ಷಕ್ಕೆ ಮಾರ್ಗ’ ವೆಂದರು. ಮಧ್ವಾಚಾರ್ಯರು ದ್ವೈತ ಸಿದ್ಧಾಂತದಿಂದ ಜೀವಾತ್ಮ, ಪರಮಾತ್ಮ ಬೇರೆ ಬೇರೆ ಭಕ್ತಿಯೇ ಮುಕ್ತಿಗೆ ದಾರಿಯೆಂದು ದೀಕ್ಷೆ ಕೊಟ್ಟರು. ಆದರೆ ರಾಮಾನುಜಾಚಾರ್ಯರು ವಿಶಿಷ್ಟ ಅದ್ವೈತ ಸಿದ್ಧಾಂತದಲ್ಲಿ ಶಾಶ್ವತ ಮತ್ತು ಉದಾತ್ತವಾದ ವಿಷ್ಣುವು ಸರ್ವವ್ಯಾಪಿ. ಭಕ್ತಿಯ ಮೂಲಕ ಯೋಗದ ಶಕ್ತಿ ಸಾಧಿಸಿ ಮುಕ್ತಿಯೆಡೆ ಮುನ್ನಡೆಯಲು ಮಾರ್ಗ ತೋರಿಸಿದರು. ಅಂದು ಪ್ರತಿಪಾದಿಸಿದ ಈ ದರ್ಶನವೇ ವಿಶಿಷ್ಟ ಅದ್ವೈತವಾಗಿ ಸಾಧಿಸಿದ ಸಿದ್ಧಾಂತವೇ ಶ್ರೀವೈಷ್ಣವವಾಗಿ ಪ್ರಚಾರಗೊಂಡಿತು. ಇದನ್ನೇ ಸುರಪುರ ಸಂಸ್ಥಾನ ಅಪ್ಪಿಕೊಂಡಿತು.

ತಮಿಳುನಾಡಿನ ಭಕ್ತಿಪಂಥದ ಮುಂದುವರೆದ ಭಾಗವೇ ಶ್ರೀವೈಷ್ಣವ. ಆಚಾರ್ಯರ ನಿರ್ದಿಷ್ಟ ತತ್ವ, ಆಚರಣೆ, ಪ್ರಸ್ಥಾನತ್ರಯ, ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರಗಳೆಲ್ಲ ಶ್ರೀವೈಷ್ಣವಕ್ಕೆ ಆಧಾರಗಳಾದವು. ಅನ್ಯಮತದವರನ್ನು ಕರೆದುಕೊಳ್ಳಲು ಶ್ರೀವೈಷ್ಣವ ‘ಪಂಚ ಸಂಸ್ಕಾರ’ ಎಂಬ ಮಾದೀಕ್ಷೆಯನ್ನು ಕುಲಾಚಾರಿಗಳಿಂದ ಕೊಡಿಸಲಾಗುತ್ತಿತ್ತು. ಅವೇ ತಾಪ, ಪುಂಡ್ರ, ನಾಮ, ಮಂತ್ರ, ಯಜ್ಞಗಳು. ‘ತಾಪ’ ವೆಂದರೆ ವಿಷ್ಣುವಿನ ಶಂಖ:ಚಕ್ರಗಳನ್ನು ಎಡಬಲ ಭುಜದ ಮೇಲೆ ಮುದ್ರಿಸಿ ಕೊಳ್ಳುವದು. ‘ಪುಂಡ್ರ’ ವೆಂದರೆ ಹಣೆ ಮುಂತಾದ 12 ಭಾಗಗಳಲ್ಲಿ ಶ್ರೀವೈಷ್ಣವ ಚಿಹ್ನೆಗಳನ್ನು ಧರಿಸುವುದು. ನಾಮವೆಂದರೆ ವಿಷ್ಣುವಿನ ಒಂದು ಹೆಸರನ್ನು ಆಚಾರ್ಯರಿಂದ ಉಪದೇಶಿಸುವುದು. ‘ಮಂತ್ರ’ ವೆಂದರೆ ಓಂ ನಮೋ ನಾರಾಯಣವೆನ್ನುವದು ಹೀಗೆ ನಿರ್ಮಿಸಿದ ತತ್ವ ಸುರಪುರದಲ್ಲಿ ಜಾರಿಯಲ್ಲಿತ್ತು. ಮೂಲತಃವಾಗಿ ಸುರಪುರದ ದೊರೆಗಳು ಇದನ್ನು ಪಾಲಿಸಿಯೇ ‘ಮತ’ ಸ್ವೀಕರಿಸಿದರು. ರಾಜ್ಯಾರೋಹಣ, ಉತ್ಸವ, ಕಲ್ಯಾಣ ಕಾರ್ಯದಲ್ಲಿ ‘ಪಂಚ’ ಸಂಸ್ಕಾರಗಳನ್ನು ಮಾಡುತ್ತಿದ್ದರು. ಆಶ್ಚರ್ಯವೆಂದರೆ ಅನ್ಯಜಾತಿಯಿಂದ ಆಗಮಿಸಿದ ವ್ಯಕ್ತಿಗಳಿಗೆ ಒಂದೇ ಸಲ ಸಂಸ್ಕಾರ ನೀಡಬಹುದಿತ್ತು. ಆದರೆ ಸುರಪುರದಲ್ಲಿ ಪದೇ ಪದೇ ಆಚರಿಸುವುದನ್ನು ನೋಡಿದರೆ ಶುದ್ಧಿಗಾಗಿ ಸದಾ ಪರಿಶುದ್ಧ ನಾಗುತ್ತಿತ್ತೆ ಎಂದು ‘ನಗು’ ಬರುತ್ತದೆ.

ವಿಶಿಷ್ಟ ಅದ್ವೈತ ಸಂಪ್ರದಾಯವು ಹಿಂದಿನ ಕಾಲದಲ್ಲಿ ‘ನೇಶ್ವರಮೀಮಾಂಸ’ ಎಂಬ ಹೆಸರಿನಿಂದ ಪ್ರಚಾರದಲ್ಲಿತ್ತೆಂದು ದರ್ಶನಗ್ರಂಥಗಳಲ್ಲಿ ಅನುವಾದವಿದೆ. ಮೊದಲು ದಕ್ಷಿಣಭಾರತದಲ್ಲಿ ಪ್ರಸಿದ್ಧವಾದ ಈ ಸಂಪ್ರದಾಯವು ಆಳ್ವಾರಗಳಿಂದ ಪ್ರಸಾರ ಮಾಡಲ್ಪಟ್ಟಿತು. ಈ ಆಳ್ವಾರರು

ಮುಖ್ಯವಾಗಿ ಹನ್ನೆರಡು ಜನ.[45] ಇವರುಗಳ ತಮಿಳುಗ್ರಂಥಗಳು ನಾಲ್ಕು ಸಾವಿರ ಪದ್ಯಗಳನ್ನೊಳಗೊಂಡಿವೆ.[46] ಇವುಗಳನ್ನೇ 'ತಿರುವಾಯ್ ಮೊಳಿ, ನಾಲಾಯಿರಂ' ಎಂದು ಹೇಳುತ್ತೇವೆ. ಶ್ರದ್ಧಾಭಕ್ತಿ, ಅನುಭವವು ಇವುಗಳ ಜೀವ. ಹೆಚ್ಚಾಗಿ ಶ್ರೀಕೃಷ್ಣ ಮತ್ತು ಶ್ರೀರಾಮರನ್ನು ಕೊಂಡಾಡಿರುತ್ತಾರೆ. ಇವರ ಮುಂದುವರಿದ ಭಾಗವೇ ಶ್ರೀರಾಮಾನುಜರು. ಅವರು ಬೋಧಿಸಿದ ನಾಲ್ಕು ಸಾವಿರ ಕೃತಿಗಳನ್ನು ಓದಿ, ಅರ್ಥೈಸಿ, ಅರಗಿಸಿಕೊಂಡು ನವೀನರೂಪದಲ್ಲಿ ಜನಸಾಮಾನ್ಯರಿಗ ತಿಳಿಯುವಂತೆ ಸಿದ್ಧಾಂತ ರೂಪಿಸಿದವರು ರಾಮಾನುಜರು. ಇದಕ್ಕೆ ವೇದವ್ಯಾಸರು ಬರೆದ ಬ್ರಹ್ಮ ಸೂತ್ರವು ಸಹ ಸಹಾಯಕವಾಯಿತು. ಶ್ರೀಭಾಷ್ಯ ರಚನೆಯ ತರುವಾಯ ವೇದಾಂತ ದೀಪಂ, ವೇದಾಂತಸಾರ, ವೇದಾರ್ಥಸಂಗ್ರಹ ಕೃತಿಗಳನ್ನೆಲ್ಲ[47] ರಾಮಾನುಜರು ಅನುಯಾಯಿಗಳಿಗಾಗಿ ಶ್ರೀವೈಷ್ಣವ ಧರ್ಮದ ಸಿದ್ಧಾಂತವೆಂದು ಬಡುಗಡೆಗೊಳಿಸಿದರು.

ಮುಕ್ತಿಗೆ ಮುಖ್ಯ ಮಾರ್ಗತೋರಿಸುವ ರಾಮಾನುಜರ ಶ್ರೀವೈಷ್ಣವ ಸಿದ್ಧಾಂತಕ್ಕೆ ಹುಟ್ಟಿದ ಪ್ರದೇಶದಲ್ಲಿ ಕುತ್ತು ಬಂತು. ರಾಜನಾದ ಕುಲೋತ್ತುಂಗನ ನೇತೃತ್ವದಲ್ಲಿ ಶೈವ ಸಂಪ್ರದಾಯಿಗಳೆಲ್ಲ ಶ್ರೀವೈಷ್ಣವ ಸಿದ್ಧಾಂತಕ್ಕೆ ಬೆನ್ನಟ್ಟಿ ಓಡಿಸಿದರು. ಆದರೆ ರಾಮಾನುಜರು ತಮಿಳುನಾಡಿನಿಂದ ಓಡಿಬರಲಿಲ್ಲ, ಅವರಿಗೆ ಅಲ್ಲಿ ಯಾವುದೇ ಕಿರುಕುಳವಿರಲಿಲ್ಲ, ಶ್ರೀವೈಷ್ಣವ ಮತವನ್ನು ಇನ್ನಷ್ಟು ಪ್ರಬಲಗೊಳಿಸಲು ಕರ್ನಾಟಕದತ್ತ ಬಂದರೆಂದು ಒಂದು ವಾದವುಂಟು.[48] ಅದೇನೇ ಇದ್ದರೂ ಹೊಯ್ಸಳರ ರಾಜ್ಯದ ಭವ್ಯಸ್ವಾಗತ ಶ್ರೀವೈಷ್ಣವಕ್ಕೆ ಸಿಕ್ಕಿ ವಿಜಯನಗರದಲ್ಲಿ ವ್ಯಾಪಿಸಲು ಪ್ರಶಸ್ತ ವಾತಾವರಣ ಸಿಕ್ಕಿತು. ಇಲ್ಲಿಯೇ ತೆಂಗಲೈ, ವಡಗಲೈ ಎಂಬ ಎರಡು ಆಚರಣೆಗಳಾಗಿ ಕವಲೊಡೆದವು. ವೇದಾಂತ ದೇಶೀಕರ ನೇತೃತ್ವದಲ್ಲಿ ವರ್ಣಾಶ್ರಮ ಧರ್ಮದ ನಿಯಮಗಳನ್ನು ಬಿಗಿಗೊಳಿಸಲು ವಡಗಲೈ ಪಣತೊಟ್ಟರೆ, ಪಿಳ್ಳೆ ಲೋಕಾಚಾರ್ಯರ, ಮಣವಾಳ ಮಹಾಮುನಿಗಳ ಮುಖಂಡತ್ವದಲ್ಲಿ ವರ್ಣಾಶ್ರಮ ಧರ್ಮದ ನಿಯಮಗಳನ್ನು ಸಡಿಲಿಸಲು ಶ್ರಮಪಟ್ಟರು. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ 'ವಡಗಲೈ' ಉತ್ತರದ ಶಾಖೆಯಾಗಿ ಅಂಯುರ್ಕರಣಗೊಂಡರೆ, ತೆಂಗಲೈ ದಕ್ಷಿಣದ ಭಾಗವಾಗಿ ಸೀಳಿ ದ್ರಾವಿಡರಿಗೆ ಸೇರಿತು ಇದನ್ನೇ ಸುರಪುರ ಸಂಸ್ಥಾನ ಒಪ್ಪಿಕೊಂಡು ತನ್ನಲ್ಲಿ ಪಸರಿಸಲು ಪ್ರಯತ್ನಿಸಿತೆಂದು ತೋರುತ್ತದೆ. ತಮಿಳುನಾಡಿನಲ್ಲಿ ದ್ರಾವಿಡ ಪಂಥವು ಪ್ರಬಲವಿದ್ದಾಗಲೂ ರಾಮಾನುಜರಿಗೆ

45. ಆಳ್ವಾರರು: ಪೊಯಿಕೈಆಳ್ವಾರ, ಭೂತಾಹ್ವಯರ, ಪೇಯಾಳ್ವಾರ್, ತಿರುಮುಳಿಶೈಆಳ್ವಾರ್ ನಮ್ಮಾಳ್ವಾರ್, ಕುಲಶೇಖರಾಳ್ವಾರ್, ಪೆರಿಯಾಳ್ವಾರ್, ತೊಂಡರಡಿಪೊಡಿ ಆಳ್ವಾರ್, ತಿರುಪ್ಪಾಣ ಆಳ್ವಾರ, ತಿರುಮಂಗೈ-ಆಳ್ವಾರ್, ಮಧುಕವಿ, ಆಂಡಾಳ
46. ವಿದ್ವಾನ್ ವೀರರಾಘವಾಚಾರ್ಯ, ಲೇಖನ ವಿಶಿಷ್ಟಾದ್ವೈತ (ಭಾರತೀಯ ಸಂಸ್ಕೃತಿದರ್ಶನ) 1962 ಪು. 257
47. ಎಡ್ವಿನ್ಸ್ : ಶ್ರೀರಾಮಾನುಜ 1963. ಪು. 145
48. ಡಾ.ಎಸ್. ಶ್ರೀಕಂಠಶಾಸ್ತ್ರಿ, ಭಾರತೀಯ ಸಂಸ್ಕೃತಿ ಪು.142.

ಅಲ್ಲಿ ಸ್ಥಳವೇಕೆ ಸಿಗಲಿಲ್ಲವೆಂಬ ಪ್ರಶ್ನೆಯಲ್ಲಿ ಶೈವ-ಶ್ರೀವೈಷ್ಣವಗಳ ತಿಕ್ಕಾಟವೇ ಮೂಲ ಕಾರಣ ನೀಡಬಹುದು. ಸುರಪುರವು ಶ್ರೀವೈಷ್ಣವ ಪಂಥ ಪ್ರವೇಶ ಪಡೆಯುವ ಮುನ್ನ ವಿಜಯನಗರದವರನ್ನೇ ಅನುಕರಿಸಿ ಮುಂದುವರೆದಿತ್ತು.

ಶ್ರೀವೈಷ್ಣವ ಸಿದ್ಧಾಂತದ ಸ್ವರೂಪವನ್ನು ತಿಳಿಸುವ ಅಪೂರ್ವ ಕೃತಿಯೆಂದರೆ ಚಿಕ್ಕದೇವರಾಜರ 'ಚಿಕದೇವರಾಜ ಬಿನ್ನಪಂ' ಕೃತಿ. ಇದರಲ್ಲಿ ಸ್ಪಷ್ಟಪಡಿಸಿರುವ ಮುಖ್ಯಾಂಶಗಳೆಲ್ಲ ಸುರಪುರದ ಅರಮನೆಯಲ್ಲಿ ಬಳಕೆಗೊಂಡಿತ್ತು. ಆದರೆ ಸಂಸ್ಥಾನದ ಸಮಸ್ತ ಬೇಡರು ಅನುಸರಿಸಿದರೆನ್ನಲು ಆಧಾರಗಳಿಲ್ಲ. ಯಾಕೆಂದರೆ ಕುಲಗುರುಗಳೆಂದು ಕರೆಯಿಸಿಕೊಳ್ಳುವ ಪುರೋಹಿತರು ಸಾಮಾನ್ಯ ಬೇಡ ಪ್ರಜೆಗಳನ್ನು ಪುರಸ್ಕರಿಸಲಿಲ್ಲ. ಒಂದು ರೀತಿಯ ಧಾರ್ಮಿಕ ಅಸ್ಪೃಶ್ಯತೆ ಇತ್ತು. ಕೇವಲ ಅರಮನೆ ಅಂತಃಪುರದಲ್ಲಿ ಮಾತ್ರ ಶ್ರೀವೈಷ್ಣವ ಪಂಥವನ್ನು ಈ ಪುರೋಹಿತ ವರ್ಗ ಸಂಪೂರ್ಣ ಜಾರಿಗೊಳಿಸಿತ್ತು. ಇದನ್ನು ನೋಡಿದರೆ ಒಂದು ಸಂಶಯ ಎದ್ದು ತೋರುತ್ತದೆ. ಅದೇನೆಂದರೆ – 'ವಿಜಯನಗರದ ಪತನಾನಂತರ ಇಂಥ ಪುರೋಹಿತ ವರ್ಗಕ್ಕೆ ಆಶ್ರಯ ತಪ್ಪಿ ಹೋಯಿತು. ಆಗ ಸುರಪುರದಂಥ ಪಾಳೆ-ಪಟ್ಟುಗಳಲ್ಲಿ ತಮ್ಮ ಸಿದ್ಧಾಂತವನ್ನು ಜಾರಿಗೆ ತಂದು ಮೂಲದಲ್ಲಿಯ ಆಶ್ರಯ ದಕ್ಕಿಸಿಕೊಂಡರು. ಆದರೆ ತಮ್ಮ ಧರ್ಮವನ್ನು ಅರಸ, ಅರಮನೆಗೆ ಮಾತ್ರ ಸೀಮಿತಗೊಳಿಸಿಕೊಂಡರೆಂಬುದು'. ಇಲ್ಲಿ, ಸಂಸ್ಥಾನದ ಜನತೆಗೆ ಊರ ದಾಸರ ಮೂಲಕ ಆಚರಣೆಗಳನ್ನು ಅನುಸರಿಸಲು ಹೇಳಿ ಅವರ ಶ್ರೇಣಿಗೆ ಸೇರಿಸಲಾಯಿತು. ಅದೇ ಬೇಡರ ರಾಜನನ್ನು ಪುರೋಹಿತವರ್ಗಕ್ಕೆ ಏರಿಸಲಾಯಿತು. ಇದೊಂದು ಸುರಪುರ ಸಂಸ್ಥಾನದ ದೊಡ್ಡ ಧಾರ್ಮಿಕ ದುರಂತ. ದುರಂತಕ್ಕೆ ಕಾರಣ ಪುರೋಹಿತವರ್ಗವೆನ್ನದೆ ಇನ್ನೊಂದು ಕಾರಣವಿಲ್ಲ.

ರಾಮಾನುಜರ ಮರಣಾನಂತರ ಶ್ರೀವೈಷ್ಣವ ಧರ್ಮ ದಕ್ಷಿಣ ಭಾರತದ ಪ್ರಧಾನ ಧರ್ಮವಾಗಿ[49] ಪೂಜಿಸಲ್ಪಡುತ್ತಿತ್ತೆನ್ನೋ ನಿಜ. ಆದರೆ ಅವರ ಶಿಷ್ಯ ಪರಂಪರೆಯಲ್ಲಿ ಮತ್ತೆರಡು ಕವಲುಗಳಾದವು. ಶ್ರೀವೈಷ್ಣವ ಧರ್ಮವನ್ನು ಉಳಿಸಿಬೆಳೆಸುವ 'ಸಮಾಶ್ರಯಣ ಪರಂಪರೆ' ಮತ್ತು ಸಿದ್ಧಾಂತವನ್ನು ಪ್ರತಿಪಾದಿಸುವ 'ಗ್ರಂಥ ಪರಂಪರೆ' ಎಂಬವು.[50] ಸಮಾಶ್ರಯಣಕ್ಕೆ ಗೋವಿಂದ, ಗ್ರಂಥಕ್ಕೆ ಪ್ರಾಣತಾರ್ತಿಹರರು ಮುಖಂಡರಾದರು. ರಾಮಾನುಜರು ತಾವು ತೀರಿಕೊಳ್ಳುವ ಮೊದಲು

---

49. Mysore Gazetteer Vol.II Part-III p-210.
50. ಪ್ರೊ. ಎಸ್.ಕೆ. ರಾಮಚಂದ್ರರಾವ್. ತಿರುಪತಿ ತಿಮ್ಮಪ್ಪ. 1980 ಪು. 86-87.

74 ಸಿಂಹಾಸನಾಧಿಪತಿಗಳನ್ನು (ಆಚಾರ್ಯ ಪುರುಷ) ವ್ಯವಸ್ಥೆ ಮಾಡಿದ್ದರೆಂದು ಪ್ರತೀತಿಯೊಂದಿದೆ.[51] ಇಂಥ ಶಿಷ್ಯರಲ್ಲಿ ಸುರಪುರ ಸಂಸ್ಥಾನಕ್ಕೆ ಪ್ರತ್ಯಕ್ಷವಾಗಿ ಯಾರು ಬಂದಿದ್ದರೆಂಬ ಬಗ್ಗೆ ಇನ್ನೂ ಶೋಧನೆಯಾಗಬೇಕಿದೆ. ಆದರೆ ಮೇಲಿನೆರಡು ಬಣಗಳ ಉದ್ದೇಶ ಸಂಸ್ಥಾನದಲ್ಲಿ ಕಾರ್ಯರೂಪಕ್ಕಿತ್ತು.

ಶ್ರೀವೈಷ್ಣವ ಸಂಪ್ರದಾಯದ ನೂರೆಂಟು ದಿವ್ಯ ಕ್ಷೇತ್ರಗಳಿವೆ. ಅವುಗಳಲ್ಲಿ 84 ಕ್ಷೇತ್ರಗಳು ದಕ್ಷಿಣದಲ್ಲಿ, ಉಳಿದವು ಉತ್ತರದಲ್ಲಿವೆ. ದಕ್ಷಿಣದ ಸುಪ್ರಸಿದ್ಧ ಕ್ಷೇತ್ರವೆಂದರೆ ತಿರುಮಲೆ ತಿಮ್ಮಪ್ಪ. ಈತನೆ ಸುರಪುರ ಸಂಸ್ಥಾನದ ಮೊದಲ ಆರಾಧ್ಯ ಕುಲದೈವ.

3. ದೇವರು ದೇವಾಲಯ:

ಸುರಪುರ ದೊರೆಗಳ ಮತ್ತು ಸಂಸ್ಥಾನದ ಜನತೆಯ ಆರಾಧ್ಯ ದೈವ ಆಂಜನೇಯ ಮಾರುತಿ ದೇವರ ಮೂರ್ತಿ ಪೂಜೆಯಲ್ಲಿಯೂ ವೈಶಿಷ್ಟ್ಯವಿದೆ. ಯಾಕೆಂದರೆ ಶ್ರೀರಾಮ ಆರ್ಯರ ಆರಾಧ್ಯದೈವನಾದರೆ, ಹನುಮಂತ ದ್ರಾವಿಡರ ದೇವ. ಸುರಪುರದ ಬೇಡರು ಆದಿ ದ್ರಾವಿಡರೆಂಬುದು ಈಗಾಗಲೇ ಅರಿತ ವಿಚಾರ. ಇಂಥ ಮಾರುತಿ ಮಂದಿರ ಸ್ಥಾಪನೆ, ಅರ್ಚನೆ ಆರಾಧನೆಗೆ ಮುಖ್ಯ ಪ್ರೇರಣೆ ಸಿಕ್ಕಿದ್ದು ವಿಜಯನಗರದ ಆಳ್ವಿಕೆಯಲ್ಲಿ. ಇದರಿಂದಲೇ ಆಂಜನೇಯನಿಲ್ಲದ ಹಳ್ಳಿಗಳಿಲ್ಲವೆಂಬ ಗಾದೆ ಜನಜನಿತವಾಯಿತು.

ವಿಜಯನಗರದ ಎಲ್ಲಾ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಬಂದ ಪಾಳೆಗಾರರಲ್ಲಿ ಸುರಪುರದವರು ಬಹು ಪ್ರಮುಖವೆಂದು ಪದೇ ಪದೇ ಹೇಳಬೇಕಾಗಿದೆ. ಯಾಕೆಂದರೆ, ವಿಜಯನಗರದ ಅರಸರು ರಾಮಾನುಜಪಂಥ ಸ್ವೀಕರಿಸಿ, ತಿರುಪತಿಯ ತಿಮ್ಮಪ್ಪನನ್ನು ಪೂಜಿಸತೊಡಗಿದಂತೆ ಸುರಪುರದವರು ಅದೇ ದೇವರನ್ನು ತಮ್ಮ ಕುಲದೈವವಾಗಿಸಿಕೊಂಡರು. ಕುಲದೈವದ ಆರಾಧನೆ ಹಿಂದೆ ಕುಲಧರ್ಮದ ಆಚಾರ ವಿಚಾರಗಳು ಅಡಗಿರುತ್ತವೆ. ಹೀಗಾಗಿ ಸಂಸ್ಥಾನದ ಅರಸರು ಸುರಪುರದಲ್ಲಿ ಸ್ಥಾಪಿಸಿದ ವೇಣುಗೋಪಾಲಸ್ವಾಮಿ ಮಂದಿರ ಮತ್ತು ಮಂದಿರದಲ್ಲಿ ಆಚರಿಸುವ ಪದ್ಧತಿಗಳೆಲ್ಲ ತಿರುಪತಿಯಿಂದಲೇ ಅನುಕರಿಸಿದವುಗಳಾಗಿವೆ. ಅಲ್ಲಿಯ ಎಲ್ಲಾ ಸಂಪ್ರದಾಯಗಳ ಪ್ರಭಾವವನ್ನೂ ಇಲ್ಲಿ ನೋಡುತ್ತೇವೆ. ಆದುದರಿಂದ ತಿರುಪತಿ ವೆಂಕಟರಮಣನನ್ನು ನೋಡುವ ಮೂಲಕ ಸಂಸ್ಥಾನದ ದೇವರು ಮತ್ತು ಧರ್ಮಾಚರಣೆಗಳನ್ನು ಅಭ್ಯಾಸಿಸಬಹುದಾಗಿದೆ.

---

51. ಅದೇ. ಪು. 18.

(1) ತಿರುಪತಿ ವೆಂಕಟರಮಣ:

ಡಾ. ಎಸ್.ಕೆ. ರಾಮಚಂದ್ರರಾಯರು ತಮ್ಮ 'ತಿರುಪತಿ ತಿಮ್ಮಪ್ಪ' ಎಂಬ ಪುಸ್ತಕದಲ್ಲಿ ವೆಂಕಟರಮಣ ದೇವರ ಬಗ್ಗೆ ವಿಸ್ತಾರವಾಗಿ ವರ್ಣಿಸಿದ್ದಾರೆ. ಅನೇಕ ಸಾಮಗ್ರಿಗಳ ಸಹಾಯದಿಂದ ಬರೆಯಲಾದ ಈ ಪುಸ್ತಕ ಬಹು ಮೌಲಿಕವಾದ ಸಂಶೋಧನ ಗ್ರಂಥವೆನಿಸಿದೆ. ಆದುದರಿಂದ ಇಲ್ಲಿದ ಕೆಲವು ವಿಷಯಗಳನ್ನು ಎತ್ತಿಕೊಂಡು ಸುರಪುರದ ವೇಣುಗೋಪಾಲಸ್ವಾಮಿ ಮಂದಿರದೊಂದಿಗೆ ಸಮೀಕರಿಸುವ ಯತ್ನ ಇಲ್ಲಿ ಮಾಡಲಾಗಿದೆ.

'ತಿರುಮಲೆ' ಎಂದರೆ ದೊಡ್ಡಬೆಟ್ಟ ಎಂದರ್ಥ. ಇದನ್ನೇ ಈಗ ನಾವೆಲ್ಲ 'ತಿರುಪತಿ' ಎಂದು ಕರೆಯುತ್ತಿದ್ದೇವೆ. ಆಂಧ್ರಪ್ರದೇಶದ ಚಿತ್ತೂರ ಜಿಲ್ಲೆಗೆ ಹೊಂದಿಕೊಂಡಿರುವ ಈ ಬೆಟ್ಟಕ್ಕೆ ಮೊದಲಿನ ಹೆಸರು ವೇಂಗಡ. ತಮಿಳಿನ ಆಳ್ವಾರರು ವೇಂಗಡವೆಂದರೆ, ಶ್ರೀವೈಷ್ಣವರು ವೇಂಕಟ ನೆಂದರು. ಆದರೆ ವೈಷ್ಣವರು ಇದಕ್ಕೆ ವೈಕುಂಠವೆಂದು ಕರೆದರು. ಸಂಸ್ಕೃತದಲ್ಲಿ ವೆಂಕಟಚಲ, ವೆಂಕಟಾದ್ರಿ, ವೆಂಕಟೇಶ್ವರ ಎಂಬಿತ್ಯಾದಿ ನಾಮಗಳಿಂದ ಗುರುತಿಸಿಕೊಂಡರು. ಇಲ್ಲಿರುವ ಶೇಷಾಚಲ, ವೃಷಭಾಚಲ, ಗರುಡಾಚಲ, ಅಂಜನಾದ್ರಿ, ನಾರಾಯಣಾದ್ರಿ, ವೃಷಾದ್ರಿ, ವೆಂಕಟಾದ್ರಿ ಎಂಬ ಏಳು ಬೆಟ್ಟಗಳು ಸುಮಾರು ಮೂರು ಸಾವಿರ ಅಡಿಗಳ ಎತ್ತರಕ್ಕಿವೆ. ನಾರಾಯಣಾದ್ರಿಯಲ್ಲೇ ಗುಡಿಯಿರುವ ಸ್ಥಳ. ಪಕ್ಕದಲ್ಲೇ ತುಂಬುರತೀರ್ಥ, ಆಕಾಶಗಂಗೆ, ಪಾಪವಿನಾಶತೀರ್ಥ, ಗೋಗರ್ಭ, ವೈಕುಂಠತೀರ್ಥ, ಶೇಷತೀರ್ಥ, ಭೀಮತೀರ್ಥ, ಆಳ್ವಾರ ತೀರ್ಥಗಳು ಮಿಂಯ್ಯುವವರಿಗೆ ಪಾಪಕೊಳೆ ತೊಳೆಯುತ್ತವೆ ಎಂಬುದು ನಂಬಿಗೆ.

ವೇಂಗಡ ಬೇಟೆಗಾರರ ದೇವರೆಂದು ಹಲವು ಪುರಾಣಗಳು ಸ್ಪಷ್ಟಪಡಿಸಿವೆ. ವರಾಹ, ಬ್ರಹ್ಮ, ಸ್ಕಾಂದ ಪುರಾಣಗಳಲ್ಲಿ ಮತ್ತು ವೆನಕಟಾಚಲ ಮಹಾತ್ಮ್ಯ, ವೇಂಕಟಾಚಲಾ ಇತಿಹಾಸ ಮಾಲಾ ಗ್ರಂಥಗಳಲ್ಲಿ ಹಾಗೂ ತಿರುಮಲೈ ಒಳಗು ಎಂಬ ತಮಿಳು ಕೃತಿಗಳಲ್ಲಿ ವೇಂಗಡಗುಡಿಯ ಹುಟ್ಟು ರಚನೆ, ವಿಕಾಸ, ಕುರಿತು ಹೇಳಲಾಗಿದೆ.[52] ಕ್ರಿ.ಶ. 9ನೇ ಶತಮಾನದಲ್ಲಿ ವೇಂಗಡ ಗುಡಿಯ ಬೆಟ್ಟದ ತುದಿಯಲ್ಲಿ ಮೂರ್ತಿ ಇತ್ತು. ಆದರೆ ಗುಡಿಯಿರಲಿಲ್ಲ. ಈ ಮೂರ್ತಿಯ ದರ್ಶನಕ್ಕೆ

52. ಡಾ.ಎಸ್.ಕೆ. ರಾಮಚಂದ್ರ ರಾಯರು, ತಿರುಪತಿ ತಿಮ್ಮಪ್ಪ. 1980 ಪು. 33.

ಬೇಟೆಗಾರರು, ಕಾಡುಜನರು ಮಾತ್ರ ಹೋಗಿಬರಬಹುದಾಗಿತ್ತು. ನಂತರ ಅರಸರು ಹಾಗೂ ಅವರ ಪರಿವಾರ ಹೋಗಿ ಬರಲು ಯತ್ನಿಸಿದರು. ಆಗ ಗುಡಿಯೊಳಗಿನ ಮೂರ್ತಿ ವಿಷ್ಣುವೆಂದು ವೈಷ್ಣವರು, ಸುಬ್ರಹ್ಮಣ್ಯನೆಂದು ಶೈವರು ಕಚ್ಚಾಡತೊಡಗಿದರು.[53] ಕ್ರಿ. ಶ. 1130ರಲ್ಲಿ ರಾಮಾನುಜರು ಅಲ್ಲಿ ಗೋವಿಂದರಾಜನ ಮೂರ್ತಿಯೊಂದನ್ನು ಸ್ಥಾಪಿಸಿದರು. ತರುವಾಯ ಕ್ರಿ.ಶ. 1220 ರಿಂದ ಕ್ರಿ.ಶ. 1628ರವರೆಗೆ ಗೋಪುರ, ಮಂಟಪ, ನಿರಾಳಿಮಂಟಪ, ಲಕ್ಷ್ಮೀದೇವಿ ಮಂಟಪ, ದ್ವಾರಪಾಲಕರು, ಮಹಾಗೋಪುರ ಮುಂತಾದ ಕಟ್ಟಡಗಳು ಪ್ರಖ್ಯಾತ ಅರಸರ ಭಕ್ತಿಯಿಂದ ತಲೆಎತ್ತಿದವು.

ತಿರುಪತಿ ವೆಂಕಟರಮಣನ ದೇವಾಲಯದಲ್ಲಿ ಬಹು ಪ್ರಾಮುಖ್ಯ ಇರುವುದು ಪೂಜಾ ಪದ್ಧತಿಗೆ. ಪುರೋಹಿತರಲ್ಲಿಯ ಒಡಕು, ಪದ್ಧತಿಯಲ್ಲೂ ವಿಂಗಡಣೆಗಳಾಗಲು ಕಾರಣವಾಯಿತು. ವೈಖಾನಸ ಮತ್ತು ಪಾಂಚರಾತ್ರ ಎಂಬೆರಡು ಪದ್ಧತಿಗಳು ಪೂಜೆಯಲ್ಲಿ ಕಾರ್ಯರೂಪಕ್ಕೆ ಬಂದವು. 'ಆಗಮವನ್ನು' ಶೈವ ಶಾಕ್ತ, ವೈಷ್ಣವ ಹೊಂದಿದರೆ, ವೈಷ್ಣವವೇ ವೈಖಾನಸ, ಪಾಂಚರಾತ್ರ ಪದ್ಧತಿ ಪಡೆಯಿತು. ವೈಖಾನಸವೆಂದರೆ ವಾನಪ್ರಸ್ಥವೆಂದರ್ಥ.[54] ಇವೆರಡು ಪ್ರಬಲವಾಗುತ್ತಿದ್ದಂತೆ ಪೂಜಾ ಪದ್ಧತಿಯಲ್ಲಿ ಕಲಹ ಹುಟ್ಟಿದವು. ಅರ್ಚಕ ವರ್ಗದಲ್ಲಿ ಜಗಳವೇ ನಡೆದವು. ಉಭಯತರು ತಮ್ಮ ಸಂಪ್ರದಾಯವೇ ಶ್ರೇಷ್ಠವೆಂದು ವಾದಿಸತೊಡಗಿದರು. ವೈಖಾನಸರು ದೇವರನ್ನು ಪಡೆಯಲು ಜಪ, ತಪ, ಧ್ಯಾನ, ಅರ್ಚನೆಗಳನ್ನು ಅನುಸರಿಸಿದರೆ, ಪಾಂಚರಾತ್ರರು ತಪ್ತ ಮುದ್ರಾಂಕನ, ಶೀತಲ ಮುದ್ರಾಂಕನ ಹಾಕಿಕೊಳ್ಳುತ್ತಾರಷ್ಟೆ. ವೈಖಾನಸರಿಗೆ ಇದರ ಅಗತ್ಯವಿಲ್ಲ. ಪಾಂಚರಾತ್ರರು ಮಿತಿಮೀರಿ ಉತ್ಸವಗಳನ್ನು ಆಚರಿಸಿ ನಿತ್ಯ ಅರ್ಚನೆಗೆ ಇದ್ದ ಅತಿ ಕಟ್ಟಳೆಗಳನ್ನು ನಿರ್ಲಕ್ಷಿಸಿದರು. ದೇವದಾಸಿಯರನ್ನು ದೇವಾಲಯದ ಕಾರ್ಯ ಕಲಾಪಗಳಿಗೆ ಬಳಸಿಕೊಂಡರು. ತಮಿಳುಗ್ರಂಥ ಪಠಣ ಕಾರ್ಯ ಆರಂಭಿಸಿದರು. ಆದರೆ ವೈಖಾನಸರಿಗೆ ಇದು ಸರಿ ಬರಲಿಲ್ಲ. ದಿನಕ್ಕೆ 12 ಸಲ ಪೂಜೆ ಮಾಡುವುದು ಇವರ ನಿಯಮ. ಉತ್ಸವಗಳಿಂದ ಯಾವ ಸಿದ್ಧಿಯು ಸಿಗದೆಂದು ಇವರ ಬಲವಾದ ಆರೋಪ.

ಪಾಂಚರಾತ್ರರು ಆಚರಿಸುವ ಕಾಲೋತ್ಸವ, ಶ್ರದ್ಧೋತ್ಸವ, ನಿಮಿತ್ತೋತ್ಸವ, ಮುಂತಾದ ಉತ್ಸವಗಳಲ್ಲಿ ಬ್ರಹ್ಮೋತ್ಸವ ಬಹು ಪ್ರಸಿದ್ಧ. ಇದಕ್ಕೆ ನವರಾತ್ರಿ ಉತ್ಸವವೆಂದು

---

53. ಅದೇ ಪು. 53
54. ಅದೇ ಪು. 279

ಕರೆಯುತ್ತಾರೆ. ಒಂಬತ್ತು ವಾಹನಗಳ ಉತ್ಸವವೇ ಇದರ ವೈಶಿಷ್ಟ್ಯ. ಶೇಷವಾಹನ, ಸಿಂಹವಾಹನ, ಕಲ್ಪವೃಕ್ಷವಾಹನ, ಸರ್ವಭೂಪಾಲವಾಹನ, ಹನುಮಂತವಾಹನ, ಗಜವಾಹನ, ಸೂರ್ಯ ಪ್ರಭವಾಹನ, ಚಂದ್ರಪ್ರಭವಾಹನ ಅಲ್ಲದೆ ಪಲ್ಲಕ್ಕಿ ಉತ್ಸವ, ಧ್ವಜದ ಮೆರವಣಿಗೆ ಇಲ್ಲಿ ವಿಜೃಂಭಿಸುತ್ತವೆ[55] ಇವೆಲ್ಲ ತಿರುಮಲೆ ತಿಮ್ಮಪ್ಪನಿಗಾಗಿ ಜಾರಿಗೆ ತಂದ ಉತ್ಸವಗಳು ಈ ಪದ್ಧತಿಯನ್ನೇ ಸುರಪುರ ಸಂಸ್ಥಾನವು ಅನುಸರಿಸಿತು.

ಶ್ರೀಕೃಷ್ಣದೇವರಾಯನ ಕಾಲಕ್ಕೆ ತಿರುಪತಿ ತಿಮ್ಮಪ್ಪನ ದೇವಾಲಯದ ಪ್ರಖ್ಯಾತಿ ದೆಸೆದಿಕ್ಕಿಗೂ ಹಬ್ಬಿತು. ಅಧಿಕಾರಿಗಳು, ಊಳಿಗದವರು, ವ್ಯಾಪಾರಿ-ಊರವರು ಎಲ್ಲರೂ ಇಲ್ಲಿಗೆ ನಡೆದುಕೊಳ್ಳುವಂತೆ ಪ್ರೇರಣೆ ನೀಡಿದ. ಅಲ್ಲಸಾನಿ ಪೆದ್ದಣ ಸಹ ಶ್ರೀವೈಷ್ಣವನಾಗಿ, ತಿರುಪತಿಯ ಆರಾಧಕನಾಗಿ ಉಳಿಯುವಂತೆ ಪ್ರಚೋದನೆ ಸಿಕ್ಕಿದ್ದು ಇದೇ ವಾತಾವರಣದಿಂದ. ಸುರಪುರದ ಮುಮ್ಮಡಿ ಪಾಮನಾಯಕನು ಐಕೂರು ಗ್ರಾಮವನ್ನು ತಿರುಪತಿದೇವರ ಖರ್ಚು-ವೆಚ್ಚಗಳಿಗಾಗಿ ಜಹಗೀರು ಹಾಕಿಕೊಟ್ಟಿದ್ದನು. ಮತ್ತು ತಮ್ಮ ಆಳಿತದ ಆದೇಶ ಪತ್ರಗಳಲ್ಲಿ 'ಶ್ರೀವೆಂಕಟರಮಣನೆಂದೆ' ರುಜು ಹಾಕುವುದನ್ನು ನೋಡಿದರೆ ಆರಾಧ್ಯ ದೈವದ ಮೇಲಿರುವ ಭಕ್ತಿಯ ಪರಾಕಾಷ್ಠೆ ತಿಳಿಯುತ್ತದೆ. ವಿಜಯನಗರದ ಕೊನೆಯ ಅರಸು ತಿರುಮಲರಾಯನು ಕ್ರಿ.ಶ. 1586ರಲ್ಲಿ ಪಟ್ಟವೇರಿ 'ಶ್ರೀವೇಂಕಟೇಶಾಯ: ನಮ:' ವೆಂಬ ಬರೆಹವುಳ್ಳ ನಾಣ್ಯವನ್ನೂ ಮುದ್ರಿಸಿ ಚಲಾವಣೆಗೆ ತಂದನು. ಇಂಥ ಹಲವು ಪ್ರಭಾವಗಳೇ ಸುರಪುರದವರಿಗೆ ಪ್ರೇರಣೆಯಾದವು. ಹಸರಂಗಿ ಪಾಮನಾಯಕನ ಆಳ್ವಿಕೆಯಲ್ಲಿ ತಿರುಪತಿವೆಂಕಟೇಶ್ವರ ದೇವರ ಹಾಸಿಗೆಯ ಸೇವೆಗಾಗಿ ಮಂಚ, ಅದರ ನವಾರವು ಸಂಸ್ಥಾನದಿಂದ ಕಳಿಸಲ್ಪಡುತ್ತಿತ್ತು. ತಿರುಗಿಬಂದ ನವಾರುವನ್ನು ರಾಣಿವಾಸದವರು ದೇವರ ಪ್ರಸಾದವೆಂದು ಮಡಿ ಕುಪ್ಪಸಕ್ಕೆ ಉಪಯೋಗಿಸಿಕೊಳ್ಳುತ್ತಿದ್ದರು.

<u>ಸಿಬ್ಬಂದಿ:</u>

ಕ್ರಿ.ಶ. 1496 ರಲ್ಲಿಯ ತಿರುಪತಿಯ ಶಾಸನವೊಂದು ವೆಂಕಟರಮಣದೇವರ ಗುಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೆಲಸಗಾರರ ಬಗ್ಗೆ ವಿವರವಾದ ಮಾಹಿತಿ ನೀಡುತ್ತದೆ. ಮೇಲ್ವಿಚಾರಕರು, ಚಿನ್ನಬೆಳ್ಳಿ ಒಡವೆಗಳ ಕಾವಲುಗಾರರು, ಕಟ್ಟಡವನ್ನು ಸ್ವಚ್ಛವಾಗಿಡುವವರು, ಪ್ರಬಂಧ ಓದುವವರು,

---

55. ಅದೇ ಪು. 299.

ವಾಹನಗಳನ್ನು ಹೊರುವವರು, ದೀಪ ಹಚ್ಚುವವರು, ಅಡುಗೆಯವರು, ಅಡಿಗೆಗೆ ಕಟ್ಟಿಗೆ ತರುವವರು, ಡಂಗುರ ಸಾರುವವರು, ಊಳಿಗದವರು, ನಾಟ್ಯ ಕಲಿಸುವವರು, ಢೋಲು ಬಾರಿಸುವವರು, ನಾಗಸ್ವರ ನುಡಿಸುವವರು, ಓಲಗದವರು ಹಾಡುವವರು, ಚಿನ್ನಬೆಳ್ಳಿ ಕೆತ್ತನೆ ಕೆಲಸಗಾರರು, ಬೀದಿ ಗುಡಿಸುವವರು, ಮಡಿಕೆ ಕೆಲಸಗಾರರು, ಶಿಲ್ಪಿಗಳು, ಬಾಗಿಲು ಕಾಯುವವರು, ಸಣ್ಣಮೃದಂಗ ಬಾರಿಸುವವರು ಹೀಗೆ ಮುಂತಾದ ವೃತ್ತಿವರ್ಗ[56] ಸಂಬಳದ ಮೇಲಿತ್ತು.

(2) ವೇಣುಗೋಪಾಲಸ್ವಾಮಿ:

ತಿರುಮಲೆ ವೆಂಕಟರಮಣನನ್ನೇ ತಮ್ಮ ಆರಾಧ್ಯದೈವವೆಂದು ಅರ್ಚಿಸುತ್ತ ಬಂದ ಸುರಪುರ ಸಂಸ್ಥಾನವು ತರುವಾಯ ಹೊಸದೊಂದು ತಿರುವು ಪಡೆಯಿತು. ಸಂಸ್ಥಾನದ ಜನತೆಯು ದೂರದ ತಿರುಮಲೆಗೆ ತಲುಪುವುದಕ್ಕೆ ಮತ್ತು ಅಲ್ಲಿಯ ಉತ್ಸವಾದಿಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುವುದಕ್ಕೆ ತೊಂದರೆಗಳನ್ನು ಎದುರಿಸಬೇಕಾಯಿತು. ಆಗ ತಿರುಪತಿ ವೆಂಕಟರಮಣನ ಇನ್ನೊಂದು ರೂಪವೇ ವೇಣುಗೋಪಾಲನೆಂದು ಸುರಪುರದಲ್ಲೇ ಸ್ಥಾಪಿಸಿದರು. ಶ್ರೀವೈಷ್ಣವ ಸಂಪ್ರದಾಯದ ಶ್ರೀವೇಣು ಗೋಪಾಲನನ್ನು ಹಸರಂಗಿ ಪಾಮನಾಯಕ ಈ ಹಿಂದೆ ವಾಗಿನಗೇರಿ ಕಿಲ್ಲೆಯಲ್ಲಿ ಪ್ರತಿಷ್ಠಾಪಿಸಿದ. ಆದರೆ ಔರಂಗಜೇಬನ ಆಕ್ರಮಣಕ್ಕೆ ತುತ್ತಾದಾಗ ಪೀತಾಂಬರ ಬಹರಿ ಪಿಡ್ಡನಾಯಕನೇ ಜೀರ್ಣೋದ್ಧಾರ ಗೊಳಿಸಿ ದೇವಾಲಯದ ಅರ್ಚನೆಗೋಸ್ಕರ ಪೂಜಾರಿಗೆ ರೂ. 300 ಬಕ್ಷ,, 8 ಗದಿಂ, 90 ಬಿಘೆ ಖುಷ್ಕಿ ಜಮೀನನ್ನು ಇನಾಮು ಕೊಟ್ಟು ಪುನರ್ವ್ಯವಸ್ಥೆಗೊಳಿಸಿದನೆಂದು[57] ತಿಳಿಯುತ್ತದೆ. ಮೊಂಡುಗೈ ವೆಂಕಟಪ್ಪನಾಯಕನ ಆಳ್ವಿಕೆಯಲ್ಲಿ ಕೊಡೆಕಲ ಮತ್ತು ಹಿರೇಮುದನೂರಗಳಲ್ಲಿ ಗೋಪಾಲಸ್ವಾಮಿ ಗುಡಿಗಳನ್ನು ಸ್ಥಾಪಿಸಿ ದಿನನಿತ್ಯ ಅರ್ಚನಾದಿಗಳು ಸಿದ್ಧಗೊಳ್ಳಲು ಅರ್ಚಕನಿಗೆ ಕ್ರಮವಾಗಿ 60 ಬಿಘೆ ಭೂಮಿ ಮತ್ತು 110 ಬಿಘೆ ಭೂಮಿಯನ್ನು ಇನಾಮೆಂದು ಕೊಡಲಾಗಿತ್ತು. ಇದರಂತೆ ಮುಡಬೂಳ ಮತ್ತಿನ್ನಿತರ ಊರುಗಳಲ್ಲಿ ಗೋಪಾಲಸ್ವಾಮಿ ಗುಡಿಗಳು ಭಕ್ತರಿಗಾಗಿ ತಲೆ ಎತ್ತಿದವು.

---

56. ಅದೇ ಪು. 111 ರಿಂದ 112.
57. ಸು.ಸಂ. ಇ. ಪು. 75.

ಪೀತಾಂಬರ ಬಹರಿ ಪಿಡ್ಡನಾಯಕನ ಕಾಲಕ್ಕೆ ಸುರಪುರದಲ್ಲಿ ಪ್ರಾರಂಭಿಸಲಾದ ಶ್ರೀವೇಣುಗೋಪಾಲಸ್ವಾಮಿ ದೇವಾಲಯದ ಸ್ಥಾಪನೆ ಸಂಸ್ಥಾನದಲ್ಲೇ ಶಿರಪ್ರಾಯವಾಯಿತು. ಉಳಿದ ಊರುಗಳಿಗಿಂತ ರಾಜಧಾನಿ ದೇವರ ಉತ್ಸವಾದಿಗಳೇ ಮೇಲುಗೈ ಪಡೆದವು. ರಮಣಪ್ಪನಾಯಕನು ದೇವಾಲಯದ ಗರ್ಭಗುಡಿ, ಮಧ್ಯಮಂಟಪ ಕಟ್ಟಿಸಿದನು. ಮೂರ್ತಿಪ್ರತಿಷ್ಠಾಪನೆ ಕಾರ್ಯದಲ್ಲಿ ಶ್ರೀರಂಗಪಟ್ಟಣದ ರಂಗನಾಥ ದೇವಾಲಯದ ನಿಯಮಗಳನ್ನೇ ಅನುಸರಿಸಿದೆ. ತದನಂತರ ಮುಮ್ಮಡಿ ಪಾಮನಾಯಕನು ದೇವಾಲಯದ ಸರ್ವವ್ಯವಸ್ಥೆಯಲ್ಲಿ ತಿರುಪತಿ ಗುಡಿಯ ಪದ್ಧತಿಗಳನ್ನೇ ಜಾರಿಗೆ ಬರುವಂತೆ ನೋಡಿಕೊಂಡನೆಂದು ಕೆಳಗಿನ ಅಂಶಗಳಿಂದ ದೃಢಪಡುತ್ತದೆ.

'ದೇವರ ನಿತ್ಯ ಅರ್ಚನಾದಿಗಳು ವೈಖಾನಸ ಸೂತ್ರದಿಂದ ಮತ್ತು ದ್ರಾವಿಡ ವೇದ ಪ್ರಕಾರವೇ ನಡೆಯುವಂತೆ ನೋಡಿಕೊಳ್ಳಲಾಯಿತು. ಎಂಟು ಜನ ಪುರಾಣಿಕರ ಪುರಾಣ, ಪ್ರವಚನಗಳು, ನಾಲ್ಕು ಜನರ ದ್ರಾವಿಡ ವೇದ ಪಾರಾಯಣಗಳು ಆರಂಭಿಸುವ ಮೂಲಕ ಸಂಪ್ರದಾಯದಲ್ಲಿ ಸಮನ್ವಯ ಸಾಧಿಸಲಾಗಿತ್ತು. ಶ್ರೀವೈಷ್ಣವ ಸಂಪ್ರದಾಯದ ಎಲ್ಲಾ ಪೂಜಾಪದ್ಧತಿಗಳು ಪೂರೈಸುವಲ್ಲಿ ಸಂಸ್ಥಾನ ಸಕ್ರಿಯ ಪಾತ್ರವಹಿಸಿ ಪೂಜಾರಿಗೆ ಮಂಡಿಗಿಹಳ್ಳಿ ಗ್ರಾಮವನ್ನು ಜಹಗೀರಾಗಿ ನೀಡಲಾಗಿತ್ತು. ತಿರುಮಲೆಯಂತೆ ಇಲ್ಲಿಯೂ ಸಹ ಈ ದೇವಾಲಯವನ್ನು ಉದ್ಯೋಗ ಸೃಷ್ಟಿಯ ಕೇಂದ್ರವನ್ನಾಗಿಸಿಕೊಂಡಿದ್ದು ಬಹು ಮಹತ್ವದ್ದು.'

ವೇಣುಗೋಪಾಲಸ್ವಾಮಿ ದೇವಾಲಯದ ಸಂಪೂರ್ಣ ವ್ಯವಸ್ಥೆಯನ್ನು ನಾಲ್ಕನೆಯ ನಂಬರಿನ ಕೈಫಿಯತ್ತು ವಿಸ್ತಾರವಾಗಿ ಬಣ್ಣಿಸಿದೆ. ದೇವರಗುಡಿಯಲ್ಲಿ ದುಡಿಯುವ ವರ್ಗ ಮತ್ತು ಅವರು ಸಂಸ್ಥಾನದಿಂದ ಪಡೆಯುವ ಸಂಬಳವನ್ನು ಈ ರೀತಿ ಹೇಳಲಾಗಿದೆ.

ಪುರಾಣ ಹೇಳುವ 8 ಜನರಲ್ಲಿ ಪ್ರತಿಯೊಬ್ಬರಿಗೂ ತಿಂಗಳಿಗೆ	—	05 ರೂ.
ಪಲ್ಲಕ್ಕಿ ಸೇವೆ ಮಾಡುವ 8 ಜನರಲ್ಲಿ " "	—	02 ರೂ.
ಸೂರ್ಯ-ಚಂದ್ರ ಪ್ರಭಾವಳಿ ಸೇವಕರಿಗೆ " "	—	12 ಆಣಿ
ದ್ರಾವಿಡವೇದ ಪಾರಾಯಣ ಮಾಡುವ ನಾಲ್ವರಲ್ಲಿ ಪ್ರತಿಯೊಬ್ಬರಿಗೂ ತಿಂಗಳಿಗೆ	—	05 ರೂ

ನಗಾರಖಾನೆಯ 5 ಜನರಲ್ಲಿ ಪ್ರತಿಯೊಬ್ಬರಿಗೂ ತಿಂಗಳಿಗೆ			— 02 ರೂ
ತುಳಸಿ ಒದಗಿಸುವವನಿಗೆ	"	"	— 02 ರೂ
ನಾಲ್ವರು ಪರಿಚಾರಕರಲ್ಲಿ	"	"	— 1 ರೂ.
ಜಾಂಗಟೆ ಹೊಡೆಯುವವನಿಗೆ	"	"	— 8 ಆಣೆ.
ತಾಸು ಬಡಿಯುವ 4 ಜನರಲ್ಲಿ	"	"	— 4 ರೂ.
ದೇವರಿಗೆ ಛತ್ರ ಹಿಡಿಯುವ ಇಬ್ಬರಲ್ಲಿ	"	"	— $\frac{1}{2}$ ರೂ.
ಚಾಮರ ಬೀಸುವ ಇಬ್ಬರಲ್ಲಿ	"	"	— $\frac{1}{2}$ ರೂ.
ಭಜಂತ್ರಿ ಬಾರಿಸುವ ಪ್ರತಿಯೊಂದು ಮೇಳಕ್ಕೆ		"	— 8 ರೂ.
ಕೋಠಿಖಾನೆಯ ಇಬ್ಬರು ಮೇಲ್ವಿಚಾರಕರಲ್ಲಿ	"	"	— 2 ರೂ.
ಕೋಠಿಖಾನೆಯ ಸಾಮಾನು ಸಿದ್ಧಗೊಳಿಸುವ ಇಬ್ಬರಲ್ಲಿ ಪ್ರತಿಯೊಬ್ಬನಿಗೂ ತಿಂಗಳಿಗೆ			— 4 ರೂ.
ಕೋಠಿಖಾನೆಯ ಹವಲ್ದಾರನಿಗೆ ಪ್ರತಿಯೊಬ್ಬರಿಗೂ ತಿಂಗಳಿಗೆ			— 4 ರೂ.
ಏಕಾಂತ ಸೇವೆ ಮಾಡುವವನಿಗೆ	"	"	— 2 ರೂ.
ಅಡುಗೆ ಮಾಡುವ ಇಬ್ಬರಿಗೆ	"	"	— 8 ರೂ.
ದೇವರಿಗೆ ದರ್ಪಣ ಹಿಡಿಯುವವನಿಗೆ	"	"	— $\frac{1}{2}$ ರೂ.
ತೋಮಾಲ ಸೇವೆಗಾಗಿ ಇರುವ ಒಬ್ಬಳಿಗೆ ತಿಂಗಳಿಗೆ			— 2 ರೂ.

ಹೀಗೆ ಸುರಪುರ ಸಂಸ್ಥಾನದಿಂದ ಸಂಬಳ ಪಡೆಯುತ್ತಿದ್ದ ವೇಣುಗೋಪಾಲಸ್ವಾಮಿ ದೇವಾಲಯದ ಸಿಬ್ಬಂದಿಯು ಸಂಪೂರ್ಣ ತಿರುಪತಿಯ ಮಾದರಿಯನ್ನೇ ಅನುಕರಿಸಿದೆ. ಅಲ್ಲದೆ ಪುರಾಣಿಕರ ಮೇಲಾಧಿಕಾರಿಯಾಗಿದ್ದ ಪಾರುಪತ್ಯಗಾರ ರಾಮಾನುಜನೆಂಬಾತನಿಗೆ ತಿಂಗಳಿಗೆ 5 ರೂ. ಸಂಬಳ ಮತ್ತು ಮುಡಬೂಳ ಗ್ರಾಮದಲ್ಲಿ 60 ಬಿಘ ಭೂಮಿ, ಹಾರನಗೇರಿಯಲ್ಲಿ 60 ಬಿಘ ಭೂಮಿ, ಶಿಬ್ಬಕೇರಿಯಲ್ಲಿ 62 ಬಿಘೆ ಗದ್ದೆಯನ್ನೂ ಇನಾಮು ಹಾಕಿ ಕೊಡಲಾಗಿತ್ತು. ಮುಜುಮದಾರನಾಗಿದ್ದ ವನದುರ್ಗದ ಭೀಮಪ್ಪನು ದೇವಾಲಯದ ಎಲ್ಲಾ ಲೆಕ್ಕಪತ್ರ ಇಡುವ ಕರಣಿಕನಾಗಿದ್ದ. ಈತನಿಗೆ

ತಿಂಗಳಿಗೆ 5 ರೂ. ವೇತನ ನೀಡಿ 50 ಬಿಘೆ ಭೂಮಿಯನ್ನು ವನದುರ್ಗದಲ್ಲೇ ಇನಾಮು ಎಂದು ನೀಡಲಾಗಿತ್ತು. ಗಮನಾರ್ಹ ಸಂಗತಿಯೆಂದರೆ 'ದೇವರ ಉತ್ಸವಾದಿಗಳಲ್ಲಿ ಆರತಿ, ಕುಂಭ ಇನ್ನಿತರ ಕಾರ್ಯಗಳಿಗೆ ದೊಡ್ಡ ಲಕ್ಷ್ಮಸಾನಿ ಎಂಬ ಪಾತ್ರದವಳನ್ನು ನೇಮಿಸಲಾಗಿತ್ತು. ಇವಳಿಗೆ ಕೊಳ್ಳೂರಿನಲ್ಲಿ 60 ಬಿಘೆ, *ಶಿರವಾಳಹಳ್ಳಿ* 60 ಬಿಘೆ ಜಮೀನನ್ನು ಇನಾಮು ಹಾಕಲಾಗಿತ್ತು. ಅಲ್ಲದೆ ಮಹಾನವಮಿಗೆ ಸೀರೆ, ಕುಪ್ಪಸಗಳನ್ನು ಸಹ ಸಂಸ್ಥಾನದಿಂದ ಇವಳಿಗೆ ಕೊಡಲ್ಪಡುತ್ತಿತ್ತು. ದೇವಾಲಯದ ಖರ್ಚುವೆಚ್ಚಕ್ಕಾಗಿ ಸಂಸ್ಥಾನವು ಶಿಬ್ಬಕೇರಿ, ಹಾರಣಗೇರಿ, ಹತ್ತಿಗೂಡೂರು, ಹರವಾಳ, ಹದನೂರ ಗ್ರಾಮಗಳನ್ನು ಬಿಟ್ಟುಕೊಟ್ಟಿತ್ತು[58] ಮತ್ತು ಇವುಗಳ ಮೇಲಿನ ತೆರಿಗೆ ಹಾಕದೆ ಕಂದಾಯ ರಹಿತ ಹಳ್ಳಿಗಳೆಂದು ಘೋಷಿಸಲಾಗಿತ್ತು.

ತಿರುಪತಿಯ ಎಲ್ಲಾ ಪದ್ಧತಿಯನ್ನು ಅನುಸರಿಸಿದ ಸುರಪುರದವರು ದೇವಾಲಯದಲ್ಲಿ ವೆಂಕಟರಮಣ ವಿಗ್ರಹ ಇರಿಸದೆ ವೇಣುಗೋಪಾಲ ಸ್ವಾಮಿಯನ್ನು ಏಕೆ ಪ್ರತಿಷ್ಠಾಪಿಸಿದರೆಂದು ಒಂದು ಪ್ರಶ್ನೆ ಬರುತ್ತದೆ. ಶ್ರೀಕೃಷ್ಣನನ್ನು ಎತ್ತಿಕೊಳ್ಳಲು ರಾಮಾನುಜರೆ ಕಾರಣ. ಗರ್ಭಗುಡಿಯಲ್ಲಿ ರಾಮ, ಕೃಷ್ಣ, ನೇರುವುದಕ್ಕೆ ಮತ್ತು ರಾಮಪರಿವಾರದ ಜಾನಕಿ, ಕೃಷ್ಣ, ರುಕ್ಮಿಣಿ, ಲಕ್ಷ್ಮಣ, ಸುಗ್ರೀವ, ಹನುಮಂತ, ಅಂಗದ ವಿಗ್ರಹಗಳೆಲ್ಲ ಆಸೀನವಾಗುವಲ್ಲಿ ರಾಮಾನುಜರ ದೂರದೃಷ್ಟಿ ಕಾಣುತ್ತೇವೆ.[59] ಆರ್ಯ-ದ್ರಾವಿಡ ಸಂಗಮ ಸ್ವರೂಪವಾಗಿ ಸಂಸ್ಥಾನವು ಬಾಲಗೋಪಾಲನನ್ನೇ ಆಯ್ಕೆ ಮಾಡಿಕೊಂಡಿತು ಇದಕ್ಕೆ ನಗರನಾಡಿನಲ್ಲಿ ಮೊದಲಿನಿಂದಲೂ ಇದ್ದ ಆಚರಣೆಯೂ ಕಾರಣವಿತ್ತು. ದೇವಪುರ, ವಾಗಿನಗೇರಿ ಪರಿಸರದ ಊರುಗಳಲ್ಲಿ ಸುರಪುರ ಸ್ಥಾಪನೆಗಿಂತಲೂ ಪೂರ್ವದಲ್ಲೇ ಆರಾಧಿಸಲ್ಪಟ್ಟ ಸಂಗತಿ ಶೋಧಿಸಲಾಗಿದೆ. ಅಲ್ಲದೆ ಶ್ರೀರಾಮನವಮಿ, ಕೃಷ್ಣಾಷ್ಟಮಿ ಉತ್ಸವಗಳು ಆರಂಭವಾದವು.

(3) ಪಾತ್ರದವರು / ದೇವದಾಸಿಯರು:

ವಿಜಯನಗರದ ದೊರೆ ಅಚ್ಯುತದೇವರಾಯನು ತಿರುಪತಿ ವೆಂಕಟರಮಣ ದೇವಾಲಯದ ಸೇವೆಗೆ ದೇವದಾಸಿಯರನ್ನು ಮೊದಲಬಾರಿಗೆ ಗಂಟುಹಾಕಿದ. ದೇವರಿಗೆ ಹಾಗೂ ದೇವರ ಉತ್ಸವಗಳಲ್ಲಿ

58. ಸು.ಸಂ.ಇ. ಪು. 103-4.
59. ಎಸ್.ಕೆ. ರಾಮಚಂದ್ರರಾಯ ತಿರುಪತಿ ತಿಮ್ಮಪ್ಪ ಪು. 274.

ಸಂಗೀತ, ನೃತ್ಯ, ಸೇವೆಸಲ್ಲಿಸುವುದೇ ಇವರ ಮುಖ್ಯ ಕರ್ತವ್ಯ, ಇವಳ ಕುಪ್ಪಾಯಿಯ ಮಗಳು ಮುದುಕುಪ್ಪಾಯಿ. ಇಲ್ಲಿಯ 'ತಿರುವೀಧಿಸಾನಿಯರು' ದೇವದಾಸಿಯ ಇನ್ನೊಂದು ರೂಪ. ವೆಂಕಟಪಲ್ಲಿ ಎಂಬುವವಳಿದ್ದಳು. ಅಚ್ಯುತದೇವರಾಯನ ರಸಿಕತೆಯಿಂದ ಇವರ ಸಂಖ್ಯೆ ಬೆಳೆಯಿತು ಎನ್ನುವಲ್ಲಿ ದೇವದಾಸಿಯರ ಅಂಗಭೋಗ ಆಗಲೇ ಆರಂಭವಾಗಿತ್ತೆಂದು ತೋರುತ್ತದೆ. ಬ್ರಹ್ಮೋತ್ಸವ ಮುಂತಾದ ಸಮಾರಂಭಗಳಿಗೆ ತಪ್ಪದೆ ಹಾಜರಿರುತ್ತಿದ್ದ ತಿರುವೆಂಕಟ ಮಾಣಿಕ್ಯಂ, ಚಿಕ್ಕಮಿಸವಾಯಿ, ಗೋವಿಂದಸಾನಿ, ಬೆಜ್ಜಮ್ಮ, ಮಲ್ಲಕ್ಕನ ಶಿಲ್ಲಿ, ಶಣ್ಬಿಕವೆಂಗು, ನಾಗಸಾನಿ, ಶಿವ್ವಸಾನಿ, ಎಕಲ್ಯ, ಸಾಧ್ವಿ ದೇವದಾಸಿಯರ ಹೆಸರುಗಳನ್ನು ತಿರುಪತಿಯ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.[60]

ತಿರುಪತಿ ತಿಮ್ಮಪ್ಪನನ್ನೇ ತಮ್ಮ ಆರಾಧ್ಯ ದೈವವೆಂದು ಆರಾಧಿಸುತ್ತಿದ್ದ ಸುರಪುರದ ದೊರೆಗಳು ತಮ್ಮ ಸಂಸ್ಥಾನದ ವೇಣುಗೋಪಾಲಸ್ವಾಮಿ ಉತ್ಸವಾದಿಗಳಲ್ಲಿ ದೊಡ್ಡ ಲಕ್ಷ್ಮಸಾನಿ[61] ಎಂಬುವವಳನ್ನು ನೇಮಿಸಿಕೊಂಡಿದ್ದರು.

'ದೇವರು–ಧರ್ಮ–ದೇವದಾಸಿ' ಈ ಮೂರು ಮುಖಗಳು ಅನ್ಯೋನ್ಯ ಸಂಬಂಧ ಹೊಂದಿವೆ. ಮಕ್ಕಳನ್ನು ದೇವರಿಗೆ ದಾಸಿಯಾಗಿ ಮಾಡುವ ಧರ್ಮ ತಲೆತಲಾಂತರದಿಂದ ನಡೆದು ಕೊಂಡು ಬಂದಿದೆ. ಇವರನ್ನು ಭಿನ್ನ ಹೆಸರುಗಳಲ್ಲಿ ಇಂದು ವ್ಯಾಖ್ಯಾನಿಸುತ್ತಿದ್ದೇವೆ. ಪಾತ್ರದವಳು ಸೂಳೆ, ಬಸವಿ, ಜೋಗತಿ ಎಂಬಿತ್ಯಾದಿ ಪದಗಳು[62] ದೇವದಾಸಿ ಅರ್ಥಕ್ಕೆ ಸಂವಾದಿಯಾಗಿ ಬಳಸುವುದು ಸಮಂಜಸವಲ್ಲ ಇವರ ಕಸುಬು ಒಂದೇ ಆಗಿರಬಹುದು. ಆದರೆ ನಿಲುವು ಭಿನ್ನವಿರುವುದರಿಂದ ಇವರನ್ನು ವಿವಿಧ ರೀತಿಯಲ್ಲಿ ವಿಶ್ಲೇಷಿಸಬೇಕು.[63]

ಪಾತ್ರ ಹಾಕುವವಳನ್ನು ಜನಪದರು ಪಾತ್ರದವಳೆಂದು ಕರೆದರು. ದೇವರೆದುರು ಸಂಗೀತ, ನೃತ್ಯ ಸಾದರಪಡಿಸುವುದೇ ಇವಳ ಮುಖ್ಯ ಉದ್ಯೋಗ. ಸಂಗೀತ, ನೃತ್ಯ, ಕಲೆ ಅಂಗಸೌಂದರ್ಯ ಇವು ಇವಳ ಬದುಕಿನ ಮುಖ್ಯ ಆಕರ್ಷಣೆಗಳಾದವು. ಮಂದಿರದ ಆಡಳಿತ ಮಂಡಳಿಂದ ನೇಮಿಸಲ್ಪಟ್ಟ

---

60. ಅದೇ ಪು. 164.
61. ಸು.ಸಂ. ಇ.ಪು. 104.
62. ಕಮಲಾಹಂಪನಾ ಲೇಖನ ದೇವರು–ಧರ್ಮ–ದೇವದಾಸಿ (ಹಂತಿರಿ) ಪು. 553.
63. ಬಿ.ಎಸ್. ವೆಂಕಟಲಕ್ಷ್ಮಿ ಲೇಖನ ದೇವದಾಸಿ ಪದ್ಧತಿ (ಸಾಧನೆ) 1975, ಪು. 131.

ಇವಳನ್ನು ದೇವರ ಎಲ್ಲಾ ಸೇವೆಗೂ ಬಳಸಿಕೊಳ್ಳಲಾಗುತ್ತಿತ್ತು. ಇದರಿಂದ ಇವರು ದೇವಾಲಯದ ಅಂಗವಾಗಿದ್ದರು.[64] ಇವರಲ್ಲಿ ಕಾಣುವ ಎರಡು ವ್ಯತ್ಯಾಸಗಳೆಂದರೆ 'ದೇವದಾಸಿ ಮತ್ತು ಪತ್ರ ಪಾತ್ರದವಳನ್ನು ಅರಸರು ನೇಮಿಸಿದ್ದರು. ಆದರೆ ಬಸವಿ, ಸೂಳೆ, ಜೋಗತಿ ಮುಂತಾದ ಇಂದಿನ ಪದಗಳು ವೈಯಕ್ತಿಕ ಹರಕೆಗೆ ಒಳಪಟ್ಟವುಗಳು. ದೇವದಾಸಿಯರು ನೃತ್ಯ, ಕಲೆ, ಸಂಗೀತವನ್ನೇ ತಮ್ಮ ಜೀವನದ ಅವಿಭಾಗ್ಯ ಅಂಗವಾಗಿಸಿಕೊಂಡರೆ, ಬಸವಿಯರಿಗೆ ಇದಾವುದರ ಅವಶ್ಯಕತೆಯಿರಲಿಲ್ಲ.[65] ಸಂಸ್ಥಾನದಲ್ಲಿ ಸಹ ಮೊದಮೊದಲು ದೇವದಾಸಿ, ಪಾತ್ರದವಳನ್ನು ದೇವರ ಸೇವೆಗಾಗಿ ನೇಮಿಸಿಕೊಂಡ ಆಳಿತವರ್ಗವು ತರುವಾಯ ಅವಳನ್ನೇ ಭೋಗಿಸಲು ಕೆಟ್ಟ ಪರಂಪರೆ ಆರಂಭಿಸಿತು. ಇದಕ್ಕೆ ಸ್ಪಷ್ಟ ಉದಾಹರಣೆ ನಾಲ್ವಡಿ ವೆಂಕಟಪ್ಪ ನಾಯಕನು ಮಾಡಿಕೊಂಡ ಮೊದಲ ಮದುವೆಯ ತಾಳಿ ಬಂಧನದ ಹೆಂಡತಿ. ಕಾರಣವಿಷ್ಟೆ, ದೇವದಾಸಿ ಅಥವಾ ಪಾತ್ರದವಳನ್ನು ಬಸವಿಯಾಗಿ ಬೆಳೆಸಿದ್ದು ಸುರಪುರ ಸಂಸ್ಥಾನದಲ್ಲೂ ಕಾಣುತ್ತೇವೆ ಎಂಬುದು. ಮೂಲತಃ ಅವರು ಸೂಳೆಯರಾಗಿರುವುದಿಲ್ಲವೆಂಬುದೆ ಇದರ ಸತ್ಯ. ಸಿರಿವಂತ, ಅನುಕೂಲವಂತ ಮನೆತನದ ಮೇಲಜಾತಿಯವರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ವರ್ಗದವರ ಹೆಣ್ಣು ಮಕ್ಕಳು ಈ ಅನಿಷ್ಟ ಪದ್ಧತಿಗೆ ಒಳಗಾಗದಂತೆ ಮೇಲ್ವರ್ಗ ಎಚ್ಚರಿಕೆ ವಹಿಸಿತ್ತು[66] ಎನ್ನುವ ಮಾತು ಸುರಪುರ ಸಂಸ್ಥಾನಕ್ಕೂ ಅನ್ವಯಿಸುತ್ತದೆ.

<u>ಮುಸ್ಲಿಂ ಮತ ಮತ್ತು ಮಸೀದೆ :</u>

ಸಂಸ್ಥಾನದ ಮೇಲೆ ಹತೋಟಿ ಪಡೆದಿದ್ದ ಮೂರು ಮುಖ್ಯ ಚಕ್ರವರ್ತಿಗಳು ಮುಸ್ಲಿಂರೆ ಆಗಿದ್ದರು. ಆದಿಲಷಾಹಿ, ಮೊಘಲ್ ಮತ್ತು ಹೈದ್ರಾಬಾದ ನಿಜಾಮರೆ ಅವರು. ಇವರೆಲ್ಲ ತಮ್ಮ ಓರ್ವ ಸರದಾರನನ್ನು ಸದಾ ನಗರಗಡ್ಡೆಯಲ್ಲಿ ಇಟ್ಟಿರುತ್ತಿದ್ದರು. ಜೊತೆಗೆ ಹಲವಾರು ಮುಸ್ಲಿಂ ಕುಟುಂಬಗಳು ಇಲ್ಲಿಯೇ ಬೆರೆಯುವಂತೆ ಮಾಡಿದ್ದರು. ಆಗ ಮಸೀದೆಗಳ ಅವಶ್ಯಕತೆ ಅಗತ್ಯವಾದಾಗ ಸಂಸ್ಥಾನದ ಅರಸರು ಹಲವಾರು ಮಸೀದೆಗಳನ್ನು ಕಟ್ಟಿಸಿ ಕೊಡುವ ಮೂಲಕ ಮುಸಲ್ಮಾನ ಧರ್ಮಕ್ಕೂ ಆಶ್ರಯ ನೀಡುವಲ್ಲಿ ಹಿಂದೆ ಉಳಿದಿಲ್ಲವೆಂದು ಸಾಬೀತುಪಡಿಸಿದರು. ಮುಮ್ಮಡಿ ಪಾಮನಾಯಕನು ಮುಸ್ಲಿಂ ಮೌಲ್ವಿಗೆ ಗ್ರಾಮವೊಂದನ್ನು ದಾನವಾಗಿ ಕೊಟ್ಟ ಬಗ್ಗೆ ಉಲ್ಲೇಖವಿದೆ.

<u>(4) ದಾಸರು</u>:

ಸಂಸ್ಥಾನದ ದೇವರ ಸೇವೆಯಲ್ಲಿ ಶ್ರಮವಹಿಸಿದ ಇನ್ನೊಂದು ಮಹತ್ವದ ಬಳಗವೆಂದರೆ 'ದಾಸರು'. ಸಂಸ್ಕೃತದ 'ದಾಸ' ಪದವು ಸೇವಕ ಅರ್ಥ ಸೂಚಿಸುತ್ತದೆ. ದಾಸರ ಮೂಲದಬಗ್ಗೆ

64. ಮ.ಗು. ಬಿರಾದಾರ ಲೇಖನ ಪಾತ್ರದವರು (ಜನಪದ ಸಾಹಿತ್ಯದರ್ಶನ ಭಾಗ6) 1989 ಪು.76.
65. ಅದೇ ಪು. 678
66. ಕಮಲಾ ಹಸನ್ ಲೇಖನ ದೇವರು–ಧರ್ಮ–ದೇವದಾಸಿ (ಹರತಿಸಿರಿ) ಪು. 552.

ಅನೇಕರು ಹಲವು ನಿಲುವಿನಲ್ಲಿ ಅರ್ಥೈಸಿದ್ದಾರೆ. ಆರ್ಯರ ಆಕ್ರಮಣವನ್ನು ಪ್ರತಿಭಟಿಸಿದ 'ದಸ್ಯು' ಗಳೇ ದಾಸರೆಂದು, ಕಾಪು, ಬಲಜ, ಕುರುಬ, ಬೋಯ ಜಾತಿಯ ಸಂಗಮದಿಂದ ಆದದ್ದು ದಾಸ ಜನಾಂಗವೆಂದು ಹೇಳಿದ್ದಾರೆ. ವೈಷ್ಣವ ಬ್ರಾಹ್ಮಣರ ಕೆಳಗಿನ ಸೇವಕರಾದ ಇವರು ಬ್ರಾಹ್ಮಣೇತರರು ಎಂಬುದು ಮಾತ್ರ ವಿಚಾರಾರ್ಹ. ವಿಜಯನಗರ ಸಾಮ್ರಾಜ್ಯದ ಪರಿಸರದಲ್ಲಿ ಬಂದ ದಾಸ ಪಂಥಕ್ಕೂ ಈ ದಾಸರಿಗೂ ವ್ಯತ್ಯಾಸವಿದೆ. ಕೆಲವೆಡೆ ಬೇಡ, ಬಣಜಿಗ, ಕುರುಬ, ಒಕ್ಕಲಿಗ, ಸಾಲೆ, ತಿಗಳ, ಗೊಲ್ಲ, ಬೆಸ್ತ, ಒಡ್ಡ, ಹೊಲೆಯ ಮತ್ತು ಮಾದಿಗ ಜಾತಿಯ ಮೂಲದಿಂದ ಬಂದವರು[67] ದಾಸರಾಗಿದ್ದಾರೆ. ಇವರನ್ನೇ ಗಲ್ಲುದಾಸರು, ತಿರುಗುದಾಸರು, ಗಂಡುದಾಸರು, ತಿರುಮಲದಾಸರು, ಬ್ಯಾಡದಾಸರು, ಹೊಲೆದಾಸರು, ದಂಡಿಗೆದಾಸರು, ಗರುಡಗಂಬದಾಸರು, ಕುಮಾರದಾಸರು, ಗೋಪಾಲದಾಸರು, ದೊಂಬದಾಸರು, ಜಿನದಾಸರೆಂದು ಮುಂತಾಗಿ[68] ವರ್ಗೀಕರಿಸಬಹುದು. ಆದರೆ ಸುರಪುರ ಸಂಸ್ಥಾನದಲ್ಲಿ ತಿರುಪತಿ ತಿಮ್ಮಪ್ಪನ ಮಹಿಮೆಯನ್ನು ಬಣ್ಣಿಸುತ್ತ, ಆತನ ಸೇವೆಯಲ್ಲಿ ನಿರತರಾದ ಬ್ರಾಹ್ಮಣೇತರ ದಾಸ ವರ್ಗವಿತ್ತು. ಶ್ರೀವೈಷ್ಣವ ಸಂಪ್ರದಾಯವನ್ನು ಸ್ವೀಕರಿಸಿದ ಸಂಸ್ಥಾನವು ತನ್ನ ಜನತೆಯ ದೈವಾರಾಧನೆಗೆ ಇಂಥ ದಾಸರ ನೇತೃತ್ವ ನೀಡಿತ್ತು. ಆದರೆ ದೊರೆಗಳು ಮಾತ್ರ ಬ್ರಾಹ್ಮಣ ವರ್ಗದ ದಾಸರಿಂದಲೆ ಅರ್ಚನಾದಿಗಳನ್ನು ನೆರವೇರಿಸಿಕೊಳ್ಳುತ್ತಿದ್ದರು. ಈ ದೃಷ್ಟಿಯಿಂದ ಸಂಸ್ಥಾನದಲ್ಲಿ ಧಾರ್ಮಿಕ ಉತ್ಸವ, ಉಪವಾಸ, ವ್ರತಗಳ ಆಚರಣೆಯಲ್ಲಿ ದೊರೆಗಳು ದ್ವಂದ್ವ ನೀತಿ ಅನುಸರಿಸಿ ತಮ್ಮ ಜಾತಿಯಲ್ಲಿಯೇ ಶ್ರೇಣಿಗಳನ್ನು ಸೃಷ್ಟಿಸಿಕೊಂಡರು. ದಾಸ ಸಮಾಜದ ದುರ್ಬಳಕೆ ಮತ್ತು ಬೇಡ ಜಾತಿಯಲ್ಲಿಯೇ ಕೆಳವರ್ಗವನ್ನಾಗಿ ಸೀಳುವಲ್ಲಿ ಸ್ವತಃ ಪುರೋಹಿತ ವರ್ಗವೆ ನಾಡಿನ ಒಡೆಯರಿಗೆ ಗಮನಸೆಳೆದಿದ್ದರೆನ್ನಲು ಸಾಕಷ್ಟು ಆಧಾರಗಳಿವೆ. ಸಂಸ್ಥಾನದಲ್ಲಿ ವೆಂಕಟರಮಣನ ಭಕ್ತರ ಸಂಖ್ಯೆಯೇ ಸಿಂಹಪಾಲು ಇದ್ದು ಪ್ರಯುಕ್ತ ದಾಸರ ಅವಶ್ಯಕತೆ ಬಹಳಷ್ಟಿತ್ತು. ಶಂಖ, ಜಾಗಟೆ, ಗಂಟೆ, ಭವನಾಶಿ, ಭಾಂಕಿ, ಗರುಡಗಂಬ, ಆಂಜನೇಯ ಮೂರ್ತಿ, ಪೇಟ, ಹಣೆಯ ಮೇಲೆ ಮೂರು ನಾಮ, ಗೋಪಾಳಪುಟ್ಟಿ ಮುಂತಾದ ಶ್ರೀವೈಷ್ಣವ ಚಿಹ್ನೆಗಳನ್ನು ಹೊತ್ತ ದಾಸರೆ ಸಂಸ್ಥಾನದ ಸಾಮಾನ್ಯ ಬೇಡರಿಗೆ ಅರ್ಚಕ ವರ್ಗದವರಾಗಿದ್ದರು. ಗೋಪಾಳಪುಟ್ಟಿಗೆ ಪೂಜಿ

---

67. ಬಿ.ವಿ. ಗುಂಜೆಟ್ಟಿ. ಲೇ. ದಾಸರು (ಜನಪದ ಸಾಹಿತ್ಯದರ್ಶನ ಸಂಪುಟ 6) ಪು. 86.
68. ಅದೇ ಪು. 87.

ನಲ್ಲಿಸಿ, ಗರುಡಗಂಬಕ್ಕೆ ಎಡೆ ಹಾಕಿ ನಮಸ್ಕಾರ ಮಾಡುವ ಪದ್ಧತಿ ಬೇರದು. ಆಗ ದಾಸರು ಶಂಕ ಊದಿ, ಜಾಗಟೆ ಬಾರಿಸಿ ವೆಂಕಟರಮಣನ ನಾಮ ಸ್ಮರಣೆ 'ಗೋವಿಂದಾ ' ಗೋ' ಎಂದು ಮಾಡುತ್ತಿದ್ದನು. ಸಂಸ್ಥಾನದ ಅರಮನೆಯಲ್ಲಿಯ ಅರ್ಚನಾ ಕಾರ್ಯಕಲಾಪಗಳಿಗೆ ಇಂಥವರ ಸೇವೆ ಅನರ್ಹವಾಗಿತ್ತು. ಯಾಕೆಂದರೆ ಸಮಾಜದಲ್ಲಿ ಇವರು ಕಿರಿಯ ವರ್ಗ, ಮೇಲ್ವರ್ಗದ ಬ್ರಾಹ್ಮಣ ದಾಸರೆ ಅಲ್ಲಿಯ ಪೂಜಾ ಪದ್ಧತಿ ನಿರ್ವಹಿಸುತ್ತಿದ್ದರು.

(4) ಶರಣರು:

ಸಂಸ್ಥಾನದ ಆಳ್ವಿಕಾವಧಿಯಲ್ಲಿ ಬದುಕಿ ಬಾಳಿದ ಅನೇಕ ಅನುಭಾವಿಗಳು ಧರ್ಮದ ನಿಜ ತಿರುಳನ್ನು ನಡೆದು ತೋರಿಸಿದಾರೆ. ನೈತಿಕ ನೆಲೆಗಟ್ಟಿನ ಮೇಲೆ ಸಮಾಜ ನಿರ್ಮಾಣವಾಗಬೇಕೆಂದು ಸಂಸ್ಥಾನದುದ್ದಕ್ಕೂ ಅಲೆದಾಡಿದಾರೆ. ಸಂಸ್ಥಾನದಲ್ಲಿಯ ವೀರಶೈವ ಮತಾನುಯಾಯಿಗಳಿಗೆ ಈ ಶರಣರು ಹಾಕಿದ ಸಂಪ್ರದಾಯ ಅನುಕರಣೀಯವೆನಿಸಿತು . ಆಗ ಸಂಸ್ಥಾನದ ದೊರೆಗಳು ಸಹ ಇವರ ಕಾರ್ಯಕ್ಷೇತ್ರಕ್ಕೆ ಮತ್ತು ಕಲ್ಯಾಣ ಕಾರ್ಯಗಳಿಗೆ ಆಶ್ರಯ ನೀಡಿದರು.

ಕೊಡೆಕಲ ಬಸವಣ್ಣ:

ಮಧ್ಯಕಾಲೀನ ಕರ್ನಾಟಕದ ಇತಿಹಾಸದಲ್ಲಿ ಹೊಸ ಅಧ್ಯಾಯ ಸೃಷ್ಟಿಸಿದ ಶರಣ ಕೊಡೆಕಲ ಬಸವ. ಕ್ರಿ.ಶ. 1589ರಲ್ಲಿ ರಚಿತವಾದ ನಂದಿ ಆಗಮ ಲೀಲೆಯಲ್ಲಿ ಈ ಬಸವನ ಚರಿತ್ರೆ ಬಿಂಬಿಸಲಾಗಿರುವುದರಿಂದ ಈತ ಕ್ರಿ.ಶ. 1480ರಲ್ಲಿ ಬಾಳಿರಬೇಕು. ಮೂಲತ: ವಿಜಯನಗರದ ಪರಿಸರದಲ್ಲಿ ಬೆಳೆದ ಈ ಬಸವಣ್ಣ ಮುಸ್ಲಿಂ ದಾಳಿಗಳಿಗೆ ತತ್ತರಿಸಿದ ಕೊಡೆಕಲ ಪ್ರದೇಶಕ್ಕೆ ಬಂದು ತನ್ನ ಕಾರ್ಯಕ್ಷೇತ್ರ ಮಾಡಿಕೊಂಡ. ವಿಶೇಷವೆಂದರೆ ನಾಥಪಂಥ ಪ್ರಚಾರಮಾಡುತ್ತ ವೈಶಿಷ್ಟ್ಯಪೂರ್ಣವಾದ ಕಾಲಜ್ಞಾನ ವಚನಗಳನ್ನು ಸಾರಿದನೆಂದು ಡಾ. ಬಸವಲಿಂಗ ಸೊಪ್ಪಿಮಠರು ತಮ್ಮ ಮಹಾಪ್ರಬಂಧದಲ್ಲಿ ಅಭಿಪ್ರಾಯಪಟ್ಟಿದಾರೆ. ಮುಸ್ಲಿಂ ದಾಳಿಗಳನ್ನು ವ್ಯಕ್ತಪಡಿಸುವ 'ಉತ್ತರದಿಕ್ಕಿನಿಂದ ಉರಿಯೆದ್ದು ಬಂದೀತು, ಪಡುವಣ ಸಮುದ್ರ ಕಡಲುಕ್ಕಿ ಹರಿದೀತು'[69] ಎಂಬ ಅನೇಕ ವಚನಗಳನ್ನು ಕಾಣುತ್ತೇವೆ. ಅಲ್ಲದೆ ಅವರ ಆಳ್ವಿಕೆ ವಿಡಂಬಿಸುವ 'ಹುಲಿಯ ಗದ್ದುಗೆ ಮೇಲೆ ನರಿ ಬಂದು ಕುಳಿತಾವ' ಮಾತು ಮಾರ್ಮಿಕವಾಗಿ ಮೂಡಿವೆ. ಕೊಡೆಕಲ್ ಭಾಗದಲ್ಲಿ ಈತನ ಕಾರ್ಯಕಲ್ಯಾಣವನ್ನು ಉಂಡು ಬೆಳೆದ

---

69. ಡಾ. ವಿ. ಶಿವಾನಂದ ಲೇಖನ ಕಾಲಜ್ಞಾನ ಸಾಹಿತ್ಯ (ಜಾನಪದ ಸಾಹಿತ್ಯ ದರ್ಶನ ಭಾಗ 5) ಪು.291.

ಸಂಸಾ ಧನದ ಪೂರ್ವಜರು ಅನೇಕರಿದ್ದಾರೆ. ವಿಜಯನಗರದ ಪತನದ ಸಂದರ್ಭದಲ್ಲಿ ಕೊಡೆಕಲ್ ಪರಿಸರಕ್ಕೆ ಉಸಿರಾಗಿ ಬಂದವರು ಪ್ರಸ್ತುತ ಬಸವನೆಂದರೆ ಅತಿಶಯೋಕ್ತಿಯಲ್ಲ.

ತಿಂಥಣಿ ಮೌನೇಶ್ವರ :

ವಿಜಾಪೂರದ ಯೂಸೂಫ್ ಆದಿಲಷಾಹಿ ಅರಸನ ಕಾಲದಲ್ಲಿ ಹುಟ್ಟಿ ಬಂದ ಮೋನಪ್ಪಯ್ಯ ಸಮನ್ವಯ ಸಂಸ್ಕೃತಿಯ ಹರಿಕಾರ. ಮುಸ್ಲಿಂ ಸಂತರೆಲ್ಲ ಈತನನ್ನು ಖ್ವಾಜಾ ಅಮೀನದೀನರ ಅವತಾರವೆಂದೇ[70] ಆರಾಧಿಸುತ್ತಾರೆ. 'ಹುಟ್ಟಿದುದು ಗೋನಾಳ, ಕುರಹು ತೋರಿದುದು ವರವಿ, ಮೆರೆಯುವುದು ಲಿಂಗನಬಂಡಿ, ಸ್ಥಿರವಾದುದು ತಿಂಥಣಿ' ಎನ್ನುವ ಪಾನ ಮೌನೇಶ್ವರನ ಕಾರ್ಯಕ್ಷೇತ್ರದ ವ್ಯಾಪ್ತಿ ಸೂಚಿಸುತ್ತದೆ. ಅಲ್ಲದೆ ದೇವದುರ್ಗ, ಲಕ್ಷ್ಮೇಶ್ವರ, ವಿಜಾಪೂರ, ತಾವರಗೇರಿಗಳಲ್ಲಿ ಅನೇಕ ಪವಾಡ ಮಾಡಿ ವಿಜಾಪುರ ಬಾದಷಾಹನಲ್ಲಿ ಬೆಳಕು ನೀಡಿದನೆಂದು ತಿಳಿಯುತ್ತದೆ. ಹಿಂದು ಮುಸ್ಲಿಂ ಐಕ್ಯತೆಯ ಬೀಜ ಬಿತ್ತಿ ಸಂಸಾ ಧನಕರ್ತ್ಯಾ ಮತ್ತು ವಿಜಾಪೂರ ಆದಿಲಷಾಹಿಗಳ ಮಧ್ಯೆ ಮಧುರ ಬಾಂಧವ್ಯ ಏರ್ಪಡಿಸಿದ ಮಹಾನುಭಾವ. ಇದಕ್ಕೆ ಆತನ 'ಓಂ ಏಕಲಾಕ ಐಂಸಿಹಜಾರ ಪಾಸೋಫೀರ ಪೈಗಂಬರ್ ಮೌನದ್ದೀನ್ ಜತಾ ಪೈಗಂಬರ್ ಮೌನದ್ದೀನ್, ಕಾಶೀಪತಿ ಗಂಗಾಧರ ಹರಹರ ಮಹಾದೇವ' ಎಂಬ ಧೀನ್ ಘೋಷಣೆಯೇ ಸಾಕ್ಷಿ. ಹಿಂದು ಮುಸ್ಲಿಂ ಸಂಸ್ಕೃತಿ ಸಾಮರಸ್ಯದ ಧ್ಯೋತಕವಾದ ಈ ಉಸಿರು ಪಂಚಪೈಗಂಬರರ ಸ್ಮರಣೆ ಹಾಗೂ ಹಿಂದುಗಳ ಪುಣ್ಯಸ್ಥಳದ ಸ್ತುತಿ ಹೊಂದಿದೆ. ಮೋನಪ್ಪಯ್ಯ ಜೀವನ ವೃತ್ತಾಂತ ವಿವೇಚಿಸುವ ಡಾ.ಎಂ.ಎಂ. ಪಡಶೆಟ್ಟಿಯವರ ಮಹಾಪ್ರಬಂಧ ಈ ದೃಷ್ಟಿಯಿಂದ ಮೌಲ್ಯಪೂರ್ಣವೆನಿಸಿದೆ.

'ಬಸವ' ಮುದ್ರಿಕೆಯಲ್ಲಿ ರಚಿಸಿದ ಆತನ ಅನೇಕ ವಚನಗಳು ಸಾಮರಸ್ಯದ ಶಿಖರವನ್ನೇ ಸೂಚಿಸುತ್ತವೆ[71] ಮತ್ತು ಮುಸ್ಲಿಂ ಸುಬೇದಾರರ ಅಂದಿನ ಹಾವಳಿಯನ್ನು ಸೂಕ್ಷ್ಮವಾಗಿ ಟೀಕಿಸುತ್ತವೆ. 'ಅರ್ಜಿ ಕೇಳುವವರಿಲ್ಲ ಮರ್ಜಿಮಾನ್ಯಗಳಿಲ್ಲ' ವೆಂದು ವಿಡಂಬಿಸಿದ್ದಾನೆ; ಜೊತೆಗೆ ಜನತೆಯ ಅಳುನ್ನು ಇದರಲ್ಲಿ ತೋರಿಕೊಂಡಿದ್ದಾನೆ. ಕೊನೆಗೆ ಮುಸ್ಲಿಂ ಆಳ್ವಿಕೆಯ ದಾಳಿಗೆ ರೋಸಿ ಹೋಗಿ 'ಆಡು ಕಾಯುವ ಬುದ್ಧಿ ಅರಸುಗಳಿಗಿದ್ದರೆ ಈ ರೂಢಿಗಳು ಕೆಡುವವೇ ?' ಎಂದು ಪ್ರಶ್ನಿಸಿದ್ದಾನೆ

70. ದ್ಯಾಂಪುರ ಚೆನ್ನಕವಿ. ಶಿಹರಟ್ಟಿ ಫಕೀರೇಶ್ವರ ಪುರಾಣ, ಸಂಧಿ 35.
71. ಡಾ. ವಿ. ಶಿವಾನಂದ ಸರ್ಗನಾಡಿನ ಶಿವಶರಣರು ಪು. 42.

ಸಂಸ್ಥಾನದ ಪ್ರಮುಖ ಕೇಂದ್ರವಾದ ಗೋನಾಲ ಗ್ರಾಮವು[72] ಸುರಪುರದ ಪೂರ್ವ ದೊರೆಗಳಿಗೆ ಸ್ಫೂರ್ತಿ ತುಂಬಿದ ಮೋನಪ್ಪಯ್ಯನ ಕಾರ್ಯಕ್ಷೇತ್ರ.

ಷಣ್ಮುಖ ಶಿವಯೋಗಿ :

ಸಂಸ್ಥಾನದಲ್ಲಿ ಬೆಳಗಿದ ಇನ್ನೊಂದು ಶಿವಶರಣ ರತ್ನವೆಂದರೆ ಜೇವರ್ಗಿಯ 'ಷಣ್ಮುಖ ಶಿವಯೋಗಿಗಳು'. ಕ್ರಿ.ಶ. 1639ರಲ್ಲಿ ಜನಿಸಿದ ಷಣ್ಮುಖರಿಗೆ ಖಂಡೇಶ್ವರರು ಗುರುವಾಗಿ ದೊರೆತದ್ದೆ ಪುಣ್ಯ; ಕೀರ್ತಿಗೊಂದು ಕಿರೀಟ. ಬೆಳಗಾವಿಯಿಂದ ಕಲ್ಯಾಣಕ್ಕೆ ಹೊರಟಿದ್ದ ಖಂಡೇಶ್ವರರು ಜೇವರಗಿಯಲ್ಲಿ ಭಕ್ತರ ಭಕ್ತಿ ಆಗ್ರಹಕ್ಕೆ ಮಣಿದು ಉಳಿದರು. ಷಣ್ಮುಖರಿಗೆ ಅನುಭವದ ಅನುಗ್ರಹ ನೀಡಿದರು. ಮುಂದೆ ಶಿಷ್ಯನ ವಚನಕ್ಕೆ ಗುರುವೇ ಅಂಕಿತವಾದಾಗ ಷಣ್ಮುಖ ಶಿವಯೋಗಿಯೆನಿಸಿದ. ತಮ್ಮ 72 ವರ್ಷ ವಯದ ತುಂಬುದಜೀವನದುದ್ದಕ್ಕೂ ಸಂಸ್ಥಾನದ ತಾಂಬಾಳ, ನರಿಬೋಳಿ, ಮುದ್ದೇಬಿಹಾಳ, ಕೊಡಂಬಲಗಳಲ್ಲಿ ಸಂಚರಿಸಿ ಜನತೆಯ ಹೃದಯದಲ್ಲಿ ದಿವ್ಯಜ್ಯೋತಿ ಹೊತ್ತಿಸಿದರು. ಇದನ್ನು ಅರಿತ ಸುರಪುರದ ದೊರೆ ವೆಂಕಟಪ್ಪನಾಯಕ ಮತ್ತು ಮಂತ್ರಿ ನಿಷ್ಠೆಯ ವೀರಪ್ಪನವರು ಜೇವರ್ಗಿಯಲ್ಲಿ ಅವರಿಗಾಗಿ ಮಹಾಮಠವೊಂದನ್ನು ಕಟ್ಟಿಸಿಕೊಟ್ಟರು. ಅಲ್ಲದೆ ಸುರಪುರ ದರ್ಬಾರದಲ್ಲಿ ರಾಜಗೌರವ ನೀಡಿ ಸನ್ಮಾನಿಸಿದರು.

ಇಂಥ ಮಹಾತ್ಮನನ್ನು ಕುರಿತು 'ಗುರುಹಿಡಿದು ಕುರುಹು ಕಂಡರು, ಕುರುಹು ಹಿಡಿದು ಅರವು ಕಂಡರು, ಅರಹು ಹಿಡಿದು ಆಚಾರ ಕಂಡರು, ಆಚಾರ ಹಿಡಿದು ನಿಜವ ಕಂಡರು, ನಿಜವ ಹಿಡಿದು ಖಂಡೇಶ್ವರ ಲಿಂಗವನೊಡಗೂಡಿದರು' ಎಂಬ ಡಾ. ಶಿವಾನಂದರ ಮಾತು ಅನ್ವರ್ಥಕವಾಗಿದೆ.

ಸೊನ್ನದ ಸಿದ್ಧಲಿಂಗಯತಿ:

ಕ್ರಿ.ಶ. 17ನೇಶತಮಾನದ ಉತ್ತರಾರ್ಧದಲ್ಲಿ ಬದುಕಿದ್ದ ಸಿದ್ಧಲಿಂಗಯತಿಗಳು ಹಳ್ಳಿಗೆ ಏಕರಾತ್ರಿ, ಪಟ್ಟಣಕ್ಕೆ ಪಂಚರಾತ್ರಿ' ತತ್ವ ಹೊತ್ತು ಆಂಧ್ರದಿಂದ ಕಲ್ಯಾಣಕ್ಕೆ ಹೊರಟಿದ್ದರು. ಆಗ ಜೇವರಗಿ ತಾಲೂಕಿನ ಸೊನ್ನ ಗ್ರಾಮದ ಭಕ್ತರ ಮನೋಭಿವೃದ್ಧಿಗಾಗಿ ಶಿವಜ್ಞಾನ ನೀಡಲು ಅಲ್ಲಿಯೇ ಉಳಿದರು. ಕಂಡುಂಡ ಅನುಭವಗಳನ್ನೆಲ್ಲ ಇಜೇರಿ, ಬಿಳ್ವಾರ, ಯಾಲ್ನೂರ ಹಳ್ಳಿಗಳಲ್ಲಿ ಸಂಚರಿಸಿ

72. ಡಾ.ಎಂ.ಎಂ. ಪಡಶೆಟ್ಟಿ ಲೇಖನ ತಿಂಥಣಿ ಮೌನೇಶ್ವರ ಮತ್ತು ಅವರ ವಚನ (ನಗರನಾಡದರ್ಶನ) ಪು. 69.

ಹಾಡಿದರು. ಇದನ್ನು ಕಂಡ ಸುರಪುರ ಅರಸರು ಈ ಮಹಾತಪಸ್ವಿಯ ಪವಾಡಕ್ಕೆ ಮನಸೋತು ಮಠವೊಂದನ್ನು ಕಟ್ಟಿಸಿಕೊಟ್ಟರು. ಸೂರಾನ್ನ ಸುಕ್ಷೇತ್ರದ ಮೂಲಕವೇ ಲೋಕೋದ್ಧಾರ ಕಾರ್ಯ ಕೈಗೊಂಡ ಸಿದ್ಧಲಿಂಗಸ್ವಾಮಿಗಳ ಸಿದ್ಧಿ ಇಂದಿಗೂ ಸಂಸ್ಥಾನದಲ್ಲಿ ಜೀವಂತವಾಗಿದೆ.

<u>ರಾಮಪುರದ ಬೊಕ್ಕಪ್ಪಯ್ಯ:</u>

ಬೊಕ್ಕ, ಬೊಕ್ಕಪ್ಪ, ಬೊಕ್ಕಪ್ಪಯ್ಯ ಎಂಬಿತ್ಯಾದಿ ಹೆಸರುಗಳಿಂದ ಗುರುತಿಸಿಕೊಂಡ ಬೊಕ್ಕಪ್ಪನನ್ನು ದೇವದುರ್ಗದ ಅಮಾತೆಪ್ಪ ತನ್ನ 'ಕೈವಲ್ಯ ನವನೀತ' ಕೃತಿಯಲ್ಲಿ ಹೇಳಿಕೊಂಡಿದ್ದಾನೆ.[73] ಬಕ್ಕಪ್ಪನ ತತ್ವ ಸಮರ್ಥನೆ ಮತ್ತು 'ನಿಜಶರಣತ್ರಿವಿಧಿಯ' ಕೆಲವು ನುಡಿಗಳನ್ನು ಬಳಸಿಕೊಂಡಿದ್ದಾನೆ. ಕಡಕೋಳ ಮಡಿವಾಳಪ್ಪನವರ ಮೇಲೆ ಅತಿ ಪ್ರಭಾವ ಬೀರಿದ ಬಕ್ಕಪ್ಪನ ಹೆಸರಿನ ಬಗ್ಗೆ ಗುರುಬಸವಯ್ಯ ಅಮ್ಮಾಪೂರ ಅವರು ವಿಶೇಷ ರೀತಿಯಿಂದ ಅರ್ಥೈಸಿದ್ದಾರೆ. 'ಬಕ್ಕ'ವೆಂದರೆ ಹಲ್ಲಿಲ್ಲದವ, ಬೋಳು ತಲೆಯವನೆಂದರ್ಥ. ಹಲ್ಲು ಅಹಂಕಾರದ ಸಂಕೇತ. ಬೋಳು ತಲೆ ವಿರಕ್ತಿಯ ಲಕ್ಷಣ. ಹೀಗಾಗಿ ಬಕ್ಕಪ್ಪ ನಿರಹಂಕಾರಿ ಸನ್ಯಾಸಿಯಾಗಿದ್ದನೆಂದು ಅವರ ಅಭಿಪ್ರಾಯ. ಲೋಕಾನುಭವ, ಆತ್ಮಾನುಭವಗಳ ಸಂಗಮದಿಂದ 210 ತ್ರಿಪದಿಗಳನ್ನು ರಚಿಸಿದ್ದಾನೆ. ಸರಳ, ಸುಂದರ ಲೌಕಿಕ, ಪಾರಮಾರ್ಥಿಕ ಪ್ರಜ್ಞೆಯನ್ನು ಪ್ರತಿಯೊಂದು ಪದ್ಯದಲ್ಲೂ ಪೋಣಿಸಿದ್ದಾನೆ.

ಆರು ಚಕ್ರದೊಳು ಮೂರು ಮಂಟಪದೊಳು
ನವದ್ವಾರವಾಟ ಒಳಹೊರಗ ಆ ಲಿಂಗ
ಬೋರಿಡುತಾವ ನಿಜಶರಣ[74] ಎಂಬ ತ್ರಿಪದಿ ಮೇಲಿನ ಮಾತಿಗೆ ಸಾಕ್ಷಿಯಾಗಿಸುತ್ತದೆ.

ಆಧ್ಯಾತ್ಮಿಕ ಅಂತರಂಗ ಸಮೃದ್ಧವಾಗಿದ್ದು ಜನರಲ್ಲಿ ಹೊಸತನ ಮೂಡಿಸಲು ಪ್ರಯತ್ನಿಸಿದ್ದು ಕಂಡುಬರುತ್ತದೆ.

ಅಲ್ಲದೆ ಭಕ್ತಿ, ನೀತಿ, ಅಧ್ಯಾತ್ಮ, ಸಮತೆ, ಸ್ಮರಣಿ ಹಾಗೂ ಲಿಂಗಾಂಗ ಸಾಮರಸ್ಯದ ಭಜನೆ ಹಾಡುಗಳನ್ನು ಬರೆದಿದ್ದಾನೆ. ಇವು ಸದ್ಯ ಸಂಸ್ಥಾನದುದ್ದಕ್ಕೂ ಪ್ರಭಾವಪೂರ್ಣವಾಗಿ ಹಾಡಲ್ಪಡುತ್ತಿವೆ.

---

73. ಶಾಂತರಸ. ಎಡದೊರೆ ನಾಡಿನ ಅನುಭಾವಿ ಕವಿಗಳು.
74. ಪಿ.ವಿ. ಮಲ್ಲಾಪೂರ. ಲೇ. ರಾಮಪುರ ಬೊಕ್ಕಪ್ಪ (ಜಾನಪದ ಸಾಹಿತ್ಯದರ್ಶನ ಭಾಗ5) ಪು. 77.

" ದೇಹವ ಮರಿತಿದೆನ ಗೆಳದಿ । ದೇವನ ಅರಿತಿದೆನ
ದೇಹದ ಅರಿವು ನಮಗಿಲ್ಲ ಗೆಳದಿ

ನಿಂದೆ ಮಾಡುವರಲ್ಲ ಅವರಿಗೆ ಹೊರಳಿ ನೋಡುವದಿಲ್ಲ
ಹಂದಿಯ ಜನುಮ ಅವರಿಗೆ ಗೆಳದಿ
ದೇಶದೊಳಗ ನಮ್ಮ ವಾಸುಳ್ಳ ರಾಂಪೂರ
ಈಗ ಬಕ್ಕಪ್ಪನು ಹೇಳಿದ ಗೆಳದಿ "

ಎಂಬ ಅನೇಕ ಭಜನೆ ಹಾಡುಗಳಲ್ಲಿ ದೇಹ-ದೇವನ ಮಧ್ಯದ 'ಕೊಂಡಿ' ಪರಿಚಯಿಸುವುದನ್ನು ನೋಡುತ್ತೇವೆ. ಜೀವನದ ಏರಿಳಿತ, ಅಂತರಂಗ ಬಹಿರಂಗವನ್ನು ತಿಳಿಹೇಳುವ ತತ್ವಗಳು ತೀವ್ರ ಸಂವೇದನೆಗೆ ತರ್ಕ ಒಡ್ಡಿದವು. ವೀರಶೈವ ತತ್ವದ ಆಧರಣಿಗಳಾದ ಅಷ್ಟಾವರಣ, ಷಟ್‌ಸ್ಥಲ, ಪಂಚಾಚಾರ ವಿವೇಚನೆಯನ್ನು[75] ಬಕ್ಕಪ್ಪನ ಪದ್ಯಗಳಲ್ಲಿ ಭಾವನಾತ್ಮಕವಾಗಿ ಮೂಡಿವೆ. ಈತನ ಧಾರ್ಮಿಕ ತಿರುಳ ತರ್ಕಬದ್ಧ ಲಯಗಳಾಗಿವೆ.

<u>ಕಡಕೋಳ ಮಡಿವಾಳಪ್ಪ :</u>

ಇಮ್ಮಡಿ ವೆಂಕಟಪ್ಪನಾಯಕನ ಆಳ್ವಿಕೆಯಲ್ಲಿದ್ದ ಜನಪದ ಜಗದ್ಗುರು ಕಡಕೋಳ ಮಡಿವಾಳಪ್ಪ ಸಂಸ್ಥಾನದ ಜನತೆಗೆ ಧರ್ಮ ದೀಕ್ಷೆ ಕೊಟ್ಟ ಶರಣ. ಶಿವಶರಣ ಸಿದ್ಧಾಂತವನ್ನು ನಡೆದು ತೋರಿಸಿದ ತ್ಯಾಗಿ. ಚಿಣಮಗೇರಿಯ ಮಹಾಂತ ಶಿವಯೋಗಿಗಳು ನೀಡಿದ ದೀಕ್ಷೆ ಅವನ ಮೋಕ್ಷಕ್ಕೆ ಮಾರ್ಗವಾಯಿತು. ತಂದೆ ಜಂಗಮ, ತಾಯಿ ಗಾಣಿಗರಾಗಿದ್ದ ಮಡಿವಾಳಪ್ಪನವರಿಗೆ ಸಮಾಜದ ಎಲ್ಲಾ ಏರಿಳಿತ ಅರಿತು ಕೊಳ್ಳಲು ಕಾರಣವಾಯಿತು. ಸಮಾಜದ ಡೊಂಕನ್ನು ಕಟುವಾಗಿ ಟೀಕಿಸಲು ತನ್ನನ್ನು ತಾನೆ ಆಧಾರವಾಗಿಟ್ಟುಕೊಂಡರು. ಇವೆಲ್ಲ ಸಿದ್ಧಿ ಸಾಧನೆಗೆ ಶ್ರೀಶೈಲದಲ್ಲಿ ಕಂಡುಂಡ 12 ವರ್ಷದ ದೀರ್ಘ ಅನುಭವವೇ ಆಧಾರ. ಇದನ್ನೇ ಹಂಚುತ್ತಾ ನಡೆದ ಮಡಿವಾಳಪ್ಪನವರಿಗೆ ಸುರಪುರ ದೊರೆಗಳ ಭವ್ಯ ಸ್ವಾಗತ ಸಿಕ್ಕಿತು. ಕೆಂಭಾವಿ, ದಿಗ್ಗಿ, ನೈದಾಪೂರ ಮುಂತಾದ ಸಂಸ್ಥಾನದ ಗ್ರಾಮಗಳಲ್ಲಿ ಪುರಾಣ, ಪುಣ್ಯಕಥೆ, ಪ್ರವಚನದ ಅಮೃತ ಉಣಬಡಿಸಿದರು. ಆಗ ಸುರಪುರದ ದೊರೆಗಳು ಕಡಕೋಳ ಗ್ರಾಮದಲ್ಲಿ ಭೂಮಿಯನ್ನು ದಾನವಾಗಿ ನೀಡಿದರು.[76] ಸಂಸಾರವಿದ್ದರೂ ಸಂನ್ಯಾಸಿಯಾಗಿ, ಬಳಸಿದ್ದರೂ ಬ್ರಹ್ಮಚಾರಿಯಾಗಿ ಸಂಸ್ಥಾನಕ್ಕೆ ಅಪಾರ ಕೊಡುಗೆ ನೀಡಿದರು.

---

75. ಡಾ. ಶಿವಾನಂದ. ವಿ- ಸಗರನಾಡಿನ ಶಿವಶರಣರು. ಪುಟ-58.
76. ಎಸ್.ಎಸ್. ಬಾಣದ — ಜಾನಪದ ಸಾಹಿತ್ಯದರ್ಶನ ಭಾಗ-5.
ಲೇಖನ: ಕಡಕೋಳ ಮಡಿವಾಳಪ್ಪ. ಪುಟ-60.

ಅರಳಗುಂಡಿಗಿ ಶರಣಬಸವ :

ಮೊಂಡುಗೈ ವೆಂಕಟಪ್ಪ ನಾಯಕನ ಕಾಲಕ್ಕೆ ಉದಯಿಸಿ, ಮುಮ್ಮಡಿ ಪಾಮನಾಯಕನ ಆಳ್ವಿಕೆಯಲ್ಲಿ ಬೆಳೆದು ಬಾಳಿದ ಅರಳಗುಂಡಿಗಿ ಶರಣಬಸವ ಸಂಸ್ಥಾನದ ಇನ್ನೊಂದು ದಿವ್ಯಚೇತನ. ಶರಣ ಸಂಕುಲಕ್ಕೆ ಬತ್ತದ ಭಾವ ತುಂಬಿದವರು. ಕರಕೇರಿ ಶರಣ ಮುರಳಸಿದ್ಧರು ಇವರಿಗೆ ದೀಕ್ಷಾಗುರುವಾಗಿದ್ದರು. ಇದರ ಪರಿಣಾಮ ಬೆಳಗುಂಪಿ, ಬಸವಪಟ್ಟಣ ಕೋಲ್ಬಾಳ, ಅವರಾದಿ, ಪರತಬಾದಗಳಲ್ಲಿ ಸಂಚರಿಸಿ ಶಿವಜ್ಞಾನವನ್ನು ಬಿತ್ತಿ ಜನಜಾಗೃತಿಗೊಳಿಸಿದರು. ಬಡವರ ಕಷ್ಟನಷ್ಟಗಳಲ್ಲಿ ಸಮಪಾಲು ಪಡೆದರು. ಸುರಪುರ ಸಂಸ್ಥಾನದೊಂದಿಗೆ ಸದಾ ಸಂಪರ್ಕವಿಟ್ಟುಕೊಂಡಿದ್ದ ಶರಣಬಸವ ಕಲ್ಯಾಣದ ಹೆಬ್ಬಾಗಿಲು ಕಲಬುರ್ಗಿಗೆ ಹೋಗಿ ತಮ್ಮ ಕಾರ್ಯಕ್ಷೇತ್ರ ಹಿಗ್ಗಿಸಿಕೊಂಡರು.

ಶಹಪುರದ ಚರಬಸವ :

'ಬಸವ' ನೆಂಬ ಹೆಸರು ಬಹು ಜನರಿಗಿದೆ. ಕಲ್ಯಾಣದ ಬಸವಣ್ಣನ ತರುವಾಯ ವೀರಶೈವ ಪರಂಪರೆಯನ್ನು ಪುನರುತ್ಥಾನಗೊಳಿಸಿದವರಲ್ಲಿ ಕೊಡೇಕಲ್ ಬಸವಣ್ಣ ಹಾಗೂ ಶಹಪುರದ ಚರಬಸವ ಪ್ರಮುಖರು. ಸ್ಥಾವರವನ್ನು ಧಿಕ್ಕರಿಸಿ ಜಂಗಮವನ್ನು ಸ್ವೀಕರಿಸಬೇಕೆಂಬ ವೀರಶೈವರ ನಿಜನೀತಿಯ ಸೂಚನೆಯೇ 'ಚರ'. ಇಂಥ ಸಾಧನೆಯಲ್ಲಿ ಸಿದ್ಧಿಪಡೆದ ಶೀಲವಂತಯ್ಯ, ಅಮ್ಮವ್ವೆಯರ ಆದರ್ಶ ಪುತ್ರ ಅನವಾರ ಬಸವ.

ಚನ್ನವೀರ ಮಹಾಸ್ವಾಮಿಗಳ ಕ್ರಿಯಾದೀಕ್ಷೆಯು ಶಹಪುರದಲ್ಲಿ ಕಂತಿಮಠ ಸ್ಥಾಪನೆಗೆ ಪ್ರೇರೇಪಿಸಿತು.[77] ಪಂಚಕೋಶಗಳ ಪರಿಶೋಧನೆಯೇ ಪಂಚಕಂತಿಮಠ. ಅನುದಿನವೂ ಶಿವಾರ್ಚನೆ ಮಾಡುತ್ತ, ಬಟ್ಟೆ ಮಾರುವ ಕಾಯಕದಲ್ಲಿ ಶಿವನಿಷ್ಠೆ ಕಂಡುಕೊಂಡರು.[78] ಸಂಚರಿಸುವ ಮಾರ್ಗವೆ ಶಿವಮಾರ್ಗವಾಯಿತು. ಇದು ಸಂಸ್ಥಾನಕ್ಕೆ ಚರಬಸವ ತುಂಬಿಕೊಟ್ಟ ಪುಣ್ಯ.

ಆಂದೇಲ ಕರುಣೇಶ್ವರ :

ಸಿಂದಗಿಯ ಚಕ್ರಪ್ಪಯ್ಯನವರ ಸಮಕಾಲೀನರಾದ ಕರುಣೇಶ್ವರರು. ಕ್ರಿ.ಶ. 18ನೇ ಶತಮಾನದ ಉತ್ತರಾರ್ಧದಲ್ಲಿದ್ದವರು. ಜೇವರ್ಗಿಯಿಂದ 5 ಮೈಲು ದೂರವಿರುವ ಆಂದೇಲ

---

77. ರಸ್ತಾಪೂರ ಭೀಮಕವಿ – ಅಷ್ಟೋತ್ತರ ಶತನಾಮಾವಳಿ, ಪು–2.
78. ಈಶ್ವರಪ್ಪ ಉಮರಾಣಿ – ಶ್ರೀ ಚರಬಸವೇಶ್ವರ. ಪು–10.

(ಆನೆತರಿ ಆನೆದಿರಿ ಅನ್ನಂರಿ ಅಂದೇರಿ) ಎಂಬಲ್ಲಿ ಜನಿಸಿ, ಬಲ್ಲಮಗೇರಿ ಗುರುಲಿಂಗ ಶಿವಾಚಾರ್ಯನಿಂದ ದೀಕ್ಷೆ ಹೊಂದಿ, ಹೊನಗುಂಟ ಮೂಲಕ ಸಂಸ್ಥಾನದಲ್ಲಿ ಸಂಚಾರ ಮಾಡಿದರು. ಮುಂದನೂರಿನಲ್ಲಿ ಅನೇಕ ಪವಾಡ ಮಾಡಿದ ಕರುಣೇಶ್ವರ ವೀರಶೈವ ತತ್ವಸಿದ್ಧಾಂತವನ್ನು ಸಂಸ್ಥಾನದಾದ್ಯಂತ ಸಾರಿದರು.

1.. ವೀರಶೈವ ಮಠಗಳು :

ಕರ್ನಾಟಕದ ಸಂಸ್ಕೃತಿ ಸಂವರ್ಧನೆಯಲ್ಲಿ ವೀರಶೈವ ಮಠಗಳ ಪಾತ್ರ ಪ್ರಮುಖವೆಂಬುದು ಮರೆಯುವಂತಿಲ್ಲ.[79] ಅನ್ನದಾಸೋಹ, ಜ್ಞಾನದಾಸೋಹ, ಧರ್ಮದಾಸೋಹ ಇವುಗಳ ಮುಖ್ಯ ಗುರಿಯಾಗಿತ್ತು. ಅನುಭಾವಿಗಳಿಂದ ಅನುಭವ ಪಡೆಯಲು ಸಂಸ್ಥಾನದಲ್ಲಿ ಶರಣರಿಗೆಂದು ಮಂಟಪ ಬೇಕಿತ್ತು. ಸುರಪುರ ದೊರೆಗಳು ಕಟ್ಟಿಸಿದ ಆ ಮಂಟಪಗಳೇ ಮಠಗಳಾದವು. ವೀರಶೈವ ಧರ್ಮದ ದಿವ್ಯಜ್ಯೋತಿಯನ್ನು ಸಂಸ್ಥಾನದ ತುಂಬೆಲ್ಲ ಹೊತ್ತಿಸಿದ ಕೀರ್ತಿ ಮಂತ್ರಿಗಳಾದ ಕಡ್ಲಪ್ಪ ಮತ್ತು ವೀರಪ್ಪರಿಗೆ ಸಲ್ಲುತ್ತದೆ. ಸಂಸ್ಥಾನದ ಸಹಾಯದಿಂದ ಕಡ್ಲಪ್ಪನವರು 101 ಮಠಗಳನ್ನು ಕಟ್ಟಿಸಿದರೆಂದು ಐತಿಹ್ಯವಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ಸದ್ಯ ಗುರುತಿಸಲಾಗಿದೆ.[80]

1. ಹುಣಸಗಿ ಮಠ
2. ಬಳಬಟ್ಟಿ ಮಠ
3. ನಾಯಕಲ ಮಠ
4. ಯಾಳಗಿ ಮಠ
5. ರಂಗಂಪೇಟೆ ಮಠಗಳು :
   1.ರುದ್ರಸ್ವಾಮಿಮಠ
   2.ದೋಕಿಮಠ
   3.ಅಣ್ಣಯ್ಯನವರಮಠ
   4.ಹಿರೇಮಠ
6. ಸುರಪುರದ ಮಠಗಳು :
   1.ಕಡ್ಲಪ್ಪನವರ ದಾಸೋಹಮಠ
   2.ಬಲ್ಲಂಕೊಂಡಿಮಠ
   3.ಪಂಚಾಂಗಮಠ
   4.ಸೋಗಲೇಶ್ವರಮಠ 5.ಕರಿಕಳಿಮಠ.
7. ದೇವಾಪೂರ ಮಠ
8. ನಾಗೂರು ಮಠ
9. ನಗರ ಮಠ
10. ಖಾನಾಪೂರ ಮಠ
11. ಷಣ್ಮುಖ ಶಿವಯೋಗಿ ಮಠ
12. ಮದ್ರಿಕಿ ಮಠ
13. ಅಮ್ಮಾಪೂರ ಮಠ
14. ಬಿಳವಾರ್ಕಳ ಮಠ
15. ನಾಕಪುರ ಮಠ

---

79. ಡಾ.ವಿ.ಜಿ.ಪೂಜಾರ — ಬಸವಪಥ. ಸಂಪುಟ-16, ಸಂಚಿಕೆ-8 ನವಂಬರ್. ಪುಟ-13. ಲೇಖನ: ಹೈದ್ರಾಬಾದ ಕರ್ನಾಟಕದಲ್ಲಿ ವೀರಶೈವ ಮಠಗಳು.

80. ಡಾ.ವಿ.ಜಿ.ಪೂಜಾರ — ನಿಷ್ಠೆಯ ಕಡ್ಲಪ್ಪ ಮತ್ತು ವೀರಪ್ಪನವರು. ಪುಟ-15.

ಮೇಲ್ಕಾಣಿಸಿದ ಮಠಗಳೆಲ್ಲ ಸುರಪುರದ ದೊರೆಗಳು ನಿರ್ಮಿಸಿದ್ದು ನೋಡಿದರೆ ಅವರ ಧಾರ್ಮಿಕ ದೃಷ್ಟಿಕೋನ, ಸರ್ವಧರ್ಮ ಸಮನ್ವಯ ಭಾವ ವ್ಯಕ್ತವಾಗುತ್ತದೆ. ಇಷ್ಟೆಲ್ಲ ಮಠಗಳ ಅವಶ್ಯಕತೆ ಬಂದದ್ದು ಸಂಸ್ಥಾನದಲ್ಲಿ ಬರಗಾಲ ಬಿದ್ದಾಗ ಜನರಿಗೆಲ್ಲ ಆಹಾರದ ಅವಶ್ಯಕತೆ ಪೂರೈಸುವ ಸಾಧನ ಬೇಕಿತ್ತು. ಆ ಮಾಧ್ಯಮವೇ ಮಠಗಳು. ತರುವಾಯ ಇವುಗಳನ್ನೆಲ್ಲ ಸಾಹಿತ್ಯಿಕ, ಶಿಕ್ಷಣ, ಸಾಂಸ್ಕೃತಿಕ ಕೇಂದ್ರಗಳನ್ನಾಗಿ ಪರಿವರ್ತಿಸಿಕೊಳ್ಳಲಾಯಿತು. ಇವೆಲ್ಲ ಮಠಗಳ ಸ್ಥಾಪನೆಯಲ್ಲಿ ಮುಖ್ಯ ಪಾತ್ರವಹಿಸಿದ ದಿವಾನ ಕಡ್ಲಪ್ಪನವರು ಸುರಪುರದಲ್ಲೊಂದು ದಾಸೋಹಮಠ ಕಟ್ಟಿಸಿದರು. ಅದು ಆತನ ಹೆಸರಿನಿಂದಲೇ ಪ್ರಚಾರ ಪಡೆಯಿತು. 101 ಮಠಗಳ ಸಂಖ್ಯೆ[81]ಯೇನೂ ಇದೆ. ಅವುಗಳ ಖರ್ಚುವೆಚ್ಚಕ್ಕೆ ಸಂಸ್ಥಾನವು ಇನಾಮು ಭೂಮಿಗಳನ್ನು ಬಿಟ್ಟು ಕೊಟ್ಟಿತ್ತು. ಜೊತೆಗೆ ಅಹೋಬಲ ಮಠದ ಸ್ವಾಮಿಗೆ ಆಗಸಿಹಾಳ, ಅನವಾರ, ಬೇವಿನಾಳ, ಗ್ರಾಮಗಳನ್ನು ಹಾಗೂ ಪರಕಾಲಸ್ವಾಮಿ ಮಠಕ್ಕೆ 2 ಗ್ರಾಮಗಳನ್ನು ಸುರಪುರದೊರೆಗಳು ದತ್ತಿಯಾಗಿ ನೀಡಿದರು. ಕುಕ್ಕ್ರಪೂರ ಮತ್ತು ಹುಣಸಗಿಯಲ್ಲಿ ಗುರುಸ್ಥಲ ಮಠಗಳಿವೆ. ಅಲ್ಲದೆ ಮಲ್ಲಾ, ಬೈಚಬಾಳ, ಬಳಬಟ್ಟಿಯಲ್ಲಿ ಸ್ಥಾಪನೆಯಾದ ಮಠಗಳು ಪ್ರಸಿದ್ಧವಾಗಿದ್ದವು.

5. <u>ದಾಸರು ಮತ್ತು ಧರ್ಮ :</u>

'ಹರಿ' ಯನ್ನು ಆರಾಧಿಸುವ ದಾಸ ಪರಂಪರೆಗೆ ಸಂಸ್ಥಾನದಲ್ಲಿ ಸಿಕ್ಕ ಆಶ್ರಯ ಅಪೂ ಅಭೂತಪೂರ್ವವಾದುದು. ಧರ್ಮದೀವಿಗೆ ಹೊತ್ತಿಸಲು ಅನೇಕ ದಾಸರು ದಕ್ಷಿಣ, ಪೂರ್ವದಿಂದ ಬಂದರು. ಶ್ರೀಕೃಷ್ಣ ಕೀರ್ತನೆಗಳು ಸಂಸ್ಥಾನದಲ್ಲಿ ಮನೆಮಂತ್ರವಾಯಿತು. ರಾಮಾನುಜ ಪಂಥದ ತಿರುಳನ್ನು ಇದರಿಂದ ಪ್ರಸಾರಗೊಳಿಸಲು ಬಹುಅನುಕೂಲವೆನಿಸಿತು. ವೇಣುಗೋಪಾಲಸ್ವಾಮಿ ಮಂದಿರದ ಮುಂದಿರುವ ವಿಶಾಲ ಸಭಾಂಗಣವೇ ಇವರ ವೇದಿಕೆಯಾಯ್ತು. ಶ್ರೀವೈಷ್ಣವ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ದಾಸರಿಗೆಲ್ಲ ಸಂಸ್ಥಾನದಿಂದ ಸದಾ ಸ್ವಾಗತವಿತ್ತು.

<u>ಮಹಿಪತಿದಾಸರು :</u>

ತ್ಯಾಗ ಮತ್ತು ಯೋಗಗಳ ಸಂಗಮಸೇತುವೆಯಾದ ಮಹಿಪತಿದಾಸರು ಬಿಜಾಪೂರ ಆದಿಲಶಾಹಿ ಅರಸೊತ್ತಿಗೆಯಲ್ಲಿ ಆಶ್ರಯ ಪಡೆದಿದ್ದರು. ದಿವಾನ ಖವಾಸಖಾನನ ಸ್ನೇಹಪೊಂದರಿಂದಲೇ

---

81. ಡಾ. ವಿ. ಜಿ. ಪೂಜಾರ — ಸಾರಂಗಶ್ರೀ.
ಲೇಖನ : ನಿಷ್ಠಿ ಸಜ್ಜನ ಸಹೋದರರು. ಪುಟ-434.

ಮುಸ್ಲಿಂ ಮಸೀದೆ, ಮನೆಗಳಲ್ಲಿ ಇವರು ಕೀರ್ತನೆ ಕಾರ್ಯಕ್ರಮ ನಡೆಯಿಸಿಕೊಟ್ಟರೆಂದರೆ ಆಶ್ಚರ್ಯಪಡುವಂತಹುದು. ಇದಕ್ಕೆ ಕಾರಣ ಮಹಿಪತಿದಾಸರಲ್ಲಿರುವ ಧಾರ್ಮಿಕ ದಿವ್ಯದೃಷ್ಟಿ, ಸರ್ವಧರ್ಮಗಳನ್ನು ಸಮಭಾವದಿಂದ ನೋಡುವುದೆ ಆಗಿತ್ತು. ಎಲ್ಲಾ ಧರ್ಮಗಳು ಒಂದೇ ತತ್ತ್ವವನ್ನು ಬೋಧಿಸುತ್ತವೆ ಎಂಬುದೆ ಇವರ ವ್ಯಾಖ್ಯಾನ. ಪಾರ್ಸಿ, ಉರ್ದು, ಕನ್ನಡ, ಸಂಸ್ಕೃತ ಭಾಷೆಗಳಲ್ಲಿ ಅಧಿಕಾರಯುತವಾಗಿ ಮಾತಾಡಬಲ್ಲ ಶಕ್ತಿ ಸಂಪಾದಿಸಿದ್ದರಿಂದಲೇ ಎಲ್ಲರಿಗೂ ಹತ್ತಿರವಾದರು.

ಹೀಗಿರುವಾಗಲೇ ವಿಜಾಪೂರದ ಮೇಲೆ ಪರಚಕ್ರವರ್ತಿಗಳ ದಾಳಿಗಳು ಆರಂಭವಾದವು. ರಕ್ಷಣೆಯ ಸ್ಥಳವೆಂದರೆ ಸುರಪುರ ಸಂಸ್ಥಾನದ ಸಗರಗಿರಿಯೆಂದು ಒಳಗಣ್ಣು ಹೇಳಿ ಒಪ್ಪಿಸಿತು.[81ಎ] ಕೂಡಲೇ ಮಹಿಪತಿದಾಸರು ಶಹಪುರದ ಮಂದಾಕಿನಿ ತೀರ್ಥಕ್ಕೆ ಬಂದರು.[82] ಆಂಜನೇಯನನ್ನು ಪ್ರತಿಷ್ಠಾಪಿಸಿ, ಪೂಜೆಗಳಿಂದ ಭಕ್ತರ ಮಹಾಪೂರವನ್ನೇ ಹರಿಸಿದರು. ಸುರಪುರ ದೊರೆಗಳು ತಮ್ಮ ರಾಜ್ಯ ಧಾರ್ಮಿಕ ಸುಖ ಅನುಭವಿಸಲೆಂದು ಮುಂದೆ ಬಂದರು. ಆದರೆ ಕೊನೆಗೆ ವಿಜಾಪೂರ ಹತ್ತಿರದ ಕಾಕಂಡಕಿ ಕಡೆ ತೆರಳಿ ತರುವಾಯ 1681ರಲ್ಲಿ ಕೊಲ್ಹಾರದಲ್ಲಿ ಪರಲೋಕಗೈದರು.

<u>ಆನಂದ ದಾಸರು :</u>

ರಾಯಚೂರು ಜಿಲ್ಲೆಯ ಚೀಕಲಪರವಿಯಲ್ಲಿ ಹುಟ್ಟಿದ ಆನಂದದಾಸರು ಸುರಪುರವನ್ನೇ ತಮ್ಮ ಕಾರ್ಯಕ್ಷೇತ್ರವಾಗಿಸಿಕೊಂಡರು. ದೊರೆಗಳ ಧಾರ್ಮಿಕ ನಿಲುವು ಅವರಿಗೆ ದಿವ್ಯಜ್ಞಾನ ಬೆಳೆಯಲು ದಾರಿಮಾಡಿತು. ಶ್ರೀವೇಣುಗೋಪಾಲ ಸ್ವಾಮಿ ದೇವಾಲಯದಲ್ಲಿ ನೆರೆಯುವ ಸಾವಿರಾರು ಜನರಿಗೆ ಕೀರ್ತನೆ ಊಟವನ್ನು ಉಣಬಡಿಸಿದರು. ಇದರಿಂದ ಸಂಸ್ಥಾನದಲ್ಲಿ ಕಲೆ, ಸಾಹಿತ್ಯ, ಸಂಗೀತ ಕ್ಷೇತ್ರಕ್ಕೆ ಸಮೃದ್ಧ — ಪರಿಸರ ದೊರೆಯಿತು.

ತಮ್ಮ 40ನೆಯ ವಯಸ್ಸಿನಲ್ಲಿ ಸುರಪುರದಲ್ಲಿದ್ದು ಆನಂದದಾಸರು ಅನೇಕ ಶ್ರೇಷ್ಠ ವಿದ್ವಾಂಸರ, ಮಠ, ಮಂದಿರಗಳ ಸಾನಿಧ್ಯ ಪಡೆದರು. ಮೈಸೂರು, ಕೊಲ್ಹಾಪೂರ, ಉಡುಪಿ ಮುಂತಾದ ಊರುಗಳಲ್ಲಿ ಸಂಚರಿಸಿ ಬಂದರು. ಉಡುಪಿಶ್ರೀಗಳ ಅನುಗ್ರಹ ಹೊತ್ತು ಸುರಪುರಕ್ಕೆ ಮರಳುತ್ತಿರುವಷ್ಟರಲ್ಲೇ ಸಂಸ್ಥಾನ ಪತನವಾಗಿತ್ತು. ಆಶ್ರಯವಿಲ್ಲದ ಕಾರಣ ಮಂತ್ರಾಲಯಕ್ಕೆ ಪಯಣಿಸಿದರು. 40 ಗೀತೆಗಳು, ಭರತನಾಟ್ಯದ ಜಾವಡಿಗಳು, ತತ್ತ್ವಪದಗಳು ಭಗವದ್ಗೀತೆಯನ್ನೆಲ್ಲ

81ಎ. ಆದ್ಯರಾಮಾಚಾರ್ಯ — ಮಹಿಪತಿದಾಸರು. ಪುಟ-29.
82. ಎಂ. ಜಯಂತಿಬಾಯಿ — ದಾಸ ಸಾಹಿತ್ಯದರ್ಶನ.
ಲೇಖನ : ಮಹಿಪತಿದಾಸರು. ಪುಟ-212.

'ಕೀರ್ತನಗೀತೆ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದರು. ಕಮಲೇಶವಿಠಲನನ್ನು[83] ತಮ್ಮ ಕೀರ್ತನಗಳಿಗೆ ಅಂಕಿತವಾಗಿಸಿಕೊಂಡ ಆನಂದದಾಸರು ಭೀಮಾಚಾರ್ಯ. ಹೈದರಾಬಾದಿ ರಾಮಕೃಷ್ಣಾಚಾರ್ಯ, ಅಗ್ನಿಹೋತ್ರಿ ವೆಂಕಟಚಾರ್ಯರ ಸಂಪರ್ಕ ಹೊಂದಿದ್ದಲ್ಲದೆ ಅವರ ಅನುಭಾವವನ್ನು ಸಂಸ್ಥಾನದಲ್ಲೂ ಪಸರಿಸಲು ಶ್ರಮಿಸಿದರು.

1. ದ್ವೈತಮಠಗಳು :

ಸುರಪುರ ಸಂಸ್ಥಾನದ ದೊರೆಗಳು ಮತ್ತು ಜನತೆ ವಿಶಿಷ್ಟ ಸಂಪ್ರದಾಯವನ್ನು ಸ್ವೀಕರಿಸಿದ್ದರು. ದ್ವೈತಧರ್ಮಕ್ಕೆ ಆಶ್ರಯ ನೀಡಿದರು. ಇದಕ್ಕೆ ಮುಖ್ಯ ಉದಾಹರಣೆ ವೀರಘಟ್ಟದ ಕಣ್ವಮಠ. ದೇವದುರ್ಗ ಭಾಗಕ್ಕೆ ಸೇರುವ ಈ ಪ್ರದೇಶವು ಸುರಪುರ ಸಂಸ್ಥಾನದ ಆಳ್ವಿಕೆಗೂ ಒಳಪಟ್ಟಿತ್ತು. ಆದುದರಿಂದ ಕೃಷ್ಣಾ ಹರಿಯುವ ಪವಿತ್ರ ಸ್ಥಳದಲ್ಲಿ ಸುರಪುರ ಶ್ರೀ ವೆಂಕಟರಮಣಾಚಾರ್ಯರು ಕ್ರಿ.ಶ.1769ರಲ್ಲಿ ಕಣ್ವಮಠವನ್ನು ವೀರಘಟ್ಟದಲ್ಲಿ ಸ್ಥಾಪಿಸಿದರು.[84] ಇಮ್ಮಡಿ ವೆಂಕಟಪ್ಪನಾಯಕನ ಆಳ್ವಿಕೆ ಕಾಲವಿದು. ದ್ವೈತಧರ್ಮವನ್ನು ಸಂಸ್ಥಾನದ ಜನತೆ ಸ್ವೀಕರಿಸಬೇಕೆಂಬ ಉತ್ಕಟ ಅಭಿಲಾಷೆಗೆ ಮಠದ ಸರ್ವಕಾರ್ಯಕ್ಕೂ ಸಹಾಯನೀಡಿದರು.

ಶ್ರೀ ವಿಠಲ ಕೃಷ್ಣನನ್ನು ಆರಾಧಿಸುವ ಇಲ್ಲಿಗೆ ಭಕ್ತರ ಸಾಲೇ ಬರತೊಡಗಿತು. ನದಿಯ ಒಂದು ಬದಿ ತಿಂಥಣಿ ಮೋನಪ್ಪಯ್ಯನ ಕರ್ಮಭೂಮಿ ಆದರೆ, ಮತ್ತೊಂದೆಡೆ ಕಣ್ವಮಠದ ಧರ್ಮಕ್ಷೇತ್ರವಾಗಿ ಕಂಗೊಳಿಸಿತು.

ತರುವಾಯ ಮಠದ ಅಧಿಪತ್ಯವನ್ನು ಶ್ರೀವಾಮನತೀರ್ಥರು ವಹಿಸಿಕೊಂಡರು. ಆದವಾನಿಗೆ ಸಂಬಂಧಿಸಿದ ಇವರು ಅಲ್ಲಿಯ ನವಾಬನ ಮೇಲೆ ತಮ್ಮ ಪ್ರಭಾವದ ಮುದ್ರೆಯನ್ನು ಒತ್ತಿಬಂದಿದ್ದರು. ಗುರು ಬದುಕಿರುವಾಗಲೇ ಶಿಷ್ಯನಾದ ವಾಮನ ತೀರ್ಥರು ಬಂಡಾರಗಲ್ಲು ಸ್ಥಳದಲ್ಲಿ ಬೃಂದಾವನಸ್ಥರಾದರು. ಕಣ್ವಮಠಕ್ಕೆ ಶಾಲಿವಾಹನ ಶಕೆ 1732ರಲ್ಲಿ ಶ್ರೀ ಅಮೋಘತೀರ್ಥರನ್ನು ಕರೆತಂದು ಪಟ್ಟಕಟ್ಟಲಾಯಿತು. ನಂತರ ಜಯಭೀಮಸೇನಾಚಾರ್ಯರು ವಿದ್ಯಾಧೀಶತೀರ್ಥರೆಂಬ ಅಂಕಿತ ಪಡೆದು ಕಣ್ವಮಠದ ಉತ್ತರಾಧಿಕಾರಿಯಾದರು. 'ಹುಣಸಿಹೊಳೆ' ಊರನ್ನು ಸಂಸ್ಥಾನದ ಅರಸರು

---

83. ಜಯತೀರ್ಥಾಚಾರ್ಯ ಮಳಖೇಡ — ನಗರನಾಡ ದರ್ಶನ ಲೇಖನ: ನಗರನಾಡಿನ ವೈಭವದ ಸವಿನೆನಪುಗಳು. ಪುಟ—163.

84. —ಅದೇ—, ಪುಟ—168.

ಇವರಿಗೆ ಇನಾಮು ಎಂದು ಕೊಡಲಾಗಿತ್ತು. ಇದರಿಂದ ಮಠದ ಖರ್ಚು ವೆಚ್ಚಕ್ಕೆ ಸಹಕಾರಿಯಾಯಿತು. ಕೊನೆಗೆ ಶ್ರೀಕೃಷ್ಣದ್ವೈಪಾಯನ ತೀರ್ಥರೆಂಬುವವರಿಗೆ ತಮ್ಮ ಪೀಠವನ್ನು ಬಿಟ್ಟುಕೊಟ್ಟು ಬೃಂದಾವನಸ್ಥರಾದರು. ಹೀಗೆ ಮುಂದೆ ಶ್ರೀವಿದ್ಯಾಧೀಶತೀರ್ಥರು, ಶ್ರೀವಿದ್ಯಾಸಂಪೂರ್ಣತೀರ್ಥರು, ಶ್ರೀನಿವಾಸಚಾರ್ಯರು ಮುಂತಾದವರು ಕಣ್ವಮಠಪೀಠ ಪರಂಪರೆಯಲ್ಲಿ ಬಂದು ದ್ವೈತಸಿದ್ಧಾಂತವನ್ನು ದಿನದಿಕ್ಕಿಗೂ ಹಬ್ಬಿಸಲು ಯತ್ನಿಸಿದರು. ಸಂಸ್ಥಾನದಿಂದ ಸಿಕ್ಕ ಸಕಲ ಆಶ್ರಯವು ಉಪಯೋಗಿಸಿಕೊಂಡ ತೀರ್ಥರು ಧರ್ಮಲೋಕದ ದ್ವೈತ ಬೀಜವನ್ನು ಸಂಸ್ಥಾನದ ವ್ಯಾಪ್ತಿಯಲ್ಲಿ ಬಿತ್ತಿದರು.

6. <u>ಮರಾಠ ಸಂತರು :</u>

ಬಿಜಾಪೂರ ಆದಿಲಶಾಹಿ ಅರಸೊತ್ತಿಗೆಯ ಪತನಾನಂತರ ಮೊಘಲರ ಕಾಲಕ್ಕೆ ತಲೆ ಎತ್ತಿದ್ದ ಮರಾಠರು ಸುರಪುರ ಸಂಸ್ಥಾನದೊಂದಿಗೆ ಮಧುರ ಬಾಂಧವ್ಯ ಹೊಂದಿದ್ದರು. ಸೈನ್ಯ ಸಹಾಯದ ಸ್ನೇಹವೇ ಎಲ್ಲಾ ಸಹಕಾರಕ್ಕೂ ನೆರವಾಯಿತು. ವಾಗಿನಗೇರಿ ಕೋಟೆಯ ರಕ್ಷಣೆಗೆಂದು ಇಟ್ಟ ಸೈನ್ಯದಲ್ಲಿ ಮರಾಠರೇ ಮುಖ್ಯರಾಗಿದ್ದರು. ಹಲವಾರು ಕುಟುಂಬಗಳು ಅಲ್ಲಿಯ ಆಶ್ರಯಪಡೆದ ಪಡುವಣಕೋಟೆಯ ಸಂರಕ್ಷಣೆ ಭಾರ ಹೊತ್ತಿದ್ದವು. ಔರಂಗಜೇಬನ ವಿರುದ್ಧ ನಡೆದ ಒಂದು ವರ್ಷ ಪರ್ಯಂತ ಹೋರಾಟದಲ್ಲಿ ಸುರಪುರಕ್ಕೆ ಬೆಂಗಾವಲಾಗಿದ್ದರು. ಇದಕ್ಕೆಲ್ಲ ಕಾರಣ ಸಂಸ್ಥಾನದ ಆಶ್ರಯ. ಮರಾಠಿಗರ ಕುಟುಂಬ ಸಂಖ್ಯೆ ಬೆಳೆಯುತ್ತ ಓಣಿ ಊರಾದಾಗ ಧಾರ್ಮಿಕ ಸಂತರ ಆಗತ್ಯ ಅನಿವಾರ್ಯವಾಯಿತು. ಅಲ್ಲಿಂದ ಮುಂದುವರೆದ ಮರಾಠರ ಧಾರ್ಮಿಕ ಪ್ರಕ್ರಿಯೆಗೆ ಪ್ರಾಮುಖ್ಯ ಬಂತು. ಇಲ್ಲಿಗೆ ಬರುವ ಮರಾಠ ಸಂತರಿಗೆ ತುಂಬು ಹೃದಯದ ಸ್ವಾಗತ ಸಿಕ್ಕಿತು. ಅವರಲ್ಲಿ ಬಹು ಶ್ರೇಷ್ಠ ಸಂತರೆಂದರೆ :

1. ಶ್ರೀ ಹರಿಗಿರಿ ಬಾವಾ
2. ಶ್ರೀ ಮೋತಿಗಿರಿ ಬಾವಾ
3. ಶ್ರೀ ಭವನಾಗಿರಿ ಬಾವಾ
4. ಶ್ರೀ ಚಂದನಗಿರಿ ಬಾವಾ
5. ಶ್ರೀ ನರಸಿಂಗಗಿರಿ ಬಾವಾ.[85]

---

85. ಎ. ಕೃಷ್ಣಾ — ಸಂಪಾದಕೀಯ. ಸಗರನಾಡು ದರ್ಶನ. ಪುಟ-20.

ಈ ಐದು ಜನ ಅಣ್ಣತಮ್ಮಂದಿರು 'ಬಾವಾ' ಎಂಬ ನಾಮದಿಂದಲೇ ಸಂಸ್ಥಾನದಲ್ಲಿ ಸುಪ್ರಸಿದ್ಧರಾಗಿದ್ದಾರೆ. ಶ್ರೀ ಹರಿಗಿರಿ ಬಾವಾನ ಪವಾಡ ಶಕ್ತಿಯ ಪ್ರಭಾವಕ್ಕೆ ಒಳಗಾದ ಅಂದಿನ ಬ್ರಿಟಿಷರು ಸಂಸ್ಥಾ ಸಂಸ್ಥಾನದ ಅಂಕಲಗಿ ಗ್ರಾಮದಲ್ಲಿ 30 ಎಕರೆ ಭೂಮಿಯನ್ನು ಕಾಣಿಕೆಯನ್ನು ಕೊಡಮಾಡಿದ್ದರು. ಜೊತೆಗೆ 'ಬಾವಾ' ನವರ ಮಠವೊಂದನ್ನು ಕಟ್ಟಿಸಲಾಯಿತು. ಅಂಕಲಗಿಯನ್ನೇ ಕರ್ಮಭೂಮಿಯನ್ನಾಗಿಸಿಕೊಂಡ ಭವಾನಗಿರಿ ಬಾವಾ ಹಾಗೂ ದಂಡನಗಿರಿ ಬಾವಾರು ಇಲ್ಲಿಯೇ ಸಮಾಧಿಸ್ಥರಾದರು.

ಮಹಾರಾಷ್ಟ್ರದ ಪೇಶ್ವೆಗಳಲ್ಲಿ ಆಶ್ರಯ ಪಡೆದಿದ್ದ ಮೋತಿಗಿರಿ ಬಾವಾ ಅವರಿಗೆ ರಾಜಗುರುವಾಗಿದ್ದರು. ನಂತರ ಸುರಪುರಕ್ಕೆ ಮರಳಿ ಬಂದ ಈ ಸಹೋದರರು ಅನೇಕ ಪವಾಡಗಳನ್ನು ಪ್ರಯೋಗಿಸಿದರು. ಲಕ್ಷ್ಮಣಸಿಂಗನೆಂಬ ರಜಪೂತ ಜಹಗೀರುದಾರನು ಮೋತಿಗಿರಿ ಬಾವಾನ ಸೇವೆಯಲ್ಲಿದ್ದ ನಂತರ ಅವರ ಕೃಪಾಶೀರ್ವಾದದಿಂದ ಸುರಪುರದ ಬಾವಾನ ಮಠದ ಪೀಠಾಧಿಕಾರಿಯಾದನು. ಅಂದಿನಿಂದ ರಜಪೂತ ಲಕ್ಷ್ಮಣಸಿಂಗ್ 'ಬಾವಾ' ನಾದ. ಇವರಲ್ಲಿದ್ದ ಪ್ರಬುದ್ಧ ಪ್ರತಿಭೆಯನ್ನು ಸಂಸ್ಥಾನದ ರಾಜ್ಯಕಾರ್ಯಕ್ಕೆ ದೊರೆಗಳು ಬಳಸಿಕೊಂಡರಲ್ಲದೆ, ರಾಜಶ್ರೀಕೀಗಳನ್ನಾಗಿ ಮಾಡಿಕೊಂಡರು. ನರಸಿಂಗಗಿರಿಬಾವಾ ಅವರು ಸುರಪುರದ ಮರಾಠಿ ಕನ್ಯೆಯನ್ನು ಮದುವೆಯಾಗುವ ಮೂಲಕ ಸಂನ್ಯಾಸಿ ಹೋಗಿ ಸಂಸಾರಿಯಾದರು. ಬಿಜಸ್ಪೂರ ಗ್ರಾಮದಲ್ಲಿ ಅಣ್ಣ ಹರಿಗಿರಿ ಬಾವಾನೊಂದಿಗೆ 'ಮಠ' ವೊಂದನ್ನು ಸ್ಥಾಪಿಸಿಕೊಂಡು ಧರ್ಮಸೇವೆಗೈದರೆಂದು ತಿಳಿದುಬರುತ್ತದೆ. ಇವೆಲ್ಲ ಅಂಶಗಳನ್ನು ಆಲೋಚಿಸಿದರೆ ಸುರಪುರ ದೊರೆಗಳು ಮರಾಠ ಧರ್ಮೀಯರಿಗೆ ನೀಡಿದ ಸ್ಥಾನ-ಮಾನ ಮತ್ತು ಧಾರ್ಮಿಕ ಸ್ವಾತಂತ್ರ್ಯ ಹಾಗೂ ಸಂತರ ಧರ್ಮಪ್ರಸಾರಕ್ಕೆ ಮಠಗಳನ್ನು ನಿರ್ಮಿಸಿಕೊಟ್ಟದ್ದು ಸಮನ್ವಯ ಸಂಸ್ಕೃತಿ ಎತ್ತಿ ತೋರಿಸುತ್ತದೆ.

ಅ. ಸಾಮಾಜಿಕ ವ್ಯವಸ್ಥೆ

1) ಸಮಾಜ :

'ಒಂದು ರಾಜ್ಯದ ಆಂತರಿಕ ಸುಖ ಅಲ್ಲಿಯ ಸಮಾಜ ವ್ಯವಸ್ಥೆಯ ಮೇಲೆ ಅವಲಂಬಿಸಿರುತ್ತದೆ' ಎಂಬ ಮಾತು ಸತ್ಯವಾದುದು. ಸಾಗಿ ಹೋದ ಶತಮಾನಗಳ ಸಂಪ್ರದಾಯಗಳನ್ನೆಲ್ಲ ತನ್ನ ಒಡಲೊಳಗೆ ಸೇರಿಸಿಕೊಳ್ಳುವ 'ಸಮಾಜ' ಲೋಕಾರೂಢಿಗಳನ್ನೇ ನಂಬಿರುತ್ತದೆ. ನೈತಿಕ ನೆಲೆಗಟ್ಟೆ ಅದಕ್ಕಿರುವ ಮಾರ್ಗದರ್ಶಕ ಕಾನೂನು. ಇದಕ್ಕಿಂತ ಬಲಿಷ್ಠ ಕಟ್ಟಳೆ ಬೇರೆನಿಲ್ಲ. ತನ್ನ ಮೂಲ ಘಟಕವಾದ ಕುಟುಂಬದಿಂದಲೇ ಸುಖ-ದುಃಖ ಸ್ವೀಕರಿಸುವ ಸಮಾಜ ಅದನ್ನು ಎಲ್ಲಾ ರಂಗಕ್ಕೂ ವ್ಯಾಪಿಸಿಕೊಳ್ಳಲು ಆಸಕ್ತಿ ತಾಳುತ್ತದೆ. ವ್ಯಕ್ತಿ, ಸಂಘ, ಸಂಸ್ಥೆ, ಸಮುದಾಯ, ಸರಕಾರಗಳ ಸಂಗಮವಾದ ಸಮಾಜವು ಸದಾ ಕ್ರಿಯಾಶೀಲವಾಗಿರಲು ಯತ್ನಿಸುತ್ತದೆ. ಅದೇ ಅದರ ಜೀವಂತಿಕೆಯ ಲಕ್ಷಣವು ಕೂಡ. ಇಲ್ಲಿ ಸಮಾವೇಶಗೊಳ್ಳುವ ಎಲ್ಲಾ ಸಮುದಾಯಗಳು ಸಾಂಸ್ಕೃತಿಕ ವಹಾಲ್ಯದಿಂದಲೇ ಅಳೆಯಲ್ಪಡುತ್ತವೆ. ವಿವಿಧ ಸ್ತರವಿನ್ಯಾಸದ ಶಕ್ತಿಗಳಲ್ಲಿ ಸಂಪರ್ಕಗೊಳ್ಳುವುದು ದೈನಂದಿನ ಕೊಡು-ಕೊಳ್ಳುವಿಕೆಯಲ್ಲಿ. ತನ್ನ ಅಸ್ತಿತ್ವಕ್ಕೆ ಬಗ್ಗದ ವಿಚಾರಗಳನ್ನು ನಿರ್ಬಂಧಿಸುವ ಶಕ್ತಿ ಸಮಾಜಕ್ಕಿದೆ. ತೀರ್ಪು ನೀಡುವ ಹಕ್ಕು ಇದರಂತರಂಗದ್ದಾಗಿದೆ.

ಆಗಾಗ ತನ್ನ ನೀತಿ-ರೀತಿಗಳನ್ನು ಬದಲಿಸಿಕೊಂಡರೆ ಅದುವೆ ಸಾಮಾಜಿಕ ಪರಿವರ್ತನೆ ಎನಿಸಿಕೊಳ್ಳುತ್ತದೆ. ಇಂಥ ಹಲವು ನಿಲುವಿನ ಕ್ರಿಯೆ ಸುರಪುರ ಸಂಸ್ಥಾನದಲ್ಲಿ ಹೇಗೆ ನಡೆಯಿತು ಎಂಬುದೆ ಇಲ್ಲಿ ವಿಚಾರಾರ್ಹ.

ಎಲ್ಲಾ ಸಮಾಜ ವಿಜ್ಞಾನಿಗಳು ಸಮಾಜದ ಅಧ್ಯಯನವನ್ನು ಚತುರ್ವರ್ಣ ವ್ಯವಸ್ಥೆಯ ವಿಶ್ಲೇಷಣೆಯಿಂದಲೇ ಆರಂಭಿಸುತ್ತಾರೆ. ಅದೇ ಪದ್ಧತಿಯನ್ನು ಇಲ್ಲಿಯೂ ಅನ್ವಯಿಸಬಹುದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಶ್ರೇಣಿಗಳು ಪ್ರಾಚೀನದಿಂದ ಪ್ರಸ್ತುತ ವ್ಯವಸ್ಥೆವರೆಗೂ ಉಳಿದುಕೊಂಡು ಬಂದಿವೆ. ಆದರೆ ಸುರಪುರ ಸಂಸ್ಥಾನದಲ್ಲಿ ಈ ವರ್ಣ ವ್ಯವಸ್ಥೆ ಬಹುವಿಚಿತ್ರವಾಗಿದ್ದು, ಹೊಸ ತಿರುವನ್ನು ಕಾಣುತ್ತೇವೆ. ಜಾತಿಯಿಂದ ಶೂದ್ರವರ್ಗಕ್ಕೆ ಸೇರಿದ ಸುರಪುರದರಸರು ಇಲ್ಲಿ ಸಂಸ್ಥಾನದ ಒಡೆಯರು. ಆಡಳಿತವೆಲ್ಲ ಅವರ ಕೈಯಲ್ಲಿಯೇ. ಆಡಳಿತಗಾರರೆಲ್ಲ ಅವರ ಅಧೀನವೆ.

ತೋಳ್ಬಲದಿಂದ ರಾಜ್ಯ ಸಂಪಾದಿಸಿ ಕ್ಷತ್ರಿಯರೆನಿಸಿದರೆ, ಶ್ರೀವೈಷ್ಣವ ಧರ್ಮ ಸ್ವೀಕರಿಸುವ ಮೂಲಕ ಬ್ರಾಹ್ಮಣರಿಗೆ ಸರಿಜೋಡಿಯಾಗುತ್ತಾರೆ. ಇದರಿಂದ ಸಂಸ್ಥಾನದ ದೊರೆಗಳು ಮೂರು ವರ್ಣಗಳಲ್ಲಿಯೂ ಮುಖ್ಯರೆ ಆಗಿರುವುದರಿಂದ ಎಲ್ಲಿಯೂ ಕಾಣದ ಸಾಮಾಜಿಕ ವ್ಯವಸ್ಥೆಯನ್ನು ಇಲ್ಲಿ ಕಾಣುತ್ತೇವೆ ಎನಿಸುತ್ತದೆ. ಇಂಥ ಕುತೂಹಲಕರ ವ್ಯವಸ್ಥೆಯನ್ನು ಬಹುಶಃ ಬೇರೆಡೆ ಕಾಣಲಾರೆವು. ವಿಶೇಷವೆಂದರೆ ಬ್ರಾಹ್ಮಣ ವರ್ಗ ಇಲ್ಲಿ ಸಹ ತನ್ನ ಸ್ಥಾನ ಪ್ರಥಮಶ್ರೇಣಿಯಲ್ಲಿಯೆ ಕಾಯ್ದುಕೊಂಡು ಬಂದಿದೆ. ಆದರೆ ಸುರಪುರದಲ್ಲಿ ಶೂದ್ರರಾಳ್ವಿಕೆಗೆ ಅಧೀನರಾಗಬೇಕಾಯಿತು. ಆಗ ಅವರನ್ನೇ ಬ್ರಾಹ್ಮಣ ಮಟ್ಟಕ್ಕೆ ತಂದು ಪರೋಕ್ಷವಾಗಿ ತಮ್ಮ ಸ್ಥಾನಗೌರವ ಸಂರಕ್ಷಿಸಿಕೊಂಡರೆಂದು ಕೆಲವು ವಿದ್ವಾಂಸರ ವಿಶ್ಲೇಷಣೆ.

ಸೇವೆ ಮಾಡಬೇಕಾದ ಶೂದ್ರ ಆಳಿತವನ್ನೇ ಹಿಡಿದಾಗ ಸಮಾಜಿಕ ವ್ಯವಸ್ಥೆ ತರೆಕೆಳಗಾಗುವುದು ಸಹಜ. ಇದಾಗಲಿಲ್ಲ. ಆಚರಣೆ ಪದ್ಧತಿಗಳಿಂದ ಶ್ರೀವೈಷ್ಣವರಾಗಿ, ಆಳ್ವಿಕೆಯಿಂದ ಕ್ಷತ್ರಿಯರಾಗಿ, ಜಾತಿಯಿಂದ ಶೂದ್ರರಾದ ಸುರಪುರದ ಅರಸರು ಸಾಮಾಜಿಕ ಅಭ್ಯಾಸಿಗಳಿಗೆ, ವಿಶೇಷ ವಸ್ತುವಾಗಿದ್ದಾರೆ. 1987ರಲ್ಲಿ ಪುಣೆ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಡಾ: ವಿದ್ಯಾ ಪಾಟೀಲರ 'ಬೇಡರ ಜನಾಂಗದ ಸಾಮಾಜಿಕ ಪರಿಸ್ಥಿತಿ ಹಾಗೂ ಅವರ ಐತಿಹಾಸಿಕ ಪಾರ್ಶ್ವಭೂಮಿ" ಎಂಬ ಮಹಾಪ್ರಬಂಧ[1]ದಲ್ಲಿಯೂ ಇಂಥ ವ್ಯವಸ್ಥೆ ಇಲ್ಲದಿರುವುದು ಇನ್ನಷ್ಟು ಆಶ್ಚರ್ಯ ಹುಟ್ಟಿಸುತ್ತದೆ.

2) <u>ಅಯಗಾರರು :</u>

'ಕಲೆ ಕಸುಬಾಗಿ, ಕಸುಬು ಕಲೆಯಾಗಿ ಬದುಕಿನ ಬೆಂಕಿಯಲ್ಲಿ ಹೊರಬಂದ ಶ್ರಮ ಸಂಸ್ಕೃತಿ'-ಈ ಅಯಗಾರರು. ಸಮಾಜಕ್ಕೆ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಉತ್ಪನ್ನ ವೃತ್ತಿಯವರಾದ ಆಯಗಾರರು ಹನ್ನೆರಡು ಜನರೆಂದು[2] ಹಲವರ ಅಭಿಪ್ರಾಯ. ತರುವಾಯ ತಮ್ಮ ವೃತ್ತಿ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡು ಹದಿನೆಂಟಕ್ಕೇರಿದ ಬಗ್ಗೆಯೂ ವಿದ್ವಾಂಸರು ಒಪ್ಪಿಕೊಂಡ ಮಾತು. ಹೊರೆ ಹದಿನೆಂಟು ಜಾತಿಯೆಂದು ಈಗಲೂ ಗ್ರಾಮೀಣ ಗಾದೆ. ಆಯಗಾರರು ಕಸುಬಿನಿಂದ ಗುರುತಿಸಿಕೊಳ್ಳುವರೋ ಹಾಗೆಯೇ ಜಾತಿಯಿಂದಲೂ ನಿರ್ಣಯಿಸಲ್ಪಡುತ್ತಾರೆ. ಒಂದು

---

1. ವಾಲ್ಮೀಕಿ ಸಂದೇಶ— ಫೆಬ್ರುವರಿ, 1987. ಪುಟ-19.
2. G.S.Dixit -op.cit. p-67.

ವರ್ಗದ ಕಸುಬನ್ನು ಇನ್ನೊಂದು ಜಾತಿಯವರು ಮಾಡಬಾರದೆಂದು ಎಂದು ನಿರ್ಣಯಿಸಿದರೂ, ಅಂದೇ ಆಯಗಾರರು ಜಾತಿ ರೇಖೆಯಲ್ಲಿ ಬಲವಾಗಿ ಬಂಧಿಸಲ್ಪಟ್ಟರು. ಆಗ ಕಸುಬು ಕುಲವಾಗಿ ಪರಿಣಮಿಸಿತು. ಮುಖ್ಯವಾಗಿ ಕಂಚಾರ, ಕುಂಬಾರ, ಬಡಿಗ, ಅಗಸ, ನಾಯಿಂದ, ಬಳೆಗಾರ, ಜನಿವಾರ, ಹೂಗಾರ, ಅಕ್ಕಸಾಲಿಗ, ಗಂಧಿಗಾರ, ಜೋಯಿಸ, ಮಠಪತಿ, ಹೊಲೆಯ, ಮಾದಿಗ, ದಾಸ, ಬ್ರಾಹ್ಮಣ, ಮುಂತಾದವರು[3] ಸುರಪುರ ಸಂಸ್ಥಾನದ ಸಮಾಜಿಕ ವ್ಯವಸ್ಥೆಯಲ್ಲಿ ವಾಸವಾಗಿದ್ದರು. ವಂಶಪಾರಂಪರ್ಯ ಕುಲವೃತ್ತಿಗಳಾದ ಇವು ಗ್ರಾಮದ ಅಭಿವೃದ್ಧಿಯಲ್ಲಿ, ಸ್ವಾಸ್ಥ್ಯ ಸಮೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಸಂಸ್ಥಾನಕ್ಕೆ ಪ್ರತಿವರ್ಷ ತೆರಿಗೆ ಸಲ್ಲಿಸುತ್ತಿದ್ದ ಇವರು ಸಮಾಜದಲ್ಲಿ ಇದ್ದ ಶ್ರೇಣೀಕೃತ ವ್ಯವಸ್ಥೆಗೆ ಹೊಂದಿಕೊಂಡು ಹೋಗುವವರಾಗಿದ್ದರು.

ಸಂಸ್ಥಾನದಲ್ಲಿ ಪ್ರಮುಖ ವರ್ಗಗಳಾದ ವೀರಶೈವರು, ಬ್ರಾಹ್ಮಣರು, ಬೇಡರು, ಕುರುಬರು, ಬೋಯಿರು, ಪಠಾಣರು, ಗೊಲ್ಲರು, ಕೋಮಟಿಗರು, ರಜಪೂತರು, ಉಪ್ಪಾರರು, ಚಮ್ಮರು, ಮುಸಲ್ಮಾನರು, ಜೈನರು ಇನ್ನೂ ಮುಂತಾದವರು ಹೇರಳವಾಗಿ ಸಿಗುತ್ತಾರೆ.

3) ಜಾತಿ – ಮತಗಳ ಸಮನ್ವಯ :

ಸುರಪುರ ಸಂಸ್ಥಾನದ ದೊರೆಗಳು ಸರ್ವಜಾತಿ ಮತಧರ್ಮೀಯರಿಗೆ ಒಂದೇ ರೀತಿಯಾಗಿ ನೋಡುತ್ತಿದ್ದರು. ಸಮಾಜದಲ್ಲಿ ಸಹಬಾಳ್ವೆಗೆ ತಳಹದಿ ಹಾಕಿದ್ದರೆನ್ನಲು ಹಲವಾರು ಆಧಾರಗಳಿವೆ. ಅವರವರ ಆಚಾರಣೆ ಅವರಿಗೆ ಶ್ರೇಷ್ಠವೆನ್ನುವದನ್ನು ಪ್ರತಿಯೊಬ್ಬ ಅರಸನು ನಂಬಿದ ಸಿದ್ಧಾಂತವಾಗಿತ್ತು. ತಮ್ಮ ಜಾತಿ-ಧರ್ಮ ತಮಗೆ ಶ್ರೇಷ್ಠವೆನ್ನಲು ಗಡ್ಡಿಪಿಡ್ಡನಾಯಕನ ಪ್ರಕರಣವೇ ಸಾಕ್ಷಿ. ದಿಲ್ಲಿದೊರೆ ಔರಂಗಜೇಬನು " ನೀನು ಮುಸಲ್ಮಾನನಾಗಿದ್ದರೆ ನಮ್ಮ ಬಂಧುವಾಗಿರುತ್ತಿದ್ದಿ, ಸುರಕ್ಷಿತನಾಗಿ ಪತನವಿಲ್ಲದ ರಾಜ್ಯದ ರಾಜನಾಗಿರುತ್ತಿದ್ದಿ. ಆದರೆ ನೀನು ಮುಸಲ್ಮಾನನಾಗಿಲ್ಲವೆಂಬುದೇ ಖೇದದ ಸಂಗತಿ" ಎಂದು ಪಿಡ್ಡನಾಯಕನಿಗೆ ಬರೆದ ಪತ್ರದಿಂದ 'ಧರ್ಮವೆ ದೇಶದ ಬುನಾದಿ' ಎನ್ನುವ ಮೊಘಲರಿಗೆ ಸುರಪುರದ ಸ್ವಜಾತಿ ಪ್ರೇಮ ಅರ್ಥವಾದೀತಾದರೂ ಹೇಗೆ? ಇಂಥ [illegible] ತಾನು, ತನ್ನ ಸಂಸ್ಥಾನದ ಜನತೆಯನ್ನು ಮೊಘಲರ ಮುಷ್ಟಿಯಿಂದ ಸಂರಕ್ಷಿಸಿಕೊಂಡು ಬಂದದ್ದು ಸಣ್ಣ ಮಾತೇನಲ್ಲ.

---

3. ಡಾ. ಎ. ವಿ. ವೆಂಕಟರತ್ನಂ – ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ. ಪುಟ–62.

ಹಸರಂಗಿ ಪಾಮನಾಯಕನು ವಾಗಿಣಗೇರಿಯಲ್ಲಿರುವಾಗ ವಿಶಿಷ್ಟಾದ್ವೈತ ಸಂಪ್ರದಾಯವನ್ನು ಸ್ವೀಕರಿಸಿ, ದಕ್ಷಿಣದಿಂದ ಬಂದ ಶ್ರೀವೈಷ್ಣವ ಗುರುಗಳಿಗೆ ಆಶ್ರಯ ನೀಡಿದನೆಂದು ತಿಳಿದುಬರುತ್ತದೆ. ಪಾಂಡಿಚೇರಿ ಕಾಳಗದಲ್ಲಿ ರೋಮಾಂಚಕ ವಿಜಯ ಸಾಧಿಸಿಕೊಟ್ಟ ಮೊಂಡುಗೈ ವೆಂಕಟಪ್ಪನಾಯಕನಿಗೆ ಹೈದ್ರಾಬಾದ ನಿಜಾಮನು 'ಬೇಡರ ಟಕ್' ಎಂಬ ಹೊಸ ಕಂದಾಯ ಹಕ್ಕು ಕೊಟ್ಟ. ಇದು ಆರ್ಥಿಕ ಆದಾಯದ ಬಾಬತ್ತು ಆಗಿದ್ದರೂ ಜಾತಿಯ ಶೌರ್ಯ ಸಾಹಸವನ್ನು ಸೂಚಿಸುತ್ತದೆ. ಮುಮ್ಮಡಿ ಪಾಮನಾಯಕನ ಆಸ್ಥಾನದಲ್ಲಿದ್ದ ಶ್ರೀನಿವಾಸ ಆಚಾರ್ಯರಿಗೆ ವಿಶೇಷ ಪದವಿಯಿತ್ತು. ಅದೇನಂದರೆ ಅದ್ವೈತದಲ್ಲಿ ಶ್ರೀ ವಿದ್ಯಾರಣ್ಯರು, ದ್ವೈತದಲ್ಲಿ ಟೀಕಾಚಾರ್ಯರು ಶ್ರೇಷ್ಠವಾದರೆ ವಿಶಿಷ್ಟಾದ್ವೈತದಲ್ಲಿ ಶ್ರೀನಿವಾಸ ಆಚಾರ್ಯರೇ ಸುಪ್ರಸಿದ್ಧರೆಂದು ಸಾರಲಾಗಿತ್ತು. ಕೃಷ್ಣಪ್ಪನಾಯಕನಂತೂ ತನ್ನ ಆಳ್ವಿಕೆಯಲ್ಲಿ ಜೈನಯಜ್ಞವನ್ನೇ ಆರಂಭಿಸಿದ ರಂಗಂಪೇಟೆಯಲ್ಲಿ ಅಗ್ರಹಾರ ಪೇಠವನ್ನು ನಿರ್ಮಿಸಿ ಅಲ್ಲಿ ತ್ರಿಮತಸ್ಥ ಬ್ರಾಹ್ಮಣರಿರುವಂತೆ ನೋಡಿಕೊಂಡದ್ದು ಧಾರ್ಮಿಕ ಸಮನ್ವಯ, ಸಾಮಾಜಿಕ ಕಾಳಜಿ ಸೂಚಿಸುತ್ತದೆ.

ಸೈನ್ಯದಲ್ಲಿ ಮರಾಠ, ದಖನಿ, ಸಿದ್ಧಿ, ರೋಹಿಲ, ಅರಬ, ಕೋಟಗಾರ, ಮಾದಿಗ ಮುಂತಾದವರನ್ನೆಲ್ಲ ತಮ್ಮ ಬೇಡಪಡೆಯಲ್ಲಿ ಸೇರಿಸಿ ಕೊಂಡಿದ್ದರು. ರಾಜರು ಸ್ವತಃ ಬೇಡರು, ಮಂತ್ರಿಗಳು ವೀರಶೈವರು, ದುನೀಯರು ಮುಸಲ್ಮಾನರು, ಸುನೀಸ, ಮುಜುಮದಾರ, ಕುಲಕರ್ಣಿ, ಜಮದಾರ್ಯಾನಿ, ದಬೀರ, ಹೇಜಿಬರು ಬ್ರಾಹ್ಮಣರಾಗಿ ಆಡಳಿತಯಂತ್ರವನ್ನು ಚುರುಕುಗೊಳಿಸಿದ್ದರಲ್ಲದೆ, ಸಾಮಾಜಿಕ ವ್ಯವಸ್ಥೆಯಲ್ಲಿ ಯಾವುದೇ ಏರುಪೇರಾಗದಂತೆ ಸರ್ವರೂ ಎಚ್ಚರವಹಿಸಿದ್ದರು. ಈ ರೀತಿ ಎಲ್ಲಾ ಜಾತಿ-ಜನಾಂಗದವರು ಸಂಸ್ಥಾನದಲ್ಲಿ ಸೌಹಾರ್ದಯುತವಾಗಿ ಬಾಳುತ್ತಿದ್ದರು.

4) ಸ್ತ್ರೀಯ ಸ್ಥಾನ-ಮಾನ :

ಇತ್ತೀಚಿನ ಸಮಾಜ ವಿಜ್ಞಾನಿಗಳು ಸ್ತ್ರೀಯ ಸ್ಥಾನ-ಮಾನವನ್ನು ಕುರಿತು ವಿಶೇಷವಾಗಿ ಅಧ್ಯಯನ ನಡೆಸಿದ್ದಾರೆ. ಅದೇ ದೃಷ್ಟಿಕೋನದಿಂದ ಸುರಪುರ ಸಂಸ್ಥಾನದ ಮಹಿಳೆಯ ವಿವಿಧ ಮಜಲುಗಳನ್ನು ನೋಡುವದು ಬಹುಅಗತ್ಯವಿದೆ. ಸ್ತ್ರೀ ಸ್ವಾತಂತ್ರ್ಯಕುರಿತು ಎದ್ದಿರುವ ಇಂದಿನ ಪ್ರಶ್ನೆಗಳಿಗೆ ಅಂದಿನ ಸುರಪುರ ಸಂಸ್ಥಾನದ ಸಮಾಜದಿಂದ ಉತ್ತರವೆ ಸಿಗುವದಿಲ್ಲ. ಯಾಕೆಂದರೆ, 'ರಾಜಪರಿವಾರದ ರಾಣಿಯರಿಂದ ಹಿಡಿದು ಸಾಮಾನ್ಯ ಮಹಿಳೆಯವರೆಗೂ ಬಲವಾದ ಕಟ್ಟಳೆಗಳಿದ್ದವು. ಅರಮನೆಯೊಳಗಿನ ಕೆಲವು ಪಟ್ಟದ ರಾಣಿಯರು ಸುರಪುರ ಅರಸೊತ್ತಿಗೆಯಲ್ಲಿ ಅಲ್ಪಕಾಲ ಆಳ್ವಿಕೆ ನಡೆಸಿರಬಹುದು.

ಇದರಿಂದಲೇ ಸ್ತ್ರೀಗೆ ಸಂಪೂರ್ಣ ಸ್ವಾತಂತ್ರ್ಯ ಮತ್ತು ಸಮಾಜದಲ್ಲಿ ಗೌರವದ ಸ್ಥಾನಗಳಿದ್ದವೆಂದು ತೀರ್ಮಾನಿಸುವುದು ಸರಿಯಲ್ಲ. ಅಂತಃಪುರದ ರಾಣಿಯರಲ್ಲೇ ಹಲವು ಏಣಿ-ಶ್ರೇಣಿಗಳಿದ್ದುವು.

ಇಮ್ಮಡಿ ವೆಂಕಟಪ್ಪನಾಯಕನ ಕಾಲಕ್ಕೆ ರಾಣಿಯರ ಮಾನ, ನಿಮಾಸ ಮತ್ತು ಇತರ ವ್ಯವಸ್ಥೆಗಾಗಿ ಸಂಸ್ಥಾನದಿಂದ ಸಿಗುವ ಸೌಲಭ್ಯಗಳನ್ನೆಲ್ಲ ನಾಲ್ಕನೆಯ ನಂಬರಿನ ಕೈಫಿಯತ್ತು ವಿಸ್ತಾರವಾಗಿ ವರದಿ ಮಾಡಿದೆ. ಅದನ್ನೇ ಕಪಟರಾಳ ಕೃಷ್ಣರಾಯರು ಕನ್ನಡಕ್ಕೆ ಅನುವಾದಿಸಿ ತಮ್ಮ ಕೃತಿಗೆ ಬಳಸಿಕೊಂಡಿದ್ದಾರೆ. ಈ ವರದಿಯ ಆಧಾರದ ಮೇಲೆ ಸಂಸ್ಥಾನದಲ್ಲಿಯ ರಾಣಿಯರ ಪಾತ್ರವೇನಿತ್ತು ಎಂಬುದನ್ನು ತಿಳಿಯಬಹುದಾಗಿದೆ.

ಪ್ರತಿವರ್ಷ ಪಟ್ಟದರಾಣಿಗಾಗಿ 8 ಸೀರೆ ಮತ್ತು 24 ಕುಪ್ಪಸ, ತರುವಾಂಯದ ರಾಣಿಯರಿಗೆ 6 ಸೀರೆ, 20 ಕುಪ್ಪಸ, ಇನ್ನು ತಾಳಿ ಬಂಧದ ಪತ್ನಿಯರಿಗೆ 4 ಸೀರೆ 8 ಕುಪ್ಪಸಗಳನ್ನು ಸಂಸ್ಥಾನದ ಖರ್ಚಿನಲ್ಲಿಯೇ ಕೊಡಲಾಗಿತ್ತು. ಇದಲ್ಲದೆ ಪ್ರತಿಯೊಬ್ಬ ರಾಣಿಯರಿಗೆ ತೋಷಖಾನಿ ಸೀರೆ, ಕುಪ್ಪಸ, ಚಿನ್ನ ಆಭರಣ, ಕಸ್ತೂರಿ, ಕೇಸರಿ, ಕುಂಕುಮ, ಹಲ್ಲುಪುಡಿ, ಚಕ್ಕೆಅಂಟು, ಚದುರಂಗ, ಗಂಜೀಫು, ಹಣಿಗೆ, ಕನ್ನಡಿ, ಪುಸ್ತಕ, ಬೆಳ್ಳಿತಾಟು ಬಟ್ಟಲು ಮುಂತಾದವುಗಳನ್ನು ಸಿದ್ಧಪಡಿಸಿ ಸಿಂಗರಿಸಲು ದಾಸಿಯರಿದ್ದರು. ಹಾಗೂ ಬೈತುಕಡ್ಡಿ, ಎಲೆ, ಅಡಿಕೆ ಮುಂತಾದ ವ್ಯವಸ್ಥೆಗೆ ನಾತಾನಿ ಹೆಣ್ಣು ಮಕ್ಕಳನ್ನು ನೇಮಿಸಲಾಗಿತ್ತೆಂದು ಸದರಿ ಕೈಫಿಯತ್ತು ವಿವರಿಸುತ್ತದೆ. ಇಂಥ ರಾಣಿಯರ ನಿವಾಸದ ರಕ್ಷಣೆಯಲ್ಲಿ 116 ಕುರುಬರೇರು ಕಾವಲು ಇರುತ್ತಿದ್ದರು. ಇವರಿಗೆ ದಿನಾಲೂ 1 ಸೇರು ಜೋಳ, 2 ದುಡ್ಡು ಮತ್ತು ಊಟವನ್ನು ನೀಡಿ ತಿಂಗಳಿಗೆ 2 ರೂ. ಸಂಬಳ ಕೊಡುವ ವ್ಯವಸ್ಥೆ ಮಾಡಲಾಗಿತ್ತು. ರಾಣಿಯರಿಗಾಗಿ ಜಲದುರ್ಗದಲ್ಲಿ 'ಜಲಕ್ರೀಡೆ' ಕೊಳಗಳನ್ನು ನಿರ್ಮಿಸಿಕೊಡಲಾಗಿತ್ತು.

<u>ರಾಣಿಯರ ಹಬ್ಬದ ವೆಚ್ಚ :</u>

ನಾಗರಪಂಚಮಿ	ರೂ.500-00
ಗೋಕುಲಾಷ್ಟಮಿ	,, 250-00
ವೃಂದಾವನ ಪೂಜೆ	,, 250-00
ಸಂಕ್ರಾಂತಿ ಹಬ್ಬ	,, 200-00
ರಾಮನವಮಿ	,, 150-00

ಮಹಾನವಮಿ	ರೂ. 450-00 ಮತ್ತು
	,, 275-00
ಗೌರಿ ಮತ್ತು ದವನದ ಹುಣ್ಣಿಮೆಯ ವ್ರತ	,, 108-00
ದೀಪಾವಳಿ	,, 1200-00 (ಹಾಗೂ ಸೀರೆ, ಕುಪ್ಪಸ)
ಯುಗಾದಿ	,, 1500-00 (,, ,, ,,)
ಗ್ರಹಣ ದಕ್ಷಿಣೆ	,, 100-00
ಲಕ್ಷ್ಮೀಪೂಜೆ	,, 40-00
ಶ್ರಾವಣಪೂಜೆ	,, 300-00

ಈ ರೀತಿಯಾಗಿ ಸಂಸ್ಥಾನದ ರಾಣಿಯರು ಹಬ್ಬಕ್ಕೆಂದು ವೆಚ್ಚಮಾಡಲು ಸುರಪುರದ ಖಜಾನೆಯಿಂದಲೇ ಮೇಲಿನ ಹಣವೆಲ್ಲ ಕೊಡಲ್ಪಟ್ಟಿತ್ತು. ಆದರೆ ಒಂದು ಮಹತ್ವಪೂರ್ಣ ಅಂಶವೆಂದರೆ ಇವೆಲ್ಲ ಬಾಬುಗಳು ಪಟ್ಟದ ರಾಣಿಯ ಸ್ವಾಧೀನದಲ್ಲಿದ್ದು ಉಳಿದ ರಾಣಿಯರು ಇವಳ ಮೂಲಕವೇ ಪಡೆಯಬೇಕಿತ್ತು. ಆದುದರಿಂದ ಸುರಪುರದ ರಾಣಿಯರಲ್ಲಿ ಶ್ರೇಣೀಕೃತ ವ್ಯವಸ್ಥೆಯಿತ್ತು ಎನ್ನಲು ಅಡ್ಡಿಯಿಲ್ಲ. ಪಟ್ಟದ ರಾಣಿಗೆ ಮಾತ್ರ ಎಲ್ಲಾ ವಿಷಯಗಳಲ್ಲೂ ಪ್ರಥಮ ಪ್ರಾಧಾನ್ಯತೆ ಇದ್ದುದು ಎದ್ದು ಕಾಣುತ್ತದೆ.

ಸುರಪುರ ಸಂಸ್ಥಾನದ ಅನೇಕ ಹಳ್ಳಿಗಳು ಅರಸನ ಮಾತೆ ಇಲ್ಲವೆ ಮಡದಿಯರ ಸವಿನೆನಪಿಗಾಗಿ ನಿರ್ಮಿಸಿದವುಗಳೇ ಆಗಿವೆ. ಇದರಿಂದ ಅಂಥಾ ಊರುಗಳ ಹುಟ್ಟು ಮತ್ತು ಇತಿಹಾಸ ತಿಳಿದುಕೊಳ್ಳಲು ಬಹು ಸಹಾಯಕವಾಗಿದೆ. ಹಸರಂಗಿ ಪಾಮನಾಯಕನು ತನ್ನ ರಾಣಿ ಅಮ್ಮನಾಗತಿ ನೆನಪಿಗಾಗಿ ಅಮ್ಮಾಪೂರನ್ನು, ಪೀತಾಂಬರ ಪಿಡ್ಡನಾಯಕ ತನ್ನ ತಾಯಿ ಲಕ್ಷ್ಮಮ್ಮನ ಸ್ಮರಣೆಗಾಗಿ ಲಕ್ಷ್ಮೀಪುರವನ್ನು, ಮೊಂಡುಗೈ ವೆಂಕಟಪ್ಪ ನಾಯಕ ತನ್ನ ತಾಯಿ ರುಕ್ಮಿಣಿಯಮ್ಮನ ಹೆಸರಲ್ಲಿ ರುಕ್ಮಾಪೂರವನ್ನು ಹಾಗೂ ಅತ್ತಿಗೆಯಾದ ಸತ್ಯಮ್ಮನ ನೆನಪಿಗಾಗಿ ಸತ್ಯಂಪೇಟೆಯನ್ನು ನಿರ್ಮಿಸಿದರು. ಅದರಂತೆ ಮುಮ್ಮಡಿ ವೆಂಕಟಪ್ಪನಾಯಕನು ತನ್ನ ರಾಣಿ ರಂಗಮ್ಮನ ಸವಿನೆನಪಿಗಾಗಿ ರಂಗಂಪೇಟೆ ಗ್ರಾಮವನ್ನು ಕಟ್ಟಿಸಿದನು. ಇದಲ್ಲದೆ ವೆಂಕಟಾಪೂರ, ಸಿದ್ಧಾಪೂರ ಮುಂತಾದ ಊರುಗಳು ಇದೇ ನಿಟ್ಟಿನಲ್ಲಿ ನಿರ್ಮಾಣವಾದವು.

ಸಂಸ್ಥಾನದ ಮುಖ್ಯ ಉತ್ಸವಗಳಲ್ಲಿ ಮಾತ್ರ ಭಾಗವಹಿಸುತ್ತಿದ್ದ ರಾಣಿಯರು ಉಳಿದ ಸಮಯದಲ್ಲಿ ಬೇರೆಡೆ ಹೊರಟರೆ ಮೇಣೆಯಲ್ಲಿ ಮರೆಮಾಡಿಕೊಂಡೇ ಹೋಗುತ್ತಿದ್ದರು. ಈ ಸಂಪ್ರದಾಯವನ್ನು ಸಂಸ್ಥಾನದ ಆಶ್ರಿತವರ್ಗವು ಅನುಸರಿಸಿ ಅದಕ್ಕೆ 'ಗೋಸ್ಯಾ' ಪದ್ಧತಿಯೆಂದು ಹೆಸರಿಟ್ಟರು. ಇಂಥ ಮಾರಕ ಪದ್ಧತಿಗಳಿಂದ ಸಂಸ್ಥಾನದ ಮಹಿಳೆಗೆ ಸಮಾಜದಲ್ಲಿ ಮುಕ್ತ ವಾತಾವರಣ ಕಲ್ಪಿಸದೆ ತಡೆಗೋಡೆ ಕಟ್ಟಿದರು.

ಗ್ರಾಮೀಣ ಮಹಿಳೆಯಂತೂ ಕೇವಲ ದುಡಿಯುವ ಮತ್ತು ಹೆರುವ ಯಂತ್ರವಾಗಿದ್ದಳು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಇವಳಿಗೆ ದಕ್ಕಿದ್ದು ಶೋಷಣೆ ಮಾತ್ರ. ಮನೆಯಲ್ಲಿ ಮಗಳ ಮೇಲೆ ಅಧಿಕಾರ ಚಲಾಯಿಸುವುದೇ ಇವಳಿಗೆ ಕೊಡಮಾಡಿದ ಮಹಾಹಕ್ಕು. ಗೌರವಯುತ ಮನೆತನದ ಹೆಣ್ಣುಗಳು ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಳ್ಳುತ್ತಿರಲಿಲ್ಲ. ಪ್ರಯಾಣಿಸುವಾಗ 'ಸವಾರಿ' ಬಂಡಿಯನ್ನು ಉಪಯೋಗಿಸುತ್ತಿದ್ದರು. ಹೀಗಾಗಿ ಕೆಳವರ್ಗದ ಮಹಿಳೆಗಿರುವಷ್ಟು ಸ್ವಾತಂತ್ರ್ಯ ಹಣ, ಅಧಿಕಾರ, ಅಂತಸ್ತುಗಳಿಂದ ಮೆರೆದ ಮನೆತನದವರಲ್ಲಿ ಇರಲಿಲ್ಲವೆಂಬುದೇ ನಮ್ಮ ವಾದ. ಶಿಕ್ಷಣದಿಂದ ಸಂಪೂರ್ಣ ವಂಚಿತವಾದ ಈ ಮಹಿಳಾ ವರ್ಗವು ಕೇವಲ ಸಾಂಸ್ಕೃತಿಕ ಬದುಕಿನಲ್ಲಿ ಸಂತಸಪಡಬೇಕಿತ್ತು. ತನ್ನ ಮೇಲೆ ಆಗುವ ಯಾವುದೇ ಪ್ರಹಾರಗಳಿಗೆ ಪ್ರತಿಭಟಿಸಿದರೆ ಅದು ದಾರ್ಷ್ಟ್ಯವೆನಿಸುತ್ತಿತ್ತು.

ಸಂಸ್ಥಾನದಲ್ಲಿ ಆಗಾಗ ನಡೆದ ಅತ್ಯಾಚಾರ, ಅಪಹರಣ ಘಟನೆಗಳು, ಪ್ರೇಮಿಸಿ ಬಿಟ್ಟ ಪ್ರಕರಣಗಳು ಸಾಕಷ್ಟಿವೆ. ಟೇಲರನ ಕಾಲಕ್ಕೆ ಇಂಥ ಅಪರೂಪದ ಘಟನೆಗಳು ಜರುಗಿದವು. 'ಒಂದು ಹೆಣ್ಣಿಗೆ ಇಬ್ಬರು ಪುರುಷರು ಪ್ರೇಮಿಸಿದರು. ಇದರಿಂದ ಆ ಪುರುಷರೀರ್ವರಲ್ಲಿ ವಿರಸ ಉಂಟಾಗಿ ವಿಕೋಪಕ್ಕೆ ಕಾರಣವಾಗಿ, ಕೊನೆಗೆ ಇಬ್ಬರ ಕೊಲೆಯಲ್ಲಿ ಈ ಪ್ರೇಮ ಪ್ರಕರಣ ಪರ್ಯವಸಾನವಾಯಿತು. ಅದರಂತೆ ಬೇರೊಂದು ಜಾತಿಯ ಹೆಣ್ಣನ್ನು ಪ್ರೀತಿಸಿ ಮೋಸ ಮಾಡಿದ್ದ ಓರ್ವನನ್ನು ತರಿಬೋಳಿಸಿ, ಕತ್ತೆ ಮೇಲೆ ಕೂಡಿಸಿ ಮೆರವಣಿಗೆ ತೆಗೆದ ಬಗ್ಗೆ ಹೈದ್ರಾಬಾದ ದಾಖಲೆಗಳಲ್ಲಿ ಹೇಳಲಾಗಿದೆ.

ಇಷ್ಟರ ಮೇಲೆ ಸಂಸ್ಥಾನದಲ್ಲಿಯ ಮಹಿಳೆ ಸ್ವಾವಲಂಬಿಯಾಗಿರಲಿಲ್ಲ; ಆಗಲೀ ವಾ ಸ್ವಾತಂತ್ರ್ಯವಾ ಇರಲಿಲ್ಲ. ಇದು 'ಬೇಡ' ಸಮಾಜದಲ್ಲಿ ಅಷ್ಟೇ ಅಲ್ಲ, ಎಲ್ಲರಲ್ಲೂ ಇದನ್ನೇ ಕಾಣುತ್ತೇವೆ.

5) ಜನಕಲ್ಯಾಣ ಕಾರ್ಯಗಳು ಮತ್ತು ಕಟ್ಟಡಗಳು:

ಸುರಪುರ ಸಂಸ್ಥಾನವನ್ನು ಆಳಿದ ಅರಸರೆಲ್ಲರೂ ಒಂದಿಲ್ಲೊಂದು ಜನಪ್ರಿಯ ಕಾರ್ಯಗಳನ್ನು ಮಾಡಿ ಜನಾನುರಾಗಿಗಳಾಗಿದ್ದಾರೆ. ತಮ್ಮ ರಾಜ್ಯ ವಿಸ್ತರಿಸಿಕೊಳ್ಳಲು ಸಾಮ್ರಾಜ್ಯ ಅಧಿಪತಿಗಳಿಗೆ ಸೈನ್ಯ ಸಹಾಯ ಸಲ್ಲಿಸುತ್ತಲೇ ಇಂಥ ಅನೇಕ ಜನಕಲ್ಯಾಣ ಕೆಲಸಗಳನ್ನು ಕಾರ್ಯಗತಗೊಳಿಸಿದ್ದು ಹೊಗಳಿಕೆಯ ವಿಷಯವೇ ಸರಿ. ಸಂಸ್ಥಾನದ ಜನತೆಯನ್ನು ಎರಡು ಶತಮಾನಗಳಷ್ಟು ದೀರ್ಘಕಾಲ ವೈರಿಗಳಿಂದ ರಕ್ಷಿಸಿಕೊಂಡು ಬಂದಲ್ಲದೆ ಅವರ ದೈನಂದಿನ ಅವಶ್ಯಕತೆಗಳನ್ನು ಗುರುತಿಸಿ ಈಡೇರಿಸುವಲ್ಲಿ ಸತತ ಶ್ರಮವಹಿಸಿದ್ದರು. ಇದನ್ನು ಸಮರ್ಥಿಸಲು ಅಂದು ಅವರ ಕಾಲದಲ್ಲಿ ನಿರ್ಮಿಸಿದ ಕಟ್ಟಡಗಳೇ ಜೀವಂತ ಸಾಕ್ಷಿ.

1. ಬಾವಿಗಳು : ಸಂಸ್ಥಾನದ ಊರುಗಳಲ್ಲಿ ನಿರ್ಮಿಸಲ್ಪಟ್ಟ ಹಲವು ಬಾವಿಗಳನ್ನು ದೇವರಬಾವಿ, ನಾಯಕನಬಾವಿ, ಸಾರ್ವಜನಿಕ ಬಾವಿಗಳೆಂದು ವರ್ಗೀಕರಿಸಬಹುದು. ವನದುರ್ಗ, ಮುದಬಾಳ, ಸುರಪುರ, ಮುದನೂರ—ಮುಂತಾದ ಊರುಗಳಲ್ಲಿ ನಿರ್ಮಿಸಲಾದ ಭವ್ಯಪ್ರಮಾಣದ ಬಾವಿಗಳು ದೇವರ ಹೆಸರಿನಲ್ಲಿವೆ. ಅಂದಾಜು 50 ಮೀಟರ ಉದ್ದಗಲಗಳಿಂದ ಕೂಡಿದ ವನದುರ್ಗದ ದೇವರಬಾವಿಯು ಊರ ಕೋಟೆಯೊಳಗಿರುವ ಆಂಜನೇಯ ದೇವರಿಗೆ ಸಂಬಂಧಿಸಿದ್ದು. ಸುತ್ತಲೂ ಹಲವಾರು ಪಾವಟಿಗೆಗಳಿಂದ ಅಲಂಕೃತಗೊಂಡಿರುವ ಈ ಬಾವಿ ಆಳವಾಗಿದೆ. ಕೋಟೆಯೊಳಗಿನ ಜನವಸತಿಯು ಇದರ ಪ್ರಯೋಜನ ಪಡೆದರಲ್ಲದೆ, ತರುವಾಯ ತರಕಾರಿ ಬೆಳೆಗಳಿಗೆ ಇಲ್ಲಿಯ ನೀರನ್ನು ಬಳಸಿಕೊಂಡರು. ಪೂರ್ವಾಭಿಮುಖವಾಗಿ ಪ್ರವೇಶಿಸಲು ಹಾಗೂ ಎತ್ತು, ಎಮ್ಮೆ, ಕೋಣಗಳಿಂದ ನೀರೆತ್ತಲು ಬಾವಿಯ ಉತ್ತರಕ್ಕೆ ಮಟ್ಟಿಗಿರಕಿಯ ವ್ಯವಸ್ಥೆ ಸಹ ಮಾಡಲಾಗಿದೆ.

ಇದರಂತೆ ಮುದಬಾಳ ಗ್ರಾಮದಲ್ಲಿರುವ ದೇವರಬಾವಿಯು ಸಹ ಇದೇ ಬಾವಿಯನ್ನು ಹೋಲುತ್ತದೆ. ಇಂಥ ಅನೇಕ ದೇವರ ಬಾವಿಗಳು ಸಂಸ್ಥಾನದ ಹಲವಾರು ಹಳ್ಳಿಗಳಲ್ಲಿದ್ದು, ಅವೆಲ್ಲ ಹೊಕ್ಕು ತುಂಬುವ ಮಾದರಿಯಲ್ಲಿವೆ. ಹಸರಂಗಿ ಪಾಮನಾಯಕನು ವಾಗಿನಗೆರೆಯಲ್ಲಿ ಮೂರು ಬಾವಿಗಳನ್ನು ತೋಡಿಸಿದ್ದನು. ಆಗ ವಾಗಿನಗೇರಿಯೇ ಇವರ ಆಡಳಿತ ಕೇಂದ್ರವಾಗಿದ್ದ ಪ್ರಯುಕ್ತ ಜನಸಂದಣಿ ಕೇಂದ್ರೀಕೃತಗೊಂಡಿತ್ತು. ಇವುಗಳಲ್ಲಿ ಎರಡು ಬಾವಿಗಳನ್ನು ವ್ಯವಸಾಯಕ್ಕೆ ಬಳಸಿದ ಬಗ್ಗೆ ತಿಳಿಯುತ್ತದೆ. ಮುಮ್ಮಡಿ ವೆಂಕಟಪ್ಪನಾಯಕನ ಆಳ್ವಿಕೆಯಲ್ಲಿ ಸುರಪುರದ ನಾಯಕನ ಬಾವಿ

ನಿರ್ಮಾಣಗೊಂಡು ಬೆಳೆಯುತ್ತಿರುವ ಜನವಸತಿಯ ನೀರಿನ ಬೇಡಿಕೆ ನೀಗಿತು. ಸಂಸ್ಥಾನದ ಅರಸರಲ್ಲಿ ಅತಿಹೆಚ್ಚು ಭಾವಿಗಳನ್ನು ತೋಡಿಸಿದ ಕೀರ್ತಿ ಇಮ್ಮಡಿ ವೆಂಕಟಪ್ಪನಾಯಕನದು. ಕಾರಣ ನಿಜಾಂ ವೀರಪ್ಪ ನಂತ ಮುತ್ಸದ್ದಿಮಂತ್ರಿ.

ಸುರಪುರ ನಗರದಲ್ಲಿ ಅನೇಕ ಓಣಿಗಳು ವಿಸ್ತಾರಗೊಂಡವು. ಜನಸಂಖ್ಯೆಯಲ್ಲಿ ವಿಪರೀತ ಏರಿಕೆ ಕಂಡುಬಂತು. ಕೇವಲ ಕುಡಿಯುವುದಕ್ಕಾಗಿಯೇ ಹುಲಕಲಗೇರಿ, ಡೊಣ್ಣಿಗೇರಿ, ಕರಿಗುಡ್ಡದ ಗೇರಿಯಲ್ಲಿ 1865ರೂ.ವೆಚ್ಚದಿಂದ ಹೊಕ್ಕುತುಂಬುವ ಭಾವಿಗಳನ್ನು ತೋಡಿಸಿದನು. ಅಲ್ಲದೆ ಅದೇ ಆಗ ಜನವಸತಿ ಆರಂಭಿಸಿದ್ದ ಬಚಿರಿ ಮೊರಡಿ (ಬೈರಿಮಡ್ಡಿ)ಯಲ್ಲಿ ಅಂದಾಜು 500 ರೂ.ವೆಚ್ಚದಿಂದ 2 ಭಾವಿಗಳನ್ನು ಕಟ್ಟಿಸಿದನು.

ಸಂಸ್ಥಾನದ ಪ್ರಮುಖ ಹಳ್ಳಿಗಳಾದ ಹಸನಾಪೂರ, ಲಕ್ಷ್ಮೀಪೂರ, ಸತ್ಯಂಪೇಟೆಗಳಲ್ಲಿ ಎರಡೆರಡು, ವೆಂಕಟಾಪೂರ, ಸಿದ್ದಾಪೂರಗಳಲ್ಲಿ ತಲಾ ಒಂದೊಂದು ಭಾವಿಯನ್ನು ಇದೇ ಇಮ್ಮಡಿ ವೆಂಕಟಪ್ಪನಾಯಕನ ಕಾಲದಲ್ಲಿ ನಿರ್ಮಾಣಗೊಂಡವು. ತಾನಿರುವಾಗಲೇ ತೀರಿಕೊಂಡ ತನ್ನ ಮಗ ಬಾಪುಸಾಹೇಬನ ಸ್ಮರಣೆಗಾಗಿ ಬಾಪುಸಾಹೇಬನ ಬಾವಿಯನ್ನು 4264–00 ರೂ.ವೆಚ್ಚದಲ್ಲಿ ಕಟ್ಟಿಸಿದ. ಇದು ವೈಯಕ್ತಿಕ ಪ್ರಚಾರವಾದರೂ ಜನೋಪಯೋಗಿ ಎಂಬುದು ಮರೆಯಲಾಗದು. ಮುಮ್ಮಡಿ ಪಿಡ್ಡನಾಯಕನು ತನ್ನ ಪ್ರೀತಿಯ ಪತ್ನಿ ಭೀಮವ್ವನ ಹೆಸರಿನಿಂದ ವನದುರ್ಗದಲ್ಲಿ ಹೊಕ್ಕು ತುಂಬುವ ವಿಶಾಲಭಾವಿಯೊಂದನ್ನು ಕಟ್ಟಿಸಿದನು. ಇದುವರೆಗೆ ಕೋಟೆಯೊಳಗಿದ್ದ ಜನವಸತಿ ಹೆಚ್ಚಾಗಿ ಈತನ ಕಾಲಕ್ಕೆ ಹೊರಗಡೆ ಬಂದಿದ್ದರು. ಅವರಿಗೆ ಅತ್ಯವಶ್ಯವಾಗಿದ್ದ ಈ ಬೇಡಿಕೆ ಈಡೇರಿಸುವಲ್ಲಿ ಪಿಡ್ಡನಾಯಕ ವಿಶೇಷ ಪರಿಶ್ರಮಪಟ್ಟ. ತೆಲಂಗಾಣದಿಂದ ತಂದಿದ್ದ ರೆಡ್ಡಿ ಜನಾಂಗದ ಭೀಮವ್ವಳು ಪಿಡ್ಡನಾಯಕನ, ಪ್ರೇಮದ ಮಡದಿ. ಇವಳ ನೆನಪಿಗಾಗಿ ನಿರ್ಮಿಸಿದ ಈ ಬಾವಿ ಹಲವಾರು ಪಾವಟಿಗೆಗಳಿಂದ ಮತ್ತು ವಾಸ್ತುಶೈಲಿಯಿಂದ ದೇವರ ಭಾವಿಯನ್ನೇ ಹೋಲುತ್ತದೆ. ಕಟ್ಟಡದಲ್ಲಿ ವೈವಿಧ್ಯಮಯತೆ ಬಳಸಲಾಗಿದೆ. ನಾಲ್ವಡಿ ವೆಂಕಟಪ್ಪನಾಯಕ ಕಾಲಕ್ಕೆ ಬ್ರಿಟಿಷ ರಾಜಕೀಯ ಪ್ರತಿನಿಧಿಯಾಗಿ ಆಗಮಿಸಿದ್ದ ಮೆಡೋಸ್ ಟೇಲರನು ಜೀರ್ಣವಾದ ಅನೇಕ ಭಾವಿಗಳನ್ನು ದುರಸ್ತಿಗೊಳಿಸಿದ್ದು, ಅವುಗಳನ್ನು ವ್ಯವಸಾಯಕ್ಕೆ ಯೋಗ್ಯಗೊಳಿಸಿ ಕೃಷಿ ಜಮೀನಿಗೆ ನೀರು ಉಣಿಸಿದ್ದು ಹೊಸ ಪ್ರಯೋಗವೆನಿಸಿತು. ಇಂಥ ಅನೇಕ ಬಾವಿಗಳ ಬಳಕೆಗಾಗಿಯೇ ಸಂಸ್ಥಾನದ ಯೋಜನೆಯಲ್ಲಿ ಹಣ ತೆಗೆದಿರಿಸಲು ಟೇಲರ ಯೋಜಿಸಿದ.

ಮೇಲಿನ ಎಲ್ಲಾ ಬಾವಿಗಳನ್ನು ಸಮೀಕ್ಷಿಸಿದಾಗ ಒಂದು ಕೆಟ್ಟ ಕಟ್ಟಳೆ ಎದ್ದು ಕಾಣುತ್ತದೆ. ಅದೇನೆಂದರೆ ಇದುವರೆಗೆ ಹೇಳಲಾದ ಬಾವಿಗಳಿಗೆ ಹರಿಜನರ ಪ್ರವೇಶ ನಿಷೇಧಿಸಲಾಗಿತ್ತು. ಅದರ ನೀರು — ಸಿಹಿ — ಕಹಿಯೆಂದು ಸಹ ತಿಳಿಯಲು ಇವರಿಗೆ ಮೇಲ್ವರ್ಗದ ಅಪ್ಪಣೆ ಬೇಕಿತ್ತು.

<u>2. ಕೆರೆಗಳು</u> : ಸಂಸ್ಥಾನದಲ್ಲಿ ರೈತಾಪಿವರ್ಗದ ಸಂಖ್ಯೆಯೇ ಅತಿಹೆಚ್ಚು. ಅಜ್ಞಾನದಿಂದ ವೈಜ್ಞಾನಿಕ ಬೆಳೆ ತೆಗೆಯದೆ ಕೃಷಿಯಲ್ಲಿ ಪ್ರಗತಿಕಾಣದೆ ಆರ್ಥಿಕ ಮುಗ್ಗಟ್ಟು ಎದುರಿಸಬೇಕಾಯಿತು. ಹೀಗಾಗಿ ಹರಿದುಬರುವ ಹಳ್ಳಗಳಿಗೆ ಒಡ್ಡುಹಾಕಿ ನೀರು ಸಂಗ್ರಹಿಸುವ ಕಾರ್ಯ ನಡೆಯಿತು. ತರುವಾಯ ಇವುಗಳ ಗಾತ್ರವನ್ನು ಕೆರೆಗಳ ರೂಪದಲ್ಲಿ ವಿಸ್ತರಿಸಿ ಆಯಾ ಊರುಗಳ ಅಲ್ಪಸ್ವಲ್ಪ ಜಮೀನಿಗೆ ನೀರು ಒದಗಿಸುವ ವ್ಯವಸ್ಥೆ ಮಾಡಲಾಯಿತು. ನೀರಾವರಿ ಕಂಡ ರೈತವರ್ಗ ಸುಖ ಸಂಸಾರ ಸಾಗಿಸಿದ್ದು ಅಲ್ಲಲ್ಲಿ ಕಂಡುಬಂತು.

ಗಡ್ಡಿಪಿಡ್ಡನಾಯಕನ ಸಮಾಜ ಕಾರ್ಯಗಳಲ್ಲಿ ಕೆರೆಗಳು ಕಟ್ಟಿಸಿದ ಬಗ್ಗೆ ಸಧ್ಯ ದಾಖಲೆಗಳಿಲ್ಲ. ಹನಸಗಿ ಪಾಮನಾಯಕನು ಮಲ್ಲಭಾವಿ, ಜಾಲಿಬೆಂಚಿ, ವಾಗಿನಗೇರಿಯಲ್ಲಿ ನಿರ್ಮಿಸಿದ ಪ್ರಸಿದ್ಧ ಕೆರೆಗಳಿಂದಲೇ ಇಲ್ಲಿಯ ಸಮೀಕ್ಷೆ ಆರಂಭಿಸಬಹುದು. ಇವೆಲ್ಲ ವಿಸ್ತಾರದಲ್ಲಿ ಚಿಕ್ಕ ಕೆರೆಗಳಾದರೂ ಹಲವಾರು ಹೆಕ್ಟೇರು ಭೂಮಿಗೆ ನೀರುಣಿಸುವ ಪ್ರಮಾಣವನ್ನು ಹೊಂದಿದ್ದವು. ವಾಗಿನಗೇರಿಯಲ್ಲಿ ಈಗಾಗಲೇ ಇದ್ದ ಒಂದು ಕೆರೆಯಿಂದ ನೀರು ಸರಬರಾಜು ಸಾಧ್ಯವಾಗದೆ ಹೋದಾಗ ಮತ್ತೊಂದು ದೊಡ್ಡ ಕೆರೆಯನ್ನು ಪಾಮನಾಯಕನ ಕಾಲಕ್ಕೆ ನಿರ್ಮಾಣವಾಯಿತು. ವಿಸ್ತಾರಹಾಗೂ ನೀರುಸಂಗ್ರಹ ದೃಷ್ಟಿಯಿಂದ ಸಂಸ್ಥಾನದಲ್ಲೇ ಅತಿದೊಡ್ಡ ಕೆರೆಯೆಂದರೆ ಬೋನಾಳ ಕೆರೆ. 118 ಎಕರೆ ಪ್ರದೇಶದಲ್ಲಿ ವ್ಯಾಪಿಸಿರುವ ಸದರಿ ಕೆರೆಯನ್ನು ಮೊದಲು ಬಿಜಾಪೂರ ಬಾದಶಹರು ನಿರ್ಮಾಣಗೊಳಿಸಿದ್ದರು. ಅಲ್ಲಿಂದ ಸಾವಿರಾರು ಹೆಕ್ಟೇರು ಪ್ರದೇಶಕ್ಕೆ ನೀರು ಒದಗಿಸುವ ಸಾಮರ್ಥ್ಯ ಹೊಂದಿದ ಬೋನಾಳ ಕೆರೆಯು ಕರ್ನಾಟಕ ರಾಜ್ಯದಲ್ಲಿಯೆ ಬಹು ಪ್ರಮುಖವಾದುದೆಂದರೆ ಆಶ್ಚರ್ಯಪಡಬೇಕಿಲ್ಲ. ಭತ್ತ, ಶೇಂಗಾ, ತೊಗರಿ, ಕಡ್ಲಿ ಇನ್ನಿತರ ಪ್ರಧಾನ ಧಾನ್ಯಗಳನ್ನು ಈ ಕೆರೆಯ ನೀರಿನಿಂದಲೇ ಬೆಳೆದು ರೈತರು ಅಭಿವೃದ್ಧಿಪರರೆನಿಸಿದರು. ನೀರಲ್ಲಿ ಮುಳುಗಿದ ರೈತರ ಹೊಲಗಳಿಗೆ ಪ್ರತಿಯಾಗಿ ಭೂಮಿ ವ್ಯವಸ್ಥೆಯನ್ನು ಸಂಸ್ಥಾನದಿಂದ ಮಾಡಲಾಗಿತ್ತು. ಇಮ್ಮಡಿ ವೆಂಕಟಪ್ಪನಾಯಕನ ಆಳ್ವಿಕೆಯಲ್ಲಿ

10 ಕೆರೆಗಳನ್ನು ಕುರಿತು ಹೊಸ ಯೋಜನೆಗಳು ಸಿದ್ಧವಾದವು. ರೈತರ ಸರ್ವಾಂಗೀಣ ಅಭಿವೃದ್ಧಿಗೆ ಕೃಷಿ ಮೂಲವೇ ಮಹತ್ವವೆಂದು ನಂಬಿದ್ದರು. ಹಳೆಯ ಕೆರೆಗಳ ದುರಸ್ತಿ, ಹೊಸ ಕೆರೆಗಳ ನಿರ್ಮಾಣ ಎರಡೂ ಏಕಕಾಲಕ್ಕೆ ನಡೆದವು.[4] ಕೃಷಿಗೆ ಮತ್ತು ದನಕರುಗಳಿಗೆ ಬಹು ಅಗತ್ಯವಾಗಿತ್ತು.

ರಾಜಧಾನಿ ಸುರಪುರದ ಸೌಂದರ್ಯಕ್ಕೆ ತೋಟವೊಂದರ ಅವಶ್ಯಕತೆಯಿತ್ತು. ಗುಡ್ಡದ ಮೇಲಿನಿಂದ ಧುಮುಕುವ ನೀರನ್ನೆಲ್ಲ ಸಿದ್ಧಪೂರದ ಹತ್ತಿರ ಕ್ಯಾರಿಯಲ್ಲಿ ಸಂಗ್ರಹಿಸಿ ಸಿದ್ಧನ ಕೆರೆ ಕಟ್ಟಿಸಲಾಯಿತು. ಕೃಷಿ ಬಳಕೆಗಾಗಿ ಹವನಾಪೂರ, ರುಕ್ಮಾಪೂರ ಧೈರಿಮೊರಡಿಯಲ್ಲಿ ಒಂದೊಂದು ಕೆರೆಯನ್ನು ನಿರ್ಮಿಸಲಾಯಿತು. ನಗರ ಕೆರೆಯನ್ನು 4536 ರೂ. ವೆಚ್ಚದಿಂದ ಹಾಗೂ ಹೆಬ್ಬಾಳ, ಬಾದಿಮಟ್ಟಿ ಗ್ರಾಮಗಳಲ್ಲಿ 7048-00 ರೂ. ಖರ್ಚಿನಿಂದ ಕಟ್ಟಿಸಲಾಯಿತು. ಸಂಸ್ಥಾನದಲ್ಲಿ ಇಮ್ಮಡಿ ವೆಂಕಟಪ್ಪನಾಯಕನ ಕಾಲಕ್ಕೆ ರೂ. 2500-00 ವೆಚ್ಚದಿಂದ ನಿರ್ಮಾಣಗೊಂಡ ಬಹುಮುಖ್ಯ ಕೆರೆಯೆಂದರೆ ಹೊಸಕೇರಿ ಕೆರೆ. ಇದನ್ನು ವಿವಿಧ ಉದ್ದೇಶಗಳಿಂದ ಕಟ್ಟಲಾಗಿತ್ತು. ವನದುರ್ಗದ ಸುತ್ತಲೂ ಅಪಾರ ಪ್ರಾಣಿ ಪಕ್ಷಿಗಳ ಸಂಪತ್ತು ಇತ್ತು. ಸುರಪುರದ ದೊರೆಗಳಿಗೆ ಬೇಟೆಯಾಡಲು ಇದೊಂದು ಮನೋರಂಜನೆಯ ಸ್ಥಳವಾಗಿತ್ತು. ಅದಕ್ಕಾಗಿ ಕೆರೆಯ ಪಕ್ಕದಲ್ಲಿ ವಿಶ್ರಾಂತಿ ಬಂಗ್ಲೆಯನ್ನು ನಿರ್ಮಿಸಿ ಕೆರೆಗೆ ಬರುವ ಪ್ರಾಣಿ-ಪಕ್ಷಿಗಳನ್ನು ಬೇಟೆಯಾಡುತ್ತಿದ್ದರು. ಆದುದರಿಂದ ಹೊಸಕೇರಿ ಕೆರೆ, ಕೃಷಿಗೆ, ಬೇಟೆಗೆ ಹಾಗೂ ದನಕರುಗಳಿಗೆ ಬಳಕೆಯಾಗುವ ವಿಶಿಷ್ಟ ಕೆರೆಯಾಗಿದೆ.

ಮೆಡೋಸ್ ಟೇಲರನು ಸುರಪುರಕ್ಕೆ ಅಧಿಕಾರಿಯಾಗಿ ಬರುವಷ್ಟರಲ್ಲೇ ಹಿಂದೆ ತೋಡಿಸಿದ ಎಷ್ಟೋ ಕೆರೆ-ಬಾವಿಗಳು ಹೂಳು ತುಂಬಿಹೋಗಿದ್ದವು.[5] ರಸ್ತಾಪೂರ, ದೇವಾಪೂರ, ಮಾಲಗತ್ತಿ ಭಾಗದ ಕೆರೆಗಳ ಜೀರ್ಣೋದ್ಧಾರ ಕಾರ್ಯಭರದಿಂದ ಸಾಗಿಸಲು ಟೇಲರ ಕಾರ್ಯೋನ್ಮುಖನಾದ. ಇದರಿಂದ ಅನೇಕ ನೀರಾವರಿ ಜಮೀನುಗಳು ಸಿದ್ಧಗೊಂಡವು. ಟೇಲರ ಎದುರಿಸಿದ ಇನ್ನೊಂದು ಸಮಸ್ಯೆಯೆಂದರೆ ಇಂಥ ನೀರಾವರಿ ಜಮೀನುಗಳೆಲ್ಲ (ಬಹಳಷ್ಟು) ಇನಾಮು ಭೂಮಿಗಳಾಗಿದ್ದವು. ಬೋನಾಳದಂಥ ದೊಡ್ಡ ಕೆರೆ ಸಹ ರಾಣಿ ಈಶ್ವರಮ್ಮಳ ಜಹಗೀರು ಚಿತ್ತನಕ್ಕೆ ಒಳಪಟ್ಟಿತ್ತು. ಇದರಿಂದ ಸಂಸ್ಥಾನದ ಬೊಕ್ಕಸಕ್ಕೆ ಭಾರಿ ಹೊಡೆತ ಬಿದ್ದಿತ್ತು. ಇದುವೇ ಕೃಷಿಯಿಂದ ಆದಾಯ ಕಡಿಮೆಯಾಗಲು ಮೂಲ

---

4. ಸು.ತಾ.ದ. ಪುಟ-38.
5. F.P.C. 29 NOV 1845 No.249.

ಕಾರಣವಾಗಿತ್ತು. ಅದಕ್ಕಾಗಿ ಶಿಥಿಲಗೊಂಡ ಕೆರೆಗಳ ದುರಸ್ತಿಗೆ ವಾರ್ಷಿಕ 3 ರಿಂದ 4 ಸಾವಿರ ರೂ. ಹಣ ತೆಗೆದಿರಿಸಲು ಟೇಲರ ಮಂಜೂರಾತಿ ನೀಡಿದ. ಈ ಯೋಜನೆ ಅಡಿಯಲ್ಲಿ ದುರಸ್ತಿಗೊಂಡ ಕೆರೆಗಳೆಂದರೆ ಕೋಲಕೂರ, ಖಾನಾಪೂರ, ಅಮರಾವತಿ, ಗೋಗಿ, ಗೋನಾಲ ಮುಂತಾದವುಗಳು. ಕೆಲವೊಂದು ಕೆರೆಗಳಿಗೆ ನೂತನ ಕೋಡಿಗಳನ್ನು ಸಹ ಇದೇ ಸಂದರ್ಭದಲ್ಲಿ ಕೂಡಿಸಲಾಯಿತು.

ಇವೆಲ್ಲ ಯೋಜನೆ ಕಾರ್ಯರೂಪಕ್ಕೆ ಬರುವ ಮುನ್ನ ಸಂಸ್ಥಾನದ ರೈತರ ಜಮೀನುಗಳನ್ನು ಸಂಪೂರ್ಣ ನೀರಾವರಿಗೊಳಿಸಬೇಕೆನ್ನುವ ದೃಷ್ಟಿಯಿಂದ ದಿವಾನ ವೀರಪ್ಪನು 6 ಲಕ್ಷ ರೂ. ವೆಚ್ಚದ ಯೋಜನೆಯೊಂದನ್ನು ಸಿದ್ಧಪಡಿಸಿದ.[6] ಅದೇನೆಂದರೆ ಕೃಷ್ಣಾನದಿಗೆ ನಾರಾಯಣಪೂರ ಹತ್ತಿರ ಅಣೆಕಟ್ಟು ನಿರ್ಮಿಸಿ, ತಡೆದ ನೀರನ್ನು ಕಾಲುವೆ ಮೂಲಕ ವಾಗಿನಗೇರೆ, ಸುರಪುರದವರೆಗೂ ಸಾಗಿಸುವ ಜೊತೆಗೆ 105 ಗ್ರಾಮಗಳ ರೈತರ ಜಮೀನಿಗೆ ನೀರು ಒದಗಿಸುವ ಮಹತ್ವಪೂರ್ಣ ಕನಸು ಕಂಡಿದ್ದ. ಆದರೆ 6 ಲಕ್ಷ ರೂ. ನೀಡುವ ಶಕ್ತಿ ಸಂಸ್ಥಾನಕ್ಕಿರಲಿಲ್ಲ. ಹೀಗಾಗಿ ಪ್ರಸ್ತುತ ಯೋಜನೆ ನೆಲಕಚ್ಚಿ ಹೋಯಿತು. ಮುಂದೆ ಟೇಲರ ಸಹ ಇದೇ ನಿಟ್ಟಿನಲ್ಲಿ ಯೋಚಿಸಿ ಕೈಬಿಟ್ಟ.

3. <u>ತೋಟಗಳು :</u> ಕೆರೆ ಬಾವಿಗಳ ಸಂಪತ್ತು ಸಂಸ್ಥಾನದಲ್ಲಿ ಹೆಚ್ಚಿದಂತೆಲ್ಲ ಅವುಗಳ ಅಕ್ಕಪಕ್ಕದ ತೋಟಗಳ ವ್ಯವಸ್ಥೆ ಸಹ ಅಚ್ಚುಕಟ್ಟಾಗಿತ್ತು. ವ್ಯವಸಾಯದಲ್ಲಿ ಬೃಹತ್ ಸುಧಾರಣೆ ತರುವುದರೊಂದಿಗೆ ಆರೋಗ್ಯ, ತರಕಾರಿ, ಫಲ, ಪುಷ್ಪ ಇನ್ನಿತರ ಉದ್ದೇಶದಿಂದ ತೋಟಗಳನ್ನು ಬೆಳೆಸಲಾಯಿತು. 'ಗೋಪಾಲಪ್ಪನ ತೋಟ, ಗುಡಿ ತೋಟ, ಗುಂಡಿಕಾರನ ತೋಟ, ರುಕ್ಮಾಪೇಟೆ ತೋಟಗಳು ಇದೇ ಯೋಜನೆಯಲ್ಲಿ ಮೈತಾಳಿದವು. ಮಾವಿನ ತೋಪು ಹಾಗೂ ರಸ್ತೆ ಬದಿಯ ಸಾಲುಮರಗಳಿಗಾಗಿ ಈ ತೋಟಗಳಿಗೆ ಸಸಿ ಬೆಳೆಸುವ ಜವಾಬ್ದಾರಿ ವಹಿಸಲಾಗಿತ್ತು.

ಸುರಪುರದ ಸುತ್ತಲೂ ಹುಣಸೆ, ಮಾವಿನಮರ ನೆಡಿಸಿದ ಕೀರ್ತಿ ಟೇಲರನದು. 1000 ಕ್ಕೂ ಹೆಚ್ಚು ಮರಗಳು ಈತನ ಪೋಷಣೆಯಲ್ಲಿಯೇ ಬೆಳೆದವು.[7]

---

6. ಡಾ.ವಿ.ಜಿ.ಪೂಜಾರ – ಕಡ್ಲಪ್ಪ ಮತ್ತು ವೀರಪ್ಪನವರು. ಪುಟ-31.
7. F.P.C. May 9, 1851 No.54.

<u>4. ರಸ್ತೆಗಳು :</u> ಕ್ರಿ.ಶ.1708 ರಲ್ಲಿ ನಿರ್ಮಾಣಗೊಂಡ ಸುರಪುರ ನಗರವು ರಾಜಧಾನಿ ಪಟ್ಟ ಪಡೆದುಕೊಂಡಿತು. ತಕ್ಷಣವೇ ಸುತ್ತಲೂ ಅನೇಕ ಊರುಗಳು ರಾಜರ ಮಾತೆ ಮತ್ತು ಮಡದಿಯರ ಹೆಸರಿನಲ್ಲಿ ಹುಟ್ಟಿಕೊಂಡವು. ಆ ಎಲ್ಲಾ ಊರುಗಳಿಗೆ ಮೊದಲು ಮಾರ್ಗವೇ ಇರಲಿಲ್ಲ. ಕಾಲುದಾರಿ ಮೇಲೆ ಕುದುರೆ ಸವಾರಿ ಇತ್ತು. ಕೆಲವು ಮುಖ್ಯ ಮಾರ್ಗಗಳು ವ್ಯಾಪಾರ ವಹಿವಾಟು ಹೊಂದಿದ ನಗರಗಳಿಗೆ ಮಾತ್ರ ಮೀಸಲಾಗಿತ್ತು. ಇನ್ನು ಕೋಟೆಹೊಂದಿದ ಊರುಗಳಿಗೆ ರಾಜಧಾನಿ ಸಂಪರ್ಕದಲ್ಲಿ ಉಳಿಯಲು ರಸ್ತೆ ಸೌಲಭ್ಯ ಕಲ್ಪಿಸಲಾಗಿತ್ತು.

ಸುರಪುರವು ಬೆಟ್ಟದ ಮೇಲಿರುವದರಿಂದ ರಸ್ತೆ ನಿರ್ಮಾಣಕ್ಕೆ ವಿಪರೀತ ಅಡಚಣೆಯಾಗಿತ್ತು. ವೆಚ್ಚ ಭರಿಸಲು ಭಂಡಾರದಲ್ಲಿ ಅಷ್ಟೊಂದು ಹಣವೂ ಇರಲಿಲ್ಲ. ಇದ್ದರೂ ಕೇವಲ ರಸ್ತೆಗಾಗಿ ವಿನಿಯೋಗಿಸುವುದು ಸಮರ್ಥನೀಯವೆನಿಸಲಿಲ್ಲ.

ಕಲ್ಯಾಣ ಅಭಿವೃದ್ಧಿ ಕಾರ್ಯಕ್ಕೆ ಹೆಸರಾದ ಮೆಡೋಸ್ ಟೇಲರನ ಕಾಲಕ್ಕೆ ಅನೇಕ ಲೋಕೋಪಯೋಗಿ ಕೆಲಸಗಳಾದವು. ಹತ್ತು ವರ್ಷದ ಆತನ ಆಡಳಿತಾವಧಿಯಲ್ಲಿ ಹಲವಾರು ಹೊಸ ರಸ್ತೆಗಳು ನಿರ್ಮಾಣಗೊಂಡವು. ಹಳೆಯ ಬೀದಿಗಳಿಗೆ ದುರಸ್ತಿ ಕಾಯಕಲ್ಪ ಸಿಕ್ಕಿತು. ಬೋನಾಳ ಕೆರೆಯಲ್ಲಿ ರಾಣಿಯರಿಗಾಗಿ ಮತ್ತು ಬಾಲವೆಂಕಟನಿಗಾಗಿ ನೌಕಾವಿಹಾರ ಸೌಲಭ್ಯ ಒದಗಿಸಲಾಗಿತ್ತು. ಅಲ್ಲದೆ ಮೀನುಸಾಗಾಣಿಕೆ ಕೇಂದ್ರವು ಇಲ್ಲೇ ಇತ್ತು. ಅತಿಹೆಚ್ಚು ನೀರಾವರಿ ಜಮೀನುಗಳು ಇದೇ ಕೆರೆಯನ್ನು ಅವಲಂಬಿಸಿದ್ದವು. ಹೀಗಾಗಿ ಬೋನಾಳ ಕೆರೆಗೆ ರಾಜಧಾನಿಯಿಂದ ಅತಿ ಮಹತ್ವ ಸಿಕ್ಕಿತು. ಈ ಕೆರೆಗೆ ಕ್ರಮಿಸಲು ಏಳು ಮೈಲು ಉದ್ದ ರಸ್ತೆಯನ್ನು ಹಾಗೂ ರಾಜಧಾನಿಯ ಸುತ್ತಲೂ ಸುಮಾರು ಮೂವತ್ತು ಮೈಲು ದೂರದ ಊರುಗಳಿಗೆ ಸೇರುವ ರಸ್ತೆಗಳನ್ನು ನಿರ್ಮಿಸುವಲ್ಲಿ ಟೇಲರ ಯಶಸ್ವಿಯಾದ.[8]

<u>5. ಆರೋಗ್ಯ ಮತ್ತು ಆಸ್ಪತ್ರೆ :</u>

ಜನತೆಯ ಆರೋಗ್ಯಕ್ಕಾಗಿ ಸಂಸ್ಥಾನದಲ್ಲಿ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಅನಕ್ಷರತೆ, ಮೂಢನಂಬಿಕೆಗಳೇ ಇವರಿಗೆ ಶಾಪವಾಗಿ ಆರೋಗ್ಯ ಕಾಪಾಡಿಕೊಳ್ಳಲು ಅಡ್ಡಿಯಾಗಿತ್ತು. ಪ್ರಕೃತಿ ವಿಕೋಪಗಳಿಂದ ಹಲವು ಮಾರಕ ರೋಗಗಳಿಗೆ ಸಂಸ್ಥಾನದಲ್ಲಿ ಸಾವಿರಾರು ಜನ ಬಲಿಯಾದದ್ದುಂಟು. ಹಲವಾರು ರೋಗಗಳನ್ನು ಗುಣಪಡಿಸುವ ಗಿಡಮೂಲಿಕೆ ವೈದ್ಯರು

8. SML p-288.

ಪ್ರತಿಯೊಂದು ಗ್ರಾಮದಲ್ಲೂ ಇದ್ದರು. ತಲೆನೋವಿನಿಂದ ಹಿಡಿದು ಸಾವು ತರುವ ರೋಗವಿದ್ದರು ತೊಪ್ಪಲು, ಬೇರು, ತೊಗಟೆ ಹೀಗೆ ಇನ್ನಿತರ ಸಸ್ಯ ಮತ್ತು ಬೀಜಗಳ ಮೂಲಕವೇ ಅದನ್ನು ನಿವಾರಿಸುವ ಅಂದಿನ ಅನಕ್ಷರಸ್ಥ ವೈದ್ಯರಿದ್ದರೆಂದರೆ ನಮಗಿಂದು ನಂಬಲು ಅಸಾಧ್ಯವಾಗಬಹುದು. ಆದರೂ ನಿಜ. ಶರೀರದ ಯಾವುದೇ ಮೂಳೆ ಮುರಿದಿರಲಿ, ಯಾವುದೇ ಅಂಗಹೀನವಾಗಲಿ ಅದನ್ನು ಸರಿಪಡಿಸುತ್ತಿದ್ದರು. ಇಂದು ಪ್ರಚಾರದಲ್ಲಿರುವ ಅನೇಕ ರೋಗಗಳಿಗೆ ಅಂದು ಹೆಸರಿರಲಿಲ್ಲ ಅಷ್ಟೆ. ಅವೆಲ್ಲವ ಗುಣಪಡಿಸುವ 'ವಿದ್ಯೆ' ಇವರಲ್ಲಿತ್ತು. ಮಾನಸಿಕ, ಲೈಂಗಿಕ, ಕಜ್ಜಿ, ಕುಷ್ಠ ಎಂಬಿತ್ಯಾದಿ ರೋಗಗಳಿಂದ ಬಳಲುವ ರೋಗಿಗಳನ್ನು ಗುಣಮುಕ್ತರನ್ನಾಗಿಸಿದ ಬಗ್ಗೆ ದಾಖಲೆಗಳಿವೆ.

ರಾಜರ ಅನಾರೋಗ್ಯ ಸುಧಾರಿಸಲು ರಾಜ್ಯ ವೈದ್ಯರಿದ್ದರು. ರಾಜಪರಿವಾರದವರೆಲ್ಲರ ಆರೋಗ್ಯ ಕ್ಷೇಮದ ಜವಾಬ್ದಾರಿ ಈತನ ಮೇಲಿತ್ತು. ಕ್ರಿ.ಶ. 1845ರಲ್ಲಿ ಹಬ್ಬಿದ ಭೀಕರ ಕಾಲರಾದಿಂದ ಇಡೀ ಸಂಸ್ಥಾನ ತತ್ತರಿಸಿಹೋಗಿತ್ತು. ಸಾವಿರಾರು ಜೀವಗಳು ನೆಲಕ್ಕುರುಳಿದವು. ಇಂಥ ಸಂದರ್ಭದಲ್ಲಿ ಮುಗ್ಧನಂಬಿಕೆಗೆ ಮಾರು ಹೋಗಿ ಕುರಿ, ಕೋಣಗಳ ಬಲಿಯಲ್ಲಿ ಊರ ದೇವತೆಯನ್ನು ಸಂತೈಸುತ್ತಾ ಅಸುನೀಗಿದರು. ಇದರಿಂದ ರೋಗ ಹೋಗಲಿಲ್ಲ; ಪ್ರಾಣ ಉಳಿಯಲಿಲ್ಲ.

ಮುಮ್ಮಡಿ ಪಾಮನಾಯಕನ ಆಸ್ಥಾನದಲ್ಲಿದ್ದ ರಾಜವೈದ್ಯನಿಗೆ ಮಾಗಣ್ಣೇರಿ ಗ್ರಾಮವನ್ನು ಜಹಗೀರು ಹಾಕಿಕೊಟ್ಟು ಆತನ ವೈದ್ಯಸೇವೆಯನ್ನು ಸಂಸ್ಥಾನದ ಅರಮನೆ ಪರಿವಾರಕ್ಕೆ ಕಲ್ಪಿಸಿಕೊಳ್ಳಲಾಗಿತ್ತು.[9] ಸಂಸ್ಥಾನದಿಂದ ಸಂಬಳ ಪಡೆಯುವ ಹಲವಾರು ವೈದ್ಯರಿದ್ದರೆಂದು ಇತ್ತೀಚಿನ ಶೋಧನೆಗಳು ಹೇಳುತ್ತವೆ. ಇವರು ಯುದ್ಧದಲ್ಲಿ ಗಾಯಗೊಂಡ ಯೋಧರ ಶುಶ್ರೂಷೆಗಳನ್ನು ಮಾತ್ರ ಮಾಡುತ್ತಿದ್ದರು. ಸದಾ ಸೈನ್ಯದ ಜೊತೆ ಇರಬೇಕಾದ ಇವರಿಗೆ ಪ್ರತ್ಯೇಕ ಶಿಬಿರದ ವ್ಯವಸ್ಥೆ ನೀಡಲಾಗಿತ್ತು.

'ಹಳೆಯ ವೈದ್ಯಪದ್ಧತಿ ನವೀಕರಣಗೊಂಡದ್ದು ಮೆಡೋಸ್ ಟೇಲರನ ಕಾಲಕ್ಕೆ. ನಗರದಲ್ಲಿ ಸಣ್ಣ ಆಸ್ಪತ್ರೆಗಳನ್ನು ತೆರೆದನು ಮತ್ತು ವಿದೇಶದಿಂದ ಅನೇಕ ಬಗೆಯ ಔಷಧಗಳನ್ನು ತರಿಸುತ್ತಿದ್ದನು. ಇದಕ್ಕಾಗಿ ವಾರ್ಷಿಕ 1250 ರೂ.ಗಳನ್ನು ಸಂಸ್ಥಾನದ ಖರ್ಚಿನಲ್ಲಿ ಭರಿಸಲಾಗುತ್ತಿತ್ತು. ಪ್ರಖ್ಯಾತ ವೈದ್ಯರಾದ ಡಾ. ಮುರ್ರೆ ಹಾಗೂ ಡಾ. ನೆಲ್ಲರ್ಸರು ರಾಜಧಾನಿಯಲ್ಲಿದ್ದು ವೈದ್ಯಸೇವೆ ಸಲ್ಲಿಸುತ್ತಿದ್ದರು.

---

9. ಸು.ಸಂ.ಇ. ಪುಟ-107.

ವೃತ್ತಿಯಿಂದ ಇವರು ವೈದ್ಯರಾದರು. ಪ್ರವೃತ್ತಿಯಿಂದ ನಾಲ್ವಡಿ ವೆಂಕಟಪ್ಪನಾಯಕನ ಶಿಕ್ಷಕರಾಗಿದ್ದರು. ಡಾ: ನೆಲ್ಲರ್ಸ ಶಸ್ತ್ರ ಚಿಕಿತ್ಸೆಯಲ್ಲಿ ಅಪಾರ ಅನುಭವ ಪಡೆದ ಖ್ಯಾತ ವೈದ್ಯನಾಗಿದ್ದನೆಂದು ಟೇಲರ ತನ್ನ ಆತ್ಮ ಚರಿತ್ರೆಯಲ್ಲಿ ಬರೆಯುತ್ತಾನೆ. ಸಂಸ್ಥಾನಕ್ಕೆ ಅಂಟಿದ ದೊಡ್ಡ ಪಿಡುಗೆಂದರೆ ಕಾಲರಾ, ಮಲೇರಿಯಾ ಮುಂತಾದವು. ಡಿಸೆಂಬರ 20, 1849 ರಿಂದ ನವ್ಹೆಂಬರ 30, 1850ರ ವರೆಗೆ 300 ರೋಗಿಗಳಿಗೆ ಹಲ್ಲುನೋವು, ಹುಣ್ಣುನೋವು ಮತ್ತು ಇತರ ರೋಗಗಳಿಗೆ ಚಿಕಿತ್ಸೆ ನೀಡಲಾಗಿತ್ತು. ಅದರಲ್ಲಿ 241 ರೋಗಿಗಳು ಗುಣಮುಖರಾದರೆಂದು ಬ್ರಿಟೀಷ ದಾಖಲೆಗಳು ಹೇಳುತ್ತವೆ.[10]

——oo——

10. F.P.C. 14 APR 1849 No.48.

Chapter - 5

ಅಧ್ಯಾಯ ಐದು

ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು

ಅಧ್ಯಾಯ – ಐದು

ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು

ಅ. ಸಾಹಿತ್ಯಿಕ

ಸಹೃದಯ ಸೃಷ್ಟಿಯ ಸಂಪತ್ತು ಎನಿಸಿರುವ ಸಾಹಿತಿ ಮತ್ತು ಸಾಹಿತ್ಯಕ್ಕೆ ಸುರಪುರ ಸಂಸ್ಥಾನದಲ್ಲಿ ಶಿಖರಪ್ರಾಯದ ಸ್ಥಾನವಿದೆ. "ಆಸ್ಥಾನವಿಲ್ಲದ ಅರಸೊತ್ತಿಗೆಯಿಲ್ಲ; ಸಾಹಿತಿಯಿಲ್ಲದ ಸಂಸ್ಥಾನವಿಲ್ಲ" ಎಂಬ ಹೊಸ ಗಾದೆ ಪ್ರಸ್ತುತ ಅಧ್ಯಾಯಕ್ಕೆ ಅಕ್ಷರಶಃ ಅನ್ವಯಿಸುತ್ತದೆ. ಸುರಪುರವು ತನ್ನ ಆಸ್ಥಾನದಲ್ಲಿ ಅನೇಕ ಕವಿಗಳಿಗೆ ಆಶ್ರಯ ನೀಡುವ ಮೂಲಕ ಸಮೃದ್ಧ ಸಾಹಿತ್ಯ ರಚನೆಗೆ ಪ್ರೇರಕಶಕ್ತಿಯಾಗಿತ್ತು. ಇಂಥ ವಿದ್ವಾಂಸರಿಂದ ವೇದ, ಪುರಾಣ, ಕಾವ್ಯ, ಅಲಂಕಾರ, ಶಾಸ್ತ್ರ, ತರ್ಕ, ತತ್ವ, ನ್ಯಾಯ – ಹೀಗೆ ಮುಂತಾದ ವಿಷಯದ ಮೇಲೆ ವಿಶಿಷ್ಟ ಹೊತ್ತಿಗೆಗಳು ಹೊರಬಂದವು. ಅಲ್ಲದೆ ಮೂಲ ಮಹಾಭಾರತ, ರಾಮಾಯಣ, ಭಾಗವತಗಳ ಮೇಲೆ ವಿದ್ವತ್ಪೂರ್ಣ ವ್ಯಾಖ್ಯಾನಗಳು, ಜ್ಯೋತಿಷ, ವ್ಯಾಕರಣ, ನಿಘಂಟುಗಳಂತ ಕಠಿಣ ಶಾಸ್ತ್ರ ವಿಷಯಗಳೂ ಸಹ ಸಂಸ್ಥಾನದಲ್ಲಿ ಸರಳ ಸಾಹಿತ್ಯವಾದವು ಎನ್ನುವಲ್ಲಿ ಸಾಹಿತ್ಯಿಕ ಚಟುವಟಿಕೆಯ ಶ್ರೀಮಂತ ವಾತಾವರಣ ಇಲ್ಲಿ ಉತ್ತುಂಗವಾಗಿತ್ತೆಂದು ಊಹಿಸಬಹುದು.

ಸುರಪುರದ ಅರಸರನ್ನು ದುರ್ಬಲಗೊಳಿಸಿದ ಅನ್ಯಶಕ್ತಿಗಳು, ಇಡೀ ಸಂಸ್ಥಾನವನ್ನೇ ಒಂದು ಕಾಲಕ್ಕೆ ಶ್ರೀಮಂತರ ಕೈಗೆ ಒತ್ತೆ ಹಾಕಿದ್ದವು. ಇದರಿಂದ ಆಗ ಆಳ್ವಿಕೆಗೆ ಬಡತನ ಬಂದಿರಬಹುದು. ಆದರೆ ಆಳುವ ಅರಸರ ಹೃದಯಕ್ಕೆ ಎಂದಿಗೂ ಸಾಹಿತ್ಯ 'ಬರ' ಮಾತ್ರ ಬರಲಿಲ್ಲ. ಆಸ್ಥಾನ ಕವಿಗಳಿಂದ ರಚಿತವಾದ ಅಪಾರ ಕಾವ್ಯಕೃಷಿಯೇ ಇದನ್ನು ಪುಷ್ಟೀಕರಿಸುತ್ತದೆ. ಇದಕ್ಕೆಲ್ಲ ಕಾರಣ ನಗರ ನಾಡಿನ ಭಾಗದಲ್ಲಿದ್ದ ಪೂರ್ವದ ಪರಂಪರೆ. ಶರಣರು, ದಾಸರು ಬಿಟ್ಟುಹೋದ ಸಾಹಿತ್ಯ ರಾಶಿ ಸಣ್ಣದೇನಲ್ಲ. ಮುದನೂರ ದಾಸಿಮಯ್ಯ, ಕೊಡಗುಳಿ ಕೇಶಿರಾಜ, ಕೆಂಭಾವಿ ಭೋಗಣ್ಣ, ಶಿಮ್ಮಲಗಿಯ ಚಂದಿಮರಸ, ನಿಜಗುಣಶಿವಯೋಗಿ, ನಗರದ ಬ್ರಹ್ಮಯ್ಯ, ನಗರದ ನಾದಯ್ಯ, ನೆರಿಲ್ಗೆ ಶಾಂತಯ್ಯ, ಅಗ್ಗಣಿ ಹೊನ್ನಯ್ಯ, ಓಲಿಯ ಶಾಂತಯ್ಯ, ಡೋಹರ ಕಕ್ಕಯ್ಯ, ತಿಂಥಿಣಿ ಮೋನಪ್ಪಯ್ಯ, ಕೊಡೆಕಲ ಬಸವಣ್ಣ, ಜೇವರಗಿಯ ಷಣ್ಮುಖಶಿವಯೋಗಿ, ಸೊನ್ನದ ಸಿದ್ಧಲಿಂಗ ಯತಿ, ರಾಮಪುರದ ಬೊಕ್ಕಪ್ಪಯ್ಯ ಅಂದೇರಿ ಕರುಣೇಶ್ವರ, ಕಡಕೋಳ ಮಡಿವಾಳಪ್ಪ ಮುಂತಾದ ಶರಣರು[1] ವೀರಶೈವ ಸಾಹಿತ್ಯ ಸೃಷ್ಟಿಗೆ ಮೂಲ ಪ್ರೇರಣೆಯಾಗಿದ್ದರು. ಅದರಂತೆ ದೇವಪುರದ

---

1. ಡಾ. ವಿ. ಶಿವಾನಂದ – ನಗರನಾಡಿನ ಶಿವಶರಣರು, ಪುಟ 9–12.

ಲಕ್ಷ್ಮೀಶ, ಮಹಿಪತಿದಾಸ, ಆನಂದದಾಸ, ವೀರಭಟ್ಟದ ಶ್ರೀಗಳು ಅದ್ವೈತ, ವಿಶಿಷ್ಟಾದ್ವೈತ ಪರಂಪರೆಗೆ ಸ್ಫೂರ್ತಿ ತುಂಬಿದರು.

ಇಲ್ಲಿ ಗಮನಿಸಬೇಕಾದ ಬಹುಮುಖ್ಯ ಅಂಶವೆಂದರೆ ಸುರಪುರದ ಅರಸರು ರಾಮಾನುಜೀಯ ಪಂಥವನ್ನು ಪ್ರತಿನಿಧಿಸಿದವರಾಗಿರುವದರಿಂದ ತಮ್ಮ ಆಸ್ಥಾನದಲ್ಲಿಯೂ ಸಹ ಶ್ರೀವೈಷ್ಣವ ಸಂಪ್ರದಾಯ ವರಿಗೆ ಅತಿ ಹೆಚ್ಚು ಸ್ಥಾನ ಮನ್ನಣೆ ನೀಡಿ, ಧರ್ಮಪಕ್ಷಪಾತಿಗಳೆನಿಸಿಕೊಂಡಿದ್ದರು. ಇದರಿಂದ ವೀರಶೈವ ಕವಿಗಳಿಗೆ ರಾಜಾಶ್ರಯದಲ್ಲಿಯ ಸ್ಥಾನಮನ್ನಣೆ ಸಂಪೂರ್ಣ ಶೂನ್ಯವಾಗಿತ್ತೆಂದು ಅರ್ಥವಲ್ಲ, ಸ್ವತಃ ಸಾಹಿತ್ಯ ರಚಿಸಿ ಸಂಸ್ಥಾನದುದ್ದಕ್ಕೂ ಪ್ರಸಾರಗೊಳಿಸಿದ 'ಜನಪರ' ನಿಲುವು, ವೀರಶೈವ ಕವಿಗಳಿಗೆ ಇದನ್ನು ಕಂಡರೆ ಕೇವಲ ಆಸ್ಥಾನಕ್ಕೆ ಮಾತ್ರ ತಮ್ಮ ವಿದ್ವತ್ತಿನ ಮೇರೆ ಕೊರೆದುಕೊಂಡಿದ್ದ ಆಸ್ಥಾನ ಕವಿಗಳಲ್ಲಿ (ಶ್ರೀವೈಷ್ಣವ) ಕಾಣುತ್ತೇವೆ.

ಸಂಸ್ಕೃತ ಭಾಷೆಗೆ ಪ್ರಥಮ ಪ್ರಾಶಸ್ತ್ಯ ನೀಡಿದ ಆಸ್ಥಾನ, ತರುವಾಯದ ಸ್ಥಾನವನ್ನು ತೆಲುಗಿಗೆ ಬಿಟ್ಟು ಕೊಟ್ಟಿತು. ಅದಕ್ಕಾಗಿ ಸಾಮಾನ್ಯರ ಜೀವಾಳವಾದ ಕನ್ನಡವನ್ನು ಕೈಗೆತ್ತಿ ಕೊಂಡವರು ಶರಣರು ಮಾತ್ರ. ಹೀಗಾಗಿ ಸಾಮಾನ್ಯನ ಹೃದಯಕದ ತೆಗೆದ ಮೊದಲ ಕೀರ್ತಿ ಶರಣರಿಗೆ ಮತ್ತು ಅವರ ಸಾಹಿತ್ಯಕ್ಕೆ ಸಲ್ಲುತ್ತದೆ ಹೊರತುಸಂಸ್ಕೃತ ಪಂಡಿತ,ಪಾಂಡಿತ್ಯಕ್ಕಲ್ಲ.

ಸಂಸ್ಥಾನದ ದೃಷ್ಟಿಯಲ್ಲಿ ಸಾಹಿತ್ಯವೆಂಬುದು ಅತ್ಯಂತ ಅವಶ್ಯವೆನಿಸುವ ಮಟ್ಟಿಗೆ ವ್ಯಕ್ತ ವಾಗಿದೆ. ಹಲವು ವೈವಿಧ್ಯಮಯ ಪ್ರಕಾರಗಳನ್ನು ಅಳವಡಿಸಿಕೊಂಡ ಸಂಸ್ಥಾನದ 'ಸಾಹಿತ್ಯವು' ತನ್ನ ಕೃತಿಯಲ್ಲಿಯೂ ಬಹು ಕುತೂಹಲ ಕಂಡುಕೊಂಡಿದೆ. ಸ್ವತಃ ಕೆಲವು ಅರಸರು ವಿದ್ವಾಂಸರಾಗಿದ್ದ ರಿಂದ ಸಹಜವಾಗಿಯೇ ಸಂಸ್ಥಾನದಲ್ಲಿ ಸಾಹಿತ್ಯಾಸಕ್ತಿ ಸಂಪದ್ಭರಿತಗೊಂಡಿತು. ಮರಾಠಿಯನ್ನು ಆಡಳಿತ ಭಾಷೆಯನ್ನಾಗಿ ಹೊಂದಿದ ಸುರಪುರವು ತೆಲುಗು ಮಾತೃಭಾಷೆಯ ಅರಸರನ್ನು ಪಡೆದಿದೆ. ಅಲ್ಲದೆ ಆಸ್ಥಾನದಲ್ಲಿ ಸಂಸ್ಕೃತ ಸಾಹಿತ್ಯಕ್ಕೆ ಪ್ರೇರಣೆ ತುಂಬಿದ್ದು ಕಂಡರೆ "ಎಂಥ ವೈಶಿಷ್ಟ್ಯಪೂರ್ಣವಾದು ದೆಂದು" ಎನಿಸದೇ ಇರದು.

ಸುರಪುರ ನಗರ ನಿರ್ಮಾಣದೊಂದಿಗೆ ಸಂಸ್ಥಾನಕ್ಕೆ "ರಾಜಧಾನಿ ವೈಭವ" ಪ್ರಾಪ್ತವಾಯಿ ತು. ಆಗ ಆಸ್ಥಾನ ಮನ್ನಣೆ ಪಡೆದ ಹಲವಾರು ಪ್ರತಿಭಾವಂತ ಪಂಡಿತರು ವಿವಿಧ ಸ್ವರೂಪಗಳಲ್ಲಿ ವರ್ಣರಂಜಿತ ವಸ್ತುವಿನ ಕೃತಿಗಳನ್ನು ನೀಡಿದರಲ್ಲದೆ ಸಾಹಿತ್ಯ ದೃಷ್ಟಿಯಿಂದ ಸಂಸ್ಥಾನವನ್ನು ಪ್ರತಿಷ್ಠಿತಗೊಳಿಸಿದರು.

ಮೊಂಡುಗೆಯ ವೆಂಕಟಪ್ಪನಾಯಕನು ಪಾಂಡಿಚೇರಿ ಯುದ್ಧಕ್ಕೆಂದು ತೆರಳಿದಾಗ ಸಂಸ್ಥಾನದ ಕಾರ್ಯಭಾರ ವಹಿಸಿಕೊಂಡಿದ್ದ ರಾಮಪ್ಪನಾಯಕನು ಪುರಾಣ, ಪುಣ್ಯಕಥೆ, ಸಾಹಿತ್ಯ ರಚನೆಯಂಥ ಕೆಲಸಗಳಲ್ಲೇ ನಿರತನಾಗಿದ್ದ. ಶ್ರೀವೈಷ್ಣವ ಸಂಪ್ರದಾಯದ ಸಾಹಿತಿಗಳ ಸಿಂಹಪಾಲು ಸೇರಿದ್ದರಿಂದ ವಿಷ್ಣುವಿನ ಮಹಿಮೆ ಬಣ್ಣಿಸುವ ಕೃತಿಗಳು ಮೊದಲು ಹೊರಬಂದವು. ಇವರ ಭಕ್ತಿಪರ ಗೀತೆ ಮತ್ತು ಮುಂಡಿಗೆಗಳು ಅಂತರಂಗ ಶುದ್ಧಿಗೆ ಸಾಧನವಾದವು.

1. ಮುಂಡಿಗೆ :

ಇದುವರೆಗೆ ಹಲವು ವಿದ್ವಾಂಸರ ಚರ್ಚೆಯ ವಸ್ತುವಾದ 'ಮುಂಡಿಗೆ' ಯು ಅಪಾರ ಅರ್ಥ ಪಡೆದುಕೊಂಡಿರುವುದು ಕಂಡುಬರುತ್ತದೆ. ಕನಕದಾಸರ ಮುಂಡಿಗೆ ಕುರಿತು ಗಮನಾರ್ಹ ಚಿಂತನ ವ್ಯಕ್ತಪಡಿಸುವಲ್ಲಿ[2] ಮುಂಡಿಗೆಯ ವಿಶಾಲವ್ಯಾಪ್ತಿಯನ್ನು ಹೇಳಲಾಗಿದೆ. "ಮುಂಡಿಗೆ ಎಂದರೆ ಭಾರವಾದ ವಸ್ತು, ಸುಲಭವಲ್ಲದ ಕ್ರಿಯೆ. ಅಗ್ರಾಹ್ಯಚಿಂತನೆ ಎಂಬರ್ಥಗಳಿವೆ. ಇದನ್ನು ವಚನಗಳ ಬೆಡಗಿಗೆ ಸಂವಾದಿಯಾಗಿ ಬಳಸಿದರಲ್ಲದೆ ಅನುಭಾವ ಸಾಹಿತ್ಯಕ್ಕೆ ಆಕರವಾಗಿಸಿಕೊಂಡರು. ಮುಂಡಿಗೆಯು ಹರಿಹರನಲ್ಲಿ ಆರಂಭಗೊಂಡಿತ್ತೆನ್ನಲು ಆತನ 'ಮುಂಡಿಗೆಯ ಅಷ್ಟಕ' ವನ್ನು ಸದರಿ ಲೇಖಕರು ಉದಾಹರಿಸಿದ್ದಾರೆ.[3]

ಪಾಂಡಿತ್ಯ ಪ್ರದರ್ಶನ ಮತ್ತು ಪರೀಕ್ಷೆಗೆ ಅತಿಹೆಚ್ಚು ಬಳಸಿಕೊಳ್ಳುವ ಈ ಮುಂಡಿಗೆಯನ್ನು ಜ್ಞಾನಿ-ಜ್ಞಾನಿಗಳ ಆಂತರಿಕ ಭಾಷೆ ಹಾಗೂ ಆತ್ಮಾನುಭವ, ತತ್ವಾನುಭವದ ತುತ್ತೂರಿಯೆಂತಲೂ ಕರೆಯಲಾಗಿದೆ. ಪದ್ಯಜಾತಿಯೊಂದರ ರೂಪಲಕ್ಷಣ ಹೊಂದಿರುವ ಮುಂಡಿಗೆಯು ವೃತ್ತ, ಷಟ್ಪದಿ ಛಂದಗಳಿಗೆ ಒಳಪಟ್ಟಿದೆ. ವಿರೋಚಿತ, ಭಾವಗಾಂಭೀರ್ಯಗಳಲ್ಲದೆ ಏಕನಿಷ್ಠೆ, ಅನನ್ಯಭಕ್ತಿ ಭಾವದ ಮೂಲ ಮಂತ್ರವೆನಿಸಿರುವ ಈ ಪದ್ಯರೂಪವನ್ನು ಸಂಸ್ಥಾನದಲ್ಲಿ ಸಮರ್ಥವಾಗಿ ದುಡಿಸಿಕೊಳ್ಳಲಾಗಿದೆ. ಮೊಂಡುಗೆಯ ವೆಂಕಟಪ್ಪನಾಯಕನ ಕಕ್ಕನಾದ ವಾಸುದೇವನಾಯಕನು ಬಹರಿ ಪಿಡ್ಡನಾಯಕನ ಪುತ್ರ. ಈತ ತನ್ನ ಹರಿಭಕ್ತಿಸಾರ ಸಾಹಿತ್ಯ ರಚನೆಗೆ 'ಮುಂಡಿಗೆ' ರೂಪವನ್ನೇ ಬಳಸಿಕೊಂಡ.

---

2. ವಿ.ಬಿ.ಹಿರೇಮಠ (ಸಂ) – ಶಿಕ್ಷಣ ಪ್ರದೀಪ. (ಅಭಿನಂದನಾಗ್ರಂಥ), ಪುಟ-112 ರಿಂದ 120.
3. –ಅದೇ–. ಪುಟ-113.

ಹರಿಯ ಹತ್ತು ಅವತಾರಗಳಾದ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಬಲರಾಮ, ಬುದ್ಧ ಕಲ್ಕಿಗಳನ್ನು ಮುಂಡಿಗೆಯಲ್ಲಿ ಮನಸೂರೆಗೊಳ್ಳುವಂತೆ ವಿವರಿಸಲಾಗಿದೆ.[4] ಮುಂಡಿಗೆ ಮೂಲಕ ಪ್ರಯೋಗಿಸಿದ ಇಂಥ ಸ್ತೋತ್ರದಲ್ಲಿ 'ಹರಿಹರ' ಭಾವನೆ ಕಾಣುವ ಕವಿ ವಾಸುದೇವ ನಾಯಕನ ಮನೋನಿಲುವು ಮೆಚ್ಚುವಂಥದ್ದು. ಅದನ್ನು ಮುಂಡಿಗೆಯ ಫಲಶ್ರುತಿಯಲ್ಲಿ ನಿವೇದಿಸಲಾಗಿದೆ.

ಹರಿಹರ ಬ್ರಹ್ಮನದೇಕಾಕೃತಿಯ ಸ್ತೋತ್ರಗಳು
ಬರದೋದಿ ಕೇಳುತಿಹ ಸಜ್ಜನ ಸಮೂಹಕ್ಕೆ
ಕರಿತುರುಗ ಛತ್ರ ಚಾಮರ ಪದಾತಿಗಳ ಸಂದೋಹ ಶಾಸ್ವತ ಪದವಿ
ವರಪುತ್ರ ಪೌತ್ರ ಕಳತ್ರ ಬಾಂಧವರ
ಧರೆಯೊಳಾಚಂದ್ರಾರ್ಕ ವೃದ್ಧಿ ಗುಣಕೀರ್ತಿಬಲ
ಸಿರಿಸಹಿತ ಕರುಣಿಪರ ನಾಲ್ಕು ಹಸ್ತಗಳಿಂದ ಸುರಪುರದ ಕೃಷ್ಣ ಕೊಡುವನನವರತ.

ಷಟ್ಪದಿ ಸ್ವರೂಪವನ್ನು 'ಮುಂಡಿಗೆ' ಮೂಲಕ ಪ್ರಯೋಗಿಸಿದ ಇಂಥ ಸಾಹಿತ್ಯವು ಸಂಸ್ಥಾನದಲ್ಲಿ ತುಂಬಾ ಶ್ರೀಮಂತವೆನಿಸಿದೆ. ಕ್ರಿ.ಶ.1752 ರಿಂದ 1773ರ ವರೆಗೆ ಒಟ್ಟು 23 ವರ್ಷ ಆಳಿದ ಮುಮ್ಮಡಿ (ರಾಘವ) ವಾಮನಾಯಕನ ಆಳ್ವಿಕೆಯನ್ನು ಸಂಸ್ಥಾನದ 'ಸುವರ್ಣಯುಗ' ವೆಂದು, ಕೆಲವು ವಿದ್ವಾಂಸರ ಅಂಬೋಣ. ಸಂಸ್ಕೃತ, ತೆಲುಗು, ಕನ್ನಡ ಕಾವ್ಯಗಳ ಸಂಗಮ ಸೃಷ್ಟಿ ಕಂಡದ್ದು ಇಲ್ಲಿಯೆ.

ಆಸ್ಥಾನ ರಾಜರ ಆಹ್ವಾನದ ಮೇರೆಗೆ ಅನ್ಯರಾಜ್ಯಗಳಿಂದ ಅನೇಕ ವಿದ್ವಾಂಸರು ಆಗಮಿಸಿದರು. ಇವರೆಲ್ಲರಿಂದ ನೂರಾರು ಕೃತಿಗಳನ್ನು ಪಡೆಯುವಲ್ಲಿ ಅಡಗಿರುವ ಅಂತರಂಗವೆಂದರೆ 'ರಾಜನಾದ ರಾಘವ ವಾಮನಾಯಕನೇ ಸ್ವತಃ ಸಾಹಿತಿಯಾಗಿರುವುದು''. ಪಿತನಂತೆ ಪುತ್ರವೆಂಬ ಮಾತಿಗೆ ಅನ್ವರ್ಥಕವಾದ ವಾಮನಾಯಕ 'ಭಾರ್ಗವ ಪುರಾಣ' ವೆಂಬ ವೈಚಿತ್ರ್ಯಪೂರ್ಣ ಕೃತಿ ರಚಿಸುವ ಮೂಲಕ ಸಂಸ್ಥಾನದ 'ಸಾಹಿತ್ಯ ತಿಲಕ' ನೆನಿಸಿಕೊಂಡನು. ಖಡ್ಗವಿಡಿದು ಹೋರಾಡುವ ವೀರ, ಕಂಠವಿಡಿದು ಕಾವ್ಯ ಬರೆಯಲೂ ಬಲ್ಲನೆನ್ನುವುದಕ್ಕೆ ವಾಮನಾಯಕ ಸಾಕ್ಷಿ.

2. ಭಾರ್ಗವ ಪುರಾಣ :

ಉದ್ದಾಮ ಪಂಡಿತ ಮತ್ತು ವೀರಪರಾಕ್ರಮಿಯಾದ ವಾಮನಾಯಕ ಸಂಸ್ಥಾನಕ್ಕೆ 'ಸುವರ್ಣಯುಗ' ನೀಡುವಲ್ಲಿ ಯಶಕಂಡ. ಇಂಥ ತನ್ನ ಅವಿಶ್ರಾಂತ ಬದುಕಿನಲ್ಲಿಯೂ ಅತ್ಯಂತ

4. ಬ. ರಾಜಲಕ್ಷ್ಮೀ — ಲೇಖನ: ದಶಾವತಾರ ಮುಂಡಿಗೆ (ನಗರನಾಡ ದರ್ಶನ), ಪುಟ-224-27.

ಮಹಾಕಾವ್ಯಯುತವಾದ 'ಭಾರ್ಗವ ಪುರಾಣ' ವೆಂಬ ತೆಲುಗು ಕೃತಿಕೊಟ್ಟದ್ದು ಶ್ಲಾಘನೀಯ ಶ್ರಮವೇ ಸರಿ. ವಿಜಯನಗರದರಸು ಶ್ರೀಕೃಷ್ಣದೇವರಾಯನ 'ಆಮುಕ್ತಮಾಲ್ಯ' ವನ್ನೇ ಹೋಲುವಪ್ರಸ್ತುತ ಗ್ರಂಥವು ಚಂಪೂಪ್ರಕಾರದ ಪ್ರೌಢಿಮೆಯನ್ನು ಪಡೆದಿದೆ.

'ಭಾರ್ಗವ' ಹರಿಯ ಹತ್ತು ಅವತಾರಗಳಲ್ಲೊಂದು. ಕಾರ್ತವೀರ್ಯಾರ್ಜುನ ಮತ್ತು ಪರಶುರಾಮರ ಕಾಳಗದ ಮೂಲ ಕಾರಣ ಹಾಗೂ ಪರಿಣಾಮ ವಿವರಿಸುವ ಪ್ರಸ್ತುತ ಕೃತಿ ಮೋಕ್ಷ ಬೋಧನೆಗೆ ಮಹತ್ವ ನೀಡುತ್ತದೆ.

ಪ್ರಖ್ಯಾತ ಅರಸುವಾದ ಹಾಮನಾಯಕನು ತನ್ನ ಆಳಿಕೆಯ ಅನೇಕ ಆಟ-ತಂತ್ರಗಳ ಮಧ್ಯೆ ಸದರಿ 'ಭಾರ್ಗವಪುರಾಣ' ಕೃತಿ ರಚಿಸಿರಲು ಸಾಧ್ಯವೆ? ಎಂಬ ಶಂಕೆ ಬರುವುದು ಸಹಜ. ಆಸ್ಥಾನದಲ್ಲಿದ್ದ ಕವಿಯೊಬ್ಬ ಇಲ್ಲ 'ಅನಾಮಧೇಯ' ನಾಗಿರುವ ಸಾಧ್ಯತೆಯನ್ನೂ ತಳ್ಳಿಹಾಕುವಂತಿಲ್ಲ. ಒಡೆಯನ ಮೇಲಿರುವ ಅಭಿಮಾನ, ಗೌರವಗಳನ್ನು ಈ ಮೂಲಕ ಪ್ರಕಟಪಡಿಸುವ ಪರಂಪರೆ ನಮ್ಮಲ್ಲಿ ಇದೆ. ಅದನ್ನೇ 'ಭಾರ್ಗವಪುರಾಣ' ದ ಕರ್ತೃ ಅನುಸರಿಸಿರಬೇಕು. ಆದರೆ ಕಾವ್ಯ ಹೃದಯ ಹೊಂದಿ, ಪುರಾಣ— ಪುಣ್ಯ ಕಥೆಗಳಲ್ಲಿಯೇ ತನ್ನ ಜೀವನ ಸವೆಸಿದ ರಾಮಪ್ಪನಾಯಕನು ಇಂಥ ಮಹಾನ್ ಪುರಾಣ ಬರೆಯುವಲ್ಲಿ ಮಗನಿಗೆ ಸಹಕಾರ ನೀಡಿರಬಾರದೇಕೆ? ಎಂಬ ಊಹೆಯು ಉತ್ತಮವಾದುದೆನಿಸುತ್ತದೆ.

ವರರುಚಿಯವೋಲ್ ಸಕಲ ವಿದ್ಯೆಯೊಳ
ಗಿರುವ ತಾತ್ಪರ್ಯವನು ತಾನನು
ಕರಿಸಿ ಪೇಳಿದನು ಭಾರ್ಗವ ಪುರಾಣವನು[5]

ಎಂಬಂಥ ಅನೇಕ ಅಂಶಗಳು 'ಭಾರ್ಗವಪುರಾಣ' ದ ಕರ್ತೃ ಹಾಮನಾಯಕನೆಂದೇ ಸಮರ್ಥಿಸುತ್ತವೆ. ಕಾವ್ಯ, ಶಾಸ್ತ್ರ, ಅಲಂಕಾರಗಳಲ್ಲಿ ಪ್ರಾವಿಣ್ಯತೆ ಗಳಿಸಿದ್ದನೆಂಬುದಕ್ಕೆ ಈ ಪುರಾಣ ಸಾಕ್ಷಿಯಾದಗಿನುತ್ತದೆ.

'ಭಾರ್ಗವ ಪುರಾಣ' ವು ಸಕಲ ವಿದ್ಯೆಯ ತಾತ್ಪರ್ಯವಲ್ಲದೆ ಸಂಸ್ಥಾನದ ಅನೇಕ ಐತಿಹಾಸಿಕ ಅಂಶಗಳನ್ನು ಉಲ್ಲೇಖಿಸುತ್ತದೆ. ಗೋಸಲವಂಶದ ಮೂಲ ಪುರುಷ 'ಗುಹ'[6] ನೆಂದು ಹೇಳುವದ

---

5. ಕೋಸಲ ನೃಪವೃತ್ತಾಂತ (ಹಸ್ತಪ್ರತಿ)
6. ಜಯತೀರ್ಥಾಚಾರ್ಯ ಮಣೂರು — ಲೇಖನ: ಸಗರನಾಡಿನ ವೈಭವದ ಸವಿನೆನಪುಗಳು (ಸಗರನಾಡದರ್ಶನ). ಪುಟ-162.

ರೊಂದಿಗೆ ಸುರಪುರ ದೊರೆಗಳ ವಂಶಾವಳಿಯು ಮೇಲೆ ಹೊಸಬೆಳಕು ಚೆಲ್ಲಿದೆ.

3. ಆಸ್ಥಾನ ಕವಿಗಳು ಮತ್ತು ಅವರ ಕೃತಿಗಳು :

ರಾಘವ ನಾಯಕನ ಆಳ್ವಿಕೆಯಲ್ಲಿ ಆಂಧ್ರಪ್ರದೇಶದ ಬುಕ್ಕಪಟ್ಟಣದಿಂದ ಅನೇಕ ವಿದ್ವಾಂಸರನ್ನು ಆಸ್ಥಾನಕ್ಕೆ ಆಹ್ವಾನಿಸಲಾಗಿತ್ತು. ಇದಕ್ಕಿಂತ ಪೂರ್ವದಲ್ಲಿ ವಾಗಿನಗೇರಿ ಮೂಲಕ ನಡೆದ ಸಾಹಿತ್ಯವಾಹಿನಿ ಸುರಪುರ ರಾಜಧಾನಿಯಲ್ಲಿ ಉತ್ತುಂಗತೆ ಕಂಡಿತು. ಆಶ್ರಯ ಪಡೆದ ವಿದ್ವಾಂಸರೆಲ್ಲ ಹಲವು ಔಚಿತ್ಯಪೂರ್ಣ ಕೃತಿಗಳನ್ನು ಕೊಟ್ಟು ಸಾಹಿತ್ಯಿಕವಾಗಿ ಸಂಸ್ಥಾನವನ್ನು ಶ್ರೀಮಂತಗೊಳಿಸಿದ್ದಾರೆ. ಅಂಥವರ ಸಾಲಿನಲ್ಲಿ ಶ್ರೇಷ್ಠ ಕರ್ತೃ ಮತ್ತು ಕೃತಿಗಳನ್ನು ಮಾತ್ರ ಇಲ್ಲಿಯ ಅಧ್ಯಯನಕ್ಕೆ ಎತ್ತಿಕೊಳ್ಳಲಾಗಿದೆ. ಒಂದೇ ಮನೆತನದಲ್ಲಿ ಪ್ರಸಿದ್ಧ ಸಾಹಿತಿಗಳಾಗಿ ಹೊರ ಹೊಮ್ಮಿದ ಬಗ್ಗೆ ಕೆಳಗಿನ "ವಂಶವೃಕ್ಷ" ಮಾಹಿತಿ[7] ಒದಗಿಸುತ್ತದೆ.

1. ವೆಂಕಟಾಚಾರ್ಯ　　2. ಅಣ್ಣಯ್ಯಾಚಾರ್ಯ
↓
3. ನರಸಿಂಹಾಚಾರ್ಯ　　4. ಶ್ರೀನಿವಾಸಾಚಾರ್ಯ
↓
5. ಇಮ್ಮಡಿ ವೆಂಕಟಾಚಾರ್ಯ　　6. ಇಮ್ಮಡಿ ಅಣ್ಣಯ್ಯಾಚಾರ್ಯ　　7. ಇಮ್ಮಡಿ ಶ್ರೀನಿವಾಸಾಚಾರ್ಯ
↓
8. ಮುಮ್ಮಡಿ ಶ್ರೀನಿವಾಸಾಚಾರ್ಯ　　9. ಮುಮ್ಮಡಿ ವೆಂಕಟಾಚಾರ್ಯ　　10. ನಾಲ್ವಡಿ ವೆಂಕಟಾಚಾರ್ಯ.

—ಮೊದಲನೆಯ ವೆಂಕಟಾಚಾರ್ಯ, ಅಣ್ಣಯ್ಯಾಚಾರ್ಯ, ನರಸಿಂಹಾಚಾರ್ಯ ಮತ್ತು ಶ್ರೀನಿವಾಸಾಚಾರ್ಯರ ಜೀವನ ಹಾಗೂ ಕೃತಿಗಳ ಬಗ್ಗೆ ನಿಖರವಾದ ಮಾಹಿತಿ ಸದ್ಯ ದೊರೆಯದ ಕಾರಣ ಇಮ್ಮಡಿ ವೆಂಕಟಾಚಾರ್ಯರಿಂದಲೇ ಆರಂಭಿಸಲಾಗಿದೆ.

ಇಮ್ಮಡಿ ವೆಂಕಟಾಚಾರ್ಯ :

ಮೊದಲನೆಯ ವೆಂಕಟಾಚಾರ್ಯನ ಶಿಷ್ಯನಾದ ಇಮ್ಮಡಿ ವೆಂಕಟಾಚಾರ್ಯ ಸಂಸ್ಥಾನದ ಪ್ರಸಿದ್ಧ ವಿದ್ವಾಂಸ. ಸದ್ಯ ಲಭಿಸಿದ ಈತನ ಆರು ಕೃತಿಗಳು ವೈವಿಧ್ಯಮಯ ವಸ್ತುವನ್ನು

---

7. ಬುದ್ಧಿ ವೆಂಕಟಾಚಾರ್ಯ — ವೇದಾಂತ ಕಾರಿಕಾವಳಿ (ಸಂಸ್ಕೃತ). ಪ್ರಸ್ತಾವಿಕ. ಪುಟ

ಒಳಗೊಂಡಿವೆ. ವೇದ, ಪಂಚತಂತ್ರ ಮತ್ತು ಮುಂತಾದ ಮೂಲಕೃತಿಗಳ ತತ್ತ್ವವನ್ನು ಸಂಸ್ಕೃತ ಭಾಷೆಯಲ್ಲಿಯೇ ಸುಂದರವಾಗಿ ಸಮರ್ಥಿಸಿಕೊಂಡಿದ್ದಾನೆ.

ಕೃತಿಗಳು : 1. ಆನಂದ ತಾರತಮ್ಯ ಖಂಡನವಾದ
2. ಜಗನ್ಮಿಥ್ಯಾತ್ವ ಖಂಡನಂ
3. ವೇದಾಂತ ದೇಶಿಕ ದಂಡಕಮ್
4. ವೇದಾಂತ ದೇಶಿಕ ಅಷ್ಟೋತ್ತರ ಶತನಾಮಸ್ತೋತ್ರಮ್
5. ಸಿದ್ಧಾಂತ ರತ್ನಾವಳಿ
6. ಸಿದ್ಧಾಂತ ವೈಜಯಂತಿ.

ಮದ್ರಾಸ್ ಹಾಗೂ ಅಡ್ಯಾರ್ ಗ್ರಂಥಾಲಯದಲ್ಲಿ ಇಂದಿಗೂ ಸದರಿ ಹಸ್ತಪ್ರತಿಗಳನ್ನು ಕಾಯ್ದಿರಿಸಲಾಗಿದ್ದು, ಅವುಗಳ ಸಮೀಕ್ಷೆಯನ್ನು ಬುಚ್ಚಿವೆಂಕಟಾಚಾರ್ಯರು ತಮ್ಮ 'ವೇದಾಂತ ಕಾರಿಕಾವಳಿ' ಯಲ್ಲಿ ಸೇರಿಸಿಕೊಂಡಿದ್ದಾರೆ.

<u>ಇಮ್ಮಡಿ ಅಣ್ಣಯ್ಯಾಚಾರ್ಯ:</u>

ಶಾಲಿವಾಹನ ಶಕೆ 1626 ತಾರಣ ಸಂವತ್ಸರದ ವೃಷಭ ಮಾಸ ಹಸ್ತನಕ್ಷತ್ರದಲ್ಲಿ ಜನಿಸಿದ ಈತ 74 ವರ್ಷ ತುಂಬುಜೀವನ ಸಾಗಿಸಿದನೆಂದು ತಿಳಿಯುತ್ತದೆ. 'ಅಣ್ಣಯ್ಯದೀಕ್ಷಿತ' ನೆಂಬ ಗೌರವ ಸೂಚಕ ಹೆಸರಿನಿಂದ ಕರೆಯಿಸಿಕೊಳ್ಳುತ್ತಿದ್ದ ಅಣ್ಣಯ್ಯಾಚಾರ್ಯನನ್ನು

ಶ್ರೀ ಮಚ್ಛ್ರೀಶೈಲ ವಂಶೋಜ್ವಲ ಕಲಶ ಪಯೋರಾಶಿ ರಾಕಾಶಶಾಂಕಂ
ತ್ರಯ್ಯಂತ ದ್ವಂದ್ವ ಚಿಂತಾಪರಿಣತ ವಿತತಗಾಢ ಚೇತೋಧಾವಧಾನವತ್
ಶ್ರೀಮತ್ತಾತಾದ್ಯಸೂನುಂ ಶ್ರೀತಹಿತ ಜನತಾನಂದ ಸಂಧಾನ
ಸಂಧಾನಬಂಧುವಂದೇ ಮಹ್ಯಣ್ಣಯಾರ್ಯವತ್
ಧೃತಸಕಲಕಲಾ ಚಾತುರೀ ಖ್ಯಾತಕೀರ್ತಿವತ್ ॥[8]

ಎಂದು ಕೌಂಡಿನ್ಯ ಶ್ರೀನಿವಾಸಾಚಾರ್ಯ ಮತ್ತು ಇಮ್ಮಡಿ ವೆಂಕಟಾಚಾರ್ಯರ ಪರಮ ಶಿಷ್ಯನಾದ ಅಣ್ಣಯ್ಯಾಚಾರ್ಯ ರಚಿಸಿದ ಗ್ರಂಥಗಳು ಏಳು. ಸಧ್ಯ ಮದ್ರಾಸ ಮತ್ತು ಮೈಸೂರ ಗ್ರಂಥಾಲಯದಲ್ಲಿ ದೊರೆಯುವ ವರ್ಣಾತ್ಮಕ ಹಸ್ತಪ್ರತಿಗಳಿವು :

---

8. ಟಿ. ಸುಚರಿತಾ — ಲೇಖನ: ಮರೆಯಲಾಗದ ಮಾಣಿಕ್ಯ (ಸಾಗರನಾಡ ದರ್ಶನ). ಪುಟ-229.

ಕೃತಿಗಳು: 1. ಆಚಾರ್ಯವಿಂಶತಿಃ
2. ಆನಂದತಾರತಮ್ಯ ಖಂಡನ
3. ತತ್ವಗುಣಾದರ್ಶಃ (ವಾಖ್ಯಾನ ಸಹಿತ)
4. ವ್ಯಾವಹಾರಿಕ ಸತ್ಯತ್ವ ಖಂಡನಾ ರಃ
5. ರಸೋದಾರ ಭಾಣಃ
6. ಶ್ರೀನಿವಾಸ ಸ್ತುತಿಃ
7. ನೃಸಿಂಹ ವಿಂಶತಿಃ

'ಹರಿ' ಎಂಬ ಮಹಿಮೆಯನ್ನು ತಿರುಪತಿ ಶ್ರೀನಿವಾಸನ ಲೀಲೆಯೊಂದಿಗೆ ಸಮೀಕರಿಸುವ ಇಲ್ಲಿಯ ಕೆಲವು ಕೃತಿಗಳು ಸ್ತೋತ್ರ ಗೀತಗಳಾಗಿವೆ. ವೇದ, ತರ್ಕ, ತತ್ವಗಳಂತು ಮುಖ್ಯವಸ್ತು.

<u>ಇಮ್ಮಡಿ ಶ್ರೀನಿವಾಸಚಾರ್ಯ :</u>

ಶಾಲಿವಾಹನ ಶಕೆ 1630 ಸರ್ವಧಾರಿ ಸಂವತ್ಸರ ಕನ್ಯಾಮಾಸದ ಪುನರ್ವಸು ನಕ್ಷತ್ರದಲ್ಲಿ ಜನಿಸಿದ ಶ್ರೀನಿವಾಸಾಚಾರ್ಯರು ಅಭಿನವ ನಿಗಮಾಂತ ದೇಶಿಕನೆಂಬ ಬಿರುದಿಗೆ ಪಾತ್ರನಾಗಿದ್ದರು. ಅದ್ವೈತದಲ್ಲಿ ಶ್ರೀವಿದ್ಯಾರಣ್ಯರು, ದ್ವೈತದಲ್ಲಿ ಜಯತೀರ್ಥರು, ವಿಶಿಷ್ಟ ಅದ್ವೈತದಲ್ಲಿ ಈ ನಿಗಮಾಂತ ದೇಶಿಕರೆ ಪ್ರಸಿದ್ಧರೆಂದು ಹೊಗಳಲಾಗಿದೆ.

> ಶ್ರೀ ಮತ್ಪ್ರತ್ಯಂತ ಸೀಮಾಯುಗಲ ವಿಭಜನಾ ಖಂಡ ಪಾಂಡಿತ್ಯ ಭೂಮಾ,
> ಷಟ್ ತಂತ್ರೋದಂತ ದಂತಾವಲ ವಲನ ಸೃಣೀಭೂತಾಭುವತ್ಸೂಕ್ತಿದಾಮಾ
> ಶ್ರೀಶೈಲಾಖ್ಯಾನ್ವಯೇಂದು ಸ್ವ ಗುಣ ಗಣನಿಧಿ ಸ್ಸರ್ವತಂತ್ರ ಸ್ವತಂತ್ರಃ
> ಕಾರುಣ್ಯಾತ್ಸನ್ನಿಧತ್ತಾಂ ಮಮಹೃದಿ ಸತತಂ ಶ್ರೀನಿವಾಸಾರ್ಯವರ್ಯಃ ॥

ಎಂಬ ವರ್ಣನೆಗೆ ಅರ್ಹನಾಗಿದ್ದ ಶ್ರೀನಿವಾಸಾಚಾರ್ಯನು ಮುಮ್ಮಡಿ ಪಾಮನಾಯಕನ ಪೋಷಣೆಯಲ್ಲಿ ಪ್ರಸಿದ್ಧಿಗೆ ಬಂದನು. ವೀರರಾಘವಾಚಾರ್ಯ ವಿರಚಿಸಿದ ''ವೀರ ರಾಘವ ಭಾಗವತ ಟೀಕೆಯು' ವಿಸ್ತಾರವಾದ 'ಉಪೋದ್ಘಾತವನ್ನು ಹೊಂದಿದೆ. ಅದರಲ್ಲಿ ಶ್ರೀನಿವಾಸಾಚಾರ್ಯ ಬರೆದ ಸಮಗ್ರ ಕೃತಿಗಳ ಪಟ್ಟಿಯನ್ನೇ ಕೊಟ್ಟು, ಸಂಸ್ಥಾನದ ಸಾಹಿತ್ಯ ಲೋಕಕ್ಕೆ ಮರೆಯಲಾರದ ಉಪಕಾರ ಸಂದಂತಾಗಿದೆ. ಶ್ರೀನಿವಾಸಾಚಾರ್ಯರ ಕೃತಿಗಳ ಶೋಧಕರಿಗೆ, ಅಭ್ಯಾಸಿಗರಿಗೆ ವೀರರಾಘವಾಚಾರ್ಯರ ಉಪೋದ್ಘಾತವೇ

ಸದ್ಯ ಆಧಾರ. ಇವರ ಸಿಂಹಪಾಲು ಕೃತಿಗಳು ವೇದಾಂತ ವಿಷಯದ ವ್ಯಾಖ್ಯಾನವನ್ನೇ ಅವಲಂಬಿಸಿವೆ.

<u>ಕೃತಿಗಳು :</u>
1. ಅರುಣಾಧಿಕರಣ ಸರಣಿ ವಿವರಣಿ
2. ಆನಂದ ತಾರತಮ್ಯ ಖಂಡನವಾದ
3. ಓಂಕಾರ ವಾದಾರ್ಥ (ನಯಮಣಿ ಕಲಾ)
4. ಜಿಜ್ಞಾಸ ದರ್ಪಣವು
5. ಜ್ಞಾನರತ್ನ ಪ್ರಕಾಶಿಕಾ
6. ತತ್ವದರ್ಪಣವು
7. ತತ್ವಮಾರ್ತಾಂಡ
8. ಪ್ರಣವ ದರ್ಪಣವು
9. ಪ್ರಧಾನ ಪ್ರತಿತಂತ್ರದರ್ಪಣ
10. ನಯದ್ಯುಮಣಿ ದೀಪಿಕಾ ದ
11. ಮಧ್ವ ಬ್ರಹ್ಮವಾದ ನಿರಾಸ:
12. ಭೇದ ದರ್ಪಣ:
13. ವಿರೋಧ ನಿರೋಧ: (ಭಾಷ್ಯಪಾದುಕಾ)
14. ವಿರೋಧ ವಿರೋಧಿನಿ ಪ್ರಮಾಥಿನಿ
15. ಷಷ್ಠ್ಯರ್ಥ ನಿರ್ಣಯ
16. ಸಿದ್ಧಾಂತ ಚಿಂತಾಮಣಿ (ಉಪಧಾನತತ್ವಸಮರ್ಥನವಾದ)
17. ತತ್ವರತ್ನ ಪ್ರದೀಪಿಕಾ
18. ನೀತಿಶತಕಂ
19. ಸುಭಾಷಿತಾನಿ
20. ಹರಿಗುಣ ದರ್ಪಣ

ಮೇಲಿನ ಅನೇಕ ಕೃತಿಗಳಲ್ಲಿ[9] ನಾಲ್ಕುವೇದಗಳ ಸಂಕ್ಷಿಪ್ತ ಸಾರದೊಂದಿಗೆ ನ್ಯಾಯ, ನೀತಿ, ಪರೀಕ್ಷೆ, ತರ್ಕ, —ಮುಂತಾದ ವಿಷಯಗಳನ್ನು ವಿಶ್ಲೇಷಿಸಲಾಗಿದೆ. ಇವರ ಎಲ್ಲಾ ಕೃತಿಗಳು ಸಂಸ್ಕೃತ ಭಾಷೆಗೆ ಒಳಪಟ್ಟಿದ್ದು, ಮೂಲ ಸತ್ಯವನ್ನು ಹೇಳಲು ಯತ್ನಿಸುತ್ತವೆ. ಸದ್ಯ ಪ್ರಕಟವಾಗಿರುವ ತತ್ವಮಾರ್ತಾಂಡವು ಇವೆಲ್ಲವುಗಳ ದಿಕ್ಸೂಚಿಯೆನಿಸಿದೆ. ಪ್ರತಿಯೊಂದು ಕೃತಿಯ ಆದಿ ಹಾಗೂ ಅಂತ್ಯದಲ್ಲಿ ಆಶ್ರಿತರಾಜನ ಅನ್ನದಾನ, ಐಶ್ವರ್ಯದಾನಗಳನ್ನು ಬಣ್ಣಿಸಲಾಗಿದೆ. ಆರಾಧ್ಯದೈವ ವೇಣುಗೋಪಾಲ ಸ್ವಾಮಿಯ ಮಹಿಮೆಯನ್ನು ಕೊಂಡಾಡಿದ ಭಾಗವಂತೂ ಹೃದಯಂಗಮವಾಗಿದೆ.

---

9. ಬುದ್ಧಿವೆಂಕಟಾಚಾರ್ಯ — ವೇದಾಂತಕಾರಿಕಾವಳಿ (ಸಂಸ್ಕೃತ) ಪ್ರಸ್ತಾವನೆಯಿಂದ.

<u>ಕಿರೀಟಿ ವೆಂಕಟಾಚಾರ್ಯ :</u>

ಇಮ್ಮಡಿ ವೆಂಕಟಪ್ಪನಾಯಕನ ಆಶ್ರಯದಲ್ಲಿದ್ದ ಇನ್ನೊರ್ವ ಖ್ಯಾತ ಸಂಸ್ಕೃತ ಪಂಡಿತನೆಂದರೆ ಕಿರೀಟಿವೆಂಕಟಾಚಾರ್ಯ. ಅಲ್ಲಯ್ಯಾಚಾರ್ಯನಿಗೆ ಎರಡನೆಯ ಮಗನಾಗಿ ಹುಟ್ಟಿದ ಈತ ಚಿಕ್ಕಪ್ಪನಾದ ಶ್ರೀನಿವಾಸಾಚಾರ್ಯನಲ್ಲಿ ಅಭ್ಯಾಸ ಮಾಡಿದ. ಕೇವಲ 32 ವರ್ಷ ಬದುಕಿದ್ದ ಈತ ನಮಗಿಂದು ಬಿಟ್ಟುಹೋದ ಸಾಹಿತ್ಯ ಬಹಳಷ್ಟಿದೆ; ಸಂಪಾದಿಸಿದ ಬಿರುದುಗಳೂ ಸಹ ಸಾಕಷ್ಟಿವೆ.

"ಕವಿ ತಾರ್ಕಿಕ ಕಂಠೀರವ, ಶ್ಲೇಷಯಮಕ ಚಕ್ರವರ್ತಿ, ತರ್ಕಾಲಂಕಾರ ವಾದಸ್ಪತಿ, ಸಕಲ ಭಾಷಾವಿಶೇಷ, ಕವಿತಾಧುರಂಧರ, ಪ್ರತಿದಿನ ಪ್ರಬಂಧ ಪರಮೇಶ್ವರ" -ಇತ್ಯಾದಿ ಬಿರುದುಗಳನ್ನು ಧರಿಸಿದ ಕಿರೀಟಿ ವೈವಿಧ್ಯಮಯ ಸಾಹಿತ್ಯ ಸ್ವರೂಪಗಳನ್ನು ಬಳಸಿ ಬರೆದನೆಂದು ತೋರುತ್ತದೆ. ಛಂದಸ್ಸಿನ ತಾಳ, ಲಯಗಳಿಲ್ಲ ಕಾವ್ಯದುದ್ದಕ್ಕೂ ಅಳವಡಿಸಿಕೊಂಡರಲ್ಲದೆ ಅಲಂಕಾರವನ್ನು ಎಂದಿಗೂ ಅಲಕ್ಷಿಸಲಿಲ್ಲ. ಹಾಗಾಗಿ ಶ್ಲೇಷ ಯಮಕದ ಚಕ್ರವರ್ತಿ ಪದವಿ ಸಿಕ್ಕಿತು. ಹಲವು ಭಾಷೆಗಳು ಬಲ್ಲವನಾಗಿರುವದರಿಂದಲೇ 'ತರ್ಕ'ದಲ್ಲಿ ಸದಾ ಯಶ ಕಂಡನು. ಆಶ್ಚರ್ಯವೆಂದರೆ ಕೊನೆಯ ಬಿರುದು ಹೇಳುವ ಮಾತು ನಿಜವಾದರೆ ಅಂದಾಜು ಹದಿನೈದು ಸಾವಿರ ಪ್ರಬಂಧಗಳ ಕರ್ತೃ ಕಿರೀಟಿಯವರೆನ್ನಬೇಕಾಗುತ್ತದೆ.

ಕೃತಿಗಳು : 1. ಗಜಸೂತ್ರಾರ್ಥವಾದವ (ವ್ಯಾಕರಣ)
2. ಶೃಂಗಾರ ತರಂಗಿಣಿ (ನಾಟಕ)
3. ಅಚಲಾತ್ಮಜಾಪರಿಣಯಂ
4. ಭಾವಶತಕಂ
5. ಝಂ ಝಾ ಮಾರುತ (ನ್ಯಾಯಶಾಸ್ತ್ರ)
6. ಸಿದ್ಧಾಂತ ಚೂಮಣಿ

ಮೇಲಿನ ಆರು ಕೃತಿಗಳು ಆರು ಬಗೆಯ ಸಾಹಿತ್ಯರೂಪವನ್ನು ಹೊಂದಿವೆ. ವ್ಯಾಕರಣ, ನಾಟಕ, ನ್ಯಾಯ, ತರ್ಕಗಳಲ್ಲಿ ವ್ಯಕ್ತವಾಗಿರುವ ಇವುಗಳನ್ನು ಆಂಧ್ರದ ಆತ್ಮಕೂರ ಗ್ರಾಮದಲ್ಲಿ ಹಾಗೂ ಮದ್ರಾಸ್ ಥಿಯೋಸಾಫಿಕಲ್ ಸೊಸಾಯಿಟಿ ಗ್ರಂಥಾಲಯದಲ್ಲಿ ಇರಿಸಲಾಗಿದೆ. ಕಿರೀಟಿಯ ಇನ್ನೊಂದು ಸಾಹಿತ್ಯ ಸ್ವರೂಪ 'ದಂಡಕಗಳು' ಹಯಗ್ರೀವದಂಡಕ ಮತ್ತು ಲಕ್ಷ್ಮೀದಂಡಕಗಳು

-ಕೀ ದೃಷ್ಟಿಯಿಂದ ಬಹುಪ್ರಸಿದ್ಧವಾದವುಗಳು.

ಸಂಸ್ಕೃತವಲ್ಲದೆ ತೆಲುಗು ಭಾಷೆಯಲ್ಲಿಯೂ ಕಾವ್ಯಕೃಷಿ ಮಾಡಿರುವ ವೆಂಕಟಾಚಾರ್ಯನ ಮಂಗಳ ಪದ್ಯಗಳು ಸಂಸ್ಥಾನದ ಮುತ್ತೈದೆಯರಿಗೆ ತುಂಬಾ ಇಷ್ಟ. ಹೀಗಾಗಿ ಇಂದಿಗೂ ಪ್ರತಿಯೊಂದು ಮನೆಯ ಕಲ್ಯಾಣ ಕಾರ್ಯದಲ್ಲಿ ಇವು ಹಾಡಲ್ಪಡುತ್ತವೆ. ಅವುಗಳಲ್ಲಿ ಬಹುಮುಖ್ಯವಾದ —

" ನೀ ನೇವ ಪಹುಡೈನ ನಾಸವುಮಿತ
ಸಂತೋಷಮುತೋಜೆಂದಿ ಭಾಸುರ ಪದವಿ 1
ನೀ ನಾಟ ರೇಶುನುಡುನೇ ನಾರಿ ಬಳ್ಳಿದ ನೀಕ ದಯರೀದ?
ನೀ ಭಕ್ತ ಜನಮುಲಿಯೋನ ನೇನೂಕ ದಾಸುಡುನು ಕಾದ?
ನೀ ಪಾದ ಸೇವಕು ವೊಲ್ಲೀವು ಕುಂಡುಟ ನೀ ಕುಮರಿಯಾದ?
ಒತ್ತಲ್ಲಿ ವಿನಮಣಿ ಪಾಸಿಗಾನಮು ದಿನಮು ಪಲುಮರ
ವೇಸರಕ ವೇಂಕಟದಾಸನೇರನ ರೋಕಹನ ನಿಕಿ... ಮೀರು"

ಇಂಥ ಇನ್ನೊಮ್ಮೆ ಮಂಗಲ ತುಣುಕುಗಳು ಸಂಗ್ರಹಿಸುವ ಅಗತ್ಯ ಅವಶ್ಯವಿದೆ. ಯಾಕೆಂದರೆ ಇವು ಉಳಿದದುಂ ಕೇವಲ ಹಳೆಯ ತಲೆಮಾರಿನ ನಾಲಗೆಯಲ್ಲಿ ಮಾತ್ರ.

<u>ಬುಚ್ಚಿ ವೆಂಕಟಾಚಾರ್ಯ :</u>

ವಿಶಿಷ್ಟಾ ಅದ್ವೈತದ ವೇದಾಂತ ತತ್ವಜ್ಞಾನವು ತನ್ನ ಮೂಲವನ್ನು ವೇದಗಳಿಂದ ಕಂಡುಕೊಂಡಿದೆ. ಇಹಪರಪ್ರಪಂಚವನ್ನು, ಆತ್ಮ-ದೇಹದ ರೂಪದಲ್ಲಿ ಪ್ರತಿಪಾದಿಸುತ್ತದೆ. ಇಂಥ ತತ್ವದ ಆಧಾರದ ಮೇಲೆ ಹಲವು ವಿಚಾರಗಳನ್ನು ಮಂಡಿಸಿದ ಬುಚ್ಚಿ ವೇಂಕಟಾಚಾರ್ಯ 'ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿ ಸಂಸ್ಥಾನದ ಆಶ್ರಯ ಪಡೆದಿದ್ದ' ಆಗ ಹೊರಬಂದ-ಈತನ ಮುಖ್ಯ ಮೂರು ಕೃತಿಗಳು ನಮಗಿಂದು ಲಭಿಸಿವೆ.

ಕೃತಿಗಳು : 1. ವಿಷ್ಣು ಸಪ್ತವಿಭಕ್ತಿ ಸ್ತೋತ್ರ :
2. ವೇದಾಂತ ಕಾರಿಕಾವಲಿ
3. ಇಂದ್ರಷೋತ್ರರ ಶತನಾಮಸ್ತೋತ್ರಂ

ಮೇಲಿನ ಮೂರು ಕೃತಿಗಳಲ್ಲಿ ವೇದಾಂತಕಾರಿಕಾವಲಿಯನ್ನು ಬಿಟ್ಟರೆ ಉಳಿದೆರಡು 'ಹರಿ' ಯನ್ನು ಸ್ತುತಿಸುತ್ತವೆ. ಅಂದು ಸಂಸ್ಥಾನದಲ್ಲಿ ರಚಿತವಾದ ಸಾಹಿತ್ಯವನ್ನು ತನ್ನ ಉಮೋದ್ಘಾತದಲ್ಲಿ

ಪರಿಚಯಿಸಿಕೊಡುವ ಈ ಕೃತಿ ಅನೇಕ ದೃಷ್ಟಿಯಿಂದ ವೈಶಿಷ್ಟ್ಯಪೂರ್ಣವಾಗಿದೆ.

" ಪ್ರಮಾಣ, ಅನುಮಾನ, ಶಬ್ದ, ಪ್ರಕೃತಿ, ಕಾಲ, ವಿಭೂತಿ, ಧರ್ಮ, ಜೀವ, ಈಶ್ವರ, ಅದ್ರವ್ಯ " – ಹೀಗೆ ಹತ್ತು ಅಧ್ಯಾಯಗಳಲ್ಲಿ ಹಲವು ರೀತಿಯ ಕಠಿಣ ವಿಷಯಗಳನ್ನು ಬಿಡಿಸಿ ಹೇಳಲಾಗಿದೆ.

<u>ಪುರುಷಕಾರಿ ಕೇಶವಯ್ಯ :</u>

ಚಿಕ್ಕಪಟ್ಟಣದಿಂದ ಬಂದ ಪಂಡಿತ ಮಂಡಳಿಗೆ ಬಹುಮಾರ್ಮಿಕ ಮಾರ್ಗದರ್ಶನ ನೀಡಿದ ಕೀರ್ತಿ ನಂಚೇರುಮಾಳ್ಳ ಪುರುಷಕಾರಿ ಕೇಶವಯ್ಯನವರಿಗೆ ಸಲ್ಲುತ್ತದೆ. ಹಾಗಿನಗೇರಿ ಆಸ್ಥಾನದಲ್ಲಿ ಮೂಲತಃ ಸಾಹಿತ್ಯ ರಚಿಸಿದವರು ತೆಲುಗು ವಿದ್ವಾಂಸರೆಂಬುದು ಅಭಿಮಾನದ ಸಂಗತಿ. ಕಾರಣ ಸುರಪುರದ ಪೂರ್ವಜರೆಲ್ಲ ತೆಲುಗಿನವರು. ತೆಲುಗು ಮಾತೃಭಾಷೆಯನ್ನೇ ಉಳ್ಳವರು. ಹೀಗಾಗಿ ತೆಲಂಗಾಣದಿಂದ ಬರುವ ಕವಿಗಳಿಗೆ ಆಸ್ಥಾನದ ಬಾಗಿಲು ಸದಾ ತೆರೆದುಕೊಂಡಿತ್ತು.

ಸಂಸ್ಥಾನದ ತೆಲುಗು ಕವಿಗಳಲ್ಲಿ ಎದ್ದು ಕಾಣುವ ಹೆಸರು ಕೇಶವಯ್ಯನದು. 85 ವರ್ಷಗಳವರೆಗೆ ತುಂಬುಜೀವನ ನಡೆಸಿದ ಕೇಶವಯ್ಯ ಮಾಣಿಕ್ಯದಂಥ ಸಾಹಿತ್ಯವನ್ನು ಸಂಸ್ಥಾನಕ್ಕೆ ನೀಡಿ ಹೋದ.

ಕೃತಿಗಳು : 1. ವೆಂಕಟೇಶ ಮಹಾತ್ಮೆ (ಕನ್ನಡ)
2. ದಶರಥನಂದನ ಚರಿತ್ರ (ತೆಲುಗು)

ರತ್ನತ್ರಯರಂತೆ ಧಾರ್ಮಿಕ ಹಾಗೂ ಲೌಕಿಕ ಮಾರ್ಗವನ್ನು ಅನುಸರಿಸಿರುವ ಕೇಶವಯ್ಯ ತನ್ನ ಶ್ರೀವೈಷ್ಣವ ಧರ್ಮದ ಋಣ ತೀರಿಸಲು ವೆಂಕಟೇಶ ಮಹಾತ್ಮೆಯನ್ನು, ಆಶ್ರಿತ ರಾಜ ಮತ್ತು ಜನತೆಗಾಗಿ ರಾಮಾಯಣದ ಕಥೆಯನ್ನು ಹೇಳಿದ. ತೆಲುಗು, ಕನ್ನಡಗಳೆರಡರಲ್ಲೂ ಅಧಿಕೃತ ಬರಹಗಾರನಾಗಿ ಬೆಳೆದಿದ್ದ ಕೇಶವಯ್ಯನ ಕೃತಿಗಳಲ್ಲಿ ಕಾಣುತ್ತೇವೆ. ದಶರಥನಂದನ ಚರಿತ್ರೆಯಲ್ಲಿ ಮನಸೂರೆಗೊಳ್ಳುವ ' ಷಷ್ಠ್ಯಂತ ' ಗಳು ಆತನ ಉದಾತ್ತ ವ್ಯಕ್ತಿತ್ವವನ್ನು ಸಾಬೀತು ಪಡಿಸಿವೆ. ಅವುಗಳಲ್ಲಿಯ ಕೆಲವು ತುಣುಕು[10] ನೋಡಬಹುದು.

---

10. ಬ. ಕೃಷ್ಣಮಾಚಾರ್ಯ, ಸುರಪುರ. ಅವರ ಸಂದರ್ಶನ ಹಾಗೂ ಸಂಗ್ರಹದಿಂದ.

ಏತಾದೃಶ ಗುಣ ಮಣಿಕಿನ
ವೀತಾಬ್ಜಾ ತಾನನಾದ್ಯಮೃತ ಭುಜಿಷ್ಟಕುದ
ಸೂಕ್ತ ಹರಿನೀಲ ಮಧುಪ
ವ್ರಾತಾರುಣ ದಿವ್ಯಪಾದವನಜಾತುನಕುನ್

ಪೂ: ಪರಿವೃಢ ಸಂಪತ್ತ್ರೀ
ಜ: ಪುಂಜದ್ವಾರಕಾಲ ಸದ್ರುತ್ತು ಮಂಯೂಂ
ತ : ಪುರುಹುಸಾಧ್ವೀನುವ
ಯು: ಪರಮಾರ್ಥಾವಹ ಶ್ರಿಂಯು: ಪತಕೆಲಮಿನ್

ಕುಂಭದ ವಷ್ಟಂಭದರ
ಜೃಂಭ ವಿಜದ್ವನನಗಾಪಡಂಯು ಲೀಲಾಸಂ
ರಂಭುನಕುನ್ ಮಮತಾವಾ
ಗ್ಜೃಂಭಿತ ವಸುದೇವ ದೇವಕೀ ಡಿಂಭುಜಕುನ್

ಪರಿಕಿಂಪು ನೃಕೇಸರಿಕಿನ್
ಸರಿಕಿನ್ ವೇಲ್ಕೊಕಡು ರಾಗನನಿ ಕುತುಗರಿಕಿನ್
ಗರಿಕಿನ್ ದಿಕ್ಕಗು ಹರಿಕಿನ್
ಹರಿಕಿನ್ ಬ್ರೇಮಾನು ಜನ್ಮಡಗು ನೇಶ್ವರಿಕಿನ್·

ಆಲೋಲಕ ನೀಲಾಲಕ
ಜಾಲಾಕ ಕಲಿತಗೋರಜಸ್ತ್ರತಿಕಿ ದಯಾ
ಶಾಲಕಿ ವನಮಾಲಿಕಿನಿ ಗ
ಪಾಲಕಿ ಜಂಯುದಾಸ್ತ್ರವ್ಯೈನ ಪರಮಾತ್ಮುನಕುನ

ಶರಣಾಗತ ಶರಣಾಲಸ
ದರುಣಾಂಬುಜ ದರಹತ ಮದಾಧಿಕ ಶಕಟಾ
ಸುರನಕು ಯುದುವರುನಕು ಮುರ
ಹರುನಕು ಶ್ರೀಧರನ ಕಮಿತ ಹರ್ಷ ಕರುನಕುನ

ಜ್ಞಾನಂಯುತಾಗೇನ ಸುತಾ
ಧೀನಕೃತಾರಾಧನನಕು ಹಿಮಗಗಧುನೀ
ಧೇನಾಹೀನಾಬ್ಜೇನಾ
ಗೇನಾಬ್ಜಂಯುಶೋಧವಶಿತ ದ್ರುಹಿಣಾಡುನಕುನ

ಶ್ರೀಲೋಲನಕಂ ಸುಶೀಲೋಲನಕಂಗ
ಕೃಪಾಲೋಲನಕಂನು ಸದ್ಗುಣಾಲ ಪಾಲನಕಂಜಗ
ತ್ರಾಲೋಲನಕಂಡಂಡಿ ತುಗನು
ಕಲಾಲೋಲನಕಂನ ಪಾಗಿನಗಿರಿ ಗೋಪಾಲೋಲನಕಂನ.

'ಕಂದ' ಛಂದಕ್ಕೆ ಒಳಪಟ್ಟಿರುವ ಮೇಲಿನ ಷಷ್ಠ್ಯಂತತ್ರಿಲುಗಿನಲ್ಲಿ ಪ್ರಯೋಗಿಸಿದ ವಿಶಿಷ್ಟರೂಪ. ಪುರುಷಾಕಾರಿಯವರು ಪಾಗಿನಗಿರಿಯ ಪಾರ್ಶ್ವದಲ್ಲಿಯೇ ಸದರಿ ಕೃತಿ ರಚಿಸಿದರೆನ್ನಲು ಕೊನೆಯ ಪದ್ಯವೇ ಸಾಕು. ವಿಷ್ಣುವನ್ನು ಹೊಗಳುತ್ತ, ಕ್ಷೇತ್ರಪಾಲಕ ಶ್ರೀಹರಿ ಬಾಲಗೋಪಾಲನ ಭಜಿಸುವಲ್ಲಿ ಭಕ್ತಿಯ ತನ್ಮಯತೆ ಕಾಣುತ್ತೇವೆ. ಅಲಂಕಾರ ಶ್ಲೇಷಯುಕ, ಆದ್ಯಂತ್ಯಗಳು ಕಾವ್ಯದುದ್ದಕ್ಕೂ ಹರಿದು ಬಂದಿವೆ. ಪ್ರಾಸಗಳಲ್ಲಿ ಸಹ ಕವಿ ಸದಾ ಲಕ್ಷ್ಯವಿಟ್ಟಿದ್ದಾನೆ.

ಕೇಶವಯ್ಯನ ಇನ್ನೊಂದು ಮಹತ್ವದ ಪ್ರಯೋಗ 'ಶಕಟಾಂಗ' ಬಂಧವೃತ್ತವುದು. ಚಿತ್ರದ್ವಯ ಗರ್ಭಿತ ಶಕಟಾಂಗ ಬಂಧ ಶಾರ್ದೂಲ ವೃತ್ತವೊಂದನ್ನು ಕುತೂಹಲಕ್ಕಾಗಿ ಇಲ್ಲಿ ನೀಡಲಾಗಿದೆ.

ಭೃತ್ಯಾಕ್ಯಪ್ರಾರ್ಥನ ಕೇಶ ಶ್ರೀಧರ ಮುಖ ಸಿದ್ಧ್ರೀ ಕಸ್ತುತ ಶ್ರೀಧನೀ
ನಕ್ರೋತ್ಕ್ರೋ ಖಲ ಶತ್ರು ಕೋಪರನ ರಾಜಾ ವಿಶ್ವರಕ್ಷಾಮಣಿ
ಯತ್ಯಾನಂದ ವಿವಸ್ವದಂ ತರಗ ಮಾನಾಕ್ಯಪಾಲತಾ ನಾಕ್ಯವನೀ
ನೀ ತ್ರೈಕಾಭೃತ ಮಾಸಲೀಲ ಪಯಮರಾನೀಕಾಗ್ರಣೀ ಚಿತ್ತುನೀ

ಈ ಚಿತ್ರದ್ವಯ ಗರ್ಭಿತ ಶಕಟಾಂಗ ಬಂಧವು ಶಾರ್ದೂಲ ವೃತ್ತದಲ್ಲಿದೆ. ಇಲ್ಲಿ ಕಾಣಬೇಕಾದ ಬಹು ಕುತೂಹಲದ ಸಂಗತಿಯೆಂದರೆ " ಮೊದಲ ಮತ್ತು ಮೂರನೇ ಚರಣದ ಆರನೆಯ ಹಾಗೂ ಹದಿನಾಲ್ಕನೆಯ ಅಕ್ಷರಗಳನ್ನು ಸೇರಿಸಿದಾಗ 'ಕೇಶವಕವಿ' ವೆಂದಾಗುತ್ತದೆ. ಅಲ್ಲದೆ ಎಂಟು ಹಾಗೂ ಹನ್ನೆರಡನೆಯ ಅಕ್ಷರಗಳನ್ನು ಸೇರಿಸಿದಾಗ 'ಶ್ರೀ ಕೋದಂಡರಾಮಾ' ಎಂಬ ಚಿತ್ರ ಮೂಡಿ ಬರುತ್ತದೆ.[11]

4. <u>ಇನ್ನಿತರರು :</u>

ಅನ್ಯ ಶಕ್ತಿಗಳೆಲ್ಲ ರಾಜ ಕೃಷ್ಣಪ್ಪನಾಯಕನನ್ನು ರಾಜಕೀಯವಾಗಿ ದುರ್ಬಲಗೊಳಿಸಿದವು. ಇಂಥ ಸವಾಲುಗಳಿಂದ ಸುರಪುರ ಸಂಸ್ಥಾನ ಬಡತನದ ದವಡೆಗೆ ಸಿಕ್ಕಿತು. ಆದರೆ ಆಳ್ವಿಕೆ ನಡೆಸಿದ ಅರಸು ಕೃಷ್ಣಪ್ಪನಾಯಕನ ಹೃದಯ ಮಾತ್ರ ಸಾಹಿತ್ಯದಿಂದ ಶ್ರೀಮಂತವಾಗಿತ್ತು. ಬಂದ ಅನೇಕ ವಿದ್ವಾಂಸರಿಗೆ ಆಶ್ರಯ ನೀಡಿದನಲ್ಲದೆ ಸಾಹಿತ್ಯ ರಚನೆಗೆ ವಿಪುಲ ಅವಕಾಶ ಮಾಡಿಕೊಟ್ಟ. ಅದಕ್ಕೆ

11. ಬಿ. ಸುಚರಿತಾ — ಲೇಖನ: ಮರೆಯಲಾಗದ ಮಾಣಿಕ್ಯಗಳು (ಸಗರನಾಡು ದರ್ಶನ), ಪುಟ-238.

ಪ್ರತಿಫಲವೆಂಬಂತೆ ಕೊಂಡಾಪೂರದ ಪ್ರಸಿದ್ಧ ಕವಿಗಳಾದ ವರದಾಚಾರ್ಯ ಮತ್ತು ಹಯಗ್ರೀವಾಚಾರ್ಯರು. ಪಂಡರಪುರದ ವಿಠ್ಠಲ ಪರಮಭಕ್ತನಾದ ಹಯಗ್ರೀವಾಚಾರ್ಯ 'ಹಯಗ್ರೀವ ಚಂದ್ರಿಕಾ' ಎಂಬ ವ್ಯಾಕರಣ ಗ್ರಂಥರಚಿಸಿದ.

ಅಷ್ಟ ಹಾಗೂ ಶತಾವಧಾನಿ ವಿದ್ಯೆಗಳಲ್ಲಿ ನೈಪುಣ್ಯ ಸಾಧಿಸಿದ ಅಷ್ಟಾವಧಾನಿ ವೆಂಕಯ್ಯಶಾಸ್ತ್ರಿಯು "ಯುಧಿಷ್ಠಿರಾಶ್ವಮೇಧ" ವೆಂಬ ಪ್ರೌಢ ಚಂಪೂಗ್ರಂಥವನ್ನು ಬರೆದು ಸಂಸ್ಥಾನದಿಂದ ಸನ್ಮಾನಕ್ಕೆ ಒಳಗಾದರು. ಅದರಂತೆ 'ಆರ್ಯರಾಮಾಯಣ' ರಚಿಸುವ ಮೂಲಕ ಮೂಲದಲ್ಲಿದ್ದ ಪರಂಪರೆಯನ್ನು ಮುಂದುವರೆಸಿದಂತೆ ಕಾಣುತ್ತದೆ. ಭಾರತದ ಮಹಾನ ಗ್ರಂಥಗಳಾದ ಮಹಾಭಾರತ ಮತ್ತು ರಾಮಾಯಣವನ್ನು ಸಂಸ್ಥಾನದ ಜನತೆಗೆ ಹೊಸ ಬಗೆಯಲ್ಲಿ ನೀಡಿದ ಮೊದಲಿಗರೆಂದರೆ ವೆಂಕಯ್ಯಶಾಸ್ತ್ರಿ. ಇವರ ಪುತ್ರ ನರಸಿಂಹಶಾಸ್ತ್ರಿಯೂ ಸಹ 'ಶಂಕರಗುರುಸ್ತೋತ್ರ' ವೆಂಬ ಶತಕ ಸಾಹಿತ್ಯ ಹಾಗೂ 'ದ್ವಾತ್ರಿಂಶ ದ್ವೀಪ ಪಂಚನ' ವೆಂಬ ದ್ವಾದಶಮಂಜರಿಯನ್ನು ಸಂಸ್ಕೃತದಲ್ಲಿ ರಚಿಸಿ ತಂದೆಯ ಕೀರ್ತಿ ಕಿರೀಟವನ್ನು ತಾನು ತೊಟ್ಟುಕೊಂಡನು.

<u>ಮಹಾಮೂರ್ತಿ :</u>

ಪಾಮನಾಯಕನ ಆಳ್ವಿಕೆ ಕಾಲದಲ್ಲಿ ಕಟ್ಟಲಾದ ಸುರಪುರದ ನಾಕಾಪೂರ ಮಠವು ಹಲವು ಅನುಭಾವಿಗಳ ಆಶ್ರಯ ತಾಣವಾಗಿತ್ತು. ಕಡ್ಲಪ್ಪನವರ ಅನ್ನದಾಸೋಹ, ಕವಿಗಳ ಕಾವ್ಯದ ಮೂಲಕ ಜ್ಞಾನದಾಸೋಹಕ್ಕೆ ಪರಿವರ್ತನೆಗೊಂಡಿತು. ಜನತೆಯ ಬೌದ್ಧಿಕ ಹಸಿವನ್ನು ಹಿಂಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ನಾಕಾಪೂರ ಮಠವು[12] ಮಹಾಮೂರ್ತಿ ಎಂಬ ಕವಿಗೆ ಆಶ್ರಯ ನೀಡಿತು." ಸಂಸ್ಥಾನದ ಷಟ್ಪದಿಬ್ರಹ್ಮ" ನೆಂಬ ಹೆಗ್ಗಳಿಕೆಗೆ ಅರ್ಹವಾದ ವ್ಯಕ್ತಿ ಈತ. ಕಡ್ಲಪ್ಪನ ಇಂಗಿತದಂತೆ ಹಾಗೂ ಗುರು ಸಿದ್ಧನ ಕೃಪೆಯಂತೆ 'ಅಷ್ಟಾವರಣ ತಿಲಕ' ವೆಂಬ ಷಟ್ಪದೀ ಕಾವ್ಯವೊಂದನ್ನು[13] ರಚಿಸಿದ ಬಗ್ಗೆ ಅತನೇ ಹೇಳಿಕೊಳ್ಳುತ್ತಾನೆ.

ಸುರಪುರ ದೊರೆಯ ಪಾಮೇಂದ್ರನ ಪ್ರಧಾನಿಗಳು
ವರನಿಷ್ಠೆಯ ವರಭಕ್ತಿಯುಳ್ಳ ಮಹಾಮೂರ್ತಿ
ವಿರಚಿಸಿ ಪೇಳ್ವೆಂ ------------ 1

---

12. ಡಾ.ವಿ.ಜಿ.ಪೂಜಾರ— ಲೇಖನ:ನಿಷ್ಠ ಸಚಿವ ಸಹೋದರರು.(ಸಾರಂಗಶ್ರೀ).ಪುಟ-437.
13. ಆರ್.ನರಸಿಂಹಾಚಾರ್ಯ — ಕರ್ನಾಟಕ ಕವಿಚರಿತೆ. ಭಾಗ-2,ಪುಟ-128.

ಧರೆಗಧಿಪ ಕೃಷ್ಣತೀರದ ತ್ರಿಕೋಟಿಶದಲವ್ವ
ವೆರೆವ ನಾಕಾಪುರದ ಸ್ಥಳದೊಳಗೆ ನಿಷ್ಠೆಗಳ
ಪರಮ ಕಡಕೋಳ ಮಠದಲ್ಲಿ ಕೊಟ್ಟವನವರ ಆಶ್ರಯಂ ಮಾಡಿಕೊಂಡು
ವರಮನ್ನದಾನಿ ಗುರುಸಿದ್ಧಲಿಂಗನ ಕೃಪಾ
ಕರದಿಂದ ಮಹಮೂರ್ತಿ ವಿರಚಿಸಿದ ಕಾವ್ಯಮಂ
ವರವೀರಶೈವ ಶಿವಭಕ್ತತತಿ ಚರಣಕಿಂಕರನೆಂದು ಪಾಡುವುದು ॥[14]

ದೂರದಿಂತ ಪ್ರಧಾನಿಂದು ಪರಿಶ್ರಮವನ್ನೇ ಅತಿ ಹೆಚ್ಚು ಕೊಂಡಾಡುವ ಮಹಾಮೂರ್ತಿ, ರಾಜಾಶ್ರಯದಲ್ಲಿರದ ಕವಿ. ಶ್ರೀವೈಷ್ಣವರಿಂದ ತುಂಬಿಹೋಗಿದ್ದ ಆಸ್ಥಾನದಲ್ಲಿ ವೀರಶೈವ ವಿದ್ವಾಂಸರಿಗೆ ಮನ್ನಣೆ ನೀಡುವಲ್ಲಿ ಗೌಣತೆ ಅನುಸರಿಸಲಾಗಿತ್ತೆಂದು ತೋರುತ್ತದೆ. ಹೀಗಾಗಿ ಮಠಗಳನ್ನು ಆಶ್ರಯಿಸಿ ಸ್ವತಂತ್ರ ಕಾವ್ಯರಚನೆಗಿಳಿದವರಲ್ಲಿ ಈತನೂ ಒಬ್ಬ.

5. ಜಾನಪದ ಸಾಹಿತ್ಯ :

ಒಂದು ಜನಾಂಗದ ಬದುಕಿನ ಸಾಂಸ್ಕೃತಿಕ ಚರಿತ್ರೆಯನ್ನೇ ತಿಳಿಸುವ ಜಾನಪದ ಸಾಹಿತ್ಯವು ಜನತೆಯ ನೋವು-ನಲಿವುಗಳನ್ನು ನೈಜವಾಗಿ ಬಿಂಬಿಸುತ್ತದೆ. ಮೌಖಿಕವನ್ನು ತನ್ನ ಮುಖ್ಯ ಮಾಧ್ಯಮವಾಗಿಸಿಕೊಂಡ ಜಾನಪದವು ಜನಪದರ 'ಬಾಯಿ' ಬದುಕಿರುವವರೆಗೂ ಬೆಳೆಯುತ್ತಲೇ ಇರುತ್ತದೆ. ಇದನ್ನು ಎಂದು ನಾವು ಖಚಿತ ಸ್ವರೂಪಕ್ಕೆ ಹಿಡಿದು ಕಟ್ಟುತ್ತೇವೆಯೋ ಅಂದು ಅದರ ಸಾವು ಸಮೀಪಿಸಿತೆಂದೇ ಅರ್ಥ. ಮನದಿಂದ ಉಕ್ಕಿಬಂದ ಇಂಥ ಉಸಿರೆಲ್ಲ ಸಾಹಿತ್ಯವಾಗಿಯೇ ಹೊರಹೊಮ್ಮುವದರಿಂದ ಇದನ್ನು 'ಸ್ವಾನುಭವದ ಸ್ವತಂತ್ರ ಸಾಹಿತ್ಯ' ವೆಂದು ಕರೆಯಲು ಅಡ್ಡಿಯಿಲ್ಲ. ಯಾವ ಕೃತಕತೆಗೂ ಒಳಗಾಗದೆ ಬದುಕಿನಲ್ಲಿ ಬರುವ ಸುಖ-ದುಃಖ, ಸಿಟ್ಟು-ಶಾಂತಿ, ಆಸೆ-ನಿರಾಸೆ, ತಪ್ಪು-ಒಪ್ಪು, ನ್ಯಾಯ-ಅನ್ಯಾಯ ಇಂಥ ಅನೇಕ ಏರು-ಇಳಿತಗಳನ್ನು ನೇರವಾಗಿ ತಿಳಿಹೇಳುವ ಜಾನಪದಕ್ಕೆ ಯಾವುದೇ ಛಂದ-ಬಂಧಗಳ ಕಟ್ಟಳೆಯಿಲ್ಲ.

ಪದ್ಯ-ಗದ್ಯಗಳೆರಡರಲ್ಲೂ ಕಾಣಿಸಿಕೊಳ್ಳುವ ಜಾನಪದವನ್ನು ಹಾಡು, ಒಗಟು, ಚಮ, ಕಥೆ, ಗಾದೆ ಮುಂತಾದ ರೂಪದಿಂದ ಬಿಡಿಬಿಡಿಯಾಗಿ ಇಂದು ಅಧ್ಯಯನ ಮಾಡುತ್ತಿದ್ದೇವೆ. ಹಾಡುಗಳಲ್ಲಿ ಮುಖ್ಯವಾಗಿ ಹಂತಿ, ಮೊಹರಂ, ಲಾವಣಿ, ಡೊಳ್ಳು, ಭಜನೆ, ಸೋಬಾನೆ, ಕುಟ್ಟುವ, ಬೀಸುವ, ಎದುರುಗೊಳ್ಳುವ -ಹೀಗೆ ಹತ್ತು-ಹಲವು ಸಂದರ್ಭಗಳಲ್ಲಿ ಮೈತಾಳಿ ಕೇಳುಗರಿಗೆ ಮೈಮರೆಸುತ್ತವೆ.

---

14. ಡಾ. ವೀರಣ್ಣ ದಂಡೆ – ಸಂ: ಅಷ್ಟಾವರಣ ತಿಲಕ. ಸಂಧಿ-13, ಪುಟ-52.

ಸುರಪುರ ಸಂಸ್ಥಾನದುದ್ದಕ್ಕೂ ಹರಡಿರುವ ಇಂಥ ಜಾನಪದ ಮಟ್ಟುಗಳು ಇಂದು ರಾಶಿ ರಾಶಿಯಾಗಿ ದೊರೆಯುತ್ತವೆ. ಅಧ್ಯಯನದ ದೃಷ್ಟಿಯಿಂದ ಇನ್ನೂ ಕನ್ನೆ ನೆಲವಾಗಿರುವ ಸಂಸ್ಥಾನದಲ್ಲಿ ಜಾನಪದ ಕಣಜವೆ ಅಡಗಿದೆ. ಎಷ್ಟೋ ಅನಾಮಧೇಯ ಕವಿಗಳು ಬಿಟ್ಟುಹೋದ ಈ ಸಾಹಿತ್ಯದ ಅಧ್ಯಯನಕ್ಕೆ ತೊಡಗಿದರೆ ಪ್ರತ್ಯೇಕ ಪ್ರಬಂಧವೇ ಸಿದ್ಧಗೊಳ್ಳುವಷ್ಟು ವೈವಿಧ್ಯಮಯ ವಸ್ತುವಿದೆ. ಆದುದರಿಂದ ಸಂಸ್ಥಾನದ ರಾಜಕೀಯ ಚರಿತ್ರೆ ಮೇಲೆ ಹೊಸ ಬೆಳಕು ಚೆಲ್ಲುವ ಒಂದು ಲಾವಣಿ ಹಾಗೂ ಇನ್ನೊಂದು ದುಂದುಮೆ ಪದ್ಯವನ್ನು ಮಾತ್ರ ಎತ್ತಿಕೊಂಡು ಅದನ್ನು ಈ ಪ್ರಬಂಧದ ಅನುಬಂಧ ವಿಭಾಗದಲ್ಲಿ ಸೇರಿಸಲಾಗಿದೆ.

ಆ. ಸಾಂಸ್ಕೃತಿಕ

'ಸಂಸ್ಕೃತಿ' ಎಂದರೆ ಜೀವನ ವಿಧಾನವೆಂದು ಸಾಮಾನ್ಯ ಅರ್ಥ. ಒಂದು ದೇಶದ ಜನಾಂಗದಲ್ಲಿರುವ ಸಭ್ಯತೆ, ನಾಗರೀಕತೆ, ವಿನಯಶೀಲತೆ, ಗುಣಗ್ರಾಹಕತೆ, ಕೃತಜ್ಞತೆ, ರಸಿಕತೆ, ವಿಚಾರಪರತೆ, ದೇಶಾಭಿಮಾನ, ಇಂಗಿತಜ್ಞತೆ, ಕರ್ತವ್ಯದಕ್ಷತೆ[1] ಮುಂತಾದ ರೀತಿ-ನೀತಿಗಳು 'ಸಂಸ್ಕೃತಿ' ಯಲ್ಲಿ ಸಮಾವೇಶಗೊಳ್ಳುತ್ತವೆ. ಒಂದು ತಲೆಮಾರಿನಿಂದ ಮುಂದಿನ ತಲೆಮಾರಿಗೆ ಸಾಗಿಬರುವ ಸಂಪ್ರದಾಯಗಳು ಸಹ 'ಸಂಸ್ಕೃತಿ' ಯೆನಿಸಿಕೊಳ್ಳುತ್ತವೆ. "ಬದುಕಿನ 'ಜೀವನಮೌಲ್ಯ' ಗಳು ಸಂಸ್ಕೃತಿಗೆ ಪೋಷಕವಾಗಿ ಬೆಳೆಯುತ್ತವೆ" ಎಂಬುದು ವಿದ್ವಾಂಸರು ಒಪ್ಪಿಕೊಂಡ ವಿಚಾರ. 'ಸಂಸ್ಕೃತಿ' ಹೃದಯಕ್ಕೆ ಒಳಪಟ್ಟುದು, 'ನಾಗರಿಕತೆ' ಬಹಿರಂಗಕ್ಕೆ ಸಂಬಂಧಿಸಿದ್ದೆಂಬ ವಾದವೂ ಇದೆ.

ಇಂಥ ಸಾಂಸ್ಕೃತಿಕ ಚಟುವಟಿಕೆಗಳಿಂದ ಸಂಸ್ಥಾನವನ್ನು ಸದಾಸಮೃದ್ಧವಾಗಿಟ್ಟುದಂ ಸುರಪುರದ ಅರಸರ ಕ್ರಿಯಾಶೀಲತೆ ಬಗ್ಗೆ ನಮಗಿಂದು ಹಲವಾರು ಆಧಾರಗಳು ದೊರಕಿವೆ. ಅವುಗಳಲ್ಲಿ ಬಹು ಮಹತ್ವಪೂರ್ಣವಾದುದೆಂದರೆ ನಾಲ್ಕನೆಯ ನಂಬರಿನ ಕೈಫಿಯತ್ತು ಹೇಳುವ[2] ಹರಪನಹಳ್ಳಿ ಸಂಸ್ಥಾನದೊಂದಿಗಿನ ಸಾಂಸ್ಕೃತಿಕ ಸ್ಪರ್ಧೆ. ಮುಮ್ಮಡಿ ವೆಂಕಟಪ್ಪನಾಯಕನ ಆಳ್ವಿಕೆಯಲ್ಲಿ ಜರುಗಿದ ಈ ಕಾರ್ಯಕ್ರಮವನ್ನು ಮೂರು ಲಕ್ಷ ರೂ. ವೆಚ್ಚದಿಂದ ಏರ್ಪಡಿಸಲಾಗಿತ್ತು. ಸಿದ್ದನ ಕೊಟ್ಟದ ಬಯಲಿನಲ್ಲಿ ಸತತ ಮೂರು ತಿಂಗಳವರೆಗೆ ನಡೆದ ಸದರಿ ಸ್ಪರ್ಧೆಯಲ್ಲಿ ಗಾಯಕರು,

---

1. ರತ್ನಶಿವಶಂಕರ — ಸಂಗೀತ. ಪುಟ-24.
2. ಸು.ಸಂ.ಇ., ಪುಟ-143.

ಚಿತ್ರಕಲಾವಿದರು, ಶಿಲ್ಪಿಗಳು, ವೈದ್ಯರು, ಜ್ಯೋತಿಷಿಗಳು, ಜಟ್ಟಿಗಳು, ಪಾತ್ರದವರು, ಭೈರೂಪಿಗಳು, ನಟರು, ಹಾಸ್ಯಗಾರರು, ಬೇಟೆಯಾಡುವವರು, ಡೊಂಬರು, ದಾಸರು, ಕವಿಗಳು, ವಿವಿಧ ವಾದ್ಯಗಾರರು, ವೇದಾಂತಿಗಳು, ಸವಾರರು — ಹೀಗೆ ಮುಂತಾದ ಕಲಾಕೌಶಲ್ಯವುಳ್ಳವರು ಪಾಲ್ಗೊಂಡಿದ್ದರು. ಎಲ್ಲಾ ಸ್ಪರ್ಧೆಯಲ್ಲೂ ಸಂಸ್ಥಾನದ ಸ್ಪರ್ಧಾಳುಗಳೇ ಜಯಶಾಲಿಯಾದದ್ದು ನೋಡಿದರೆ ಇವರ ಸಾಂಸ್ಕೃತಿಕ ಜವಾಬ್ದಾರಿ ಉನ್ನತಮಟ್ಟದಲ್ಲಿತ್ತೆಂದು ಅರ್ಥೈಸಬಹುದಾಗಿದೆ.

<u>1. ಹಬ್ಬ-ಹರಿದಿನಗಳು :</u>

ಸಂಸ್ಥಾನದಲ್ಲಿ ಆಚರಿಸುವ ಬಹುಪ್ರಮುಖ ಮತ್ತು ಅಷ್ಟೇ ಪ್ರಧಾನ ಹಬ್ಬಗಳೆಂದರೆ ಮಹಾನವಮಿ, ಯುಗಾದಿ, ದೀಪಾವಳಿ ಅಲ್ಲದೆ ಪ್ರತಿತಿಂಗಳು ಬರುವ ಎಲ್ಲಾ ಹುಣ್ಣಿಮೆ, ಅಮವಾಸ್ಯೆಗಳಿಗೂ ಒಂದೊಂದು ಬಗೆಯ ಮಹತ್ವ ನೀಡಿ ಕಠಿಣ ವ್ರತಾದಿಗಳೊಂದಿಗೆ ಆಚರಿಸುತ್ತಿದ್ದರು. ನಾಗರಪಂಚಮಿ, ಸಂಕ್ರಾಂತಿ, ರಾಮನವಮಿ, ಗೌರಿ ಮತ್ತು ದವನದ ಹುಣ್ಣಿಮೆ, ಶ್ರಾವಣ, ಗ್ರಹಣಕಾಲ — ಹೀಗೆ ಹಲವು ಸಂಪ್ರದಾಯಗಳು ಸಂಸ್ಥಾನದಲ್ಲಿಯ ಉತ್ಕೃಷ್ಟ ಆಚಾರ ಪದ್ಧತಿಗಳಾಗಿದ್ದವು. ರಾಜಪರಿವಾರದವರಿಗೆ-ಈ ಎಲ್ಲಾ ಪುಣ್ಯ ಹಬ್ಬದಿಗಳ ವೆಚ್ಚಕ್ಕೆಂದು ಸಂಸ್ಥಾನದ ಭಂಡಾರದಿಂದ ಇಂತಿಷ್ಟು ಹಣವೆಂದು ಬಿಡುಗಡೆ ಮಾಡಲಾಗುತ್ತಿತ್ತು.

<u>ಮಹಾನವಮಿ :</u>

ಆರಾಧ್ಯದೈವ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯಕ್ಕೆ ಸಂಬಂಧಪಟ್ಟಂತೆ ಸಂಸ್ಥಾನದಲ್ಲಿ ಜರುಗುವ ಮಹತ್ವಪೂರ್ಣ ಉತ್ಸವವೆಂದರೆ 'ಮಹಾನವಮಿ'. ಒಂಭತ್ತು ದಿನಗಳವರೆಗೆ ನಡೆಯುವ-ಈ ಹಬ್ಬ ತಿರುಪತಿ ವೆಂಕಟರಮಣ ದೇವಾಲಯದ ಪದ್ಧತಿಯನ್ನೇ ಸಂಪೂರ್ಣವಾಗಿ ಅನುಕರಿಸಿದೆ. ಪ್ರತಿನಿತ್ಯ ಒಂದೊಂದು ವಾಹನದ ಆಚರಣೆಯನ್ನು ಒಂಬತ್ತು ದಿನಗಳವರೆಗೆ ವಿಜೃಂಭಣೆಯಿಂದ ಪೂಜಿಸಲಾಗುತ್ತದೆ. ಆಗ ಪಾತ್ರದವರಿಂದ ನೃತ್ಯಸೇವೆ ನಡೆಯುತ್ತದೆ.

ಅಂದು ಸಂಸ್ಥಾನದ ಅಪೇಕ್ಷಿತ ಜನರೆಲ್ಲ ಸುರಪುರ ನಗರದಲ್ಲಿ ಸೇರಿ ಸಾಯಂಕಾಲ ಸಮಯವಾಗುತ್ತಿದ್ದಂತೆ ವೇಣುಗೋಪಾಲಸ್ವಾಮಿ ದೇವಾಲಯದಲ್ಲಿ ನೆರೆದು, ತರುವಾಯ ದೇವರ ಪಲ್ಲಕ್ಕಿಯೊಂದಿಗೆ ಮೆರವಣಿಗೆಯಲ್ಲಿ ಅರಮನೆಯತ್ತ ಸಾಗುತ್ತಾರೆ. ಆ ವೇಳೆಗೆ ಅರಸ ತನ್ನ ಕುಟುಂಬ ಪರಿವಾರದೊಡನೆ ಅರಮನೆಯ ದ್ವಾರದಲ್ಲಿ ಬಂದುನಿಂತು ಬಂದ ಮೆರವಣಿಗೆಯಲ್ಲಿ ಸಾಗುತ್ತಾನೆ.

ಊರ ಹೊರಭಾಗದಲ್ಲಿ 'ಶಮೀಪೂಜೆ' ಮುಗಿಸಿಕೊಂಡು ಮರಳಿದ ಮೇಲೆ ಅರ್ಚಕ, ಸೈನಿಕ, ಹಾಗೂ ಇನ್ನಿತರ ಸಿಬ್ಬಂದಿ ವರ್ಗಕ್ಕೆ ದಕ್ಷಿಣೆ ಮತ್ತು ವಾರ್ಷಿಕ ಸಂಬಳ, ಸನ್ಮಾನಗಳನ್ನು ನೀಡಿ ಗೌರವಿಸಲಾಗುತ್ತದೆ. ನಂತರ ಬನ್ನಿಪತ್ರಿ ವಿನಿಮಯಗೊಳ್ಳುವ ಹೃದಯಂಗಮ ಸನ್ನಿವೇಶವನ್ನು ಟೇಲರ ತನ್ನ ಆತ್ಮ ಚರಿತ್ರೆಯಲ್ಲಿ ಮನದುಂಬಿ ಬಣ್ಣಿಸಿದ್ದಾನೆ. ಹಬ್ಬದ ನಿಮಿತ್ತ ಅರಮನೆ, ಕೋಟೆ, ಕೊತ್ತಲ, ದೇವಾಲಯ ಮುಂತಾದವುಗಳನ್ನು ಶೃಂಗರಿಸಲಾಗಿದ್ದು, ನೋಡುಗರ ಮನಾಕರ್ಷಣೆಗೆ ಮತ್ತಷ್ಟು ಮೆರಗು ಮೂಡಿರುತ್ತದೆ. ಇದು ಸಹ ಸಂಸ್ಥಾನದ ವಾರ್ಷಿಕ ಉತ್ಸವವಾದುದರಿಂದ ಇದರ ವೆಚ್ಚವೆಲ್ಲ ಸಂಸ್ಥಾನವೇ ಭರಿಸಬೇಕಿತ್ತು.

<u>ಗೋಕುಲಾಷ್ಟಮಿ :</u>

ಶ್ರೀವೈಷ್ಣವ ಪಂಥ ಪ್ರತಿನಿಧಿಸಿದ ಸುರಪುರ ಸಂಸ್ಥಾನವು ತನ್ನ ಕುಲದೈವ ಗೋಪಾಲ ಸ್ವಾಮಿಯನ್ನು ಆರಾಧಿಸುವಲ್ಲಿ ಅನೇಕ ಅರ್ಥಗಳನ್ನು ಅಡಗಿಸಿಕೊಂಡಿದೆ. ಇದರ ಬಗ್ಗೆ ಈ ಹಿಂದೆ ಧಾರ್ಮಿಕ ಅಧ್ಯಾಯದಲ್ಲಿ ವಿವರವಾಗಿ ನೋಡಿದ್ದೇವೆ. ಸಂಸ್ಥಾನದುದ್ದಕ್ಕೂ ಪ್ರಧಾನ ಹಬ್ಬವಾಗಿ ಪರಿಣಮಿಸಿದ ಗೋಕುಲ ಅಷ್ಟಮಿ ಉತ್ಸವವು ಮಹಾನವಮಿಗಿಂತ ವೈಭವಯುತವಾಗಿ ಆಚರಿಸಲ್ಪಡುವಂತದ್ದು. ಇದನ್ನು ಸುರಪುರದ ಸಾಮಾನ್ಯ ಜನತೆ 'ಹಾಳಕಿ' (ಹಾಲು ಓಕುಳಿ) ಎಂದು ಕರೆಯುತ್ತಾರೆ.

ವರ್ಣಮಯ ವಸ್ತ್ರ ಧರಿಸಿದ ಸಂಸ್ಥಾನದ ಜನತೆ ಅಂದು ಗೋಪಾಲಸ್ವಾಮಿ ದೇವಾಲಯದ ಕೆಳ ಮೈದಾನದಲ್ಲಿ ಸೇರುತ್ತಾರೆ. ಅರಮನೆಯಿಂದ ಹೊರಟ ಅರಸನ ಮೆರವಣಿಗೆ ಸಹ ಇದೇ ಮೈದಾನದ ಮೇಲ್ಭಾಗಕ್ಕೆ ಆಗಮಿಸಿ, ನಡೆವ ಸಮಾರಂಭಗಳಿಗೆ ಸಾಕ್ಷಿ ಹಾರಿಸುವ ಮೂಲಕ ಅಪ್ಪಣೆ ಕೊಡಲಾಗುತ್ತದೆ. ಆಗ ಮೈದಾನದ ಮಧ್ಯದಲ್ಲಿ ಅಂದಾಜು 50 ಅಡಿ ಎತ್ತರದ ಕಂಬಗಳನ್ನು ನೆಲದಲ್ಲಿ ಮೇಲ್ಮುಖವಾಗಿ ನಿಲ್ಲಿಸಲಾಗಿರುತ್ತದೆ. ಅವುಗಳಿಗೆ ರಾಕ್ಷಳ, ಸವಳು, ಔರಂಗ, ಬೆಣ್ಣೆ, ಬಾಳೆ ಮುಂತಾದ ಪದಾರ್ಥ ಸವರಿ ನುಣುಪು ಬರುವಂತೆ ಮಾಡಿರುತ್ತಾರೆ. ಈ ಕಂಬಗಳ ಮೇಲೆ ಮಂಟಪವೊಂದಿದ್ದು ಕುಂಬಳ ಹೋಳು, ಬಾಳೆ ಹಣ್ಣುಗಳನ್ನು ಇಳಿಬಿಡಲಾಗಿರುತ್ತದೆ. ಅದೇ ಮಂಟಪದೊಳಗೆ ಜಾರುವಿಕೆಗೆ ಸಹಾಯಕವಾಗುವ ನೀರಿನ ಪದಾರ್ಥ ಬೆರೆಸಿದ ಗಡಿಗೆಯೊಂದಿಗೆ ಓರ್ವವ್ಯಕ್ತಿ ಕುಳಿತು ಹತ್ತುವವರ ಮೇಲೆ ಧಾರಾಕಾರವಾಗಿ ಸುರಿಯುತ್ತಾನೆ. ಆಗ ಹತ್ತಲು ಸ್ಪರ್ಧೆಗಿಳಿದ ಜನರು ಒಬ್ಬರ ಮೇಲೊಬ್ಬರು ಉರುಳಿಬಿದ್ದು

ನೋಡುಗರಿಗೆ ಆನಂದ ಹುಟ್ಟಿಸುತ್ತಾರೆ. ಕೈಯಿಟ್ಟರೆ ಜಾರುವಷ್ಟು ಲೇಪಿಸಿದ್ದರಿಂದ ಅವುಗಳನ್ನು ಹತ್ತುವದು ಸಾಮಾನ್ಯರಿಗೆ ಅಸಾಧ್ಯವಾಗಿ ಪರಿಣಮಿಸುತ್ತದೆ. ಇದರಿಂದ ಹತ್ತುವವರಲ್ಲಿ ಒಂದು ಕೌಶಲ್ಯವಿದೆ. ಮೇಲೆ ಹತ್ತಬೇಕಾದವನಿಗೆ ಕೆಲವರು ಬೆನ್ನು ನೀಡಿ ಸಹಕರಿಸಬೇಕು. ಆಗ ಅನುಕೂಲಮಾಡಿಕೊಂಡ ವ್ಯಕ್ತಿ ಠಂಗನೆ ಅವರ ಮೇಲಿನಿಂದ ಜಿಗಿದು ತನ್ನ ತೊಡೆಗಳಿಂದ ಕಂಬವನ್ನು ಅಮುಕುತ್ತ, ಕೈ ಮತ್ತು ಎದೆಗಳಿಂದ ಮೇಲಕ್ಕೆ ತೆವಳುತ್ತ ಹೋದರೆ ಖಚಿತಾ ಗೆಲ್ಲುತ್ತಾನೆ. ಇಂಥ ಸಂದರ್ಭದಲ್ಲಿ ಸ್ಪರ್ಧಿಗಳು ಕಾಲೆಳೆದು ಜಗ್ಗುವದುಂಟು. ಹೀಗೆ ಒಂದೆರಡು ತಾಸು ನಡೆವ ಏಳು-ಬೀಳುಗಳ ಮಧ್ಯೆ ಶಕ್ತಿ-ಯುಕ್ತಿ ಪ್ರಯೋಗಿಸಿದ ವ್ಯಕ್ತಿ ಮೇಲೇರಿ ಕುಂಬಳದ ಹೋಳು ಹರಿಯುವದರೊಂದಿಗೆ ವಿಜಯಿಯಾಗುತ್ತಾನೆ; ಸಂಸ್ಥಾನದಿಂದ ಸನ್ಮಾನ ಪಡೆಯುತ್ತಾನೆ.

ಇಂಥ ಕೆಲವು ಕಂಬದ ಉತ್ಸವವನ್ನು ಸಂಸ್ಥಾನದ ವಯಬೂಳ, ಕರಕಲ್, ವಾಗಿನಗೇರಿ, ಮುದನೂರ ಮುಂತಾದ ಊರುಗಳಲ್ಲಿ ಆಚರಿಸುವದನ್ನು ಕಾಣುತ್ತೇವೆ. ಇಲ್ಲಿ ಕಂಡುಬರುವ ಪ್ರಮುಖ ಅಂಶವೆಂದರೆ ವಾಗಿನಗೇರಿ ಗೋಪಾಲಸ್ವಾಮಿ ಗುಡಿಯ ಮುಂದಿನ ಕಂಬ ಕಾರ್ಯಕ್ರಮ ಜರುಗಿದ ಮೇಲೆಯೇ ಸುರಪುರದ ಕಂಬಾಚರಣೆ ಆರಂಭಗೊಳ್ಳಬೇಕೆಂಬುದು. ಕಾರಣ, ಪೂರ್ವ ಪರಂಪರೆಗೆ ಗೌರವ ಸಲ್ಲಿಸುವದೇ ಆಗಿದೆ.

ಸುರಪುರದಲ್ಲಿ ಹಾಕಲಾದ ಗೋಪಾಲಸ್ವಾಮಿ ಗುಡಿಯ ಮುಂದಿನ ಕಂಬಗಳು ಮಲ್ಲಬಾವಿ, ವೆಂಕಟಾಪೂರ, ಸತ್ಯಂಪೇಟೆ, ದೀವಳಗುಡ್ಡ ಗ್ರಾಮದವರ ಉಸ್ತುವಾರಿಗೆ ಒಳಪಟ್ಟಿವೆ. ಯಾಕೆಂದರೆ ಈ ಕಂಬಗಳನ್ನು ಮೊದಲು ತಯಾರಿಸಿ ತಂದು ಹಾಕಿದವರು ಅವರೆ. ಇದು ತರುವಾಯ ಅವರಿಗೆ 'ಚಾಜ' ವಾಗಿ ರೂಢಿಗೆ ಬಂದಿತು.

ಕಂಬಗಳಲ್ಲಿ ರಣಗಂಬ, ದೇವರಕಂಬಗಳೆಂದು ಎರಡು ವಿಧ. ರಮಣಪ್ಪನಾಯಕನ ಕಟ್ಟೆ ಹತ್ತಿರ ಹಾಕುವದು ರಣಗಂಬವಾದರೆ, ಉಳಿದವು ದೇವರ ಕಂಬಗಳು. ದೇವರ ಕಂಬವನ್ನು ಪ್ರತಿವರ್ಷ ಕಡ್ಡಾಯ ಹೊಸದನ್ನೇ ತಂದು ಹಾಕಬೇಕೆಂಬುದೊಂದು ಪದ್ಧತಿ. ದೇವರಕಂಬ ಹರಿದಾಗಲೇ ಸಂಸ್ಥಾನಕ್ಕೆ ಸಕಲಶಾಂತಿ, ಸೌಖ್ಯ ಲಭಿಸುವದೆಂದು ಜನತೆಯ ನಂಬುಗೆ.

2. ಆಟಗಳು :

ಮನೋರಂಜನೆಗಾಗಿ ಸಂಸ್ಥಾನದ ಜನತೆ ರೂಢಿಸಿಕೊಂಡು ಬಂದ ಆಟಗಳು ಹಲವಾರು. ಕೋಲಾಟ, ಕುಂಟಾಟ, ಕಬಡ್ಡಿ, ಪಗಡೆ, ಚಿಣಿದಾಂಡು, ಲಗೋರಿ, ದಪ್ಪವತ್-ದುಪ್ಪವತ್ ಮುಂತಾದವುಗಳು. ಊರ ಮಧ್ಯದ ಬಯಲಿನಲ್ಲಿ ನಿತ್ಯ ಸಂಜೆ ನಡೆಯುತ್ತಿದ್ದವು. ಇಂದಿಗೂ ಅವೇ ಅಲ್ಪಸ್ವಲ್ಪ ಮಾರ್ಪಡಿಸಿಕೊಂಡು ಮುಂದುವರೆದಿವೆ. ತಾರುಣ್ಯಕ್ಕೆ ಬಂದ ಹಾರಿಗೆಯುವರು ಸೇರಿ ಆಡುವ ಬಯಲಾಟ, ಸಣ್ಣಾಟ, ನಾಟಕಗಳಂತೂ ತಿಂಗಳುಗಟ್ಟಲೆ 'ಜಡತಿ' (ತಾಲೀತಿ) ಪಡೆದು ಪ್ರದರ್ಶನಗೊಳ್ಳುತ್ತವೆ. ಕಸುಬನ್ನೇ ಕಲೆಯಾಗಿಸಿಕೊಂಡ ಹಲವರು ಜೀವನೋಪಾಯಕ್ಕಾಗಿ ಹಾವಾಡಿಗರಾಟ, ಡೊಂಬರಾಟ, ದಾಸರಾಟ, ಡಬ್ಬನಾಟ, ಮೋಡಿಕಾರರಾಟ ಮುಂತಾದವುಗಳನ್ನು ಜನಸಂದಣಿ ಸೇರುವ ಮೈದಾನದಲ್ಲಿ ಪ್ರದರ್ಶಿಸಿ ಕಾಣಿಕೆ ಸ್ವೀಕರಿಸುತ್ತಾರೆ. ಇಂಥ ಕಲೆಗೂ ಸಂಸ್ಥಾನದಿಂದ ಇನಾಮು ಸಿಕ್ಕಿದ್ದುಂಟು.

ಪ್ರಾಣಿ ಪಕ್ಷಿಗಳನ್ನು ಬಳಸಿಕೊಂಡು ರಂಜಿಸುವ ಕೆಲವು ಆಟಗಳಲ್ಲಿ ಮದಾನೆ ಹಾಗೂ ಚಿರತೆ ಕಾದಾಟ ಬಹು ಪ್ರಮುಖವಾದವು. ಮದಿಸಿದ ಆನೆಯೊಂದಿಗೆ ಓರ್ವ ವ್ಯಕ್ತಿ ನಿಃಶಸ್ತ್ರನಾಗಿ ಕಾದಾಡುವ ರುದ್ರರಮಣೀಯ ಆಟ ಸಂಸ್ಥಾನದ ಪೂರ್ವಜರಲ್ಲಿತ್ತು. ವಾಗಿನಗೇರಿಯ ಗಡ್ಡಿಪಿಡ್ಡ ನಾಯಕ ಬಿಜಾಪೂರ ಬಾದಷಹ ಬಿಟ್ಟ ಆನೆಯನ್ನು ಮರ್ದಿಸಿ 'ಮದಗಜಮರ್ದನ' ಬಿರುದು ಧರಿಸಿ ಸಗರನಾಡ ಚೇತನ ಗದ್ದುಂ ಪ್ರಸಿದ್ಧವಾದುದು.

ಅದರಂತೆ ಇಂಥ ಮದಾನೆಯೊಂದನ್ನು ಬೀದಿಯಲ್ಲಿ ಬಿಟ್ಟು ಕುದುರೆ ಮೇರಿ ಕುಳಿತ ಸವಾರರೀರ್ವರು ಅದಕ್ಕೆ ಭಲ್ಲೆಯಿಂದ ಚುಚ್ಚಿ ಕೆರಳಿಸುತ್ತಾರೆ. ಆಗ ಕೋಪಾತುರದಿಂದ ಹೂಂಕರಿಸುತ್ತ ಬರುವ ಆನೆ ಓಡಿಬರುತ್ತದೆ. ತಕ್ಷಣವೇ ಹಿಂದಿದ್ದ ಸವಾರ ತಿವಿಯುತ್ತಾನೆ. ಹೀಗೆ ಅದನ್ನು ಆಚೆ—ಈಚೆ ಓಡಾಡಿಸಿ ದಣಿವು ತರುವ ಆಟವನ್ನು ಉಪ್ಪರಿಗೆಯ ಮೇಲೆ ಕುಳಿತು ನೋಡುತ್ತಿದ್ದರು.

ಅರಣ್ಯದಿಂದ ಹಿಡಿದು ತಂದ ಹಸಿದ ಚಿರತೆಯನ್ನು ಕಟ್ಟಿ ಹಾಕಿ ಅದರ ಮೇಲೆ ಬೇಟೆನಾಯಿಗಳನ್ನು ಬಿಡುತ್ತಾರೆ. ಧೈರ್ಯವಿದ್ದ, ಬೇಟೆಗೆ ಪ್ರಸಿದ್ಧವಿದ್ದ ನಾಯಿಗಳು ಮಾತ್ರ ಚಿರತೆಯನ್ನು ಎಳೆದಾಡಿ ಕೆರಳಿಸುತ್ತವೆ. ಹೀಗೆ ಮದಾನೆ ಮತ್ತು ಚಿರತೆ ಕಾದಾಟ ಕಂಡು ಜನ ತಣಿದು ಕುಣಿದಾಡುತ್ತಿದ್ದರು. ಇದಲ್ಲದೆ ಹುಂಜದ ಪಂದ್ಯಾಟವೂ ಹೀಗೆಯೇ ಬೆಳೆದುಕೊಂಡು ಬಂದಿದೆ. ಹರಿತವಾದ

ಕತ್ತಿಯನ್ನು ಸ್ಪರ್ಧೆಗಿಳಿದ ಹುಂಜದ ಕಾಲಿಗೆ ಕಟ್ಟಿ ಬಿಡುತ್ತಾರೆ. ಎರಡು ಹುಂಜಗಳು ಬಹಳ ರಕ್ತ ಸೋರಿದರೂ ಗೆಲ್ಲಲು ಹೋರಾಡುತ್ತವೆ. ಪ್ರತಿವಾರ ನಿಗದಿತ ಸ್ಥಳದಲ್ಲಿ ಅನೇಕ ಗ್ರಾಮದ 'ಹುಂಜಪಂದ್ಯಾಟ' ಪ್ರೇಮಿಗಳು ಭಾಗವಹಿಸುತ್ತಿದ್ದರು.

<u>3. ಜಟ್ಟಿಗಳು</u> :

ಪ್ರಾಚೀನ ಕಾಲದ ಅರವತ್ನಾಲ್ಕು ವಿದ್ಯೆಗಳಲ್ಲಿ ಮಲ್ಲಯುದ್ಧವೂ ಒಂದು. ಈ ಯುದ್ಧ ಮಾಡುವವರಿಗೆ 'ಜಟ್ಟಿಗಳೆಂದ್ಹೆಸರು'[3] ಮುಷ್ಠಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳು ಭರತ– ಬಾಹುಬಲಿಯರ ಕಾಲದಿಂದಲೂ ಪ್ರಸಿದ್ಧವಾದುವು. ಮುಷ್ಠಿ ಮತ್ತು ಮಲ್ಲಯುದ್ಧಗಳು ಹಿಂಸೆಯಿಂದ ಕೂಡಿವೆಯಾದರೂ, ಶಸ್ತ್ರಸಮೇತ ಆಡುವ ಯುದ್ಧಗಳಲ್ಲ.

'ಗರಡಿ' ಮನೆಯಲ್ಲಿ ದಿನನಿತ್ಯ ಅಂಗಸಾಧನೆ ಮಾಡುವ ಈ 'ಜಟ್ಟಿಗಳು' 'ಉಸ್ತಾದ' ಎಂಬ ಗುರುವಿನಿಂದ ತರಬೇತಿ ಪಡೆಯುತ್ತಿದ್ದರು. ಇಂಥ ಸ್ಥಳಕ್ಕೆ ಅಖಾಡ, ಮಟ್ಟಿ ಎಂದು ಕರೆಯುತ್ತಾರೆ. ಆಗಾಗ ವಜ್ರಮುಷ್ಠಿ ಕಾಳಗಕ್ಕೆ ಸಂಸ್ಥಾನದ ಅರಸರು ಸ್ಪರ್ಧೆ ಇಡುತ್ತಿದ್ದರು. ಅನ್ಯ ಪ್ರಾಂತ್ಯಗಳಿಂದ ಬಂದ ಜಟ್ಟಿಗಳು ಇಲ್ಲಿ ಸೋತು ಹೋದುದೇ ಸಿಂಹಪಾಲು. ನುಣ್ಣಗೆ ಬೋಳಿಸಿದ ತಲೆಗೆ ವಜ್ರಮುಷ್ಠಿಯಿಂದ ಗುದ್ದಿದಾಗ ಸಾವು– ನೋವು ಸಂಭವಿಸುವುದು ಸಾಮಾನ್ಯ.

<u>4. ಕಲೆಗಳು : ಕಟ್ಟಡಗಳು :</u>

ಹಲವು ಕಲೆಗಳು ಜೀವನದ ಆವಶ್ಯಕ ಅಂಗವಾಗಿವೆ. ಕಲಾವಿದರು ತಮ್ಮ ಉಪಜೀವನಕ್ಕಾಗಿ ಕಲಿತುಕೊಂಡ ಕಲೆಯನ್ನೇ ವೃತ್ತಿಯಾಗಿಸಿಕೊಂಡಿದ್ದುಂಟು. ಆದರೆ ಅದರಿಂದ ಇನ್ನುಳಿದವರಿಗೆ ಆದ ಪ್ರಯೋಜನ ಮಾತ್ರ ಅಪಾರ. ಕಲ್ಲುಕುಟಿಕನ ಕಲೆ ಕೋಟೆಯನ್ನೇ ನಿರ್ಮಿಸಬಲ್ಲುದು. ಇದು ರಾಜ್ಯದ ರಕ್ಷಣೆಗೆ ಅತ್ಯಂತ ಅನಿವಾರ್ಯ. ಹೀಗಾಗಿ ಬದುಕಿನೊಂದಿಗೆ ಸಾಂಸ್ಕೃತಿಕವಾಗಿ ಬೆಸೆದುಕೊಂಡ ವಾಸ್ತುಕಲೆ, ಶಿಲ್ಪಕಲೆ, ಸಂಗೀತಕಲೆ, ನೃತ್ಯಕಲೆ ಮುಂತಾದವುಗಳನ್ನು ನಮ್ಮ ಇಲ್ಲಿಯ ಅಧ್ಯಯನಕ್ಕೆ ಎತ್ತಿಕೊಳ್ಳಲಾಗಿದೆ. ಗಮನಿಸಬೇಕಾದ ಒಂದಂಶವೆಂದರೆ, "ವಾಸ್ತು ಹಾಗೂ ಶಿಲ್ಪಕಲೆಯನ್ನು ಇಲ್ಲಿ ಪ್ರಮುಖವಾಗಿ ಕೋಟೆ ಮತ್ತು ದೇವಾಲಯದ ಹಿನ್ನೆಲೆಯಲ್ಲಿ ವಿವರಿಸಲಾಗಿದೆ."

---

3. ಹಾಸನ ರಂಗಾಜಿಟ್ಟಿ ಸೋಮಸುಂದರಂ — ಕರ್ನಾಟಕದ ಜಟ್ಟಿಗಳು. ಪುಟ-1 ರಿಂದ 5.

<u>1) ಕೋಟೆಗಳು :</u> ರಕ್ಷಣೆಯ ಆವರಣವುಳ್ಳ ಕಟ್ಟಡಕ್ಕೆ 'ಕೋಟೆ' ಎಂದರ್ಥ. ಇಂಥ ಕೋಟೆಯನ್ನು ಬೆಟ್ಟ-ಗುಡ್ಡ, ತಗ್ಗು-ದಿನ್ನೆ, ಕಾಡು-ಮೇಡುಗಳಿಂದ ಆವೃತ್ತವಾದ ಸ್ಥಳದಲ್ಲಿ ಬಂಡೆಗಲ್ಲುಗಳಿಂದ ಕಟ್ಟುವದು ಹಿಂದಿನಿಂದ ಬಂದ ರೂಢಿ. ಮುಖ್ಯವಾಗಿ ರಾಜ, ರಾಜ್ಯಕ್ಕೆ ಬೇಕಾದ ರಕ್ಷಣೆಯ ಸಾಧನ ಇದು.[4] ರಾಜ್ಯದ ಸಪ್ತಾಂಗಗಳಾದ ರಾಜ, ಅಮಾತ್ಯ, ರಾಜ್ಯ, ದುರ್ಗ, ಕೋಶ, ಸೈನ್ಯ, ಮಿತ್ರ ಹೀಗೆ ಏಳು ಅಂಶಗಳಲ್ಲಿ ಮುಖ್ಯವಾದ ಕೋಟೆಯು ಕರ್ನಾಟಕದ ಇತಿಹಾಸದಲ್ಲಿ ವಿಶೇಷ ಪಾತ್ರವಹಿಸಿದೆ. ಅನೇಕ ರಾಜರು, ಪಾಳೆಯಗಾರರು ಆಯಕಟ್ಟಿನ ಸ್ಥಳವನ್ನು ಆಯ್ಕೆ ಮಾಡಿ, ಶತ್ರುಗಳಿಂದ ರಕ್ಷಿಸಿಕೊಳ್ಳಲು ಕಟ್ಟಿದ ಅಪಾರ ಕೋಟೆ-ಕೊತ್ತಲಗಳು ನಿದರ್ಶನ[5] ವಾಗಿವೆ.

ಕೋಟೆಗಳಲ್ಲಿ ಪ್ರಮುಖವಾಗಿ " ನೀರಿನಿಂದ ಆವೃತ್ತವಾದ 'ಜಲದುರ್ಗ', ಬೆಟ್ಟದ ತುದಿಯಲ್ಲಿರುವ 'ಗಿರಿದುರ್ಗ', ಕಾಡಿನ ಮಧ್ಯದಲ್ಲಿರುವ 'ವನದುರ್ಗ'"ಗಳನ್ನು ಕುರಿತು ಹೇಳಿದ ಕೌಟಿಲ್ಯನ ವಿಚಾರ ಎಲ್ಲಾ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಇದಲ್ಲದೆ ಕೋಟೆ, ದುರ್ಗ, ಗಢ ಎಂಬ ಪರ್ಯಾಯ ಪದಗಳು ಭಿನ್ನ ಅರ್ಥ ಕೊಡುತ್ತವೆ ಎಂಬ ವಾದವು ಇದೆ. ಕೆಲವು ಕಾವ್ಯಗಳಲ್ಲಿ 'ದೇವದುರ್ಗ', 'ಸ್ಥಲದುರ್ಗ' ಗಳ ಸ್ವರೂಪ ತಿಳಿಸಿದ್ದು ಕಾಣುತ್ತೇವೆ. ದಾಳಿಯಿಡುವ ಮುನ್ನ ಹೊರ ಸೈನ್ಯದ ರಕ್ಷಣೆಗೆಂದು ರಚಿಸಿಕೊಂಡ ಕೃತ್ರಿಮ ದುರ್ಗಗಳಿಗೆ 'ನಡೆಗೋಟೆ', 'ಪಡಿಗೋಂಟೆ' ಗಳೆಂದು ಕರೆಯಲಾಗಿದೆ. ಕೋಟೆಯ ಗೋಡೆಗಳ ಮೂಲೆಗೆ, ಮಧ್ಯಕ್ಕೆ ಮತ್ತು ಅಲ್ಲಲ್ಲಿ ಗೋಲಾಕಾರ ಮೇಲೆದ್ದಿರುವ ಕಟ್ಟಡಕ್ಕೆ 'ಕೊತ್ತಳ' ಗಳೆಂದು ಹೆಸರಿಸಲಾಗಿದೆ. ಇಂಥ ಕೋಟೆ ಗೋಡೆಯ ಮೇಲೆ ಎತ್ತರಕ್ಕೆ ಕಟ್ಟಿರುವ ವೇದಿಕೆಯಲ್ಲಿ ಸರದಿ ಪ್ರಕಾರವಾಗಿ ಬರುವಿಕೆಯನ್ನು ಕಾಯುವ ಪಹರೆಗಾರ ಇರುತ್ತಿದ್ದ. ಇದಕ್ಕೆ 'ಅಟ್ಟಳೆ' ಎಂದಿರುವ ವಾಸ್ತುಶಾಸ್ತ್ರ ಇದರ ಮೇಲೆ ರಾಜ್ಯದ ರಾಜನ ಲಾಂಛನವಿರುವ ಧ್ವಜವನ್ನು ಸದಾ ಹಾರಾಡುವಂತೆ ನೋಡಿಕೊಳ್ಳುವ ವ್ಯವಸ್ಥೆ ಇತ್ತೆಂದು ತಿಳಿಯುತ್ತದೆ. 'ಅಳುವೇರಿ' ಎಂದರೆ ಎತ್ತರ ಅಷ್ಟೇ ಬಲಿಷ್ಠವಾದಗೋಡೆ. ಇವುಗಳ ಸುತ್ತ ಆಳವಾದ 'ಅಗಳು' (ಕಂದಕ) ತೋಡಿಸಿ ನೀರು ಸಂಗ್ರಹಿಸುತ್ತಿದ್ದರು. ವೈರಿಗಳು ಕೋಟೆಯೊಳಗೆ ನುಗ್ಗಬಾರದೆಂದೆ ಇದರ ಉದ್ದೇಶ.

ಅನೇಕ ಕೊತ್ತಳ ಮತ್ತು ಕೋಟೆ ಗೋಡೆಗಳಿಗೆ ಮಧ್ಯದಲ್ಲಿ ಬಾಣ, ಬಂದೂಕು ಗಳಿಂದ ವೈರಿಯನ್ನು ಸಂಹರಿಸಲು 'ಅಂಬುಗಂಡಿ' ಎಂಬ ಸೀಳು ಕಿಂಡಿಗಳನ್ನು ಬಿಡುತ್ತಿದ್ದರು.

---

4. ಬಾ. ರಾ. ಗೋಪಾಲ – ಕಾವಲುಗೋಡೆ. ಪುಟ-2.
5. ನೀ. ಕೃ. ರಾಮಶೇಷನ್ – ಕರ್ನಾಟಕದ ಕೋಟೆ-ಕೊತ್ತಲಗಳು. ಪುಟ-9 ರಿಂದ 12.

ಕೋಟೆಯ ರಕ್ಷಣೆಯಲ್ಲಿರುವ ಸೈನಿಕರು ತಾವು ಮಾತ್ರ ಸುರಕ್ಷಿತವಾಗಿದ್ದು-ಈ ಕಿಂಡಿಯ ಮೂಲಕ ಶತ್ರುವಿನ ಮೇಲೆ ಅಸ್ತ್ರ ಪ್ರಯೋಗಿಸುತ್ತಿದ್ದರು. ಕೋಟೆಯೊಳಗಿನವರು ತಮ್ಮ ಕುದುರೆಗಳಿಗೆ ನೀರು ಕುಡಿಸಿಕೊಂಡು ಬರಲು 'ಕುದುರೆಗಂಡಿ' ಮತ್ತು ತಮ್ಮ ನೀರಿಗಾಗಿ 'ನೀರಗಂಡಿ' ಯನ್ನು ನಿರ್ಮಿಸಿಕೊಂಡಿದ್ದರು. ಕೆಲವು ಸಲ ವೈರಿಗಳಿಗೆ ವಿಜಯವಾದರೆ ತಕ್ಷಣವೇ ಕೋಟೆಯಿಂದ ತಪ್ಪಿಸಿಕೊಳ್ಳಲು 'ಚೋರಗಂಡಿ' (ಗುಪ್ತದ್ವಾರ) ಇರುತ್ತಿದ್ದವು. ಅದರಂತೆ ಡೆಂಕಣಿ, ಮರಳಗ್ಗಿ, ಶತಘ್ನಿಪೆಟಲು, ಲಾಳಿ, ಪಂದಿದರೆ, ಹಾವಿನಹೇಳಿಗೆ, ತಳೆ-ಮುಳುವೇರಿ, ಸಾರಮಾರಿ-ಮುಂತಾದ ಸಾಧನಗಳು ಕೋಟೆಯಲ್ಲಿರುತ್ತವೆ.

ಶತ್ರುಗಳು ಕೋಟೆಗೆ ಆಕ್ರಮಿಸಿದಾಗ ರಕ್ಷಣೆಯಲ್ಲಿರುವ ಸೈನ್ಯ ಅವರನ್ನು ಹಿಮ್ಮೆಟ್ಟಿಸಲು ಹಲವಾರು ಪ್ರತಿರೋಧಕ ಸಾಧನಗಳನ್ನು ಬಳಸಿಕೊಳ್ಳಲಾಗಿತ್ತು. ಮುಖ್ಯವಾಗಿ ಹಾವು, ಚೇಳು, ಕಾಯಿಸಿದ ಮರಳು, ಕುದಿಸಿದ ಗಂಜಿ, ಅಂಬಲಿ, ಸುಡುವ ಎಣ್ಣೆ, ಬೂದಿ, ಸುಣ್ಣ, ಚಪ್ಪಡಿ ಕಲ್ಲುಗಳನ್ನು ಕೋಟೆಯ ಮೇಲಿನಿಂದ ಸುರಿಯುತ್ತಿದ್ದರು. ಹಗ್ಗದಿಂದ ಮಾಡಿದ ತಾಳ, ಬೀಸುವಲೆ, ಜೋತ್ತಿಗೆ, ಬೀವಣಿಗೆ, ಕವಣೆ, ಗಾಳ, ಮೂರೇಣಿಗಳ ಸಹಾಯದಿಂದ ಶತ್ರುಗಳನ್ನು ಸದೆಬಡಿಯಲು ಬಳಸಿಕೊಳ್ಳುತ್ತಿದ್ದರು. ಅಲ್ಲದೆ ಮರದ ಆಯುಧಗಳಾದ ಬೀಕೆ, ಬಡಿಕೋಲು, ಕೈಗುದಿಗೆ, ಒಳಗುದಿಗೆ, ನೆಲಗುಮ್ಮ, ಮುದ್ಗರ, ಮುಸಲ, ಕವೆಗೋಲು, ಗೂಟ, ಅಡ್ಡವಳೆ, ಬಯೊಂದ್ರೆ, ಸಾದುರ್ಗಂದೊಲೆ, ತೂಗುದೊಲೆ, ನಿಚ್ಚಣಿಕೆ ಉಪಯೋಗಿಸಿಕೊಂಡು ತಮ್ಮ ಸಮರಕ್ಕೆ ಸಬಲತೆ ತಂದುಕೊಂಡ ಬಗ್ಗೆ ತಿಳಿಯುತ್ತದೆ.

ಕಲ್ಲಾಯುಧಗಳಾದ ಮೊನೆಗಲ್ಲು, ಗುಂಡುಗಲ್ಲು, ದಪಗುಂಡು, ಚಮ್ಮಗಲ್ಲು, ಎತ್ತುಗಲ್ಲು, ಏರುಗಲ್ಲು, ಅರೆಗಲ್ಲು, ಕವಣೆಗಲ್ಲುಗಳಿಂದ ವೈರಿಹೃದಯವನ್ನು ಸೀಳುತ್ತಿದ್ದರೆಂದು ಅನೇಕ ಕಾವ್ಯಗಳು ವರ್ಣಿಸಿವೆ. ಇನ್ನಿತರ ಆಯುಧಗಳಾದ ಬಲ್ಲೆ, ಅಂಬು, ಶೂಲ, ಅಸ್ತ್ರಾಯುಧ, ಗರಗಸ, ಕೀಲಾಯುಧ, ಜವದಾಡೆ, ಕತ್ತರಿಕೆ, ಕೊಡಲಿ, ಗದೆ, ಕತ್ತರಿ, ಹಾರೆ, ತಿರುಗಣಿ, ಗಂಡಗತ್ತರಿ, ಗುದ್ದಲಿ ಇತ್ಯಾದಿ ಬಳಕೆಯಲ್ಲಿದ್ದವು.[6] ತರುವಾಯ ವೈಜ್ಞಾನಿಕ ಯುದ್ಧೋಪಕರಣಗಳು ಬಂದಮೇಲೆ ಸಿಡಿಮದ್ದು, ಬಂದೂಕು, ಪಿಸ್ತೂಲು, ತುಪಾಕಿ ಮುಂತಾದವು ಯುದ್ಧಕ್ಕೆ ಸಾಮಗ್ರಿಗಳಾದವು.

---

6. ಬೆಟಗೇರಿ ಕೃಷ್ಣಶರ್ಮ — ಕನ್ನಡಿಗರ ಕೋಟೆಕಾಳಗ (ಕರ್ನಾಟಕ ಜನಜೀವನ), ಪುಟ-59.

ಯುದ್ಧಾರಂಭ ಸೂಚಿಸುವ ಮತ್ತು ವೈರಿಗಳಿಗೆ ಭಯಹುಟ್ಟಿಸುವ ರಣವಾದ್ಯಗಳಾದ ಭೇರಿ, ನಿಸ್ಸಾಳ, ಢಕ್ಕೆ, ಮೃದಂಗ, ಹೆಬ್ಬರೆ, ಕೋಂಬಿವರೆ, ಡಮಾಮಿ, ಜಂಬಕ, ಡಫೆ, ಡೋಳು, ಬುರುಗು ತಂಬಟ, ನಫಿರಿ, ಕಹಳೆ, ಕೊಂಬು, ಬೋಗುಗಹಳೆ, ಹೆಗ್ಗಾಳೆ, ಜಾವಗಹಳೆಗಳಿಂದ ಸಪ್ಪಳ ಮಾಡುತ್ತಿದ್ದರು.

ಇಷ್ಟೆಲ್ಲ ದೀರ್ಘ ವಿವರಣೆ ನೀಡುವ ಅವಶ್ಯಕತೆಗೆ ಕಾರಣವಿಷ್ಟೆ — ಇದುವರೆಗೆ ಹೇಳಿದ ವಿವಿಧ ಬಗೆಯ ಕೋಟೆಗಳೆಲ್ಲ ತಮ್ಮ ಸಂಸ್ಥಾನದಲ್ಲಿ ನಿರ್ಮಿಸಿಕೊಂಡ ಸುರಪುರ ದೊರೆಗಳು ಅತ್ಯಂತ ಮಹತ್ವಪೂರ್ಣ ಜವಾಬ್ದಾರಿ ನಿರ್ವಹಿಸಿದ್ದಾರೆ. ಗಿರಿದುರ್ಗ, ಜಲದುರ್ಗ, ವನದುರ್ಗ, ದೇವದುರ್ಗ, ಸ್ಥಲದುರ್ಗಗಳೆಲ್ಲವೂ ಸಂಸ್ಥಾನದಲ್ಲಿ ಇಂದಿಗೂ ನೋಡಲು ಸಿಗುತ್ತದೆ. ಈ ಸಂಗಮ ಸಂಸ್ಕೃತಿ ಕಟ್ಟಿದ ಸುರಪುರವು "ಕರ್ನಾಟಕದ ಕೋಟೆಗಳ ಇತಿಹಾಸಕ್ಕೆ ಮರೆಯಲಾರದ ಕೊಡುಗೆಯನ್ನು ಕೊಟ್ಟಿದೆಯೆಂದರೆ ಅತಿಶಯೋಕ್ತಿಯ ಮಾತಲ್ಲ; ಅಭಿಮಾನದ ಉಕ್ತಿ"... ಅಲ್ಲದೆ ಸಂಸ್ಥಾನದಾದ್ಯಂತ ಇರುವ ಪ್ರಮುಖ ಊರುಗಳಲ್ಲಿ ಒಂದೊಂದು 'ಕೊತ್ತಳ' ಗಳಿದ್ದು ಅವು ದರೋಡೆಕೋರರ ಮತ್ತು ವೈರಿಗಳ ಸುಳಿವನ್ನು ತಿಳಿದುಕೊಳ್ಳಲು ಸಹಾಯಕವಾಗಿವೆ. ಸಂಸ್ಥಾನದಲ್ಲಿ ಅನೇಕ ಯುದ್ಧಗಳಂತೂ ಜರುಗಿವೆ. ಆದರೆ ಯಾವ ಯುದ್ಧಗಳಲ್ಲಿ ಯಾವ ಯಾವ ಆಯುಧ, ಸಾಧನಗಳು ಬಳಸಿಕೊಂಡಿದ್ದರೆಂಬ ಬಗ್ಗೆ ಕೈಫಿಯತ್ತುಗಳಲ್ಲಿಯ ಕೆಲವು ಕಲ್ಪನೆ ಬಿಟ್ಟರೆ ಸತ್ಯಾಂಶವನ್ನೂ ಸಿಕ್ಕಿಲ್ಲ. ಈ ಎಲ್ಲಾ ದೃಷ್ಟಿಯಿಂದ ನಮ್ಮ ಸಾಂಸ್ಕೃತಿಕ ಸಂಪತ್ತು ಎನಿಸಿರುವ ಸಂಸ್ಥಾನದ ಪ್ರಮುಖ ಕೋಟೆಗಳ ಬಗ್ಗೆ ಪ್ರತ್ಯೇಕವಾಗಿ ತಿಳಿದುಕೊಳ್ಳೋಣ.

ರಾಯನಪಾಳ್ಯ ಕಿಲ್ಲೆ:

ವಿಜಯನಗರ ಅರಸರು ತಮ್ಮ ಆಳ್ವಿಕೆಯಲ್ಲಿ ದೋಆಬ್ ಮತ್ತು ನಗರನಾಡು ಪ್ರಾಂತ್ಯಗಳ ಆಡಳಿತಕ್ಕಾಗಿ ರಾಯನಪಾಳ್ಯ ಕಿಲ್ಲೆಯನ್ನು ಕಟ್ಟಿಕೊಂಡಿದ್ದರು. ಆಗ ಈ ಭಾಗದ ಪಾಳೆಯಗಾರರಾಗಿದ್ದ ಸುರಪುರ ಪೂರ್ವಜರಿಗೆ ಸದರಿ ಕೋಟೆಯ ಜತನ ಒಪ್ಪಿಸಿದ್ದರು. ತಾಳಿಕೋಟೆ ಕದನದಲ್ಲಿ ದಕ್ಷಿಣದ ಸುಲ್ತಾನರೆಲ್ಲ ರಾಮರಾಯನನ್ನು ಸೋಲಿಸುವ ಮೂಲಕ ವಿಜಯನಗರ ಪತನಗೊಳಿಸಿದಾಗಲೂ ಈ ಕೋಟೆ ಬೇಡರನ್ನು ಬಿಟ್ಟು ಬೇರೊಬ್ಬರಿಗೆ ಹೋಗಲಿಲ್ಲ. ಕಾರಣ, ಸುರಪುರದ ಪೂರ್ವಜರು ಸುಲ್ತಾನರಲ್ಲಿ ಆಗಲೇ ತಮ್ಮ "ಸಾಮಂತಿಕೆ" ಸಹಿ ಹಾಕಿದ್ದರು.

ಕೃಷ್ಣಾನದಿಯ ಎಡಭಾಗದಲ್ಲಿ ಕಟ್ಟಲ್ಪಟ್ಟಿರುವ ರಾಯನಪಾಳ್ಯ ಕಿಲ್ಲೆಯು ಸುರಪುರದಿಂದ ದಕ್ಷಿಣಕ್ಕೆ ಒಂಭತ್ತು ಕಿ.ಮೀ. ದೂರವಿರುವ ಕೊಡೆಕಲ ಗ್ರಾಮದ ಹತ್ತಿರವಿದೆ. ಮೊದಲಿನಿಂದಲೂ ಬೇಡನಾಯಕರ ಅಧೀನದಲ್ಲಿದ್ದು ಆಗಾಗ ಜೀರ್ಣೋದ್ಧಾರಗೊಳ್ಳುತ್ತ ಬಂದ ಸದರಿ ಕಿಲ್ಲೆಯು ಸಂಸ್ಥಾನದಲ್ಲಿ ಮಹತ್ವದ ಕೋಟೆಯೆನಿಸಿದೆ. ವಿಜಯನಗರದ ಮೇಲೆ ದಾಳಿ ಮಾಡುವ ದಕ್ಷಿಣದ ಸುಲ್ತಾನರಿಗೆ ಮೊದಲು ತಡೆಯೊಡ್ಡುವ ಕಿಲ್ಲೆಯೆಂದರೆ ಇದೆ. "ಮೊಘಲ ಸರದಾರ ದಿಲೇರಖಾನನು ತನ್ನ ದಕ್ಷಿಣದ ದಂಡಯಾತ್ರೆಯಲ್ಲಿ ಕೊಡೆಕಲ ಮೂಲಕ ನಗರದೆಡೆ ಸಾಗುತ್ತಿರುವಾಗ ರಾಯನಪಾಳ್ಯ ಕಿಲ್ಲೆಯ ಮೇಲೂ ದಾಳಿ ಮಾಡಿದ" ನೆಂದು ಬಸಾತಿನ ಉಲ್ಲೇಖಿಸಿದ್ದಾನೆ.[7]

ತ್ರಿಕೋನಾಕೃತಿಯಲ್ಲಿರುವ ರಾಯನಪಾಳ್ಯ ಕಿಲ್ಲೆಯು ಎರಡು ದ್ವಾರಗಳನ್ನು ಹೊಂದಿದ್ದು, ಪೂರ್ವಕ್ಕಿರುವ ಪ್ರವೇಶ ಮಹಾದ್ವಾರ ಮಾತ್ರ ಇಂದಿಗೂ ಸುಭದ್ರವಾಗಿದೆ. 250 ಮೀ. ಉದ್ದ 150 ಮೀ. ಅಗಲದ ವಿಸ್ತೀರ್ಣದಲ್ಲಿ 25 ಮೀ. ಎತ್ತರದ ಗೋಡೆಗಳಿಂದ ಆವೃತ್ತವಾಗಿದೆ.[8] ಕೋಟೆಯ ಮುಖ್ಯಸ್ಥಳ ಪಶ್ಚಿಮ ಭಾಗಕ್ಕಿದ್ದು ಇಲ್ಲಿಗೆ ಎರಡು ದ್ವಾರಗಳಿಂದಲೂ ಬರಬಹುದಾಗಿದೆ. ಮಹಾದ್ವಾರಗಳಲ್ಲಿ ಒಂದು ಚೌಕಾಕಾರ, ಇನ್ನೊಂದು ಕಮಾನು ಆಕೃತಿಗೆ ಒಳಪಟ್ಟಿದೆ. ಇವೆಲ್ಲವುಗಳಿಂದ ರಾಯನಪಾಳ್ಯ ಕಿಲ್ಲೆಯು ವಿಜಯನಗರ ವಾಸ್ತುಶಿಲ್ಪ ಶೈಲಿಯನ್ನು ಅಪ್ಪಿಕೊಂಡಿದೆ ಎನ್ನಬಹುದು.

<u>ಜಲದುರ್ಗ ಕೋಟೆ :</u>

ಸುರಪುರ ಸಂಸ್ಥಾನದ ಪೂರ್ವಜರ ಹಿಡಿತದಲ್ಲಿದ್ದ ಇನ್ನೊಂದು ಕೋಟೆಯೆಂದರೆ 'ಜಲದುರ್ಗ'. ವಿಜಯನಗರ ಮತ್ತು ಬಹಮನಿಗಳ ಮಧ್ಯದ ಹಲವಾರು ಕದನಗಳಲ್ಲಿ ಜಲದುರ್ಗ ಮುಖ್ಯ ಪಾತ್ರ ವಹಿಸಿತ್ತು. ಕಾರಣ ಇದು ಇವರ ಯುದ್ಧಗಳಿಗೆ ಸದಾ ರಣಾಂಗಣವಾದ ದೋಆಬ್ ಹಾಗೂ ಸಗರನಾಡು ಪ್ರದೇಶವನ್ನು ಸೀಳುವ ಕೃಷ್ಣಾ ನದಿಗೆ ನಡುಗಡ್ಡೆಯಾಗಿದೆ. ಇದರಿಂದ ಇದು

---

7. Bendre, V.S. (Ed) -Vijapurchi Adilshahi (Persian Text - Basatin al-salatin) Bombay, 1968, p-567.

8. Paddayya, K. (Article) -Towards the Archaeology of the Medieval Sherapur Doab, Deccan, (Islamic Culture, quarterly) April-July, 1990. p-89.

ವಿಜಯೀ ಮತ್ತು ಅಪಜಯೀ ಅರಸರಿಬ್ಬರ ಆಳ್ವಿಕೆಯನ್ನು ಕಂಡುಂಡಿದೆ. ಆದುದರಿಂದಲೇ ಆದಿಲಶಾಹಿ ಅರಸರು ಈ ಪ್ರದೇಶದ ಮಹತ್ವ ಅರಿತುಕೊಂಡು ಜಲದುರ್ಗ ಕೋಟೆಯನ್ನು ನಿರ್ಮಿಸಿದರು. ರಾಯನಪಾಳ್ಯಯ ದಕ್ಷಿಣಕ್ಕಿರುವ 'ಜಲದುರ್ಗ' ವು ಪಶ್ಚಿಮದಿಂದ ಹರಿದುಬರುವ ಕೃಷ್ಣೆಯ ತೋಳತೆಕ್ಕೆಯಲ್ಲಿದೆ. ಹರಿಯುವ ಕೃಷ್ಣೆ ಇಲ್ಲಿಯೇ ಇಬ್ಭಾಗಗೊಂಡು ರಭಸವಾಗಿ ಧುಮುಕುವುದರಿಂದ ನಡುಗಡ್ಡೆಯ ಆಚೀಚೆ ಆಳವಾದ ಕಂದಕ ಉಂಟಾಗಿದೆ.

150 ಮೀ.ನಷ್ಟು ಎತ್ತರವಾಗಿರುವ ಕಲ್ಲುಬೆಟ್ಟ, 250 ಮೀ ಉದ್ದ, 150 ಮೀ ಅಗಲದಲ್ಲಿದೆ. ಇದರ ಮಧ್ಯದಲ್ಲಿ ಬಿಜಾಪೂರ ಬಾದಶಹರಿಂದ ತಲೆಎತ್ತಿರುವ ಜಲದುರ್ಗ ಕೋಟೆಯ ರಚನಾ ವಿನ್ಯಾಸ ಮತ್ತು ವಿಶೇಷತೆಯನ್ನು ಡಾ: ಪದ್ಮಯ್ಯ ಅವರು ಈ ಕೆಳಗಿನಂತೆ ಗುರುತಿಸಿದಾರೆ.

" ಪೂರ್ವಾಭಿಮುಖವಾಗಿ ಪ್ರವೇಶದ್ವಾರ ಹೊಂದಿರುವ ಜಲದುರ್ಗ ಕೋಟೆಯು ಅನೇಕ ಕಾವಲು ಗೋಡೆಗಳನ್ನು ಪಡೆದಿದೆ. ದೊಡ್ಡ ಬಂಡೆಗಲ್ಲುಗಳಿಂದ ಬಳಸಿ ನಿರ್ಮಿಸಿದ ಕೋಟೆಯು ಗೋಡೆ ಮತ್ತು ದ್ವಾರ ಸದ್ಯ ಶಿಥಿಲಾವಸ್ಥೆಯಲ್ಲಿವೆ. ಒಳಗಡೆ ಸಂಗಮೇಶ್ವರ ದೇವಾಲಯ, ಭಾವಿ, ಸೈನಿಕರಿಗೆ ಮನೆ, ಅಧಿಕಾರಿಗಳ ನಿವಾಸಗಳಿರುವದನ್ನು ಗುರುತಿಸಲಾಗಿದೆ. ಮುಸ್ಲಿಂ ಸಂಸ್ಕೃತಿಯ ಹಲವು ಅವಶೇಷಗಳೂ ದೊರಕಿವೆ. ಸುರಪುರ ಸಂಸ್ಥಾನದ ರಾಣಿಯರು ಬೇಸಗೆ ಕಾಲಕ್ಕೆ ಇಲ್ಲಿಯೇ ಜಲವಿಹಾರಕ್ಕೆಂದು ಬರುತ್ತಿದ್ದ ಬಗ್ಗೆ ಮೆಡೋಸ್ ಟೇಲರ ಬರೆದಿದ್ದಾನೆ.[9] ಆದುದರಿಂದ ರಾಣಿಯರ ಸ್ನಾನಗೃಹಗಳು ಇದ್ದಿರುವ ಸಾಧ್ಯತೆ ಇದೆ. ಆದರೆ ಇಂದು ಅಂಥವುಗಳ ಮೂಲರೂಪ ಗುರುತಿಸಲು ಅಸಾಧ್ಯವಾಗಿದೆ.

<u>ವಾಗಿನಗೇರಿ ಕೋಟೆ :</u>

ಸುರಪುರ ಕೋಟೆ ನಿರ್ಮಾಣವಾಗುವ ಪೂರ್ವದಲ್ಲಿ ವಾಗಿನಗೇರಿಯಿಂದಲೇ ಸಂಸ್ಥಾನದ ಪೂರ್ವಜರು ಆಡಳಿತ ಮಾಡುತ್ತಿದ್ದರು. ಬಿಜಾಪೂರ ಬಾದಶಹನಿಗೆ ಸಾಮಂತರಾಗಿ, ಆತನಿಗೆ ಸಮಯಕ್ಕೆ ತಕ್ಕಂತೆ ಸೈನ್ಯಸಹಾಯ ಸಲ್ಲಿಸಿ ತನ್ನ ರಾಜ್ಯ ಹಾಗೂ ಅಧಿಕಾರ ವಿಸ್ತರಿಸಿಕೊಂಡ ಗಡ್ಡಿಪಿಡ್ಡನಾಯಕನೇ ಈ ಕೋಟೆಯ ಸಂಸ್ಥಾಪಕ. ಸುರಪುರದಿಂದ ಪಶ್ಚಿಮಕ್ಕೆ 7 ಕಿ.ಮೀ. ದೂರದಲ್ಲಿರುವ ವಾಗಿನಗೇರಿ ಕೋಟೆಗೆ ಸುತ್ತುವರೆದ ಬೆಟ್ಟ-ಗುಡ್ಡಗಳ ಸಾಲು ಬಲವಾದ ಕಾವಲು

---

9. ಗಿರಿರಾಜ ಹೊಸಮನಿ – ಲಿಂಗಸೂಗೂರು ತಾಲೂಕು ದರ್ಶನ. ಪುಟ-30.

ಹಾಕಿವೆ. ಅಲ್ಲದೆ ಈ ಪ್ರಾಕೃತಿಕ ಕೋಡುಗೆ ಸದಾ ಸೌಖ್ಯದ ರಕ್ಷೆ ಒದಗಿಸಿದೆ. ಆದರೆ ಕ್ರಿ.ಶ. 1705ರಲ್ಲಿ ನಡೆದ ಔರಂಗಜೇಬನ ದಾಳಿಗೆ ತತ್ತರಿಸಿ ಹೋದ ವಾಗಿನಗೇರಿ ಕೋಟೆ ತನ್ನ ವೈಭವವೆಲ್ಲ ಕಳೆದುಕೊಂಡಿತು. ಸ್ವತಃ ಸೈನ್ಯದ ನೇತೃತ್ವ ವಹಿಸಿ ಯುದ್ಧ ಮಾಡಿದ ಔರಂಗಜೇಬ ಕೋಟೆಯನ್ನು ಗೆದ್ದುಕೊಂಡು, ಮೂಲ ಅವಶೇಷಗಳನ್ನೆಲ್ಲ ಧ್ವಂಸಗೊಳಿಸಿದ. ನಾಶಪಡಿಸಿದ ಸ್ಥಳದಲ್ಲೇ ಮಸೀದೆ ಯಂಥ ಮುಸ್ಲಿಂ ಸಂಸ್ಕೃತಿ ತಲೆ ಎತ್ತಿದವು. ಇದೇ ಕೋಟೆಗೆ ಮೂಲ ಹೆಸರನ್ನೇ ಬದಲಾಯಿಸುವದ ರೊಂದಿಗೆ 'ರಹಮಾನಬಕ್ಷ' ಎಂಬ ಹೊಸ ಹೆಸರನ್ನು ಕೊಟ್ಟ. ಇದರ ಬಗ್ಗೆ ವಿವರ ನೀಡುವ ಪಶ್ಚಿಮ ಮಹಾದ್ವಾರದ ಮೇಲಿನ ಪರ್ಶಿಯನ್ ಶಾಸನವೊಂದು ನಮಗಿಂದು ಅಧಿಕೃತ ದಾಖಲೆಯಾಗಿದೆ. ಆದರಲ್ಲಿ-[10]

" ಬಹುಕುಂ ಶಾಹಿನದೀನ್ ಪನಾಹ ಮಹ್ಮದ್ ಮುಮುದ್ದೀನ್
ಔರಂಗಜೇಬ್ ಬಾದಷಹ ಆಲಂಗೀರ್, ಘಾಜಿ ಖಲ್ಲಿಫೆಲ್ಲಾ
ಮಲ್ಲಿಹುಲ್ಲಾ ಬಾ, ಹೇತಮಾವರ್ ಆಬೇತ್ ಮಹ್ಮದ್
ಆಫಿಜ್ ಮಸೂದ ಮುರ್ಶ್ವೀ ಗುರ್ರಾಹಾಲ್ಲಾ ರಜ್ಜಬೂತ ತರ್ರುಜಬ
ನನ್ ಜಹರ್ಲೀನ್ ಜುಲೂಸ್ ವ ಅಲ್ಲಾ ಮುತಾಬಿಬ್ ಏಕ್
ಹಜಾರ್ ವ ಏಕಸದ್ ಹಫ್ತದಹ ಹಿಜರಿ ತಾಮೀರಿ ಮಾಫ್ತ"

ಎಂದಿದೆ. " ಧರ್ಮಚಕ್ರವರ್ತಿಯಾದ ಮಹ್ಮದ್ ಮಹಿಯೋದ್ದೀನ್ ಅವರಂಗ ಜೇಬ ಬಾದಷಹ ಆಲಂಗೀರನು, ಮಹ್ಮದ್ ಅಫೀಜ್ ಮಸೂದನ ಮೂಲಕ ರಜ್ಜಬ ತಿಂಗಳಲ್ಲಿಯ 49ನೆಯ ಜನ್ಮದಂದು ನದರಿ ಮಹಾದ್ವಾರವನ್ನು ನಿರ್ಮಿಸಲಾಯಿತೆಂದು" ಮೇಲಿನ ಶಾಸನಾರ್ಥ.

ನೆಲದಿಂದ 75 ಮೀ. ಎತ್ತರದಲ್ಲಿರುವ ವಾಗಿನಗೇರಿ ಕೋಟೆಯು 350 ಮೀ ಉದ್ದ, 150 ಮೀ ಅಗಲವಿದೆ. ಮುಖ್ಯದ್ವಾರಕ್ಕೆ 'ರಾಮದರವಾಜ' ವೆಂದೆನ್ನುರು. ಪಶ್ಚಿಮದಲ್ಲಿಯೂ ಮಹಾದ್ವಾರವೊಂದಿದ್ದು ಅದು ನೇವಮುಚ್ಚದಲ್ಲಿದೆ. ಇದು ತನ್ನ ದಾರಿಯನ್ನು ಪಡುಕೋಟೆಗೆ ಕರೆದೊಯ್ಯುತ್ತದೆ. ಕೋಟೆಗೆ ಒಟ್ಟು ಏಳು ದ್ವಾರಗಳಿದ್ದು ಅವೆಲ್ಲ ಒಳಾಂಗಣಕ್ಕೆ ತಂದು ನಿಲ್ಲಿಸುತ್ತವೆ. ವಿಶಾಲವಾದ ಸೋಪಾನಗಳನ್ನು ಹತ್ತಿಕೊಂಡು ಹೋದರೆ ಪೂರ್ವಭಾಗಕ್ಕೆ ಕೋಟೆಯ ಹೆಬ್ಬಾಗಿಲು ಕಾಣಿಸುತ್ತದೆ. ಇದು 11 ಅಡಿ ಎತ್ತರ, 9 ಅಡಿ ಅಗಲವಿದೆ. ಅಲ್ಲಲ್ಲಿ ಬುರುಜುಗಳಿದ್ದು ಕೋಟೆಗೆ ದೃಢತೆ ಮತ್ತು ಸೌಂದರ್ಯವನ್ನು ಕೊಟ್ಟಿವೆ. ಕೋಟೆಯ ಉತ್ತರಕ್ಕೆ ಸೈನಿಕರ, ಸೈನ್ಯಾಧಿಕಾರಿಗಳ ಗೃಹಗಳಿದ್ದು ಅವೆಲ್ಲ ಸಂಪೂರ್ಣ ಇಂದು ನಾಶಗೊಂಡಿವೆ. ಎತ್ತರದ ಚಿಟ್ಟ

10. ಬಿ. ಕೃಷ್ಣಮಾಚಾರ್ಯ ಅವರ ಸಂಗ್ರಹದಿಂದ ಪಡೆಯಲಾಗಿದೆ.

ಇದಾಗಿರುವದರಿಂದ ಮೇಲೆ ಕಂದಕ ವ್ಯವಸ್ಥೆ ಮಾಡಿಲ್ಲ. ಆದರೆ ಬೆಟ್ಟದ ಕೆಳಗಡೆಯ ದಕ್ಷಿಣ ಭಾಗದಲ್ಲಿ ಸುತ್ತಲೂ ಕಂದಕ ಮತ್ತು ಕೆರೆಯನ್ನು ತೋಡಿಸಲಾಗಿದೆ. ಕೋಟೆಯೊಳಗಿನ ಜನತೆಗಾಗಿ ಅಲ್ಲಿಯೇ ಬಾವಿಯೊಂದಿದೆ. ಹೀಗೆ ಇಡೀ ಕೋಟೆಯು ಒಳಆವರಣ ಹದಿನೇಳು ಎಕರೆ, ಹದಿಮೂರು ಗುಂಟೆ ವಿಸ್ತೀರ್ಣ[11] ಹೊಂದಿದೆ.

<u>ಶಹಪುರ ಕೋಟೆ :</u>

ಸಗರನಾಡಿನ ಈ ಕೇಂದ್ರ ಕೋಟೆಗೆ ಸಗರದುರ್ಗ, ಸಗರಗಡ್ಡ, ಸಗರಗಢ ಎಂಬಿತ್ಯಾದಿ ಹೆಸರು. ಸದರಿ ಕೋಟೆಯ ಮೂಲ ಸಂಸ್ಥಾಪಕರು ಯಾರು ಎಂಬುದರ ಬಗ್ಗೆ ನಿಖರವಾದ ದಾಖಲೆಗಳಿನ್ನೂ ದೊರೆತಿಲ್ಲ. ಆದರೆ " ಇದು ದೇವಗಿರಿ ಯಾದವರ ರಾಜ್ಯದಲ್ಲಿತ್ತೆಂದು " ಅಲ್ಲಾವುದ್ದೀನ ಖಿಲ್ಜಿಯ ಕಾಲಕ್ಕೆ ಮುಸಲ್ಮಾನ ದಳವಾಯಿ ಬರೆಯಿಸಿದ ಕ್ರಿ.ಶ.1300 ರಲ್ಲಿಯ ಪರ್ಶಿಯನ ಶಾಸನಗಳು ದೃಢೀಕರಿಸುತ್ತವೆ. ಮುಸಲ್ಮಾನ ದೊರೆಗಳ ಕಾಲಕ್ಕೆ ಅಭಿವೃದ್ಧಿ ಪಡೆದ ಈ ಕೋಟೆಗೆ 'ನುಸ್ರತಾಬಾದ' ಎಂದು ಪುನರ್ನಾಮಕರಣ ಮಾಡಿದರೆಂಬ ಬಗ್ಗೆ ಮಹ್ಮದಬಿನ್ ತುಘಲಕನ ಗೋಗಿ ಶಾಸನ ಆಧಾರ ಒದಗಿಸಿದೆ. ಕ್ರಿ.ಶ.1347ರಲ್ಲಿ ಬಹಮನಿ ಸುಲ್ತಾನರ ರಾಜ್ಯ ಕಲಬುರ್ಗಿಯಲ್ಲಿ ಸ್ಥಾಪನೆಯಾದಾಗ ಶಹಪುರ ಕೋಟೆ ಅವರ ವಶದಲ್ಲಿತ್ತು. ತರುವಾಯ ಬಿಜಾಪೂರ ಆದಿಲಶಾಹಿಗಳ ಅಧಿಪತ್ಯಕ್ಕೆ ಸೇರಿತು. ಕ್ರಿ.ಶ.1523ರಲ್ಲಿ ಕೃಷ್ಣದೇವರಾಯನು ಆದಿಲಶಾಹಿಗಳ ಮೇಲೆ ಏರಿ ಹೋಗಿ ಈ ಸಗರಕಿಲ್ಲೆ ಕೈವಶ ಮಾಡಿಕೊಂಡನೆಂದು ಹಲವು ಕಾವ್ಯಗಳು ವರ್ಣಿಸುತ್ತವೆ. ಇದೇ ಸಮಯಕ್ಕೆ ಉತ್ತರದಲ್ಲಿ ಪ್ರವರ್ಧಮಾನಕ್ಕೆ ಬಂದಿದ್ದ ಮೊಘಲ ಬಾದಶಹ ಔರಂಗಜೇಬನು ದಕ್ಷಿಣದತ್ತ ದಂಡಯಾತ್ರೆ ಹೊರಟು ವಿಜಾಪೂರ ರಾಜ್ಯವನ್ನು ಧೂಳೀಪಟ ಮಾಡಿದನು. ಆಗ ವಿಜಾಪೂರ ರಾಜ್ಯದ ಸಾಮಂತರೆಲ್ಲ ಸ್ವಾತಂತ್ರ್ಯ ಸಾರಿಕೊಂಡರು. ಇದೇ ಸಂದರ್ಭ ಉಪಯೋಗಿಸಿಕೊಂಡ ಸುರಪುರದರಸರು ಶಹಪುರ ಕೋಟೆಯನ್ನು ವಶಪಡಿಸಿಕೊಂಡರು. ಸಂಸ್ಥಾನದಿಂದ ನಡೆದ ಈ ಕ್ಷಿಪ್ರ ಕಾರ್ಯಾಚರಣೆ ಔರಂಗಜೇಬನನ್ನು ಕೆರಳಿಸಿತು. ಕೂಡಲೇ ತನ್ನ ಸರದಾರನಾದ ದಿಲೇರಖಾನನನ್ನು ಕೋಟೆ ಕಸಿಯಲು ಕಳಿಸಿದನು. ಬಂದ ದಿಲೇರಖಾನನಿಗೆ ಸುರಪುರದ ಪಾಮನಾಯಕ ಪ್ರತಿಭಟಿಸಿ ಹೋರಾಡಿದುದು ಇದೇ

---

11. ಸು.ತಾ.ದ. ಪುಟ-32.

ಕೋಟೆಯಲ್ಲಿ. ತರುವಾಯ ಹೈದ್ರಾಬಾದ ನಿಜಾಮನ ಧ್ವಜದಡಿ ಸೇರಿಹೋಯಿತು. ಹೀಗೆ ದೇವಗಿರಿ ಯಾದವರಿಂದ ಹೈದ್ರಾಬಾದ ನಿಜಾಮನವರೆಗೆ ಇತಿಹಾಸ ಪಡೆದ ಶಹಪುರಕೋಟೆ ಹಲವಾರು ಅರಸು ಮನೆತನಗಳ ಏಳು-ಬೀಳುಗಳಲ್ಲಿ ತನ್ನ ವೈಶಿಷ್ಟ್ಯತೆಯನ್ನು ಉಳಿಸಿಕೊಂಡು ಬಂದಿದೆ.

ನೆಲಮಟ್ಟದಿಂದ 150 ಮೀ. ಎತ್ತರದಲ್ಲಿರುವ ಈ ಕೋಟೆಯನ್ನು ಸರಪಳಿಯೋಪಾದಿಯಲ್ಲಿ ಹಬ್ಬಿರುವ ಬೆಟ್ಟದ ಮೇಲೆ ಕಟ್ಟಲಾಗಿದೆ. ಆದಿಲ್‌ಶಾಹಿ ಅರಸರ ಆಳ್ವಿಕೆಯಲ್ಲಿ ಉಚ್ಛ್ರಾಯ ಸ್ಥಿತಿ ಕಂಡು ಸಂಸ್ಥಾನದ ಪತನಕ್ಕೆ ಹಲವು ವರ್ಷ ಒಳಪಟ್ಟ ಶಹಪುರ ಕೋಟೆಯು ಏಳು ಪರ್ಶಿಯನ್ ಶಾಸನಗಳನ್ನು ಹೊತ್ತುಕೊಂಡು ನಿಂತಿದೆ. ಇವುಗಳ ಅಧ್ಯಯನ ನಡೆಸಿದ ಡಾ: ಯಾಜದಾನಿಯವರು ಈ ಮುಂದಿನ ವಿವರಣೆ ನೀಡಿದ್ದಾರೆ.[12]

" ದಕ್ಷಿಣಕ್ಕಿರುವ ಪ್ರವೇಶದ್ವಾರವು ಎಂಟು ಸಾಲುಗೋಡೆಗಳಿಂದ ಕಟ್ಟಲ್ಪಟ್ಟಿದ್ದು, ಬೆಟ್ಟದ ತಪ್ಪಲಿನಿಂದ ಹಿಡಿದು ಶೃಂಗದವರೆಗೂ ಹಬ್ಬಿ, ಅಲ್ಲಿಯೇ ತನ್ನ ಶೃಂಗವನ್ನು ಕಂಡುಕೊಂಡಿದೆ. ಮೊದಲೆರಡು ಸಾಲಿನಲ್ಲಿ ಕೆಲವು ಮುಸ್ಲಿಂ ಸ್ಮಾರಕಗಳಿದ್ದು, ಅವು ಸಂಪೂರ್ಣ ನಾಶವಾಗಿವೆ. ಉಳಿದ ಆರು ಸಾಲಿನ ಕೋಟೆಯ ಸಂಕೀರ್ಣ ಇಂದಿಗೂ ಸಂರಕ್ಷಿಸಲ್ಪಟ್ಟಿದೆ. ಮಹಾದ್ವಾರದ ಮೇಲಿನ ಶಾಸನಗಳು ಇದರ ಬಗ್ಗೆ ಸವಿಸ್ತಾರ ಮಾಹಿತಿ ನೀಡುತ್ತವೆ. ಕೋಟೆಯ ಮೂರನೆಯ ಸಾಲು ಏಳು ಅಡಿ ಅಗಲ, ಹದಿನಾಲ್ಕು ಅಡಿ ಉದ್ದವಿದ್ದು ಬೃಹತ್ ಆಕಾರದ ಕೊತ್ತಳಗಳಿಂದ ಆವೃತ್ತಗೊಂಡಿದೆ. ಇದನ್ನು ಆದಿಲ ಷಾಹನು ತನ್ನ ಅಂತಿಮ ದಿನಗಳಲ್ಲಿ ಕಟ್ಟಿಸಿದನೆಂದು ತಿಳಿದುಬರುತ್ತದೆ. ನಾಲ್ಕನೆಯ ಸಾಲಿನ ಗೋಡೆಯು ಪೂರ್ವಾಭಿಮುಖ ದ್ವಾರ ಹೊಂದಿದ್ದು, ಅದು 12 ಅಡಿ ಅಗಲ, 14 ಅಡಿ ಎತ್ತರದಲ್ಲಿ ಕಮಾನು ಆಕೃತಿಗೆ ಒಳಪಟ್ಟಿದೆ. ಐದನೆಯ ಸಾಲಿನ ಗೋಡೆಯು ಕಂಬಗಳಿಂದಾವೃತವಾಗಿದೆ. ಮೇಲೆ ಮೂರು ಗುಮ್ಮಟಗಳಿದ್ದು, ಆದಿಲಶಾಹನ ಶಾಸನವಿರುವ ದ್ವಾರಗಳಿಗಿಂತಲೂ ಇದು ಅತ್ಯಂತ ಆಕರ್ಷಕವಾಗಿದೆ. ಇದರ ಉತ್ತರಕ್ಕಿರುವ ಕೊತ್ತಳದ ಮೇಲೆ ಸುಮಾರು 15 ಅಡಿ ಉದ್ದ, ಮೂರು ಅಡಿ ವ್ಯಾಸವುಳ್ಳ ಒಂದು ತೋಪು ಇದ್ದು, ಇದರ ಬಾಯಿ ನಾಲ್ಕು ಅಡಿ ವ್ಯಾಸವುಳ್ಳದ್ದಾಗಿದೆ. ಆರು ಹಾಗೂ ಏಳನೆಯ ಸಾಲುಗಳು ಉತ್ತರಾಭಿಮುಖವಾಗಿದೆ. ಎಂಟನೆಯ ಸಾಲು ನಾಲ್ಕನೆಯದರಷ್ಟೇ ಪೂರ್ವಾಭಿಮುಖಕ್ಕೆ ದೊಡ್ಡದಾಗಿದೆ. ಇಲ್ಲಿಯೂ ಸಹ ಉತ್ತರದಿಂದ ದಕ್ಷಿಣಕ್ಕೆ ಜೋಡಿಸಿದರೆ ಮೂರು ಗುಮ್ಮಟಗಳನ್ನಿರಿಸಿದ್ದು ಕಂಡುಬರುತ್ತದೆ. ಇವೆಲ್ಲ ಬಹಮನಿ ವಾಸ್ತುಶೈಲಿಯಲ್ಲಿವೆ"

12. **Yazadani G.(Article) -Inscription of Shahapur....(Epigraphia Indo-Muslmica),1931-32, Pp.1-24.**

ಬೆಟ್ಟದ ಶಿಖರ ಪ್ರದೇಶವು ಅತ್ಯಂತ ವಿಶಾಲವಾಗಿದ್ದು ಅಂದಾಜು 500 ಮೀ 150ಮೀ ವಿಸ್ತೀರ್ಣವನ್ನು ಹೊಂದಿದೆ. ಗುಲಬರ್ಗಾ ಜಿಲ್ಲೆಯಲ್ಲಿಯ ಅತ್ಯಂತ ಉದ್ದವಾದ ಕೋಟೆಯೆಂದರೆ ಶಹಪುರಕೋಟೆ.[13] ಅನೇಕ ಕೊತ್ತಳ, ಮನೆ, ಸಭಾಂಗಣ, ಬಾವಿಗಳನ್ನು ಪಡೆದಿರುವ ಪ್ರಸ್ತುತ ಕೋಟೆಯನ್ನು ಸುರಪುರ ಅರಸರು ಅನೇಕ ಬಾರಿ ಜೀರ್ಣೋದ್ಧಾರಗೊಳಿಸಿದ್ದಾರೆ. ಆದುದರಿಂದಲೆ ಇಲ್ಲಿ ಹಿಂದು ಮುಸ್ಲಿಂ ಸಂಗಮ ಸಂಸ್ಕೃತಿ ಕಾಣುತ್ತೇವೆ. ಸುರಪುರದ ಕೋಟೆ ನಿರ್ಮಾಣಗೊಂಡು ಅಲ್ಲಿಂದಲೇ ಆಳಿತ ನಡೆದ ಪ್ರಯುಕ್ತ ಸಹಜವಾಗಿ ಶಹಪುರ ಕೋಟೆಯ ಪ್ರಾಮುಖ್ಯತೆ ಕಡಿಮೆಯಾಯಿತು.[14] ಎಂಬ ಮಾತು ಮುಖ್ಯವಾದುದು.

<u>ಸುರಪುರ ಕೋಟೆ :</u>

ಔರಂಗಜೇಬನ ಆಕ್ರಮಣಕ್ಕೆ ತುತ್ತಾದ ವಾಗಿನಗೇರಿ ಕಿಲ್ಲೆಯನ್ನು ಬಿಟ್ಟು ಪ್ರಾಕೃತಿಕ ಮಡಿಲಲ್ಲಿ ಮೈಚೆಲ್ಲಿ ಮೇಲೆದ್ದಿರುವ ಬೆಟ್ಟಗಳನ್ನು ಶೋಧಿಸಲಾಯಿತು. ಸರ್ವದೃಷ್ಟಿಯಿಂದ ರಕ್ಷಣಾತ್ಮಕವೆನಿಸಿದ ಈ ಸ್ಥಳವೇ ಸುರಪುರ ಕೋಟೆಯ ನಿರ್ಮಾಣಕ್ಕೆ ಕಾರಣವಾಯಿತು. ಪೀತಾಂಬರ ಬಹರಿ ಪಿಡ್ಡನಾಯಕನ ಆಳ್ವಿಕೆಯಲ್ಲಿ ತಲೆಯೆತ್ತಿದ ಸುರಪುರಕೋಟೆಯು ರಾಜಧಾನಿಯ ಸ್ಥಾನ-ಮಾನ ಪಡೆದುಕೊಂಡಿತು. ಅಭೇದ್ಯವೆನಿಸುವ ಈ ಕೋಟೆಯನ್ನು 150ಮೀ ನೆಲದಿಂದ ಎತ್ತರವಿರುವ ಬೆಟ್ಟಗಳು ಹೊತ್ತು ನಿಂತಿವೆ. ಹೊರವಲಯದ ಕಾವಲುಗೋಡೆಗಳು ವೈರಿಯ ಆಕ್ರಮಣವನ್ನು ತಡೆಯುವಲ್ಲಿ ಮುಖ್ಯಪಾತ್ರ ವಹಿಸುತ್ತವೆ. ನಾಲ್ಕು ದಿಕ್ಕಿಗೂ ಭವ್ಯವಾದ ದ್ವಾರಗಳಿದ್ದು, ಅವು ಮುಸ್ಲಿಂ ಶೈಲಿಯ ವಕ್ರಾಕಾರ ಮತ್ತು ಕಮಾನು ಆಕೃತಿಯಲ್ಲಿ ಕಟ್ಟಲಾಗಿದೆ. ಇದರಿಂದ ವೈರಿಗಳ ಪ್ರವೇಶಕ್ಕೆ ದಿಕ್ಕು ತಪ್ಪಿಸುವದೇ ಇದರ ಉದ್ದೇಶ. ವೆಂಕಟಾಪುರ, ಕುಂಬಾರಪೇಟೆ, ಮಲ್ಲಿಭಾವಿ, ಸಿದ್ದಾಪೂರ, ಹಸನಾಪೂರ ಮುಂತಾದ ಅಗಸಿಗಳು ಇಂದಿಗೂ ಸುಭದ್ರಸ್ಥಿತಿಯಲ್ಲಿವೆ. ಇವುಗಳ ಮೂಲಕ ಹೊರಬಿದ್ದ ದಾರಿ ಸಂಸ್ಥಾನದ ಇನ್ನಿತರ ಕೋಟೆಗಳಿಗೆ ಕರೆದೊಯ್ಯುತ್ತದೆ. ಈ ನಾಲ್ಕು ಅಗಸಿಗಳಲ್ಲಿ ಕುಂಬಾರಪೇಟೆಯದು ಬಹು ವಿಶಿಷ್ಟ ರೀತಿಯಿಂದ ಕಟ್ಟಲಾಗಿದೆ. ಪ್ರತಿಯೊಂದು ದ್ವಾರಗಳ ಅಕ್ಕಪಕ್ಕದಲ್ಲಿ ಕಾವಲುಪಡೆಯ ವಸತಿಗೃಹಗಳಿವೆ. ಇವುಗಳ ಜೊತೆ ಸೈನ್ಯ ನಿಲ್ಲುವ

---

13. ಶಿವಶರಣ ಅರುಣಿ – ಲೇಖನ: ಅಳಿವಿನ ಅಂಚಿನಲ್ಲಿ ಸಗರದುರ್ಗ, ಸಂಯುಕ್ತ ಕರ್ನಾಟಕ. ದಿನಾಂಕ: 4-7-1993.
14. ಶಿವಶರಣ ಅರುಣಿ – ಲೇಖನ: ಸಗರಾಗ್ರ ಅಗ್ನಿಅಂಕುರ, ಮಾಸಿಕ ಮೇ-20, 1993.

ಬುರುಜುಗಳ ಬೃಹತ್ ಆಕಾರದಲ್ಲವೆ.

ಕೋಟೆ ಒಳಗಡೆ ಎರಡು ಅರಮನೆಗಳಿದ್ದು ಮುಖ್ಯಮಹಾದ್ವಾರಗಳ ಮೂಲಕ ಪ್ರವೇಶಿಸಿದರೆ ಹಳೆಯ 'ದರ್ಬಾರ' ಎದುರುಗೊಳ್ಳುತ್ತದೆ. ಹೊಸ ದರ್ಬಾರವು ಟೀಪುರನ ಕಾಲಕ್ಕೆ ನಿರ್ಮಿಸಲಾಯಿತು. ಇಲ್ಲಿ ಹಲವಾರು ಮರದ ಕಂಬಗಳಿದ್ದು, ಅವು ಅತ್ಯಂತ ನಾಜೂಕಿನ ಕುಸುರಿಕಲೆಗಳನ್ನು ಹೊಂದಿವೆ. ಮೊದಲು ಹಳೆಯ ಅರಮನೆಯಲ್ಲಿಯೇ ಎಲ್ಲಾ ರಾಜಕೀಯ ಪ್ರಕ್ರಿಯೆ ನಡೆಯುತ್ತಿದ್ದವು. ಹೊಸ ದರ್ಬಾರವಾದ ತರುವಾಯ ಅಂತ:ಪುರ, ರಾಜಪರಿವಾರದ ಗೃಹ, ಸಭಾಂಗಣ, ಅತಿಥಿಗೃಹಗಳೆಲ್ಲ ಅದರಲ್ಲಿಯೇ ರಚಿಸಲಾಯಿತು. ವರ್ಣರಂಜಿತ ಭಿತ್ತಿಚಿತ್ರಗಳಿಂದ ಆಕರ್ಷಕವಾಗಿರುವ ಅರಮನೆಯ ಒಳಗೋಡೆಗಳು ವಿಶಿಷ್ಟ ಕಲೆಗಳನ್ನು ಹೊಂದಿವೆ. ಇದರಿಂದ ಅರಮನೆಯ ಸೌಂದರ್ಯ ಇಮ್ಮಡಿಸಿದಂತಾಗಿದೆ.

ಟೀಪುರ ತನಗಾಗಿ ನಿರ್ಮಿಸಿಕೊಂಡ ವಸತಿಗೃಹವು ಬೆಟ್ಟದ ಮೇಲ್ಭಾಗ ಮತ್ತು ನಗರದ ಮಧ್ಯದಲ್ಲಿದ್ದು ಅದು ವೈಜ್ಞಾನಿಕ ಉಪಕರಣಗಳಿಂದ ನಿರ್ಮಿತವಾಗಿದೆ. ಪೂರ್ವದ ಮುಖ್ಯ ದ್ವಾರವೊಂದು ತೆರೆದರೆ ಸಾಕು ಕ್ಷಣವೇ ಉಳಿದ ಹದಿನೆಂಟು ಬಾಗಿಲುಗಳು ತಮ್ಮಷ್ಟಕ್ಕೆ ತಾವೆ ತೆರೆದುಕೊಳ್ಳುವ ವಿಸ್ಮಯಕಾರಿ ಇಂದಿಗೂ ಕಾಣಬಹುದಾಗಿದೆ. ಇಂಥ ಬಳಕೆ ಬಹುಶ: ಯಾವ ಕಟ್ಟಡಗಳಲ್ಲಿಯೂ ಕಾಣೆವು. ಒಳಗಡೆ ಕೆಲವು ಕೋಣೆಗಳು ಬ್ರಿಟೀಷ ವಾಸ್ತುಶಿಲ್ಪವನ್ನು ಹೊಂದಿವೆ.

<u>ವನದುರ್ಗ ಕೋಟೆ :</u>

ನಂಜಾಭಿನಕ್ಕೆ ಉತ್ತರದಿಂದ ಬರುವ ವೈರಿಯ ಆಕ್ರಮಣವನ್ನು ತಡೆಯುವಲ್ಲಿ[15] ಮುಖ್ಯ ಪಾತ್ರ ವಹಿಸುವ ವನದುರ್ಗ ಕೋಟೆಯು ಹಲವಾರು ದೃಷ್ಟಿಯಿಂದ ವೈಶಿಷ್ಟ್ಯಪೂರ್ಣವಾಗಿದೆ. ದಟ್ಟ ಕಾಡಿನ ತಗ್ಗು ಪ್ರದೇಶದ ಮಧ್ಯ ತಲೆ ಎತ್ತಿರುವ ಏಕೈಕ ಕೋಟೆಯೆಂದರೆ ಇದೊಂದೆ. 20 ಎಕರೆಗಿಂತ ಹೆಚ್ಚು ವಿಸ್ತೀರ್ಣ ಹೊಂದಿರುವ ಸದರಿ ಕೋಟೆಯ ರಚನಾ ವಿನ್ಯಾಸವೂ ಸಹ ಬಹು ಕುತೂಹಲಕಾರಿಯಾಗಿದೆ. ಪೂರ್ವಾಭಿಮುಖವಾಗಿ ಮೂರು ಮಹಾದ್ವಾರಗಳಿದ್ದು ಮಧ್ಯ ಎದಿರುವ ಕೊತ್ತಳಗಳು ಪ್ರವೇಶ ದ್ವಾರವನ್ನು ತಿರುವುಗೊಳಿಸಿವೆ. ವೈರಿಗಳ ಪ್ರವೇಶ ಹಾಗೂ ಆಕ್ರಮಣಕ್ಕೆ

15. ಡಿ.ಎನ್.ಅಕ್ಕಿ — ಲೇಖನ: ವನದುರ್ಗ ಕೋಟೆ. ಪ್ರಜಾವಾಣಿ. ದಿನಾಂಕ:8.1.1994.

ತಡೆಯೊಡ್ಡಿ, ಅದರ ದಾಳಿಗೆ ಅತಿಬೇಗ ಹಾದಿ ಸಿಗದಂತೆ ಮಾಡುವದೆ ಇದರ ಮುಖ್ಯತೆ.

ಕೋಟೆಯು ಪೂರ್ವದಿಂದ ಪಶ್ಚಿಮಕ್ಕೆ 250 ಮೀ. ಮತ್ತು ದಕ್ಷಿಣೋತ್ತರಕ್ಕೆ 200 ಮೀ. ವಿಸ್ತೀರ್ಣ ಹೊಂದಿದೆ. ಪೂರ್ವದಿಂದ ಕೋಟೆಯ ಮಧ್ಯ ಮೈದಾನಕ್ಕೆ ಮೂರು ಮುಖ್ಯ ದ್ವಾರಗಳನ್ನು ದಾಟಿ ಬರುವಾಗ ಅನೇಕ ತಿರುವು, ಕಂಬಗಳಿಂದ ಕಟ್ಟಲಾಗಿದೆ. ಕೋಟೆಯ ಮಧ್ಯೆ ಮಹಾದ್ವಾರ ಮಾತ್ರ ಬಹು ಮಹತ್ವದ್ದು. ಇದರ ಮೇಲ್ಭಾಗದಲ್ಲಿ ಪೀತಾಂಬರ ಬಹರಿ ಪಿಡ್ಡನಾಯಕನ ಶಾಸನವಿದ್ದು, ಅದು ಕೋಟೆಯ ಸ್ಥಾಪನೆ, ಉದ್ದೇಶ, ಕಾಲವನ್ನು ಕುರಿತು ಹೇಳುವ ಮುಖ್ಯ ದಾಖಲೆಯಾಗಿದೆ. ದ್ವಾರದ ಎರಡು ತುದಿಗೂ ಐದೈದು ಸಾಲು ಬರೆಯಲಾದ ಪ್ರಸ್ತುತ ಶಾಸನ ದೇವನಾಗರಿ ಲಿಪಿಯಲ್ಲಿ ಸಂಸ್ಕೃತ ಭಾಷೆಗೆ ಸೇರಿದಾಗಿದೆ. ಮಧ್ಯದಲ್ಲಿ ಶಂಖ, ಚಕ್ರ, ಹಾಗೂ ವೆಂಕಟರಮಣದೇವರ ನಾಮದ ಉಬ್ಬು ಚಿತ್ರಗಳನ್ನು ಕೆತ್ತಲಾಗಿದೆ. ಶಾಸನದಲ್ಲಿ ನಿರೂಪಿಸಲಾದ ಮುಖ್ಯಪಠ್ಯವೆಂದರೆ-[16]

ಬಲತುದಿ — ಶ್ರೀ ವೇಣುಗೋಪಾಲ ವರ
ಕನ ರಾಜ ಪಿಡ್ಡನಾಯಕ ಬಹ

ರಿ ಬಹದ್ದೂರ ವೆಂಕಮಾಂಬ
ಯ ಮಹಿಷ್ಯ ಪ್ರಾರ್ಥಿತೇನ ನಿರ್ಮಿತಂ

ಎಡತುದಿ — ಶ್ರೀ ಶಕೆ 1726 ರಕ್ತಾಕ್ಷಿ
ನಾಮ ಸಂವತ್ಸರ ಮಾರ್ಗಸಿರ
ವದಿ ಅಷ್ಟಮಿ ಚಂದ್ರವಾರೆ ಗೋ
ಧೂಳಿ ಸಮಯೆ ಆರಭ್ಯಂ ಸನ್ನು
1214 ರಂ. 21 ರಮಜಾನ

“ಕ್ಷೇತ್ರಪಾಲ ಶ್ರೀ ವೇಣುಗೋಪಾಲಸ್ವಾಮಿಯ ವರಪುತ್ರನಾದ ಪಿಡ್ಡನಾಯಕನು ವಿಖ್ಯಾತ ವೆಂಕಮಾಂಬಳ ಮನವಿ ಮೇರೆಗೆ-ಈ ವನದುರ್ಗಕೋಟೆಯ ನಿರ್ಮಾಣವನ್ನು ಶಾಲಿವಾಹನ ಶಕೆ 1726 ರಕ್ತಾಕ್ಷಿ ಸಂವತ್ಸರದ ಮಾರ್ಗಸಿರ ಅಷ್ಟಮಿಯ ಗೋಧೂಳಿ ಶುಭ ಸಮಯದ ಸೋಮವಾರ ದಂದು ಸಂಪೂರ್ಣವಾಗಿ ಪೂರೈಸಲಾಯಿತೆಂದು” ದಾಖಲಿಸಲಾಗಿದೆ. ಅಂದು ರಮಜಾನದ 21ನೆಯ

16. ರಂಗರಾಜ ವನದುರ್ಗ — ಹೇಳಿಕೆ: ವನದುರ್ಗ ಶಾಸನಪತ್ರ, ಸಂಯುಕ್ತಕರ್ನಾಟಕ ದಿ:16-6-94.

ದಿನವಾಗಿತ್ತೆಂದು ಸಹ ಉಲ್ಲೇಖವಿದೆ. ಇಲ್ಲಿಯ ಗಮನಾರ್ಹ ವಿಷಯವೆಂದರೆ 'ವೆಂಕಮ್ಮಾಂಬ' ಯಾರೆಂಬುದು ಸಂಶೋಧಕರಿನ್ನೂ ಶೋಧಿಸಬೇಕಾಗಿದೆ. ಇವಳ ಮನವಿ ಮೇರೆಗೆ ಭವ್ಯವಾದ ಕೋಟೆ ನಿರ್ಮಿಸಲಾಯಿತೆಂದರೆ ವೆಂಕಮ್ಮಾಂಬ ಅತ್ಯಂತ ಪ್ರಸಿದ್ಧಳು ಅಷ್ಟೇ ಪ್ರಭಾವಿಯಾಗಿದ್ದಳೆನ್ನಬಹುದು. ಪಿಡ್ಡನಾಯಕನ ಮಡದಿಯರೋರ್ವಳು ವೆಂಕಮ್ಮ ಎನ್ನುವಾಕೆ ಇದ್ದಳೆಂಬ ಬಗ್ಗೆ ಕೈಫಿಯತ್ತುಗಳು ಹೇಳುತ್ತವೆ. ಕಾಲ, ಸನ್ನಿವೇಶ ಮತ್ತಿನ್ನಿತರ ಅಂಶಗಳನ್ನು ಪರಿಶೀಲಿಸಿದಾಗ ವೆಂಕಮ್ಮ, ಕೋಟೆಯ ಸ್ಥಾಪಕನಾದ ರಾಜ ಬಹರಿ ಬಹಾದ್ದೂರ ಪಿಡ್ಡನಾಯಕನ ಪ್ರೀತಿಯ ಪತ್ನಿಯಾಗಿದ್ದಳೆಂದು ಸ್ಪಷ್ಟವಾಗುತ್ತದೆ.

ಈ ಶಾಸನವಿರುವ ದ್ವಾರದ ಕೆಳಭಾಗ 'ಚೋರಗಂಡಿ' ಎನ್ನಬಹುದಾದ ಗುಪ್ತದ್ವಾರವಿದೆ. ಅದು ತಿರುವಿನಲ್ಲಿಯೇ ತನ್ನ ದಾರಿ ಒಳಗಡೆ ಕ್ರಮಿಸುವಂತೆ ನೋಡಿಕೊಂಡಿದೆ. ಮಹಾದ್ವಾರ ಮುಚ್ಚಿಬಿಟ್ಟರೆ ಇದೇ ಕಿರುದಾರಿ, ಕಾವಲು ಪಡೆಗೂ ಮುಖ್ಯ ದಾರಿಯಾಗಿತ್ತು. ಇಂಥ ಇನ್ನೆರಡು ಗುಪ್ತ ದ್ವಾರಗಳು ಮಧ್ಯ ಕೋಟೆಯ ದಕ್ಷಿಣೋತ್ತರ ದಿಕ್ಕಿನಲ್ಲಿವೆ.

ಕೋಟೆಯ ಪ್ರತಿಯೊಂದು ಮೂಲೆಯಲ್ಲೂ ಮೇಲೇರಲು ವಿಶಾಲ ಪಾವಟಿಗೆಗಳ 'ಸಾರು' ಮಾಡಲಾಗಿದೆ. ಮೇಲ್ಭಾಗದಲ್ಲಿ ಇವು ಎರಡು ಮೀ. ಅಗಲದ ಹಾದಿ ಹೊಂದಿದ್ದು, ಕಾವಲುಗಾರರಿಗೆ, ಕುದುರೆ ಸವಾರರಿಗೆ ತಿರುಗಾಡಲು ಹಾಗೂ 'ಅಂಬುಗಂಡಿ' ಮೂಲಕ ಯುದ್ಧ ಮಾಡುವಾಗ ರಕ್ಷಿಸಲು ಸಫಲವಾಗಿದೆ. ಕೋಟೆಗೆ ಹನ್ನೆರಡು ಕೊತ್ತಳಗಳಿದ್ದು ಅನೇಕ 'ಅಂಬುಗಂಡಿ' ಗಳನ್ನು ಪಡೆದಿದೆ. ಸದಾ ನೀರಿನಿಂದ ತುಂಬಿದ ಕಂದಕ ಕೋಟೆಯನ್ನು ಸುತ್ತುವರೆದಿದ್ದು, ತನ್ನ ಹೊರಮೈಗೆ ಸಹ ರಕ್ಷಣಾ ಗೋಡೆಯನ್ನು ಹೊಂದಿದೆ.

ಕೋಟೆಯ ಒಳಗೆ ಮದ್ದಿನ ಮನೆ, ಕಾವಲುಗಾರರ ಮತ್ತು ಸೈನ್ಯಾಧಿಕಾರಿಗಳ ಮನೆಗಳನ್ನು ಕಟ್ಟಲಾಗಿದ್ದು, ಅವೆಲ್ಲ ಈಗ ಸಂಪೂರ್ಣ ನೆಲಕಚ್ಚಿವೆ. ಆದರೆ ಜನತೆಗಾಗಿ ನಿರ್ಮಿಸಿದ ಹನುಮಂತ ದೇವರ ಗುಡಿ ಮತ್ತು ಭವ್ಯವಾದ ಹನುಮಾನ ವಿಗ್ರಹ ಸಂಸ್ಥಾನದಲ್ಲಿಯೇ ವಿಶಿಷ್ಟವಾದುದು.

<u>ಇನ್ನಿತರ ಕೋಟೆಗಳು :</u>

ಸುರಪುರ ದೊರೆಗಳ ಉಸ್ತುವಾರಿಗೆ ಒಳಪಟ್ಟ ಜಹಗೀರದಾರಗೊಂಡ ಇಜೇರಿ, ಅಂಜುಳಾ ಕಿಲ್ಲೆಗಳು ಸಹ ಗಮನಾರ್ಹವಾದವುಗಳು. ಬಹಮನಿಗಳಿಂದಲೂ ತನ್ನ ಅಸ್ತಿತ್ವ ಸಾಧಿಸಿಕೊಂಡ

ಬಂದ ಇಜೇರಿ ಕಿಲ್ಲೆಯು ಸುರಪುರದರಸ ಆಳ್ವಿಕೆಯಲ್ಲಿ ಉತ್ತರ ದಿಕ್ಕಿನಲ್ಲಿಯ ಮುಖ್ಯ ಕೋಟೆಯೆನಿಸಿತ್ತು. ಕಾರಣ ಭೂಕಂದಾಯದ ತುಂಬ ಬಾಬತ್ತು ಕೊಡುವ ಫಲವತ್ತಾದ ಭೂಮಿ ಇಲ್ಲಿಯೆ ಇದ್ದವು. ಮುಮ್ಮಡಿ ಪಿಡ್ಡನಾಯಕನು ಕ್ರಿ.ಶ.1811 ರಲ್ಲಿ ಪುನಃ ಇಜೇರಿ ಹಾಗೂ ದೇವದುರ್ಗ ಕಿಲ್ಲೆಗಳನ್ನು ಖುದ್ದುಗೊಳಿಸಿದನು. ವೀರಘಟ್ಟ ಕೋಟೆಯು ಭವ್ಯ ಪ್ರಮಾಣದಲ್ಲಿದ್ದು, ಹಲವು ವರ್ಷ ಸುರಪುರದವರ ವಶದಲ್ಲೇ ಇತ್ತು. ಅತ್ಯಂತ ಎತ್ತರದ ಬೆಟ್ಟದ ಮೇಲಿರುವದರಿಂದ ನೋಡಲು ಆಕರ್ಷಕವಾಗಿದೆ. ಪಕ್ಕದಲ್ಲಿ ಕೃಷ್ಣಾನದಿ ಹರಿದು ಹೋಗುತ್ತದೆ.

ಸಂಸ್ಥಾನದಲ್ಲಿ ಅನೇಕ ಮಣ್ಣಿನ ಕೋಟೆಗಳು ಇವೆ. ತಳವಾರಗೇರಿ ಸುತ್ತಲೂ ಈಗಲೂ ಕಾಣುತ್ತವೆ. ಇವುಗಳಿಗೆ 'ವಾಡೆ' ಗಳೆಂದು ರೂಢಿ. ಕಲ್ಲಿನ ಕಟ್ಟಡಕ್ಕೆ ಹಣಕಾಸು, ಇನ್ನಿತರ ಶಕ್ತಿ ಸಾಲದೆ ಹೋದಾಗ ಮಣ್ಣಿನ ಗೋಡೆಗಳನ್ನೇ ನಿರ್ಮಿಸಿಕೊಳ್ಳುತ್ತಿದ್ದರು. ಇವು ಕೆಲವೊಂದು ಬಹು ಪ್ರಾಚೀನತೆ ಪಡೆದಿವೆ. ಇಂಥ ಮಣ್ಣಿನ ಕೋಟೆಗಳಿಂದ ಒಂದು ವಿಶೇಷ ಅಧ್ಯಯನ ನಡೆಯುವಷ್ಟು ಸಂಸ್ಥಾನದಲ್ಲಿ ವಸ್ತುವಿದೆ.

2) ದೇವಾಲಯಗಳು :

ಸುರಪುರ ಸಂಸ್ಥಾನದ ಮೂಲ ಪುರುಷರಲ್ಲಿ ಓರ್ವನಾದ ಪಕ್ಕ ಹನುಮನಾಯಕನು ಕಕ್ಕೇರಿಯಲ್ಲಿ ವೀರಶೈವ ಸಂಪ್ರದಾಯಕ್ಕೆ ಸೇರಿದ ಸೋಮನಾಥ ಮಂದಿರವೊಂದನ್ನು ಕಟ್ಟಿಸಿದನು. ಕಕ್ಕೇರಿ ಬಿಟ್ಟ ನಂತರ ವಾಗಿನಗೇರಿಯಲ್ಲಿ ಕೋಟೆ ಕಟ್ಟಿಸಿಕೊಂಡ ಸುರಪುರ ದೊರೆಗಳು ತಮ್ಮ ಪೂರ್ವ ಸಾಮ್ರಾಜ್ಯದ ಪ್ರಥಮ ರಾಜಧಾನಿಯಾಗಿಸಿಕೊಂಡರು. ಕ್ರಿ.ಶ.1670ರ ಸುಮಾರಿಗೆ ಹಸರಂಗಿ ಪಾಮನಾಯಕನು ಇದೇ ವಾಗಿನಗೇರಿಯಲ್ಲಿ ವೇಣುಗೋಪಾಲಸ್ವಾಮಿ ಮಂದಿರವೊಂದನ್ನು ನಿರ್ಮಿಸಿದನು. ನಾಲ್ಕು ಅಡಿ ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲ್ಪಟ್ಟಿರುವ ಈ ದೇವಾಲಯಕ್ಕೆ 110 ಸೋಪಾನಗಳನ್ನೇರಿ ಬರಬೇಕು. ಉತ್ತರಾಭಿಮುಖವಾಗಿರುವ ಗರ್ಭಗೃಹಕ್ಕೆ ಮುಂಭಾಗದಲ್ಲಿ ಅಂತರಾಳನವರಂಗಗಳಿವೆ. ವಾಗಿನಗೇರಿಯು ಔರಂಗಜೇಬನ ವಶವಾದ ನಂತರ ಅಲ್ಲಿಯ ಆಸ್ತಿ-ಪಾಸ್ತಿ, ಸಂಪತ್ತೆಲ್ಲ ನಾಶಗೊಳಿಸಿದಂತೆ ತಿಳಿದುಬರುತ್ತದೆ. ಅಲ್ಲದೆ ಗೋಪಾಲಸ್ವಾಮಿಯ ಗುಡಿಯನ್ನು ಕೆಡವಿ ಅದರ ಬದಲಾಗಿ ಮಸೀದೆಯನ್ನು ಕಟ್ಟಿಸಿ ಆ ಕಿಲ್ಲೆಗೆ 'ರಹಮಾನ ಬಕ್ಷ' ಎಂಬ ಹೆಸರನ್ನಿಟ್ಟು ತನ್ನ ಫೌಜದಾರನನ್ನು ನೇಮಿಸಿ ತಾನು ಹಿಂದುರಿಗಿ ಉತ್ತರಕ್ಕೆ ತೆರಳಿದನು. ಅಲ್ಲಲ್ಲಿ ಬಿದ್ದಿರುವ ಕಂಬ,

ಬೋದಿಗೆ, ಮೂರ್ತಿ ಮುಂತಾದ ಶಿಲ್ಪಗಳೇ ಅಂದಿನ ನಾಶಕ್ಕೆ ಸಾಕ್ಷಿಯಾಗಿವೆ.

ಔರಂಗಜೇಬನ ಆಕ್ರಮಣಕ್ಕೆ ವಾಗಿನಗೇರಿಯ ವೇಣುಗೋಪಾಲಸ್ವಾಮಿ ಮಂದಿರವು ತುತ್ತಾದ ತರುವಾಯ ಪೀತಾಂಬರ ಬಹರಿ ಪಿಡ್ಡನಾಯಕನ ಕಾಲಕ್ಕೆ ಸುರಪುರದಲ್ಲಿ ವೇಣುಗೋಪಾಲಸ್ವಾಮಿ ಮಂದಿರ ನಿರ್ಮಾಣ ಕಾರ್ಯ ಆರಂಭವಾಯಿತು. ಸಂಸ್ಥಾನದ ದೇವಾಲಯಗಳಲ್ಲೇ ಈ ದೇವಾಲಯ ಅತ್ಯಂತ ಮಹತ್ವಪೂರ್ಣವಾದುದು. ಬೆಟ್ಟದ ಮೇಲ್ಭಾಗ ಕಟ್ಟಲ್ಪಡುವದರಿಂದ ಅಧಿಷ್ಠಾನ ಕಾರ್ಯ ದೀರ್ಘ ಸಮಯ ತೆಗೆದುಕೊಂಡಿತು. ಇದನ್ನು ಪೀತಾಂಬರ ಪಿಡ್ಡನಾಯಕನು ಪೂರೈಸಿದ ತರುವಾಯ ಗರ್ಭಗೃಹ, ಸುಖನಾಸಿ, ನವರಂಗ ಮಂಟಪಗಳನ್ನು ರಾಮಪ್ಪನಾಯಕನ ಆಳ್ವಿಕೆಯಲ್ಲಿ ಮುಂದುವರಿಸಿ ಮುಗಿಸಲಾಯಿತು. ಮುಂದೆ ಮುಮ್ಮಡಿ ಪಾಮನಾಯಕ ಮೂರ್ತಿ ಪ್ರತಿಷ್ಠಾಪನೆ ಮಾಡುವದರೊಂದಿಗೆ ಮಂದಿರದ ಮುಖ ಮಂಟಪವನ್ನು ನಿರ್ಮಿಸಿದನು.

ಭೂಮಿಯಿಂದ 50 ಮೆಟ್ಟಲುಗಳ ಎತ್ತರದಲ್ಲಿರುವ ಈ ದೇವಾಲಯದ ಸ್ಥಲವಿನ್ಯಾಸ, ಗರ್ಭಗೃಹ, ಅಂತರಾಳ, ನವರಂಗ ಮತ್ತು ಭವ್ಯವಾದ ಮುಖಮಂಟಪಗಳನ್ನು ಹೊಂದಿದೆ. ನವರಂಗಕ್ಕೆ ಎರಡು ಬದಿಯ ಬಾಗಿಲುಗಳಿದ್ದು, ಒಂದು ನೇರದ್ವಾರವಿದೆ. ಮುಖಮಂಟಪವು ಯಾವುದೇ ಗೋಡೆಗಳಿಂದ ಆವೃತ್ತವಾಗದೆ — ಸುತ್ತಲೂ ಕಂಬಗಳಿಂದ ಕೂಡಿದೆ. ದೇವಾಲಯದ ಮುಂಭಾಗ ಧ್ವಜಸ್ತಂಭ, ತುಳಸಿಕಟ್ಟೆಗಳಿದ್ದು, ಹೊರಾಂಗಣದ ಸುತ್ತಲೂ ಗೋಡೆ ಒಳಗೊಂಡಿದೆ. ವಿಜಯನಗರ ದೇವಾಲಯಗಳ ಹೊರಗೋಡೆಗಳಂತೆ ಇಲ್ಲಿ ಯಾವುದೇ ತರಹದ ಉಬ್ಬು ಚಿತ್ರಗಳಾಗಲಿ ಅಥವಾ ಕಂಬ ಶಿಲ್ಪಚಿತ್ರಗಳಾಗಲಿ ಕೆತ್ತಿರುವದಿಲ್ಲ. ಮುಖಮಂಟಪವು ಕಟ್ಟೆಯಾಕಾರದ ಕಟಾಂಜನ ಹೊಂದಿದ್ದು ಅದರ ಹೊರ ಮತ್ತು ಒಳಭಾಗಗಳಲ್ಲಿ ಅನೇಕ ಉಬ್ಬು ಚಿತ್ರಗಳನ್ನು ಕೆತ್ತಲಾಗಿದೆ. ಅವುಗಳಲ್ಲಿ ಆನೆ, ಕುದುರೆ, ಒಂಟೆ, ಚಿಗರಿ, ಚಿರತೆ, ಅರಸ, ರಾಜಭಟರು, ಕುಸ್ತಿ ಹಿಡಿದ ಜಟ್ಟಿಗಳು, ನರಸವಾಡುವ ಮಂಗ, ನೃತ್ಯದಲ್ಲಿರುವ ಮೇಳ ಅಲ್ಲದೆ ದೇವಾಲಯದ ಒಳಗೋಡೆ ಮೇಲೆ ವೈಷ್ಣವ ಸಂಪ್ರದಾಯಕ್ಕೆ ಸಂಬಂಧಿಸಿದ ಮೊಸಳೆ ಮೀನು ಮುಂತಾದ ಉಬ್ಬು ಚಿತ್ರಗಳಿವೆ.

ವೇಣುಗೋಪಾಲಸ್ವಾಮಿ ಮಂದಿರದ ಕಂಬಗಳಲ್ಲಿ ಅನೇಕ ವೈವಿಧ್ಯತೆಯನ್ನು ಕಾಣುತ್ತೇವೆ. ಇಲ್ಲಿಯ ಕಂಬಗಳನ್ನು ಮೂರು ರೀತಿಯಾಗಿ ವಿಭಾಗಿಸಬಹುದು:

1) ಅಲಂಕಾರವಿಲ್ಲದ ಕಂಬಗಳು

2) ಕುಸುರಿ ಕಲೆಗಳಿಂದ ಕೂಡಿದ ಕಂಬಗಳು

3) ಆನೆಗಳ ಮೇಲಿರುವ ವಿಶಿಷ್ಟ ಕಂಬಗಳು

ಮುಖಮಂಟಪದಲ್ಲಿ ಒಟ್ಟು 46 ಕಂಬಗಳನ್ನು, ನವರಂಗದಲ್ಲಿ 16 ಕಂಬಗಳನ್ನು ಹೊಂದಿದೆ. ಮುಖ ಮಂಟಪದ ಸುತ್ತಲೂ ವಿಶಿಷ್ಟ ರೀತಿಯ ಆನೆ ಮೇಲೆ ನಿಲ್ಲಿಸಿದ 12 ಕಂಬಗಳಿದ್ದು ಇವು ವಿಜಯನಗರ ದೇವಾಲಯಗಳ ನಂತರದ ಶಿಲ್ಪಕಲೆಯ ಶೈಲಿ ಕಂಬಗಳನ್ನು ನೆನಪಿಗೆ ತರುತ್ತವೆ. ಕಂಬಗಳ ಮೇಲೆ ದ್ರಾವಿಡ ಶೈಲಿಯ ಪುಷ್ಪಬೋದಿಗೆ ಒಳಗೊಂಡಿದ್ದು ಇದರ ಮತ್ತೊಂದು ವಿಶೇಷತೆ. ಗರ್ಭಗುಡಿಯ ಮೇಲ್ಭಾಗ ದ್ರಾವಿಡ ಶೈಲಿಯ ಶಿಖರವಿದ್ದು, ಇದು ಶಾಲಾ, ಕೂಟ ಮತ್ತು ಕರ್ಣಕೂಟಗಳಿಂದ ಕೂಡಿವೆ. ಅವುಗಳಲ್ಲಿ ಗಾರೆಗಳಿಂದ ಕಟ್ಟಿದ ಶಿಲ್ಪಗಳನ್ನು ಇರಿಸಲಾಗಿದೆ. ಸಂಪೂರ್ಣ ದ್ರಾವಿಡ ಶೈಲಿಯ ಮಂಜೂರವು ಮುಖಮಂಟಪದ ಮೇಲೆ ಸುತ್ತಲೂ ಇದ್ದು, ಇದು ಅನೇಕ ಶಿಲ್ಪಗಳನ್ನು ಹೊಂದಿವೆ. ವೈಷ್ಣವಪಂಥಕ್ಕೆ ಸಂಬಂಧಿಸಿದ ಕೃಷ್ಣ, ರಾಮ, ವಿಷ್ಣು, ನರಸಿಂಹ, ವಾಮನ, ಮುಂತಾದ ವಿಗ್ರಹಗಳು ಶಾಲಾ, ಕೂಟಗಳಲ್ಲಿ ಕಟ್ಟಲಾಗಿದೆ. ವಿಜಯನಗರ ದೇವಾಲಯಗಳಂತೆ ಇಲ್ಲಿಯ ದೇವಾಲಯದ ಎಡಬದಿಯಲ್ಲಿ ಪಾಕಶಾಲಾ ಮಂಟಪಗಳಿವೆ. ಇದೂ ಸಹ ಅನೇಕ ಕಂಬಗಳಿಂದ ಕೂಡಿದೆ.

ಮೇಲಿನ ಮಂದಿರದ ಇನ್ನೊಂದು ಮಹತ್ವಪೂರ್ಣ ಅಂಶವೆಂದರೆ ಹೊರದ್ವಾರದ ಅಂತಃಪುರದಲ್ಲಿ ಕುಳಿತುವೀಕ್ಷಿಸಿದರೆ ಗರ್ಭಗೃಹದಲ್ಲಿರುವ ಮೂರ್ತಿದರ್ಶನವಾಗುತ್ತದೆ. ದೇವಾಲಯವನ್ನು ಬಿಟ್ಟು ಕೆಳಗಿಳಿದು ಬಂದರೆ ತಕ್ಷಣವೇ ನಾಗರ ಮತ್ತು ನಾಯಕನ ಬಾವಿಗಳು ಪ್ರತ್ಯಕ್ಷವಾಗುತ್ತವೆ.

ಸುರಪುರ ನಗರದಲ್ಲಿ ವೇಣುಗೋಪಾಲಸ್ವಾಮಿ ಮಂದಿರವೊಂದನ್ನು ಬಿಟ್ಟರೆ, ವಿಶೇಷವಾದ ಇನ್ನು ಕೆಲವು ದೇವಾಲಯಗಳು ಸುರಪುರ ದೊರೆಗಳ ನಿರ್ಮಾಣಕೀರ್ತಿಗೆ ಪಾತ್ರವಾಗಿವೆ. ಅವುಗಳಲ್ಲಿ ಪಾಂಡುರಂಗ ದೇವಾಲಯವು ಅತ್ಯಂತ ಗಮನಾರ್ಹವಾಗಿದೆ. ಉತ್ತರಾಭಿಮುಖವಾಗಿ ಕಟ್ಟಲ್ಪಟ್ಟಿರುವ ಪಾಂಡುರಂಗ ದೇವಾಲಯವು ಗರ್ಭಗೃಹ, ಸುಖನಾಸಿ, ನವರಂಗದಿಂದ ಕೂಡಿದೆ. ಇದರ ವೈಶಿಷ್ಟ್ಯವೆಂದರೆ ವಿಜಯನಗರ ಶೈಲಿಯಂತೆ ಪ್ರವೇಶದ್ವಾರದ ಮೇಲೆ ಭವ್ಯಗೋಪುರವನ್ನು ನಿರ್ಮಿಸಲಾಗಿದೆ. ಶಿಖರ ಮತ್ತು ಗೋಪುರಗಳು ಗಾರೆಗಳಿಂದ ಕಟ್ಟಿದ್ದು, ಕೂಟ, ಶಾಲಾಗಳಲ್ಲಿ ವೈಷ್ಣವ ಪಂಥದ ಅನೇಕ ವಿಗ್ರಹಗಳನ್ನು ನಿಲ್ಲಿಸಲಾಗಿದೆ.

ಪಾಂಡುರಂಗದೇವಾಲಯದ ತರುವಾಯ ಪೂರ್ವಾಭಿಮುಖವಾಗಿ ನಡೆದರೆ ವೆಂಕಟರಮಣ ಮಂದಿರವನ್ನು ಕಾಣುತ್ತೇವೆ. ಇಲ್ಲಿಂದ ಸ್ವಲ್ಪ ಮುಂದೆ ಸಾಗಿದರೆ ಸುರಪುರ ದೊರೆಗಳು ನಿರ್ಮಿಸಿದ ನರಸಿಂಹ ಮಂದಿರವು ದರ್ಶನವಾಗುತ್ತದೆ. 2 ಅಡಿ ಅಧಿಷ್ಠಾನದ ಮೇಲಿರುವ ಈ ನರಸಿಂಹ ದೇವಾಲಯವು ಸುರಪುರ ನಗರದಲ್ಲಿಯ ದೇವಾಲಯಗಳಲ್ಲಿ ವಿಶಿಷ್ಟ ರಚನಾವಿನ್ಯಾಸ ಪಡೆದಿದೆ. ಪೂರ್ವಕ್ಕೆ ಮುಖವಿರುವ ಇಲ್ಲಿಯ ಗರ್ಭಗೃಹವು ನರಸಿಂಹಮೂರ್ತಿಯನ್ನು ಹೊಂದಿದ್ದು ಅಲಂಕಾರವಿಲ್ಲದ ಬೋದುಗೆ ಕೆಳಗೆ ಎತ್ತರವಾದ ಕಂಬಗಳನ್ನು ನಿಲ್ಲಿಸಲಾಗಿದೆ. ವೇಣುಗೋಪಾಲಸ್ವಾಮಿ ದೇವಾಲಯದ ಕಂಬಗಳಂತೆ ಇಲ್ಲಿಯೂ ಮುಖಮಂಟಪದ ಮುಂಭಾಗ ಆನೆಗಳ ಮೇಲೆ ನಾಲ್ಕು ಕಂಬಗಳನ್ನು ನಿಲ್ಲಿಸಿದೆ. ಮುಖಮಂಟಪದ ಎದುರುಗಡೆ ವಾಹನ ಮಂಟಪವಿದ್ದು, ಅದು ಅನೇಕ ವೈವಿಧ್ಯಪೂರ್ಣ ಕೆತ್ತನೆಯೊಳಗೊಂಡಿದೆ. ದೇವಾಲಯದ ಎಡಭಾಗದಲ್ಲಿ ಪಾಕಶಾಲ ಮಂಟಪವು ಅಲಂಕಾರ ರಹಿತ ಅನೇಕ ಕಂಬಗಳಿಂದ ಕಟ್ಟಲ್ಪಟ್ಟಿದೆ.

ಸುರಪುರ ನಗರದ ಮುಖ್ಯ ರಸ್ತೆಯಲ್ಲಿರುವ ರಾಘವೇಂದ್ರ ಮತ್ತು ಆಂಜನೇಯ ದೇವಾಲಯಗಳು ವಿಶಿಷ್ಟ ಶೈಲಿಯಲ್ಲಿ ನಿರ್ಮಿಸಲಾಗಿದೆ. ದಕ್ಷಿಣಾಭಿಮುಖವಿರುವ ರಾಘವೇಂದ್ರ ದೇವಾಲಯವು ಸುಂದರ ಶಿಖರ ಹೊಂದಿದ್ದು, ಅದರಲ್ಲಿ ಶ್ರೀ ವೈಷ್ಣವ ಪಂಥದ ವಿಗ್ರಹಗಳನ್ನು ಗಾರೆಗಳಿಂದ ತಯಾರಿಸಿ ಇರಿಸಲಾಗಿದೆ.

ಸುರಪುರ ನಗರದ ಸುತ್ತಲಿರುವ ಸಿದ್ದಾಪುರ, ವೆಂಕಟಾಪುರ, ಲಕ್ಷ್ಮಾಪುರ, ರುಕ್ಮಾಪುರ, ಅಮ್ಮಾಪುರ, ಶಾಂತಪುರ, ಅಲ್ಲದೆ ಬೋನ್ಹಾಳ, ರತ್ನಾಳ, ಹೆಬ್ಬಾಳ, ದೈವಬಾಳ, ಸಿರವಾಳ, ಕೋಳಿಹಾಳ, ಅಂಬಲಿಹಾಳ, ಚಿಕ್ಕಹೈಯಾಳ, ರುಕ್ಕಿನಾಳ, ದೇವಿನಾಳ, ಆಲ್ದಾಳ ಮತ್ತು ನಗನೂರ, ಹರನೂರ, ಹೆಮನೂರ, ಐಕೂರ, ಹಾಗೂ ಚೌಗೇರಿ, ತಳವಾರಗೇರಿ, ಗುಂಡಲಗೇರಿ, ದೇವಿಕೇರಿ ಗಳಲ್ಲದೆ ದೋರನಹಳ್ಳಿ, ಶಾರದಳ್ಳಿ, ಮಂಡಿಗಿಹಳ್ಳಿ, ಬೊಮ್ಮನಳ್ಳಿ, ತಳ್ಳಿ, ಮಳ್ಳಿ ಮುಂತಾದ ಗ್ರಾಮಗಳಲ್ಲಿ ಸುರಪುರ ಸಂಸ್ಥಾನದ ಜನತೆಯ ಆರಾಧ್ಯ ದೈವ ಆಂಜನೇಯಸ್ವಾಮಿ ಮಂದಿರವನ್ನು ನಿರ್ಮಿಸಲಾಯಿತು. ಜೊತೆಗೆ ಅರ್ಚನಾ ಉತ್ಸವಾದಿಗಳಿಗೆ ದೊರೆಗಳು ಬಿಟ್ಟ ದತ್ತಿ, ದಾನ ಕಾರ್ಯವು ಸಾಂಸ್ಕೃತಿಕ ಪರಂಪರೆಯನ್ನು ಪರಿಪೂರ್ಣಗೊಳಿಸಿದವು.

ಇಂಥ ಪ್ರಮುಖ ದೇವಾಲಯದಲ್ಲಿ ಬಹು ಪ್ರಸಿದ್ಧವಾದದ್ದು ವನದುರ್ಗದ ಮಾರುತಿ ಮಂದಿರ ನಾಲ್ಕು ಅಡಿ ಎತ್ತರದ ಅಧಿಷ್ಠಾನದ ಮೇಲೆ ದಕ್ಷಿಣಾಭಿಮುಖವಾಗಿ ಈ ದೇವಾಲಯವನ್ನು

ಕಟ್ಟಲಾಗಿದೆ. ಗರ್ಭಗುಡಿಯಲ್ಲಿ ಐದು ಅಡಿ ಎತ್ತರದ ಅಪ್ರತಿಮ ಮಾರುತಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದ್ದು, ಗರ್ಭಗುಡಿಯ ಸುತ್ತಲೂ ಪ್ರದಕ್ಷಿಣಾಪಥವಿದೆ. ಮುಂಭಾಗದಲ್ಲಿ ಬಹು ಸುಂದರವಾದ ಮುಖಮಂಟಪದಲ್ಲಿ ಬೆಣಚುಕಲ್ಲಿನಲ್ಲಿ ಕೆತ್ತಿದ ವೈವಿಧ್ಯಪೂರ್ಣ ಕುಸುರಿಕಲೆಯ ಕಂಬಗಳಿವೆ. ಇದು ಸುರಪುರ ದೊರೆಗಳ ವಾಸ್ತುಶಿಲ್ಪದ ಸಾರ್ಥಕ ಶ್ರಮಕ್ಕೆ ಸಾಕ್ಷಿಯಾಗಿದೆ.

ಸುರಪುರ ನಗರದ ಪೂರ್ವದ ಬೆಟ್ಟದ ಕೆಳಗಿರುವ ವೆಂಕಟಾಪೂರದ ಬಸವಣ್ಣನ ದೇವಾಲಯ ದಿಂದ ಅದ್ಭುತ ಶಿಲ್ಪಕಲಾಶೈಲಿಗೆ ಹೆಸರಾಗಿದೆ. ಎತ್ತರವಾದ ಅಧಿಷ್ಠಾನದ ಮೇಲೆ ಗರ್ಭಗೃಹ, ಅಂತರಾಳ, ಕಟ್ಟಲಾಗಿದ್ದು ನಂತರ ಇಳಿಜಾರುವಿನಲ್ಲಿ ಮೆಟ್ಟಲುಗಳನ್ನು ನಿರ್ಮಿಸಲಾಗಿದೆ. ಇದರ ಕೆಳಗೆ ಗರ್ಭಗೃಹಕ್ಕೆ ಎದುರಿನ ಮಂಟಪದಲ್ಲಿ ಭವ್ಯವಾದ ನಂದಿವಿಗ್ರಹವನ್ನು ಕೂಡಿಸಲಾಗಿದ್ದು, ಇದು ಮೈಸೂರಿನ ಚಾಮುಂಡಿ ಬೆಟ್ಟದಲ್ಲಿರುವ ನಂದಿವಿಗ್ರಹವನ್ನು ನೆನಪಿಗೆ ತರುತ್ತದೆ.

ಸಂಸ್ಥಾನಕ್ಕೆ ಒಳಪಟ್ಟ ಭೀಮರಾಯನಗುಡಿ, ಶಿಟ್ಟಿಕೇರಿ, ಕಕ್ಕಸಗೇರಿ ಗ್ರಾಮಗಳಲ್ಲಿ ಸುರಪುರದೊರೆಗಳು ನಿರ್ಮಿಸಿದ ಮಾರುತಿ ಮಂದಿರಗಳು ಅತಿ ಭವ್ಯವಾದ ಗರ್ಭಗುಡಿ, ಮುಖಮಂಟಪ ಗಳನ್ನು ಪಡೆದಿವೆ. ಭೀಮರಾಯನಗುಡಿಯ ಮುಖಮಂಟಪವು ಬಹು ವೈಶಿಷ್ಟ್ಯಪೂರ್ಣ ಕುಸುರಿ ಕಲೆಯ ಕಂಬಗಳಿಂದ ಕೂಡಿದೆ.

ಮೊದಲನೆಯ ವೆಂಕಟಪ್ಪನಾಯಕನು ಕೊಡೆಕಲ್ಲಿನಲ್ಲಿ ಗೋಪಾಲಸ್ವಾಮಿ ದೇವಾಲಯ ವನ್ನು ಕಟ್ಟಿಸಿ ಅದರ ನಿತ್ಯ ಅರ್ಚನೆ, ದೀಪಾರತಿಗಳಿಗೆ 60 ಬಿಘೇ ಭೂಮಿಯನ್ನು ದತ್ತಿಯಾಗಿ ಬಿಟ್ಟನು. ಈತನಿಂದಲೇ ನಿರ್ಮಿತವಾದ ಮುದನೂರಿನ ಗೋಪಾಲಸ್ವಾಮಿ ಮಂದಿರವೂ ಸಹ ಅಂದವಾದ ಗರ್ಭಗುಡಿ, ಮುಖಮಂಟಪಗಳನ್ನು ಹೊಂದಿದೆ.

ಮಾಡಬೂಳ ಮತ್ತು ಕರಡಕಲ್ಲ ಗ್ರಾಮಗಳಲ್ಲಿ ಕಟ್ಟಲಾದ ವೇಣುಗೋಪಾಲಸ್ವಾಮಿ ಮಂದಿರವು ಅನೇಕ ವೈವಿಧ್ಯಗಳನ್ನು ಒಳಗೊಂಡ ದೇವಾಲಯಗಳಾಗಿವೆ. ಗರ್ಭಗೃಹ ಮತ್ತು ಸಾದಾ ಕಂಬಗಳಿಂದ ನಿರ್ಮಿತವಾದ ಈ ಮಂದಿರವು ಗೋಕುಲಾಷ್ಟಮಿಯಂದು ಸುರಪುರ, ಹಾಗಿನಗೇರಿಯಂತೆ ಇಲ್ಲಿಯೂ ವಿಜೃಂಭಣೆಯ ಉತ್ಸವವನ್ನು ನೆರವೇರಿಸಿಕೊಳ್ಳುತ್ತದೆ.

ಸುರಪುರ ಸಂಸ್ಥಾನದ ಬೇಡದೊರೆಗಳು ನಿರ್ಮಿಸಿದ ಎಲ್ಲಾ ದೇವಾಲಯಗಳನ್ನು ಸಮೀಕ್ಷೆ ಮಾಡಿದಾಗ ಸಂಪೂರ್ಣ ವೈಷ್ಣವ ಮತ್ತು ಶ್ರೀವೈಷ್ಣವ ಸಂಪ್ರದಾಯಕ್ಕೆ ಸಂಬಂಧಿಸಿದವುಗಳೇ

ಸಿಂಹಪಾಲು. ಆದರೆ ಸಂಸ್ಥಾನದಲ್ಲಿ ಮಂತ್ರಿಗಳಾಗಿದ್ದ ವೀರಶೈವ ಸಂಪ್ರದಾಯದ ನಿಷ್ಠ ಕಡ್ಲಪ್ಪ ಮತ್ತು ವೀರಪ್ಪನವರ ಪ್ರಯತ್ನದ ಫಲವಾಗಿ ಮೂಲ ವೀರಶೈವ ದೇವಾಲಯಗಳೆಲ್ಲ ಜೀರ್ಣೋದ್ಧಾರಗೊಂಡವು. ಮಡಿವಾಳಪ್ಪ ಮುಂತಾದ ದೇವಾಲಯಗಳನ್ನು ಇಲ್ಲಿ ಹೆಸರಿಸಬಹುದು.

ಸುರಪುರ ದೊರೆಗಳಿಗೆ ದೇವಾಲಯ ನಿರ್ಮಾಣದಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿರಲಿಲ್ಲ ನಿಜ; ಆದರೂ ಸ್ವಧರ್ಮಾಭಿಮಾನ ಸಹಜ. ಅದೇನೆ ಇದ್ದರೂ ಸಂಸ್ಥಾನದ ಸರ್ವ ದೇವಾಲಯಗಳನ್ನೆಲ್ಲ ವಿಶಾಲ ದೃಷ್ಟಿಕೋನದಿಂದ ನೋಡಿದಾಗ "ಮಂದಿರಗಳು ಈ ನಾಡಿನ ಸಾಂಸ್ಕೃತಿಕ ಚಟುವಟಿಕೆಯ ಕೇಂದ್ರಬಿಂದುವಾಗಿದ್ದವು" ಎನ್ನುವಲ್ಲಿ ಎರಡಿಲ್ಲ. ಆಚಾರ-ವಿಚಾರ — ಉತ್ಸವಾದಿಗಳನ್ನು ನೆರವೇರಿಸಿಕೊಳ್ಳಲು ದೇವಾಲಯಗಳು ಪ್ರಮುಖಪಾತ್ರ ನೀಡುತ್ತಿದ್ದವು. ಇವೆಲ್ಲವುಗಳಿಗಿಂತ ಬಹು ಗಮನಾರ್ಹ ವಿಷಯವೆಂದರೆ ಸುರಪುರ ಸಂಸ್ಥಾನದ ದೇವಾಲಯಗಳು ಉದ್ಯೋಗ ನೀಡುವ ಕೇಂದ್ರವು ಆಗಿದ್ದವು. ಮಂದಿರದಲ್ಲಿ ದುಡಿಯುವವರಿಗೆ ಉಪಜೀವನಕ್ಕಾಗಿ ಸಂಬಳ ನೀಡಲಾಗುತ್ತಿತ್ತು. ಎನ್ನುವ ಸಂಗತಿ ಸುರಪುರದ ವೇಣುಗೋಪಾಲಸ್ವಾಮಿ ಮಂದಿರದ ವ್ಯವಸ್ಥೆಯಿಂದ ತಿಳಿದು ಬರುತ್ತದೆ. ಶಿಲಾನ್ಯಾಸದಿಂದ ಶಿಖರ ನಿರ್ಮಾಣದವರೆಗೂ ದುಡಿದ ಶಿಲ್ಪಿಗಳ ಕಾರ್ಯದಲ್ಲಿ ದೊರೆಗಳಷ್ಟೇ ಶ್ಲಾಘನೀಯ. ನೃತ್ಯ, ನಗಾರಿ, ಚಾಮರ, ತುಳಸಿ, ಅಗ್ಗಿಷ್ಟಿಕೆ, ಆರತಿ, ಜಾಗಟೆ, ತಾಸು, ಕಳಸ, ವಾದ್ಯ, ಚಿತ್ರದ, ಕಾರ್ಯಗಳು ಮಂದಿರದಲ್ಲಿ ವೃತ್ತಿಗಳಾಗಿ ಉಪಜೀವನ ನಡೆಸಲು ಆಧಾರವಾದವು. ಈ ದೃಷ್ಟಿಯಿಂದ ಸುರಪುರ ದೊರೆಗಳು ಮತ್ತು ಜನತೆ ಇಂದಿಗೂ ಅಭಿನಂದನಾರ್ಹರು.

3) ಚಿತ್ರಕಲೆ :

ಸಂಸ್ಥಾನದಲ್ಲಿ ಆಶ್ರಯ ಪಡೆದ ಅನೇಕ ಕುಟುಂಬಗಳಲ್ಲಿ 'ಸಾತಾನಿ' ಮನೆತನವು ಒಂದು. ಇವರು ಸುಪ್ರಸಿದ್ಧ ತೆಲುಗು ಸಾಹಿತಿಗಳು, ಗಾಯಕರು, ವೈದ್ಯರು ಆಗಿದ್ದರಲ್ಲದೆ ವಿಶೇಷವಾಗಿ ಚಿತ್ರಕಲೆಯಲ್ಲಿ ಪ್ರಾವೀಣ್ಯತೆ ಸಂಪಾದಿಸಿದ್ದರು. ಅಂತಹ ಒಂದು ಮನೆತನದ ಕವಲು 'ಗರುಡಾದ್ರಿ' ಕುಟುಂಬ.

'ಗರುಡಾದ್ರಿ' ಕಲಾಕಾರರು ಕುಂದಪ್ರಪಂಚಕ್ಕೆ ನೀಡಿದ ಕೊಡುಗೆ ಅಪಾರ. ಲೇಪಾಕ್ಷಿ ಮಾದರಿಯ ಇವರ ಕೃತಿಗಳು ವರ್ಣಮಯ ರೇಖಾ ವಿನ್ಯಾಸದಿಂದ ಇಂದು ವಿಶ್ವಮಾನ್ಯತೆಗಳಿಸಿವೆ. ಪೌರಾಣಿಕ ಪಾತ್ರಗಳನ್ನು ಭಿತ್ತಿಚಿತ್ರಗಳಲ್ಲಿ ಅಳವಡಿಸುವದೆಂದರೆ ಗರುಡಾದ್ರಿಯವರಿಗೆ ಎಲ್ಲಿಲ್ಲದ ನೈಪುಣ್ಯ.

ಜೀಟವೇಲಯ್ಯನಿಂದ ಆರಂಭಗೊಳ್ಳುವ ಈ ಗರುಡಾದ್ರಿ ಮನೆತನವು ರಮ್ಯ ಚಿತ್ರಕಾರ, ಶ್ರೇಷ್ಠ ಮೂರ್ತಿಕಾರ ಬಿನಕಯ್ಯನನ್ನು ಕೊಟ್ಟಿದೆ. ಈತನ ಕಲಾಕೌಶಲ್ಯ ಕಂಡ ಸಂಸ್ಥಾನದ ದೊರೆಗಳು ಮುಡಬೂಳ, ಶಾಕಾಪೂರ, ತಿಗ್ಗಳ್ಳಿ ಗ್ರಾಮಗಳಲ್ಲಿ ಅಂದಾಜು 200 ಎಕರೆ ಭೂಮಿಯನ್ನು ಇನಾಮು ಆಗಿ ನೀಡಿದರು. ಮುಂದೆ ಬಿನಕಯ್ಯನಿಂದ ಬೆಳೆದ ಕುಟುಂಬ ಕವಲೊಡೆಯುತಾದರೂ ಕಲೆಯನ್ನು ಮಾತ್ರ ಕೈಬಿಡಲಿಲ್ಲ. ಬಾನಯ್ಯ, ಕಮಲಯ್ಯ, ಶೇಷಯ್ಯ ಈ ದೃಷ್ಟಿಯಿಂದ ಪ್ರಸಿದ್ಧರು. ವಿಸ್ಮಯ ಮೂಡಿಸುವಷ್ಟು ಕಲಾನಿಪುಣತೆ ಗಳಿಸಿದ್ದರು. ತೈಲಚಿತ್ರ, ಜಲವರ್ಣದ ಚಿತ್ರಗಳೆಲ್ಲ ಸೃಷ್ಟಿಗೊಂಡವು. ಇದಕ್ಕೆಲ್ಲ ಕಾರಣ ಸಂಸ್ಥಾನದ ಪೋಷಣೆ.

4). <u>ಸಂಗೀತ ಕಲೆ :</u>

'ಗೀತ' ವೆಂದರೆ ಹಾಡು ಎಂದರ್ಥ. ಇಂಥ ಗೀತಕ್ಕೆ ಶಾಸ್ತ್ರಬದ್ಧತೆ ಒದಗಿಸಿ ಸುಶ್ರಾವ್ಯ ಸ್ವರಜೋಡಿಸಿದಾಗ 'ಸಂಗೀತ' ಎನಿಸಿಕೊಳ್ಳುತ್ತದೆ. ಶಬ್ದ, ಸಪ್ಪಳ, ಸಿಳ್ಳು ಮುಂತಾದವು ಸಂಗೀತದ ಮೂಲ ಆಕರಗಳಾಗಿರಬಹುದು. ಆದರೆ ಈ ಎಲ್ಲಾ ಶಬ್ದಮಯಗಳಿಗೆ 'ನಾದ' ಮಯತೆ ದೊರೆಸಿದಾಗ ಸಂಗೀತಸುಧೆ ಹೊರಹೊಮ್ಮುತ್ತದೆ.

ಸಾಮವೇದದಲ್ಲಿ ಉಗಮಗೊಂಡ ಸಂಗೀತದ ಲಕ್ಷಣಗಳು ಮುಂದೆ ಭರತನ ನಾಟ್ಯಶಾಸ್ತ್ರದಲ್ಲಿ ಸ್ಪಷ್ಟ 'ಶಾಸ್ತ್ರ' ವಾಗಿ ರೂಪ ಪಡೆಯಿತು. ತರುವಾಯ ರಾಮಾಮಾತ್ಯ, ವಿದ್ಯಾರಣ್ಯ, ಶಾರ್ಙ್ಗದೇವ ಸಂಗೀತಶಾಸ್ತ್ರ ಪ್ರವರ್ತಕರಾದರು.[17]

ಗಾಯನ ಕಲೆಯಲ್ಲಿ ಸಂಸ್ಥಾನದ ಸಾಧನೆ ಸಾಮಾನ್ಯವೇನಿಲ್ಲ. 'ಕಂಠವೀಣ' ಮನೆತನದವರಿಂದ ಪಸರಿಸಿದ ಕೀರ್ತಿ ಅಭಿನಂದನೀಯವಾದದ್ದು. ಅರಮನೆ ಮತ್ತು ವೇಣುಗೋಪಾಲಸ್ವಾಮಿ ಗುಡಿಯಲ್ಲಿ ಆಗಾಗ ನಡೆಯುತ್ತಿದ್ದ ಸಂಗೀತ 'ಕಛೇರಿ' ಯು ಸಂಸ್ಥಾನದ ಸಂಗೀತ ಪ್ರೇಮಿಗಳಿಗೆ ಸಂತಸ ತಂದಿತ್ತು. ಅಲ್ಲದೆ ಕೀರ್ತನಕಾರರು, ನೃತ್ಯಕಲಾವಿದರು ಪಾಲ್ಗೊಳ್ಳುತ್ತಿದ್ದರು. ಆನಂದ ದಾಸರು ಪ್ರತಿನಿತ್ಯ ಸಂಗೀತ ಹಾಗೂ ನೃತ್ಯಪಾಠ ಹೇಳುತ್ತಿದ್ದರೆಂದು ಸಂಸ್ಥಾನದ ದಾಖಲೆಗಳು

---

17. ರತ್ನಶಿವಶಂಕರ — ಸಂಗೀತ, ಪುಟ-7.

ಉಲ್ಲೇಖಿಸಿವೆ. ರಾಮದಾಸ ಮತ್ತು ಕೃಷ್ಣದಾಸರೆಂಬ ದಾಸದ್ವಯರು 'ಹರಿ' ಯ ಸ್ತುತಿಗೀತೆಗಳನ್ನು ಬಹು ಸುಶ್ರಾವ್ಯವಾಗಿ ಹಾಡುತ್ತಿದ್ದರು.

ಕರ್ನಾಟಕದ ದಾಕ್ಷಿಣಾತ್ಯ ಮತ್ತು ಹಿಂದುಸ್ತಾನಿಯ ಔತ್ತರೇಯಗಳನ್ನು ಸುರಪುರದ ಸಂಗೀತಗಾರರು ಅಳವಡಿಸಿಕೊಂಡು ಬಂದರು. 'ಶ್ರುತಿಯೇ ತಾಯಿ, ಲಯವೇ ತಂದೆ' ಎಂಬುದು ಸಂಗೀತಗಾರರ ಸಿದ್ಧಾಂತವಾಯಿತು. ಮುಖ್ಯವಾಗಿ ದೇಶೀಯ ಸೊಗಡು ಒಳಗೊಂಡ ಶೃಂಗಾರ ಸಾಹಿತ್ಯಕ್ಕೆ ಹೆಸರಾದ 'ಜಾವಳಿ' ಗಳು ಸಂಸ್ಥಾನದಲ್ಲಿ ಸದಾ ಹಾಡಲ್ಪಟ್ಟ ಲಘು ಶಾಸ್ತ್ರೀಯ ಹಾಡುಗಳಾಗಿದ್ದವು.

ಅಧ್ಯಾಯ ಆರು chapter-6

ಸಮಾರೋಪ conclusion.

* ಅನುಬಂಧಗಳು Appendic

ಅಧ್ಯಾಯ – ಆರು

ಸಮಾರೋಪ Conclusion

ಅಂತೂ ನಾಡಿನ ಇತಿಹಾಸ ಕಟ್ಟುವಲ್ಲಿ ಇದುವರೆಗೆ ಉಳಿದುಬಂದಿರುವ ಕೊರತೆಯೆಂದರೆ ಅಲ್ಲಿಯ ಸಣ್ಣಪುಟ್ಟ ಸಂಸ್ಥಾನಗಳ ವ್ಯವಸ್ಥಿತ ಅಧ್ಯಯನ ನಡೆಯದೇ ಇರುವುದು. ರಾಜ್ಯ, ಸಾಮ್ರಾಜ್ಯಗಳಸುತ್ತ ಬರೆದ ಬರಹಗಳು ಸಂಪುಟವಾಗಬಲ್ಲವೆ ಹೊರತು; ಸಂಪೂರ್ಣ ಚರಿತ್ರೆಯೆನಿಸವು. ಇತ್ತೀಚೆಗೆ ನಡೆದ ವಿದ್ವಾಂಸರನೇಕರ ತೀವ್ರಪ್ರಯತ್ನಗಳಲ್ಲಿ ಸ್ಥಳೀಯ ಘಟಕಗಳಿಂದಲೇ ಆರಂಭಿಸಿದ ತಲಸ್ಪರ್ಶಿ ಅಧ್ಯಯನಗಳು ಮೇಲಿನ ದೃಷ್ಟಿಕೋನಕ್ಕೆ ಹೊಸ ತಿರುವು ಒದಗಿಸಿವೆ. ಇಂಥ ಪರ್ವಕಾಲದಲ್ಲಿ ಹೊರಬಂದ "ಸುರಪುರ ಸಂಸ್ಥಾನ : ಒಂದು ಅಧ್ಯಯನ" ಮಹಾಪ್ರಬಂಧ ಒಂದು ವಿಶಿಷ್ಟ ಪ್ರಯೋಗ.

"ಹಳೆಯ ಆಕರ ಸಾಮಗ್ರಿಗಳೊಂದಿಗೆ ಹೊಸ ಶೋಧಗಳು ಬೆರೆತ ಪರಿಣಾಮವಾಗಿ ಇಲ್ಲಿ ಅಧ್ಯಯನದುದ್ದಕ್ಕೂ ಕುತೂಹಲ ಕೆರಳಿಸುತ್ತವೆ. ಅಧ್ಯಯನದ ಅನುಕೂಲಕ್ಕಾಗಿ ವಿಂಗಡಿಸಿಕೊಂಡ ಇಲ್ಲಿಯ ಅಂತೂ ಅಧ್ಯಾಯಗಳು ಆಧಾರಸಹಿತ ಸಮರ್ಥನೆಯೊದಗಿಸುವಲ್ಲಿ ಸಾಫಲ್ಯ ಸಾಧಿಸಿವೆ" ಎಂಬುದೆ ನಮ್ಮ ಪ್ರಮಾಣಿಕ ಅನುಭವ. ಇಲ್ಲಿಯ ಕೆಲವು ಪ್ರಧಾನ ಶೀರ್ಷಿಕೆಗಳು ಹಲವು ಅಧೀನ ಶಿರೋನಾಮೆಗಳನ್ನು ಸೇರಿಸಿಕೊಂಡು ತಮ್ಮ ವಿಷಯದ ವೈಶಾಲ್ಯ ಹೆಚ್ಚಿಸಿಕೊಂಡಿವೆ.

ರಾಜಕೀಯ ಚರಿತ್ರೆ :

ಸುರಪುರ ರಾಜ್ಯದ ರಾಜಕೀಯ ಆಳ್ವಿಕೆ ಮೇಲೆ ಹೊಸ ಬೆಳಕು ಚೆಲ್ಲಿದ ಅಧ್ಯಾಯ 'ರಾಜಕೀಯ ಚರಿತ್ರೆ". ಇದರೊಳಗೆ ಅಡಗಿರುವ ಹಲವು ಮಹತ್ವಪೂರ್ಣ ವಿಷಯಗಳೇ ಇದರ ವ್ಯಾಪಕತೆಗೆ ಕಾರಣ. ಕ್ರಿ.ಶ. 1707ರಲ್ಲಿ ಸ್ಥಾಪನೆಗೊಂಡ ಸುರಪುರ ಸಂಸ್ಥಾನದ ರಾಜಕೀಯ ಹೆಜ್ಜೆಗಳು ಬಹು ದೂರದಿಂದ ನಡೆದು ಬಂದವುಗಳಾಗಿವೆ. ಊರಿದ ಪ್ರತಿಯೊಂದು ಹೆಜ್ಜೆಗಳಿಗೂ ನೀಡಿದ ಶಕ್ತಿಗಳ ಸ್ಫೂರ್ತಿ, ಪ್ರೇರಣೆ, ಪರಿಸರಗಳನ್ನೆಲ್ಲ ಹುಡುಕುತ್ತಾ ಹೋದಾಗ ಮೈನವಿರೇಳಿಸುವ ವೃತ್ತಾಂತ ಕಂಡುಬಂತು. ಅದನ್ನೇ 'ರಾಜಕೀಯ ಪರಿಸರ' ಹಾಗೂ 'ಪೂರ್ವಜರ ಪರಂಪರೆ' ಎಂಬ ಶೀರ್ಷಿಕೆ ಅಡಿಯಲ್ಲಿ ಶೋಧಿಸಿದಾಗ "ಕ್ರೂರ ಮೃಗಗಳ ಕಾಡಿನಮಧ್ಯ ಬೇಟೆಯಾಡಿ ಬದುಕುವ

ಬೇಡಜನಾಂಗವೊಂದು 'ಸುರಪುರ' ದಂಥ ಸಂಸ್ಥಾನಕಟ್ಟಿ ಆಳಿತೆ?'' ಎಂಬ ಆಶ್ಚರ್ಯ ತರಿಸುತ್ತದೆ. ಕಾರಣ, ಆಂಧ್ರ ರಾಜ್ಯದ ಒಂದು ಮೂಲೆಯಲ್ಲಿರುವ ಮಡಕಸಿರ ತಾಲ್ಲೂಕಿನ 'ರತ್ನಗಿರಿ' ಎಂಬ ಕುಗ್ರಾಮ ಒಳಗೊಂಡಿದೆ. ಅದುವೆ ಸುರಪುರ ದೊರೆಗಳ ಪೂರ್ವಜರ ಊರು. ಅನ್ನ, ನೀರಿನಂಥ ಹಲವು ಜೀವನಾವಶ್ಯಕತೆಗಾಗಿ ರತ್ನಗಿರಿಯಿಂದ ಹೊರಬಿದ್ದ ಈ ಬೇಡ ಪಡೆಗಳು ಇಂದಿನ ಕರ್ನಾಟಕ ಆಂಧ್ರ ಗಡಿಭಾಗದಲ್ಲಿ ಬೀಡುಬಿಟ್ಟವು. ಅಂದಿನ ಆ ಚಿಂತಾಜನಕ ದಿನಗಳು ತರುವಾಯ ರೋಮಾಂಚನತೆ ತಿರುಗಿದ್ದು ಸ್ವತಂತ್ರ ರಾಜ್ಯಗಳಲ್ಲಿ ಸೇನಾನಿಗಳಾದಾಗ.

ಕಾಕತೀಯ, ಹೊಯ್ಸಳ, ಯಾದವ ರಾಜರ ಸಂಪರ್ಕದಿಂದ 'ರಾಜಕೀಯ' ವೆಂದರೇನೆಂಬ ಆಡಳಿತ ಗುಟ್ಟು ರೂಢಿಸಿಕೊಂಡ ಈ ಬೇಡ ಪಡೆಗಳು ಕಂಪಿಲನ ನೇತೃತ್ವದಲ್ಲಿ ಪಾಳೆಯಗಾರರಾಗಿ ಹೊರಹೊಮ್ಮಿದರು. ಇದು ಆಕಸ್ಮಿಕವಲ್ಲ; ಅಪಾರ ಶ್ರಮಾನುಭವಗಳಿಂದ. ಇದರಿಂದಲೇ ತಮ್ಮ ರಾಜಕೀಯ ಸ್ವ-ಸಾಮರ್ಥ್ಯಕ್ಕೊಂದು ಬೆಲೆ ಕಂಡುಕೊಂಡರು. ತರುವಾಯ ಉತ್ತರದಿಂದ ಏರಿಬರುವ ಮುಸ್ಲಿಂ ದಾಳಿಗಳನ್ನು ತಡೆಯಲೆಂದೇ ತಲೆ ಎತ್ತಬೇಕಾದ ಅನಿವಾರ್ಯತೆ ಬಂದದ್ದು ವಿಜಯನಗರ ಸಾಮ್ರಾಜ್ಯದ ಸಂರಕ್ಷಣೆಯ ಕಾರ್ಯದಲ್ಲಿ. ಕೃಷ್ಣಾನದಿಯ ಮೇರೆಗುಂಟ ಸಾಗಿಬಂದ ಸಗರನಾಡಿನ ನೆರಗಿನಲ್ಲಿ ಮೊದಲು ತಳೂರಿದ ಸುರಪುರದ ಪೂರ್ವಜರು ತಾಳಿಕೋಟೆ ಕದನಾನಂತರ ಆದಿಲ್‌ಶಾಹಿ ಅರಸೊತ್ತಿಗೆಯ ಅಧೀನದಲ್ಲಿ ನೆರೆಕೊಂಡರು. ''ಆಶ್ರಯ ನೀಡಿದ ವಿಜಯನಗರ ಪತನವಾದರೇನು, ತಾನು ಸ್ವಾತಂತ್ರ್ಯ ಸಾರಿಕೊಳ್ಳಬಹುದಿತ್ತಲ್ಲ'' ಎಂಬ ಪ್ರಶ್ನೆಗೆ ವಾಗಿನಗೇರಿ ಮೂಲಕ ಆಡಳಿತ ಮಾಡುತ್ತಿದ್ದ ಸುರಪುರದ ಪೂರ್ವಜರಿಗೆ ಉತ್ತರಿಸುವ ಅರ್ಹತೆಯಿಲ್ಲ. ಯಾಕೆಂದರೆ ವಿಜಯನಗರವನ್ನು ಗೆದ್ದ ವಿಜಯೀ ಸುಲ್ತಾನರನ್ನು ಎದುರು ಹಾಕಿಕೊಂಡು ಬದುಕುವ ಶಕ್ತಿ ಸಾಮಾನ್ಯ ಸಂಸ್ಥಾನಗಳಿಂದ ಸಾಧ್ಯವಿರಲಿಲ್ಲ. ಇವರಿಗಂತೂ ಅಸಾಧ್ಯವೇ ಆಗಿತ್ತು.

''ಹಂಪಿ ಅರಸೊತ್ತಿಗೆಯಿಂದ ಆರಂಭವಾದ ಈ ಅಧೀನ ಸಂಸ್ಕೃತಿ ಅಂತ್ಯದವರೆಗೂ ಅನುಸರಿಸಿಕೊಂಡೇ ಬಂತು. ಸ್ವಾತಂತ್ರ್ಯ ಘೋಷಿಸಿಕೊಂಡು ಬದುಕುವ ಶಕ್ತಿ ಸಂಸ್ಥಾನಕ್ಕೆ ಕೊನೆಯವರೆಗೂ ಸಾಧ್ಯವಾಗಲಿಲ್ಲ'' ಎಂಬ ಸಂಗತಿ ಮೊದಲಬಾರಿಗೆ ಬಹಿರಂಗಪಡಿಸಿದ ಭಾಗ ಇಂತಿದೆ. 'ಗಡ್ಡಿಪಿಡ್ಡನಾಯಕನಿಗಿಂತ ಪೂರ್ವದಲ್ಲಿ ಹಲವರು ಆದಿಲ್‌ಶಾಹಿ ಅರಸರ ಸಂಪರ್ಕದಲ್ಲಿದ್ದರು. ಆದರೆ ಅದು ಜಮೀನುದಾರರಾಗಿ' ಎಂಬುದು ಗಮನಾರ್ಹ. ವಾಗಿನಗೇರಿ ಮೂಲಕ ಎಂದು ಆಡಳಿತ ಆರಂಭ

ವಾಯಿತು. ಅಂದಿನಿಂದಲೇ ಸಂಸ್ಥಾನವೊಂದರ ಸ್ವರೂಪ ಪಡೆದುಕೊಂಡಿತು. ಅದನ್ನು ಇನ್ನಷ್ಟು ಹಿಗ್ಗಿಸಿದ ಕೀರ್ತಿ ಮಾತ್ರ ಹನರಂಗಿ ಪಾಮನಾಯಕನದು.

ಸುರಪುರ ಆಳಿದ ಅಧಿಕೃತ ಅರಸರಲ್ಲಿ ಕೆಲವರೇ ಉತ್ತಮ ಆಡಳಿತ ಒದಗಿಸಿದರು. ಇದನ್ನು ಅವರ 'ರಾಜಕೀಯ' ಹಿಡಿತದ ಮೇಲೆ ನಿರ್ಣಯಿಸಬಹುದು. ಆದಿಲ್‌ಶಾಹಿ ಅರಸರಲ್ಲಿ ಸಾಮಂತಿಕೆ ಸ್ವೀಕರಿಸಿದ ಪ್ರಯುಕ್ತ ಮೊಘಲರ ವಿರುದ್ಧ ಸೈನ್ಯ ಕಳಿಸುವ ಪದ್ಧತಿ ರೂಢಿಗೆ ಬಂತು.

ಸಾಮ್ರಾಜ್ಯ ಅಧಿಪತಿಗಳ ರಾಜ್ಯ ವಿಸ್ತರಣೆಯಲ್ಲಿ ನಡೆದ 'ಬಾಹು ಬಲಗಳ' ಪ್ರದರ್ಶನದಿಂದ ರಾಜಕೀಯ ಸ್ಥಿತ್ಯಂತರ ಆರಂಭಗೊಂಡಿತು. ಮೊಘಲರಿಂದ ಅವಸಾನಗೊಂಡ ಆದಿಲ್‌ಶಾಹಿ ಆ ಅರಸೊತ್ತಿಗೆಯ ಆತಂಕ ಸುರಪುರಕ್ಕೂ ತಟ್ಟಿತು. ಪರಿಣಾಮ ಮೊಘಲರ ಧ್ವಜದಡಿ ಆಸರೆ ಪಡೆಯುವ ಅನಿವಾರ್ಯತೆ ಸಂಸ್ಥಾನಕ್ಕೂ ಬಂದಾಗ ಹಲವು ಸವಾಲುಗಳು ಎದುರಾದವು. ಅವುಗಳನ್ನು ಮೆಟ್ಟಿ ಮುಂದೆ ಸಾಗಲು ಸಹಾಯ ಮಾಡಿದ್ದು 'ಪೇಶ್ವೆ' ಸರಕಾರ. ಮೊಘಲರ ಅಂತ್ಯದ ಬೆನ್ನ ಹಿಂದೆಯೇ ತಲೆ ಎತ್ತಿದ ದಕ್ಷಿಣದ ಎರಡು ಪ್ರಬಲಶಕ್ತಿಗಳೆಂದರೆ ಮರಾಠ ಪೇಶ್ವೆ ಮತ್ತು ಹೈದ್ರಾಬಾದ ನಿಜಾಮ. ಇವರೀರ್ವರಲ್ಲಿ ನಿಜಾಮನ ಆಶ್ರಯ ಬಯಸಿದ ಸುರಪುರ ಹೈದ್ರಾಬಾದನ ಮಡಿಲಿಗೆ ಬಿತ್ತು. ರಾಜ್ಯಾಧಿಕಾರ, ಹಣ ಅಂತಸ್ತುಗಳ ವ್ಯಾಮೋಹದಲ್ಲೇ ಮುಳುಗಿಹೋದ ನಿಜಾಮನಿಗೆ ಸುರಪುರದ ಏಳ್ಗೆ ಬೇಕಿರಲಿಲ್ಲ. ಕಂದಾಯ ಬಾಕಿ ಕಟ್ಟದೆ ಹೋದಾಗ ಬ್ರಿಟಿಷರ ಮಧ್ಯಸ್ಥಿಕೆಯ ಸಖ್ಯಕೋರಿದ ನಿಜಾಮ ಕ್ರಿ.ಶ. 1800 ರಲ್ಲಿ ಒಪ್ಪಂದವೊಂದನ್ನು ಮಾಡಿಕೊಂಡ. ಇದು ಮುಂದೆ ಸುರಪುರಕ್ಕೆ ಮಾರಕವಾಗಿ ನಿಲ್ಲುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಕಂಪನಿ ಸರಕಾರದ ಮುಖ್ಯ ನಿಲುವೆಂದರೆ 'ದೊಡ್ಡಶಕ್ತಿ'ಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳುವ ಮೂಲಕ ಸಣ್ಣ ಶಕ್ತಿಯನ್ನು ಸದೆಬಡಿವುದೇ ಆಗಿತ್ತು.

ರಾಜ ಕೃಷ್ಣಪ್ಪನಾಯಕನ ಆಳ್ವಿಕೆಯಲ್ಲಿ ಮೇಲಿನ ತಪ್ಪು-ಒಪ್ಪುಗಳ ಒರೆಗಲ್ಲು ಸಿದ್ಧವಾಯಿತು. ಕ್ಯಾ. ಗ್ರಿನ್ಲೇಯ ಶಿಫಾರಸುಗಳು ರಾಣಿ-ಈಶ್ವರಮ್ಮಳ 'ರಾಜಕೀಯ' ಜೀವನಕ್ಕೆ ದಿಕ್ಕು ತಪ್ಪಿಸಿದವು. ಇಲ್ಲಿಂದ ಆರಂಭವಾದ ಸಂಸ್ಥಾನದ ದುರಂತ ಅಧ್ಯಾಯ ನಾಲ್ವಡಿ ವೆಂಕಟಪ್ಪನಾಯಕನ ಆಳ್ವಿಕೆಯಲ್ಲಿ ಸಮಾಧಿಗೆ ಸಿದ್ಧವಾಯಿತು. ನೆಪಮಾತ್ರಕ್ಕೆ 'ಬಂಡಾಯ'ದ ಪಟ್ಟಕಟ್ಟಿದ ಕಂಪನಿ ಸರಕಾರವು ಅದರ ಬೇರುಗಳನ್ನು ಗುರುತಿಸಲು ಕ್ಯಾಂಬೆಲನನ್ನು ನೇಮಿಸಿದ ದಿನವೇ ಸುರಪುರದ ಪತನದ ಸೂಚನೆಗಳು ಕಂಡುಬಂದವು. ಪೂರ್ವಯೋಜಿತ ಪಾಪಕಾರ್ಯಗಳಿಂದ ಪಳಗಿದ

ಬ್ರಿಟಿಷರು ಸುರಪುರದ ಮೇಲೆ (ಕ್ರಿ.ಶ. 1858, ಫೆಬ್ರುವರಿ 8 ಮತ್ತು 9) ಹಠಾತ್ತನೆ ಆಕ್ರಮಣ ಮಾಡಿದರು. ಅನಿರೀಕ್ಷಿತ ದಾಳಿಗೆ ತತ್ತರಿಸಿ ಹೋದ ಸಂಸ್ಥಾನ ಪತನವಾಯಿತು; ಅಷ್ಟೇ ಅಲ್ಲ ಅಂದಿನ ರಾಜನನ್ನೇ ರಾಜ್ಯದ್ರೋಹದ ಆಪಾದನೆ ಮೇಲೆ ಬಂಧಿಸಲಾಯಿತು.

ಸಂಸ್ಥಾನದ ಪತನಕ್ಕೆ ಮೂಲ ಕಾರಣಗಳೇನೆಂದು ಹಲವು ನಿಲುವುಗಳಿಂದ ಸಿಂಹಾವಲೋಕನ ಮಾಡಿದಾಗ ಬ್ರಿಟಿಷರು ಹೂಡಿದ ಕುತಂತ್ರವೆಂಬ ಅಂಶ ಬಯಲಾಯಿತು. ನ್ಯಾಯಾಂಗ ವಿಚಾರಣೆಯಲ್ಲಿ ರಾಜ ವೆಂಕಟಪ್ಪನಾಯಕ ನಿರಪರಾಧಿಯೆಂದು ಸಾಕ್ಷ್ಯಾಧಾರಗಳು ಸಾಬೀತು ಪಡಿಸಿದರೂ ಬ್ರಿಟಿಷ ಅಧಿಕಾರಿಗಳು ಬಿಡಲಿಲ್ಲ. ಕಪೋಲ ಕಲ್ಪಿತ ಆರೋಪಗಳನ್ನು ಸೃಷ್ಟಿಸಿ ರಾಜನನ್ನು ಅಪರಾಧಿ ಪಟ್ಟಕ್ಕೆ ಕೂಡಿಸಿದರು. ಸಿಕಂದರಾಬಾದಿನ ನ್ಯಾಯಾಲಯದಲ್ಲಿ ನಡೆದ ಸುರಪುರ ರಾಜನ ಈ ದೀರ್ಘ ವಿಚಾರಣೆಯನ್ನು ಪರಿಶೀಲಿಸಿದಾಗ ಬಹು ಮಹತ್ವಪೂರ್ಣ ಅಂಶಗಳು ಹೊರಬಂದಿವೆ.

“ಭಾರತದ ಸ್ವಾತಂತ್ರ್ಯಕ್ಕಾಗಿ ಕದನ ಕಹಳೆ ಊದಿದ ಉತ್ತರದ ಕ್ರಾಂತಿಕಾರಿಗಳೆಲ್ಲ ನಾನಾ ಸಾಹೇಬನ ನಾಯಕತ್ವ ಒಪ್ಪಿಕೊಂಡಿದ್ದರು. ಅದರಂತೆ ಉತ್ತರ ಕರ್ನಾಟಕದ ಹೋರಾಟಗಾರರು ಸುರಪುರ ವೆಂಕಟಪ್ಪನಾಯಕನನ್ನೇ ತಮ್ಮ ನೇತಾರನೆಂದು ಘೋಷಿಸಿಕೊಂಡಿದ್ದರು” ಎಂಬ ಒಳಮರ್ಮ ಬ್ರಿಟಿಷ ಸರಕಾರ ಅರಿತುಕೊಂಡಿತ್ತು. ಕೊನೆಗೊಮ್ಮೆ ತಮ್ಮ ಸೂರ್ಯ ಮುಳುಗದ ಸಾಮ್ರಾಜ್ಯಕ್ಕೆ ಇವರೀರ್ವರ ಮುಖಂಡತ್ವದಿಂದಲೇ ಕುಂದು ಬರಬಹುದೆಂದು ನಿರ್ಧರಿಸಿದರು. ಕೊನೆಗೆ ಸುರಪುರದ ತರುಣ ರಾಜನನ್ನೇ ಕೊಲೆ ಮಾಡುವ ಮೂಲಕ ತಮ್ಮ ಆಸೆ ತೀರಿಸಿಕೊಂಡರೆಂಬುದೇ ನಮ್ಮ ಪ್ರತಿಪಾದನೆ.

ಪತನಗೊಂಡ ಸಂಸ್ಥಾನದ ‘ರಾಜಕೀಯ’ ಹೋರಾಟ ರಾಜನ ಕೊಲೆಯಲ್ಲಿ ಪರ್ಯವಸಾನಗೊಂಡ ಬಗ್ಗೆ ಕೂಲಂಕುಷವಾಗಿ ದರ್ಶಿಸಲಾಗಿದೆ. ಜೊತೆಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡ ಕರ್ನಾಟಕದ ಕೆಲವು ಸಂಸ್ಥಾನಗಳು ಮತ್ತು ಅವುಗಳೊಂದಿಗೆ ಇದ್ದ ಸುರಪುರದ ಸಂಪರ್ಕವನ್ನು ಸಮಾಲೋಚಿಸಿದ್ದು ನಮ್ಮ ಅಧ್ಯಯನ ಕಂಡುಕೊಂಡ ಹೊಸ ಬೆಳವಣಿಗೆ.

ಆಡಳಿತ ಮತ್ತು ಆರ್ಥಿಕ ಸ್ಥಿತಿ-ಗತಿ:

ಸಗರನಾಡಿನ ಕೊಡೇಕಲ, ಕಕ್ಕೇರಿ ಭಾಗದಿಂದ ಪ್ರಥಮಬಾರಿಗೆ ಪ್ರಾಬಲ್ಯಕ್ಕೆ ಬಂದ ಸುರಪುರದ ಅರಸರು ವಾಗಿನಗೇರಿ ಮೂಲಕ ತಮ್ಮ ವ್ಯಾಪ್ತಿ ವಿಸ್ತರಿಸಿಕೊಂಡರು. ಬಿಜಾಪೂರ

ಬಾದಷಹರ ಕೃಪೆಯಿಂದ ಸಿಕ್ಕಿದ ಸಂಸ್ಥಾನದ ಮೇರೆಗಳನ್ನು 'ಆಡಳಿತ ಪ್ರದೇಶ' ಎಂಬ ಶೀರ್ಷಿಕೆಯಿಂದ ಆರಂಭಿಸಲಾಗಿದೆ.

"ಇಂದಿನ ಕಲಬುರ್ಗಿ ಜಿಲ್ಲೆಯ ಸುರಪುರ, ಶಹಪುರ, ಜೇವರ್ಗಿ, ತಾಲೂಕು ಒಳಗೊಂಡ 'ಸಗರನಾಡು' ಸೀಮೆಗೆ ಮಾತ್ರ ಸಂಸ್ಥಾನದ ವ್ಯಾಪ್ತಿ ಸೀಮಿತವಾಗಿತ್ತು." ಎನ್ನುವ ಇದುವರೆಗಿನ ವಾದವನ್ನು ತಳ್ಳಿಹಾಕಿ, ಗುಲಬರ್ಗಾ, ಬಿಜಾಪೂರ, ರಾಯಚೂರ ಜಿಲ್ಲೆಯ ಹಲವು ಪ್ರದೇಶಗಳು ಸಂಸ್ಥಾನದ ಚೇತನದಲ್ಲಿದ್ದವೆಂದು ಸಾಧಿಸಲಾಗಿದೆ. ಈ ರೀತಿ ಒಳಪಟ್ಟ ಮೇಲಿನ ಪ್ರದೇಶವನ್ನು ಆಡಳಿತದ ಅನುಕೂಲಕ್ಕಾಗಿ ಅನೇಕ "ವಿಭಾಗಗಳಾಗಿ" ಕೊರೆಯಲಾಗಿತ್ತು. ಮುಖ್ಯವಾಗಿ ಕಲಬುರ್ಗಿ, ಸಗರನಾಡು, ವಿಜಾಪೂರ, ರಾಯಚೂರ, ಬಾಗೋಡಿ, ಯಾದಗಿರ ಭಾಗದಲ್ಲಿ ಪರಗಣ, ಸಮತು, ಕಸಬಾ, ಠಾಣೆ, ಕಿಲ್ಲೆಗಳೆಂದು ಸೀಳಲಾಗಿದ್ದು ಪೇಶ್ವೆಗಳ ಪ್ರಭಾವದಿಂದಲೆ ಎನ್ನುವದು ವಿಚಾರಾರ್ಹ. ಕಾರಣ ಸುರಪುರದ ಆಡಳಿತವೆಲ್ಲಾ ಪೇಶ್ವೆ ಸರಕಾರದ ಸೂತ್ರಗಳನ್ನೇ ಅಳವಡಿಸಲಾಗಿತ್ತು. ಮರಾಠಿಯನ್ನು ಆಡಳಿತ ಭಾಷೆಯಾಗಿ ಸ್ವೀಕರಿಸಿದ್ದು ಇದಕ್ಕಿರುವ ತಾಜಾ ಉದಾಹರಣೆ.

ಇಂಥ ವಿಭಾಗಗಳ ಮೇಲೆ 'ಆಡಳಿತರೂಢ ವರ್ಗವನ್ನು' 'ಸಂಬಳದ ವರ್ಗ', 'ಸ್ವತಂತ್ರವರ್ಗ' ವೆಂದು ವಿಂಗಡಿಸಿ ಮಾಡಿದ ವಿಶ್ಲೇಷಣೆಯಂತೂ ಮಾರ್ಮಿಕವಾದುದು. ದಬೀರ, ಹೇಜೀಬ, ದಫ್ತರದಾರ, ಹವಲ್ದಾರ, ಠಾಣದಾರ, ಜಮಾದಾರ ಮುಂತಾದವರು ಸಂಬಳವರ್ಗವೆಂದು, ಜಹಗೀರದಾರ, ಜಮೀನುದಾರ, ಸುಭೇದಾರ, ವತನದಾರ ಹಲವರನ್ನು ಸ್ವತಂತ್ರವರ್ಗವೆಂದು ವಿಭಜಿಸಿ ವಿವೇಚಿಸಿದ್ದು ಅಧ್ಯಯನದ ದಿಸೆಗೆ ಸಿಕ್ಕ ಹೊಸದಾರಿ.

ಸಂಸ್ಥಾನದಲ್ಲಿದ್ದ ಇನ್ನೊಂದು ವಿಶೇಷವೆಂದರೆ 'ಸೈನಿಕವರ್ಗ'. ಇಲ್ಲಿಯ ಸೈನಿಕ ಆಯ್ಕೆ ಪದ್ಧತಿಯೂ ಅಷ್ಟೇ ವಿಶಿಷ್ಟವಾದುದು. ಸಂಸ್ಥಾನದ ಸೈನ್ಯದ ಬಲ ಸಶಕ್ತವಾಗಿತ್ತು. ಹನ್ನೆರಡು ಸಾವಿರ ಮೂಲ ಮೀಸಲು ಬೇಡ ಪಡೆಯಲ್ಲದೆ ಸಿಲೇದಾರ, ರೋಹಿಲರು, ಮರಾಠರು, ಕೋಲುಗಾರರು, ಮಾದಿಗರು ಮೈಯುಬ್ಬಿಸಿ ಯುದ್ಧ ಮಾಡುತ್ತಿದ್ದರು. ಔರಂಗಜೇಬನನ್ನು ವಾಗಿನಗೇರಿಯ ಯುದ್ಧದಲ್ಲಿ ದಂಗುಬಡಿಸಿದ್ದು ಹಾಗೂ ಪಾಂಡಿಚೇರಿ ಯುದ್ಧದಲ್ಲಿ ವಿಜಯ ಸಾಧಿಸಿದ್ದು ಇದೇ ಸೈನ್ಯದಿಂದ. ಸಂಸ್ಥಾನವನ್ನು ಹಗಲಿರುಳು ಸಂರಕ್ಷಿಸುವದರೊಂದಿಗೆ ವೈರಿಗಳ ವಿರುದ್ಧ ಇಲ್ಲಿಯ ಸೈನ್ಯವನ್ನು ಮುನ್ನುಗ್ಗಿಸುವ 'ಸೈನ್ಯಾಧಿಕಾರಿಗಳು' ಹಲವರಿದ್ದರು.

ಸುರಪುರ ಸಂಸ್ಥಾನ ಪತನಗೊಂಡಿದ್ದು ಅನ್ಯಶಕ್ತಿಗಳ ಹಲವು ಆಕ್ರಮಣದಿಂದ ಎಂಬ ಮಾತು ಒಪ್ಪೋಣ. ಆದರೆ ಮುಖ್ಯವಾಗಿ ಆಂತರಿಕ 'ಆರ್ಥಿಕ ನೀತಿಯೇ' ಕಾರಣವಾಗಿತ್ತು ಎಂಬುದು ಮರೆಯುವಂತಿಲ್ಲ. ಸಾಲದ ಹೊರೆಯಿಂದ ಸೊರಗಿಹೋದ ಸಂಸ್ಥಾನದ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿತ್ತು. ಸ್ವತಂತ್ರ ನಾಣ್ಯ ಮುದ್ರಿಸಿ ಸಂಸ್ಥಾನದುದ್ದಕ್ಕೂ ಚಲಾವಣೆಗೆ ತರುವ ತಾಕತ್ತು ಇದಕ್ಕಿರಲಿಲ್ಲ. ಇದರಿಂದ ನಿಜಾಮ ಮತ್ತು ಬ್ರಿಟಿಷರ ನಾಣ್ಯಗಳನ್ನೇ ತನ್ನಲ್ಲಿ ಆಹ್ವಾನಿಸಬೇಕಾಯಿತು. ಗದ್ವಾಲ ನಾಣ್ಯದ ಪ್ರಭಾವವನ್ನು ಮೊಟಕುಗೊಳಿಸಲು ತಮ್ಮ ಟಂಕಸಾಲೆಯಿಂದ ಹೊರತಂದ ಕಂಪನಿ ಸರಕಾರದ ನಾಣ್ಯಗಳು ಪರೋಕ್ಷ ಅಧಿಕಾರ ಪ್ರತಿಪಾದಿಸಿದವು. ಇಲ್ಲಿಯೇ ಗದ್ವಾಲ ನಾಣ್ಯ ಹಾಗೂ ಕಂಪನಿ ನಾಣ್ಯದ ಮೌಲ್ಯದಲ್ಲಿ ವ್ಯತ್ಯಾಸ ತಂದಿಟ್ಟರು.

ಸಂಸ್ಥಾನದ ಕಂದಾಯ ಅಧಿಕಾರ ಪಡೆದ ಜಮೀನುದಾರ ವತನದಾರ, ಜಹಗೀರದಾರರು ಕಂದಾಯದ ವಾರ್ಷಿಕ ಕಾಣಿಕೆ ಕಟ್ಟದೆ ಸಂಸ್ಥಾನವನ್ನು ದುರ್ಬಲಗೊಳಿಸಿದರು. ಕಲ್ಯಾಣ ಯೋಜನೆಗಳು ನೆಲಕಚ್ಚಿ ಹೋಗಲು ಇವರು ಕಾರಣರಾದರು. ಯಾಕೆಂದರೆ ಮಾಡಿದ ಸಾಲ, ಇದ್ದ ಹಿಂದಿನ ಬಾಕಿ ತೀರಿಸಲು ಸಂಸ್ಥಾನದ ಭಂಡಾರದಲ್ಲಿ ಹಣವಿರಲಿಲ್ಲ. ಅದರ ಕೊರತೆ ನೀಗಿಸಲು ಭೂತೆರಿಗೆ, ಮಾರಾಟತೆರಿಗೆ, ವೃತ್ತಿತೆರಿಗೆ, ಗುತ್ತಿಗೆ ತೆರಿಗೆಗಳಿಂದ ಕಂದಾಯವೇನೂ ಸಂಗ್ರಹಿಸಲಾಯಿತು. ಆದರೆ ಕಲ್ಯಾಣ ಯೋಜನೆಗೆ ವ್ಯಯಗೊಳಿಸುವ ಅರ್ಧಪಾಲು ಹಣ ಆಡಳಿತ ಮಂಡಳಿಯ ಸಂಬಳಕ್ಕಾಗಿ ಹಾಗೂ ಸಿರಿವಂತರ ಸಾಲಕ್ಕಾಗಿ ವಿನಿಯೋಗವಾಗತೊಡಗಿತು. ಆಯ-ವ್ಯಯದಲ್ಲಿ ಅಜಗಜಾಂತರ ವ್ಯತ್ಯಾಸ ಬಂದ ಪ್ರಯುಕ್ತ ಸಂಸ್ಥಾನದ ರಾಜ್ಯ ಮತ್ತು ರಾಜನನ್ನೇ ಸಿರಿವಂತರ ಸಾಲಕ್ಕೆ ಒತ್ತೆ ಹಾಕುವ ಪ್ರಸಂಗ ಬಂತು ಎಂದರೆ ತಲೆತಗ್ಗಿಸುವ ವಿಚಾರ. ಆದುದರಿಂದ ಸುರಪುರದ ಬೇಡರ ಬಲಾಢ್ಯ ಶಕ್ತಿಯನ್ನು ಆಡಳಿತ ಹಾಗೂ ಆರ್ಥಿಕ ರಂಗವೇ ದುರ್ಬಲಗೊಳಿಸಿದವು ಎಂಬುದು ನಮ್ಮ ವಾದ.

<u>ಧಾರ್ಮಿಕ ಹಾಗೂ ಸಾಮಾಜಿಕ ವ್ಯವಸ್ಥೆ :</u>

ಎಲ್ಲೂ ಕಾಣದ ವಿಶಿಷ್ಟ ಧಾರ್ಮಿಕ ಪ್ರಕ್ರಿಯೆಯೊಂದನ್ನು ಸುರಪುರ ಸಂಸ್ಥಾನದಲ್ಲಿ ನೋಡುತ್ತೇವೆ. "ಜಾತಿಯಿಂದ ಬೇಡರಾಗಿ ಹುಟ್ಟಿದ ಸುರಪುರದರಸರು ಧರ್ಮದಿಂದ ಬ್ರಾಹ್ಮಣರಾಗಿ ಬೆಳೆದರು". ಆದರೆ ಇತ್ತ ಅವರಿಗಿರುವ ಜಾತಿ ಬೆನ್ನು ಬಿಡಲಿಲ್ಲ; ಅತ್ತ ಶ್ರೀವೈಷ್ಣವರೂ ತಮ್ಮಲ್ಲಿ ಇವರನ್ನು ಕರೆದುಕೊಳ್ಳಲೂ ಇಲ್ಲ. ಇಂಥ ತೂಗುಯ್ಯಾಲೆಯಲ್ಲಿಯೇ ಸುರಪುರ ಸಂಸ್ಥಾನ ಧಾರ್ಮಿಕ ದುರಂತ ಅನುಭವಿಸಿತು.'

ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರ ಪರಂಪರೆಯಲ್ಲಿ ಕೆಳವರ್ಗದ ಹಲವರು ವೀರಶೈವ ಚಳಲನ್ನು ಹೊಕ್ಕರು; ಕೊನೆಗೆ ವಿಲೀನವಾಗಿ ಹೋದರು. ಆದರೆ ಇನ್ನುಳಿದ ಧರ್ಮಗಳು ಕೇವಲ ತಮ್ಮ ಧರ್ಮ ಪ್ರಸಾರಕ್ಕಾಗಿ ರಾಜ್ಯಗಳನ್ನು ಆಶ್ರಯಿಸಿದವೇ ಹೊರತು ಅವರನ್ನು ತಮ್ಮ ಅಂತರಂಗದಲ್ಲಿ ಅರಗಿಸಿಕೊಳ್ಳಲಿಲ್ಲ.

ಶ್ರೀವೈಷ್ಣವ ಸಿದ್ಧಾಂತ ಸೂತ್ರಗಳನ್ನೇ ಪಾಲಿಸಿಕೊಂಡು ಬಂದ ತಿರುಪತಿ ವೆಂಕಟರಮಣ ದೇವಾಲಯದ ಸಂಪ್ರದಾಯಗಳನ್ನು ಸುರಪುರದಲ್ಲಿಯೂ ಜಾರಿಗೆ ತರಲಾಯಿತು. ಅದನ್ನು ವೇಣುಗೋಪಾಲಸ್ವಾಮಿ ಗುಡಿಯಲ್ಲಿ ನೋಡುತ್ತೇವೆ. ಪಾತ್ರದವರು ಮತ್ತು ದಾಸರಿಂದ ನಡೆದ ಇಲ್ಲಿಯ ದೇವರ ಸೇವೆಗಳು ಅರ್ಚಕವರ್ಗದವರ ಅಡಿಯಲ್ಲಿ ಶೋಷಣೆಗೊಂಡರು. ಈ ನರಳಾಟದ ಬಗ್ಗೆ ಕ್ಷ-ಕಿರಣ ಬೀರಿದುದು ಪ್ರಗತಿಪರ ಚಿಂತನೆಯ ವೈಜ್ಞಾನಿಕ ವಿಶ್ಲೇಷಣೆಯಾಗಿದೆ. ಕೊನೆಗೆ ಅದೊಂದು ಧಾರ್ಮಿಕ ಪಿಡುಗೆಂದು ಪರಿಗಣಿಸಲಾಗಿದೆ. ಆದರೆ ಧರ್ಮದ ನಿಜವಾದ ತಿರುಳು ಬೋಧಿಸಿದ ಶರಣರು ಹಾಗೂ ಅವರ ಮಠದ ಧಾರ್ಮಿಕ ಚಟುವಟಿಕೆಗಳು ಸ್ವಾಗತಾರ್ಹ ಸೇವೆ ಮಾಡಿವೆ. ಅದೇ ದಾಸರಲ್ಲಿ ಕಾಣುತ್ತೇವೆಯಾದರೂ ರಾಜಸತ್ತೆಯ ಆಶ್ರಯವನ್ನು ಬೇಕಿಸುವಲ್ಲಿ ಅವರು ಆತ್ಮವಂಚನೆ ಮಾಡಿಕೊಂಡದ್ದು ನಮಗೆ ಅಸಹ್ಯಹುಟ್ಟಿಸುತ್ತದೆ.

ಕೇವಲ ಪ್ರಭುಸತ್ತೆಯ ಆಡಳಿತದ ಘಟನಾವಳಿಗಳನ್ನು ಬಿಂಬಿಸುವುದಷ್ಟೆ 'ಚರಿತ್ರೆ' ಎಂದರೆ ಅದು ತಪ್ಪಾಗುತ್ತದೆ. ಅಲ್ಲಿಯ ಶ್ರೀಸಾಮಾನ್ಯನ ಶ್ರಮಜೀವನವನ್ನು ಪ್ರಮುಖವಾಗಿ ಗಣಿಸಿದಾಗಲೇ ಅದಕ್ಕೊಂದು ಅರ್ಥಬರುತ್ತದೆ. 'ಸಮಾಜ' ದಲ್ಲಿಯ ಗ್ರಾಮ ಘಟಕದ ಸ್ವಯಂ ಸೇವಕರಾದ 'ಆಯಗಾರರು' ಅಪರೂಪದ ಕಲೆಯ ಕಸುಬು ಕೈಗೊಂಡವರು. ವೈಯಕ್ತಿಕವಾಗಿ 'ಅನಿವಾರ್ಯತೆ', ಸಾರ್ವತ್ರಿಕವಾಗಿ 'ಅವಶ್ಯಕತೆ' ಕೊಟ್ಟವರು. ಇಂಥ 12 ರಿಂದ 18 ವೃತ್ತಿಜಾತಿಗಳ ಜೊತೆಗೆ ಪ್ರಧಾನರಾದ ಬೇಡರು, ವೀರಶೈವರು, ಬ್ರಾಹ್ಮಣರು, ಜೇಡರು, ಸಾಳೇರು, ಜೈನರು, ಮುಸಲ್ಮಾನರು ಹೀಗೆ ಮುಂತಾದವರು ಸಂಸ್ಥಾನದಲ್ಲಿ ಸಮನ್ವಯ ಸಾಧಿಸಿಕೊಂಡಿದ್ದರು. ಮನು ಮುಂತಾದವರು ರೂಢಿಸಿಕೊಂಡು ಬಂದ ವರ್ಣಾಶ್ರಮ ವ್ಯವಸ್ಥೆಯ ಎಲ್ಲಾ ಲಕ್ಷಣಗಳು ಇಲ್ಲಿರಬಹುದು. ಆದರೆ ಅವುಗಳ ಜಾರಿಯಲ್ಲಿ ಆದ ತೀವ್ರ ಬದಲಾವಣೆಯ ತಿರುವುಗಳನ್ನು ಲಕ್ಷಿಸಬೇಕು. ಶೂದ್ರ ವರ್ಗದ ಬೇಡರು ಇಲ್ಲಿ ಸಂಸ್ಥಾನದ ಒಡೆಯರು. ಇಂಥವರ ಅಧೀನರು ಬ್ರಾಹ್ಮಣರು ಮತ್ತು ವೀರಶೈವರು. ಇದರಿಂದ

ರಾಜ್ಯದ ಧಾರ್ಮಿಕ ಹಾಗೂ ಸಾಮಾಜಿಕ ರಂಗದ ಮೇಲೆ ಭಾರಿ ಬಿರುಗಾಳಿಯೇ ಬೀಸಿರಬಹುದೆಂಬ ಸಂಶಯಗಳಿಗೆ ಇಲ್ಲಿ ಆಸ್ಪದವಿಲ್ಲ. ಜಾತಿ ಸಂಘರ್ಷದ ಒಂದೂ ಪ್ರಕರಣಗಳೂ ಸಂಸ್ಥಾನದಲ್ಲಿ ಕಂಡುಬರಲಿಲ್ಲವೆಂಬುದೆ ಇದಕ್ಕಿರುವ ಸಾಕ್ಷಿ. ಇದರ ಕೀರ್ತಿ ಸುರಪುರದರಸರಿಗೆ ಸಲ್ಲುತ್ತದೆ. ಆದರೂ ಪುರೋಹಿತ ವರ್ಗದಿಂದ ಉಂಟಾದ ಬೇಡರಲ್ಲಿಯ ಶ್ರೇಣಿಗಳು ಮಾತ್ರ ಅಕ್ಷಮ್ಯವಾದವು.

ಸಂಸ್ಥಾನದ ಆರ್ಥಿಕ ಸ್ಥಿತಿ ಅಭದ್ರವಿದ್ದರೂ, ಅನ್ಯಶಕ್ತಿಗಳ ಅಡಚಣಿ, ಆಕ್ರಮಣಗಳು ಮೇಲಿಂದ ಮೇಲೆ ಎರಗಿದರೂ ಸಾರ್ವಜನಿಕ ಕಲ್ಯಾಣ ಕಾರ್ಯಗಳಿಗೆ ಕಿಂಚಿತ್ತೂ ತೊಂದರೆ ಬಂದಿಲ್ಲ. ಇದ್ದ ಸಂಪನ್ಮೂಲಗಳನ್ನೇ ಬಳಸಿಕೊಂಡ ಸಂಸ್ಥಾನದ ದೊರೆಗಳು ಸಿಂಹಪಾಲು ಸಂಖ್ಯೆಯ ರೈತಾಪಿ ವರ್ಗಕ್ಕೆ ಮೊದಲ ಪ್ರಾಶಸ್ತ್ಯ ನೀಡಿದರು. ಅವರ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಕೆರೆ, ಕಾಲುವೆ, ಬಾವಿಗಳನ್ನು ತೋಡಿಸಿ, ವೈಜ್ಞಾನಿಕ ಬೆಳೆ ತೆಗೆಯಲು ಸಹಾಯಕರಾದರು. ಹಣ್ಣು-ಹಂಪಲು ತರಕಾರಿಗಳಿಗಾಗಿ ತೋಟ ಪಟ್ಟಿಗಳು ಹುಟ್ಟಿಕೊಂಡವು. ಆರೋಗ್ಯಕ್ಕೆ ಆಸ್ಪತ್ರೆ, ಹಳ್ಳಿಗಳಿಗೆ ರಸ್ತೆ ಸೌಲಭ್ಯ ಕಲ್ಪಿಸಲಾಯಿತು. ಇಂಥ ವಿನೂತನ ಪ್ರಯೋಗದ ರೂವಾರಿಗಳು ಮಂತ್ರಿಗಳಾದ ಕಡ್ಲಪ್ಪ ಮತ್ತು ವೀರಪ್ಪನವರು. ಇಂಥ ಮುಖ್ಯ ವ್ಯವಸ್ಥೆಯ ತರುವಾಯ ಬ್ರಿಟಿಷ ಅಧಿಕಾರಿ ಮೆಡೋಸ್ ಟೇಲರನ ಆಡಳಿತೆಯಲ್ಲಿ ಸರ್ವಾಂಗೀಣ ಅಭಿವೃದ್ಧಿ ಕಾಣುತ್ತೇವೆ.

<u>ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆ :</u>

ಪ್ರತಿಯೊಂದು ವಿಷಯಕ್ಕೂ ಸಂಸ್ಥಾನದಲ್ಲಿ ಏನಾದರೂ ಒಂದು ವಿಶೇಷತೆಯಿದೆ. ಸಾಹಿತ್ಯ ಮತ್ತು ಸಂಸ್ಕೃತಿಯ ಚಟುವಟಿಕೆಯಲ್ಲಿ ಅಂಥ ಅನೇಕ ಅಂಶಗಳನ್ನು ನೋಡುತ್ತೇವೆ. ತೆಲುಗು ಮಾತೃಭಾಷೆಯ ಸುರಪುರದ ಅರಸರು ಮರಾಠಿ ಆಳಿತ ಭಾಷೆಯನ್ನು ಹೊಂದಿದ್ದರು. ಆಸ್ಥಾನದಲ್ಲಿದ್ದ ವಿದ್ವಾಂಸರನೇಕರು ಸಂಸ್ಕೃತ ಪಂಡಿತರಾದರೆ, ಕನ್ನಡ ಕಾವ್ಯಗಳ ಕರ್ತರು ಜನಪದರಾಗಿದ್ದರು.

ಸ್ವತಃ ಸಾಹಿತಿಗಳಾಗಿದ್ದ ಅರಸರಲ್ಲಿಯ ಅನೇಕರನ್ನು ಸಮೀಕ್ಷಿಸಲಾಗಿ, 'ಭಾರ್ಗವಪುರಾಣ' ಕರ್ತೃ ರಾಘವ ಪಾಮನಾಯಕನ ಬಗೆಗೆ ಇಲ್ಲಿ ವಿಶೇಷ ಪ್ರಸ್ತಾಪವಿದೆ. ಚರ್ಚೆಯ ವ್ಯಾಪ್ತಿ ವಿಸ್ತರಿಸಿಕೊಂಡು ಕೃಷ್ಣದೇವರಾಯನ ಆಮುಕ್ತಮಾಲ್ಯದೊಂದಿಗೆ ತುಲನೆಮಾಡಿದಾಗ ಅನೇಕ ಹೊಸ ಅಂಶಗಳು ಹೊರಬಂದವು. ಅವುಗಳಲ್ಲಿ ಒಂದಾಗಿ-ಈ ಕೃತಿಯ ನಿಜವಾದ ಕರ್ತೃ ಯಾರು? ಎಂಬ ಪ್ರಶ್ನೆ

ಎತ್ತಲಾಗಿದೆ. ಖಡ್ಗಹಿಡಿದು ಹೋರಾಡುವ ಕರ, ಕಂಠಹಿಡಿದು ಕಾವ್ಯಬರೆಯಬಲ್ಲನೆ? ಅಮೋಘ ವರ್ಷ ನೃಪತುಂಗ, ಕೃಷ್ಣದೇವರಾಯರ ಉದಾಹರಣೆ ಇದಕ್ಕೆ ಅಡ್ಡಬಂದರೂ ಅವುಗಳನ್ನೆಲ್ಲ ಸಾದರ ಪೂರ್ವಕ ದರ್ಶಿಸಿ, ತರ್ಕಿಸುವ ಕ್ರಿಯೆ ಇಲ್ಲಿ ಔಚಿತ್ಯಪೂರ್ಣವೆನಿಸಿದೆ.

ಆಸ್ಥಾನ ಕವಿಗಳ ಕಾವ್ಯ, ತರ್ಕ, ನ್ಯಾಯ, ವೇದ, ಅಲಂಕಾರ, ಛಂದ, ನಾಟಕ, ವ್ಯಾಖ್ಯಾನ ಎಂಬಿತ್ಯಾದಿ ವಸ್ತು ವಿಷಯಗಳ ಮೇಲೆ ವಿಮರ್ಶಾತ್ಮಕ ಸಮೀಕ್ಷೆ ಅವಶ್ಯವಿದೆ. ಆದುದರಿಂದ ಅದನ್ನು ಹಲವು ಕಥಾ-ಕಾವ್ಯಗಳ ನಿಲುವಿನೊಂದಿಗೆ ತೂಗಿ ನೋಡಿದಾಗ, ವೈವಿಧ್ಯಮಯ ಸಾಹಿತ್ಯ ಸೃಷ್ಟಿಸಿದ ಸಂಸ್ಥಾನ ಅದು 'ನಾಡಿಗೆ ನೀಡಿದ ಕೊಡುಗೆ' ಎಂದು ಕರೆಯಲಾಗಿದೆ.

"ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಸಾಗಿಬರುವ ಸಂಪ್ರದಾಯಗಳೆಲ್ಲ 'ಸಂಸ್ಕೃತಿ' ವ್ಯಾಪ್ತಿಯಲ್ಲಿ ಸಮಾವೇಶಗೊಳ್ಳುತ್ತವೆ. ಜೀವನದ ವಿಧಾನದಲ್ಲಿ ಬಂದುಹೋಗುವ ರಸಿಕತೆ, ಸಭ್ಯತೆ, ಕೃತಜ್ಞತೆ, ಕಾರ್ಯಶೀಲತೆ ಹೀಗೆ ಹಲವು ಆದರ್ಶ ಮತ್ತು ಮೌಲ್ಯಗಳನ್ನು ಸಂಸ್ಥಾನದ ಹಬ್ಬ-ಹರಿದಿನ, ಆಟ, ಹಾಗೂ ಜಟ್ಟಿಗಳ ವೈಶಿಷ್ಟ್ಯಗಳು ಪರಿಣಾಮಕಾರಿಯಾಗಿ ಪ್ರತಿಬಿಂಬಿಸುತ್ತವೆ. ವಾಸ್ತುಕಲೆ, ಶಿಲ್ಪಕಲೆ, ಸಂಗೀತಕಲೆ, ಚಿತ್ರಕಲೆಗಳಲ್ಲೂ ವೈವಿಧ್ಯತೆ ಅಳವಡಿಸಿಕೊಂಡ ಸಂಸ್ಥಾನ "ಸಂಗಮಸಂಸ್ಕೃತಿ" ಅನುಸರಿಸಿದೆ.

ವಿಜಯನಗರ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಬಂದ ಸುರಪುರವು ಇವುಗಳಲ್ಲಿ ತನ್ನ ಸವಿಗುಣ ವ್ಯಕ್ತಿಸಿತು. ಅಲ್ಲದೆ ಹಿಂದುಮುಸ್ಲಿಂ ಐಕ್ಯತೆಗೊಳಿಸಲು ಸಮನ್ವಯ ಸಂಸ್ಕೃತಿಗೆ ಹುಟ್ಟುಹಾಕಿತು. ಇದರ ಬಗ್ಗೆ ಸುರಪುರ ದೊರೆಗಳ ಕೋಟೆ, ಕೊತ್ತಲ, ದೇವಾಲಯಗಳು ಅಧ್ಯಯನಯೋಗ್ಯವಾಗಿವೆ.

<u>ಕೊನೆಯ ಮಾತು :</u>

ಇದುವರೆಗೆ ಉಪಲಬ್ಧವಿರುವ ಹಲವು ಹಳೆಯ ಆಕರ ಸಾಮಗ್ರಿಗಳನ್ನೆಲ್ಲ ಇತ್ತೀಚಿನ ಹೊಸ ದಾಖಲೆಗಳೊಂದಿಗೆ ಕ್ರೋಢೀಕರಿಸಿದಾಗ ಸುರಪುರ ಸಂಸ್ಥಾನದ ಸಮಗ್ರ ಪರಿಚಯ ಕೊಡುವ ತಾಕತ್ತು ತಂದು ಕೊಡಲಾಗಿದೆ. ಅದರ ಫಲಶ್ರುತಿಯೇ ಪ್ರಸ್ತುತ ಮಹಾಪ್ರಬಂಧ. ಅಧ್ಯಯನ ದುದ್ದಕ್ಕೂ ಹಲವಾರು ವಿಷಯಗಳು ನನ್ನಲ್ಲಿ ಕುತೂಹಲ ಕೆರಳಿಸಿದವು. ಅಂಥ ಸಂದರ್ಭಗಳಲ್ಲಿ ಎದಂ

ಪ್ರಶ್ನೆಗಳಿಗೆ ಉತ್ತರ ಹುಡುಕುವಾಗ ನನ್ನಲ್ಲೇ ಏರಿಳಿತ ಉಂಟಾದದ್ದು ಸಹಜ. ಆದರೆ ಪ್ರತಿಯೊಂದು ಸಂಗತಿಗಳನ್ನು ಸಂಯಮದಿಂದ ತರ್ಕಿಸಿ, ಚರ್ಚಿಸಿ, ತೂಗಿನೋಡಿ ಇಲ್ಲಿ ಇಡುವಾಗ ಯಾವುದೇ ಪಕ್ಷಪಾತ ಗುಣ ಅನುಸರಿಸಿಲ್ಲ ಎಂಬುದು ಮಾತ್ರ ನನ್ನ ಪ್ರಾಮಾಣಿಕ ಅನಿಸಿಕೆ.

ಅಧ್ಯಯನದ ಅನುಕೂಲಕ್ಕೆ 'ಸಂಸ್ಥಾನ' ದ ಆಕರ, ಪರಿಕರಗಳನ್ನೆಲ್ಲ ಸೀಳಿ, ಸುಲಿದು ಅದರ ಕೇಂದ್ರ ಬಿಂದುವನ್ನು ಪ್ರವೇಶಿಸುತ್ತ ನನ್ನ ಶ್ರಮದಲ್ಲಿ ಸಾರ್ಥಕತೆ ಸಾಧಿಸಿರುವೆನೆಂಬ ತೃಪ್ತಿ ನನಗಿದೆ. ಆದರೂ ಇದು ''ಒಂದು ಅಧ್ಯಯನ'' ವೆಂಬುದು ಮಾತ್ರ ವಾಚಕವರ್ಗ ಎಂದಿಗೂ ಮರೆಯಬಾರದು. ಎಲ್ಲವೂ ಹೇಳಿದ್ದೇನೆ ಎನ್ನುವ ದಾರ್ಷ್ಟ್ಯ ನನಗಿಲ್ಲ. ನನ್ನ ಅಧ್ಯಯನದ ವ್ಯಾಪ್ತಿಯಿಂದ ಸಿಡಿದುಹೋದ, ಚಿತ್ತಗಳಲ್ಲಿ ತೂರಿಹೋದ, ಚರ್ಚಿಸುವಲ್ಲಿಯೇ ಚದುರಿ ಹೋದ ಅನೇಕ ವಿಷಯಗಳನ್ನು ಮುಂದಿನ ಶೋಧಕರಿಗಾಗಿ ಬಿಟ್ಟಿದ್ದೇನೆ. ಯಾಕೆಂದರೆ ಇಲ್ಲಿಯ ಪ್ರತಿಯೊಂದು ಅಧ್ಯಾಯಗಳು ಪ್ರತ್ಯೇಕ ಮಹಾಪ್ರಬಂಧಗೊಳ್ಳಲು ಹಂಬಲಿಸುತ್ತಿವೆ. ಅದಕ್ಕೆ ಬೇಕಾದ ಅಪಾರ ಸಾಮಗ್ರಿಗಳನ್ನು ಒಪ್ಪಿಸಲು ಸಹ ಅವು ಸಿದ್ಧವಾಗಿವೆ. ಈ ಸವಾಲು ಸ್ವೀಕರಿಸುವ ಸಂಶೋಧಕರು ಬೇಗ ಕಾರ್ಯಪ್ರವೃತ್ತರಾಗಲೆಂಬುದೇ ನಮ್ಮ ಮಹಾಪ್ರಬಂಧದ ಆಶಯ.

ooooo

Appendix-1

ಅನುಬಂಧ – 1

ಸುರಪೂರ ಲಾವಣಿ ಅರ್ಥಾತ್ ಬಂಡಾಯದ ಇತಿಹಾಸ[1]

ಏನು ಶಿಸ್ತಿತ್ತು ಸುರಪೂರ । ಎಲ್ಲೆಲ್ಲಿ ಇಲ್ಲ ದರಬಾರ
ಕಾಯಮೆಯಾಯ್ತು ದಸ್ತೂರ । ಮಾಡಿದ ಫಿತೂರ ‖ 1 ‖

ವೆಂಕಟಪ್ಪ ನಾಯ್ಕ ರಣಶೂರ । ರಾಜಾಧಿರಾಜ ಗಂಭೀರ
ಯಾರ್ಯಾರು ಇಲ್ಲ ಅವಗೆದುರ । ದೇಶಕ್ಕೆ ಬಾಳ ಮಂಜೂರ ‖ 2 ‖

ಕಲ್ಲಿನಲ್ಲಿ ಕಟ್ಟಿಸಿದ ಗೋಡೆ । ಮೋರೆತ್ತಿ ಮೇಲಕ್ಕೆ ನೋಡಿ
ಕಟ್ಟಿಸಿದ ಧೋರಿನ ಕೊಂಡಾಡಿ ಶಿರವ ನಲಿದಾಡಿ ‖ 3 ‖

ಚಿತ್ರವಿಚಿತ್ರದಾ ಬಣ್ಣ । ಬಳಿಸಿದರು ಗೋಡೆಗೆ ಸುಣ್ಣ
ನೋಡಲಕ್ಕೆ ನಾಲುವೆರಡು ಕಣ್ಣ । ಸರಿಯುತ್ತೋ ಪುಣ್ಯ ‖ 4 ‖

ದೇವೇಂದ್ರನಂಥ ಸಂಪತ್ತು । ದೇವಾರು ತಂದ ಈ ಹೊತ್ತು
ಯಾರ್ಯಾರಿಗೂ ತಿಳಿಯದಾಗತ್ತು । ಉರವಳಗಿತ್ತು ‖ 5 ‖

ಬಾವಾನ ಬಾವಿಗೆ ಹೇರ್ಯಾ । ಹಾಕಿದರೂ ಊರಿಗೆ ಸಾರ್ಯಾ
ಸುತ್ತುರುಳ್ಯರು ಡಾಕಿಯ ಪಹರೆ । ಫಿರಂಗೇರ ಧೈರ್ಯಾ ‖ 6 ‖

ಕರಿಕ್ಕೆ ಬಂದ ಜಪರಾಶಿ । ಹೊತ್ತಾಯಿತು ಆರುತಾಸ
ಧೊರಿಮಕ್ಕಳ ಸಂಗಡ ಖಾಸ । ಹೊರಟ ಬರಲು ದೇಶಾ ‖ 7 ‖

ಹಣಿ ಮೇಲೆ ನಾಮ ಕಸ್ತೂರಿ । ಕೈಯಾಗ ಹಿಡಿದ ಕಠಾರಿ
ಧೊರಿಹೊಂಟ ಅಂಬಾರಿ ಏರಿ । ಬಂತು ಸವಾರಿ ‖ 8 ‖

ನೀ ಕೇಳು ಧೊರಿ ಸಣ್ಣಾತ । ಜಗಳಾಕ ನಮ್ಮ ಸಂಗಾತ
ಮುಂದಾದಾವ ನೋಡ ಘಾತ । ಮೀರಬೇಡ ಮಾತ ‖ 9 ‖

ಸಣ್ಣ ಮನಷ್ಯರು ಇದ್ದರು ಕೂಡಿ । ಮಸಾಲತ ಮಾಡತಾರ ನೋಡಿ
ಬಲ್ಯಂದಿ ಹೇಳತಾರ ಹಾಡಿ । ಧೊರಿ ಕೇಳಬೇಡ ‖ 10 ‖

---

1. ಹಾಲ್ಗೇರಿ ಚನ್ನಬಸವಯ್ಯ ಮೂಸನೂರ — ಸುರಪೂರ ಬಂಡಾಯದ ಲಾವಣಿ. ಪ್ರಕಾಶಕರು: ರಾಜಗೋಪಾಲಾಚಾರ್ಯ, ಕನಕಗಿರಿ. 1953.

ಶಹರಕ್ಕ ಬರೆದರು ಟಪ್ಪಾ । ಮಾತು ಮಾತಿಗೆ ಹಿಡಿದರು ತಪ್ಪ
ಗಳಿಗಳಿಗೆ ಮಾಡಿದರು ಸಾಥ । ಸುದ್ಧಿ ಬಲುದಪ್ಪ ॥ 11 ॥

ಸಾವಿರ ಮಂದಿ ಸೋಲ್ಜರ । ಬೇಕೆಂಥ ಮಂದಿ ಐನಾರ
ಮೈಸೂರ ಕುದುರಿ ಮುನೂರ್ಯಾರ । ತೋಪು ತಯ್ಯಾರ ॥ 12 ॥

ಜಂಜೀರ ಬಾರ ತುಬಾಕಾ । ತೋಪಿದವೋ ನೋಡು ನಾಕಾ
ಗುಂಡ್ಹಾರಿಸ್ಯಾರು ಮೇಲಾಕ । ಉಡಾಯ್ತು ಬಲು ಠೀಕಾ ॥ 13 ॥

ಎರಡು ದಿವಸಕ್ಕ ಹೊಂಟನು ಶಹರ । ಧೋರಿತಂದ ಕಣ್ಣಿಗೆ ನೀರ
ಎರವಾಯಿತನಗ ಸುರಪೂರ । ದುಕ್ಖಬಲು ಘೋರ ॥ 14 ॥

ಧೋರಿಯನ್ನ ಕಾಳಾ ಪಾಣಿಗೆ ವೈರಿ । ಕುತ್ತಿಗೆ ಹಿಡಿದು ನೂಕರಿ
ಹರಿನೀರ ಮೇಲ ಹಾಕರಿ । ತಪ್ಪು ಬಲುಭಾರಿ ॥ 15 ॥

ಸರಸರಕು ತಿಸ್ತ್ರ ಮುಟಿಗೋಷಿ । ನೇತ್ರಯುಂದ ಎಸ್ತ್ರು ಚಾಪಿ
ತಿಂತಂಬುಲ ವೆಟ್ಟ ಮೋತರು ದಾಥಿ । ಚೌಡರಾಡು ಪಾಪಿ ॥ 16 ॥

ತರಂಗೆ ಜೂಡು ಬಲು ಮಂಗ । ವ್ಯಾಕ್ಹಕ್ಕ ಮು ವೆಟ್ಟೇವಂಗ
ಗುದಲಿಂದ ಇಡುವಡು ಜುಂಗ । ಆಮುಲ್ಯಾನಿ ದೆಂಗ ॥ 17 ॥

ಮರಣಾದನಲ್ಲ ಗುಣವಂತ । ಬಹರಿ ಬಲವಂತ ॥ 18 ॥

ಹೋಲೀಸಿ ಕೆಲಸ ಬಲು ಪುಕ್ಕ । ಇಡತೇವಿ ಹಡಿಬಿಗೆ ರೊಕ್ಕ
ಹೇಳಿದಂಗ ಕೊಡತೀವಿ ಠಕ್ಕ । ಮಾಡತೀವಿ ದುಕ್ಕ ॥ 19 ॥

ವನಪರ್ತಿ ರಾಜನು ನೋಡಿ । ಬಾರೆಂದ ಕರೆದು ಮಾತಾಡಿ
ಊರು ಬಟ್ಟು ಬಂದಿ ಜಗಳಾಡಿ । ಕೇಳೋ ದಂಯುಮಾಡಿ ॥ 20 ॥

ಬಡೆಸಾಬಗೆ ಸುದ್ದಿಯು ಕಳಿಸಿ । ಆ ಗಳಿಗೆ ಸೋಲ್ಜರ ತರಿಸಿ
ವಳವಳಗೆ ಹೇಳಿ ಹಿಡತರಿಸಿ । ಮಾಡಿದರು ಘಾತಿ ॥ 21 ॥

ವೆಂಕಣ್ಣನ ಕರೆಸಿ ಕೊಳೋ । ಭೀಮಾರಾಯನ ಮುಂದೆ ಕೊಳೋ
ರಾಮಣ್ಣನು ಬರ್ರ್ಯಾನ ತಾಳ । ಮನಲತ್ತಿ ಬಾಳ ॥ 22 ॥

ಗೋಪಾಲಸ್ವಾಮಿ ಗೋವಿಂದ । ಮನಸಿಗೆ ಬಂದ ಮುಕುಂದ
ನನಗತಿ ಏನು ಹೇಳು ಮುಂದ । ಸಾಫತೀನಂದ ॥ 23 ॥

ರಂಗಮ್ಮ ಪುಟ್ಟದರಾಣಿ । ಅರಗಿಣಿ ಮಾತಿನ ಜಾಣಿ
ಕಮಲಂತಹ ಕೋಮಲರಾಣಿ । ಅವ್ವ ಬಲು ಜಾಣಿ ॥ 24 ॥

ನಾನ್ಹ್ಯಾಂಗ ಇರತಿ ಸಣ್ಣಕಿ । ಅರಮನಿವಳಗಬ್ಯಾಕಿ
ದೇವರಗಿ ಮಾಡಿತಾಳ ಹರಕಿ । ಧೋರೆಯು ನವನಾಯ್ಕ ॥ 25 ॥

ನಮ್ಮ ಧೋರಿ ಜೀವದಿಂದಿರಲಿ । ಬದುಕಿಗೆ ಬೆಂಕಿ ಹಚ್ಚಲಿ
ದುಕ್ಕಿಟ್ಟನು ಪರಿಪರಿಯಲ್ಲಿ । ಹೆರಗೆ ಮರಿಯ್ತಾರ ॥ 26 ॥

ಹೊಟ್ಯಾಗ ಬೆಂಕಿ ಬದ್ದ್ಯಾಂಗ । ಕಳ್ಳರ ಕೈಲ ಸಿಕ್ಕ್ಯಾಂಗ
ಕಾಲಾಗ್ಯ ಕಲ್ಲ ಬದ್ದ್ಯಾಂಗ । ಕಣ್ಣ ಮುರಿದ್ಯಾಂಗ ॥ 27 ॥

ಬೀಲರ ನಾಯ್ಬನ ತಂದಾ । ಈ ಮಾತು ನಿನಗೆ ಚಂದಾ
ನಾ ನಾಯಲಿಲ್ಲ ಧೋರಿಮುಂದ । ಬಾಳ ಪಸಂದ ॥ 28 ॥

ನನ್ನ ಬೆಂಕಿಯಲ್ಲಿ ಮಯ್ಯಾಹೋ । ಕರೆಬಾವಿ ಹೊಕ್ಕ ಬೀಳಬೇಕು
ಸಂಸಾರ ಏನು ಸುಡಬೇಕು । ಗಂಡ ಇರಬೇಕು ॥ 29 ॥

ಶಕೆ 1780 ವರುಷ । ಕಾಲ ಮುಕ್ತನಾಮ ಸಂವತ್ಸರ
ಮಾಘಮಾಸ ಮಂಗಳವಾರ । ಹೋಯ್ತು ಸುರಪೂರ ॥ 30 ॥

ದಪ್ಪಿನ ಮೇಲೆ ಪದ ಲಾವಣಿ । ಹುಟ್ಟಿತು ನೋಡರಿ ಕಲ್ಯಾಣಿ
ಹಾರ್ಗೇರಿ ಚನ್ನಬಸವಾ ಧಣಿ ಮಾಸನೂರ [illegible] ॥ 31 ॥

00000

ರಾಜಾ ವೆಂಕಟಪ್ಪನಾಯಕನ ದುಂದುಮೆ[2]

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ,
ದುಂದುಮ್ಮೆ ಬಸವಂತನ ಹಬ್ಬ ॥ ಪಲ್ಲ ॥

ಕೇಮಲ ಸಾಹೇಬ ಸುರಪುರಕ ಬಂದು
ಬಾವಾನ ಭಾವೀಯು ಸ್ಥಳದಲ್ಲಿ ಇಳಿದು
ಬುದ್ಧಿವಂತರನೆಲ್ಲ ಬಳಿಯಲ್ಲಿ ಕರೆದು
ನಾನಾ ತರದ ವಿದ್ಯೆ ಮಾಡಿದರು ಪಂದು ॥ 1 ॥

ಕೇಮಾಲ ಸಾಹೇಬ ಬಂದಾನೆಂದು
ಬಾವಾನ ತೋಟಕ್ಕೆ ಡೇರ್ಯಾವ ತಂದು
ಟಿಯಾರಿ ಪಾರಾಸು ಹೊಡಿಯರಿ ಮುಂದು
ತಪ್ಪ ಮಾಡಬ್ಯಾಡ ಜರ್ಲೀ ಹೋಗೆಂದು ॥ 2 ॥

ಮುತ್ತೀನ ಪಲ್ಲಕ್ಕಿ ನೌಬತ್ತು ಬಾಜ
ಕೊತ್ವಾಲ ಹಿಡಿದಾರು ಉತ್ತಮ ತೇಜ
ನಿತ್ಯಮಾಡುತ ನಾವ ಗುರುವೀನಮೂಜ
ನಗರ ಸಾವಿರ ಹಳ್ಳಿ ರೈತರು ರಾಜಿ ॥ 3 ॥

ಸಾಹೇಬನ ಜೊತ್ಯಾಗಿ ಹೋಗ್ಯೋ ವಿನ್ಯಾರ
ಎದುರ ಬಡಿತಾದ ಆನಿ ರುಮಾಲಾ ಜರತಾರಾ
ಕಬ್ಬಣ ಹೊತ್ತಾರ ಹಳೆ ಮಂದಿ ಪೂರಾ
ಹಾರ್ಯರಿ ಬಳುತಾದ ಮರ್ದ ಸುರಪುರಿ ॥ 4 ॥

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ····

ನವಾಬು ಸುಲಿಮಾನಷಾ ಇಬ್ಬರೂ ಕೂಡಿ
ಕೂತ ಜಾಗದಲ್ಲಿ ಏಕಾಂತ ಮಾಡಿ
ಲಡವನ ಸಿಂಗನು ಬರುವುದು ನೋಡಿ
ದೂರಗೊಳ್ಳಗಿ ಹೇಳ್ಯಾರ ಧೈರ್ಯವ ಮಾಡಿ ॥ 5 ॥

---

2. ಪ್ರೊ: ಬಿ·ಆರ್·ಸುರಪುರ (ಸಂಗ್ರಹ) — ನಗರನಾಡ ದರ್ಶನ· ಪುಟ–266–75.

ಬಡೇಸಾಹೇಬನ ಹುಕುಮು ತಂದು
ದೊರೆಯು ಕೈಯೊಳಗ ಕೊಟ್ಟಾರ ಮುಂದು
ಇದರ ಉತ್ತರ ನೀವು ಜಲ್ದ ಹೇಳೆಂದು
ಹೇಳಿದ್ಹಾಂಗ ಬರೆದು ಹಾಕತೇವೆಂದು ॥ 6 ॥

ಪೋಲೀಸು ಕೆಲಸವು ನಮಗೆ ಇರಲೆಂದು
ಇದ್ದ ಹತಿಯಾರಗಳನ್ನು ತಂದಿಡಿರಿ ಮುಂದು
ಮುರಕಿಂತು ದೊಕ್ಕ ಎತ್ತುತ್ತೇವೆಂದು
ಹುಕುಮಂ ನಡಸ್ತೇವಿ ಕೇಳೋನಮುದೊಂದು ॥ 7 ॥

ಪೋಲೀಸು ಕೆಲಸವು ನಾವಿಡೋಣಿಲ್ಲ
ಹತಿಯಾರ ಸಾಮಾನು ನಿಮಗೆ ಕೊಡೋಣಿಲ್ಲ
ಅದರ ಕಾನೂನನು ಕಾರ್ಬಾರಿ ಬಲ್ಲ
ಹೀಗಂತು ಸಾಹೇಬರಿಗೆ ಅಡಿದರು ಎಲ್ಲ ॥ 8 ॥

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೇ....

ಕಾಟಕ ಮಂದೀನ ಅಗಸಿಗೆ ಹಾಕಿ
ಅಗಸಿ ಪಾರ್ಯಾದಲ್ಲ ಇರಬೇಕು ಜ್ವಾಕಿ
ಮೋಸರಿನ ಗಡಿಗ್ಯಾಗ ರುಕ್ಕ ಬರೆದ್ಹಾಕಿ
ರುಕ್ಕ ಹೊಯ್ಯಾರಂಡಿ ಅಗ್ಯಾಕೋ ಪುಕ್ಕ ॥ 9 ॥

ಬೇಡರಿಗೆ ಹಾಕ್ಯಾರ ಸೀಬರುಬಂಡ್ಯಾಗಸಿ
ಟೇರ್ಯಾ ಬಟ್ಟು ಹೂರ ಗುಂಡ ಹಾರಸಿ
ಡೇರ್ಯಾದ ಹಗ್ಗಗಳು ಆಗ್ಯಾವ ಫಾಸಿ
ಬೇಡರು ಮಾಡಿದರು ತಿಳಿಲ್ಲೋ ಫಾಸಿ ॥ 10 ॥

ಆದಿತ್ವಾರುದಯಕ್ಕೆ ಹಾರೀತು ಗುಂಡು
ಕೇಳಿದಾರೋ ಇಲ್ಲೋ ಸಾಹೇಬರ ಬಂಡು
ಹಿಂದಕ್ಕೆ ನಡೆದಾರು ಡೇರೆ ಸುಟ್ಟುಕೊಂಡು
ಕೈಸೆರೆ ಆಗ್ಯಾವು ಚಕಡಿ ಮದ್ದುಗುಂಡು ॥ 11 ॥

ಕಂಪೂನಿ ಲಷ್ಕರು ದಿಗ್ಗೇರಾಯ್ತು
ಹೋಗೋದಕ್ಕ ಹೊತ್ತು ರಾತ್ರಿ ಬಹಳಾಯ್ತು·
ಕೇಮಾಲ ಸಾಹೇಬಗ ಕೋಪ ಬಂದಿತ್ತು
ದಂಡೊಳ್ಗಿ ನಿಂಗದಳ್ಳಿ ಹತ್ತಿರಿಳಿದಿತ್ತು ॥ 12 ॥

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ·····

ಯಾಕೆ ಬಂದೆವು ನಾವು ಬೇಡರ ತಳ್ಳ
ದಂಡೊಳ್ಗಿ ಇಳಿದಿತ್ತು ಅದು ನಿಂಗದಳ್ಳಿ,
ಸುತ್ತ ಮುತ್ತಾ ಹಾಳು ಮಾಡಿದರು ಹಳ್ಳಿ
ತೋಪನ್ನು ಹಚ್ಚಿದರು ವೆಂಕಟಾಪುರ ಕಳ್ಳಿ ॥ 13 ॥

ನಿನ್ನ ಪಾದಕ ಬಂದೆ ಕೊಟ್ಟೂರು ಬಸವ
ಊರ ಸ್ವಾಧೀನ ಮಾಡೋ ನಾ ನಿನ್ನ ಶಿಸುವ
ಇಂಥ ಅರಸರಿಗೆಲ್ಲ ಬಳಸುವೆನು ಕಸವ
ನಿತ್ಯ ಪೂಜೆಗೆ ನಿನಗೆ ಮಲ್ಲಿಗಿ ತುಸುವ ॥ 14 ॥

ಕೊಟ್ಟೂರು ಬಸವಗೆ ತಾ ಬೇಡಿಕೊಂಡ
ಸುರಪುರ ಸ್ವಾಧೀನ ನನಗೆ ಮಾಡೆಂದ
ಮಿತಿಯು ಇಲ್ಲದ ಕಾಯಿ ಹೊಡೆಸುವೆನೆಂದ
ಕೇಮಲ ಸಾಹೇಬ ಮನಸಿನೊಳಗಂದ ॥ 15 ॥

ಸಿಟ್ಟಿಗೇರಿ ಸಾಹೇಬ ಬಟ್ಟ ಕಡಿಕೊಂಡು
ಹಚ್ಚಿದಾನೋ ತೋಪ ''ಬುರ್ಜ'' ನೋಡಿಕೊಂಡು,
ಕದನ ಹತ್ತಿತ್ತು ಬೇಗ ಇದು ಏನು ಬಂಡು
ಹೊರಬಿದ್ದು ಹೋಗುತದ ಸುರಪುರ ದಂಡು ॥ 16 ॥

ಹೇ ದುಂದುಮ್ಮೆ ಎಂದೆಂದು ಹಾಡಿರಿ ಜಾಣರೆ·····

ಎದುರು ದಂಡಿಗ ತಾವು ತೋಪುಗಳ ಹಚ್ಚಿ
ಬಹಾದ್ದೂರ ಮೆಟ್ಟಿದ ಬಂಗಾರದ ಮೋಚ್ಚಿ
ರಣ ಶೂರರಾಯರು ತೇಜಗಳುಚ್ಚಿ
ಕಡದವರಿಗೆ ಕೊಡುವೆನು ಕಂಠಿಸರ ಉಚ್ಚಿ ॥ 17 ॥

ಜೋಕಿನ ಸಾಹೇಬ ತಾ ನಡೆದು ಬಂದ
ಡಂಕಾ ನಿಶಾನಿ ತನ್ನ ಕುದುರಿಗೆ ಹಿಡಿದಾ
ಬೇಗ ಬಂದು ದಂಡು ಕಾವೇರಿ ಕಡಿದಾ
ರೋಹಿಲ್ಯಾನ ಏಟಿಗೆ ಹಿಂದಕ್ಕ ಸಿಡಿದ ॥ 18 ॥

ಕೇಮಾಲ ಸಾಹೇಬ ಶ್ರವಣದಲ್ಲಿ ನಿಂತಾ
ಊರ ತೂಗಬೇಕು ನಮದೊಂದು ಭ್ರಾಂತ:
ಒಂದೇಟಿಗೆ ಸತ್ತನೋ ಸರದಾರ ಇಂಥ
ಸುತ್ತ ದಾರಿಗಳು ಗಡಿಜಾಗಂತ ॥ 19 ॥

ತಲೆಯ ಟೊಪ್ಪಿಗೆ ಎರಡು ಕೈಯಲ್ಲಿ ಹಿಡಿದು
ದೊರೆ ಬಹರಿ ಬಹದ್ದೂರಂಗೆ ಎದುರಾಗಿ ನಡೆದು,
ಮುಂದಿಟ್ಟು 'ಮರ್ಜಿಯ ಸಲಾಮು' ಹೊಡೆದು
ದೊರೆ ನೋಡಿ ದಾಳಿ ಬಂತೆಂದು ನುಡಿದು ॥ 20 ॥

ಹೇ ದುಂದುಮೆ ಎಂದೆಂದು ಹಾಡಿರಿ ಜಾಣರೆ·····

ಕಾಣುತಲೆ ರೋಹಿಲರಿಗೆ ದಂದ್ವಾರ ಕೊಟ್ಟ
ಸಾಹೇಬರ ಬಟ್ಟರಃಕುಲದಲ್ಲಿ ಬಟ್ಟ
ತಲೆಯ ಕೊಯ್ಯುರಂತೆ ಅಪ್ಪಣೆಯ ಕೊಟ್ಟ
ಧೈರ್ಯ ಸಾಲದೆ ಕುಂತಜಾಗ ತಾ ಬಿಟ್ಟ ॥ 21 ॥

ಹಳಿ ಮಂದಿ ಎಲ್ಲಾರು ನಿಂತವರು ನೋಡಿ
ತೆಯ್ಯಾಕ ಇಳಿದಾರ ಪ್ರಾಣಗಳ ಜೋಡಿ
ಒತ್ತಟ್ಟಿ ಆಯಿತು ದಂಡ ಹಿಂದಕ್ಕ ನೋಡಿ
ಕವಲು ಕೊಟ್ಟರು ಸರ್ವರೆಲ್ಲರು ಕೂಡಿ ॥ 22 ॥

ಅಷ್ಟರೊಳಗೆ ತಾನು ಭೀಮರಾಯ ಬಂದು
ಇನ್ನು ಈ ಊರೊಳಗೆ ಇರಬಾರದೆಂದು,
ಶಹರಕ್ಕ ಸಾವ ಹೊಲಗೋಣ ಮುಂದು
ಹುಜೂರದ ಭೆಟ್ಟಿಯ ಮಾಡಿಸುತ್ತೇನೆಂದು ॥ 23 ॥

ರಾಜ ಸಾಹೇಬರಲ್ಲ ರಾಮಣ್ಣ ಬಂದು
ಶಹರದ ದಾರಿ ನೀವು ಹಿಡಿಯಿರಿ ಮುಂದು
ಬಳಿಯುಲ್ಲದ್ದ ವಸ್ತು ನನಗ ತಾರೆಂದು
ನಾನು ಮನೆಗೆ ಹೋಗಿ ಬರುತೀನಿ ಎಂದು ॥ 24 ॥

ಹೇ ದುಂದುಮ್ಮ ಎಂದೆಂದು ಪಾಡಿರಿ ಜಾಣರೆ·····

ನಾಡ ಹುಟ್ಟದ ಮ್ಯಾಕಲೆ ನೋಡಿಲ್ಲಾ ಇಂಥಾ
ದಾವ ಸೂಳಿಮಗನು ಮಾಡ್ಯಾನೋ ಭ್ರಾಂತಾ :
ದೊರೆ ಭೈರಿ ಬಹಾದ್ದೂರ ಭ್ರಾಂತಿಯಾಗಿ ಕುಳಿತ
ಅವ್ವ ಈಶ್ವರವ್ವನ ವರವೀರ ಪುತ್ರ ॥ 25 ॥

ಗೋಪಾಲ ಸ್ವಾಮಿಯ ಗುಡಿಗೆ ತಾ ಬಂದ
ಮನದಿ ಎನ್ನ ಮೇಲೆ ದಯವಿರಲೆಂದ
ಇಂದಿಗೆ ಸುರಪುರ ಎರವಾಯಿತೆಂದ
ಶಹರದ ದಾರೀ ಹಿಡಿದಾನ ಮುಂದ ॥ 26 ॥

ಬೆಳತನಕ ಸಾಹೇಬರು ಮಾಡಿಲ್ಲ ನಿದ್ದ
ದಂಡೀಗಿ ಎದುರಾಗಿ ಹೋಯಿತು ಸುದ್ದ,
ಊರೊಳಗೆ ಯಾರಿಲ್ಲ ಮೇಲಕ್ಕ ಬಾ ಬುದ್ದ
ಕೇಮಲಸಾಹೇಬ ಪುಂಡಾನ ಸಿದ್ದ ॥ 27 ॥

ಮೇಲಕ್ಕ ಬಾರಂತಿ ತಿಳಿವಲ್ದ ಫಾಸಿ
ಮೇಲಕ್ಕ ಬಂದರೆ ಜೀವ ಆದಿತ್ತೋ ಫಾಸಿ
ಹನ್ನೆರಡು ಸಾವಿರಮಂದಿ ತಿದ್ದಿತ್ತೋ ಮೀಸಿ
ಉದಯ ಹೊಂಡದರಾಗ ಹೋಯಿತ್ತಲ್ಲ ಆಶಿ ॥ 28 ॥

ಹೇ ದುಂದುಮ್ಮ ಎಂದೆದು ಪಾಡಿರಿ ಜಾಣರೆ·····

ತೈಬಾರಿ ತಮ್ಮ ಮೊಹಮ್ಮದರ ಊರೊಳಗೆ ಇದ್ದ
ಕೇಮಾಲ ಸಾಹೇಬನ ಪಾದಕ್ಕ ಬಿದ್ದ,
ಸಾಹೇಬನ ಮುಂದೆ ಹೇಳ್ಯಾನ ಸುದ್ದ ಆದದ್ದ,
ಊರೊಳಗೆ ಯಾರಿಲ್ಲ ಹೋಗ್ಯಾರ ಎದ್ದ ॥ 29 ॥

ಎಂಥ ಬಂಟರ ಜಾಗ ಉಪಾಯದಿಂದ್ಹೋಯ್ತೊ
ಹನ್ನೆರಡು ಸಾವಿರ ಹಳೆಮಂದಿ ಏನಾಯ್ತೊ
ಸೋಮಾರದುದಯಕ್ಕ ಎದುರೀಗ ಹೋಯ್ತು
ಬುದ್ಧಿವಂತರಿಲ್ಲದಕ್ಕ ಮುರದ್ಹೋಯ್ತು ॥ 30 ॥

ಕೇಮುಲ ಸಾಹೇಬ ಮೇಲಕ್ಕ ಬಂದಾ
ದಿಬರಿ ಮೇಲಕೆ ನಿಂತು ದುರುಮುಂಜ ನೋಡಿದ
ಇಂಥ ರಾಣಿಗಳು ಸರಿಗಾಣನೆಂದಾ
ಅಪ್ಪಣಿ ಕೊಟ್ಟ್ಯಾನು ಸುಲಗಿ ಮಾಡೆಂದು ॥ 31 ॥

ಬಂದ ಬರುತಲೆ ಸಾಹೇಬ ದರಬಾರ ಹೊಕ್ಕ
ಎಲ್ಲ ನೋಡಿದರಲ್ಲ ಬೆಳ್ಳಿ ಬಂಗಾರ ಬದುಕ
ಏನು ಸೋಜಿಗವೆಂದು ಕೈಬಡಿದು ನಕ್ಕ
ರಾಮಪ್ಪ ರಾಚಪ್ಪ ಕೈಯ್ಯೊಳಗೆ ಸಿಕ್ಕ ॥ 32 ॥

ಹೇ ದುಂದುಮೆ ಎಂದೆಂದು ಪಾಡಿರಿ ಜಾಣರೆ·····

'ಗೋರ ಸಾಹೇಬ' ರೆಲ್ಲ ಬಂದು ಕೂಡಿದರು
ಏನೇನು ಬದುಕೆಂದು ತಾರೀಪ ಮಾಡಿದರು
ಚಕಡಿ ಹೇರಿತಂದು ಮಾತಾನಾಡಿದರು
ತುಂಬ ಭರತಿ ಮಾಡಿ ಎತ್ತ ಹೂಡಿದರು ॥ 33 ॥

ಆನೆ ಕುದುರಿ ಒಂಟೆ ಹರಾಜು ಮಾಡಿದರು
ಮಿಗಿಲಾದ ಬಂಗಾರ ವಸ್ತು ನೋಡಿದರು,
ಬೆಲೆವಾದ ಸಾಮಾನು ಒಂಟೆ ಮ್ಯಾಲ್ಹೇರಿದರು
ಕೇಮುಲ ಸಾಹೇಬನ ಕವಲ ಸಾರಿದರು ॥ 34 ॥

ಮರುದಿವಸ ಉದಯಕ್ಕ ಚಕಡಿಗಳು ಸಾಗಿ
ಊರಿಗಿರಲಿ ಅಂತ ಹೇಳಿದರು ಕೂಗಿ
ದಿವಸ ಪಾಡಿಲ್ಲ ಶಿವರಾತ್ರಿ ಘೋಲಗಿ
ಸುಲಗಿ ನೇರಿತು ಲಿಂಗಸೂರಿಗೆ ಹೋಗಿ ॥ 35 ॥

ಮೂರನೆ ದಿವಸಕ್ಕ ದೊರೆ ಶಹರಕ್ಕ ಹೋದ
ವನಪರ್ತಿ ರಾಜನ ಭೆಟ್ಟಿಯಾಯ್ತು ಅದ;
ಪೈಗಂಬರ ಬಜಾರದೊಳಗೆ ಇಳಿಲಕ್ಕ ಹೋದ
ಮುಂದಿನ ಸಂಗತಿ ತಿಳಿಲಾರದೆ ಹೋದ ॥ 36 ॥

ಹೇ ದುಂದುಮ್ಮಿ ಎಂದೆಂದು ಪಾಡಿರಿ ಜಾಣರೆ·····

ವನಪರ್ತಿರಾಜ ಮಾಡಿದನು ಪಂದು
ದೇವಡಿಯಲ್ಲಿ 'ಪಹರೆ' ಯಾರಿದ್ದೀರೆಂದು
ಸುರಪುರದ ಅರಸನು ಬಂದಾನೆಂದು
ಸಾಲಾರ ಜಂಗನಿಗೆ ತೀವ್ರ ಹೇಳೆಂದು ॥ 37 ॥

ಸಾಲಾರ ಜಂಗ, ದೊರೆ ಬಂದ ಸುದ್ದಿಯು ಕೇಳಿ
ನೋಲ್ಜಂಗೆ ಜಲದಿ ಹೋಗೆಂದು ಹೇಳಿ,
ಸುರಪುರದ ಅರಸನು ಎಲ್ಲ್ಯಾನೆಂದು ಕೇಳಿ
ಅಂಗಡಿ ಮುಂದು ನೋಡ ಆದಿತ್ತು ಹೋಳಿ ॥ 38 ॥

ಮಂಗಳವಾರುದಿಯಕ್ಕ ದೊರೆ ಬಿಟ್ಟ ಊರ
ಖೈಲಿ ಬಹಾದ್ದೂರ್ಯಾತ್ರಕ್ಕ ಗೋಲ್ಕುಂಡ ಶಹರ
ಮುಂದೆ ಹೇಳಿವಿ ನಾವು ಸರ್ದಾರನ ವಿಸ್ತಾರ
ಹಚ್ಚಿ ಬಂದಾನಿವನು ಅಂತರಂಗದ ಫೇರಾ ॥ 39 ॥

ದೊರೀನ ಸದರೀಗೆ ತಂದು ಮಾಡಿದರು ವಿಚಾರ
ದೊಡ್ಡ ಸರದಾರನ ತಲೆ ಹೊಡಿಸಿ ಬಂದೆಲ್ಲೊ ಜೋರ
ಎಂಥಾದುಂ ಮಾಡಿದಿಂ ಕಟ್ಟ ಬೇಂಡಾರ
ಹೊಡಸಿ ಬಿಡುವೆನು ನಿನ್ನ ಜೀವದಿಂದ ಠಾರಾ ॥ 40 ॥

ನಾನು ಹೇಳುವೆನು ಕೇಳೊ ಸರಕಾರ
ಕೆಟ್ಟು ಬಂದೀನಿ ನಾನು ಬಿಟ್ಟು ಸುರಪೂರ
ಕಾರ್ಭಾರಿ ಮಂಡಲನ ಹಿಡಿತರಿಸು ಪೂರಾ
ಮೂರಾರು ಕೋಟಿಯಲ್ಲಿ ಮಾಡೋ ವಿಚಾರ ॥ 41 ॥

ಮುಂದಾಗಿ ಲಡಾಯಿ ನೀ ಮಾಡಿರೆಂದು
ಸತ್ತು ಹೋದನು ದೊಡ್ಡ ಸರದಾರ ಮುಂದು
ಇದಕ್ಕ ಉತ್ತರ ನೀ ಜರಂ ಹೇಳೆಂದು
ಕೋರ್ಟನ ಮಸಲತಿ ಮಾಡತೀವೆಂದು ॥ 42 ॥

ಮುಂದಾಗಿ ಲಡಾಯಿ ನಾನು ಮಾಡಿಲ್ಲ
ಕಾಟಗ ಮಂದ್ರಿಮಾತು ನಾನು ಕೇಳಲ್ಲ
ಲಡಾಯಿಗೆ ಅಪ್ಪಣೆ ನಾನು ಕೊಟ್ಟಿಲ್ಲ
ಆದಂತ ಸುದ್ದಿಯು ಭೀಮರಾಯ ಬಲ್ಲ ॥ 43 ॥

ಬಡೇಸಾಹೇಬ ತಾ ಕೇಳಿ ಸಂತೋಷವಾಗಿ
ಕೋರ್ಟಿನ ಮಸಲತಿ ಮಾಡಬೇಕಾಗಿ
ಟೇಲರ ಸಾಹೇಬ ಸು[illegible]ರ[illegible] ಹೋಗಿ
ಕಾರ್ಭಾರಿ ಜನರನ್ನು ಕಳಸರಿ ಬೇಗ ॥ 44 ॥

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ·····

ಟೇಲರ ಸಾಹೇಬ ದೊರೆ ಬಳಿಗೆ ಬಂದು
ನಾನು ಸುರಪುರಕ್ಕೆ ಹೋಗುವೆನೆಂದು
ಕಾರ್ಭಾರಿ ಜನರನ್ನು ಕಳಿಸುವೆನೆಂದು
ಜವಾಬು ಕೊಡು ನೀನು ಬಹು ಧೈರ್ಯದಿಂದ ॥ 45 ॥

ಟೇಲರ ಸಾಹೇಬ ಸುರಪುರಕ್ಕೆ ಬಂದಾ
ಕಾರ್ಭಾರಿ ಜನರನ್ನು ಶಹರಕ್ಕೆ ನಡಿರೆಂದ
ಕೋರ್ಟಿನ ಜವಾಬು ಮಾಡೀರಿ ಮುಂದಾ
ಜರೂರ ನಿಮ್ಮ ದೊರಿನ್ನ ಉಳಿಸಬೇಕೆಂದಾ ॥ 46 ॥

ಕಾರ್ಭಾರಿ ಮಂಡಳಿಯು ಶಹರಕ್ಕೆ ಹೊರಟು
ಕುದುರೀಗಿ ಹೇರ್ಯಾರ ಹಳಿ ಹಳಿ ತಟ್ಟು
ಶಾಲ್ಯಮುಂಡಾಸನೆಲ್ಲ ಒತ್ತಿಯು ಇಟ್ಟು
ಹೋಗಿ ನಿಂತಾರ ಬಡವೇಷವ ತೊಟ್ಟು ॥ 47 ॥

ಸಾಹೇಬರು ಮಾಡಿದರು ಕೆಲಸವು ಪಕ್ಕಾ
ವ್ಯರ್ಥ ದೊರೆ ಹೋಗಿ ಕೈಸೆರೆ ಸಿಕ್ಕಾ
ಭೀಮರಾಯ ಮಾಡಿದನು ಕೆಲಸವು ಪಕ್ಕಾ
ರಾಮಣ್ಣ ಬರಲೆಂದು ಹೇಳ್ಯಾನ ಠೆಕ್ಕಾ ॥ 48 ॥

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ·····

ಭೀಮರಾಯ ಆಲೋಚನೆ ಮಾಡಿದನು ಬಂದು
ಇನ್ನು ಈ ಮಾತು ನಮಗೆ ಬಂತೆಂದು
ಹೊರಗೆ ಹೇಳುತಾರ ಮಾತು ಮತ್ತೊಂದು
ಹೆದರಬೇಡಿರಿ ಬುದ್ಧಿ ಕರೆದೊಯ್ಯುತ್ವೆಂದು ॥ 49 ॥

ಬುದ್ಧಿ ಹೇಳುವಂತ ತಾಯಿ ತಂದಿ ಇಲ್ಲ
ಕ್ಷುದ್ರ ಮನುಜರ ಮಾತು ನೀ ಬೆಳಸಿದಲ್ಲ
ಹಿರಿಯ ಕಿರಿಯರ ಮಾತು ನೀ ಕೇಳಲಿಲ್ಲ
ಸುರಪುರ ಗೋಪಾಲ ತಾ ಮುನಿದನಲ್ಲ ॥ 50 ॥

ಭೀಮರಾಯನ ಮಾತು ದೊರೆ ತಾನು ಕೇಳಿ
ಸಾಹೇಬರ ಮುಂದ್ಹೋಗಿ ಬದಲು ಮಾತು ಹೇಳಿ
ಕೇಳುತಲೆ ಸಾಹೇಬರು ಕೋಪಾವ ತಾಳಿ
ಚೆನ್ನಪಟ್ಟಣ ದಾಟಿ ಒಯ್ಯಿರಂತೆ ಹೇಳಿ ॥ 51 ॥

ದೊರೆಯನ್ನು ಭೀಮರಾಯ ಕೈಸೆರೆ ಕೊಟ್ಟ
ಮನಸಿನೊಳಗೆ ಇದ್ದ ಚಿಂತೆಯ ಬಿಟ್ಟ
ನಕ್ಕಂತ ಸುರಪುರದ ಹಾದ್ಹಿಡಿದು ಹೊಂಟ
ದಾಲತ್ತು ಇವ ಹಾಳು ಮಾಡಿದನು ತೊಂಟ ॥ 52 ॥

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣೆ·····

ವೆಂಕಟಪ್ಪ ನಾಯ್ಕಂದು ಭೀತಿ ಬಾಳಿತ್ತು
ಸುತ್ತ ದೇಶದ ಜನ ನಡುಗುತಲಿತ್ತು
ಹಳೆ ಮಂದಿ ಉಜರತ್ತು ಭರಪೂರ ಇತ್ತು
ವೆಂಕಟರಮಣನ ದಯವು ತಪ್ಪಿತ್ತು ॥ 53 ॥

ವೆಂಕಟಪ್ಪ ನಾಯಕ " ಮೃಗಜಾತಿ ಶೂರ"
ಕೇಳಿ ಇದಿಲ್ಲ ಇಂಥ ಸರದಾರ
ಒದಗಿ ಬಂದಿತು ಬೇಗ ಕಂಪನಿ ಸರಕಾರ
ಸ್ಥಿರವಾಗಿ ಇರಲಿಲ್ಲ ಮುಂದಿನ ವಿಸ್ತಾರ ॥ 54 ॥

ಫಾಲ್ಗುಣ ಪ್ರತಿಪದ ಹುಡುಗರು ಕೂಡಿ
ಹತ್ತಾದ ಕಾಮನ ಬೂದಿ ಚೆಲ್ಲಾಡಿ
ಮಿತಿಯನಿಲ್ಲದ ಹೋಳಿ ಪದಗಳ ಹಾಡಿ,
ರತಿದೇವಿ ರಮಣನ ಬೂದಿ ಚೆಲ್ಲಾಡಿ ॥ 55 ॥

ಆದಿ ಅಂತ್ಯ ಹಿಡಿದು ಪದಗಳ ಪಾಡಿ
ಬುದ್ಧಿವಂತರ ಮುಂದ ಕರ ಮುಗಿದು ಬೇಡಿ
ಪರೀಕ್ಷೆ ಮಾಡಿರಿ ದೈವ ಒಂದೊಂದು ನೋಡಿ
ತಪ್ಪು ಕ್ಷಮೆ ಮಾಡಿರಿ ಶಿಶುವಿನ ನೋಡಿ ॥ 56 ॥

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ·····

ಭರದಿಂದ ಕರತಂತು ಇದು ಮಾಘಮಾಸ
ಭರದಿಂದ ಒದಗೀತು ಫಾಲ್ಗುಣ ಮಾಸ
ಬರೆದಂಥ ಪದಗಳು ಮನಕೆ ಉಲ್ಲಾಸ
ಧರೆಯೊಳು ವಾಗಣಗೇರಿ "ಗೋಪಾಲದಾಸ" ॥ 57 ॥

ಮಂಗಲಮಸ್ತು ಶ್ರೀ ಗೋಪಾಲನಿಗೆ
ಮಂಗಲಮಸ್ತು ಶ್ರೀದೇವಿಯರಿಗೆ
ಮಂಗಲಮ್ ನಮೋಸ್ತು ಕೋಶಲರಾಜನಿಗೆ
ಮಂಗಲಮಸ್ತು ರತಿಯ ರಮಣಗೆ

ಹೇ ದುಂದುಮ್ಮೆ ಎಂದೆಂದು ಪಾಡಿರಿ ಜಾಣರೆ
ದುಂದುಮ್ಮೆ ಬಸವಂತನ ಹಬ್ಬ ॥

Appendix 3

ಅನುಬಂಧ – ಮೂರು

ಆಕರ ಸಾಮಗ್ರಿ ಸೂಚಿ

Bibliography

1) ಕನ್ನಡ ಕೃತಿಗಳು :

1. ಅಕ್ಕಿ ಡಿ.ಎನ್. —ಶಹಪುರ ತಾಲೂಕಾ ದರ್ಶನ
ಐ.ಬಿ.ಎಚ್. ಬೆಂಗಳೂರು, 1986.

2. ಆನಂದರಾವ್ —ಮುಂಡರಗಿಯ ಗಂಡುಗಲಿ (ನಾಟಕ)
ಪುರಂದರ ಪ್ರಕಟನಾಲಯ, ಧಾರವಾಡ, 1962.

3. ಇಮ್ರಾಪುರ ಸೋಮಶೇಖರ —(ಸಂ) ಜಾನಪದ ಸಾಹಿತ್ಯ ದರ್ಶನ, ಭಾಗ-17
ಜನಾಂಗೀಯ ಅಧ್ಯಯನ,
ಕವಿವಿ, ಧಾರವಾಡ, 1993.

4. ಈಶ್ವರಪ್ಪ ಎಂ.ಜಿ. —ಮ್ಯಾಸಬೇಡರು
ಐಬಿಎಚ್ ಪ್ರಕಾಶನ, ಬೆಂಗಳೂರು, 1988.

5. ಉಮರಾಣಿ ಈಶ್ವರಪ್ಪ —ಮಹಾತ್ಮಶ್ರೀ ಚರಬಸವೇಶ್ವರ ಚರಿತ್ರೆ
ಚ.ಬ.ವಿ.ವಿ.ಸಂಸ್ಥೆ, ಶಹಪುರ, 1977.

6. ಎಚ್ಚೆಸ್ಕೆ —(ಸಂ) ದಾಸ ಸಾಹಿತ್ಯ ದರ್ಶನ
ಮಂಗಳಭಾರತಿ, ಮೈಸೂರು. 1984.

7. ಎಚ್ಚೆಸ್ಕೆ —ಶ್ರೀರಾಮಾನುಜ.
ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು, 1971.

8. ಕಳ್ಳೀಮನಿ ಬಸವರಾಜ —ಸಂಗೊಳ್ಳಿ ರಾಯಣ್ಣ
ಭಾರತ-ಭಾರತಿ ಪುಸ್ತಕ ಸಂಪದ, ಬೆಂಗಳೂರು, 1973

9. ಕಟ್ಟಿ ರಾಘವೇಂದ್ರ —(ಸಂ) ಸಾಹಿತ್ಯಸುಧೆ (ಪ್ರಬಂಧ ಸಂಕಲನ)
ಕನ್ನಡ ಸಾಹಿತ್ಯ ಸಂಘ, ಸುರಪುರ, 1964.

10. ಕಪಟರಾಳ ಕೃಷ್ಣರಾವ್ —ಸುರಪುರ ಸಂಸ್ಥಾನ ಇತಿಹಾಸ
ಮಂಜುನಾಥ ಪ್ರಕಾಶನ, ರಾಜಾಜಿನಗರ,
ಬೆಂಗಳೂರು, 1977.

11. ಕವರಿ ವಸಂತ — ಭಾರತೀಯ ಸಂಗೀತಕ್ಕೆ ಕರ್ನಾಟಕದ ಕೊಡುಗೆ
ಐ.ಬಿ.ಎಚ್.ಪ್ರಕಾಶನ, ಬೆಂಗಳೂರು, 1976

12. ಕಲಬುರ್ಗಿ ಎಂ.ಎಂ. — (ಸಂ) ಸಾರಂಗಶ್ರೀ (ಸ್ಮರಣ ಸಂಚಿಕೆ)
ಸಾರಂಗಮಠ ಸಿಂದಗಿ, 1995

13. ಕಾಮತ ಸೂರ್ಯನಾಥ — ಕರ್ನಾಟಕ ಇತಿಹಾಸ ಕಥಾಮಂಜರಿ
ಹಂಸಧ್ವನಿ ಪ್ರಕಾಶನ, 1973.

14. ಕುಲಕರ್ಣಿ ನಾರಾಯಣರಾವ್ — ಬಿಜಾಪುರ
ಐ.ಬಿ.ಎಚ್.ಪ್ರಕಾಶನ, ಬೆಂಗಳೂರು, 1988

15. ಕೃಷ್ಣಶರ್ಮಾ ಬೆಟಗೇರಿ — ಕರ್ನಾಟಕದ ಜನಜೀವನ
ಸಮಾಜ ಪುಸ್ತಕಾಲಯ, ಧಾರವಾಡ, 1971.

16. ಕೃಷ್ಣ ಎ. — (ಪ್ರ.ಸಂ) ನಗರನಾಡ ದರ್ಶನ (ಸ್ಮರಣ ಸಂಚಿಕೆ)
ಮಹಾಕವಿ ಲಕ್ಷ್ಮೀಶ, ವಾಚನಾಲಯ, ಸುರಪುರ, 1985.

17. ಕೃಷ್ಣರಾಯ ಅ.ನ. — (ಸಂ) ಭಾರತೀಯ ಸಂಸ್ಕೃತಿ ದರ್ಶನ
ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆ,
ಮೈಸೂರು, 1962.

18. ಕೊಡದ ಎಸ್.ವಿ. — ವಿಜಯನಗರದ ನಿರ್ಣಾಯಕ ಯುದ್ಧ
ಪ್ರಸಾರಾಂಗ ಕವಿವಿ, ಧಾರವಾಡ.

19. ಕೊರಟಿ ಶ್ರೀನಿವಾಸ — ಮುಂಡರಗಿ ಭೀಮರಾಯ
ಭಾರತ-ಭಾರತಿ ಪುಸ್ತಕ ಸಂಪದ, ಬೆಂಗಳೂರು, 1978.

20. ಗೋಪಾಲ ಬಾ.ರಾ. — ಕಾವಲುಗೋಡೆ
ಪುಸ್ತಕ ಚಿಲುಮೆ, ಮೈಸೂರು, 1960.

21. ಚಿದಾನಂದ — ವಾಲ್ಮೀಕಿ
ಪ್ರತಿಮಾ ಮುದ್ರಣ, ಧಾರವಾಡ, ಸಿ 1956.

22. ಜುಳಕಿ ಆರ್.ಎಸ್. — ಮಡಿವಾಳನ ಬೀರನ ಜೀವನ ಹಾಗೂ ಕೃತಿಗಳು
ಕನ್ನಡ ಸಾಹಿತ್ಯ ಸಂಘ, ರಂಗಂಪೇಟೆ, 1989.

23. ಜುಳಕಿ ಆರ್.ಎಸ್. — ಋಣಾನುಬಂಧ (ನಾಟಕ)
ಕನ್ನಡ ಸಾಹಿತ್ಯ ಸಂಘ, ರಂಗಂಪೇಟೆ, 1989.

24. ಜೋಶಿ ವೆಂ.ಮಾ. —ನರಗುಂದ ಬಾಬಾಸಾಹೇಬ
ಭಾರತ-ಭಾರತಿ ಪುಸ್ತಕ ಸಂಪದ, ಬೆಂಗಳೂರು, 1965

25. ಢಂಗ ಡಿ.ಬಿ. —ಜನಾಂಗ ಪರಿಚಯ
ವೆರಿಂಯೂರ ಪ್ರಕಾಶನ, ಧಾರವಾಡ, 1988.

26. ತೆಲಗಾವಿ ಲಕ್ಷ್ಮಣ —(ಸಂ) ಹರತಿಸಿರಿ (ಅಭಿನಂದನಗ್ರಂಥ)
ವಾಲ್ಮೀಕಿ ಸಾಹಿತ್ಯ ಸಂಪದ, ಚಿತ್ರದುರ್ಗ, 1987.

27. ದಿವಾಕರ ಆರ್.ಆರ್. —(ಸಂ) ಕರ್ನಾಟಕ ಪರಂಪರೆ. (ಸಂಪುಟ-1)
ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಇಲಾಖೆ,
ಮೈಸೂರು, 1970.

28. ದೀಕ್ಷಿತ ಜಿ.ಎಸ್. —(ಮೂಲ: ತಾರಾಚಂದ) ಭಾರತದಲ್ಲಿ ಸ್ವಾತಂತ್ರ್ಯ
ಚಳುವಳಿ. ಸಂಪುಟ-1.
ಕವಿವಿ, ಧಾರವಾಡ, 1992.

29. ಧುತ್ತರಗಿ ಪಿ.ಬಿ. —ಸುರಪುರದ ವೀರ ವೆಂಕಟಪ್ಪನಾಯಕ
(ನಾಟಕದ ಹಸ್ತಪ್ರತಿ)
ಹನಮಸಾಗರ, 1989.

30. ದೇಸಾಯಿ ಪಾಂಡುರಂಗರಾವ್ —ಮದಗಜ ಮಲ್ಲ
ಲಲಿತ ಸಾಹಿತ್ಯ ಮಾಲಿ, ಧಾರವಾಡ, 1951.

31. ನರಸಿಂಹಮೂರ್ತಿ ಎ.ವಿ. —ಕರ್ನಾಟಕ ನಾಣ್ಯ ಸಂಪತ್ತು
ಐ.ಬಿ.ಎಚ್ ಪ್ರಕಾಶನ, ಬೆಂಗಳೂರು, 1974.

32. ನಾಯಕ ಎ.ಆರ್. —ಸಗರನಾಡಿನ ಬೇಡರ ಸಂಪ್ರದಾಯಗಳು
(ಎಂ.ಫಿಲ ಪ್ರಬಂಧ) ಗುಲಬರ್ಗಾ ವಿ ವಿ., 1991.

33. ನಾರಾಯಣ ಪಿ.ಎಸ್. —ಕರ್ನಾಟಕ ಮೊದಲ ಸ್ವಾತಂತ್ರ್ಯ ಸಂಗ್ರಾಮ
ಐ.ಬಿ.ಎಚ್.ಪ್ರಕಾಶನ ಬೆಂಗಳೂರು, 1981.

34. ನಿರಂಜನ —(ಅನು) ಸಂಗಮ ರಾಜಕೀಯ, ಸಾಮಾಜಿಕ ವ್ಯವಸ್ಥೆ
ಕನ್ನಡ ಅಧ್ಯಯನಸಂಸ್ಥೆ, ಮೈಸೂರು ವಿ ವಿ,
ಮೈಸೂರು, 1979.

35. ಪಡಶೆಟ್ಟಿ ಎಂ.ಎಂ. —ತಿಂಥಣಿ ಮೋನಪ್ಪಯ್ಯ. (ಪಿಎಚ್.ಡಿ ಪ್ರಬಂಧ)
ವೀರಶೈವ ಅಧ್ಯಯನಸಂಸ್ಥೆ, ಗದಗ, 1993.

36. ಪರಿಮಾರ್ಕರ ನಾಯಕ — ಸುರಪುರದ ವೆಂಕಟಪ್ಪನಾಯಕ
ಭಾರತ-ಭಾರತಿ ಪುಸ್ತಕ ಸಂಪದ, ಬೆಂಗಳೂರು, 1976.

37. ಫಿಲಿಯೋಜಾ ವಸುಂಧರಾ — ವಿಜಯನಗರ ಸಾಮ್ರಾಜ್ಯದ ಸ್ಥಾಪನೆ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1980.

38. ಪೂಜಾರ ವಿ.ಜಿ. — ನಿಷ್ಠೆ ಕಡ್ಲಪ್ಪ ಮತ್ತು ವೀರಪ್ಪನವರು
ವೀರಶೈವ ಅಧ್ಯಯನಸಂಸ್ಥೆ, ಗದಗ, 1984.

39. ಬೋಲನ್ನಾಳ ಭೀಮಣ್ಣ — ಸುರಪುರದ ವೆಂಕಟಪ್ಪನಾಯಕ (ನಾಟಕ)
ಶ್ರೀರಾಮಾಂಜನೇಯ ಪ್ರಕಾಶನ ಕಲಬುರ್ಗಿ, 1985.

40. ಮಂಜಯ್ಯ ಸ. — (ಅನು) ಆಧುನಿಕ ಭಾರತದ ನಿರ್ಮಾಪಕರು
ರವಿಶಂಕರ ಪಬ್ಲಿಕೇಶನ್ ಬೆಂಗಳೂರು, 1979.

41. ಮಾಧವನವರ ದೇವೇಂದ್ರ — ಕನಕದಾಸರು ಬೇಡ ಜನಾಂಗದವರು
ಚಾಲುಕ್ಯಪ್ರಕಾಶನ, ಬದಾಮಿ, 1992.

42. ರಂಗದಾಸ ಸ.ನಿ.ಪ್ರ. — ಶ್ರೀ ವಾಲ್ಮೀಕಿ ದರ್ಶನ ಮತ್ತು ಅವರ ಧರ್ಮಸಂದೇಶ
ವಾಲ್ಮೀಕಿ ಸಾಹಿತ್ಯ ಸಂಪದ, ಬೆಂಗಳೂರು, 1973.

43. ರಂಗರಾಜ ವನದುರ್ಗ — ಹರಿಹರನ ಸಾಂಸ್ಕೃತಿಕ ಲೋಕ
ಪ್ರಜಾರಾಜ ಪ್ರಕಾಶನ, ವನದುರ್ಗ, 1979.

44. ರಾಮಣ್ಣ ಕಾಕ್ಯತನಹಳ್ಳಿ — (ಸಂ) ಕಿಟ್ಟೆಲರು ಸಂಗ್ರಹಿಸಿದ ಐದು ಐತಿಹಾಸಿಕ
ಲಾವಣಿಗಳು.
ಕನ್ನಡ ಅಧ್ಯಯನಸಂಸ್ಥೆ, ಮೈಸೂರು ವಿ ವಿ,
ಮೈಸೂರು, 1972.

45. ರಾಮಣ್ಣ ಕಾಕಿತನಹಳ್ಳಿ — ಹಲಗಲಿಯ ಬೇಡರು (ನಾಟಕ)
ಅಚ್ಚಿಹೂರೀತಿಗೆ, ಕಾಕ್ಯತನಹಳ್ಳಿ ಮಂಡ್ಯ, 1988.

46. ರಾಮಚಂದ್ರರಾವ್ ಎಸ್.ಕೆ. — ತಿರುಪತಿ ತಿಮ್ಮಪ್ಪ
ಐ.ಬಿ.ಎಚ್.ಪ್ರಕಾಶನ, ಬೆಂಗಳೂರು, 1980.

47. ರಾಮಶೇಷನ್ ನಿ.ಕೃ. — ಕರ್ನಾಟಕದ ಕೋಟೆಕೊತ್ತಲಗಳು
ಐ.ಬಿ.ಎಚ್.ಬೆಂಗಳೂರು, 1980.

48. ರಾಮರಾಯ ಸಮೇತನಹಳ್ಳಿ —(ಅನು) ಟಿಪ್ಪು ಸುಲ್ತಾನನ ಇತಿಹಾಸ
ಕನ್ನಡ ಅಧ್ಯಯನಸಂಸ್ಥೆ, ಮೈಸೂರು, 1988.

49. ರಾಮಾಚಾರ್ಯ ಅದ್ಯ —ಮಹಿಪತಿದಾಸರು
ಭಾರತ-ಭಾರತಿ ಪುಸ್ತಕ ಸಂಪದ, ಬೆಂಗಳೂರು, 1988.

50. ರಾಜ ಕೆ.ಎಸ್.ನಂದಿ —ಜೇವರ್ಗಿ ತಾಲ್ಲೂಕು ದರ್ಶನ
ಐ.ಬಿ.ಎಚ್.ಪ್ರಕಾಶನ, 1986.

51. ರಾಜ ಪುರೋಹಿತ ಜಯತೀರ್ಥ —ಸುರಪುರದ ಶೂರ ನಾಯಕರು
ಐ.ಬಿ.ಎಚ್ ಪ್ರಕಾಶನ, ಬೆಂಗಳೂರು, 1973.

52. ರಾಜಣ್ಣ ಆರ್. —ನಾಯಕ ಜನಾಂಗದ ಇತಿಹಾಸ
ಮೈಲಾರ ಮುದ್ರಣಾಲಯ, ಚಿತ್ರದುರ್ಗ, 1982.

53. ರುದ್ರಸ್ವಾಮಿಮಠ ರೇವಣಸಿದ್ಧಯ್ಯ —ಸುರಪುರ ತಾಲ್ಲೂಕ ದರ್ಶನ
ಐ.ಬಿ.ಎಚ್ ಪ್ರಕಾಶನ, ಬೆಂಗಳೂರು, 1986.

54. ರುದ್ರಸ್ವಾಮಿಮಠ " —ರಕ್ತಾಭಿಷೇಕ (ನಾಟಕ)
ಕನ್ನಡ ಸಾಹಿತ್ಯ ಸಂಘ, ರಂಗಂಪೇಟೆ, 1975.

55. ಲಲಿತಾನಾಯಕ ಬಿ.ಟಿ. —ದೇವದುರ್ಗ ತಾಲೂಕ ದರ್ಶನ
ಐ.ಬಿ.ಎಚ್ ಪ್ರಕಾಶನ, ಬೆಂಗಳೂರು, 1986.

56. ವೀರನಾಯಕ ಎಚ್.ವಿ. —ಕ್ಷಾತ್ರಾಂಶ ಪ್ರಬೋಧ,
ವಾಲ್ಮೀಕಿ ಸಾಹಿತ್ಯ ಸಂಪದ, ಹತ್ತಿಕೋಟೆ, 1987.

57. " " —(ಸಂ) ಬಿಡುಗತ್ತಿ
ಅಖಿಲ ಕರ್ನಾಟಕದ ನಾಯಕ ಸಮಾಜದ
ತೃತೀಯ ಸಮ್ಮೇಳನದ ಸ್ಮರಣ ಸಂಚಿಕೆ, 1989.

58. " " —ರಾಷ್ಟ್ರಸೇವೆಯಲ್ಲಿ ನಾಯಕ ಜನಾಂಗ
ನಾಯಕ ಸಮ್ಮೇಳನ ಬೆಂಗಳೂರ ವರದಿ, 1971.

59. ಶಂಕರಮೂರ್ತಿ ಎಂ.ಆರ್. —ವಾಗ್ಗೇಯಕಾರರು
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1980.

60. ಶರ್ಮಾ ತಿ.ತಾ. —ಚಾರಿತ್ರಿಕ ದಾಖಲೆಗಳು
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1971.

61. ಶರ್ಮಾ ತಿ.ತಾ. —ಕರ್ನಾಟಕ ಸ್ವಾತಂತ್ರ್ಯ ಸಂಗ್ರಾಮ.
ಪುರೋಗಾಮಿ ಸಾಹಿತ್ಯಸಂಘ, ಬೆಂಗಳೂರು, 1973.

62. ಶಾಂತರಸ —ಬಸವಪೂರ್ವಯುಗದ ಶರಣರು
ಸ್ನೇಹಪ್ರಕಾಶನ, ರಾಯಚೂರು, 1972.

63. ಶಿವಶಂಕರ ರತ್ನ —ಸಂಗೀತ
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1980.

64. ಶಿವಾನಂದ.ವಿ. —ಕಲಬುರ್ಗಿ ಜಿಲ್ಲೆಯ ಶಿಲಾಶಾಸನಗಳು
ಕವಿವಿ, ಧಾರವಾಡ, 1978.

65. ,, ,, —ನಗರನಾಡಿನ ಶಿವಶರಣರು
ಕವಿವಿ, ಧಾರವಾಡ, 1972.

66. ಶ್ರೀನಿವಾಸ ಎಂ.ವಿ. —(ಸಂ) ಹುಲ್ಲೂರ ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು.
ಹುಲ್ಲೂರ ಶ್ರೀನಿವಾಸ ಜೋಯಿಸ ಗ್ರಂಥ ಪ್ರಕಟನಾ ಸಮಿತಿ ಚಿತ್ರದುರ್ಗ, 1976.

67. ಸುಂಕಾಪುರ ಎಂ.ಎಸ್. —(ಸಂ) ಜೀವನ ಜೋಕಾರ (ದುಂದುಮೆ ಪದ)
ಕವಿವಿ, ~~ಥ~~ಧಾರವಾಡ. 1975.

68. ಸುಂಕಾಪುರ ಎಂ.ಎಸ್. —(ಸಂ) ಜಾನಪದ ಸಾಹಿತ್ಯ ದರ್ಶನ, ಭಾಗ-5.
ಕವಿವಿ, ಧಾರವಾಡ, 1980.

69. ಸೂಗಂಯ್ಯ ಹಿರೇಮಠ —(ಸಂ) ಶಹಪುರ ದರ್ಶನ
ದರ್ಶನ ಪ್ರಕಾಶನ ಶಹಪುರ, 1995.

70. ಸೊಪ್ಪಿಮಠ ಬಸವಲಿಂಗ —ಕೊಡೆಕಲ ಬಸವಣ್ಣ (ಪಿಎಚ್.ಡಿ. ಪ್ರಬಂಧ, ಹಸ್ತಪ್ರತಿ)
ಕವಿವಿ, ಧಾರವಾಡ. 1988.

71. ಸೋಮಸುಂದರ ಹಾಸನ ರಂಗಾಜೆಟ್ಟಿ —ಕರ್ನಾಟಕದಲ್ಲಿ ಜೆಟ್ಟಿಗಳು.
ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, 1988.

72. ಹನೂರ ಕೃಷ್ಣಮೂರ್ತಿ —ಮ್ಯಾಸಬೇಡರ ಉಪಸಂಸ್ಕೃತಿ
ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993.

73. ಹಿರೇಮಠ ಪಾಲಾಕ್ಷ —ಆದಿಲಶಾಹಿ ರಾಜವಂಶ.
ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, 1971.

74. ಹಿರೇಮಠ ಆರ್.ಸಿ. —(ಸಂ) ಜಾನಪದ ಸಾಹಿತ್ಯ ದರ್ಶನ.
ಕವಿವಿ, ಧಾರವಾಡ, 1974.

75. ಹೊಸಮನಿ ಗಿರಿರಾಜ —ಲಿಂಗಸೂಗೂರು ತಾಲೂಕು ದರ್ಶನ
ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, 1986.

2) ಸಂಚಿಕೆಗಳು :

1. ಕೋಲ್ಹಾರ ಸೀ.ಹ. —ವಾಲ್ಮೀಕಿ ಸಂದೇಶ,(ಮಾಸಪತ್ರಿಕೆ)
ಬೆಟಗೇರಿ — ಗದಗ (ಆರಂಭದಿಂದ ಇದುವರೆಗಿನ ಸಂಚಿಕೆಗಳು)

2. ಚಿತ್ರಲಿಂಗಯ್ಯ ಎಂ.ವಿ. —ಇತಿಹಾಸ ದರ್ಪಣ (ಮಾಸಪತ್ರಿಕೆ) —
ತುಮಕೂರು.

3) ತೆಲುಗು ಪುಸ್ತಕ :

1. ರಾಘವ ಪಾಮನಾಯಕ —ಭಾರ್ಗವ ಪುರಾಣಮು
(ಸಂ) ತಿರುಮಲ ರಾಮಚಂದ್ರ,
ಹೈದ್ರಾಬಾದ್, 1986.

4) ಉರ್ದು ಪುಸ್ತಕಗಳು :

1. ಬಶೀರುದ್ದೀನ ಅಹ್ಮದ್ —ಮವುಕ್ತತ — ೨ — ಬಿಜಾಪುರ

2. ಮಹದಿ ಅಲಿ, ಮಿರ್ಜ —ಹೈದ್ರಾಬಾದಗೆಝೆಟಿಯರ್. 1908.

5) ಮರಾಠಿ ಕೃತಿಗಳು :

1. ಕೇಂದ್ರೀಯ ದಾಖಲಾತಿ ಕಚೇರಿ —ಸನಪುರಿ ಚಿತ್ಯಿರ
ಹೈದ್ರಾಬಾದ. ಹೈದ್ರಾಬಾದ್, 1950

2. ಜೋಶಿ.ಪಿ.ಎಂ. —(ಸಂ) ಪೇಶ್ವೆ ಆಳ್ವಿಕೆಯ ದಸ್ತಾವೇಜು
ಸಂಪುಟ—3, ಮುಂಬೈ, 1962.

3. ಪಗಡಿ ಸೇತುಮಾಧವ —(ಅನು) ಮೊಘಲ ಅನಿವರಾಠ
(ಬುರಾನಪುರಿ ತಾರಿಖ — ೨ — ದಿಲಕುಶ)
ಪುಣೆ, 1963.

4. ಪಗಡಿ ಸೇತುಮಾಧವ —ಮರಾಠೆಂಚಾ ಸ್ವತಂತ್ರ್ಯ ಯುದ್ಧ.
ಪೂನಾ, 1962.

6) ಪರ್ಶಿಯನ್ ದಾಖಲೆ :

1. ಕೈಫಿಯತ್ತುಗಳು. —

7) ENGLISH BOOKS:

1. Aiyyangar, S.K. -Sources of Vijayanagar History, 1919.

2. Bombay Government -Materials for a History of the Freedom Movement in India, Collected from the Bombay Government Records Vol.I (1818-85).

3. Briggs, H.G. -The Nizam, His History and Relations with the British Government (Vol's-Two) London, 1861.

4. Burton, R.G. -History of the Hyderabad Contingent Bombay, 1884.

5. Cadell, Sir Richard -(Ed) The Letters of Phillip Meadows Taylor to Henry Reeve Oxford, 1947.

6. Chaudhari, Nani Gopal -British Relations with Hyderabad Calcutta, 1964.

7. Chulki, R.S. -The Image of India in the work's of Phillip Meadows Taylor (K.U.D. un (K.U.D. unpublished) 1985.

8. Duff Grant, J.C. -History of the Maratha's(Vol's two) (Ed: by S.M.Edwardes) Oxford, 1921.

9. Malleson, Col.G.B. -Kaye's and Malleson's History of the Indian Mutiny of 1857-58, (Vol.V) London, 1897.

10. Mansukhani, G.S. -Philip Meadows Taylor - A Critical Study Bombay, 1951.

11. Martin, Montgomery -(Ed) Despatches, minutes and correspondence of the marquess wellesly during his administration in India (Vols-5) 1836-37

12. Nanjundiah, H.V. and Iyer, L.H.Ananthakrishna -Mysore Tribes and Castes (...-II) Mysore, 1928.

13. National Archives of India -Fort William India House Correspondence Vol.I & II, New Delhi, 1957-58.

" -The Indian Archives Vol-IX, No.2.

14. Neelakanta Sastri, K.A. and Venkatramanayya, N. -Further Sources of Vijayanagar History Vol-III, Madras, 1946.

15. Parasnis, D.B. -History of Sangli State Bombay, 1917.

16. Framurz JungBahadur Nawab -Sherapur, An Ancient Beydur Raj Madras, 1907.

17. Fraser, Col.Hastings -Memoir and Correspondence of General James Stuart Fraser, London, 1885.

18. Hollingberry, William -A History of His Late Highness Nizam Alee Khaun, Soobah of the Dekhan, Calcutta, 1805.

19. Hyderabad Government -Freedom Struggle in Hyderabad Vol.I. Hyderabad, 1956.

20. Kaye, J.W. -(Ed) Selections from the paper's of Lord Metcalfe London, 1885.

21. Krishnarao, M.V. and Halappa, G.S. -(Ed) History of Freedom Movement in Karnataka Vol.I, Bangalore, 1962.

22. Kulkarni, N.H. -The British Relationship with the principally of Surapur (Ph.D.unpublished) K.U.Dharwad, 1972.

23. Regani, Sarojini -Nizam-British Relations 1724-1857, Hyderabad, 1964.

24. Rice Holmes, T. -A History of the Indian Mutiny (5th Ed) London, 1913.

25. Roberts, P.E. -India under Wellesley London, 1929.

26. Rusal and H.Vali -The Castes and Tribes of Medieval India Vol.II.

27. Saletore, B.A. -Social and Political life in the Vijayanagar Empire (A.D.1346-1646) (Vols-2) Madras, 1934.

28. Sirdesai, G.S. -New History of the Marathas (Vol-II) Bombay, 1948.

29. Sarkar, Sir Jadunath -History of Aurangazeb Vols.I,V (2nd Ed.) Calcutta, 1921-24.

30. " -Shivaji and His Times (4th Ed) Calcutta, 1948.

31. Scott, J. -Ferishata's History of the Deccan London, 1794.

32. Sirajul, Hassan Sayyed -Castes and Tribes of H.E.H.the Nizam's Dominions, Vol.I. Bombay, 1928.

33. Sri.Sathyan -(Ed) Gulbarga District (Mysore State Gazetteer) Bangalore, 1966.

34. Tayler, Phillip Meadows -The story of my life Oxford, 1920.

35. " -The History of India London, Longmans Green & Co., 1915.

36. " -Papers on the construction of Tanks for Irrigation Bombay, 1854.

37. Thurston, E. -Castes and Tribes of Southern India Madras Government Press, 1909.

38. Yusuf Husain Khan -Nizamul-mulk Asaf Jah-I.(V.S.V.) Dharwar, 1936.

8) <u>JOURNALS AND PERIODICALS:</u>

1. Kallapur S.T. -Medows Taylor and Religion Journal of the Humanities, (Vol.21) K.U.Dharwad. 1977.

2. Paddayya, K. -Towards the Archaeology of the Medieval Sherapur Doab - Deccan, Islamic Culture,-quarterly, Vol.LXIV,Nos.2-3. Hyderabad, Apr-Jul, 1990.

3. Rehana Shah -Meddows Tayler on Aspects of Indian Culture The India P.E.N. Bombay, June-July, 1984.

-oOo-